
ಚಾರಣ ಸವಿ ಹೂರಣ

ವಯಸ್ಸು ಎಂಬುದು ಅಂಕಿಯಷ್ಟೆ...

● ಹೆಚ್.ಎಲ್.ಗುರುಪ್ರಸಾದ್




ಕೈಲಾಸ ಪರ್ವತ

ಹೆಚ್.ಎಲ್.ಗುರುಪ್ರಸಾದ್

ಶ್ರೀ ಹಾಲ್ಕುರಿಕೆ ಎಲ್ ಗುರುಪ್ರಸಾದ್ ಜನನ 28 ಏಪ್ರಿಲ್ 1949. ಬಿಎಸ್ಸಿ ಪದವಿಯ ನಂತರ ಕೆಲಸ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ. ವಿವಿಧ ಕಾರ್ಯ ಸ್ತರಗಳಲ್ಲಿ ದಕ್ಷ ಮತ್ತು ಪ್ರಾಮಾಣಿಕ ಸೇವೆ. ಚಾರಣದಲ್ಲಿ ಅತೀ ಆಸಕ್ತರು. ತಿರುಮಲ ಬೆಟ್ಟ 54 ಸಲ ಆರೋಹಣ. ತಿರುವಣ್ಣಾಮಲೈ ಗಿರಿ ಪರಿಕ್ರಮಣ 25 ಬಾರಿ. ಭಾರತಾದ್ಯಂತ 21 ಪರ್ವತ ಚಾರಣಗಳು. ವಿದೇಶದಲ್ಲಿ 19 ಚಾರಣಗಳು. ಬೈಸಿಕಲ್ ಪ್ರಯಾಣಗಳು. ಸಾಹಿತ್ಯದ ವಿಸ್ತೃತ ಅಧ್ಯಯನಾಸಕ್ತರು. ಜ್ಞಾನ ಸ್ವೀಕಾರಕ್ಕೆ ಸದಾ ಸಿದ್ಧ. ತಮ್ಮ 76ನೇ ವಯಸ್ಸಿನಲ್ಲೂ ತಂತ್ರಜ್ಞಾನ ಕಲಿಯುವ ಆಸಕ್ತಿ. ತಾವು ಕಲಿಯುವುದು ಮಾತ್ರವಲ್ಲ, ಇತರರಿಗೂ ಅದರ ಬೋಧನೆ. ಇವರಿಗೆ ಸಾಹಿತ್ಯಾಸಕ್ತರ ಸಂಗ ಸಂತಸ. ಡಿಟಿಪಿ ಕಲಿತು, ಸಾಹಿತಿ ಗೆಳೆಯರ ಪುಸ್ತಕಗಳ ಡಿಟಿಪಿ ಸಿದ್ಧಪಡಿಸುವ ಆಸಕ್ತಿ. ಯಾವಾಗಲೂ ಚಾಚಿದ ಸಹಾಯ ಹಸ್ತ. ನುಡಿ ನೇರ. ನಿರ್ಮಲ ಹೃದಯಿ. ದಣಿವರಿಯದ ಸಾಹಿತ್ಯಕ ಕೆಲಸಗಳು. ಮನೆಯ ಬಾಗಿಲಿಗೇ ತೆರಳಿ ಸಹಾಯ ಮಾಡುವ ಹಿರಿಯಗುಣವುಳ್ಳ ಸಾಹಿತ್ಯ ಪರಿಚಾರಕ.

ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳ ಕುರಿತ 'ಮಹಾತಪಸ್ವಿ' ಇಂಗ್ಲೀಷ್ ಗ್ರಂಥದ ಕನ್ನಡ ಅನುವಾದಕ.

ಸಾಹಿತ್ಯ ಮತ್ತು ಸೃಜನಾತ್ಮಕ ಕೆಲಸಗಳಲ್ಲಿ ಇವರು ಹೆಚ್ಚು ತೊಡಗಿಸಿಕೊಂಡಿದ್ದು ನಿವೃತ್ತಿಯ ನಂತರ. ಕಲಿಯಲು, ಕಲಿಸಲು ಮತ್ತು ಸೃಜನಾತ್ಮಕ ಕೆಲಸಗಳನ್ನು ಮಾಡಲು ವಯಸ್ಸು ತೊಡಕಲ್ಲ ಎಂಬ ನಂಬಿಕೆ. ಅದನ್ನು ಕಾರ್ಯಗತಗೊಳಿಸಿ, ನಿಜ ಮಾಡಿದ ಹೆಗ್ಗಳಿಕೆ. ರಸ್ತೆಗಳಲ್ಲಿ ನಡೆದ ಚಾರಣಿಗ ಮಾತ್ರವಲ್ಲ , ಸಾಹಿತ್ಯದ ಹಾದಿಯಲ್ಲೂ ಸಾಗುತ್ತಿರುವ ಚಾರಣಿಗ! ಅದಕ್ಕೇ ಎಲ್ಲರಿಗೂ ಇವರು ಪ್ರಿಯ – 'ಚಾರಣ ಗುರು'.

ಶ್ರೀರಂಗರಾಜನ್

ಕವಿ, ಸಾಹಿತ್ಯ ಸಂಘಟಕ

ಚಾರಣ ಸವಿ ಹೂರಣ

“ಹಿಮಾಲಯ ಹಾಗೂ ಕರ್ನಾಟಕದೊಳಗಿನ ಮತ್ತು
ಅಮೇರಿಕಾದ ಚಾರಣಗಳ ಕಥನ”

ಹೆಚ್.ಎಲ್.ಗುರುಪ್ರಸಾದ್

ಸ್ನೇಹ ಬುಕ್ ಹೌಸ್
ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು

ನಂ: 165, 10ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು-560050.
ಮೊಬೈಲ್: 9845031335.*mail:snehabookhouse@gmail.com*

Charana Savi Hoorana is a narration of real lifetime trekking experiences of Sri H.L.Guruprasad that includes treks in Himalayas, other indian and American Trails. Published by Sneha Book House, Srinagar, Bangalore

Mobile Number : +91 **9845031335**

ISBN Number : 978-81-989911-1-9
ಪುಸ್ತಕದ ಅಳತೆ : ಡೆಮಿ 1/8
ಮೊದಲ ಮುದ್ರಣ : ಡಿಸೆಂಬರ್ 2025
ಪುಟಗಳು : 328 (8 ಪುಟ ಕಲರ್)
ಬಳಸಿದ ಕಾಗದ : 70 ಜಿ.ಎಸ್.ಎಮ್,ಎನ್.ಎಸ್ ಮ್ಯಾಪ್‌ಲಿಥೋ
ಹಕ್ಕುಗಳು : ಲೇಖಕರದು
ಪ್ರತಿಗಳು : 1000
ಬೆಲೆ : 395 ರೂಪಾಯಿಗಳು
ಮುಖಪುಟ : ಶ್ರೀ ಹರೀಶ್
ಪುಟವಿನ್ಯಾಸ : ಶ್ರೀ ಹೆಚ್.ಎಲ್.ಗುರುಪ್ರಸಾದ್

ಪ್ರಕಾಶಕರು

ಸ್ನೇಹ ಬುಕ್ ಹೌಸ್
ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು

ನಂ: 165, 10ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು-560050.
ಮೊಬೈಲ್: 9845031335.*mail:snehabookhouse@gmail.com*

ಮುದ್ರಣ
ಸ್ನೇಹ ಪ್ರಿಂಟ್ ಮೀಡಿಯಾ
ಬೆಂಗಳೂರು

ಅರ್ಪಣೆ

ನನ್ನ ಪತ್ನಿ ಶ್ರೀಮತಿ ಲಲಿತಾ ಪ್ರಸಾದ್

ಮತ್ತು

ಚಾರಣದ ಶಿಸ್ತನ್ನು ನನ್ನಲ್ಲಿ ರೂಡಿಸಿಕೊಳ್ಳುವಂತೆ ಮಾಡಿ ನನ್ನೊಂದಿಗಿದ್ದು ಹೆಚ್ಚು ಚಾರಣಗಳನ್ನು ಮಾಡಲು ಪ್ರೇರಣೆ ನೀಡಿದ ಇಂಡಿಯಾ ಹೈಕ್ಸ್ ಸಂಸ್ಥೆಗೆ

INDIAHIKES™
India's Largest & Safest Trekking Organisation

Certificate of Accomplishment

Awarded to

Guruprasad L

For successfully completing the Hampta Pass in Himachal Pradesh from 02/08/2015 to 06/08/2015

Hampta Pass | Trek Grade: Moderate | Duration: 5 Days | Max Altitude: 14,035 ft

Arjun Majumdar
Founder, CEO

Sandhya UC
Co-Founder, COO

INDIAHIKES™
India's Largest & Safest Trekking Organisation

Certificate of Accomplishment

Awarded to

Guruprasad L

For successfully completing the KEDARKANTHA TREK in Uttarakhand from 10/04/2016 to 15/04/2016

KEDARKANTHA TREK | Trek Grade: Moderate | Duration: 6 Days | Max Altitude: 12,500 ft

Arjun Majumdar
Founder, CEO

Sandhya UC
Co-Founder, COO

INDIAHIKES™
India's Largest & Safest Trekking Organisation

Certificate of Accomplishment

Awarded to

Guruprasad L

For successfully completing the Kuari Pass Trek in Uttarakhand from 24/09/2016 to 29/09/2016

Kuari Pass Trek | Trek Grade: Moderate | Duration: 6 Days | Max Altitude: 12,516 ft

Arjun Majumdar
Founder, CEO

Sandhya UC
Co-Founder, COO

ಮುನ್ನುಡಿ

ಡಾ.ಡಿ.ವಿ.ಗುರುಪ್ರಸಾದ್

ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ನಾನು ಬಿ.ಎಸ್.ಸಿ ಪದವಿಯ ವಿದ್ಯಾರ್ಥಿಯಾಗಿದ್ದಾಗ ನನ್ನ ಸಹಪಾಠಿಗಳಾಗಿದ್ದವರಲ್ಲಿ ಒಬ್ಬರು ನನ್ನದೇ ಹೆಸರಿನ ಹೆಚ್.ಎಲ್.ಗುರುಪ್ರಸಾದ್. ತರಗತಿಯಲ್ಲಿ ನಾನು ಸಾಧಾರಣ ವಿದ್ಯಾರ್ಥಿಯಾಗಿದ್ದೆ. ಹೆಚ್.ಎಲ್.ಗುರುಪ್ರಸಾದ್ ಬಹಳ ಬುದ್ಧಿವಂತರಾಗಿದ್ದರು. ಮಿತಭಾಷಿಯೂ ಆಗಿದ್ದರು. ಆಗ ನಮ್ಮಿಬ್ಬರ ಸಂಪರ್ಕ ತುಸು ಕಡಿಮೆಯೇ ಎನ್ನಬಹುದು.

ನಾನು ಕಾಲೇಜು ಬಿಟ್ಟ ನಂತರ ನನಗೆ ಹೆಚ್.ಎಲ್.ಗುರುಪ್ರಸಾದ್‌ರ ಸಂಪರ್ಕವೇ ತಪ್ಪಿಹೋಗಿತ್ತು. ಸುಮಾರು 3 ವರ್ಷಗಳ ಹಿಂದೆ ನಮ್ಮ ಕಾಲೇಜಿನ ಸಹಪಾಠಿಗಳು ಭೋಜನಕೂಟವೊಂದನ್ನೇರ್ಪಡಿಸಿದಾಗ ನಮ್ಮ ಭೇಟಿ ಮತ್ತೊಮ್ಮೆ ಆಯಿತು. ಆಗ ನಾವಿಬ್ಬರೂ ನಮ್ಮ ಬಗ್ಗೆ ಹೆಚ್ಚು ಅರಿಯುವಂತಾಯಿತು. ತಾವು 2005ರಲ್ಲಿ ಚಾರಣದತ್ತ ಆಕರ್ಷಿತರಾದ ಬಗ್ಗೆ ನನಗೆ ಮಾಹಿತಿಯಿತ್ತ ಗುರುಪ್ರಸಾದ್ ತಾವು ಹಿಮಾಲಯ ಪರ್ವತ ಶ್ರೇಣಿಗಳಲ್ಲಿರುವ ಹಲವಾರು ತಾಣಗಳಿಗೆ ಚಾರಣ ಹೋಗಿರುವುದಾಗಿ ಅವರು ತಿಳಿಸಿದಾಗ ನಾನು ಚಕಿತಗೊಂಡೆ. ಹಿಮಾಲಯದ ವ್ಯಾಲಿ ಆಫ್ ಫ್ಲವರ್ಸ್, ಕೇದಾರನಾಥ, ಬದರೀನಾಥ, ಹೇಮಕುಂಡ ಮುಂತಾದ ಜಾಗಗಳಿಗೆ ನಾನೂ ಚಾರಣ ಹೋಗಿದ್ದೆ ಎಂದು ಅವರಿಗೆ ತಿಳಿಸಿದಾಗ ಅವರು ತಾವು ಚಾರಣವನ್ನು ಆರಂಭಿಸಿದ್ದು ತಮಗೆ 60 ವಸಂತಗಳು ದಾಟಿದ ನಂತರ ಎಂದು ಸಣ್ಣ ದನಿಯಲ್ಲಿ ಹೇಳಿದರು. ಆಗ ನನಗೆ ಅವರ ಬಗ್ಗೆ ಅಚ್ಚರಿ, ಗೌರವ ಮತ್ತು ಹೆಮ್ಮೆ ಏಕಕಾಲದಲ್ಲಿ ಮೂಡಿದವು.

ಸಾಮಾನ್ಯವಾಗಿ ನಿವೃತ್ತಿಯ ನಂತರ ಬಹು ಜನರು ಹಿಮಾಲಯಕ್ಕೆ ಹೋಗಿ ಹಲವು ಪವಿತ್ರ ಕ್ಷೇತ್ರಗಳನ್ನು ನೋಡಿ ಬರುತ್ತಾರೆ. ಆದರೆ ಆ ವಯಸ್ಸಿನಲ್ಲಿ ಚಾರಣ ಮಾಡುವವರು ಅತಿ ವಿರಳ. ಏಕೆಂದರೆ ಚಾರಣ ಒಂದು ಸಾಹಸದ ಪ್ರಕ್ರಿಯೆ. ಅದನ್ನು ಕೈಗೊಳ್ಳಬೇಕಾದರೆ ನಮ್ಮ ದೇಹ ಬಹಳ ಫಿಟ್ ಆಗಿ ಆರೋಗ್ಯಕರವಾಗಿರಬೇಕಾಗುತ್ತದೆ. ಆಮ್ಲಜನಕವು ಕಡಿಮೆ ಇರುವ ಜಾಗಗಳಲ್ಲಿ ನಾವು ನಮ್ಮ ದೇಹವನ್ನು ದಂಡಿಸಬೇಕಾಗುತ್ತದೆ. ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರೂ ಅಪಾಯವಾಗುತ್ತದೆ. ಇದಲ್ಲದೆ ಆ ದುರ್ಗಮ ಜಾಗಗಳಲ್ಲಿ ಅಪಘಾತಗಳಾಗುವ ಸಂಭವಗಳೂ ಹೆಚ್ಚೇ. ನಾಳೆ ಏನಾಗುತ್ತದೆ ಎನ್ನುವ ಆತಂಕ ಮನದಲ್ಲಿರುತ್ತದೆ.

ಇಂತಹ ಸನ್ನಿವೇಶದಲ್ಲಿ ದೂರದೂರಿನಲ್ಲಿ ಕುಟುಂಬದವರನ್ನು ಬಿಟ್ಟು ಸಾಹಸಮಯ ರೀತಿಯಲ್ಲಿ ಪ್ರಕೃತಿಯ ಆನಂದವನ್ನು ಸವಿಯುವುದು ಎಲ್ಲರಿಗೂ

ಸಾಧ್ಯವಿಲ್ಲ. ಇದು ನಾಟ್ ಎವ್ವೆರಿ ಒನ್ಸ್ ಕಪ್ ಆಫ್ ಟೀ. ಆದರೆ ನಮ್ಮ ಹೆಮ್ಮೆಯ ಹಾಲ್ಲುರಿಕೆ ಗುರುಪ್ರಸಾದ್ ಈಗಾಗಲೇ ಹಿಮಾಲಯದ 17 ಚಾರಣಗಳನ್ನು ಮಾಡಿದ್ದಾರೆ. ಇದಲ್ಲದೆ ತಿರುಪತಿ ಬೆಟ್ಟವನ್ನು 50 ಬಾರಿ ಕಾಲ್ನಡಿಗೆಯಲ್ಲಿ ಹತ್ತಿದ್ದಾರೆ. ತಿರುವಣ್ಣಾಮಲೈ ಗಿರಿಯ ಪ್ರದಕ್ಷಿಣೆಯನ್ನು 25 ಬಾರಿ ಮಾಡಿದ್ದಾರೆ. ಕರ್ನಾಟಕದ ಹಲವಾರು ಜಾಗಗಳಿಗೆ ಚಾರಣ ಹೋಗಿದ್ದಾರೆ. ಇದು ಅವರನ್ನು ಒಬ್ಬ ವಿಶಿಷ್ಟ ವ್ಯಕ್ತಿಯನ್ನಾಗಿಸಿದೆ.

ಕೇವಲ ಚಾರಣವನ್ನು ಮಾಡಿದರೆ ಸಾಲದು, ಅದರ ಅಪ್ರತಿಮ ಅನುಭವಗಳನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಬೇಕೆನ್ನುವ ಉದ್ದೇಶದಿಂದ ಗುರುಪ್ರಸಾದ್ **'ಚಾರಣ ಸವಿ ಹೂರಣ'** ಎನ್ನುವ ಈ ಕೃತಿಯನ್ನು ರಚಿಸಿದ್ದಾರೆ. ತಮ್ಮ ಈ ಸ್ಫೂರ್ತಿದಾಯಕ ಕೃತಿಯಲ್ಲಿ ಚಾರಣದ ವಿವರಗಳ ಜತೆಜತೆಗೆ ತಾವು ನೋಡಿದ ಹಲವಾರು ಜಾಗಗಳ ಬಗ್ಗೆ, ಹಲವು ಜನರು ಮತ್ತು ಸಂಪ್ರದಾಯಗಳ ಬಗ್ಗೆ ಅವರು ನಮೂದಿಸಿದ್ದಾರೆ. ಇವೆಲ್ಲ ಅನುಭವಗಳು ದಿನಚರಿಯ ರೂಪದಲ್ಲಿ ಮೂಡಿಬಂದಿವೆ. ಆಯಾ ದಿನಗಳಂದು ನಡೆದ ಪ್ರಮುಖ ಘಟನೆಗಳು, ನೋಡಿದ ಪ್ರಮುಖ ಸ್ಥಳಗಳು, ಮುಂತಾದವುಗಳನ್ನು ಅವರು ಯಥಾವತ್ತಾಗಿ ಬಣ್ಣಿಸಿದ್ದಾರೆ. ಈ ಕೃತಿಯಲ್ಲಿ ಅವರು ತಾವು ಕಂಡ ಜನರ ಬಗ್ಗೆಯೂ ಬಹಳ ಆಸಕ್ತಿದಾಯಕವಾದ ವಿಷಯಗಳನ್ನು ನಮೂದಿಸಿದ್ದಾರೆ.

ಇಲ್ಲಿ ಇನ್ನೊಂದು ವಿಷಯವನ್ನು ನಮೂದಿಸಲೇ ಬೇಕು. ಹಾಲ್ಕುರಿಕೆ ಗುರುಪ್ರಸಾದ್ ತಮ್ಮ ನಿವೃತ್ತಿಯ ನಂತರ ತಮ್ಮನ್ನು ಸೃಜನಶೀಲ ಬರವಣಿಗೆಯಲ್ಲಿಯೂ ತೊಡಗಿಸಿಕೊಂಡವರು. ಅವರ ಬರಹಗಳಿಗೆ ಅವರ ಚಾರಣ ಪೂರಕವಾಗಿದ್ದು ತಮ್ಮ ಈ ಕೃತಿಯಲ್ಲಿ ಅವರು ತಮ್ಮ ಅನುಭವಗಳನ್ನು ವಿಶಿಷ್ಟ ರೀತಿಯಲ್ಲಿ ಹಂಚಿಕೊಂಡಿದ್ದಾರೆ. ಹಿಮಾಲಯ ಪರ್ವತಗಳ ಸನಿಹದಲ್ಲಿ ಪ್ರಕೃತಿಯಲ್ಲಿ ಒಂದಾಗಿ ಗುರುಪ್ರಸಾದ್ ತಮ್ಮನ್ನು ತಾವು ಮೈಮರೆತಾಗ ಅವರಲ್ಲಿರುವ ಕವಿಯ ಭಾವನೆಗಳು ಪುಟಿದೇಳುತ್ತವೆ. ಮಾನಸ ಸರೋವರದಲ್ಲಿ ಮಿಂದಾಗ ತಮಗಾದ ಕೃತಜ್ಞತಾ ಭಾವನೆಯನ್ನು ಗುರುಪ್ರಸಾದ್ ಬಹಳ ವಿಶಿಷ್ಟ ರೀತಿಯಲ್ಲಿ ನಿರೂಪಿಸಿದ್ದಾರೆ. ಇದೇ ಪುಸ್ತಕದ ಕಡೆಯಲ್ಲಿ ಅವರು ತಾವು ಚಾರಣದ ಬಗ್ಗೆ ಬರೆದಿರುವ ಕವಿತೆಯೊಂದನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ಅವರು ಚಾರಣವನ್ನು ಬಣ್ಣಿಸುವುದು ಹೀಗೆ: 'ಕಂಡರಿಯದ ಹಾದಿಯಲ್ಲಿ ಹಿಂಜರಿಕೆಯ ಸೋಗಿಲ್ಲದೆ ನಮ್ಮೊಳಗೆ ನಾವು ಹುಡುಕುವುದೇ ಚಾರಣ'. 'ಪ್ರಕೃತಿಯೊಡನೆ ಪ್ರಕೃತಿಯಾಗಿ ಐಕ್ಯದ ಅರ್ಥವ ಬಿಡಿಸುತ್ತಾ ದೀರ್ಘ ಒಡನಾಡಿ ತಾಳ್ಮೆ ಕಡಲಲಿ ಸೇರಿ ಹೊಸ ಉಸಿರಾಡುವುದೇ ಚಾರಣ'.

ಹೆಚ್.ಎಲ್.ಗುರುಪ್ರಸಾದ್ ಮಾಡಿರುವ ವ್ಯಾಲಿ ಆಫ್ ಫ್ಲವರ್ಸ್ ಚಾರಣವನ್ನು ನಾನು ಐಪಿಎಸ್ ಸೇವೆಗೆ ಸೇರಿದ ಆರಂಭದಲ್ಲಿ ಮಾಡಿದ್ದೆ. ಜೋಷಿ ಮಠದಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ ಮಠವನ್ನು ನೋಡಿದ ನಂತರ ಪ್ರಾರಂಭಿಸಿದ ಈ ಚಾರಣ ನನ್ನ ಮನದಲ್ಲಿ ಅಚ್ಚಳಿಯದೇ ನಿಂತಿದೆ. ಮೈ ಕೊರೆಯುವ ಚಳಿಯಲ್ಲಿ ಪ್ರಕೃತಿಯ ಸೌಂದರ್ಯವನ್ನು ಅಸ್ವಾದಿಸುತ್ತ ನಾವು ಹೇಮಕುಂಡ್ ಸಾಹಿಬ್ ಗುರುದ್ವಾರವನ್ನು ಬಳಲುತ್ತ ಮುಟ್ಟಿದಾಗ ಅಲ್ಲಿಯ ಸರೋವರದ ನೀರನ್ನು ಮುಖಕ್ಕೆ ಪ್ರೋಕ್ಷಿಸಿಕೊಂಡು ಎದುರಿಗಿನ ಭವ್ಯ ಹಿಮಾಚ್ಛಾದಿತ ಶಿಖರಗಳನ್ನು ನೋಡಿದಾಗ ನನಗಾದ ಅನುಭವ ಅನನ್ಯ. ನಾನು ಎಷ್ಟು ಸಣ್ಣವನು ಎನ್ನುವ ಭಾವನೆ ನನಗೆ ಅಂದು ಮೂಡಿತು. ಅಲ್ಲಿನ ಗುರುದ್ವಾರದ ಲಂಗರ್‌ನಲ್ಲಿ ನಮಗೆ ಕೊಟ್ಟಂತಹ ಬಿಸಿ ಬಿಸಿ ಪ್ರಸಾದದ ಸವಿ ನನ್ನ ನಾಲಗೆಯಲ್ಲಿ ಇನ್ನೂ ಇದೆ. ಅದೇ ರೀತಿಯೇ ಹಿಮಾಚಲದ ಮಣಿಕರ್ಣಿಕ ಕುಂಡದ ಬಿಸಿನೀರಿನ ಬುಗ್ಗೆಯಲ್ಲಿ ಸ್ನಾನ ಮಾಡಿ ಅಲ್ಲಿನ ಗುರುದ್ವಾರದಲ್ಲಿಯೂ ಪ್ರಸಾದವನ್ನು ಸ್ವೀಕರಿಸಿದ್ದು ನಾನು ಮರೆಯುವ ಹಾಗಿಲ್ಲ. ಹೀಗಾಗಿ ನನಗೆ ಈ ಪುಸ್ತಕವನ್ನು ಓದಿದಾಗ ನಾನೂ ಅವರೊಡನೆ ಸಹಚಾರಣಿಗನಾದ ಅನುಭವವು ಮೂಡಿಬಂದಿತು.

ಉತ್ತರಾಖಂಡದ ಕೋಸಾನಿಯಲ್ಲಿ ಸೂರ್ಯೋದಯವಾಗುವಾಗ ಚಿನ್ನದಂತೆ ಹೊಳೆಯುವ ತ್ರಿಶೂಲ ಪರ್ವತವನ್ನು ಕಂಡಾಗ ಆಗುವ ಅನುಭವ ಅನಿರ್ವಚನೀಯ. ಇದೇ ಕಾರಣಕ್ಕಾಗಿಯೇ ಈ ಜಾಗವನ್ನು ಮಹಾತ್ಮ ಗಾಂಧಿ 'ಸ್ವಿಟ್ಸರ್ಲ್ಯಾಂಡ್ ಆಫ್ ಇಂಡಿಯಾ' ಎಂದು ಬಣ್ಣಿಸಿದರು. 'ಹಿಮಾಲಯದ ಚಾರಣಗಳೆದಷ್ಟೋ ಗೆಳೆಯ ಒಂದು ಜನ್ಮ ಸಾಲದು, ಭಾರತೀಯರಾಗಿ ಹೆಮ್ಮೆಯಲಿ ನಡೆಯಿರಿ ನುಡಿಚಾರಣದಿ ಶಿವನ ಸೇರಿಬಿಡೋಣ' ಎಂದು ಲೇಖಕರು ಹೇಳಿರುವುದು ಅಪ್ಪಟ ಸತ್ಯ.

ಈ ಪುಸ್ತಕದಲ್ಲಿ ಗುರುಪ್ರಸಾದ್‌ರ ಸಂಪೂರ್ಣ ವ್ಯಕ್ತಿತ್ವವನ್ನು ನಾವು ಕಾಣಬಹುದು. ಇದರಲ್ಲಿ ಬಹಳ ಮುಖ್ಯ ಅಂಶವೆಂದರೆ ಅವರಿಗಿರುವ ಶಿಸ್ತು. ಅದು ಇರದೇ ಹೋದರೆ ಯಾವುದೇ ವ್ಯಕ್ತಿಯು ಯಾವ ವಯಸ್ಸಿನಲ್ಲಿಯೂ ಚಾರಣ ಮಾಡಲು ಸಾಧ್ಯವಿಲ್ಲ. ಎರಡನೆಯದು ಅವರಿಗಿರುವ ಕುತೂಹಲ. ಮೂರನೆಯದು ಎಲ್ಲರೊಂದಿಗೆ ಬೆರೆಯುವ ಸ್ವಭಾವ. ಚಾರಣ ಒಂದು ಗುಂಪಿನ ಜೊತೆ ಸೇರಿ ಮಾಡುವ ಸಾಹಸ. ಇಂಗ್ಲೀಷ್‌ನಲ್ಲಿ ಒಂದು ಗಾದೆಯಿದೆ **'A chain is as strong as its weakest link'** ಎಂದು. ಚಾರಣ ಸಫಲವಾಗಬೇಕಾದರೆ ಅಲ್ಲಿ ಭಗವಹಿಸುವ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಹೀಗಾಗಿ ಅಲ್ಲಿ ಒಬ್ಬರಿಗೊಬ್ಬರು ನೆರವಾಗಬೇಕಾದದ್ದು ಅವಶ್ಯ. ಮಾನವನಿಗೆ ಇರಬೇಕಾದ ಹಲವಾರು ಬಹುಮುಖ್ಯ ಗುಣಗಳನ್ನು ಚಾರಣ ಹೊರತರುತ್ತದೆ. ಅಂತಹ

ಗುಣಗಳನ್ನು ಗುರುಪ್ರಸಾದ್ ಹೊಂದಿರುವುರಿಂದಲೇ ಅವರಿಂದು ಬಹಳ ಯಶಸ್ವಿ ಚಾರಣಿಗರಾಗಿರುವುದು. ಎಲ್ಲಕ್ಕಿಂತ ಮಿಗಿಲಾಗಿ ಗುರುಪ್ರಸಾದ್ ಒಬ್ಬ ಸಣ್ಣ ಬಾಲಕನಂತೆ ಕುತೂಹಲವನ್ನು ಹೊಂದಿದ್ದಾರೆ. ಏನಾದರೂ ಹೊಸತನ್ನು ಮಾಡಬೇಕೆಂದು ಅವರು ಮನಸ್ಸು ತುಡಿಯುತ್ತಲೇ ಇರುತ್ತದೆ.

ಬಹಳ ಸುಂದರ ಶೈಲಿಯಲ್ಲಿ, ಸಾಮಾನ್ಯರು ಸುಲಭವಾಗಿ ಅರ್ಥಮಾಡಿ ಕೊಳ್ಳುವ ಹಾಗೆ ಈ ಪುಸ್ತಕವನ್ನು ಗುರುಪ್ರಸಾದ್ ಬರೆದಿದ್ದಾರೆ. ಅವರಿಗೆ ನನ್ನ ಅನಂತ ಅಭಿನಂದನೆಗಳು. ತಾವು ನೋಡಿದ ಜಾಗಗಳಲ್ಲಿನ ಜನರ ಬಗ್ಗೆ ಇನ್ನಷ್ಟು ವಿಷದವಾಗಿ ಗುರುಪ್ರಸಾದ್ ನಮೂದಿಸಬಹುದಾಗಿತ್ತು ಎನ್ನುವುದು ನನ್ನ ಭಾವನೆ. ಇದನ್ನು ಅವರು ಈ ಕೃತಿಯ ಮುಂದಿನ ಆವೃತ್ತಿಗಳಲ್ಲಿ ಮಾಡುತ್ತಾರೆ ಎನ್ನುವ ನಂಬಿಕೆ ನನಗಿದೆ. '**ಚಾರಣ ಸವಿ ಹೂರಣ**' ಎಲ್ಲರ ಮನೆಯಲ್ಲಿಯೂ ಇರಲೇಬೇಕಾದ ಪುಸ್ತಕವಾಗಿದ್ದು ಚಾರಣ ಹೋಗಲಾಗದಿರುವವರಿಗೂ ಮನೆಯಲ್ಲಿಯೇ ಕುಳಿತು ಚಾರಣದ ಅನುಭವವನ್ನು ಸವಿಯುವಂತೆ ಇದು ಮಾಡುತ್ತದೆ. ಚಾರಣವನ್ನು ಮಾಡಲು ಉದ್ದೇಶಿಸಿರುವವರಿಗೆ ಇದೊಂದು ಆಕರ ಗ್ರಂಥವೂ ಆಗಿದೆ.

ಡಾ.ಡಿ.ವಿ.ಗುರುಪ್ರಸಾದ್

ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿ
ಹಾಗೂ ಹಲವಾರು ಪುಸ್ತಕಗಳ ಲೇಖಕರು
ಬೆಂಗಳೂರು

ಮನದಾಳದ ಮಾತು

ಹೆಚ್.ಎಲ್.ಗುರುಪ್ರಸಾದ್

1970ರ ದಶಕದಲ್ಲಿ ನಾನು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿರುವಾಗ ಸಹೋದ್ಯೋಗಿಗಳಿಬ್ಬರು ಪ್ರತಿ ವರ್ಷವೂ ಹಿಮಾಲಯದಲ್ಲಿನ ಯಾವುದಾದರೂ ಒಂದು ಚಾರಣವನ್ನು ಮಾಡುತ್ತಿದ್ದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ನನಗೂ ಈ ರೀತಿಯ ಚಾರಣವನ್ನು ಮಾಡಬೇಕೆಂದು ಬಯಕೆ ಉಂಟಾದರೂ ಕಾರಣಾಂತರದಿಂದ ಅದು ಫಲಿಸದೆ ನನ್ನ ಬಯಕೆಯೂ ಮನಸ್ಸಿನೊಳಗೆ ಹುದುಗಿಕೊಂಡಿತ್ತು. ಯೋಗಾ ಯೋಗವೆಂಬಂತೆ 2005ರಲ್ಲಿ ನನ್ನ ಸಹೋದ್ಯೋಗಿ ಒಬ್ಬರೊಡನೆ ಎರಡು ಧಾರ್ಮಿಕ ಚಾರಣಗಳನ್ನು ಮಾಡಲು ಅವಕಾಶ ಒದಗಿಬಂತು. 2009ರಲ್ಲಿ ನಿವೃತ್ತಿಯಾದ ನಂತರ 2012ರಲ್ಲಿ ಮತ್ತೊಂದು ಮಹತ್ವವಾದ ಧಾರ್ಮಿಕ ಚಾರಣವನ್ನು ಮಾಡಲು ಭಗವಂತನ ಪ್ರೇರಣೆಯಾಯಿತು. ಇದಾದ ನಂತರ ನನ್ನ ಚಾರಣದ ಅನುಭವವನ್ನು ಅಮೆರಿಕಾದಲ್ಲಿರುವ ನನ್ನ ಮಗನೊಂದಿಗೆ ಹಂಚಿಕೊಂಡಾಗ ಅವನು ಮುಂದಿನ ದಿನಗಳಲ್ಲಿ ಇದೇ ರೀತಿಯ ಚಾರಣವನ್ನು ಮುಂದುವರಿಸಲು ಸಲಹೆ ಇತ್ತನು. ಇದು ನನಗೆ ಒಂದು ವರವಾಗಿ ಪರಿಣಮಿಸಿ ಮುಂದಿನ ದಿನಗಳಲ್ಲಿ ಸುಪ್ರಸಿದ್ಧ ಚಾರಣ ಸಂಸ್ಥೆಯಾದ ಇಂಡಿಯಾ ಹೈಕ್ಸ್ ಅವರ ಮೂಲಕ ಹಾಗೂ ಅವರ ಮಾರ್ಗದರ್ಶನದಂತೆ ಹಿಮಾಲಯದಲ್ಲಿನ 25 ಸ್ಥಳಗಳಿಗೆ ಚಾರಣವನ್ನು ಮಾಡಿದೆ. ನನ್ನ ಮಗ ಕಾರ್ತಿಕನಿಗೂ ಹಾಗೂ ಇಂಡಿಯಾ ಹೈಕ್ಸ್ ಸಂಸ್ಥೆಗೂ ಕೃತಜ್ಞತೆಗಳನ್ನು ಸಲ್ಲಿಸಲು ಸಂತಸವಾಗುತ್ತದೆ. ಇದಲ್ಲದೆ ಪಶ್ಚಿಮ ಘಟ್ಟಗಳ ಶ್ರೇಣಿಗಳಲ್ಲಿ 17 ಚಾರಣಗಳನ್ನು ಮಾಡಲು ಅವಕಾಶವೊದಗಿಬಂದಿತು. ಇದರೊಂದಿಗೆ ನನ್ನ ಸ್ನೇಹಿತರನ್ನು ಕೂಡಿಕೊಂಡು ಮತ್ತಷ್ಟು ಚಾರಣಗಳನ್ನು ಮಾಡಲು ಅನುವಾಯಿತು. ಇಷ್ಟೇ ಅಲ್ಲದೆ ಅಮೆರಿಕದಲ್ಲೂ ಎರಡು ಚಾರಣಗಳನ್ನು ಹಾಗೂ 19 ಸುಪ್ರಸಿದ್ಧ ಟ್ರೈಲ್ಗಳಲ್ಲಿ ಚಾರಣ ಮಾಡಿದೆ. ಎಲ್ಲಾ ಚಾರಣದ ಅನುಭವಗಳನ್ನು ಒಂದೆಡೆ ಸಂಕ್ಷಿಪ್ತವಾಗಿ ಬರೆದುಕೊಂಡಿದ್ದೆ. ಮೂರು ವರ್ಷಗಳ ಹಿಂದೆ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಮತ್ತು ಸಾಹಿತ್ಯ ದಾಸೋಹ ವೇದಿಕೆಗಳ ಪ್ರಧಾನ ಸಂಚಾಲಕರಾದ ಶ್ರೀ ಬೆಂಶ್ರೀ ರವೀಂದ್ರ ಅವರು ನನ್ನ ಚಾರಣದ ಅನುಭವವನ್ನು ವಿವರವಾಗಿ ಬರೆಯುವಂತೆ ಸತತವಾಗಿ ಪ್ರೋತ್ಸಾಹಿಸಿದರು. ಅದರ ಫಲವಾಗಿ ಈ ಪುಸ್ತಕದಲ್ಲಿ ನನ್ನ 44 ಚಾರಣಗಳ ಅನುಭವಗಳನ್ನು ಹಂಚಿಕೊಂಡಿರುವೆ. ಈ ಪುಸ್ತಕದ ಅನುಬಂಧದಲ್ಲಿ ಪ್ರಕಟಿಸಲು

ಪುಸ್ತಕಕ್ಕೆ ಸಂಬಂಧಿಸಿದ ತಮ್ಮ ವಿವರವಾದ ಲೇಖನವನ್ನು ನೀಡಿದ್ದಾರೆ.ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನಾನು ಚಾರಣ ಮಾಡಲು ಬಯಸಿದಾಗಲೆಲ್ಲ ನನ್ನನ್ನು ಹುರಿದುಂಬಿಸಿ ಸಹಕರಿಸಿದ ನನ್ನ ಪತ್ನಿ ಲಲಿತಾಗೆ ಮತ್ತು ನನ್ನ ಇತರ ಕುಟುಂಬ ವರ್ಗಕ್ಕೆ ನಾನು ಆಭಾರಿ. ಅವರುಗಳ ಸಹಕಾರವಿಲ್ಲದಿದ್ದರೆ ಈ ಕಾರ್ಯವು ಸಾಧ್ಯವಾಗುತ್ತಿರಲಿಲ್ಲ.

ಈ ನನ್ನ ಪುಸ್ತಕಕ್ಕೆ ಗೆಳೆಯ **ಶ್ರೀ ಡಿ.ವಿ.ಗುರುಪ್ರಸಾದ್** ಅವರು ಆತ್ಮೀಯವಾಗಿ ಮುನ್ನುಡಿ ಬರೆದುಕೊಟ್ಟಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ಈ ನನ್ನ ಪುಸ್ತಕದ ಬಗ್ಗೆ ವಿವರಿಸಿದಾಗ ಕವಿ ಹಾಗೂ ಹಾಸ್ಯ ಭಾಷಣಕಾರರಾದ **ಶ್ರೀ ಎಂ.ಎಸ್.ನರಸಿಂಹಮೂರ್ತಿ**ಯವರು ಬೆನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರಿಗೂ ಧನ್ವಾದಗಳನ್ನು ತಿಳಿಸುತ್ತೇನೆ.

ನನ್ನೊಂದಿಗೆ ಹಲವಾರು ಚಾರಣ ಮಾಡಿರುವ **ಶ್ರೀ ಪಾಲಹಳ್ಳಿ ರಮೇಶ್** ತಮ್ಮ ಅನಿಸಿಕೆಗಳನ್ನು ಲೇಖನದ ಮೂಲಕ ವ್ಯಕ್ತಪಡಿಸಿ ಪುಸ್ತಕದ ಅನುಬಂಧದಲ್ಲಿ ಪ್ರಕಟಿಸಲು ಒಪ್ಪಿಗೆ ನೀಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ನನ್ನೊಂದಿಗೆ ಹಿಮಾಲಯದ ಒಂದು ಸುಪ್ರಸಿದ್ಧ ಸ್ಥಳಕ್ಕೆ ಚಾರಣ ಮಾಡಿದ್ದಲ್ಲದೆ ಪ್ರತಿ ವರ್ಷವೂ ಅದರ ನೆನಪಿಗೆ ತಾವು ರಚಿಸಿರುವ ಕವನವನ್ನು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಪ್ರಕಟಿಸಿ ಆ ಅನುಭವಗಳನ್ನು ಸದಾ ಹಸಿರಾಗಿರುವಂತೆ ಮಾಡಿದ ಹಾಗೂ ಆ ಕವನವನ್ನು ಪುಸ್ತಕದ ಅನುಬಂಧದಲ್ಲಿ ಪ್ರಕಟಿಸಲು ಅನುವು ಮಾಡಿಕೊಟ್ಟಿರುವ ನನ್ನ ಮಾರ್ಗದರ್ಶಕ ಹಾಗೂ ಸನ್ಮಿತ್ರ **ಶ್ರೀ ಬಿ.ಎಸ್.ಚಂದ್ರಶೇಖರ** ಅವರಿಗೆ ನನ್ನ ಅನಂತ ಪ್ರಣಾಮಗಳು.

ಹಸ್ತ ಪ್ರತಿಯನ್ನು ಎರಡು ಬಾರಿ ತಾಳ್ಮೆಯಿಂದ ವಿವರವಾಗಿ ಓದಿ ಸೂಕ್ತ ತಿದ್ದುಪಡಿಗಳನ್ನು ಸನ್ಮಿತ್ರ **ಶ್ರೀ ಟಿ.ಕೆ.ರಂಗನಾಥ** ಅವರು ಸೂಚಿಸಿರುವರು. ಅವರಿಗೆ ನಾನು ಆಭಾರಿ. ಈ ಪುಸ್ತಕದ ಡಿಟಿಪಿ ನಾನೇ ಮಾಡಿದ್ದರೂ, ಕಡೆಯ ಹಂತದಲ್ಲಿ ಅದನ್ನು ಮುದ್ರಣ ಯೋಗ್ಯವಾಗಿ ಮಾಡಿದ ಮತ್ತು ನನ್ನ ಬಗ್ಗೆ ಅನುಬಂಧದಲ್ಲಿ ಒಂದು ಪುಟ್ಟ ಲೇಖನವನ್ನೂ ಬರೆದುಕೊಟ್ಟಿರುವ ನನ್ನ ಆತ್ಮೀಯ ಸನ್ಮಿತ್ರ **ಶ್ರೀ ಗುರುರಾಜ ಶಾಸ್ತ್ರಿ**ಗಳಿಗೆ ನಾನು ಆಭಾರಿ.

ಪುಸ್ತಕದ ಮುಖಪುಟವನ್ನು ರಚಿಸಿದ **ಶ್ರೀ ಹರೀಶ್** ಅವರಿಗೆ ಧನ್ಯವಾದಗಳು. ಪುಸ್ತಕ ಬೆಳಕು ಕಾಣಲು ಪ್ರಮುಖ ಕಾರಣರಾದ ಸ್ನೇಹ ಬುಕ್ ಹೌಸ್ ಮಾಲೀಕರಾದ **ಶ್ರೀ ಪರಶಿವಪ್ಪ** ಅವರಿಗೆ ಅನಂತ ಧನ್ಯವಾದಗಳು.

ಹೆಚ್.ಎಲ್.ಗುರುಪ್ರಸಾದ್

email : citizen.hlg@gmail.com

ಪರಿವಿಡಿ

ಅಧ್ಯಾಯ - 1

ಅಧ್ಯಾಯ - 2

ಅಧ್ಯಾಯ - 3

ಅಧ್ಯಾಯ - 4 (ಅಮೇರಿಕಾ)

ಅನುಬಂಧಗಳು

ಅಧ್ಯಾಯ – 1

ಹಿಮಾಲಯದಲ್ಲಿನ ಚಾರಣಗಳು

ನಾನು ಇಲ್ಲಿಯವರೆಗೆ ಹಿಮಾಲಯ ಪರ್ವತ ಪ್ರದೇಶಗಳಲ್ಲಿ 25 ಚಾರಣ ಮಾಡಿರುವೆ. ಅವುಗಳಲ್ಲಿ 5 ಧಾರ್ಮಿಕ ಕ್ಷೇತ್ರಗಳ ಚಾರಣಗಳಾಗಿದ್ದು ಉಳಿದ 20 ಪ್ರಾಕೃತಿಕ ಚಾರಣಗಳು. ಈ 20 ಚಾರಣಗಳ ಪೈಕಿ 3 ಚಾರಣಗಳನ್ನು ಎರಡು ಬಾರಿ ಮಾಡಿರುವೆ. ನಾನು ಚಾರಣ ಮಾಡಿದ ಪ್ರದೇಶಗಳ ವಿವರಗಳು ಹೀಗಿವೆ:

ಕ್ರ ಸಂ	ಪ್ರದೇಶ	ರಾಜ್ಯ	ಎತ್ತರ (ಅಡಿಗಳಲ್ಲಿ)
1	ರೂಪಕುಂಡ ಸರೋವರ	ಉತ್ತರಾಖಂಡ	16500
2	ಕೇದಾರಕಾಂತ	ಉತ್ತರಾಖಂಡ	12500
3	ಕಾಶ್ಮೀರ ಸರೋವರಗಳು	ಕಾಶ್ಮೀರ	13800
4	ಹರ್–ಕಿ–ಧುನ್	ಹಿಮಾಚಲ ಪ್ರದೇಶ	11700
5	ಚಂದರ್ಖಿನಿ ಪಾಸ್	ಉತ್ತರಾಖಂಡ	12200
6	ಬ್ರಹ್ಮತಾಲ್	ಉತ್ತರಾಖಂಡ	11100
7	ದಿಯೋರಿತಾಲ್–ಚಂದ್ರಶಿಲ	ಉತ್ತರಾಖಂಡ	12500
8	ರೂಪಿನ್ ಪಾಸ್	ಹಿಮಾಚಲ ಪ್ರದೇಶ	16000
9	ತರ್‌ಸಾರ್ ಮರ್‌ಸಾರ್ ಸರೋವರ	ಕಾಶ್ಮೀರ	13200
10	ವ್ಯಾಲಿ ಆಫ್ ಫ್ಲವರ್ಸ್	ಉತ್ತರಾಖಂಡ	14400
11	ಹಂಪ್ಟಾ ಪಾಸ್	ಹಿಮಾಚಲ ಪ್ರದೇಶ	14500
12	ದಯಾರ ಬುಗ್ಯಾಲ್	ಉತ್ತರಾಖಂಡ	12500
13	ಸಂಡಕ್ಫು–ಫಲೂಟ್	ಪಶ್ಚಿಮ ಬಂಗಾಳ	11500
14	ಕುವರಿ ಪಾಸ್	ಉತ್ತರಾಖಂಡ	13500
15	ಗೊಯ್‌ಚಾಲ	ಸಿಕ್ಕಿಂ	16500
16	ಚೈನ್‌ಶೀಲ್ ಬುಗ್ಯಾಲ್	ಉತ್ತರಾಖಂಡ	10850
17	ತಲ್ಲೆ ವ್ಯಾಲಿ	ಅರುಣಾಚಲ ಪ್ರದೇಶ	8100

INDIAHIKES™

Certificate of Accomplishment

Awarded to

Guruprasad L

For successfully completing the Brahmatal Trek in Lohajung from 15/02/2015 to 20/02/2015

Arjun Majumdar

Sandhya UC

INDIAHIKES™

Certificate of Accomplishment

Awarded to

Guruprasad L

For successfully completing the Chainsheel Trek in Uttarakhand from 10/06/2017 to 15/06/2017

Chainsheel Trek | Trek Grade: Moderate | Duration: 6 Days | Max Altitude:

Arjun Majumdar

Sandhya UC

INDIAHIKES™

Certificate of Accomplishment

Awarded to

Guruprasad L

For successfully completing the CHHATTISGARH JUNGLE TREK in Chhattisgarh from 26/12/2018 to 30/12/2018

CHHATTISGARH JUNGLE TREK | Trek Grade: | Duration: 4 Days | Max Altitude:

Arjun Majumdar

Sandhya UC

ರೂಪಕುಂಡ ಪರ್ವತಾರೋಹಣದ ರೋಮಾಂಚಕಾರಿ ಅನುಭವ

ಜೂನ್ 2012ರ ಕೈಲಾಸ ಪರ್ವತಾರೋಹಣದ ನಂತರ ನನ್ನ ಮನಸ್ಸು ಮತ್ತು ಹೃದಯ ಮತ್ತೊಮ್ಮೆ ಹಿಮಾಲಯ ತಪ್ಪಲಿಗೆ ಹೋಗಲು ತವಕಿಸುತ್ತಿತ್ತು. ಹೀಗೆ ಬೇರೊಂದು ಸ್ಥಳವನ್ನು ಹುಡುಕುತ್ತಿದ್ದಾಗ India hikes ಸಂಸ್ಥೆಯು ರೂಪಕುಂಡ ಪರ್ವತಾರೋಹಣ ಕಾರ್ಯಕ್ರಮವನ್ನು 2012ರ ಅಕ್ಟೋಬರ್‌ನಲ್ಲಿ ನಡೆಸುತ್ತಾರೆಂದು ತಿಳಿಯಿತು. ಕೂಡಲೆ ಆ ತಿಂಗಳಿನ 6ನೇ ತಾರೀಖಿಗೆ ಕಾದಿರಿಸಲು ಅಮೆರಿಕದಲ್ಲಿರುವ ನನ್ನ ಮಗ ಕಾರ್ತಿಕನಿಗೆ ತಿಳಿಸಿದೆ. ಅವನು ತಾನೂ ಬರುವೆನೆಂದು ತಿಳಿಸಿ ಇಂಟರ್ನೆಟ್ ಮೂಲಕ ಇಬ್ಬರಿಗೆ ಸ್ಥಳವನ್ನು ಕಾಯ್ದಿರಿಸಿದನು. ಅಷ್ಟೆ ಅಲ್ಲದೆ ಬೆಂಗಳೂರಿನಿಂದ ದೆಹಲಿಗೆ ವಿಮಾನದ ಮೂಲಕ ಮತ್ತು ಅಲ್ಲಿಂದ ಕಾತ್‌ಗೋದಾಮ್‌ಗೆ ರೈಲಿನಲ್ಲಿ ಹೋಗುವ ಮತ್ತು ಹಿಂದಿರುಗುವ ಪ್ರಯಾಣಕ್ಕೂ ವ್ಯವಸ್ಥೆ ಮಾಡಿದನು. ಈ ಕೆಲಸದಿಂದ ನನಗೆ ಬಹಳ ನೆಮ್ಮದಿ ಮತ್ತು ಸಂತಸವಾಯಿತು.

ಮಾರನೆ ದಿನದಿಂದಲೆ ನಾನು ಮಾನಸಿಕ ಹಾಗೂ ದೈಹಿಕ ತಯಾರಿ ನಡೆಸಲು ಪ್ರಾರಂಭಿಸಿದೆ. ರೂಪಕುಂಡ ಸರೋವರದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸತೊಡಗಿದೆ. ಅದಕ್ಕೆ ಸಂಬಂಧಿಸಿದ ಸಂಕ್ಷಿಪ್ತ ಮಾಹಿತಿ ಈ ಕೆಳಗೆ ನೀಡಿರುವೆ: –

ಭಾರತದ ಚಾರಣ ಕ್ಷೇತ್ರದಲ್ಲಿನ 9 ಪ್ರಮುಖ ಚಾರಣಗಳಲ್ಲಿ ಮೊತ್ತ ಮೊದಲನೇ ಚಾರಣವೇ ರೂಪಕುಂಡ್. ಈ ಪ್ರದೇಶದೆಡೆಗಿನ ಚಾರಣ 2007ರಲ್ಲಿ ಪ್ರಾರಂಭಗೊಂಡು ಇಡೀ ಚಾರಣ ಕ್ಷೇತ್ರದಲ್ಲೇ ಅಭೂತಪೂರ್ವ ಸಂಚಲನವನ್ನು ಉಂಟುಮಾಡಿತು.

2007ರಲ್ಲಿ ಕೇವಲ 50–60 ಚಾರಣಿಗರು ರೂಪಕುಂಡ್ ಚಾರಣವನ್ನು ಮಾಡಿದ್ದರು. ಆ ಸಮಯದಲ್ಲಿ ಸಾಮಾನ್ಯ ಚಾರಣಿಗನಿಗೆ ಈ ಚಾರಣವು ಅಸಾಧ್ಯವಾಗಿತ್ತು.

ಈ ಚಾರಣವು ಜನಪ್ರಿಯವಾದದ್ದು, ಅದರ ಸುಂದರ ಪರಿಸರದಿಂದಾಗಿ. ಒಂದೇ ವರ್ಷದಲ್ಲಿ ಸಾಮಾನ್ಯ ಚಾರಣಿಗನೂ ಈ ಚಾರಣ ಮಾಡಲು ತೊಡಗಿದನು. ಇದಕ್ಕೆ ಮುಖ್ಯ ಕಾರಣ, 2008ರಲ್ಲಿ ಪ್ರಾರಂಭವಾದ ಇಂಡಿಯಾ ಹೈಕ್ಸ್ ಸಂಸ್ಥೆ. ರೂಪಕುಂಡ್ ಚಾರಣದಿಂದಲೇ ಟ್ರೆಕ್ ಲೀಡರ್ ಎಂಬ ಪರಿಕಲ್ಪನೆ ಪ್ರಾರಂಭವಾದದ್ದು. ಆಧುನಿಕ ಟ್ರೆಕ್ಕಿಂಗ್ ಉಪಕರಣಗಳ ಉಪಯೋಗವು ಪ್ರಾರಂಭವಾಗಿದ್ದೇ ರೂಪಕುಂಡ ಚಾರಣದಿಂದ. ಚಾರಣ ಮಾರ್ಗದಲ್ಲೇ ಅಡುಗೆ ಮಾಡುವ ಕಲ್ಪನೆ ಕೂಡ ಪ್ರಾರಂಭವಾಗಿದ್ದು ಸಹ ಇಲ್ಲಿಂದಲೆ. ಅನಂತರ ಅನೇಕ ಚಾರಣಗಳನ್ನು ಈ ಮಾರ್ಗದಲ್ಲಿ ಮಾಡಿದ ನಂತರವೂ ಹೊಸ ಹೊಸ ಪರಿಕಲ್ಪನೆಗಳು ಆವಿಷ್ಕಾರ-ಗೊಂಡವು. ಇದಲ್ಲದೆ ಅಧುನಿಕ ಚಾರಣ ನಿರ್ವಹಣೆಗಳಾದ ಗ್ರೀನ್ ಟ್ರೈಲ್ ಚಾರಣಗಳು 2012ರಲ್ಲಿ ಪ್ರಾರಂಭವಾಯಿತು. ಗ್ರೀನ್ ಟ್ರೈಲ್ ಚಾರಣವೆಂದರೆ ಚಾರಣ ಮಾರ್ಗವನ್ನು ಶುದ್ಧೀಕರಿಸಿ ಪರಿಸರವನ್ನು ಹೆಚ್ಚು ಹೆಚ್ಚು ಚಾರಣಿಗರಿಗೆ ಚಾರಣ ಮಾಡಲು ಅನುವು ಮಾಡಿಕೊಡುವುದು.

16500 ಅಡಿ ಎತ್ತರದ ರೂಪಕುಂಡ್ ಚಾರಣದ ಅಂತಿಮ ಗುರಿಯಾದ ರೂಪಕುಂಡ್ ಸರೋವರದ ವೀಕ್ಷಣೆ ಹಾಗೂ ಇದರ ಬಗೆಗಿನ ಕುತೂಹಲಭರಿತ ದಂತ ಕಥೆಗಳು :

1942ರಲ್ಲಿ ಬ್ರಿಟಿಷ್ ಅರಣ್ಯ ಕಾವಲುಗಾರನೊಬ್ಬನು ರೂಪಕುಂಡ ಸರೋವರದ ಮಾರ್ಗದಲ್ಲಿ ಹೋಗುತ್ತಿದ್ದಾಗ ಅವನಿಗೆ ಸರೋವರದ ಬಳಿ ನೂರಾರು ಮಾನವ ಅಸ್ಥಿಪಂಜರಗಳು / ತಲೆ ಬುರುಡೆಗಳು / ಮೂಳೆಗಳು ಕಂಡುಬಂದು ಅದನ್ನು ತನ್ನ ಮೇಲಧಿಕಾರಿಗೆ ವರದಿ ಮಾಡಿದ. ಸರೋವರದಲ್ಲಿನ ಹಿಮ ಕರಗಿದಂತೆ ಮತ್ತಷ್ಟು ಮೂಳೆಗಳು ಕಂಡು ಬಂದವು. ಇದರ ಬಗ್ಗೆ ಅನೇಕ ದಂತ ಕಥೆಗಳು ಹುಟ್ಟಿಕೊಂಡು ಚರ್ವಿತ ಚರ್ವಣವಾಗಿ ಚರ್ಚಿತವಾಗತೊಡಗಿತು.

ವಿಜ್ಞಾನಿಗಳ ತಂಡವೊಂದು ಈ ಕುರಿತು ಅಧ್ಯಯನ ಮಾಡಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವರು. ಅವರ ಪ್ರಕಾರ ಹೆಪ್ಪುಗಟ್ಟಿದ ರೂಪಕುಂಡ ಸರೋವರದಲ್ಲಿ ಕಂಡು ಬಂದ ಅಸ್ಥಿಪಂಜರ / ತಲೆ ಬುರುಡೆಗಳು / ಮೂಳೆಗಳು ಸ್ಥಳೀಯ ಹಾಗೂ ಯಾತ್ರಾರ್ಥಿಗಳು ಈ ಪ್ರದೇಶಕ್ಕೆ ಬಂದಾಗ ದಿಢೀರನೆ ಸುರಿದ ಟೆನಿಸ್ ಬಾಲ್ ಗಾತ್ರದ ಅಲಿಕಲ್ಲಿನ ಮಳೆಯಿಂದಾಗಿ ರಕ್ಷಣೆ ಪಡೆದುಕೊಳ್ಳಲು ಅಸಾಧ್ಯವಾಗಿ ಅಸುನೀಗಿರಬಹುದೆಂದು ಅಭಿಪ್ರಾಯ. DNA ಪರೀಕ್ಷೆಯ ಪ್ರಕಾರ ಎಲ್ಲ ಅಸ್ಥಿಪಂಜರಗಳೂ ಒಂದೇ ಗುಂಪಿಗೆ ಸೇರಿರದೆ ಬಹುಪಾಲು ಮಹಾರಾಷ್ಟ್ರದ ಜನರಿಗೆ ಸಂಬಂಧಿಸಿದ್ದು ಉಳಿದವು ಸ್ಥಳೀಯರದಿರಬಹುದೆಂದು ತಿಳಿದುಬರುತ್ತದೆ. ಇಂದಿಗೂ ಇದು ರಹಸ್ಯವಾಗಿಯೇ ಇರುವುದು. ಅದು ಏನೇ ಇರಲಿ ಸರೋವರದ ಸುತ್ತಮುತ್ತಲಿನ ಪ್ರಶಾಂತತೆ, ಸುಂದರ ಪ್ರಕೃತಿ, ದುರ್ಗಮ ಪ್ರದೇಶ ಇವೆಲ್ಲವೂ

ಚಾರಣಿಗರನ್ನು ಚಾರಣ ಮಾಡಲು ಆಕರ್ಷಿಸುತ್ತಿರುವುದು ಒಂದು ವಿಶೇಷ ಸಂಗತಿಯೆ. ರೂಪಕುಂಡ ಸರೋವರದೆಡೆಗೆ ಚಾರಣ ಮಾಡುತ್ತಿರುವಾಗ ಬೆರಗುಗೊಳಿಸುವ ಸುಂದರ ದೃಶ್ಯಗಳು, ಓಕ್ ಹಾಗೂ ಬಣ್ಣ ಬಣ್ಣದ ರೋಡೋಡೆಂಡ್ರಾನ್ ಹೂಗಳಿಂದಾವೃತವಾದ ವಿಶಾಲವಾದ ಸಮತಟ್ಟಾದ ಪ್ರದೇಶ, ಅತಿ ಸಮೀಪದಲ್ಲೇ ಕಾಣುವ ಸುತ್ತುವರೆದ ಭವ್ಯವಾದ ಪರ್ವತ ಶಿಖರಗಳು, ಸುಂದರವಾದ ಕ್ಯಾಂಪ್ ಪ್ರದೇಶಗಳು.

ಸಿದ್ಧತೆ

ಪ್ರತಿದಿನ ಸಂಜೆ ಕಾಲ್ನಡಿಗೆಯ ಸಮಯ ಹೆಚ್ಚಿಸಿದೆ. ಶಾರೀರಿಕ ವ್ಯಾಯಾಮ ಹೆಚ್ಚು ಸಮಯ ಮಾಡಲು ಪ್ರಾರಂಭಿಸಿದೆ ಹಾಗೂ ಯೋಗಾಸನ ಹಾಗೂ ಪ್ರಾಣಾಯಾಮ ಪ್ರಕ್ರಿಯೆಗಳನ್ನು ಸಹ ಆರಂಭಿಸಿದೆ.

ಪ್ರಯಾಣದ ದಿನ ಹತ್ತಿರ ಬರುತ್ತಿದ್ದಂತೆ ಪ್ರಯಾಣಕ್ಕೆ ಬೇಕಾಗುವ ಬ್ಯಾಕ್ ಪ್ಯಾಕ್, ಟ್ರೆಕಿಂಗ್ ಪೋಲ್, ಟ್ರೆಕಿಂಗ್ ಶೂ ಹಾಗೂ ಮಳೆ ಕೋಟ್ ಬಗ್ಗೆ ಕಾರ್ತಿಕನ ಸಲಹೆಯಂತೆ ವೈಲ್ಡ್ ಕ್ರಾಫ್ಟ್, ಬಿ.ಎಮ್.ಸಿ ಶೋ ರೂಂಗಳಿಗೆ ಹೋಗಿ ಖರೀದಿಸಿದೆ.ಈ ಹೊತ್ತಿಗಾಗಲೆ ಇಂಡಿಯಾ ಹೈಕ್ಸ್ ಸಂಸ್ಥೆಯವರು ಕೇಳಿದ ಎಲ್ಲಾ ಮಾಹಿತಿಗಳನ್ನು ಈ-ಮೈಲ್ ಮೂಲಕ ಕಳಿಸಿದ್ದೆ. ನಂತರ ಡಾಕ್ಟರ್ ಅವರಿಂದ ಮೆಡಿಕಲ್ ಸರ್ಟಿಫಿಕೆಟ್ ಪಡೆದುಕೊಂಡೆ. ಆನಂತರ ಬೆಂಗಳೂರಿನಿಂದ ಹೊರಡುವ ಕೆಲವು ಸಹಪ್ರಯಾಣಿಕರನ್ನು ದೂರವಾಣಿಯ ಮೂಲಕ ಸಂಪರ್ಕಿಸಿದೆ. ಪ್ರಯಾಣದ ದಿನ ಬಂತು.

ಪ್ರಯಾಣ

ಅಕ್ಟೋಬರ್ 5 ಮಧ್ಯಾಹ್ನ 12.30ಕ್ಕೆ ದೆಹಲಿ ತಲುಪಿದೆ. ಕಾತ್‌ಗೋದಾಮಿಗೆ ಹೊರಡಲಿರುವ ರಾಣಿಖೇತ್ ವೇಗದೂತ ರೈಲಿನಲ್ಲಿ ನಾನಿರುವ ಬೋಗಿಯಲ್ಲಿ ಮೂರು ಸಹಚಾರಣಿಗರ ಪರಿಚಯವಾಯಿತು. ಅವರು ಸಹ ರೂಪಕುಂಡ ಪರ್ವತಾರೋಹಣಕ್ಕೆ ಹೊರಟಿರುವರೆಂದು ತಿಳಿದು ನನಗೆ ತುಂಬ ಸಂತೋಷ ಹಾಗೂ ಸಮಾಧಾನವಾಯಿತು. ಬೆಳಗ್ಗೆ 5.30ಕ್ಕೆ ನಾವು ಕಾತ್‌ಗೋದಾಮ್ ತಲುಪಿದೆವು. ಅಲ್ಲಿ ಇಳಿದು ನಾವುಗಳು ನಿರೀಕ್ಷಣಾ ಕೋಣೆಯಲ್ಲಿ ಮುಖ ತೊಳೆದು ಸ್ವಲ್ಪ ವಿಶ್ರಾಂತಿ ಪಡೆದು ನಿಲ್ದಾಣದಿಂದ 6 ಗಂಟೆಗೆ ಹೊರಬಂದೆವು. ಅಲ್ಲಿ ನಮಗಾಗಿ ನಾಲ್ಕು ವಾಹನಗಳು ಕಾಯುತ್ತಿತ್ತು. ಪ್ರತಿಯೊಂದರಲ್ಲಿ ಆರು ಜನರಂತೆ ಕುಳಿತು ಲೋಹಾಜಂಗ್ ಕಡೆಗೆ ಪ್ರಯಾಣಿಸಿದೆವು. 10 ಕಿ.ಮಿ ಪ್ರಯಾಣದ

ನಂತರ ಊರಾಚೆ ಒಂದು ಸಣ್ಣ ಹೋಟಲಿನ ಬಳಿ ಚಹಾ ಸೇವಿಸಿ ಪ್ರಯಾಣ ಮುಂದುವರಿಸಿದೆವು. ನೈನಿತಾಲ್, ಭೀಮ್‌ತಾಲ್, ಅಲ್ಮೋಡ ಮುಖಾಂತರ ಮಧ್ಯಾಹ್ನ 12.30ಕ್ಕೆ ಕೌಸನಿ ಗಿರಿಧಾಮ ತಲುಪಿದೆವು. ಅದು ಊಟದ ಸಮಯವಾದ್ದರಿಂದ ಅಲ್ಲಿಯ ಒಂದು ಹೋಟಲಿಗೆ ಹೋದೆವು. ಹೋಟಲಿನ ಬಾಲ್ಕನಿಯಿಂದ ದೂರದ ಹಿಮಾಚ್ಛಾದಿತ ಪರ್ವತಗಳು ಹಾಗೂ ಕೆಳಗೆ ಉದ್ಯಾನ ಮತ್ತು ಹಸಿರಿನ ಬೆಟ್ಟಗಳ ಸಾಲೇ ನಮಗೆ ಕಂಡಿತು. ನಯನ ಮನೋಹರವಾದ ಈ ದೃಶ್ಯಗಳನ್ನು ನಮ್ಮ ಕ್ಯಾಮರಾದಲ್ಲಿ ಸೆರೆಹಿಡಿದೆವು.

ಕೌಸನಿ ಬಗ್ಗೆ ಕೆಲವು ಮಾಹಿತಿಗಳು:

ಬಹಳ ಹಿಂದೆ ಇದನ್ನು ವಲ್ನಾ ಎಂದು ಕರೆಯುತ್ತಿದ್ದರು. ಇದು ಉತ್ತರಾಖಂಡದ ಬಹಳ ಪ್ರಖ್ಯಾತವಾದ ಸುಂದರ ಗಿರಿಧಾಮ ಹಾಗೂ ಇಲ್ಲಿಂದ 350 ಕಿ.ಮೀ. ದೂರದಲ್ಲಿನ ಹಿಮಾಲಯದ ಪರ್ವತದಲ್ಲಿನ ನಂದಾದೇವಿ, ತ್ರಿಶೂಲ ಹಾಗೂ ಪಂಚಚುಲಿ ಶಿಖರಗಳನ್ನು ಗುರುತಿಸಬಹುದು.

ಇಲ್ಲಿಯ ಸುಂದರ ವಾತಾವರಣ ಎಲ್ಲರನ್ನೂ ಖುಷಿಪಡಿಸುತ್ತದೆ. ಕೌಸನಿ ಪಟ್ಟಣವು ಬಾಗೇಶ್ವರ್ ಜಿಲ್ಲೆಯಲ್ಲಿ ಅಲ್ಮೋಡದ ಉತ್ತರಕ್ಕೆ 47 ಕಿ.ಮೀ ದೂರದಲ್ಲಿದೆ. ಮಹಾತ್ಮಾಗಾಂಧಿಯವರು ಇಲ್ಲಿಗೆ ಭೇಟಿಯಿತ್ತಾಗ ಇಲ್ಲಿಯ ವಾತಾವರಣಕ್ಕೆ ಮನಸೋತು ಈ ಊರನ್ನು ಭಾರತದ ಸ್ವಿಟ್ಜರ್ಲ್ಯಾಂಡ್ ಎಂದು ಕರೆದರು ಹಾಗೂ ಇಲ್ಲಿಯೇ ಇದ್ದು ಭಗವದ್ಗೀತೆಯ ಅನಾಸಕ್ತಿಯೋಗದ ಮೇಲೆ ತಮ್ಮ ಭಾಷ್ಯವನ್ನು ಬರೆದರು. ಜುಲೈ – ಸೆಪ್ಟೆಂಬರ್ ಸಮಯದಲ್ಲಿ ಇಲ್ಲಿಗೆ ಭೇಟಿಕೊಟ್ಟರೆ ಉತ್ತರಾಖಂಡದ ಹಸಿರು ವನರಾಶಿಯನ್ನು ಸವಿಯಬಹುದು. ಡಿಸೆಂಬರ್ – ಫೆಬ್ರವರಿ ತಿಂಗಳಲ್ಲಿ ಈ ಊರು ಹಿಮಾಛ್ಛಾದಿತವಾಗಿರುತ್ತದೆ.

ಊಟದ ನಂತರ ಗ್ವಾಲ್ಡಾಮ್ – ದೇಬಲ್ – ಮುಂಡೋಲಿ ಮಾರ್ಗವಾಗಿ ಲೋಹಜಂಗ್ ಬೇಸ್ ಕ್ಯಾಂಪನ್ನು ಸಂಜೆ 5.30ಕ್ಕೆ ತಲುಪಿದೆವು. ಲೋಹಾಜಂಗ್ ಉತ್ತರಾಖಂಡ್ ರಾಜ್ಯದ ಚಮೋಲಿ ಜಿಲ್ಲೆಯಲ್ಲಿದೆ. ಈ ಪ್ರದೇಶವು ಸರಾಸರಿ ಸಮುದ್ರಮಟ್ಟದಿಂದ 2530 ಮೀಟರ್ (8250 ಅಡಿ) ಎತ್ತರದಲ್ಲಿದೆ.

ಇಲ್ಲಿರುವ ಇಂಡಿಯಾಹೈಕ್ಸ್ ವಿಶ್ರಾಂತಿಗೃಹ ತಲುಪುತ್ತಿದ್ದಂತೆ ಇಂಡಿಯಾಹೈಕ್ಸ್ ಸಿಬ್ಬಂದಿವರ್ಗದವರು ಹಾರ್ದಿಕವಾಗಿ ಸ್ವಾಗತಿಸಿದರು. ಅಷ್ಟು ಹೊತ್ತಿಗಾಗಲೇ ಕತ್ತಲು ಪೂರ್ಣವಾಗಿ ಆವರಿಸಿಕೊಂಡಿದ್ದರಿಂದ ಮೇಣದಬತ್ತಿಯ ಬೆಳಕಿನಲ್ಲಿ ಮೂವರಿಗೆ ಒಂದು ಕೋಣೆಯಂತೆ ಎಲ್ಲರಿಗೂ ಕೋಣೆಗಳನ್ನು ಕೊಟ್ಟರು. ಚಹ ಸೇವನೆ, ವಿಶ್ರಾಂತಿಯ ನಂತರ ಮಾರ್ಗದರ್ಶಕ ಶ್ರೀ.ಅಯ್ಯನ್ ಬ್ರಹ್ಮನ್ ನಮ್ಮ

ದಾಖಲೆ ಪರಿಶೀಲಿಸಿದರು. ರಾತ್ರಿ ಕೇವಲ ಒಂದು ಗಂಟೆ ಹೊತ್ತು ವಿದ್ಯುಚ್ಛಕ್ತಿ ಇತ್ತು. ಆ ಸಮಯದಲ್ಲಿ ಊಟ ಮಾಡಿದೆವು. ಪರ್ವತಾ ರೋಹಣವನ್ನು ಬೆಳಗ್ಗೆ 8ಕ್ಕೆ ಪ್ರಾರಂಬಿಸುವುದೆಂದು ಎಲ್ಲರಿಗೂ ಅಯ್ಯನ್ ಬ್ರಹ್ಮನ್ ತಿಳಿಸಿದರು. ಅದರಂತೆ ಬೆಳಗ್ಗೆ ಬೇಗ ಏಳಬೇಕಿದ್ದರಿಂದ ಎಲ್ಲರೂ ಕೋಣೆಯನ್ನು ಸೇರಿಕೊಂಡರು.

ಮೊದಲದಿನ (8.10.2012) : ಲೋಹಾಜಂಗ್ ಬೇಸ್ ಕ್ಯಾಂಪಿನಿಂದ ದೀದ್ನಾ ಕ್ಯಾಂಪ್ ಕಡೆಗೆ 8 ಕಿ.ಮೀ ಚಾರಣ 7550 ಅಡಿಯಿಂದ 8150 ಅಡಿ – 5 ಗಂಟೆಗಳ ಚಾರಣ

ಬೆಳಗ್ಗೆ ಎಲ್ಲರೂ ಉತ್ಸಾಹದಿಂದ ಎದ್ದು ಉಪಹಾರ ಮುಗಿಸಿ ಚಾರಣಕ್ಕೆ ತಯಾರಾದೆವು. ಮೊದಲನೇ ದಿನ ಪ್ರಯಾಣವು ಲೋಹಜಂಗ್ ಕ್ಯಾಂಪಿನಿಂದ ಸುಮಾರು 8 ಕಿ.ಮೀ ದೂರವಿರುವ ದೀದ್ನ ಕ್ಯಾಂಪ್‌ನ್ನು 5–6 ಗಂಟೆಯ ಅವಧಿಯಲ್ಲಿ ತಲುಪಬೇಕಿತ್ತು. ದೀದ್ನ ಕ್ಯಾಂಪ್ 2600 ಮೀಟರ್ (8500 ಅಡಿ) ಎತ್ತರದಲ್ಲಿದೆ. ಮೊದಲು ಇಳಿಜಾರಿನಿಂದ ಕೂಡಿದ ರಸ್ತೆಯಲ್ಲಿ ನಿಧಾನವಾಗಿ ನಡೆದು ತಳಭಾಗ ತಲುಪಿ ಅನಂತರ ಸಾಧಾರಣ ಏರುಹಾದಿಯಿಂದ ಕೂಡಿದ ಪರ್ವತದ ರಸ್ತೆಯಲ್ಲಿ ನಡೆಯತೊಡಗಿದೆವು. ಎಲ್ಲರೂ ಅತಿ ಉತ್ಸಾಹದಿಂದ "ಜಡ್" ಆಕಾರದ ಇಳಿಜಾರಿನ ಕಚ್ಚಾರಸ್ತೆಯಲ್ಲಿ ಇಳಿಯುತ್ತ ಸ್ವಲ್ಪ ದೂರ ನಡೆದು ಬಾನ್ಕ್ ಎಂಬ ಹಳ್ಳಿಯ ಮೂಲಕ ಓಕ್, ಪೈನ್ ಹಾಗೂ ರೋಡೋಡೆಂಡ್ರನ್ (Rhodendron) ಮರಗಳಿಂದ ಕೂಡಿದ ದಟ್ಟವಾದ ಕಾಡನ್ನು ಪ್ರವೇಶಿಸಿ ಅಲ್ಲಿಂದ ಹಿಮಾಚ್ಛಾದಿತ ನಂದಗುಂಟಿ ಪರ್ವತದ ಶಿಖರ ನಿಚ್ಚಳವಾಗಿ ನೋಡಿದೆವು. ದಾರಿಯುದ್ದಕ್ಕೂ ಸಣ್ಣ ಸಣ್ಣ ಜಲಪಾತಗಳು ನಮ್ಮನ್ನು ನೋಡೆಂದು ಕೂಗಿ ಕರೆಯುತ್ತಿದ್ದವು. ಅವುಗಳನ್ನು ನೋಡಿ ನಮಗೆ ಅತೀವ ಆನಂದವಾಯಿತು. ದಾರಿಯುದ್ದಕ್ಕೂ ರೋಡೋಡೆಂಡ್ರನ್, ಓಕ್ ಮರಗಳಿಂದ ತಣ್ಣನೆ ಕುಳಿರ್ಗಾಳಿಯು ಬೀಸುತ್ತಾ ನಮ್ಮ ಪ್ರಯಾಣ ಶ್ರಮವಾಗದಂತೆ ನೋಡಿಕೊಳ್ಳುತ್ತಿತ್ತು. ರೌನ್ ಬಗದ್ ಹೋಗುವ ಹಾದಿಯಲ್ಲಿ 500 ಅಡಿ ಎತ್ತರದ ಸಮತಟ್ಟಾದ ಜಾಗದಲ್ಲಿ ಕುಲ್ಲಿಂಗ್ ಹಳ್ಳಿಯನ್ನು ಗುರುತಿಸಿದೆವು. ಇಲ್ಲಿಂದ ತೀವ್ರವಾದ ಇಳಿಜಾರಿನ ರಸ್ತೆಯಲ್ಲಿ ಇಳಿದು ಬಂದು ರಭಸದಿಂದ ಹರಿಯುವ ತೊರೆ ತಲುಪಿದೆವು., ಈ ತೊರೆಯ ನೀರು ಅತ್ಯಂತ ಶುಭ್ರವಾಗಿತ್ತು. ಇಲ್ಲಿ ನಮ್ಮ ಮುಖ ತೊಳೆದು, ಸ್ವಲ್ಪ ವಿಶ್ರಾಂತಿಯ ನಂತರ ತೊರೆ ದಾಟಿ ಆಚೆ ದಡದಲ್ಲಿ ಒಂದು ಸುಂದರ ಭೋರ್ಗರೆವ ಜಲಪಾತ ಕಂಡೆವು. ಇಲ್ಲಿಂದ ಸುಮಾರು 10 ನಿಮಿಷದ ನಡಿಗೆಯ ನಂತರ ನಿಧಾನವಾದ ಏರುರಸ್ತೆಯಲ್ಲಿ ನಡೆದು ರೌನ್ ಬಗದ್ ಪ್ರದೇಶವನ್ನು ತಲುಪಿದೆವು. ಇಲ್ಲಿ ಒಂದು ಕಬ್ಬಿಣದ ಸೇತುವೆಯ ಮೂಲಕ ನೀಲ್ ಗಂಗಾ ನದಿಯನ್ನು ದಾಟಿ ದೀದ್ನಾ ಕಡೆಯ ಏರುರಸ್ತೆಯನ್ನು ತಲುಪಿದೆವು.

ಇಲ್ಲಿ ಮತ್ತೊಂದು ಎತ್ತರವಾದ ಜಲಪಾತ ನಮಗೆದುರಾಯಿತು. ಈ ಜಲಪಾತವು ಎತ್ತರವಾದ ಹುಲ್ಲುಗಾವಲಿನಿಂದ ಕೆಳಗೆ ಧುಮುಕುತ್ತಿತ್ತು. ಈ ದೃಶ್ಯವು ಅತ್ಯಂತ ರಮಣೀಯವಾಗಿತ್ತು. ಏರುರಸ್ತೆ ಸವೆಸುತ್ತಿದ್ದಂತೆ ಕಾಲುಗಳಲ್ಲೂ ಹಾಗೂ ಸೊಂಟದಲ್ಲೂ ನೋವು ಶುರುವಾಯಿತು. ಅಲ್ಲದೇ ಎದೆಯ ಉಸಿರಾಟದ ವೇಗವು ತೀವ್ರವಾಗತೊಡಗಿತು. ಮಧ್ಯೆ ಮಧ್ಯೆ ವಿಶ್ರಾಂತಿ ತೆಗೆದುಕೊಳ್ಳುತ್ತಾ ಪರ್ವತ ಹತ್ತತೊಡಗಿದೆವು. ಎರಡು ಗಂಟೆ ಪ್ರಯಾಣದ ನಂತರ ದೀದ್ನ ಕ್ಯಾಂಪ್‌ನ್ನು ಸಂಜೆ 5ಕ್ಕೆ ತಲುಪಿ ಹನ್ನೆರಡು ಜನ ಇರಬಹುದಾದ ಎರಡು ದೊಡ್ಡದಾದ ಹಾಲಿನಲ್ಲಿ ನಮ್ಮ ವಾಸ್ತವ್ಯ. ಚಹಾ ನಂತರ ಟ್ರೆಕ್ ಲೀಡರ್ ಎಲ್ಲರನ್ನೂ ಹುಲ್ಲುಗಾವಲಿಗೆ ಬರುವಂತೆ ತಿಳಿಸಿದರು. ಅಲ್ಲಿ ಎಲ್ಲರ ಪರಿಚಯದ ನಂತರ ರಾತ್ರಿ ಊಟಮಾಡಿ ನಿದ್ರಿಸಿದೆವು. ಹುಣ್ಣಿಮೆಗೆ ಹತ್ತಿರದ ರಾತ್ರಿಯಾದ್ದರಿಂದ ಮಧ್ಯರಾತ್ರಿ ನಾನು ಹೊರಗಡೆ ಹೋಗಿದ್ದಾಗ ಇಡೀ ಕಣಿವೆಯು ಚಂದ್ರನ ಬೆಳಕಿನಲ್ಲಿ ಹಿಟ್ಟು ಚೆಲ್ಲಿದಂತೆ ಬೆಳ್ಳಗೆ ಅತಿ ಸುಂದರವಾಗಿ ಕಾಣಿಸುತ್ತಿತ್ತು.

ದೀದ್ನಾ ಕ್ಯಾಂಪ್ ಇರುವುದು ವಿಶಾಲವಾದ ಹುಲ್ಲುಗಾವಲಿನಲ್ಲಿ. ಬಲಭಾಗದಲ್ಲಿ ಒಂದು ಸಣ್ಣ ತೊರೆಯಿರುವುದು. ಚಾರಣಿಗರ ನೀರಿನ ಅಗತ್ಯತೆಯನ್ನು ಇದು ಪೂರೈಸುತ್ತದೆ. ಕ್ಯಾಂಪ್ ಮುಂದೆ ನಿಂತು ನೋಡಿದರೆ ಅಗಾಧವಾದ ಕಣಿವೆ, ದೂರದ ಲೋಹಜಂಗ್, ಹಾಗೂ ಎಡ ಭಾಗದಲ್ಲಿ ಕುಲ್ಲಿಂಗ್ ಮತ್ತು ವಾನ್ ಹಳ್ಳಿಗಳು ಕಾಣಿಸುತ್ತಿತ್ತು. ಕ್ಯಾಂಪ್ ಹಿಂದುಗಡೆ ನೋಡಿದರೆ ಓಕ್ ಮರಗಳಿಂದ ಕೂಡಿದ ದಟ್ಟವಾದ ಕಾಡು. ನಮ್ಮ ಮುಂದಿನ ಕ್ಯಾಂಪ್ ತಲುಪಲು ಈ ಕಾಡನ್ನು ದಾಟಿ ಎದುರುಗಡೆ ಕಾಣುವ ಎತ್ತರದ ಬೆಟ್ಟವನ್ನು ಹತ್ತಬೇಕೆಂದು ಮಾರ್ಗದರ್ಶಿ ತಿಳಿಸಿದರು.

ಎರಡನೇ ದಿನ (9.10.2012) : ದೀದ್ನಾ ಕ್ಯಾಂಪಿನಿಂದ ಬೇದ್ನಿ ಬುಗ್ಯಾಲ್ ಕ್ಯಾಂಪ್ ಕಡೆಗೆ 10 ಕಿ.ಮೀ ಚಾರಣ 8150 ಅಡಿಯಿಂದ 11336 ಅಡಿ; 6-7 ಗಂಟೆಗಳ ಚಾರಣ

ನಮ್ಮ ಎರಡನೇ ದಿನದ ಪ್ರಯಾಣ ದೀದ್ನಾದಿಂದ ಆಲಿಬುಗ್ಯಾಲ್ ಮುಖಾಂತರ ಬೇದ್ನಿ ಬುಗ್ಯಾಲ್ ಕಡೆಗೆ. ಸುಮಾರು 10 ಕಿ.ಮೀ ಹಾಗೂ 6-7 ಗಂಟೆಗಳ ಚಾರಣ ಹಾಗೂ 2600 ಮೀಟರ್ (8788 ಅಡಿ) ನಿಂದ 3354 ಮೀಟರ್ (11336 ಅಡಿ) ಎತ್ತರ ತಲುಪುವುದು. ಪ್ರಯಾಣ ಮೊದಲಿಗೆ ಆಲಿಬುಗ್ಯಾಲ್ ಪ್ರದೇಶದವರೆಗೂ ಅತ್ಯಂತ ಕಡಿದಾಗಿತ್ತು (ಏರಿಕೆಯಿಂದ ಕೂಡಿತ್ತು) ಹಾಗೂ ಕಷ್ಟಕರವಾಗಿತ್ತು. ಆಲಿಬುಗ್ಯಾಲ್ ನಿಂದ ಬೇದ್ನಿ ಬುಗ್ಯಾಲ್ ತನಕ ಸಮತಟ್ಟಾದ ಹಾದಿಯಿದ್ದು ಸುಲಭವಾಗಿತ್ತು. ಆದ್ದರಿಂದ ಏರಿಕೆಯು ದೀದ್ನಾದಿಂದ

ಆಲಿಬುಗ್ಯಾಲ್ ವರೆಗೆ 700 ಮೀಟರ್ ಮತ್ತು ಆಲಿಬುಗ್ಯಾಲ್ ನಿಂದ ಬೇದ್ನಿ ಬುಗ್ಯಾಲ್ ವರೆಗೆ 54 ಮೀಟರ್ ಆಗಿತ್ತು.

ಬೆಳಗ್ಗೆ ತಿಂಡಿಯ ನಂತರ ಎಲ್ಲರೂ 8 ಗಂಟೆಗೆ ಹೊರಟು ದೀದ್ನಾ ಹಳ್ಳಿಯ ಬಲಭಾಗದ ಹತ್ತಿರದ ಆದರೆ ತೀವ್ರ ಕಡಿದಾದ ಮಾರ್ಗ ಅನುಸರಿಸಿ ಅತಿ ಎತ್ತರದ ಓಕ್, ಪೈನ್ ಮರಗಳಿಂದ ಕೂಡಿದ ದಟ್ಟವಾದ ಕಾಡಿನ ಏರು ಮಾರ್ಗದ ಮೂಲಕ ನಡೆಯತೊಡಗಿದೆವು. ಈ ಕಾಡಿನಲ್ಲಿ ನಾವು ಚಾರಣ ಮಾಡಿದ ಮಾಸದಲ್ಲಿ ಕೆಲವು ಪಕ್ಷಿಗಳನ್ನು ಬಿಟ್ಟರೆ ಬೇರಾವ ಪ್ರಾಣಿಗಳೂ ಕಂಡು ಬರಲಿಲ್ಲ. ಪಕ್ಷಿಗಳೂ ಕೂಡ ಎತ್ತರದ ಮರಗಳಲ್ಲಿದ್ದು ಚಾರಣಿಗರಿಗೆ ಕಾಣುತ್ತಿರಲಿಲ್ಲ. ಶೀಘ್ರದಲ್ಲೇ ಎಲ್ಲರಿಗೂ ಆಯಾಸವಾಗತೂಡಗಿತು. ನಡಿಗೆಯ ವೇಗ ಕಡಿಮೆಯಾಯಿತು. ನಿಧಾನವಾಗಿ ಹಾಗೂ ಪ್ರತಿ ಹತ್ತು ನಿಮಿಷಕ್ಕೂ ವಿಶ್ರಾಂತಿ ಪಡೆಯುತ್ತಾ ಪರ್ವತವನ್ನು ಹತ್ತತೊಡಗಿದೆವು. ಪ್ರತಿಬಾರಿ ವಿಶ್ರಾಂತಿ ಪಡೆದಾಗಲೂ ಕಾಡಿನೊಳಗಿನ ಸುಂದರ ದೃಶ್ಯಗಳ ಚಿತ್ರಗಳನ್ನು ಕ್ಯಾಮರದಲ್ಲಿ ಸೆರೆಹಿಡಿದೆವು. ಬೆಳಗಿನ ಸೂರ್ಯಕಿರಣ ದಟ್ಟವಾದ ಮರಗಳ ಮೂಲಕ ತೂರಿಬರುವ ದೃಶ್ಯ ನಯನ ಮನೋಹರವಾಗಿತ್ತು. ನಡೆಯುತ್ತಿದ್ದ ರಸ್ತೆ ಒಣಗಿದ ಎಲೆಗಳಿಂದ ಮುಚ್ಚಿದ್ದರೂ ಸುಂದರವಾಗಿತ್ತು. ಇದರೊಂದಿಗೆ ದಟ್ಟವಾದ ಕಾಡಿನಮಧ್ಯೆ ತಂಪಾದ ಗಾಳಿಯಿಂದ ಹವಾಗುಣ ತುಂಬಾ ಹಿತಕರವಾಗಿತ್ತು. ಅತಿ ಕಡಿದಾದ ಬೆಟ್ಟವನ್ನು ಹತ್ತುತ್ತ ತುದಿಯನ್ನು ತಲುಪುತ್ತಿದ್ದಂತೆ ಸುಂದರವಾದ ಆಲಿಬುಗ್ಯಾಲ್ ಹುಲ್ಲುಗಾವಲಿನ ದೃಶ್ಯ ಕಾಣಿಸತೊಡಗಿತು. 12.30ಕ್ಕೆ ಕಣ್ಣಿಗೆ ಕಾಣಿಸುವಷ್ಟು ದೂರದವರೆಗೂ ಹಸಿರಿನಿಂದ ಕೂಡಿದ ವಿಶಾಲವಾದ ಹುಲ್ಲುಗಾವಲನ್ನು ಪ್ರವೇಶಿಸಿ ಸ್ವಲ್ಪ ವಿಶ್ರಾಂತಿಯೊಂದಿಗೆ ಆಕಾಶದಲ್ಲಿ ತೇಲುತ್ತಿದ್ದ ಬಿಳಿ ಮೋಡಗಳನ್ನು ವೀಕ್ಷಿಸಿದೆವು. ಆಲಿಬುಗ್ಯಾಲ್ ಹುಲ್ಲುಗಾವಲು ಸಮುದ್ರಮಟ್ಟದಿಂದ 3300 ಮೀಟರ್ (12540 ಅಡಿ) ಎತ್ತರದಲ್ಲಿದೆ ಹಾಗೂ ಇದರ ಇಳಿಜಾರಿನ ಮಾರ್ಗ ಅತಿ ಸುಂದರವಾದ ತ್ರಿಭುಜಾಕಾರದ ಮರಗಳಿಂದ ಅಲಂಕೃತವಾಗಿದೆ. ಈ ಹುಲ್ಲುಗಾವಲು ಭಾರತದಲ್ಲೇ ಅತಿ ದೊಡ್ಡದಾದ ಮತ್ತು ಅತಿ ಸುಂದರವಾದದ್ದು. ಆಲಿಬುಗ್ಯಾಲ್‌ನಿಂದ ಒಂದು ದಿಕ್ಕಿಗೆ ನೋಡಿದರೆ ನಮಗೆ ಕಾಣುವುದೆ ನಂದಗುಂಟಿ, ತ್ರಿಶೂಲ್, ಕಾಲಿದಾಕ್, ಚೌಖಾಂಬ, ನೀಲಕಾಂತ್ ಪರ್ವತ ಶ್ರೇಣಿಗಳು. ನಾವು ಅತ್ಯಂತ ಎತ್ತರ ಪ್ರದೇಶದಲ್ಲಿದ್ದುದರಿಂದ ಮೋಡಗಳು ನಮ್ಮ ನಡುವೆಯೇ ಹಾದುಹೋಗುತ್ತಿದ್ದವು.

ನಂತರ ಸ್ವಲ್ಪ ಮೇಲೆ ಹೋಗಿ ನಮಗಾಗಿ ಕಾಯುತ್ತಿದ್ದ ಮಾರ್ಗದರ್ಶಿ ಕೊಟ್ಟ ಆಲೂ ಪರಾಠ ಮತ್ತು ಪಲ್ಯ ತಿಂದು ಸ್ವಲ್ಪ ಹೊತ್ತು ವಿಶ್ರಾಂತಿಯ ನಂತರ ಬೇದ್ನಿ ಬುಗ್ಯಾಲ್ ಕಡೆಗೆ ಪ್ರಯಾಣ ಮುಂದುವರಿಸಿದೆವು. ಹಾದಿಯಲ್ಲಿ ಹುಲ್ಲು ಮೇಯುತ್ತಿದ್ದ ಅಸಂಖ್ಯ ಕುದುರೆಗಳನ್ನು ವೀಕ್ಷಿಸಿ 5 ಕಿ.ಮೀಟರ್ ದೂರದ ಬೇದ್ನಿ

ಬುಗ್ಯಾಲ್ ಕಡೆಗೆ ರಸ್ತೆಯು ಇಳಿಜಾರು ರಸ್ತೆಯಲ್ಲಿ ನಡೆದು ನಂತರ ಸ್ವಲ್ಪ ಏರುಹಾದಿಯನ್ನು ಏರತೊಡಗಿದೆವು. ಸುಮಾರು ಎರಡು ಗಂಟೆ ನಂತರ ಬೇದ್ನಿ ಬುಗ್ಯಾಲನ್ನು ತಲುಪಿದೆವು. ದಾರಿಯಲ್ಲಿ ಹವಾಗುಣವು ಆಗಾಗ್ಗೆ ಬದಲಾಗುತ್ತಿತ್ತು. ಕಾಲು ಗಂಟೆ ಪ್ರಖರವಾದ ಸೂರ್ಯ ಪ್ರಕಾಶವಿದ್ದರೆ ನಂತರ ಮೋಡಕವಿದು ಇನ್ನೇನು ಮಳೆ ಬರುತ್ತದೇನೂ ಎಂಬಂತಿತ್ತು. ಆದರೆ ನಮ್ಮ ಅದೃಷ್ಟಕ್ಕೆ ಮಳೆಯು ಬರಲಿಲ್ಲ. ಬೇದ್ನಿ ಬುಗ್ಯಾಲ್ ಸುಂದರವಾದ ಹುಲ್ಲುಗಾವಲು. ಇಲ್ಲಿನ ವಿಶೇಷವೆಂದರೆ ವಸಂತ ಋತು ಬಂತೆಂದರೆ ಇಡೀ ಹುಲ್ಲುಗಾವಲೇ ಅತ್ಯಂತ ಸುಂದರವಾದ ಹೂ ತೋಟವಾಗಿ ಎಲ್ಲೂ ಕಂಡರಿಯದ ವಿಧವಿಧವಾದ ಹೂವುಗಳು ಕಾಣಿಸಿಕೊಂಡು ನೋಡುಗರ ಕಣ್ತಣಿಸುತ್ತವೆ. ಉಳಿದ ಋತುಗಳಲ್ಲಿ ಹುಲ್ಲಿನಿಂದ ಆವೃತವಾಗಿರುತ್ತದೆ.

ಬೇದ್ನಿ ಬುಗ್ಯಾಲ್ 3354 ಮೀಟರ್ (11330 ಅಡಿ ಸುಮಾರು) ಎತ್ತರದಲ್ಲಿದೆ. ಇಲ್ಲಿಂದ ನಂದಗುಂಟಿ ಮತ್ತು ತ್ರಿಶೂಲ್ ಪರ್ವತಗಳು ನಿಚ್ಚಳವಾಗಿ ಕಾಣಿಸುತ್ತವೆ. ಇಲ್ಲಿ ಒಂದು ಸಣ್ಣ ಸರೋವರ ಇದೆ. ಇದನ್ನು ವೈತರಣಿ (ಬೇದ್ನಿ ಕುಂಡ) ಎಂದು ಕರೆಯುತ್ತಾರೆ. ಹನ್ನೆರಡು ವರ್ಷಗಳಿಗೊಮ್ಮೆ ರೂಪಕುಂಡ್ ಪ್ರದೇಶದಲ್ಲಿ ನಂದರಾಜ್ ಜಾಟ್ ಯಾತ್ರೆ ನಡೆಯುತ್ತದೆ. ಆ ಸಮಯದಲ್ಲಿ ಯಾತ್ರಿಕರು ಇಲ್ಲಿ ತಂಗುತ್ತಾರೆ. ಬೇದಿನಿ ಕುಂಡದಲ್ಲಿ ಯಾತ್ರಿಕರು ಸ್ನಾನಮಾಡಿ ಪಿತೃಗಳಿಗೆ ತರ್ಪಣವನ್ನು ಕೊಡುತ್ತಾರೆ. ಈ ಕುಂಡದಲ್ಲಿ ಪ್ರಸಿದ್ಧವಾದ ಹಾಗೂ ಅಪರೂಪದ ಬ್ರಹ್ಮಕಮಲವು ಅರಳುತ್ತದೆ.

ಮೂರನೇದಿನ (10.10.2012) : ಬೇದ್ನಿ ಬುಗ್ಯಾಲ್ ಕ್ಯಾಂಪಿನಿಂದ ಭಗ್ವಾಭಾಸ್ ಕ್ಯಾಂಪ್ ಕಡೆಗೆ 6 ಕಿ.ಮೀ ಚಾರಣ 11336 ಅಡಿಯಿಂದ 14700 ಅಡಿ – 7–8 ಗಂಟೆಗಳ ಚಾರಣ

ಬೇದ್ನಿ ಬುಗ್ಯಾಲ್ ಕ್ಯಾಂಪಿನಲ್ಲಿ ರಾತ್ರಿ ಕಳೆದು ಬೆಳಗ್ಗೆ ತಿಂಡಿಯ ನಂತರ ಪತಾರ್ ನಾಚೌನಿ, ಘೋರಾಲೋಟಾನಿ ಮುಖಾಂತರ ಭಗ್ವಾಭಾಸ್ ಕ್ಯಾಂಪ್ ಕಡೆಗೆ ನಡೆಯತೊಡಗಿದೆವು. ಭಗ್ವಾಭಾಸ್ 4375 ಮೀಟರ್ (14700 ಅಡಿ) ಎತ್ತರದಲ್ಲಿ ಇದೆ ಹಾಗೂ ಹಿಮದಿಂದ ಆವೃತವಾಗಿರುತ್ತದೆ. ಪ್ರಯಾಣವು ಮಧ್ಯಮದಿಂದ ಕಷ್ಟಕರ ಮಾರ್ಗದಿಂದ ಕೂಡಿದ್ದು, ಮೊದಲಿಗೆ ತೀವ್ರವಾದ ಎತ್ತರ ಮಾರ್ಗ ಹಾಗೂ ನಂತರ ಸುಲಭ ಮಾರ್ಗವಿದೆ. ಮೊದಲ ಬಾರಿಗೆ ಈ ಜಾಗದಲ್ಲಿ ನಡೆಯುತ್ತಿದ್ದಾಗ ನಮಗೆ ಅತಿ ಎತ್ತರದ ಪ್ರಭಾವ ಹಾಗೂ ಆಮ್ಲಜನಕ ಕಡಿಮೆಯಿರುವ ಗಾಳಿಯ ಅನುಭವವಾಗುತ್ತದೆ. ಬೆಳಗ್ಗೆ ಬೇಗನೆ ಉಪಹಾರ ಸೇವಿಸಿ 8 ಗಂಟೆಗೆ ಹೊರಟೆವು. ರಸ್ತೆಯ ಮೊದಲ 3 ಕಿ.ಮೀ ನಡಿಗೆ ಸುಲಭವಾಗಿತ್ತು.

ಅನಂತರ ಮಾರ್ಗವು ಬೇದ್ನಿಯ ಮತ್ತೊಂದು ಕಣಿವೆಯ ಕಡೆಗೆ ತಿರುಗಿತು. ಇಲ್ಲಿಯ ದೃಶ್ಯಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸಿತು. ಈ ದೃಶ್ಯ ಅತ್ಯಂತ ಮನಮೋಹಕವಾಗಿದ್ದು ಮೊದಲಬಾರಿಗೆ ಪರ್ವತದ ಮೇಲ್ಮೆಯಲ್ಲಿ ಚಳಿಗಾಲದ ಹಿಮವು ಕಾಣಿಸಿತು. ಎಲ್ಲಿ ನೋಡಿದರೂ ಹಿಮ. ಸ್ವಲ್ಪದೂರದ ನಂತರ ಘೋರಾಲೋಟಾನಿಯ ಹುಲ್ಲುಗಾವಲನ್ನು ಪ್ರವೇಶಿಸಿ ಪರ್ವತದ ಜೊತೆ ಐಕ್ಯವಾಗುವುದನ್ನು ಕಂಡೆವು. ಘೋರಾಲೋಟಾನಿಯಲ್ಲಿ ನಾವು ನಿಲ್ಲಲಿಲ್ಲ. ನಮ್ಮ ಪ್ರಯಾಣವನ್ನು ಭಗ್ವಾಭಾಸ್ ಕಡೆಗೆ ಮುಂದುವರೆಸಿದೆವು. ಸಂಜೆ 4ಕ್ಕೆ ಭಗ್ವಾಭಾಸ್ ಕ್ಯಾಂಪ್ ತಲುಪಿ ಊಟಮಾಡಿ ನಮ್ಮ ಟೆಂಟಿನಲ್ಲಿ ಸ್ವಲ್ಪಹೊತ್ತು ವಿಶ್ರಾಂತಿಯನ್ನು ತೆಗೆದುಕೊಂಡೆವು. ಸಂಜೆಯಾಗುತ್ತಿದ್ದಂತೆ ಬೇಗನೆ ಕತ್ತಲಾಗ ತೊಡಗಿತು ಹಾಗೂ ಚಳಿಯು ಹೆಚ್ಚಾಗತೊಡಗಿತು. ಬೆಳಕಿಲ್ಲದ್ದರಿಂದ ಎಲ್ಲರೂ ಟೆಂಟಿನೊಳಗೆ ಸೇರಿಕೊಂಡು ಹರಟೆ ಹೊಡೆಯತೊಡಗಿದೆವು. 7 ಗಂಟೆಗೆ ಬಿಸಿ ಬಿಸಿ ಮ್ಯಾಗಿ ನೂಡಲ್ಸ್ ತಿಂದು 8 ಗಂಟೆಗೆ ಎಲ್ಲರನ್ನೂ ರಾತ್ರಿ ಊಟಕ್ಕೆ ಕರೆದರು. ನಾನು ಊಟಮಾಡದೆ ಟೆಂಟ್ ಒಳಗೆ ಜಾಗ ಮಾಡಿಕೊಂಡು ನಿದ್ರಿಸುವ ಚೀಲದೊಳಗೆ ತೂರಿಕೊಂಡೆನು.

ಹಿಮಾವೃತವಾದ ಕ್ಯಾಂಪ್‌ಗಳಲ್ಲಿ 12 ಚಾರಣಿಗರು ಮಲಗಬಹುದಾದ ಡಾರ್ಮಿಟರಿ ಟೆಂಟಿನೊಳಗೆ ಮಲಗಲು ಎಲ್ಲರಿಗೂ ನೆಲದ ಮೇಲೆ ದಪ್ಪನೆಯ ಫೋಮ್‌ನಿಂದ ತಯಾರಾದ ಚಾಪೆ ಹಾಸಿದ್ದರು. ಅದರ ಮೇಲೆ ಚಾರಣಿಗರು ತಮ್ಮ ಚಾರಣದ ದಿರಸುಗಳೊಂದಿಗೆ (ಪ್ಯಾಂಟ್, ಶರ್ಟ್, ಸ್ವೆಟರ್, ತಲೆಗೆ ಉಣ್ಣೆಯ ಟೋಪಿ) ಚಾರಣ ಸಂಸ್ಥೆ ನೀಡಿರುವ ಇನ್ನರ್ (ಅಂದರೆ ಕಾಲಿನಿಂದ ಎದೆಯವರೆಗೂ ಇರುವ ದಪ್ಪನೆಯ ಚೀಲ) ಒಳಗೆ ತೂರಿಕೊಂಡು ಅದರ ಮೇಲೆ –5°C ಶೀತಹವೆಯಿಂದ ರಕ್ಷಿಸುವ ಸಿಂಥಟಿಕ್ ಸ್ಲೀಪಿಂಗ್‌ಬ್ಯಾಗ್ನೊಳಗೆ ಸೇರಿಕೊಳ್ಳಬೇಕು. ನನಗೆ ಹಾಗೂ ಮತ್ತಿಬ್ಬರಿಗೆ ಡಾರ್ಮಿಟರಿ ಟೆಂಟಿನೊಳಗೆ ಮಲಗಲು ಜಾಗವಿಲ್ಲದ ಕಾರಣ ಹೊರಗೆ ಮೂವರು ಮಲಗಬಹುದಾದ ಟೆಂಟೊಂದನ್ನು ಸ್ಥಾಪಿಸಿ ಅಲ್ಲಿ ಮಲಗಲು ಅನುಕೂಲ ಮಾಡಿಕೊಟ್ಟರು.

ಈ ಹೊತ್ತಿಗಾಗಲೇ ಟೆಂಟ್ ಹೊರಗೆ ಮಳೆ ಹಾಗೂ ಹಿಮವೃಷ್ಟಿಯಾಗುತ್ತಿತ್ತು. ಇದರೊಂದಿಗೆ ಕೊರೆಯುವ ಶೀತಲಗಾಳಿಯೂ ಬೀಸತೊಡಗಿತು. ಟೆಂಟ್ ಒಳಗಿನ ಉಷ್ಣತೆಯು –2°C, ಹೊರಗಿನದ್ದು –5°C ಇತ್ತು. ನಮ್ಮ ಟೆಂಟ್ ಮೇಲೆ ಆಗಾಗ್ಗೆ ಹಿಮವು ಬೀಳುತ್ತಿತ್ತು. ಅದನ್ನು ಒಳಗಿನಿಂದಲೇ ಕೈಯಿಂದ ನೂಕುತ್ತಿದ್ದೆ. ರಾತ್ರಿ ಕಳೆಯುವುದೇ ಬಹಳ ಕಷ್ಟವಾಗಿತ್ತು. ವಿಪರೀತ ಚಳಿ. ಹಾಗೂ ಹೀಗೂ ಬೆಳಗ್ಗೆ 5 ಗಂಟೆಗೆ ಸ್ವಲ್ಪ ನಿದ್ರೆ ಹತ್ತಿತ್ತು. 6 ಗಂಟೆಗೆ ಹೊರಗೆ ಜನಗಳ ಮಾತು ಕೇಳತೊಡಗಿತು. ಎದ್ದು ಹೊರ ಬಂದು ನೋಡಿದರೆ ಎಲ್ಲೆಲ್ಲೂ ಪಾದ ಮುಚ್ಚುವಷ್ಟು

ಹಿಮವೇ. ಎದ್ದು ಕಾಲಿಗೆ ಶೂ ಹಾಕಿಕೊಂಡು ಹೊರಬಂದು ಸ್ವಲ್ಪ ಬಿಸಿನೀರಿನಲ್ಲಿ ಮುಖ ತೊಳೆದೆ. ಕುದಿಯುತ್ತಿದ್ದ ನೀರನ್ನು ತಂದರೂ ಕ್ಷಣಮಾತ್ರದಲ್ಲಿ ಅದು ತಣ್ಣಗಾಗುತ್ತಿತ್ತು. ಬೇಗನೆ ಬಟ್ಟೆ, ಇತರೆ ಪದಾರ್ಥಗಳನ್ನು ಪ್ಯಾಕ್ ಮಾಡಿ ಬ್ಯಾಗನ್ನು ಕುದುರೆ ಸವಾರನಿಗೆ ತಲುಪಿಸಿ ತಿಂಡಿ ತಿಂದು ಎಲ್ಲರೊಡನೆ ರೂಪಕುಂಡ್ ಕಡೆಗೆ ಹೊರಡಲು ತಯಾರಾದೆನು.

ನಾಲ್ಕನೆಯ ದಿನ (11.10.2012) : ಭಗ್ವಾಭಾಸ್ ಕ್ಯಾಂಪಿನಿಂದ ರೂಪಕುಂಡ ಸರೋವರ– ಮರಳಿ ಭಗ್ವಾಭಾಸ್ ಕ್ಯಾಂಪ್ ಕಡೆಗೆ 10 ಕಿ.ಮೀ ಚಾರಣ 14700 ಅಡಿಯಿಂದ 15800 ಅಡಿ 7–8 ಗಂಟೆಗಳ ಚಾರಣ

ನಾಲ್ಕನೆ ದಿನದ ಪ್ರಯಾಣವು ಅತ್ಯಂತ ಕಠಿಣವಾಗಿದ್ದು ನಾವು ಭಗ್ವಾಭಾಸದಿಂದ ರೂಪಕುಂಡ್ ಕಡೆಗೆ ಹಾಗೂ ರೂಪಕುಂಡದಿಂದ ಮರಳಿ ಭಗ್ವಾಭಾಸ್ ಮುಖಾಂತರ ಬೇದಿನಿ ಬುಗ್ಯಾಲಿನವರೆಗೆ. ರೂಪಕುಂಡ್ ಸರೋವರ 4844 ಮೀಟರ್ (ಸುಮಾರು 15800 ಅಡಿ) ಎತ್ತರದಲ್ಲಿದೆ. ಈದಿನದ ಚಾರಣವು ಅತ್ಯಂತ ಕಠಿಣವಾದದ್ದು, ಏಕೆಂದರೆ ಭಗ್ವಾಭಾಸಿನಿಂದ ರೂಪಕುಂಡ್ ಮತ್ತು ಮರಳಿ ಭಗ್ವಾಬಾಸ್ ರಸ್ತೆಯು 10 ಕಿಲೋಮೀಟರ್ ಸಂಪೂರ್ಣವಾಗಿ ಹಿಮದಮೇಲಿನ ನಡಿಗೆ. ಸ್ವಲ್ಪ ಎಚ್ಚರತಪ್ಪಿದರೂ ಜಾರಿ ಬೀಳುವುದು ಖಚಿತ. ಪ್ರತಿಯೊಂದು ಹೆಜ್ಜೆಯನ್ನೂ ಎಚ್ಚರಿಕೆಯಿಂದ ಹಾಗೂ ನಿಧಾನವಾಗಿ ಇಡಬೇಕು. ಮೊದಲು ಸ್ವಲ್ಪ ದೂರ ಪ್ರಯಾಣವು ಅಷ್ಟೇನೂ ಕಷ್ಟವಾಗಿರಲಿಲ್ಲ. ಆದರೆ ಒಂದು ಗಂಟೆಯ ನಂತರ ರಸ್ತೆ ಕಷ್ಟವಾಗಿತ್ತು. ರಸ್ತೆಯು ಅತ್ಯಂತ ಕಡಿದಾಗಿತ್ತು. ಈ ಕಷ್ಟದ ಜೊತೆಗೆ ಉಸಿರಾಟ ಬಹಳ ಕಷ್ಟವಾಗತೊಡಗಿತು. ನಾನು ನನ್ನ ಕೊರಳಿನಲ್ಲಿನ ಚೀಲದಲ್ಲಿ ಕರ್ಪೂರ ಇಟ್ಟುಕೊಂಡಿದ್ದರಿಂದ ಅದನ್ನು ಮೂಗಿಗೆ ಹಿಡಿದು ಉಸಿರನ್ನು ಎಳೆದುಕೊಂಡಾಗ ಆಮ್ಲಜನಕ ಒಳಗೆ ಹೋಗುತ್ತಿತ್ತು. ಆದರೆ 10 ಚಾರಣಿಗರು ಉಸಿರಾಟದ ತೊಂದರೆಗೆ ಸಿಕ್ಕಿಕೊಂಡು ಅವರಿಗೆ ಮುನ್ನಡೆಯುವುದು ಅಸಾಧ್ಯವಾಗ ತೊಡಗಿತು. ಇನ್ನು ಕೆಲವರಿಗೆ ದೃಷ್ಟಿ ದೋಷದಿಂದಾಗಿ ಮುನ್ನಡೆಯುವುದು ಕಷ್ಟವಾಗಿತ್ತು. ಒಂದು ಕಡೆ ಹತ್ತುವಾಗ ಒಂದು ಕಾಲು ಹಿಮದಲ್ಲಿ ಕೆಳಗೆ ಇದ್ದರೆ ಮತ್ತೊಂದನ್ನು ಸುಮಾರು 4 ಅಡಿ ಎತ್ತರದಲ್ಲಿ ಇಟ್ಟು ಹತ್ತಬೇಕಾಗಿತ್ತು. ಈ ಜಾಗದಲ್ಲಿ ಕೆಳಗೆ ಒಬ್ಬ ಗೈಡ್ ಇದ್ದು ನಮ್ಮನ್ನು ಮೇಲಕ್ಕೆ ಎತ್ತುತ್ತಿದ್ದನು ಹಾಗೂ ಮೇಲೆ ಮತ್ತೊಬ್ಬ ಗೈಡ್ ನಮ್ಮನ್ನು ಎಳೆದುಕೊಳ್ಳುತ್ತಿದ್ದನು. ನಮ್ಮ ಗುಂಪಿನಲ್ಲಿ 24 ಚಾರಣಿಗರಿದ್ದರು. ಇಲ್ಲಿಯವರೆಗೂ ಎಲ್ಲರೂ ಹಾಗೂ ಹೀಗೂ ಹತ್ತಿ ಬಂದಿದ್ದರು. ಈ ಜಾಗದಲ್ಲಿ 12 ಚಾರಣಿಗರು ಮೇಲೆ ಹತ್ತಲಾಗದೆ

ಭಗ್ವಾಬಾಸ್ ಕ್ಯಾಂಪ್ ಕಡೆಗೆ ಮರಳಿದರು. ನನಗೆ ದೇವರ ಕೃಪೆಯಿಂದ ಯಾವ ತೊಂದರೆಯೂ ಕಾಣಿಸಿಕೊಳ್ಳಲಿಲ್ಲ. ಟ್ರೆಕ್ ಲೀಡರ್ ನನ್ನ ಜೊತೆಗೆ ಹಿಂದೆಯೇ ಇದ್ದು ನನ್ನನ್ನು 4 ಅಡಿ ಎತ್ತರದ ಜಾಗದಲ್ಲಿ ಎಚ್ಚರಿಕೆಯಿಂದ ಹತ್ತಿಸಿಕೊಂಡು ವಿಪರೀತ ಹಿಮಗಾಳಿ ಇದ್ದರೂ ನಿಧಾನವಾಗಿ ನಡೆಸಿಕೊಂಡು ಕಾಲೂವಿನಾಯಕ ಮಂದಿರದವರೆಗೂ ಕರೆದುಕೊಂಡು ಬಂದರು. ಇಲ್ಲದಿದ್ದರೆ ನಾನು ಖಂಡಿತವಾಗಿ ರೂಪಕುಂಡವನ್ನು ತಲುಪುತ್ತಿರಲಿಲ್ಲ. ಕಾಲೂವಿನಾಯಕ ಮಂದಿರವು ರೂಪಕುಂಡಕ್ಕೆ ಹತ್ತಿರದಲ್ಲಿದೆ. ಅಲ್ಲಿಯ ಗ್ರಾಮವಾಸಿಗಳು ಬಹಳ ಹಿಂದೆಯೇ ಈ ಮಂದಿರವನ್ನು ಕಲ್ಲುಗಳಿಂದ ನಿರ್ಮಿಸಿದ್ದಾರೆ. ಒಳಗೆ ಒಂದು ಸಣ್ಣ ವಿನಾಯಕನ ವಿಗ್ರಹವಿದೆ. ಹೊರಗೆ ಗಂಟೆಗಳನ್ನು ಕಟ್ಟಿದ್ದಾರೆ. ಚಾರಣಿಗರು ವಿನಾಯಕನಿಗೆ ನಮಸ್ಕರಿಸಿ ಊದುಬತ್ತಿಯನ್ನು ಹಚ್ಚಿ, ದಕ್ಷಿಣೆರೂಪದಲ್ಲಿ 5–10 ರೂಪಾಯಿ ಅಲ್ಲಿಯೇ ಇಟ್ಟು ಮುಂದಕ್ಕೆ ಹೊರಡುತ್ತಾರೆ. ನಾನು ದೇವರಿಗೆ ನಮಸ್ಕರಿಸಿ ಕೆಲವು ಶ್ಲೋಕಗಳನ್ನು ಪಠಿಸಿ ಮುನ್ನಡೆದೆ. ಇಲ್ಲಿಂದ ಟ್ರೆಕ್ ಲೀಡರ್ ನನ್ನನ್ನು ಮುಂದಕ್ಕೆ ಹೋಗಲು ತಿಳಿಸಿದರು. ಕಾಲೂವಿನಾಯಕ ಮಂದಿರದಿಂದ ಕಟ್ಟ ಕಡೆಯ ಏರುವಿಕೆ ಅತ್ಯಂತ ಕಠಿಣವಾಗಿತ್ತು. ಕಡೆಯಲ್ಲಿ ಏರುವಾಗ ರಸ್ತೆಯು ಹಿಮಮಿಶ್ರಿತ ಹೆಕ್ಕೆಗಳಿಂದ ಕೂಡಿ ಬಹಳ ಕಷ್ಟವಾಗಿದ್ದರಿಂದ ಈ ಭಾಗವನ್ನು ನಮ್ಮ ಕೈ ಹಾಗೂ ಕಾಲುಗಳನ್ನ ಬಳಸಿ ಹತ್ತಬೇಕಾಗಿತ್ತು. ರೂಪಕುಂಡವು ಇಲ್ಲಿಂದ 5 ನಿಮಿಷದಷ್ಟು ಸನಿಹದಲ್ಲಿದ್ದರೂ ಸಹ ಅದು ಅಲ್ಲಿಗೆ ಹೋದ ನಂತರವೇ ನಮಗೆ ಕಾಣಿಸುವುದು. ನಾನು ಹಿಮದಲ್ಲಿ ನಿಧಾನವಾಗಿ ನಡೆದು 15 ನಿಮಿಷದಲ್ಲಿ ರೂಪಕುಂಡ ಸರೋವರದ ಹತ್ತಿರ ತಲುಪಿದೆ. ಅಲ್ಲಿಗಾಗಲೇ 10 ಚಾರಣಿಗರು ಬಂದಿದ್ದರು. ರೂಪಕುಂಡ್ ಸರೋವರವು ಪರ್ವತದ ಮುಖದಲ್ಲಿರುವ ಒಂದು ಹಳ್ಳ ಹಾಗೂ ಪರ್ವತದ ಸೆರಗಿನಲ್ಲಿ ಅಡಗಿಕೊಂಡಂತಿದೆ. ಇದರ ಸುತ್ತಲೂ ತ್ರಿಶೂಲ್ ಪರ್ವತದ ಸಣ್ಣ ಸಣ್ಣ ಶಿಖರಗಳಿರುವುದು. ಸರೋವರದ ದಡಕ್ಕೆ ಹೋಗಬೇಕಾದರೆ ನಾವುಗಳು 50 ಅಡಿ ಕೆಳಕ್ಕೆ ಇಳಿಯಬೇಕು. ಆದರೆ ನಮ್ಮಲ್ಲಿ ಯಾರೂ ಆ ಸಾಹಸಕ್ಕೆ ಕೈಹಾಕಲಿಲ್ಲ. ಕೇವಲ ಒಬ್ಬ ಚಾರಣಿಗ ಮಾತ್ರ ಅಲ್ಲಿಂದ 500 ಮೀಟರ್ ಎತ್ತರದಲ್ಲಿರುವ ಜುನಾರ್ಗಲಿ ಸ್ಥಳಕ್ಕೆ ಹೋಗಿಬಂದರು. ಭಗವಂತನಿಗೆ ಧನ್ಯವಾದ ಮತ್ತು ಕೃತಜ್ಞತೆಗಳನ್ನು ಅರ್ಪಿಸಿದೆ. ನನ್ನ ಮಟ್ಟಿಗೆ, ನನ್ನ ವಯಸ್ಸಿಗೆ ಇದು ಮಹತ್ತರವಾದ ಸಾಧನೆ.

ರೂಪಕುಂಡ ಸರೋವರದಿಂದ ಮರುಪ್ರಯಾಣ ಬಹಳ ಕಷ್ಟವಾಗಿತ್ತು. ಹಿಮದಿಂದಕೂಡಿದ ಇಳಿಜಾರಿನಲ್ಲಿ ಇಳಿಯುವುದು ಅಷ್ಟು ಸುಲಭವಲ್ಲ. ಮೊದಲಿಗೆ ಕುಳಿತು ತೆವಳಿಕೊಂಡು ಹೋಗಬೇಕು. ಸ್ವಲ್ಪ ದೂರ ಸಾಗಿದ ನಂತರ ಇಳಿಯುವುದು ಸ್ವಲ್ಪಮಟ್ಟಿಗೆ ಸುಲಭವಾಗುವುದು. ಆದರೂ ಮರುಪ್ರಯಾಣ

ಮಧ್ಯಾಹ್ನ ಶುರುವಾಗಿದ್ದರಿಂದ ಹಿಮ ಸ್ವಲ್ಪ ಸ್ವಲ್ಪವಾಗಿ ಕರಗಿ ನೆಲವು ಜಾರುತ್ತಿತ್ತು. ಪ್ರತಿಯೊಂದು ಹೆಜ್ಜೆಯನ್ನು ಅತಿ ಎಚ್ಚರದಿಂದ ಇಟ್ಟು ಮುಂದುವರಿಯಬೇಕಿತ್ತು. ಎಲ್ಲರಿಗಿಂತ ಬಹಳ ಹಿಂದೆ ನಾನು ಇಳಿಯುತ್ತಿದ್ದೆ. ನನ್ನ ಜೊತೆಗೆ ಗೈಡ್ ವಿಜಯಕುಮಾರ್ ಇದ್ದದ್ದರಿಂದ ಅವರ ಸಹಾಯ ಹಾಗೂ ರಕ್ಷಣೆಯಲ್ಲಿ ನಾನು ಇಳಿಯತೊಡಗಿದೆ. ಎಷ್ಟೇ ಎಚ್ಚರವಹಿಸಿದರೂ ಮೂರುಕಡೆ ಹಿಮದ ಇಳಿಜಾರಿನಲ್ಲಿ ಬಿದ್ದೆ. ಆದರೆ ನಿದಾನವಾಗಿ ಇಳಿಯುತ್ತಿದ್ದಿದ್ದರಿಂದ ಯಾವುದೇ ಅಪಾಯವಾಗಲಿಲ್ಲ. ಭಗ್ವಾಬಾಷ್ ಬೇಸ್ ಕ್ಯಾಂಪನ್ನು 3 ಗಂಟೆಗೆ ತಲುಪಿದೆ. ಅಷ್ಟು ಹೊತ್ತಿಗಾಗಲೇ ಉಳಿದ ಚಾರಣಿಗರು ಊಟ ಮುಗಿಸಿ ಬೇದ್ನಿ ಬುಗ್ಯಾಲ್ ಕಡೆಗೆ ಹೋಗಿದ್ದರು. ನಾನು ಸ್ವಲ್ಪ ಊಟಮಾಡಿ 3.15ಕ್ಕೆ ಅಲ್ಲಿಂದ ವಿಜಯಕುಮಾರರೊಂದಿಗೆ ಬೇದ್ನಿ ಬುಗ್ಯಾಲ್ ಕಡೆಗೆ ಹೊರಟೆನು. ಬೇದ್ನಿ ಬುಗ್ಯಾಲ್ ತಲುಪಲು ಬಹಳ ಸಮಯ ಹಿಡಿಯಿತು. ರಾತ್ರಿ 9.30ಕ್ಕೆ ನಾವು ಬೇದ್ನಿ ಬುಗ್ಯಾಲನ್ನು ತಲುಪಿದೆವು. ಇದರಿಂದ ರಾತ್ರಿ ನಡಿಗೆಯ ಅನುಭವವೂ ಆಯಿತು. ಅಡುಗೆ ಮನೆಯಲ್ಲೇ ಊಟ ಮಾಡಿ ನನಗಾಗಿ ಕಾಯ್ದಿರಿಸಿದ ಟೆಂಟೊಳಗೆ ಹೋದಾಗ ಅಲ್ಲಿ ಭವ್ಯವಾದ ಸ್ವಾಗತ ಕಾಯ್ದಿತ್ತು. ಅವರಲ್ಲೆಲ್ಲ ನಾನು ಅತ್ಯಂತ ಹಿರಿಯನಾಗಿದ್ದರಿಂದ ಎಲ್ಲರೂ ಅಷ್ಟು ರಾತ್ರಿಯಲ್ಲೂ ಎದ್ದು ನನ್ನನ್ನು ಸ್ವಾಗತಿಸಿ ಎಲ್ಲರೂ ನನ್ನ ಧೈರ್ಯವನ್ನು ಹೊಗಳಿದರು. ಏಕೆಂದರೆ 24 ಜನರಲ್ಲಿ ಕೇವಲ 12 ಜನ ಮಾತ್ರ ರೂಪಕುಂಡದವರೆಗೆ ಹೋಗಿದ್ದರು. ಅವರಲ್ಲಿ ನಾನೂ ಒಬ್ಬನಾಗಿದ್ದೆ. ಮಾರನೆದಿನ ಬೆಳಗ್ಗೆ ಎಲ್ಲರೂ ಬೇಗನೆ ಎದ್ದೆವು. ಹವಾಮಾನ ಉತ್ತಮವಾಗಿತ್ತು. ಎಲ್ಲೆಲ್ಲೂ ಸೂರ್ಯನ ಬೆಳಕು ಚೆಲ್ಲಿ ಬುಗ್ಯಾಲ್ ಅತ್ಯಂತ ಸುಂದರವಾಗಿ ಕಂಗೊಳಿಸುತ್ತಿತ್ತು. ತ್ರಿಶೂಲ್, ನಂದಗುಂಟಿ ಹಾಗೂ ಚೌಖಾಂಬ ಪರ್ವತಗಳ ಶಿಖರಗಳು ನಿಚ್ಚಳವಾಗಿ ಕಾಣಿಸುತ್ತಿದ್ದವು. ನನ್ನ ಕ್ಯಾಮರಾದಿಂದ ಎಲ್ಲಾ ದೃಶ್ಯ ಸೆರೆಹಿಡಿದೆ. ಅನಂತರ ಮಾರ್ಗದರ್ಶಿಯೊಂದಿಗೆ ಎಲ್ಲರೂ ಫೋಟೊ ತೆಗೆಸಿಕೊಂಡೆವು. ಅಲ್ಲದೆ ರೂಪಕುಂಡದವರೆಗೆ ಚಾರಣ ಮಾಡಿದ 12 ಜನರೂ ಒಟ್ಟಾಗಿ ಫೋಟೋ ತೆಗೆಸಿಕೊಂಡೆವು.

ಬೆಳಗಿನ ಉಪಹಾರದ ನಂತರ 12 ಕಿ.ಮೀ ದೂರದ ವಾನ್ ಹಳ್ಳಿಯಕಡೆಗೆ ನಮ್ಮ ಪ್ರಯಾಣ 9.30ಕ್ಕೆ ಶುರುವಾಯಿತು. ಎಲ್ಲರ ಮನದಲ್ಲೂ ಸಂತೃಪ್ತಿ, ಸಂತೋಷ ಮನೆ ಮಾಡಿತ್ತು. ಕ್ಯಾಂಪಿನಿಂದ ಎಡಕ್ಕೆ ತಿರುಗಿ ಕಲ್ಲಿನ ರಸ್ತೆಯಲ್ಲಿ 20 ನಿಮಿಷ ನಡೆದನಂತರ ಹುಲ್ಲುಗಾವಲು ಕಣ್ಮರೆಯಾಯಿತು ಮತ್ತು ಓಕ್ ಮರಗಳ ಸಾಲು ಪ್ರಾರಂಭವಾಯಿತು. ಹಾಗೇ ಇಳಿಜಾರಿನ ರಸ್ತೆ ಸಹ ಶುರುವಾಯಿತು. ಹಾಗೇ ಓಕ್ ಹಾಗೂ ರೋಡೋಡೆಂಡ್ರನ್ ಮರಗಳಿಂದ ಕೂಡಿದ ದಟ್ಟವಾದ ಕಾಡನ್ನು ಪ್ರವೇಶಿಸಿದೆವು. 45 ನಿಮಿಷಗಳ ನಡಿಗೆಯ ನಂತರ ಮರಗಳ ಸಾಲು ಮುಗಿದು ಸಣ್ಣ ಸಣ್ಣ ಗುಡಿಸಿಲುಗಳು ಕಂಡುಬಂದವು. ಈ ಜಾಗವೇ ಫೈರೋಲೋ

ಪಾತಾಲ್. ಕೆಲವು ನಿಮಿಷ ಇಲ್ಲಿ ವಿಶ್ರಾಂತಿಯನ್ನು ಪಡೆದು ಬಲಗಡೆ ಕಾಣಿಸುವ ಓಕ್ ಮರಗಳ ಕಾಡನ್ನು ಪ್ರವೇಶಿಸುತ್ತಿದ್ದಂತೆ ನಾವು ಕಂಡ ದೃಶ್ಯವು ಸಿನೆಮಾ ಸೆಟ್ಟಿನಿಂದ ಅನಾಮತ್ತಾಗಿ ತೆಗೆದುಕೊಂಡಂತಿತ್ತು. ಕೆಳಗೆ ನೆಲದಮೇಲೆ ಬೂದುಬಣ್ಣದ ಎಲೆಗಳ ಹಾಸಿಗೆ ಹಾಗೂ ಮೇಲ್ಗಡೆ ಮರಗಳ ಸಂದಿನಿಂದ ತೂರಿಬರುತ್ತಿದ್ದ ಸೂರ್ಯಕಿರಣಗಳು ಮತ್ತು ತಂಪಾದ ಗಾಳಿ ಇವೆಲ್ಲದರಿಂದ ಕೂಡಿದ ದೃಶ್ಯವು ನಮ್ಮನ್ನು ಬೆಕ್ಕಸ ಬೆರಗಾಗುವಂತೆ ಮಾಡಿತು. ಮನಸ್ಸಿಗೆ ಅತ್ಯಂತ ಸಂತೋಷವಾಗಿ ಅಲ್ಲಿಯವರೆಗಿನ ಆಯಾಸವೂ ಮಾಯವಾಯಿತು, ಹಾಗೇ ಮುಂದಿನ ಪ್ರಯಾಣಕ್ಕೆ ಹುರುಪನ್ನು ನೀಡಿತು. ಸ್ವಲ್ಪ ಹೊತ್ತಿನ ನಂತರ ತೀವ್ರ ಇಳಿಜಾರಿನಿಂದ ಕೂಡಿದ ನೀಲ್ ಗಂಗಾ ಕಡೆಗೆ ಹೋಗುವ ರಸ್ತೆಯ ಮೂಲಕ ನಡೆಯತೊಡಗಿದೆವು. ದಾರಿಯಲ್ಲಿ ನಾವು ಕಂಡ ಕೆಲವು ಮರಗಳು ಎಷ್ಟು ದಪ್ಪವಾಗಿತ್ತೆಂದರೆ ಮೂರುಜನಗಳು ಕೈಗಳನ್ನು ಪರಸ್ಪರ ಹಿಡಿದುಕೊಂಡು ಮರವನ್ನು ತಬ್ಬಿಕೊಂಡರೂ ಅದನ್ನು ಬಳಸುವುದಕ್ಕಾಗುತ್ತಿರಲಿಲ್ಲ. ಇಂತಹ ಅನೇಕ ಸುಂದರ ದೃಶ್ಯಗಳನ್ನು ದಾರಿಯುದ್ದಕ್ಕೂ ನೋಡುತ್ತಾ ಮೂಕವಿಸ್ಮಿತರಾಗಿ ಇಂತಹ ಪ್ರಕೃತಿಯನ್ನು ಮನುಷ್ಯನಿಗೆ ನೀಡಿದ ಭಗವಂತನಿಗೆ ಧನ್ಯವಾದ ಅರ್ಪಿಸಿ ಆನಂದದಿಂದ ಪ್ರಯಾಣ ಮುಂದುವರೆಸಿದೆವು. ಸ್ವಲ್ಪ ಹೊತ್ತಿಗೆ ನಮಗೆ ಶೀತಲಗಾಳಿಯು ಎದುರಾಯಿತು. ಇದೇನು ಹೀಗೆ ಎಂದು ಯೋಚಿಸುತ್ತಿದ್ದಂತೆ ಕೆಳಗೆ ನೀಲಗಂಗ ನದಿ ಕಾಣಿಸಿತು. ನಂತರ ಒಂದು ಕಬ್ಬಿಣದ ಸೇತುವೆ ಎದುರಾಯಿತು. ಸೇತುವೆಯ ಇಕ್ಕೆಲದಲ್ಲೂ ನದಿಯ ನೀರು ಭೋರ್ಗರೆಯುತ್ತಾ ಹರಿಯುತ್ತಿತ್ತು. ಸ್ವಲ್ಪ ವಿಶ್ರಾಂತಿ ನಂತರ ಪ್ರಯಾಣವನ್ನು ಮುಂದುವರಿಸಿದೆವು. ಇಲ್ಲಿಂದ 45 ನಿಮಿಷಗಳ ಕಾಲ ರಸ್ತೆಯನ್ನು ನಿಧಾನವಾಗಿ ಹತ್ತತೊಡಗಿದೆ. ನಂತರ ವಾನ್ ಹಳ್ಳಿಯನ್ನು ಸಮೀಪಿಸಿದೆವು. 6 ದಿನಗಳ ಕಾಡಿನ ವಾಸ್ತವ್ಯದ ನಂತರ ಎಲ್ಲರೂ ಜನನಿಬಿಡ ಪ್ರದೇಶ ಪ್ರವೇಶಿಸಿದೆವು. ಕೆಲವರಿಗೆ ಬಹಳ ಸಂತೋಷವಾಯಿತು. ತಮ್ಮ ಮನೆ, ಮಕ್ಕಳು, ಕಚೇರಿಯ ನೆನಪಾಗ ತೊಡಗಿತು. ತಕ್ಷಣ ಮೊಬೈಲ್ ಕರೆಗಳನ್ನು ಮಾಡತೊಡಗಿದರು. ನಮ್ಮ 7 ದಿನಗಳ ಇಂಡಿಯಾಹೈಕ್ಸ್ ಜೊತೆಯ ಪ್ರಯಾಣ ಮುಗಿಯಲೇ ಬೇಕಿತ್ತು. ಇಲ್ಲಿಂದ ಹೈಡಲ್ ಪ್ರಾಜೆಕ್ಟ್ ಹತ್ತಿರದ ಕಾಸರ್ ಬಗದ್ಗೆ ಹೋಗಲು ಮುಖ್ಯರಸ್ತೆಯ ಮುಖಾಂತರ ದೀರ್ಘವಾದ ಇಳಿಜಾರಿನ ಮಾರ್ಗವನ್ನು ಆರಿಸಿಕೊಂಡೆವು. 2 ಗಂಟೆಯ ನಡಿಗೆಯ ನಂತರ ಕೆಳಗಿನ ವಾನ್ ಹಳ್ಳಿಯ ನೂರಾರು ವರ್ಷ ಹಳೆಯದಾದ ಸೈಪ್ರಸ್ ಮರಗಳ ಸಾಲನ್ನು ತಲುಪಿ ಮತ್ತೆ 10 ನಿಮಿಷ ನಡೆದ ನಂತರ ನಮಗಾಗಿ ಕಾಯುತ್ತಿದ್ದ ವಾಹನಗಳನ್ನು ಕೂಡಿಕೊಂಡೆವು. ಅಲ್ಲೇ ಇದ್ದ ಹರಿಸಿಂಗ್ ಬುಗ್ಯಾಲಿನ ಚಹಾ ಅಂಗಡಿಯಲ್ಲಿ ಚಹ ಕುಡಿದು ವಾಹನ ಹತ್ತಿ ಲೋಹಾಜಂಗ್ ಕಡೆಗೆ ಪ್ರಯಾಣಿಸಿದೆವು. ಒಂದು ಗಂಟೆಯ ನಂತರ

ಲೋಹಾಜಂಗ್ ತಲುಪಿದೆವು. ಗೆಸ್ಟ್ ಹೌಸಿನಲ್ಲಿ ನಮ್ಮನ್ನು ಅಯ್ಯನ್ ಬ್ರಹ್ಮನ್ ಹಾರ್ದಿಕವಾಗಿ ಸ್ವಾಗತಿಸಿ ರೂಪಕುಂಡಯಾತ್ರೆಯನ್ನು ಮುಗಿಸಿದ್ದಕ್ಕೆ ಎಲ್ಲರನ್ನೂ ಅಭಿನಂದಿಸಿದರು. ನಂತರ ಎಲ್ಲರೂ ಚಹಾ ಸೇವನೆಯ ನಂತರ ಕೋಣೆಗಳಿಗೆ ಸಂತೋಷದಿಂದ ತೆರಳಿದೆವು. ಬೆಳಗ್ಗೆ ಉಪಹಾರದ ನಂತರ ಅಯ್ಯನ್ ಬ್ರಹ್ಮನ್ ಅವರು ಎಲ್ಲರಿಗೂ ರೂಪಕುಂಡ ಚಾರಣ ಮಾಡಿದ ಕುರುಹಾಗಿ ಇಂಡಿಯಾ ಹೈಕ್ಸ್ ಅವರ ಪ್ರಮಾಣ ಪತ್ರವನ್ನು ನೀಡಿದರು. ಅನಂತರ ನಮಗಾಗಿ ಕಾದಿದ್ದ ಜೀಪುಗಳಲ್ಲಿ ಹತ್ತಿ ಕಾತ್-ಗೋದಾಮ್ ಕಡೆಗೆ ಪಯಣಿಸಿದೆವು. ಮರುಪ್ರಯಾಣ ನೀರಸವಾಗಿತ್ತಾದರೂ ಎಲ್ಲರಿಗೂ ತೃಪ್ತಿಯನ್ನು ತಂದಿತ್ತು.

ರೂಪಕುಂಡ ಯಾತ್ರೆ ನನಗೆ ಅತ್ಯಂತ ಮಹತ್ವಪೂರ್ಣವಾದ ಮತ್ತು ಅಮೂಲ್ಯವಾದ ಜೀವನಕ್ಕೆ ಸಂಬಂಧಪಟ್ಟ ಪಾಠ ಕಲಿಸಿದೆ.


ಅಲ್ಲದೆ ಪರ್ವತಾರೋಹಣದ ಸಮಯದಲ್ಲಿ –

- **ನೀರನ್ನು ಮಿತವಾಗಿ ಬಳಸಬೇಕು,**
- **ಹಿಮದ ಹಾದಿಯಲ್ಲಿ ಹೇಗೆ ಎಚ್ಚರದಿಂದ ನಡೆಯಬೇಕು**
- **ಕಡಿದಾದ ಪರ್ವತವನ್ನು ಹೇಗೆ ಹತ್ತಬೇಕು, ಇಳಿಜಾರಿನ ರಸ್ತೆಯನ್ನು ಹೇಗೆ ನಿಭಾಯಿಸಬೇಕು,**
- **ಅತ್ಯಂತ ಶೀತ ಹವೆಯಲ್ಲಿ ಹೇಗೆ ದೇಹವನ್ನು ಬೆಚ್ಚಗೆ ಇರಿಸಿಕೊಳ್ಳುವುದು,**
- **ಅಪಾಯದ ಸನ್ನಿವೇಶದಿಂದ ಹೇಗೆ ಪಾರಾಗುವುದು,**
- **ಎಲ್ಲದಕ್ಕಿಂತ ಬಹಳ ಮುಖ್ಯವಾಗಿ ಯಾವುದೇ ಸಂದರ್ಭದಲ್ಲಿಯೂ ಧೈರ್ಯಗೆಡದಿರುವುದು.**

ಯಾವುದೇ ಪರ್ವತಾರೋಹಣದಲ್ಲಿ ಭಾಗವಹಿಸಬೇಕಾದರೆ ಬಹಳ ಮುಖ್ಯವಾಗಿ ಯಾತ್ರಿಗಳಲ್ಲಿ ಇರಲೇಬೇಕಾದದ್ದು – ಇಚ್ಚಾಶಕ್ತಿ, ದೈಹಿಕ ಹಾಗೂ ಮಾನಸಿಕ ತಯಾರಿ, ತಾಳ್ಮೆ, ಹಿಡಿದ ಕೆಲಸವನ್ನು ಬಿಡದೆ ಮಾಡಿಮುಗಿಸುವ ಛಲ ಮತ್ತು ಆರೋಗ್ಯ.

ರೂಪಕುಂಡಯಾತ್ರೆ ನನ್ನಲ್ಲಿರುವ ಅತ್ಮಶಕ್ತಿಯನ್ನು, ಮನೋ ಸ್ಥೈರ್ಯವನ್ನು ಹೆಚ್ಚಿಸಿದೆ ಮತ್ತು ಮತ್ತೊಂದು ಬಾರಿ ಇದೇ ತರಹದ ಯಾತ್ರೆಗಳಲ್ಲಿ ಭಾಗವಹಿಸಲು ಉತ್ತೇಜಿಸಿದೆ.

ಲೇಖನಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳು



ರೂಪಕುಂಡ ಸರೋವರದ ಬಳಿ



ರೂಪಕುಂಡದವರೆಗೆ ಚಾರಣ ಮಾಡಿದ 12 ಚಾರಣಿಗರು



ಕಾಶ್ಮೀರ ಸರೋವರ – ನಿಚ್ನಾಯ್ ಪಾಸ್ ಕ್ಯಾಂಪಿನಲ್ಲಿ



ಚಂದ್ರಶಿಲ ಚಾರಣದ ಮಾರ್ಗದಲ್ಲಿ



ಕುವರಿ ಪಾಸ್
ಚಾರಣದಲ್ಲಿ



ಕೇದಾರ್‌ಕಾಂತ ಚಾರಣದಲ್ಲಿ



ಹರ್-ಕಿ-ಧುನ್ ಚಾರಣದಲ್ಲಿ ಒಂದು ನಿರ್ಜನ ಪ್ರದೇಶದಲ್ಲಿ



ಬ್ರಹ್ಮತಾಲ್ ಸರೋವರ - ನಾಲ್ಕನೇ ದಿನದ ಚಾರಣ



ಚಾರಣದ ಬೇಸ್ ಕ್ಯಾಂಪ್ - ಅರು ಹಳ್ಳಿಯಲ್ಲಿ



ವ್ಯಾಲಿ ಆಫ್ ಫ್ಲವರ್ಸ್
ತೋಟದೊಳಗೆ




ಚೈನ್‌ಶೀಲ್ ಚಾರಣದ ಬಾಲಾವತ್ ಬೇಸ್ ಕ್ಯಾಂಪಿನಲ್ಲಿ



ಓಸ್ಲಾದಲ್ಲಿನ ದುರ್ಯೋಧನ ಮಂದಿರ



ಓಸ್ಲಾದ ವಿಶಿಷ್ಟ ಉಡಿಗೆ



ಓಸ್ಲಾ ಪ್ರವೇಶಿಸುವ ಮುನ್ನ
ಮೇಲಿಂದ ಕಂಡ ಹಳ್ಳಿಯ ದೃಶ್ಯ



ದುರ್ಯೋಧನ ಮಂದಿರದ ಮುಖ್ಯದ್ವಾರ



ಅರುಣಾಚಲ ಪ್ರದೇಶದಲ್ಲಿನ
ಝೈರೋ ಕಣಿವೆಯಲ್ಲಿನ ಅಪ್ಟಾನಿ
ಜನಾಂಗದ ಮಹಿಳೆ




ಕುದುರೆಮುಖ ಚಾರಣದ ಒಂದು ದೃಶ್ಯ



ಮೋಬರ್ ಬೀಚಿನಿಂದ ಬೆನೊಲಿಮ್ ಬೀಚ್‌ವರೆಗಿನ ಮೊದಲ ದಿನದ ಚಾರಣದಲ್ಲಿ



ಕೈಲಾಸ ಪರ್ವತ ಪರಿಕ್ರಮದಲ್ಲಿ



ಯಮದ್ವಾರದ ಬಳಿ ನಮ್ಮ ಗುಂಪಿನ ಎಲ್ಲಾ ಯಾತ್ರಿಕರು



ಸಂಡಕ್ಕು ಚಾರಣದಲ್ಲಿ ಕೆ.ವಿ.ಆಚಾರ್ಯ, ಬಿ.ವಿ.ರಮೇಶ್ ಅವರೊಂದಿಗೆ



ಪುಷ್ಪಗಿರಿವನದೆಡೆಗಿನ ಚಾರಣದಲ್ಲಿ BMC ಮಾರ್ಗದರ್ಶಿಯೊಂದಿಗೆ



ಯೊಸೈಮೇಟ್ ನ್ಯಾಷನಲ್ ಪಾರ್ಕಿನಲ್ಲಿನ ನಾರ್ದರನ್ ಡೂಮ್

ಕಾಶ್ಮೀರ ಸರೋವರದೆಡೆಗಿನ ಚಾರಣ

ಅಲೆಮಾರಿ ಆತ್ಮದ ಅಲೆದಾಟದ ಅದ್ಭುತ ಅನುಭವಗಳು

"GAR FIRDAUS, RUHE ZAMIN AST, HAMIN ASTO HAMIN ASTO HAMIN ASTO"

ಮೇಲ್ಕಂಡ ಉದ್ಗಾರ ಪ್ರಸಿದ್ಧ ಪರ್ಷಿಯನ್ ಫಿರ್ದೌಸಿಯ ಹೇಳಿಕೆ. ಇದರ ಕನ್ನಡ ಅನುವಾದ "ಸ್ವರ್ಗವೆಂಬುದೊಂದಿರುವುದಾದರೆ, ಅದು ಇಲ್ಲಿಯೇ, ಅದು ಇಲ್ಲಿಯೇ, ಅದು ಇಲ್ಲಿಯೇ."

ಹಿಮಾಲಯ ಪರ್ವತಗಳ ದರ್ಶನಯಾತ್ರೆ ಅತಿದೀರ್ಘ ಜೀವನ ಯಾತ್ರೆಯೆಂದರೆ ಅತಿಶಯೋಕ್ತಿಯಾಗಲಾರದು. ಹಿಮಾಲಯ ಪರ್ವತದ ದರ್ಶನ ಒಂದು ಜೀವನದಲ್ಲಿ ಮುಗಿಸಲು ಆಗುವುದಿಲ್ಲ , ಅದಕ್ಕೆ ಅನೇಕ ಜನ್ಮಗಳನ್ನು ತಳೆಯಬೇಕಾಗುತ್ತದೆ. ಒಬ್ಬ ಮನುಷ್ಯ ಸಮುದ್ರಕ್ಕೆ ಹೋಗಿ ಅಲ್ಲಿಂದ ಎಷ್ಟು ನೀರನ್ನು ತರಬಹುದು ಒಂದು ಬೊಗಸೆ? ಒಂದು ಸೀಸೆಯಷ್ಟು? ಅಥವಾ ಒಂದು ಬಿಂದಿಗೆ? ಎಷ್ಟೇ ಆದರೂ ಅದು ಸಮುದ್ರದಲ್ಲಿರುವ ನೀರಿಗೆ ಹೋಲಿಸಿದರೆ ಅತ್ಯಂತ ಕಡಿಮೆಯೇ! ಅದರಂತೆ ಹಿಮಾಲಯ ದರ್ಶನದ ಅನುಭವಗಳನ್ನು ಹಿಮಾಲಯದ ಗಾತ್ರಕ್ಕೆ ಹೋಲಿಸಿದರೆ ನಾವು ನೋಡಬಹುದಾದ ಸ್ಥಳಗಳು ಅತ್ಯಂತ ಕಡಿಮೆಯೇ. ಏನೇ ಆದರೂ ಭಾರತದಲ್ಲಿ ಹುಟ್ಟಿ ಹಿಮಾಲಯವನ್ನು ದರ್ಶಿಸದಿದ್ದರೆ ಅವನು ಭಾರತೀಯನಾಗಿ ಜನಿಸಿದ್ದು ವ್ಯರ್ಥ. ಹಿಮಾಲಯದ ಪ್ರಕೃತಿ ಸೌಂದರ್ಯ ವರ್ಣಿಸಲು ಪದಗಳೇ ಸಾಲದು, ಅಲ್ಲದೆ ಹಿಮಾಲಯದ ಸೌಂದರ್ಯ ಸಂಪೂರ್ಣವಾಗಿ ಸೆರೆ ಹಿಡಿಯಲು ಯಾವ ಕ್ಯಾಮರಕ್ಕೂ ಸಾಧ್ಯವಾಗುವುದಿಲ್ಲ. ಮತ್ತೊಂದು ವಿಷಯವೆಂದರೆ ಹಿಮಾಲಯದಲ್ಲಿನ ಹಲವಾರು ಮಾರ್ಗಗಳನ್ನು ವಿದೇಶಿಯರೇ ನಮಗಿಂತ ಮೊದಲೇ ಕ್ರಮಿಸಿದ್ದಾರೆ. ನಂತರವೇ ನಾವು ಅಲ್ಲಿಗೆ ಹೋಗುವುದು. ಇದು ಏಕೆ ಹೀಗೆ? ಎಂದು ಪ್ರಶ್ನಿಸಿದರೆ ನಮಗೆ ಹೊಳೆಯುವುದು,

ನಾವು ಬಹಳಷ್ಟು ಬಾರಿ ಅಪಾಯಕಾರಿ ಅಥವಾ ಗಂಡಾಂತರ ಸಮಸ್ಯೆಗಳಿಗೆ ನಮ್ಮನ್ನು ತೊಡಗಿಸಿಕೊಳ್ಳದೇ ಇರುವುದು. ಬೇರೆಯವರು ಅಂತಹ ಸಮಸ್ಯೆಗಳನ್ನು ಎದುರಿಸಿ ಅದಕ್ಕೆ ಪರಿಹಾರವನ್ನು ಕಂಡುಹಿಡಿದ ನಂತರವೇ ನಾವು ಆ ಮಾರ್ಗದಲ್ಲಿ ಕ್ರಮಿಸಲು ಆಸಕ್ತಿಯನ್ನು ತೋರುವುದು.

2014ರ ಮೇ–ಜೂನ್ ತಿಂಗಳ ಹಿಮಾಚಲ ಪ್ರದೇಶದಲ್ಲಿನ ಹಿಮಾಲಯದಲ್ಲಿನ ಶಿವಾಲಿಕ್ ಪರ್ವತ ಶ್ರೇಣಿಯಲ್ಲಿರುವ 13500 ಅಡಿ ಎತ್ತರದ ಚಂದರ್ಖೇಣಿ ಪಾಸ್ ಚಾರಣದ ನಂತರ ನನ್ನ ಮನಸ್ಸು ಪದೇ ಪದೇ ಹಿಮಾಲಯ ಪರ್ವತದ ಇತರ ಶ್ರೇಣಿಗಳ ಚಾರಣ ಮಾಡಲು ಹಾತೊರೆಯುತ್ತಿತ್ತು.

ಕಾಶ್ಮೀರದಲ್ಲಿರುವ ಅತ್ಯಂತ ಸುಂದರವಾದ ಏಳು ಸರೋವರಗಳ ಚಾರಣ ಮಾಡಲು ತೀರ್ಮಾನಿಸಿದೆ. ನಂತರ ಇಂಡಿಯಾ ಹೈಕ್ಸ್ ಚಾರಣ ಸಂಸ್ಥೆಯು ನಡೆಸಿಕೊಡುವ – ಜುಲೈ 27ರಿಂದ ಏಳುದಿನಗಳ ಕಾಶ್ಮೀರ್ ಗ್ರೇಟ್ ಲೇಕ್ಸ್ ಟ್ರೆಕ್ ಕಾರ್ಯಕ್ರಮದಲ್ಲಿ ಭಾಗವಹಿಸಲು ತೀರ್ಮಾನಿಸಿ ನನ್ನ ಹೆಸರನ್ನು ನೋಂದಾಯಿಸಿಕೊಂಡೆ.

ಜುಲೈ 24, 2014 ರಾತ್ರಿ ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣ ಆರಂಭವಾಯಿತು. ಜುಲೈ 26ರ ಬೆಳಗ್ಗೆ 6.30ಕ್ಕೆ ದೆಹಲಿ ತಲುಪಿ ಅಲ್ಲಿಂದ 10:20ಕ್ಕೆ ವಿಮಾನದಲ್ಲಿ ಪಯಣಿಸಿ ಮದ್ಯಾಹ್ನ 01:45 ಶ್ರೀನಗರ ತಲುಪಿ ಸಂಜೆ ಪ್ರಸಿದ್ಧ ಸ್ಥಳವಾದ ಶಂಕರಾಚಾರ್ಯ ಮಂದಿರಕ್ಕೆ ಹೋದೆ. ಸುಮಾರು 243 ಕಡಿದಾದ ಮೆಟ್ಟಿಲುಗಳನ್ನು ಹತ್ತಿ ಶಿವಲಿಂಗವನ್ನು ದರ್ಶಿಸಿದೆ. ಶಂಕರಾಚಾರ್ಯ ಮಂದಿರದ ಬಗ್ಗೆ ಕೆಲವು ಕುತೂಹಲ ವಿಷಯಗಳೆಂದರೆ; ಶ್ರೀನಗರದಲ್ಲಿರುವ 1000 ಅಡಿ ಎತ್ತರದ ಗೋಪಾದ್ರಿ ಬೆಟ್ಟದಲ್ಲಿ ಶಂಕರಾಚಾರ್ಯರ ಮಂದಿರವಿದೆ. ಇದಕ್ಕೆ ಮತ್ತೊಂದು ಹೆಸರು ಜ್ಯೋತೇಶ್ವರ ಮಂದಿರ. ಈ ಮಂದಿರದ ಗರ್ಭಗುಡಿಯಲ್ಲಿ ಶಿವಲಿಂಗವನ್ನು ಪೂಜಿಸುವರು. ಈ ಮಂದಿರವನ್ನು ಕ್ರಿ.ಪೂ.200ರಲ್ಲಿ ಮೌರ್ಯ ಚಕ್ರವರ್ತಿ ಅಶೋಕನ ಮಗ ಜಲುಕ ನಿರ್ಮಿಸಿದನೆಂದು ನಂಬುಗೆ. ಕಾಶ್ಮೀರವನ್ನು ಆಳುತ್ತಿದ್ದ ಸುಲ್ತಾನ್ ಸಿಕಂದರನು ಈ ಮಂದಿರವನ್ನು ನಾಶಪಡಿಸಿದನು. ಅನಂತರ ಅನೇಕ ರಾಜರು ಈ ಮಂದಿರವನ್ನು ಕಾಲ ಕಾಲದಲ್ಲಿ ಪುನರ್ನಿರ್ಮಾಣ ಮಾಡಿದರು. ಕ್ರಿ.ಶ. ಒಂದನೆ ಶತಮಾನದಲ್ಲಿ ರಾಜ ಗೌಡಪತ್ತ ಎಂಬುವನು ಈ ಮಂದಿರವನ್ನು ಪುನರ್ನಿರ್ಮಿಸಿ ಅದಕ್ಕೆ ಜ್ಯೇತೇಶ್ವರ ಮಂದಿರ ಎಂದು ನಾಮಕರಣ ಮಾಡಿದ್ದನು. ಈಗಿರುವ ಮಂದಿರವನ್ನು ಕ್ರಿ.ಶ.9ನೇ ಶತಮಾನದಲ್ಲಿ ಸಿಖ್ಖರ ಆಳ್ವಿಕೆಯಲ್ಲಿ ನಿರ್ಮಿಸಿದ್ದರೆಂದು ಇತಿಹಾಸ ತಿಳಿಸುತ್ತದೆ. ಅ ಸಮಯದಲ್ಲೇ ಗರ್ಭಗುಡಿಯಲ್ಲಿ ಶಿವಲಿಂಗವು ಪ್ರತಿಷ್ಠಾಪನೆಗೊಂಡಿತು.

ಈ ಮಂದಿರಕ್ಕೆ ಸಂಬಂಧಿಸಿದಂತೆ ಅನೇಕ ದಂತಕಥೆಗಳು ಜನಜನಿತವಾಗಿವೆ.

ಜೀಸಸ್ ಕ್ರಿಸ್ತನು ಈ ಮಂದಿರಕ್ಕೆ ಭೇಟಿಯಿತ್ತಿದ್ದ ಎಂಬ ನಂಬಿಕೆ ಇಲ್ಲಿನ ಭಕ್ತರಲ್ಲಿದೆ. ಅಮರನಾಥ ಯಾತ್ರೆಯನ್ನು ಮಾಡುವ ಭಕ್ತರು ಮೊದಲಿಗೆ ಈ ಮಂದಿರಕ್ಕೆ ಬಂದು ಶಿವನನ್ನು ಪೂಜಿಸುತ್ತಾರೆ. 1000 ಅಡಿ ಎತ್ತರದ ಈ ಮಂದಿರಕ್ಕೆ ಹೋಗಲು 243 ಮೆಟ್ಟಿಲುಗಳನ್ನು ಹತ್ತಬೇಕಿದೆ. ಆದಿ ಶಂಕರಾಚಾರ್ಯರು ಇಲ್ಲಿಗೆ ಬಂದು "ಸೌಂದರ್ಯಲಹರಿ" ಸ್ತೋತ್ರವನ್ನು ರಚಿಸಿದರು ಎಂಬ ನಂಬಿಕೆ ಭಕ್ತರಲ್ಲಿ.

ಶಂಕರಾಚಾರ್ಯ ಮಂದಿರದ ದರ್ಶನದ ನಂತರ ಹೋಟೆಲಿಗೆ ಮರಳಿ ರಾತ್ರಿಯ ಊಟದ ನಂತರ ಮಾರನೇ ದಿನದ ಕಾರ್ಯಕ್ರಮಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಮಲಗಿದೆ. ಮಾರನೆದಿನ ಮಧ್ಯಾಹ್ನದ ಊಟದ ನಂತರ ಶ್ರೀನಗರದಲ್ಲಿನ ಟ್ರಾನ್ಸ್ಪೋರ್ಟ್ ರಿಸೆಪ್ಷನ್ ಸೆಂಟರ್ ತಲುಪಿ, ಅಲ್ಲಿ ನಮ್ಮನ್ನು ಕರೆದೊಯ್ಯುವ ವಾಹನವನ್ನು ಹುಡುಕತೊಡಗಿದೆ. 11 ಚಾರಣಿಗರು ಒಂದು ವಾಹನದಲ್ಲಿ ಸೋನ್‌ಮಾರ್ಗ್ ಕಡೆಗೆ ಪ್ರಯಾಣ ಪ್ರಾರಂಭಿಸಿದೆವು. ಮಾರ್ಗದಲ್ಲಿ ಸಿಂಧು ಅಥವಾ ಇಂಡಸ್ ನದಿ ಕಾಣುತ್ತಿತ್ತು. ನಾವುಗಳು ಸೋನ್‌ಮಾರ್ಗ್ ತಲುಪಿ ಅಲ್ಲಿಂದ ಕಚ್ಚಾ ರಸ್ತೆಯಲ್ಲಿ ನಡೆದು ಒಂದು ಸುಂದರವಾದ ಹುಲ್ಲುಗಾವಲನ್ನು ಪ್ರವೇಶಿಸಿ ಎತ್ತರ ಪ್ರದೇಶದಲ್ಲಿದ್ದ ಬೇಸ್ ಕ್ಯಾಂಪನ್ನು ತಲುಪಿದೆವು. ಸುತ್ತಮುತ್ತಲಿನ ಪ್ರದೇಶವು ನಯನ ಮನೋಹರವಾಗಿತ್ತು. ಸ್ವಲ್ಪ ಹೊತ್ತಿನ ವಿಶ್ರಾಂತಿಯ ನಂತರ ಚಹ ಸೇವಿಸಿದೆವು. ಅಷ್ಟೊತ್ತಿಗೆ ಮತ್ತಷ್ಟು ಚಾರಣಿಗರು ಬಂದರು. 7 ಗಂಟೆಗೆ ಚಾರಣ ನಾಯಕರು ಬಂದು ಎಲ್ಲರ ಪರಿಚಯ ಮಾಡಿಕೊಂಡ ನಂತರ ಅವರು ಚಾರಣದ ನಿಯಮಗಳು, ರೀತಿನೀತಿಗಳು ಸಮಯ ಪಾಲನೆ ಮತ್ತು ಸಂಬಂಧಿಸಿದ ಇತರೆ ವಿಷಯಗಳನ್ನು ತಿಳಿಸಿದರು.

ಜುಲೈ 28, 2014: ಸೋನ್‌ಮಾರ್ಗದಲ್ಲಿನ ಕ್ಯಾಂಪಿನಿಂದ ಶೇಕದೂರ್ ಮಾರ್ಗವಾಗಿ ನಿಚ್‌ನಾಯ್ ಕಡೆಗೆ – 7800 ಅಡಿಯಿಂದ 11500 ಅಡಿ ಎತ್ತರಕ್ಕೆ (9 ಕಿಲೋಮೀಟರ್ ನಡಿಗೆ)

ಬೆಳಗ್ಗೆ ಬೇಗ ಎದ್ದು ಉಪಾಹಾರ ಸೇವಿಸಿ ಊಟದ ಬುತ್ತಿ ಹಾಗೂ ಬ್ಯಾಕ್‌ಪ್ಯಾಕು ಹೆಗಲಿಗೇರಿಸಿ ಎಲ್ಲರೂ ಉತ್ಸಾಹದಿಂದ ಹೊರಡಲು ತಯಾರಾದೆವು.ಹಸಿರಿನಿಂದ ಕೂಡಿದ ಹುಲ್ಲುಗಾವಲು, ಪರ್ವತ, ಶುಭ್ರವಾದ ಆಕಾಶ ಎಲ್ಲರಿಗೂ ಉತ್ಸಾಹವನ್ನು ಉಂಟು ಮಾಡುತ್ತಿತ್ತು. ಎಲ್ಲರೂ ಉತ್ಸಾಹದಿಂದ ಚಾರಣ ಪ್ರಾರಂಭಿಸಿ ಮೊದಲಿಗೆ ಕೆಲವರು ವೇಗದಿಂದ ಮೇಲೇರಲು ಪ್ರಾರಂಭಿಸಿದರು. ಸ್ವಲ್ಪ ಸಮಯದಲ್ಲೇ ಸುಸ್ತಾಗಿ, ಅತಿ ಎತ್ತರದ ಪ್ರದೇಶವು ತನ್ನ ಪ್ರಭಾವವನ್ನು ಚಾರಣಿಗರಿಗೆ ತೋರಿಸ ತೊಡಗಿತು. ಅರ್ಧ ಗಂಟೆಯ ನಡಿಗೆಯ ನಂತರ ಎಲ್ಲರೂ ಒಂದು ಸಮತಟ್ಟಾದ

ಪ್ರದೇಶ ತಲುಪಿದೆವು. ಅಲ್ಲಿ ಸ್ವಲ್ಪ ವಿಶ್ರಾಂತಿ ಪಡೆದು ಮತ್ತೆ ಹೊರಟೆವು. ಒಂದು ಗಂಟೆಯ ನಡಿಗೆಯ ನಂತರ ಎಲ್ಲರೂ ಒಂದು ಟೇಬಲ್ ಟಾಪ್ ಪ್ರದೇಶ ತಲುಪಿದೆವು. ಇಲ್ಲಿಂದ ನಮ್ಮ ಪ್ರಯಾಣವು ದೇವದಾರು ವೃಕ್ಷಗಳಿಂದ ಸುತ್ತುವರೆದಿತ್ತು. ಪ್ರಕೃತಿ ಅತ್ಯಂತ ಸುಂದರವಾಗಿತ್ತು. ಇಲ್ಲಿಂದ ಏರುವುದು ಸ್ವಲ್ಪ ತೀವ್ರವಾಗಿದ್ದು ರಸ್ತೆ ಮಣ್ಣು ಕಲ್ಲಿನಿಂದ ಕೂಡಿತ್ತು. ಒಂದು ಗಂಟೆ ನಡೆದ ನಂತರ ದೇವದಾರು ಮರಗಳು ವಿರಳವಾಗತೊಡಗಿತು. ಸ್ವಲ್ಪ ಸಮಯ ನಂತರ 10000 ಅಡಿ ಎತ್ತರದ ಸಮತಟ್ಟಾದ ಪ್ರದೇಶವನ್ನು ತಲುಪಿದೆವು. ಇಲ್ಲಿಂದ ಹಿಂತಿರುಗಿ ನೋಡಿದರೆ ದೂರದಲ್ಲಿರುವ ಸೋನ್‌ಮಾರ್ಗ್ ಕಣಿವೆ ಕಾಣುತ್ತಿತ್ತು. ಇಲ್ಲಿ ಕೆಲವರು ಊಟ ಮಾಡಲು ಇಚ್ಛಿಸಿದರು. ನಮ್ಮ ಮಾರ್ಗದರ್ಶಿ ಇನ್ನೂ ಸ್ವಲ್ಪ ದೂರ ನಡೆಯುವಂತೆ ಸೂಚಿಸಿದರು. ಮತ್ತೊಂದು ಗಂಟೆ ಇಳಿಜಾರಿನ ರಸ್ತೆಯಲ್ಲಿ ನಡೆದ ನಂತರ ವಿಶಾಲವಾದ ಸಮತಟ್ಟಾದ ಪ್ರದೇಶ ತಲುಪಿದೆವು. ಎಲ್ಲರೂ ವಿಶ್ರಾಂತಿ ಪಡೆದು. ಡಾಬಾದಲ್ಲಿ ತಿಂಡಿ ತಿಂದರು. ನಾನು ಕಾಶ್ಮೀರಿ ಚಹಾ ಸೇವಿಸಿದೆ. ಅಲ್ಲಿಂದ ಸ್ವಲ್ಪ ದೂರ ನಡೆದು ಬಲಗಡೆ ನಮಗೆ ರಭಸದಿಂದ ಹರಿಯುತ್ತಿರುವ ನಿಚ್ನಾಯ್ ನದಿಯನ್ನು ಸಮೀಪಿಸಿದೆವು. ನದಿಯನ್ನು ನಮ್ಮ ಬಲಗಡೆ ಇಟ್ಟುಕೊಂಡು ಎಲ್ಲರೂ ದೊಡ್ಡ ದೊಡ್ಡ ಕಲ್ಲಿನ ಮೇಲೆ ಹಾರಿಕೊಂಡು ನಡೆಯತೊಡಗಿದೆವು. ಅರ್ಧ ಗಂಟೆಯ ನಂತರ ಅಲ್ಲಿಯೇ ಬಂಡೆಗಳ ಮೇಲೆ ಕುಳಿತು ಬಿಸಿಲಿದ್ದರೂ ಊಟ ಮುಗಿಸಿ ವಿಶ್ರಾಂತಿಯ ನಂತರ ಮುಂದುವರೆದು ಅರ್ಧ ಗಂಟೆ ನಿಧಾನವಾಗಿ ಕಲ್ಲಿನಿಂದ ಕೂಡಿದ ಗುಡ್ಡ ಹತ್ತಿ, ಇಳಿದು ಸುಮಾರು ದೂರ ನಡೆದ ನಂತರ ನಿಚ್ನಾಯ್ ನದಿಯ ಬಲಭಾಗದಲ್ಲಿ ಒಂದು ಸಮತಟ್ಟಾದ ಹುಲ್ಲುಗಾವಲಿನಲ್ಲಿ ಟೆಂಟುಗಳನ್ನು ಸಿದ್ಧಪಡಿಸಿದ್ದ ಪ್ರದೇಶವನ್ನು ಎರಡು ಗಂಟೆಗೆ ತಲುಪಿದೆವು. ವಿಶ್ರಾಂತಿಯ ನಂತರ ಸುತ್ತಲಿನ ಪ್ರದೇಶ ವೀಕ್ಷಿಸಿದೆವು. ಇಲ್ಲಿಂದ ನಿಚ್ನಾಯ್ ಕಣಿವೆಯು ಕಾಣುತ್ತಿರಲಿಲ್ಲ.

ಇಲ್ಲಿಂದ ಕೆಲವು ಗುಡ್ಡಗಳನ್ನು ಹತ್ತಿ ನಡೆದರೆ ಕಾಣುವುದೇ ಎರಡನೆಯ ಕ್ಯಾಂಪ್ ಇರುವ ಜಾಗ. ಇಲ್ಲಿಂದ ನಿಚ್ನಾಯ್ ಪಾಸ್ ಕಡೆಗೆ ಹೋಗುವ ಮಾರ್ಗ ಕಾಣುತ್ತಿತ್ತು. ನಮ್ಮ ಕ್ಯಾಂಪ್ ಸಮತಟ್ಟಾದ ಪ್ರದೇಶದಲ್ಲಿದ್ದು ಸಮುದ್ರಮಟ್ಟದಿಂದ 11500 ಅಡಿ ಎತ್ತರದಲ್ಲಿತ್ತು. ಸಂಜೆ 5 ಗಂಟೆಗೆ ಎಲ್ಲರೂ ಚಹಾ ಸೇವಿಸಿ ನಂತರ ಕೆಲವರು ಅಲ್ಲೇ ಕ್ರಿಕೆಟ್ ಆಡತೊಡಗಿದರು. ಸಂಜೆಯಾಗುತ್ತಿದ್ದಂತೆ ಚಳಿ ಹೆಚ್ಚಾಗತೊಡಗಿತು. ಮೂರೂ ಕಡೆ ಪರ್ವತ ಹಾಗೂ ನಾಲ್ಕನೆಯ ದಿಕ್ಕಿನಲ್ಲಿ ನಿಚ್ನಾಯ್ ಪಾಸ್ ಗೆ ಹೋಗುವ ಹಾದಿ. ದೂರದಲ್ಲಿ ಶುಭ್ರವಾದ ಬಿಳಿಯ ಬಣ್ಣದ ಹಿಮದ ಹಾಳೆ ಕಾಣುತ್ತಿತ್ತು. ಸಂಜೆ ಆರಕ್ಕೆ ಎಲ್ಲರಿಗೂ ರುಚಿಯಾದ ಸೂಪ್

ಕೊಟ್ಟರು. ರಾತ್ರಿ 8ಗಂಟೆಗೆ ರುಚಿಯಾದ ಊಟ ಮಾಡಿ ನಿದ್ರೆ ಚೀಲದಲ್ಲಿ (Sleeping Bag) ತೂರಿಕೊಂಡು ಮಲಗಿದೆವು. ರಾತ್ರಿ ಒಂಬತ್ತು ಗಂಟೆಗೆ ಮಳೆ ಬರಲು ಶುರುವಾಯಿತು. ನನಗೆ ಆತಂಕವಾಯಿತು. ನಮ್ಮ ಅದೃಷ್ಟವೆಂಬಂತೆ ಸುಮಾರು 10 ಗಂಟೆಗೆ ಮಳೆ ಸಂಪೂರ್ಣವಾಗಿ ನಿಂತು ಆತಂಕವೂ ದೂರಾಯಿತು. ಮಧ್ಯರಾತ್ರಿ ಎರಡು ಗಂಟೆಗೆ ಹೊರಬಂದು ಆಕಾಶದಲ್ಲಿನ ನಕ್ಷತ್ರಗಳನ್ನು ವೀಕ್ಷಿಸಿದೆ. ದೃಶ್ಯ ಅತ್ಯಂತ ಸುಂದರವಾಗಿತ್ತು. ಧ್ರುವ ನಕ್ಷತ್ರ ಮತ್ತು ಕೆಲವು ಗ್ರಹಗಳನ್ನು ಹಿಮಾಲಯದ ವಿಶಾಲ ಆಗಸದಲ್ಲಿ ವೀಕ್ಷಿಸಿದೆ.

ಜುಲೈ 29 : 11500 ಅಡಿಯಲ್ಲಿನ ನಿಚ್ನಾಯ್ ಪ್ರದೇಶದಿಂದ 13500 ಅಡಿಯಲ್ಲಿರುವ ನಿಚ್ನಾಯ್ ಪಾಸ್ ಮೂಲಕ 12000 ಅಡಿಯಲ್ಲಿರುವ ವಿಷ್ಣು ಸಾರ್ ಸರೋವರದೆಡೆಗೆ – 12 ಕಿ.ಮೀ ನಡಿಗೆ

ವಿಷ್ಣುಸಾರ್ ಸರೋವರದ ಬಗ್ಗೆ ಕೆಲವು ಮಾಹಿತಿಗಳನ್ನು ತಿಳಿಯೋಣ:

ಪಹಾಡಿ ಭಾಷೆಯಲ್ಲಿ ವಿಷನ್ ಸಾರ್ ಎಂದರೆ ವಿಷ್ಣುವಿನ ಸರೋವರ ಎಂದು. ಇದು ಒಂದು ಎತ್ತರದ ಪ್ರದೇಶದಲ್ಲಿರುವ ಅಲಿಗೋಟ್ರೋಫಿಕ್ ಸರೋವರ ಹಾಗೂ ಇದು ಕಾಶ್ಮೀರದ ಕಣಿವೆಯಲ್ಲಿನ ಗಂದೇರ್ಬಾಲ್ ಪ್ರದೇಶದಲ್ಲಿದೆ. ಈ ರೀತಿಯ ಸರೋವರದಲ್ಲಿ ಪಾಚಿ ಕಡಿಮೆ ಉತ್ಪತ್ತಿಯಾಗುತ್ತದೆ. ನೀರು ಶುದ್ಧವಾಗಿದ್ದು, ಶ್ರೇಷ್ಠ ಮಟ್ಟದ ಕುಡಿಯುವ ನೀರು ಇಲ್ಲಿ ದೊರಕುವುದು. ಸರೋವರದ ಕೆಳಭಾಗದ ನೀರಿನಲ್ಲಿ ಅತಿ ಹೆಚ್ಚಿನ ಆಮ್ಲಜನಕ ಇರುತ್ತದೆ. ಹೀಗಾಗಿ ಇಲ್ಲಿ ಹೆಚ್ಚಿನ ಜಲಚರಗಳು ವಾಸಿಸುತ್ತವೆ. ಈ ಸರೋವರ ಬೂದುಬಣ್ಣದ ಟ್ರೌಟ್ ಮೀನುಗಳಿಗೆ ಪ್ರಸಿದ್ಧಿ. ಚಳಿಗಾಲದಲ್ಲಿ (ಡಿಸೆಂಬರ್ – ಏಪ್ರಿಲ್) ಸಂಪೂರ್ಣವಾಗಿ ಹೆಪ್ಪುಗಟ್ಟಿರುತ್ತದೆ. ಬೇಸಿಗೆ ಸಮಯದಲ್ಲಿ ಸರೋವರದ ಸುತ್ತ ಹೂವುಗಳಿರುವುದು. ಸರೋವರದ ಜೊತೆಗೆ ಹಿಮದಿಂದ ಹಾಗೂ ಸಣ್ಣಸಣ್ಣ ನದಿಗಳಿಂದ ಕೂಡಿದ ಪರ್ವತಗಳ, ರಮಣೀಯ ದೃಶ್ಯಗಳು ಚಾರಣಿಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಈ ಸರೋವರದ ನೀರಿನ ಮೂಲ ಕಿಶನ್‌ಸಾರ್ ಸರೋವರ ಹಾಗೂ ಹಲವಾರು ಹಿಮನದಿಗಳು. ಇಲ್ಲಿಂದ ನೀಲಂ ನದಿ ಜನಿಸುತ್ತದೆ. ಈ ಸರೋವರದ ಉದ್ದ ಒಂದು ಕಿಲೋಮೀಟರ್, ಅಗಲ 0.6 ಕಿಲೋಮೀಟರ್, ಇದು ಸಮುದ್ರಮಟ್ಟದಿಂದ 3710 ಮೀಟರ್ (12570) ಅಡಿ ಎತ್ತರದಲ್ಲಿದೆ.

ಬೆಳಗಿನ ಚಹಾಸೇವನೆಯ ನಂತರ ಸುತ್ತಲಿನ ಪ್ರಕೃತಿ ಸೌಂದರ್ಯ ವೀಕ್ಷಿಸಿ ಉಪಾಹಾರದ ನಂತರ 7.30ಕ್ಕೆ ಮಧ್ಯಾಹ್ನದ ಊಟದ ಬುತ್ತಿಯೊಂದಿಗೆ ಹೊರಟೆವು. ಇದಕ್ಕೆ ಮೊದಲು ಚಾರಣ ನಾಯಕರ ಸಲಹೆಯಂತೆ ಟೆಂಟನ್ನು ಬಿಚ್ಚಿ ಪ್ಯಾಕ್

ವ್ಯಾಯಾಮ ತೋರಿಸಿದರು. ಬೆಳಗಿನ ಹವೆ ಚಳಿಯಿಂದ ಕೂಡಿದ್ದರಿಂದ ಸ್ವೆಟರ್ ಧರಿಸಿದೆ. ಎಲ್ಲರೂ ಗೋಲಾಕಾರದಲ್ಲಿ ನಿಂತು ನಾಯಕರ ಆದೇಶದಂತೆ ನಮ್ಮ ಚಾರಣ ಪ್ರಾರಂಭಿಸಿ 15 ನಿಮಿಷದಲ್ಲಿ ಒಂದು ದೊಡ್ಡದಾದ ಹಿಮದ ಹಾಳೆ (Ice sheet) ಎದುರಾಗಿ ಎಲ್ಲರೂ ನಿಧಾನವಾಗಿ ದಾಟಿದೆವು. ಇಲ್ಲಿಂದ ಹಾದಿ ತೀವ್ರವಾದ ಏರಿಕೆಯಿಂದ ಕೂಡಿತ್ತು. ಸ್ವಲ್ಪ ಹೊತ್ತಿಗೆ ಎಲ್ಲರೂ ಬೆವರಿ, ಅಲ್ಲೇ ಒಂದು ಕಡೆ ವಿಶ್ರಾಂತಿ ಪಡೆದು ನಂತರ ಮುನ್ನಡೆದೆವು. ನಿಧಾನವಾಗಿ ನಡೆಯುತ್ತಾ ಹೋಗುತ್ತಿದ್ದಾಗ ನಮಗೆ ದೂರದಲ್ಲಿ 11,000 ಅಡಿಯ ಎತ್ತರದ ಶಿಖರ ಗೋಚರಿಸುತ್ತಿತ್ತು. ಒಂದು ಗಂಟೆಯ ಪ್ರಯಾಣದ ನಂತರ ನಾವು ಒಂದು ಶಿಖರವನ್ನು ಏರಿದೆವು. ಅದನ್ನೇ ನಾವು ನಿಚ್ನಾಯ್ ಪಾಸ್ ಎಂದು ಭ್ರಮಿಸಿದೆವು. ಅರ್ಧ ಗಂಟೆಯ ನಂತರ ಮತ್ತೊಂದು ಶಿಖರ ತಲುಪಿದಾಗ ಅದನ್ನೇ 4100 ಮೀಟರ್ 13500 ಅಡಿ ಎತ್ತರದ ನಿಚ್ನಾಯ್ ಪಾಸ್ ಎಂದು ಮಾರ್ಗದರ್ಶಿ ತಿಳಿಸಿದರು. ಅಲ್ಲಿಂದ ಸುತ್ತಲಿನ ಹಿಮಾಲಯ ಪರ್ವತ ಸುಂದರವಾಗಿ ಕಾಣುತ್ತಿತ್ತು. ಎಲ್ಲರೂ ವಿಶ್ರಾಂತಿಯ ನಂತರ ವಿಷ್ಣುಸಾರ್ ಸರೋವರದೆಡೆಗೆ ನಡೆದೆವು. ಅರ್ಧ ಗಂಟೆ ಕಾಲ ಇಳಿದ ನಂತರ ಸ್ವರ್ಗ ಸದೃಶ್ಯವಾದ ಹಾಗೂ ಅತಿ ಸುಂದರವಾದ ಹುಲ್ಲುಗಾವಲನ್ನು ಪ್ರವೇಶಿಸಿ ಸುಂದರ ಹೂವುಗಳನ್ನು ವೀಕ್ಷಿಸಿದೆವು. ಇಲ್ಲಿ ಹಳದಿ, ನೀಲಿ ಬಣ್ಣಗಳಿಂದ ಕೂಡಿದ ಹೂಗಳು ಕಾಣಿಸಿತು. ಇಲ್ಲಿಂದ ಎಲ್ಲರೂ ನಿಧಾನವಾಗಿ ನಡೆದು ಎರಡು ಗಂಟೆ ನಂತರ ವಿಷ್ಣುಸಾರ್ ಕ್ಯಾಂಪನ್ನು ತಲುಪಿದೆವು.

ದಾರಿಯಲ್ಲಿ ನಮಗೆ ಒಂದು ಸಣ್ಣ ಸರೋವರವು ಕಾಣಿಸಿತು. ಅದು ವಿಷ್ಣುಸಾರ್ ಸರೋವರವಲ್ಲವೆಂದು ಮಾರ್ಗದರ್ಶಿ ಜಾವೇದರಿಂದ ತಿಳಿಯಿತು. ಕ್ಯಾಂಪನ್ನು ಸುಮಾರು ಮೂರು ಗಂಟೆಗೆ ತಲುಪಿದೆವು. ಸ್ವಲ್ಪ ವಿಶ್ರಾಂತಿಯ ನಂತರ ಚಹಾ ಸೇವನೆ ಮಾಡಿ ಎಲ್ಲರೂ ಹತ್ತಿರದಲ್ಲಿದ್ದ ಒಂದು ಗುಡ್ಡದ ಮೇಲೆ ಹೋಗಿ ಕುಳಿತೆವು. ಸಂಜೆ ತಂಪಾದ ಗಾಳಿಯಿಂದಾಗಿ ಹವಾಮಾನ ಹಿತಕರವಾಗಿತ್ತು. ಅಲ್ಲಿ ಒಂದು ಅದ್ಭುತ ಹಾಗೂ ಸುಂದರ ದೃಶ್ಯ ನಮ್ಮನ್ನು ಸ್ವಾಗತಿಸಿತು. ಅದೇ ವಿಷ್ಣುಸಾರ್ ಸರೋವರ. ಇದು ಅಗಾಧವಾಗಿದ್ದು ನೀರು ಅತ್ಯಂತ ಶುಭ್ರವಾಗಿತ್ತು. ಸುತ್ತಲೂ ಪರ್ವತಗಳಿಂದ ಆವೃತವಾಗಿತ್ತು. ಕೆಲವು ಕಡೆ ಹಿಮದ ಹಾಳೆಗಳನ್ನು ಚುಂಬಿಸುತ್ತಿರುವಂತೆ ಕಾಣಿಸುತ್ತಿತ್ತು. ಕೆಲವರು ಕೆಳಗಿಳಿದು ನೀರಿನ ಹತ್ತಿರಕ್ಕೆ ಹೋದರು. ನಾನು ಮೇಲಿನಿಂದಲೇ ಸರೋವರದ ಅನೇಕ ದೃಶ್ಯಗಳನ್ನು ಕ್ಯಾಮರಾದಲ್ಲಿ ಸೆರೆಹಿಡಿದೆ. ನಂತರ ನಾನು ಅಲ್ಲಿಂದ ಬಲಗಡೆಗೆ ಸ್ವಲ್ಪ ದೂರ ನಡೆದು ಒಂದು ಬಂಡೆಯ ಮೇಲೆ ಕುಳಿತು ಸರೋವರವನ್ನು ದೃಷ್ಟಿಸುತ್ತಾ ವಿಷ್ಣುವನ್ನು ಧ್ಯಾನಿಸಿದೆ. ನಂತರ ಎಲ್ಲರೂ ಮೇಲೆ ಬಂದು ಕ್ಯಾಂಪನ್ನು ತಲುಪಿ

ಸಂಜೆ ರುಚಿಯಾದ ಸೂಪ್ ಕುಡಿದು ರಾತ್ರಿ 8 ಗಂಟೆಗೆ ಬಿಸಿಬಿಸಿಯಾದ ಊಟದ ನಂತರ ನಿದ್ರಿಸಿದೆವು.

30ನೇ ಜುಲೈ , 2014 : 12000 ಅಡಿಯಲ್ಲಿದ್ದ ವಿಷ್ಣುಸಾರ್ ಸರೋವರದಿಂದ ಕಿಶನ್‌ಸಾರ್ ಸರೋವರದ ಹಾಗೂ 13750 ಅಡಿ ಎತ್ತರದ ಗಡ್‌ಸಾರ್ ಪಾಸ್ ಮುಖಾಂತರ 12000 ಅಡಿಯಲ್ಲಿರುವ ಗಡ್‌ಸಾರ್ ಕಡೆಗೆ – 10 ಕಿ.ಮೀ ಚಾರಣ

ಕಿಶನ್‌ಸಾರ್ ಸರೋವರವೂ ಕೂಡಾ ಎತ್ತರ ಪ್ರದೇಶದಲ್ಲಿರುವ ಅಲಿಗೋಟ್ರೋಫಿಕ್ ಸರೋವರ. ಇದು ವಿಷ್ಣುಸಾರ್ ಸರೋವರದ ನೈರುತ್ಯ ದಿಕ್ಕಿಗೆ ಒಂದು ಕಿಲೋಮೀಟರಿಗಿಂತ ಕಡಿಮೆ ಅಂತರದಲ್ಲಿ 3710 ಮೀ ಎತ್ತರದಲ್ಲಿದೆ. ಇದು 0.95 ಕಿ.ಮೀ ಉದ್ದ ಹಾಗೂ 0.60 ಕಿ.ಮೀ ಅಗಲವುಳ್ಳದ್ದು. ಇದೂ ಕೂಡಾ ವಿಷ್ಣುಸಾರ್ ಸರೋವರದಂತೆ ಮೀನುಗಳಿಗೆ ಆಶ್ರಯ ನೀಡಿ ಡಿಸೆಂಬರ್ ನಿಂದ ಏಪ್ರಿಲ್ ತಿಂಗಳವರೆಗೂ ಹೆಪ್ಪುಗಟ್ಟಿರುತ್ತದೆ. ಈ ಪ್ರದೇಶದಲ್ಲಿ ಅತಿ ಹೆಚ್ಚಿನ ಹಿಮಪಾತವಾಗುವುದರಿಂದ ಚಳಿಗಾಲದಲ್ಲಿ ಇಲ್ಲಿ ಯಾರಿಗೂ ಬರಲಾಗುವುದಿಲ್ಲ. ಈ ಸರೋವರದ ಬೆನ್ನಿಗೇ ಹಿಮಾವೃತ ಪ್ರದೇಶದಲ್ಲಿ ಮತ್ತೊಂದು ಅಲಿಗೋಟ್ರೋಫಿಕ್ ಸರೋವರವನ್ನೊಳಗೊಂಡ ಗಡ್‌ಸಾರ್ ಪಾಸ್ ಇರುವುದು. ಕಿಶನ್‌ಸಾರ್ ಸರೋವರದ ನೀರು ಸಣ್ಣ ತೊರೆಗಳ ಮೂಲಕ ಹರಿದು ವಿಷ್ಣುಸಾರ್ ಸರೋವರವನ್ನು ಸೇರಿ ಅಲ್ಲಿಂದ ನಿಲಮ್ ನದಿಯಾಗಿ ಹರಿಯುತ್ತದೆ.

ಎಂದಿನಂತೆ ಬೆಳಗ್ಗೆ 5ಕ್ಕೆ ಎದ್ದು ಶುಭ್ರವಾದ ಆಕಾಶವನ್ನು ನೋಡಿ ಬಹಳ ನೆಮ್ಮದಿಯಾಯಿತು. ಬೆಳಗಿನ ಉಪಹಾರದ ನಂತರ ಆ ದಿನದ ಚಾರಣವು 13750 ಅಡಿ ಎತ್ತರದ ಮಾರ್ಗದ ಮುಖಾಂತರ ಹೋಗಬೇಕಿದ್ದು ಅಲ್ಲಿಂದ ತೀವ್ರ ಇಳಿಜಾರಿನ ಮಾರ್ಗದಲ್ಲಿ 1750 ಅಡಿಗಳಷ್ಟು ಕೆಳಗೆ ಇಳಿಯಬೇಕಿದ್ದು , ಅದು ಅತ್ಯಂತ ಕಠಿಣವಾಗಿದ್ದು ಎಚ್ಚರದಿಂದ ಮುಂದುವರೆಯಬೇಕಿತ್ತು. ಅರ್ಧ ಕಿ.ಮೀ ನಡೆದ ಮೇಲೆ ನಮಗೆ ಕಿಶನ್‌ಸಾರ್ ಸರೋವರವು ಕಾಣಿಸತೊಡಗಿತು. ಈ ಸರೋವರವು ವಿಷ್ಣುಸಾರ್ ಸರೋವರದಷ್ಟು ದೊಡ್ಡದಾಗಿಲ್ಲವಾದರೂ ಅತ್ಯಂತ ನಯನ ಮನೋಹರವಾಗಿದೆ. ಬೆಳಗಿನ ಆಕಾಶವು ಮೋಡರಹಿತ ಮತ್ತು ಶುಭ್ರವಾಗಿತ್ತು ಹಾಗೂ ಗಾಳಿಯೂ ಕಡಿಮೆಯಿತ್ತು. ಸರೋವರದ ಚಿತ್ರಗಳನ್ನು ತೆಗೆದು ನಂತರ ಬೆಟ್ಟ ಹತ್ತತೊಡಗಿದೆನು. ಅರ್ಧ ಗಂಟೆಯ ನಂತರ ಎರಡೂ ಸರೋವರಗಳು ಕಾಣಿಸತೊಡಗಿತು. ಸುಮಾರು ಎರಡು ಗಂಟೆಗಳ ಕಾಲ ಬೆಟ್ಟವನ್ನು ಹತ್ತಿದ ನಂತರ ಗಡ್‌ಸಾರ್ ಪಾಸ್‌ನ್ನು ತಲುಪಿದೆನು. ನನ್ನ ಹಿಂದೆ ನಮ್ಮ ಗುಂಪಿನ ಇನ್ನೂ ಅನೇಕರು ಬೆಟ್ಟವನ್ನು ಹತ್ತುತ್ತಿದ್ದರು. ಎಲ್ಲರೂ ಬಂದ

ನಂತರ ಒಂದು ಗ್ರೂಪ್ ಫೋಟೋವನ್ನು ತೆಗೆಯಲಾಯಿತು. ನಂತರ ಎಲ್ಲರೂ ಕೆಳಗಿಳಿಯತೊಡಗಿದೆವು. ಹುಲ್ಲುಗಾವಲಿನಲ್ಲಿ ಎರಡು ಗಂಟೆಗಳ ಕಾಲ ಹುರುಪಿನಿಂದ ನಡೆದೆವು. ಮಧ್ಯದಲ್ಲಿ ಒಂದು ನದಿಯು ಹರಿಯುತ್ತಿರುವ ಜಾಗದಲ್ಲಿ ಕುಳಿತು ಸ್ವಲ್ಪ ವಿಶ್ರಾಂತಿಯನ್ನು ಪಡೆದು ಅಲ್ಲೇ ಊಟ ಮುಗಿಸಿದೆವು. ಗಡ್‌ಸಾರ್ ಪಾಸ್‌ನಿಂದ ಇಳಿಯುತ್ತಿದ್ದಾಗ ನಮಗೆ ಗಡ್‌ಸಾರ್ ಸರೋವರವು ಸಮೀಪದಲ್ಲಿರುವಂತೆ ಕಾಣಿಸುತ್ತಿತ್ತು. ಊಟವಾದ ನಂತರ ಮತ್ತೆರಡು ಕಿ.ಮೀ ನಡೆದ ನಂತರ ನಮಗೆ ಗಡ್‌ಸಾರ್ ಕ್ಯಾಂಪ್ ತಲುಪಿದೆವು. ಇದಕ್ಕೆ ಮೊದಲು ನಾವು ಭಾರತೀಯ ಸೈನಿಕರ ಕ್ಯಾಂಪ್ ಕಡೆಗೆ ಹೋಗಿ ನಮ್ಮ ಸೈನಿಕರನ್ನು ಭೇಟಿಯಾಗಿ ಅವರೊಂದಿಗೆ ಸ್ವಲ್ಪ ಹೊತ್ತು ಮಾತನಾಡಿದೆವು. ಗಡ್‌ಸಾರ್ ಕ್ಯಾಂಪ್ ತಲುಪಿದ ನಂತರ ಹತ್ತಿರದಲ್ಲೇ ಹರಿಯುತ್ತಿದ್ದ ನದಿಗೆ ಹೋಗಿ ನೀರು ತಣ್ಣಗಿದ್ದರೂ ಸ್ನಾನವನ್ನು ಮಾಡಿದೆ. ನಂತರ ಸಂಜೆಗೆ ಎಲ್ಲರೂ ಗಡ್‌ಸಾರ್ ಸರೋವರವನ್ನು ನೋಡಲು ಹೋದೆವು. ಈ ಸರೋವರವು 3600 ಮೀಟರ್ ಎತ್ತರದ ಪ್ರದೇಶದಲ್ಲಿದ್ದು 0.85 X 0.76 ಕಿ.ಮೀ ವಿಸ್ತಾರವನ್ನು ಹೊಂದಿದ್ದು ಶುದ್ಧ ನೀರಿನಿಂದ ಕೂಡಿದ ಮತ್ತೊಂದು ಅಲಿಗೋಟ್ರೋಫಿಕ್ ಸರೋವರ. ಇದಕ್ಕೆ ಹಿಮಕರಗಿದ ನೀರೇ ಮೂಲ. ಇದರಿಂದ ಹೊರಬಂದ ನೀರು ಕಾಲುವೆಯ ಮೂಲಕ ನೀಲಮ್ ನದಿಯನ್ನು ಸೇರುವುದು. ಈ ಸರೋವರವನ್ನು ಯಮಸಾರ್ ಸರೋವರ ಅಂದರೆ ರಾಕ್ಷಸರಿರುವ ಅಥವಾ ಸಾವಿನ ಸ್ಥಳವೆಂದು ಸ್ಥಳೀಯರು ನಂಬಿರುವರು. ಅವರ ನಂಬಿಕೆಯ ಪ್ರಕಾರ ಈ ಸರೋವರದಲ್ಲಿ ಒಂದು ದೈತ್ಯಾಕಾರದ ಆಕ್ಟೋಪಸ್ ಇದ್ದು ಅದು ತನ್ನ ತೋಳಿನಿಂದ ಸರೋವರದ ಬಳಿ ಬರುವ ಪಶು ಪಕ್ಷಿಗಳನ್ನು ನೀರೊಳಕ್ಕೆ ಎಳೆದುಕೊಳ್ಳುವುದು. ಆದರೆ ಇದನ್ನು ಯಾರೂ ಈವರೆಗೂ ಕಂಡಿಲ್ಲ.

31ನೇ ಜುಲೈ , 2014 : 12000 ಅಡಿಯಲ್ಲಿನ ಗಡ್‌ಸಾರ್ ಸರೋವರದಿಂದ ಸಾತ್‌ಸಾರ್ ಕಡೆಗೆ – 12 ಕಿ.ಮೀ.

ಬೆಳಗಿನ ಹವೆ ಸ್ವಲ್ಪ ಚಳಿಯಿಂದ ಕೂಡಿದ್ದರೂ ಆಕಾಶವು ಶುಭ್ರವಾಗಿತ್ತು. ಈ ದಿನದ ಚಾರಣ ಹಿಂದಿನ ದಿನಕ್ಕಿಂತ ಸುಲಭವಾಗಿದ್ದು ನಡೆಯ ಬೇಕಾದ ಹಾದಿ 12 ಕಿ.ಮೀ ದೂರ ಹಾಗೂ ಇದಕ್ಕೆ 3–4 ಗಂಟೆ ಬೇಕಿದ್ದು ತೀವ್ರ ಏರುದಾರಿಯಿಂದ ಕೂಡಿರುತ್ತದೆಂದು ಗೈಡ್ ತಿಳಿಸಿದರು. 10 ನಿಮಿಷ ಚಾರಣದ ನಂತರ ಒಂದು ಉದ್ದದ ಹಿಮದ ಹಾಳೆಯನ್ನು ದಾಟಿದೆವು (Glacier). ನಂತರ 90 ನಿಮಿಷ ಪರ್ವತ ಹತ್ತತೊಡಗಿದೆವು. ಸುತ್ತಲೂ ಹಸಿರಾದ ಬೆಟ್ಟಗಳಿದ್ದು ಪ್ರಕೃತಿ ಸೌಂದರ್ಯ ಮನೋಹರವಾಗಿತ್ತು. ಮಧ್ಯೆ ಮಧ್ಯೆ ಕಾಡಿನಲ್ಲಿ ಬೆಳೆಯುವ ಸ್ಟ್ರಾಬೆರಿ ಕಂಡು

ಎಲ್ಲರೂ ತಮಗೆ ಸಿಕ್ಕಿದಷ್ಟು ಹಣ್ಣುಗಳನ್ನು ಕಿತ್ತು ತಿನ್ನುತ್ತಾ ಮುಂದುವರೆದೆವು. ಹೀಗೆ ಒಟ್ಟಾರೆ 3 ಗಂಟೆಯ ಚಾರಣದ ನಂತರ ಪರ್ವತವನ್ನು ಬಳಸಿ ಅದರ ಮತ್ತೊಂದು ಭಾಗ ತಲುಪಿದೆವು. ಇಲ್ಲಿಂದ ಹಾದಿಯು ಸಮತಟ್ಟಾಗಿರುವುದೆಂದು ಮಾರ್ಗದರ್ಶಿಯ ಮೂಲಕ ಅರಿತು ಅಲ್ಲೇ ಸ್ವಲ್ಪ ವಿಶ್ರಾಂತಿ ಪಡೆದು ಮುಂದುವರಿದೆವು. ಒಂದು ಗಂಟೆ ಹುಲ್ಲುಗಾವಲಿನಲ್ಲಿ ನಡೆದು ಒಂದು ನದಿಯನ್ನು ಕಷ್ಟಪಟ್ಟು ಬಂಡೆಗಳ ಮೇಲೆ ಹಾರುತ್ತಾ ದಾಟಿ ಮತ್ತೊಂದು ಹುಲ್ಲುಗಾವಲನ್ನು ಪ್ರವೇಶಿಸಿ ಅರ್ಧ ಗಂಟೆ ನಂತರ ಸಾತ್‌ಸಾರ್ ಬಳಿ ಇರುವ ಸೈನಿಕರ ಕ್ಯಾಂಪ್ ತಲುಪಿದಾಗ ಅಲ್ಲಿ ಅವರು ನಮ್ಮನ್ನು ವಿಶ್ವಾಸಪೂರ್ವಕ ಸ್ವಾಗತಿಸಿ ನಮ್ಮ ಗುರುತಿನ ಚೀಟಿಯನ್ನು ಪರೀಕ್ಷಿಸಿ ನಂತರ ಪರಿಶುದ್ಧವಾದ ನೀರನ್ನು ನೀಡಿದರು. ಅವರು ನಮ್ಮ ಪ್ರಶ್ನೆಗಳಿಗೆ ಉತ್ತರಿಸಿದರು. ಅಲ್ಲಿಂದ ಹೊರಟು ಅರ್ಧಗಂಟೆ ನಡೆದು ಒಂದು ನದಿಯನ್ನು ಬಳಸಿ ಸಾತ್‌ಸಾರ್ ಕ್ಯಾಂಪ್ ಮಧ್ಯಾಹ್ನ 3 ಗಂಟೆಗೆ ತಲುಪಿದೆವು.

ಸಾತ್‌ಸಾರ್ ಎಂದರೆ ಏಳು ಸರೋವರ. ಸಾತ್‌ಸಾರ್ ಸರೋವರ ಏಳು ಸಣ್ಣ ಸರೋವರಗಳು ಒಂದಕ್ಕೊಂದು ಹೊಂದಿಕೊಂಡಿರುವುದು. ಈ ಸರೋವರ ಉತ್ತರ–ದಕ್ಷಿಣಾಭಿಮುಖವಾಗಿ ಕಡಿದಾದ ಅಲ್ಪೈನ್ ಕಣಿವೆಯಲ್ಲಿ 4 ಕಿ.ಮೀ ಉದ್ದ ಹಾಗೂ ಒಂದು ಕಿ.ಮೀ ಅಗಲದ ವಿಸ್ತೀರ್ಣ. ಜಾಝೀಬಾಲ್ ಪಾಸ್ ವಿರುದ್ಧ ದಿಕ್ಕಿನಲ್ಲಿ ಗಂಗಬಾಲ್ ಮತ್ತು ನಂದಕುಲ್ ಸರೋವರ ಇರುವುದು. ಈ ಸರೋವರಗಳಿಗೆ ನೀರಿನ ಮೂಲ ಹಿಮಕರಗಿದ ನೀರು. ಬೇಸಗೆ ಹಾಗೂ ಶರತ್ಕಾಲಗಳಲ್ಲಿ ಮಳೆಯ ಸಾಧ್ಯತೆ ಅವಲಂಬಿಸಿ ಒಂದೆರಡು ಸರೋವರ ಒಣಗುತ್ತವೆ. ಸಾತ್‌ಸಾರ್ ಸರೋವರದಿಂದ ನೀರು ಸಣ್ಣ ತೊರೆಗಳ ಮೂಲಕ ಅಂತರಗಂಗೆಯಾಗಿ ಹರಿಯುವುದು. ಈ ಸರೋವರದ ಬಳಿ ಇರುವ ಹಿಮಗಲ್ಲಿನಿಂದ (glacier) ಒಂದು ಸಣ್ಣ ತೊರೆ ದಕ್ಷಿಣಾಭಿಮುಖವಾಗಿ ಹರಿದು ಸಿಂಧೂ ನದಿಯ ಬಲಭಾಗದ ಉಪನದಿಯಾದ ಚನಾರ್ ನದಿಯನ್ನು ವಾಂಗ್‌ನಾಥ್ ನಾಲೆಯ ಮೂಲಕ ಸೇರುತ್ತದೆ. ಬೇಸಿಗೆಯಲ್ಲಿ ಈ ಸರೋವರಗಳ ಸುತ್ತ ವಿವಿಧ ಬಣ್ಣಗಳ ಸುಂದರ ಹೂವುಗಳ ಹುಲ್ಲುಗಾವಲನ್ನು ನೋಡಬಹುದು. ಸಾತ್‌ಸಾರ್ ಸರೋವರದ ಏಳು ಸರೋವರಗಳಲ್ಲಿ ಒಂದು ಸರೋವರದ ಬಳಿಗೆ ತೆರಳಿ ಅಲ್ಲಿ ಹಲವಾರು ಸುಂದರ ದೃಶ್ಯಗಳ ಫೋಟೋ ತೆಗೆದುಕೊಂಡೆ. ರಾತ್ರಿ 8 ಗಂಟೆಗೆ ಊಟದ ನಂತರ ನಿದ್ರಿಸಿದೆವು.

ಆಗಸ್ಟ್ ಒಂದು, 2014 : 12000 ಅಡಿಯಲ್ಲಿನ ಸಾತ್‌ಸಾರ್ ಕ್ಯಾಂಪ್‌ನಿಂದ ಮೇಘನ್‌ಟಾಪ್ ಮುಖಾಂತರ 11500 ಅಡಿಯಲ್ಲಿರುವ ಗಂಗ್‌ಬಾಲ್ ಕ್ಯಾಂಪ್ – 9 ಕಿ.ಮೀ.

ಮಾರನೇ ದಿನ ಮುಂಜಾನೆ 5 ಗಂಟೆಗೆ ಹೊರಬಂದು ನೋಡಿದರೆ ರಾತ್ರಿ ಕಂಡ ಪರ್ವತಗಳೆಲ್ಲ ಮಾಯ! ಅಂದರೆ ಅವೆಲ್ಲ ಹಾಗೂ ನಮ್ಮ ಸುತ್ತಲಿದ್ದವರನ್ನೂ ಕೂಡಿಕೊಂಡು ದಟ್ಟವಾದ ಮಂಜು ಆವರಿಸಿತ್ತು. 7.30ರ ಹೊತ್ತಿಗೆ ಎಲ್ಲ ನಿಚ್ಚಳವಾಗಿ ಕಂಡುಬರತೊಡಗಿತು. ಚಾರಣದ ಮಾರ್ಗದರ್ಶಿ ಮೇಘನ್ ಟಾಪ್ ಪ್ರದೇಶದಲ್ಲಿ ದಟ್ಟವಾದ ಮೋಡಗಳು ನೆಲಮಟ್ಟದಲ್ಲೇ ಇದ್ದು ತೀವ್ರ ಚಳಿ ಎದುರಿಸಬೇಕಾಗುವುದೆಂದು ಹಾಗೂ ಮಳೆ ಬರಬಹುದೆಂದು ತಿಳಿಸಿದರು. ಇಂದು ನಾವು 13200 ಅಡಿ ಎತ್ತರದಲ್ಲಿನ ಝೂಸ್ ಪಾಸ್‌ನ್ನು ದಾಟಬೇಕಿತ್ತು. ಇದು ನಮ್ಮ ಚಾರಣ ಗಡ್‌ಸಾರ್ ಪಾಸ್ (13800) ನಂತರದ ಎತ್ತರ ಪ್ರದೇಶದಲ್ಲಿನ ಪಾಸ್. ಮೊದಲಿಗೆ ನಾವು ದೊಡ್ಡ ದೊಡ್ಡ ಬಂಡೆಗಳನ್ನು ಏರಿ ದಾಟುತ್ತಾ ಬೆಟ್ಟ ಹತ್ತತೊಡಗಿದೆವು. ಕೆಲವು ಕಡೆ ನನಗೆ ಇಬ್ಬರು ಮಾರ್ಗದರ್ಶಿಗಳು ಸಹಾಯ ಮಾಡಿದರು. (ನಮ್ಮ ಚಾರಣ ಗುಂಪಿನಲ್ಲಿ ಅತಿ ಹೆಚ್ಚಿನ ವಯಸ್ಸಿನವ ನಾನೇ!) ಹೀಗೆ ನಡೆಯುತ್ತಾ ಬೆಟ್ಟದ ತುದಿ ತಲುಪಿದ ನಂತರ ಒಂದು ಗ್ರೂಪ್ ಫೋಟೋ ತೆಗೆದುಕೊಂಡೆವು. ಆ ಪ್ರದೇಶವನ್ನೇ ಝೂಸ್‌ಪಾಸ್ ಎಂದು ಮಾರ್ಗದರ್ಶಿ ತಿಳಿಸಿದರು. ಸ್ವಲ್ಪ ಹೊತ್ತಿಗೆಲ್ಲಾ ಜೋರಾಗಿ ಮಳೆ ಬರತೊಡಗಿತು ಹಾಗೂ ತೀವ್ರವಾಗಿ ಚಳಿಯಾಗ ತೊಡಗಿತು. ನಾವೆಲ್ಲರೂ ಸ್ವೆಟರ್ ಹಾಗೂ ಮಳೆ ಕೋಟ್ ತರಾತುರಿಯಿಂದ ಧರಿಸಿಕೊಂಡು ರಕ್ಷಿಸಿಕೊಂಡೆವು. ಇಲ್ಲಿಂದ ನಾವು ಕಡಿದಾದ ಮಾರ್ಗದ ಮೂಲಕ ಬೆಟ್ಟ ಏರಬೇಕಿತ್ತು. ಮಾರ್ಗ ಕೇವಲ 20 ಅಡಿ ದೂರದವರೆಗೆ ಮಾತ್ರ ಗೋಚರಿಸುತ್ತಿತ್ತು. ಎಲ್ಲರೂ ನಿಧಾನವಾಗಿ ಒಬ್ಬರ ಹಿಂದೆ ಒಬ್ಬರಂತೆ ಬೆಟ್ಟವನ್ನು ಹತ್ತತೊಡಗಿದೆವು. ಅರ್ಧ ಗಂಟೆಯ ನಂತರ ಮೇಘನ್ ಟಾಪ್‌ನ್ನು ತಲುಪಿ, ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದೆವು. ಅಷ್ಟರಲ್ಲಿ ಆಕಾಶವು ಶುಭ್ರವಾಯಿತು. ಮೇಘನ್ ಟಾಪ್ ಕಡೆಗಿನ ಚಾರಣ ಅತ್ಯಂತ ಮನೋಹರವಾಗಿತ್ತು. ಮೇಘನ್ ಟಾಪ್ ಪ್ರದೇಶದಿಂದ ದೂರದಲ್ಲಿರುವ ಹರ್‌ಮುಖ್ ಪರ್ವತ ಕಾಣುತ್ತಿತ್ತು.

ಹರ್‌ಮುಖ್ ಪರ್ವತದ ಬಗ್ಗೆ ಒಂದು ಕುತೂಹಲ ಮಾಹಿತಿಯೆಂದರೆ

ಈ ಪರ್ವತ 16870 ಅಡಿ ಎತ್ತರವಿದ್ದು ಸಿಂಧ್ ಹಾಗೂ ಕಿಶನ್ ಗಂಗಾ ನದಿಗಳ ನಡುವೆ ಇರುವುದು. ಇದು ಅತ್ಯಂತ ಪವಿತ್ರವಾದ ಶಿವನ ವಾಸಸ್ಥಾನ ಎಂದು ನಂಬಿಕೆ. ಇದಕ್ಕೆ ಸಂಬಂಧಿಸಿದಂತೆ ಒಂದು ದಂತ ಕಥೆ ಇಲ್ಲಿ

ಜನಪ್ರಿಯವಾಗಿರುವುದು. ಅದರ ಪ್ರಕಾರ ಒಮ್ಮೆ ಒಬ್ಬ ತಪಸ್ವಿ ಈ ಪರ್ವತ ಹತ್ತಿ ಶಿವನೊಂದಿಗೆ ಮುಖಾಮುಖಿಯಾಗಿ ಭೇಟಿಯಾಗಲು 12 ವರ್ಷ ಪ್ರಯತ್ನಿಸಿ ವಿಫಲನಾಗಿದ್ದ. ಒಮ್ಮೆ ಹೀಗೆ ಪರ್ವತ ಹತ್ತುತ್ತಿರುವಾಗ ಅವನಿಗೆ ಒಬ್ಬ ಕುರಿಕಾಯುವ ಮೇಲಿಂದ ಇಳಿದುಬರುತ್ತಿರುವುದನ್ನು ಕಂಡು ಎಲ್ಲಿಂದ ಬರುತ್ತಿರುವೆ ಎಂದು ಪ್ರಶ್ನಿಸಿದಾಗ ಅವನು ತಾನು ಪರ್ವತದ ಮೇಲಿಂದ ತಪ್ಪಿಸಿಕೊಂಡಿರುವ ತನ್ನ ಕುರಿಯನ್ನು ಹುಡುಕುತ್ತ ಕೆಳಗೆ ಬರುತ್ತಿರುವೆನು ಎಂದು ತಿಳಿಸಿದನು. ಅವನು ತಿಳಿಸಿದ್ದೇನೆಂದರೆ ಪರ್ವತದ ತುದಿಯಲ್ಲಿ ದಂಪತಿಗಳು ಒಂದು ಹಸುವಿನಿಂದ ಹಾಲನ್ನು ಕರೆದು ಅದನ್ನು ಮಾನವ ಕಪಾಲದ ಮೂಲಕ ಕುಡಿಯುತ್ತಿರುವುದನ್ನು ಕಂಡೆನೆಂದು ತಿಳಿಸಿ ನಂತರ ಅವರು ಇವನಿಗೂ ಕುಡಿಯಲು ಹಾಲನ್ನು ಮಾನವ ಕಪಾಲದಲ್ಲಿ ಸಂಗ್ರಹಿಸಿ ಕೊಡಲು ಮುಂದೆ ಬಂದಾಗ ಕುರಿಕಾಯುವ ಈತನು ಅದನ್ನು ತಿರಸ್ಕರಿಸಿದೆ ಎಂದನು. ಆಗ ಆ ದಂಪತಿಗಳು ತಮ್ಮ ಹಸ್ತದಿಂದ ಹಾಲನ್ನು ಅದ್ದಿ ಅವನ ಹಣೆಯ ಮೇಲೆ ಬಳಿದರೆಂದು ತಿಳಿಸಿದನು. ಅದರಿಂದ ರೋಮಾಂಚಿತನಾದ ತಪಸ್ವಿ ಕುರಿಗಾಹಿಯ ಹಣೆಯಲ್ಲಿದ್ದ ಹಾಲನ್ನು ನೆಕ್ಕಿ ಆನಂದಪರವಶನಾದನು.

ನಮ್ಮ ಅಂದಿನ ಕ್ಯಾಂಪ್ ಆ ಪರ್ವತದ ತಪ್ಪಲಿನಲ್ಲೇ ಎಂದು ಟ್ರೆಕ್ ನಾಯಕರು ತಿಳಿಸಿದರು. ಮೇಘನ್ ಟಾಪ್ ಪ್ರದೇಶದಿಂದ ಬಲಗಡೆ ಸೂಕ್ಷ್ಮವಾಗಿ ಗಮನಿಸಿದಾಗ ಅನತಿದೂರದಲ್ಲಿ ಎರಡು ಸರೋವರಗಳು ಕಂಡುಬಂದವು. ಅವುಗಳೇ ಗಂಗ್‌ಬಾಲ್ ಮತ್ತು ನಂದಕುಲ್ ಸರೋವರ ಎಂದು ಮಾರ್ಗದರ್ಶಿ ತಿಳಿಸಿದರು. ಮೇಘನ್ ಟಾಪ್‌ನಿಂದ ಎಚ್ಚರಿಕೆಯಿಂದ ಬಂಡೆಯ ಮೂಲಕ ಇಳಿಯತೊಡಗಿ ಅರ್ಧ ಗಂಟೆ ನಂತರ ಸಮತಟ್ಟಾದ ಹುಲ್ಲುಗಾವಲನ್ನು ಪ್ರವೇಶಿಸಿದೆವು. ಇಲ್ಲಿಂದ ಮತ್ತೊಂದು ಹುಲ್ಲುಗಾವಲಿನ ಗುಡ್ಡವನ್ನೇರಿದಾಗ ದೂರದಲ್ಲಿ ಕ್ಯಾಂಪ್ ಗೋಚರಿಸಿತು. ಸಂಜೆ 3.30ಕ್ಕೆ ಕ್ಯಾಂಪ್ ತಲುಪಿದೆವು. ಕ್ಯಾಂಪ್ ಸುತ್ತಲಿನ ಪ್ರದೇಶ ಅತ್ಯಂತ ಸುಂದರವಾಗಿದ್ದು ಬೇರೆ ಚಾರಣ ಸಂಸ್ಥೆಗಳೂ ಅಲ್ಲೇ ಕ್ಯಾಂಪ್ ಮಾಡಿದ್ದರು. ಸಂಜೆಯ ಚಹಾ ಸೇವನೆ ನಂತರ ಹತ್ತಿರದಲ್ಲಿದ್ದ ನಂದಕುಲ್ ಸರೋವರದ ಬಳಿ ಹೋಗಿ ಸ್ವಲ್ಪ ಸಮಯ ಅಲ್ಲಿದ್ದು ಮರಳಿ ಟೆಂಟ್ ಬಳಿಗೆ ಬಂದೆವು. ಮಾರನೇ ದಿನ ಆಗಸ್ಟ್ 2, ವಿಶ್ರಾಂತಿಯ ದಿನ.

ಆಗಸ್ಟ್ 2, 2014 : ಗಂಗ್‌ಬಾಲ್ ಕ್ಯಾಂಪ್‌ನಲ್ಲಿ ವಿಶ್ರಾಂತಿ

ಮುಂಜಾನೆ ಚಹಾ ನಂತರ ಸುತ್ತಲಿನ ಪ್ರಕೃತಿ ವೀಕ್ಷಿಸುತ್ತಾ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಅನಂತರ ಉಪಹಾರ ಹಾಗೂ ಚಹಾ ಸೇವಿಸಿ 9.30ಕ್ಕೆ ನಂದಕುಲ್ ಸರೋವರದಲ್ಲಿ ಸ್ನಾನಮಾಡಲು ಎಲ್ಲರೊಂದಿಗೆ ಹೊರಟೆ. ಒಂದು ಗಂಟೆಯ

ಸ್ನಾನದ ನಂತರ ಮರಳಿ ಟೆಂಟ್ ತಲುಪಿ ವಿಶ್ರಾಂತಿ ನಂತರ ಮೋಡಗಳು ಹತ್ತಿರದಲ್ಲಿದ್ದ ಹರ್‌ಮುಖ ಪರ್ವತವನ್ನು ಮುಚ್ಚತೊಡಗಿರುವುದನ್ನು ಗಮನಿಸಿದೆವು. ಚಳಿಯೂ ಹೆಚ್ಚಾಗತೊಡಗಿತು. ಸಂಜೆ ನಾನು ಕೆಲವು ಚಾರಣಿಗರೊಂದಿಗೆ ಗಂಗಬಾಲ್ ಸರೋವರದೆಡೆಗೆ ಹೊರಟೆ.

ಗಂಗಬಾಲ್ ಕೂಡ ಸುಂದರವಾದ ಅಲಿಗೋಟ್ರೋಫಿಕ್ ಸರೋವರ. ಇದು ಕಾಶ್ಮೀರ ಕಣಿವೆಯಲ್ಲಿರುವ ಅತಿ ಎತ್ತರ ಪರ್ವತವಾದ ಹರ್‌ಮುಖ್ ತಪ್ಪಲಿನಲ್ಲಿದ್ದು 3100 ಮೀಟರ್ ಎತ್ತರದಲ್ಲಿರುವುದು ಮತ್ತು 2.5 X 1 ಕಿ.ಮೀ ವಿಸ್ತೀರ್ಣ. ಈ ಸರೋವರದ ಮೂಲ ಅನೇಕ ಹಿಮನದಿಗಳು. ಇಲ್ಲಿಂದ ಹೊರಬರುವ ನೀರು ನಂದಕೂಲ್ ಸರೋವರ ಸೇರಿ ಅಲ್ಲಿಂದ ತೊರೆಯ ಮೂಲಕ ರಭಸವಾಗಿ ಹರಿದು ವಾಂಗ್‌ನಾಥ್ ತೊರೆಯಮೂಲಕ ಸಿಂಧೂ ನದಿಯ ಉಪನದಿ ಚುರ್‌ನಾರ್ ನದಿಯೊಂದಿಗೆ ವಿಲೀನವಾಗುವುದು.

ಕಾಶ್ಮೀರಿ ಹಿಂದುಗಳು ಗಂಗಬಾಲ್ ಸರೋವರವನ್ನು ಹರ್‌ಮುಕುಟ್‌ಗಂಗಾ ಎಂದೂ ಕರೆಯುವರು. ಅವರಿಗೆ ಗಂಗಬಾಲ್ ಸರೋವರ ಪ್ರದೇಶ ಹರಿದ್ವಾರ ಕ್ಷೇತ್ರದಷ್ಟೆ ಪವಿತ್ರವಾದದ್ದು. ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಕಾಶ್ಮೀರಿ ಪಂಡಿತರು ತಮ್ಮ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಗಳನ್ನು ಉಳಿಸಿಕೊಳ್ಳುವ ಸಲುವಾಗಿ ಮೂರು ದಿನಗಳ ಮೂಕ್‌ಗಂಗಬಾಲ್ ಯಾತ್ರೆ ನಡೆಸುವರು.

ಸಂಜೆಗೆ ಗಂಗಬಾಲ್ ಸರೋವರದೆಡೆಗೆ ಹೊರಟು ಮುಳುಗುವ ಸೂರ್ಯನ ಬೆಳಕಿನಲ್ಲಿ ಸುಂದರವಾದ ಸರೋವರ ಗೋಚರಿಸಿತು. ಪಶ್ಚಿಮ ದಿಕ್ಕಿನಲ್ಲಿ ಬೆಟ್ಟಗಳ ಹಿಂದಿನಿಂದ ತೀಕ್ಷ್ಣ ಕಿರಣಗಳು ಸರೋವರದೆಡೆಗೆ ತೂರಿ ಬಾಣದಂತೆ ಕಾಣುತ್ತಿತ್ತು. ಸಂಜೆ 7.20ರ ಹೊತ್ತಿಗೆ ಮರಳಿದೆವು. ಅನಂತರ ಸೇರಿದ ಸಭೆಯಲ್ಲಿ ಈ ಚಾರಣದ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. ಅನಂತರ ಟ್ರೆಕ್ ನಾಯಕರು ಇಂಡಿಯಾ ಹೈಕ್ ಸಂಸ್ಥೆಯ ಪರವಾಗಿ ಎಲ್ಲರಿಗೂ ಚಾರಣ ಮುಗಿಸಿದ ಪ್ರತೀಕವಾಗಿ ಪ್ರಮಾಣ ಪತ್ರವನ್ನು ನೀಡಿದರು. ಆಗಸ್ಟ್ 2 ರಂದು ನಮ್ಮ ಸಹಚಾರಣಿಗರೊಬ್ಬರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಊಟ ನಂತರ ಕ್ಯಾಂಪ್ ಫೈರ್ ಕಾರ್ಯಕ್ರಮದಲ್ಲಿ ಅಡುಗೆಯವರೆಲ್ಲರೂ ಸೇರಿ ಕಾಶ್ಮೀರಿ ಹಾಡುಗಳನ್ನು ಹಾಡಿ ನಮ್ಮನ್ನು ರಂಜಿಸಿದರು. ರಾತ್ರೆ 10 ಗಂಟೆಗೆ ಎಲ್ಲರೂ ಮಲಗಿದೆವು.

ಆಗಸ್ಟ್ 3, 2014 : 11500 ಅಡಿಯಲ್ಲಿನ ಗಂಗಬಾಲ್ ಸರೋವರದಿಂದ 7450 ಅಡಿಯಲ್ಲಿರುವ ನರ್‌ನಾಗ್ – 11 ಕಿ.ಮೀ ತೀವ್ರವಾದ ಇಳಿಜಾರಿನ ಮಾರ್ಗದಲ್ಲಿ ಚಾರಣ

ಇಂದು ಕಾಶ್ಮೀರ್ ಕಣಿವೆಯ ಚಾರಣದ ಕೊನೆಯದಿನ. ಒಲ್ಲದ ಮನಸ್ಸಿನಿಂದ ಮುಂಜಾನೆ 8.30ಕ್ಕೆ ಹೊರಟೆವು. ಮೊದಲಿಗೆ 15 ನಿಮಿಷ ಬಂಡೆಗಳಿಂದ ಕೂಡಿದ

ಬೆಟ್ಟವನ್ನೇರಿ ಹುಲ್ಲುಗಾವಲನ್ನು ಪ್ರವೇಶಿಸಿ ಒಂದೂವರೆ ಗಂಟೆ ನಡೆದ ನಂತರ ದೇವದಾರು ವೃಕ್ಷಗಳಿಂದ ಕೂಡಿದ ಕಾಡಿನಲ್ಲಿ ನಡೆದು ಅರ್ಧ ಗಂಟೆಯ ನಂತರ ಮತ್ತೊಂದು ಹುಲ್ಲುಗಾವಲನ್ನು ತಲುಪಿ 11.30ಕ್ಕೆ ಅಲ್ಲಿನ ಡಾಬಾದಲ್ಲಿ ಮ್ಯಾಗಿ ನೂಡಲ್ಸ್ ತಿಂದು ವಿಶ್ರಾಂತಿಯ ನಂತರ ಚಾರಣ ಮುಂದುವರೆಸಿ ಒಂದೂವರೆ ಗಂಟೆ ಮರಳು ಹಾಗೂ ಗುಂಡನೆಯ ಕಲ್ಲುಗಳಿಂದ ಕೂಡಿದ ತೀವ್ರ ಇಳಿಜಾರಿನ ಮಾರ್ಗವನ್ನು ಅತ್ಯಂತ ಎಚ್ಚರಿಕೆಯಿಂದ ಇಳಿದು ಮಧ್ಯಾಹ್ನ 2.30ಕ್ಕೆ ನರ್‌ನಾಗ್ ತಲುಪಿ ಅಲ್ಲಿನ ಒಂದು ಹೋಟೆಲಿನಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನಂತರ ನಮಗಾಗಿ ಕಾಯುತ್ತಿದ್ದ ಕಾರಿನಲ್ಲಿ ಶ್ರೀನಗರದೆಡೆಗೆ ಪ್ರಯಾಣಮಾಡಿದೆವು. ಮಾರನೇ ದಿನ ನಾನು ಬೆಂಗಳೂರಿನ ಇತರ ಚಾರಣಿಗರೊಂದಿಗೆ ವಿಮಾನದ ಮೂಲಕ ಬೆಂಗಳೂರಿಗೆ ಹಿಂತಿರುಗಿದೆ.

ಕಾಶ್ಮೀರ ಪ್ರದೇಶದಲ್ಲಿನ ಇತರೆ ಸುಂದರವಾದ ಚಾರಣ ಮಾರ್ಗಗಳು

1. ತರ್‌ಸರ್–ಮರ್‌ಸರ್ ಸರೋವರ – 5 ದಿನಗಳ ಚಾರಣ.
2. ಪಹೆಲ್‌ಗಾವ್‌ನಿಂದ ತುಲ್ಯಾನ್ ಸರೋವರ.
3. ಸೋನ್‌ಮಾರ್ಗ ಪ್ರದೇಶದಿಂದ ಏಷ್ಯಾದ ಅತಿ ದೊಡ್ಡ ಶುಭ್ರವಾದ ವುಲ್ಲಾರ್ ಸರೋವರ.
4. ಬಾರಮುಲ್ಲ ಜಿಲ್ಲೆಯಲ್ಲಿರುವ ಬಂಡೀಪೂರ್.

ದಿಯೋರಿತಾಲ್ ಹಾಗೂ ಚಂದ್ರಶಿಲ

ಹಿಮಾಲಯದಲ್ಲಿನ ನನ್ನ 24ನೇ ಚಾರಣ ಮಾಡುವ ಮೊದಲು ನನಗೆ ಬಂದ ಆಲೋಚನೆಯೇನೆಂದರೆ ಯಾಕೆ ನಾನು ನನ್ನ ಕೆಲವು ಸ್ನೇಹಿತರನ್ನೂ ನನ್ನೊಂದಿಗೆ ಚಾರಣಕ್ಕೆ ಕರೆದೊಯ್ಯಬಾರದು ಎಂದು. ಅದರಂತೆ ಡಿಸೆಂಬರ್ 2016ರಲ್ಲೇ ನನ್ನ ಕೆಲವರು ಸ್ನೇಹಿತರನ್ನು ಚಾರಣಕ್ಕೆ ಆಹ್ವಾನಿಸಿದೆ. ಅವರಲ್ಲಿ ಐವರು ಬರಲು ಸಮ್ಮತಿಸಿದರು. ಈಗ ಯಾವ ಕಡೆಗೆ ಚಾರಣ ಹೋಗುವುದೆಂದು ತೀರ್ಮಾನಿಸುವ ಸಂದರ್ಭ ಬಂದಾಗ ನಾನು ಈಗಾಗಲೇ ಚಾರಣ ಮಾಡಿರುವ "ದಿಯೋರಿತಾಲ್ – ಚಂದ್ರಶಿಲೆ" ಕಡೆಗೆ ಚಾರಣ ಮಾಡುವ ಸಲಹೆಯನ್ನು ಎಲ್ಲರ ಮುಂದಿಟ್ಟೆ. ಎಲ್ಲರೂ ಅದಕ್ಕೆ ಸಮ್ಮತಿಸಿದರು. ಅದರಂತೆ ಡಿಸೆಂಬರ್ 31ರಂದು "ಇಂಡಿಯಾ ಹೈಕ್" ಸಂಸ್ಥೆಯು 2017 ಮಾರ್ಚ್ 19ರಿಂದ ನಡೆಸಲಿರುವ ಚಾರಣಕ್ಕೆ ಸ್ಥಳ ಕಾಯ್ದಿರಿಸಿದೆ.

ನಮ್ಮ ವಿಮಾನ ಪ್ರಯಾಣಕ್ಕೆ ಎಲ್ಲರಿಗೂ ಸ್ಥಳ ಕಾಯ್ದಿರಿಸಿದೆ. ಅಲ್ಲದೇ ದೆಹಲಿಯಿಂದ ಹರಿದ್ವಾರ, ಹರಿದ್ವಾರದಲ್ಲಿ ರೈಲ್ವೆ ರಿಟೈರಿಂಗ್ ಕೋಣೆಯಲ್ಲಿ ರಾತ್ರಿ ತಂಗುವ ವ್ಯವಸ್ಥೆ ಹಾಗೂ ರೈಲಿನಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಮಾಡಿ ಮುಗಿಸಿದೆ. ನಂತರ ನಾನು ಚಂದ್ರು ಅವರ ಮನೆಗೆ ಹೋಗಿ ದಿಯೋರಿತಾಲ್ ಚಾರಣದ ಬಗ್ಗೆ ಸಂಪೂರ್ಣ ವಿವರ ತಿಳಿಸಿದೆ. ಇದಾದ ನಂತರ ಶಾರೀರಿಕ ತಯಾರಿ ಮಾಡಿಕೊಳ್ಳಲು ಪ್ರಾರಂಭಿಸಿದೆ.

ಈಗ ದಿಯೋರಿತಾಲ್–ಚಂದ್ರಶಿಲೆ ಚಾರಣದ ಬಗ್ಗೆ ಕೆಲವು ವಿವರಗಳನ್ನು ಮೊದಲು ತಿಳಿಯುವುದು ಸೂಕ್ತ

ದಿಯೋರಿತಾಲ್–ಚಂದ್ರಶಿಲೆ ಉತ್ತರಾಖಂಡದ ಗಢವಾಲ್ ಪ್ರಾಂತದಲ್ಲಿ ಇರುವುದು. ಈ ಸ್ಥಳಕ್ಕೆ ಚಾರಣ ಮಾಡಬೇಕಾದಲ್ಲಿ ಮೊದಲು ನಾವು 'ಸಾರಿ' ಎಂಬ

ಹಳ್ಳಿಗೆ ಹೋಗಬೇಕು. ಅಲ್ಲಿಗೆ ಹರಿದ್ವಾರದಿಂದ ಸುಮಾರು 200 ಕಿ.ಮೀ ಪ್ರಯಾಣ ಮಾಡಬೇಕು.

ಮೂಲ ಶಿಬಿರ ಸಾರಿ ಹಳ್ಳಿಯಿಂದ ಸುಮಾರು 3 ಕಿ.ಮೀ ಚಾರಣ ಮಾಡಿದಲ್ಲಿ ಸುಂದರವಾದ ದಿಯೋರಿತಾಲ್ ತಲುಪುವೆವು.

ದಿಯೋರಿತಾಲ್ ಸುಂದರ ಸರೋವರ ಹಾಗೂ ಇಲ್ಲಿಂದ ನಾವು ದೂರದ ಚೌಕಾಂಬದ 4–3–2 ಶಿಖರಗಳನ್ನು ವೀಕ್ಷಿಸಬಹುದು. ದಿಯೋರಿ ಸರೋವರ ಮಹಾಭಾರತದಲ್ಲಿ ಯುಧಿಷ್ಠಿರನು ಯಕ್ಷನ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿ ಸಹೋದರರನ್ನು ಬದುಕಿಸಿಕೊಂಡ ಸ್ಥಳ ಎಂದೇ ಪ್ರಸಿದ್ಧಿಯಾಗಿದೆ. ಇಲ್ಲಿಂದ ಸುಮಾರು 7 ಕಿ.ಮೀ ನಡೆದರೆ ನಮಗೆ ಸಿಗುವುದೇ ಕಾಲಾ ಪರ್ವತ ಹಾಗೂ ಬಿಸುರಿ ಪರ್ವತ ಹಾಗೂ ಈ ಪರ್ವತದ ತಪ್ಪಲಿನಲ್ಲಿ ಇರುವುದೇ ಬಿಸುರಿ ಸರೋವರ. ಈ ಸರೋವರದಬಳಿ ಇರುವ ಪುರಾತನ ವೃಕ್ಷದಲ್ಲೇ ಪಾಂಡವರು ತಮ್ಮ ಅಜ್ಞಾತವಾಸ ಪ್ರಾರಂಭವಾಗುವ ಮೊದಲು ಶಸ್ತ್ರಾಸ್ತ್ರಗಳನ್ನು ಬಚ್ಚಿಟ್ಟಿದ್ದರೆಂದು ಪ್ರತೀತಿ.

ದಿಯೋರಿ ಸರೋವರದಿಂದ ರೋಹಿಣಿ ಹುಲ್ಲುಗಾವಲನ್ನು ದಾಟಿ ಚಂದ್ರಶಿಲೆಯಿಂದ ಹುಟ್ಟಿ ಹರಿದುಬರುವ ಆಕಾಶಕಾಮಿನಿ ತೊರೆಯನ್ನು ಕಣ್ತುಂಬ ವೀಕ್ಷಿಸಿ ಸುಮಾರು ಒಂದು ಗಂಟೆ ಚಾರಣ ಮಾಡಿದರೆ 17 ಕಿ.ಮೀ ದೂರದ ಚೋಪ್ಟಾ ಶಿಬಿರ ತಲುಪುವೆವು. ಚೋಪ್ಟಾದಿಂದ ತುಂಗನಾಥ ಮಂದಿರದ ಮಾರ್ಗವಾಗಿ 4 ಕಿ.ಮೀ ಎತ್ತರದ ಚಂದ್ರಶಿಲಾ ಶಿಖರ ಹತ್ತುವುದು.

ಮಾರ್ಚ್ 18ರಂದು 6.30ಕ್ಕೆ ಸರಿಯಾಗಿ ನಾವೆಲ್ಲರೂ ಹರಿದ್ವಾರ್ ರೈಲ್ವೆ ನಿಲ್ದಾಣದ ಮುಂದೆ ನಮಗಾಗಿ ಕಾಯುತ್ತಿದ್ದ ವಾಹನದಲ್ಲಿ ಬರೋಡ ನಗರದಿಂದ ಬಂದ ಮತ್ತೊಬ್ಬ ಚಾರಣಿಗರನ್ನು ಕೂಡಿಕೊಂಡು ಸಾರಿ ಹಳ್ಳಿಯ (ಬೇಸ್ ಕ್ಯಾಂಪ್) ಕಡೆ ಹೊರಟೆವು. ಮಾರ್ಗ ಮಧ್ಯದಲ್ಲಿ ಅಲಕನಂದಾ ಹಾಗೂ ಭಾಗೀರಥೀ ಸಂಗಮ– ದೇವಪ್ರಯಾಗ ಬಳಿ ವಾಹನ ನಿಲ್ಲಿಸಿ 167 ಮೆಟ್ಟಲುಗಳನ್ನು ಉತ್ಸಾಹದಿಂದ ಇಳಿದು ಸಂಗಮ ತಲುಪಿ ಸಂಗಮದಲ್ಲಿ ಸ್ನಾನ ಮಾಡಿ ನಂತರ 108 ದಿವ್ಯ ದೇಶಗಳೊಲ್ಲೊಂದಾದ ಪವಿತ್ರ ರಘುನಾಥ ಮಂದಿರ ಪ್ರವೇಶಿಸಿ ದೇವರ ದರ್ಶನ ಮಾಡಿ ನಮ್ಮ ಚಾರಣ ಸರಾಗವಾಗಿ ಆಗಲೆಂದು ಪ್ರಾರ್ಥಿಸಿ ನಂತರ ನಮ್ಮ ಪ್ರಯಾಣ ಸಾರಿ ಹಳ್ಳಿಯೆಡೆಗೆ – ರುದ್ರಪ್ರಯಾಗ, ಕರ್ಣಪ್ರಯಾಗ, ಶ್ರೀನಗರ, ಅಗಸ್ತ್ಯಮುನಿ ಪ್ರದೇಶಗಳ ಮೂಲಕ ಸಾಗಿತು. (ದಿವ್ಯ ದೇಶಮ್ ಎಂದರೆ ಮಹಾವಿಷ್ಣುವಿನ 108 ಪೂಜಾಸ್ಥಳಗಳು. ಇವುಗಳು ಶ್ರೀವೈಷ್ಣವರಿಗೆ ಪವಿತ್ರ ಕ್ಷೇತ್ರಗಳು) ಮಾರ್ಗದಲ್ಲಿ ಕಂಡುಬರುವ ಹಸಿರಿನ ಸೀರೆಯನ್ನುಟ್ಟ ಪ್ರಕೃತಿ

ರಮ್ಯವಾದ ಗಗನಚುಂಬಿ ಪರ್ವತಗಳನ್ನು ನೋಡಿ ಉಳಿದವರು ಮೂಕವಿಸ್ಮಿತರಾದರು ಹಾಗೂ ಅವುಗಳ ಹಲವಾರು ಚಿತ್ರಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿದರು. ಇದಲ್ಲದೇ ಮಾರ್ಗದಲ್ಲಿ ನಮಗೆ ಅಲಕನಂದಾ ನದಿಯು ಭೋರ್ಗರೆಯುತ್ತಾ ಹರಿಯುತ್ತಿತ್ತು. ದೇವ ಪ್ರಯಾಗದಲ್ಲಿ ಅಲಕನಂದಾ - ಭಾಗೀರತಿ ನದಿಗಳ ಸಂಗಮವು ನಮಗೆದುರಾದರೆ, ರುದ್ರಪ್ರಯಾಗದಲ್ಲಿ ಅಲಕನಂದಾ-ಮಂದಾಕಿನಿ ನದಿಗಳ ಸಂಗಮವು, ಕರ್ಣಪ್ರಯಾಗದಲ್ಲಿ ಅಲಂಕನಂದಾ-ಪಿಂಡಾರಿ ನದಿಗಳ ಸಂಗಮವು ಎದುರಾಗುವುದನ್ನು ನೋಡಿದೆವು. ಉಳಿದ ಎರಡು ಪ್ರಯಾಗಗಳು ನಮಗೆ ಈ ಮಾರ್ಗದಲ್ಲಿ ಸಿಗದೇ ಇರುವುದೆಂದರೆ ನಂದಪ್ರಯಾಗ – ಅಲಕನಂದಾ-ನಂದಾಕಿನಿ ನದಿಗಳ ಸಂಗಮ, ವಿಷ್ಣುಪ್ರಯಾಗ – ಅಲಕನಂದಾ-ಧೌಳಿ ಗಂಗಾ ನದಿಗಳ ಸಂಗಮ. ಇದಲ್ಲದೇ ಬದರಿನಾಥ ಕ್ಷೇತ್ರದಲ್ಲಿನ ಮಾನಾ ಹಳ್ಳಿಯ ಬಳಿ ಮತ್ತೊಂದು ಪ್ರಯಾಗ ಸಿಗುವುದೆಂದರೆ ಕೇಶವ ಪ್ರಯಾಗ – ಇಲ್ಲೇ ಅಲಕನಂದಾ-ಸರಸ್ವತೀ ನದಿಗಳ ಸಂಗಮ.

ಹೀಗೆ ಪ್ರಕೃತಿಯ ಸೌಂದರ್ಯ ಸವಿಯುತ್ತಾ ಪಯಣಿಸುತ್ತಾ ಊಖಿಮಠ-ಗೋಪೇಶ್ವರ ಮಂಡಲ ರಸ್ತೆಯೆಡೆಗೆ ಪಯಣಿಸಿದಾಗ ಮೊದಲಿಗೆ ಹಿಮಪರ್ವತ ಗೋಚರಿಸಿತು. ನಾವೆಲ್ಲಾ ಅದನ್ನು ವೀಕ್ಷಿಸಿ, ಫೋಟೋ ತೆಗೆದು ಸಂತೋಷಪಟ್ಟೆವು. ಇಷ್ಟರಲ್ಲಾಗಲೇ ಸೂರ್ಯ ಪಶ್ಚಿಮದಿಕ್ಕಿಗೆ ಪಯಣಿಸಿ ಸಂಜೆಯಾಗತೊಡಗಿತು. ಮಾರ್ಗವು ಅತ್ಯಂತ ಸುಂದರವಾಗಿದ್ದು ಅಲ್ಲಲ್ಲೇ ಸ್ವಲ್ಪ ಮಳೆಯೂ ಬಂದಿತ್ತು.

ಸಾರಿ ಹಳ್ಳಿಯು ಸುಂದರವಾದ ಒಂದೇ ರಸ್ತೆಯಲ್ಲಿತ್ತು. ಆಧುನಿಕತೆ ಸ್ವಲ್ಪ ಸ್ವಲ್ಪವಾಗಿ ಈ ಪ್ರದೇಶದಲ್ಲಿ ಇಣುಕುತ್ತಿರುವುದನ್ನು ಗಮನಿಸಿದೆ. ರಸ್ತೆಯುದ್ದಕ್ಕೂ ಸಣ್ಣ ಹೋಟೆಲು, ಅಂಗಡಿ, ಹೋಮ್ ಸ್ಟೇ ಇರುವುದನ್ನು ಗಮನಿಸಿದೆ. ರಸ್ತೆಯಿಂದ ಎಡಗಡೆ ಕೆಳಗೆ ನೋಡಿದರೆ ದೂರದಲ್ಲಿ ಸುಂದರವಾದ ಹಸಿರಿನ ಗೋಧಿ ತೆನೆಗಳ ಗದ್ದೆ ಕಾಣಿಸುತ್ತಿತ್ತು. ಹತ್ತಿರದಲ್ಲಿ ಕೆಳಗಡೆ ಹಳ್ಳಿಗರು ವಾಸಿಸುವ ಮನೆಗಳು, ಶಾಲೆ ಗೋಚರಿಸುತ್ತಿತ್ತು. ಉತ್ತರದಿಕ್ಕಿನಲ್ಲಿ ಹಿಮಾವೃತ ಶಿಖರಗಳು ಗೋಚರಿಸುತ್ತಿತ್ತು. ಪಶ್ಚಿಮದಿಕ್ಕಿನಲ್ಲಿ ದೂರದ ಬೆಟ್ಟಗಳ ಹಿಂದಿನಿಂದ ಸೂರ್ಯನ ಕಿರಣಗಳು ತೂರಿ ಬರುತ್ತಿದ್ದು ನೋಡಲು ಅಂದವಾಗಿತ್ತು.

ಕಡೆಗೆ ನಮ್ಮ ವಾಹನ ಒಂದು ಸಣ್ಣ ಹೋಟೇಲಿನಬಳಿ ನಿಂತಾಗ ನಾವು ಇಲ್ಲೇ ಇಳಿಯಬೇಕೆಂದು ಭಾಸವಾಯಿತು. ಅದರಂತೆ ಇಳಿದು ನಮ್ಮ ಸಾಮಾನುಗಳನ್ನು ಇಳಿಸಿಕೊಂಡೆವು. ಅನಂತರ India Hikes ಸಂಸ್ಥೆಯ ಒಬ್ಬ ಸದಸ್ಯ ಇಳಿದುಕೊಳ್ಳಲು ಕೋಣೆಗಳನ್ನು ತೋರಿಸಿದನು. ಸ್ವಲ್ಪ ಸಮಯದಲ್ಲಿ ನಮಗೆಲ್ಲರಿಗೂ ಸ್ವಾಗತ

ಚಹಾ ನೀಡಲಾಯಿತು. ಅನಂತರ ಸಂಜೆಯಾಗುತ್ತಿದ್ದಂತೆ ಚಳಿ ಶುರುವಾಯಿತು. ಎಲ್ಲರೂ ಬೆಚ್ಚಗಿನ ಬಟ್ಟೆ ಧರಿಸಿ ಚಾರಣನಾಯಕರಿಗೆ ನಮ್ಮ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಪರಿಶೀಲಿಸಲು ನೀಡಿದೆವು. ಸುಮಾರು ಅರ್ಧ ಗಂಟೆಯ ನಂತರ ಎಲ್ಲರೂ ತಮ್ಮ ಪರಿಚಯ ಮಾಡಿಕೊಂಡೆವು. 23 ಚಾರಣಿಗರಿದ್ದು ಅವರಲ್ಲಿ ಬಹಳ ಚಾರಣಿಗರು ಮೊದಲ ಬಾರಿಗೆ ಬಂದವರು. ನಂತರ ಮಾರ್ಗದರ್ಶಕರು ಚಾರಣದ ಬಗ್ಗೆ ಸಮಗ್ರ ಮಾಹಿತಿ ನೀಡಿ ಅದರಲ್ಲಿ ಚಾರಣಿಗರು ಹೇಗೆ ಚಾರಣ ಮಾಡಬೇಕು, ಮಾರ್ಗವನ್ನು ಹೇಗೆ ಕಸಮುಕ್ತವಾಗಿರುವಂತೆ ನೋಡಿಕೊಳ್ಳಬೇಕು, ಬಿಡಾರದಲ್ಲಿ ಹೇಗಿರಬೇಕು, ಶೌಚಾಲಯ ಹೇಗೆ ಉಪಯೋಗಿಸಬೇಕು ಇತ್ಯಾದಿ ವಿಷಯಗಳನ್ನು ಚರ್ಚಿಸಲಾಯಿತು. ಅನಂತರ ಮಾರನೇ ದಿನದ ಚಾರಣದ ಬಗ್ಗೆ ಮಾಹಿತಿ ಎಲ್ಲರಿಗೂ ತಿಳಿಸಿದರು. ರಾತ್ರಿ ಔತಣ ರುಚಿಯಾಗಿದ್ದು ಊಟದ ನಂತರ ಮಲಗಿದೆವು.

ಮೊದಲನೇ ದಿನ : ಮಾರ್ಚ್ 19 2017 – ಸಾರಿ ಹಳ್ಳಿಯ ಬೇಸ್ ಕ್ಯಾಂಪ್ – ದೇವಾರಿಯಾ ಸರೋವರ – 2.5 ಕಿ.ಮೀ ಚಾರಣ

ಮೊದಲ ದಿನ ಚಾರಣವು ಕೇವಲ 2.5ಕಿ.ಮೀ ಇದ್ದು ಬೆಳಗ್ಗೆ 7ಕ್ಕೆ ಚಹಾ, 8ಕ್ಕೆ ಉಪಹಾರ ಹಾಗೂ 9ಕ್ಕೆ ಚಾರಣ ಪ್ರಾರಂಭಿಸಿದೆವು. ನಾನು ಬೆಳಗ್ಗೆ 6ಕ್ಕೆ ಎದ್ದು ಸೂರ್ಯೋದಯ ವೀಕ್ಷಿಸಿ ಸ್ವಲ್ಪ ದೂರ ನಡೆದು ಪ್ರಕೃತಿ ಸೌಂದರ್ಯ ಸವಿಯುತ್ತಾ ಬೆಳಗಿನ ಚಳಿಯಲ್ಲಿ ಸುಮಾರು ಒಂದು ಕಿ.ಮೀ ದೂರ ನಡೆದೆ. ಅನಂತರ ಮರಳಿ ಬಂದು ಚಹಾ ಸೇವಿಸಿ ರಸ್ತೆಯಿಂದ ಕೆಳಗೆ ಇಳಿದುಹೋಗಿ ದೂರದಲ್ಲಿರುವ ಹಸಿರು ಗದ್ದೆಯ ನಡುವೆ ಇರುವ ಶಾಲೆಯ ಬಳಿಗೆ ಹೋಗಿ ಸ್ವಲ್ಪ ಹೊತ್ತು ಅಲ್ಲಿಂದ ಪ್ರಕೃತಿ ಸೌಂದರ್ಯ ಸವಿದು ಮರಳಿ ಬಿಡಾರದೆಡೆಗೆ ಬಂದೆ.

ನಂತರ ಬೆಳಗಿನ ಉಪಹಾರ ಸೇವಿಸಿ ಹೆಗಲು ಚೀಲ ಚಾರಣ ನಾಯಕರಿಗೆ ಒಪ್ಪಿಸಿ 9.20ಕ್ಕೆ ಚಾರಣ ಪ್ರಾರಂಭಿಸಿ ಸ್ವಲ್ಪ ದೂರ ರಸ್ತೆಯಲ್ಲಿ ನಡೆದು ನಂತರ ಬಲಕ್ಕೆ ತಿರುಗಿ ಒಂದು ಬೆಟ್ಟ ಹತ್ತಿ ನಿಧಾನವಾಗಿ ನಡೆದು ಮೇಲಿನ ಒಂದು ಹುಲ್ಲುಗಾವಲು ತಲುಪಿದೆವು. ದಾರಿಯುದ್ದಕ್ಕೂ ನಮಗೆ ನೀರನ್ನು ಕುಡಿಯಿರೆಂದು ಮಾರ್ಗದರ್ಶಿ ಸೂಚನೆ ಕೊಡುತ್ತಿದ್ದರು. ಮಾರ್ಗದಲ್ಲಿ ಕೆಂಪು ಬಣ್ಣದ ರೋಡೋಡೆಂಡ್ರಾನ್ (Rhododendron) ಹೂವುಗಳಿಂದ ಕೂಡಿದ ಗಿಡಗಳು ಹಾಗೂ ಮೇಪಲ್ ವೃಕ್ಷಗಳು ಸಿಕ್ಕಿತು. ದಾರಿಯಲ್ಲಿ ನಾವುಗಳು ಚೌಖಂಬಾ ಪರ್ವತ ವೀಕ್ಷಿಸಿ ಮಧ್ಯಾಹ್ನ 1.30ಕ್ಕೆ ದಿಯೋರಿತಾಲ್ ಸರೋವರ ಬಿಡಾರ ತಲುಪಿದೆವು. ಹವಾಗುಣ ಹಿತಕರವಾಗಿದ್ದು ಸರೋವರ ಶುಭ್ರ ನೀರಿನಿಂದ

ಕಂಗೊಳಿಸುತ್ತಿತ್ತು. ಸರೋವರದ ಬಲಗಡೆ ದಟ್ಟ ಮರಗಳಿಂದ ಕೂಡಿದ್ದು ಸರೋವರದ ಎದುರಿಗೆ ನಮಗೆ ಚೌಖಂಬಾ ಪರ್ವತ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಎಲ್ಲರೂ ಅನೇಕ ಫೋಟೊ ತೆಗೆದುಕೊಂಡರು. ಊಟಮಾಡಿ ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಸರೋವರವನ್ನು ಒಂದು ಸುತ್ತು ಹಾಕಲು ಹೊರಟೆವು. ಎಲ್ಲರೂ ನಿಧಾನವಾಗಿ ಸರೋವರದ ಸುತ್ತಾ ನಡೆಯುತ್ತಾ ಫೋಟೊ ತೆಗೆಯುತ್ತಾ ಇದ್ದಾಗ ಒಂದು ಭಾಗದಲ್ಲಿ ಸ್ವಲ್ಪ ಹಿಮ ಇರುವುದು ಗೋಚರವಾಗಿ ಅದರ ಬಳಿ ಹೋಗಿ ಹಿಮವನ್ನು ಚಂಡಿನಾಕಾರದಲ್ಲಿ ಹಿಡಿದು ಪರಸ್ಪರ ಎಸೆಯುತ್ತಾ ಸ್ವಲ್ಪ ಸಮಯ ಸಂತೋಷದಿಂದ ಆಡಿದೆವು.

ಸಂಜೆಯಾಗುತ್ತಿದ್ದಂತೆ ಮಾರ್ಗದರ್ಶಿಯು ನಮ್ಮನ್ನೆಲ್ಲಾ ಸರೋವರದ ಪಕ್ಕದಿಂದ ಸ್ವಲ್ಪ ಮೇಲೆ ಹತ್ತಿ ಒಂದು ಸುಂದರವಾದ ವೀಕ್ಷಣಾ ಸ್ಥಳಕ್ಕೆ ಕರೆದೊಯ್ದರು. ಅಲ್ಲಿಂದ ದೂರದ ಚೌಖಂಬಾ ಹಿಮ ಶಿಖರಗಳು ಸ್ಪಷ್ಟವಾಗಿ ಕಾಣುತ್ತಿತ್ತು. ಎಲ್ಲರೂ ಫೋಟೊ ತೆಗೆದುಕೊಂಡು ಶಿಬಿರದೆಡೆಗೆ ಹೊರಟೆವು. ಶಿಬಿರಕ್ಕೆ ಬಂದ ನಂತರ ಟ್ರೆಕ್ ಲೀಡರ್ ಎಲ್ಲರ ರಕ್ತದೊತ್ತಡ ಪರೀಕ್ಷಿಸಿದರು. ರಾತ್ರಿ ಊಟದ ನಂತರ ಮಾರ್ಗದರ್ಶಿ ವೆಂಕಟ್ ಅವರು ಮಾರನೇ ದಿನದ ಚಾರಣದ ಬಗ್ಗೆ ಮಾಹಿತಿ ನೀಡಿದ ನಂತರ ಎಲ್ಲರೂ ಬಿಡಾರದೊಳಗೆ ಹೋಗಿ ಮಲಗಿಕೊಂಡೆವು.

ಎರಡನೇ ದಿನ : ಮಾರ್ಚ್ 20, 2017 – ದಿಯೋರಿತಾಲ್ ಸರೋವರ – ಚೋಪ್ಟಾ ಕ್ಯಾಂಪ್ – 14 ಕಿ.ಮೀ ಚಾರಣ

ಎರಡನೇ ದಿನ ಬೆಳಗಿನ ಚಹಾ ಸೇವಿಸಿದ ನಂತರ ಎಲ್ಲರ ರಕ್ತದಲ್ಲಿರುವ ಆಮ್ಲಜನಕ ಪ್ರಮಾಣ, ನಾಡಿ ಬಡಿತದ ವೇಗ ಆಕ್ಸಿಮೀಟರ್ ಮೂಲಕ ಪರಿಶೀಲಿಸಿ ರಕ್ತದೊತ್ತಡವನ್ನೂ (BP) ಪರೀಕ್ಷಿಸಲಾಯಿತು.

ಎಲ್ಲರೂ ಸಾಕಷ್ಟು ಕುಡಿಯುವ ನೀರನ್ನು ಶೇಖರಿಸಿಕೊಂಡು ಊಟದ ಬುತ್ತಿಯೊಂದಿಗೆ ಚಾರಣ ಪ್ರಾರಂಭಿಸಿದೆವು. ನಾನು ಈ ಹಿಂದೆ ಈ ಚಾರಣ ಮಾಡಿದ್ದಾಗ ಸರೋವರದಿಂದ 7 ಕಿ.ಮೀ ದೂರದಲ್ಲಿನ ರೋಹಿಣಿ ಹುಲ್ಲುಗಾವಲಿನಲ್ಲಿ ಬಿಡಾರ ಹೂಡಲು ಅವಕಾಶವಿತ್ತು. ಈ ಬಿಡಾರವು ಸುಂದರವಾದ ಹುಲ್ಲುಗಾವಲಿನಲ್ಲಿ ಇತ್ತು. ಆದರೆ ಈಗ ಇಲ್ಲಿ ಬಿಡಾರವನ್ನು ಹೂಡಲು ಅರಣ್ಯ ಇಲಾಖೆಯವರು ಅನುಮತಿ ನೀಡದಿರುವ ಕಾರಣ ನಾವು ರೋಹಿಣಿ ಹುಲ್ಲುಗಾವಲು ಮುಖಾಂತರ ಇನ್ನೂ 7 ಕಿ.ಮೀ ನಡೆಯಬೇಕಿತ್ತು. ಮೊದಲ ಒಂದು ಕಿ.ಮೀ ಸಮತಟ್ಟಾದ ಹುಲ್ಲುಗಾವಲಿನಲ್ಲಿ ನಡೆದು ನಾನು ಎಲ್ಲರಿಗಿಂತ ಮುಂದೆ ನಡೆಯುತ್ತಿದ್ದೆ. ದಾರಿಯುದ್ದಕ್ಕೂ ಚೌಖಂಬಾ, ಕೇದಾರ ಶಿಖರಗಳು ಅತಿ ಸುಂದರವಾಗಿ

ಕಾಣಿಸುತ್ತಿದ್ದವು.

ಸ್ವಲ್ಪ ಸಮಯದನಂತರ ದಾರಿಯ ಇಕ್ಕೆಲಗಳಲ್ಲೂ ಕೆಂಪು ಬಣ್ಣದ ರೋಡೋಡೆಂಡ್ರನ್(Rhododendron) ಹೂವುಗಳ ಗಿಡಗಳು ಪ್ರಾರಂಭವಾದವು. ಅಲ್ಲದೇ ಮಾರ್ಗಮಧ್ಯದಲ್ಲಿ ಕೆಂಪು ಹೂವುಗಳು ನೆಲದ ಮೇಲೆ ಹರಡಿ ದಾರಿಯು ಕೆಂಪಾಗಿ ಸುಂದರವಾಗಿ ಕಾಣಿಸುತ್ತಿತ್ತು. ಹದಿನೈದು ನಿಮಿಷದ ನಡಿಗೆಯ ನಂತರ ಚಂದ್ರಶಿಲಾ ಶಿಖರವು ಗೋಚರಿಸತೊಡಗಿತು ಹಾಗೂ ಮೇಲಿಂದ ಕೆಳಗೆ ನೋಡಿದಾಗ ದೂರದಲ್ಲಿ ಸಾರಿ ಹಳ್ಳಿ ಗೋಚರಿಸುತ್ತಿತ್ತು.

ಸ್ವಲ್ಪ ದೂರ ನಡೆದ ಮೇಲೆ ಹಾದಿಯ ಎಡಗಡೆ ಒಂದು ದಿಬ್ಬವು ಕಾಣಿಸಿತು. ಅದರ ತುದಿಯಲ್ಲಿ ಒಂದು ಜಾಡು ಕಾಣಿಸಿತು. ಮಾರ್ಗದರ್ಶಕರನ್ನು ಆ ಜಾಡು ಎಲ್ಲಿಗೆ ಕರೆದುಕೊಂಡು ಹೋಗುತ್ತದೆಂದು ವಿಚಾರಿಸಿದಾಗ ತಿಳಿದುಬಂದದ್ದೆಂದರೆ ಅದು ಮಧ್ಮಹೇಶ್ವರ ಮಂದಿರಕ್ಕೆ ಹಾಗೂ ನಂದಿ ಕುಂಡಕ್ಕೆ ಹೋಗುವ ಹಾದಿ ಎಂದು. ಮಧ್ಮಹೇಶ್ವರ ಮಂದಿರವು ಪಂಚ ಕೇದಾರಗಳಲ್ಲೊಂದು. ಇಲ್ಲಿಂದ ತೀವ್ರ ಹತ್ತುವ ಹಾದಿಯಿದ್ದು 30 ನಿಮಿಷಗಳ ಆರೋಹಣದ ನಂತರ ಜಾಂಡಿಧರ್ (Jhandidhar) (ಒಂದು ಬಾವುಟವನ್ನು ನೆಟ್ಟಿರುವ ಎತ್ತರದ ಪ್ರದೇಶ) ತಲುಪಿದೆವು.

ಅಷ್ಟರಲ್ಲಿ ಎಲ್ಲರಿಗೂ ಆಯಾಸವಾಗಿ ಸ್ವಲ್ಪ ಹೊತ್ತು ಕುಳಿತು ಹಸಿವನ್ನು ತಡೆಯಲಾರದೇ ಜೊತೆಗೆ ತಂದಿದ್ದ ಊಟವನ್ನು ಅಲ್ಲೇ ಕೆಲವರು ತಿಂದರು. ಅಲ್ಲಿಂದ ಚೋಪ್ಟಾದ ಅರಣ್ಯವನ್ನು ಪ್ರವೇಶಿಸಿ ಸುತ್ತಲೂ ಗುಲಾಬಿ ಬಣ್ಣದ ರೋಡೋಡೆಂಡ್ರನ್ (Rhododendron) ವೃಕ್ಷಗಳ ನಡುವೆ ಇಳಿಯುತ್ತಾ ಬಹಳ ದೂರ ನಡೆದು ಒಂದು ಗಂಟೆ ನಂತರ ಕೇದಾರನಾಥ ಅಭಯಾರಣ್ಯ ಪ್ರವೇಶಿಸಿದೆವು.

ಈ ಅರಣ್ಯದೊಳಗೆ ಸುಮಾರು ಒಂದೂವರೆ ಗಂಟೆ ನಡೆದ ಮೇಲೆ ರೋಹಿಣಿ ಹುಲ್ಲುಗಾವಲು ಎದುರಾಯಿತು. ಇಲ್ಲಿ ಆಯಾಸ ಪರಿಹರಿಸಿಕೊಂಡು ಇಲ್ಲಿಂದ 45 ನಿಮಿಷ ನಡೆದು ಒಂದು ದಿಬ್ಬವನ್ನು ಸಮೀಪಿಸಿದೆವು. ಅದರ ಹೆಸರು ತಿಕಡಿ ಖಾಲ್ ಎಂದು ತಿಳಿಯಿತು. ಅದನ್ನು ಹತ್ತಿದಾಗ ನಮಗೆ ಎರಡು ಮಾರ್ಗಗಳು ಎದುರಾದವು. ಒಂದು ಮಾರ್ಗವು ಬಿಸುರಿತಾಲ್, ಕಾಲಾ ಪರ್ವತ ಹಾಗು ನಂದಿ ಕುಂಡ್ ಕಡೆಗೆ ಹೋಗುತ್ತದೆ ಹಾಗೂ ಎರಡನೇ ಮಾರ್ಗವು ತೀವ್ರ ಇಳಿಜಾರಿನದ್ದಾಗಿದ್ದು ಇದು ಚಂದ್ರಶಿಲಾ ಪರ್ವತದಿಂದ ಹುಟ್ಟಿ ಹರಿದುಬರುವ ಆಕಾಶ ಕಾಮಿನಿ ನದಿಯೆಡೆಗೆ ಕರೆದುಕೊಂಡುಹೋಗುತ್ತದೆ. ನಾವುಗಳು ಅದರಂತೆ ನಡೆದು ತಿಕಡಿ ಖಾಲ್ ಪ್ರದೇಶವನ್ನು ತಲುಪಿದೆವು. ಇಲ್ಲಿಂದ ಜಾಡು ತೀವ್ರ ಇಳಿಜಾರಿನಿಂದ ಕೂಡಿತ್ತು. ಅರ್ಧ ಗಂಟೆ ನಡೆದ ಮೇಲೆ ಆಕಾಶ ಕಾಮಿನಿ ತೊರೆಯು ಹರಿದು ಹೋಗುತ್ತಿರುವ ಪ್ರದೇಶ ತಲುಪಿ. ಇಲ್ಲಿ ನಾನು, ಹಾಗೂ ಕೆಲವು ಚಾರಣಿಗರು

ಊಟ ಮಾಡಿದೆವು. ಅರ್ಧ ಗಂಟೆ ವಿಶ್ರಾಂತಿ ನಂತರ ಮುಂದಿನ ಮಾರ್ಗ ತೀವ್ರ ಆರೋಹಣದಿಂದ ಕೂಡಿದ್ದು ಒಂದು ಗಂಟೆಗಿಂತ ಹೆಚ್ಚಿಗೆ ನಡೆಯಬೇಕಿತ್ತು. ಸ್ವಲ್ಪ ನಡೆಯುವುದರಲ್ಲೇ ಏದುಸಿರು ಬರತೊಡಗಿತು. ಆದರೂ ಮೇಲೇರ ತೊಡಗಿದೆವು. ಮಾರ್ಗದಲ್ಲಿ ಅನೇಕ ಹಾದಿಯು ಹಿಮದಿಂದ ಕೂಡಿತ್ತು.

ಒಂದು ಗಂಟೆ ನಡೆದು ಚಹಾ ಅಂಗಡಿ ತಲುಪಿ ಚಹಾ ಸೇವಿಸಿ ಅಲ್ಲಿಂದ ಒಂದೂವರೆ ಕಿ.ಮೀ ನಡೆದು ಅಲ್ಲಿಂದ ಬಲಕ್ಕೆ ಹೊರಳಿ ಮೆಟ್ಟಲುಗಳನ್ನು ಇಳಿದು ನಂತರ ಹಿಮದಿಂದಾವೃತವಾದ ನಮ್ಮ ಶಿಬಿರವನ್ನು ತಲುಪಿದೆವು. ವಿಶ್ರಾಂತಿಯ ನಂತರ ಎಲ್ಲರೂ ಹೊರಬಂದು ಬಿಡಾರದ ಸುತ್ತ ಓಡಾಡಿ ನಂತರ ಚಹಾ ಸೇವಿಸಿ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ನೋಡುತ್ತ ಸಂತಸಪಟ್ಟೆವು.

ರಾತ್ರಿ ಒಂಬತ್ತು ಗಂಟೆಗೆ ಸೂರತ್ ನಗರದಿಂದ ಚಾರಣಕ್ಕೆ ಬಂದಿದ್ದ 7 ಚಾರಣಿಗರ ಪೈಕಿ ಇಬ್ಬರ ಆರೋಗ್ಯವು ಬಿಗಡಾಯಿಸಿ ಅವರನ್ನು ಮರಳಿ ಊಖಿಮಠದೆಡೆಗೆ ಕಳುಹಿಸಿದ್ದರು. ಆ ಚಾರಣಿಗರಿಗೆ ಆಕಾಶ ಕಾಮಿನಿಯಿಂದ ಬೆಟ್ಟವನ್ನು ಹತ್ತುವ ಸಮಯದಲ್ಲೇ ವಿಪರೀತ ಆಯಾಸವಾಗಿ ಉಸಿರಾಟದಲ್ಲಿ ತೀವ್ರ ಏರು ಪೇರಾಗಿತ್ತು. ಅವರನ್ನು ಕರೆತರಲು ಮಾರ್ಗದರ್ಶಿ ಎಲ್ಲರನ್ನೂ ಬಿಟ್ಟು ತಾವೊಬ್ಬರೇ ಎರಡು ಗಂಟೆಗಳ ಕಾಲ ಶ್ರಮ ಪಡಬೇಕಾಯಿತು. ಸಂಜೆ ಆಗುತ್ತಿದ್ದಂತೆ ಆ ಚಾರಣಿಗರ ರಕ್ತದಲ್ಲಿ ಆಮ್ಲಜನಕದ ಮಟ್ಟವು ತೀವ್ರವಾಗಿ ಕುಸಿದು ಉಸಿರಾಡಲು ತೀವ್ರ ಕಷ್ಟವಾಗಿ ಅವರನ್ನು ಚೋಪ್ಪಾದಿಂದ ಊಖಿಮಠಕ್ಕೆ ಕಳುಹಿಸಲಾಯಿತು.

ಮೂರನೇ ದಿನ : ಮಾರ್ಚ್ 21, 2017 – ವಿಶ್ರಾಂತಿಯ ದಿನ

ಮಾರ್ಚ್ 21ನೇ ತಾರೀಖು ಎತ್ತರದ ಪ್ರದೇಶದಲ್ಲಿನ ಹವೆಗೆ ಒಗ್ಗಿಕೊಳ್ಳಲು ನಿಗದಿಪಡಿಸಲಾಗಿತ್ತು. ಅದರಂತೆ ರಾತ್ರಿ ಆರಾಮವಾಗಿ ನಿದ್ರೆಯನ್ನು ಮಾಡಿ ಬೆಳಗ್ಗೆ ಸಾವಕಾಶವಾಗಿ ಎದ್ದು ಉಪಹಾರವನ್ನು ಸೇವಿಸಿ ಶಿಬಿರದಿಂದ 3 ಕಿ.ಮೀ ದೂರದ ನಂದಾದೇವಿ ವೀಕ್ಷಣಾ ಸ್ಥಳಕ್ಕೆ ಹೊರಟೆವು. ಮೊದಲಿಗೆ ಸ್ವಲ್ಪದೂರ ಹಿಮ ಹಾದಿಯಲ್ಲಿ ನಡೆದು ರಸ್ತೆ ತಲುಪಿ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಸವಿಯುತ್ತ ನಡೆದೆವು. ಬರು ಬರುತ್ತಾ ಬಿಸಿಲು ಹೆಚ್ಚಾಗಿ ಮೂರು ಕಿ.ಮೀ ನಡೆದ ಮೇಲೆ ನಾನು ಮಾರ್ಗದರ್ಶಿಗೆ ಇಷ್ಟೇ ಸಾಕೆಂದು ತಿಳಿಸಿದೆ. ಅದರಂತೆ ಅವರು ಎಲ್ಲರನ್ನೂ ಮರಳಿ ಶಿಬಿರದೆಡೆಗೆ ಹೋಗುವಂತೆ ಆದೇಶಿಸಿದರು. ಮಧ್ಯಾಹ್ನ ಊಟದ ನಂತರ ಸ್ವಲ್ಪ ಹೊತ್ತು ವಿಶ್ರಾಂತಿಯ ನಂತರ ಸಂಜೆ 4.30ಕ್ಕೆ ಚಹಾ ನಂತರ ಎಲ್ಲರಿಗೂ Gaiters (ಪಾದಗಳನ್ನು ಮತ್ತು ಕಾಲುಗಳನ್ನು ತೇವಾಂಶ ಅಥವಾ ಶಿಲಾಖಂಡರಾಶಿಗಳಿಂದ ರಕ್ಷಿಸುವುದು ಅಥವಾ ವಾಕಿಂಗ್ ಮಾಡುವಾಗ.)

ಹಾಗೂ Micro Spikes (ಹಿಮಾವೃತ ಮತ್ತು ಪ್ಯಾಕ್ ಮಾಡಿದ ಹಿಮ ಮೇಲ್ಮೈಗಳ ಮೇಲೆ ಚಾರಣಿಗನ ಹಿಡಿತವನ್ನು ಹೆಚ್ಚಿಸುವದು)ಗಳನ್ನು ನೀಡಿ ಮಾರ್ಗದರ್ಶಕರು ಅವುಗಳನ್ನು ಹೇಗೆ ಧರಿಸಿಕೊಳ್ಳಬೇಕೆಂದು ತಿಳಿಸಿದರು. ನನಗೆ ಇದು ಹೊಸದೇನಲ್ಲ. ಉಳಿದವರಿಗೆ ಇದು ಹೊಸದಾಗಿತ್ತು. ಅವುಗಳನ್ನು ಧರಿಸಿ ಹಿಮದ ಮೇಲೆ ನಡೆದಾಡಿ, ಅಭ್ಯಾಸ ಮಾಡಿಕೊಂಡೆವು.

ನಾಲ್ಕನೇ ದಿನ : ಮಾರ್ಚ್ 23 2017 – ಚೋಪ್ತಾ ಕ್ಯಾಂಪ್– ತುಂಗನಾಥ್ ಮಾರ್ಗವಾಗಿ ಚಂದ್ರಶಿಲಾ ಶಿಖರ ತಲುಪಿ ಮರಳಿ ಚೋಪ್ತಾ ಕ್ಯಾಂಪಿಗೆ ಬರುವುದು. ಒಟ್ಟು 8 ಕಿ.ಮೀ ಚಾರಣ

23ನೇ ಮಾರ್ಚ್ ನಮ್ಮ ಚಾರಣದ ಕೊನೆಯ ದಿನ. ಅಂದು ಚಂದ್ರಶಿಲಾರೋಹಣ ಮಾಡಬೇಕಾಗಿತ್ತು. ಚಂದ್ರಶಿಲೆಗೆ ತುಂಗನಾಥ ಮಂದಿರದ ಮೂಲಕ ಹೋಗಬೇಕು. ಮಾರ್ಗವು ತುಂಬಾ ಹಿಮದಿಂದ ಆವೃತವಾಗಿರುತ್ತದೆಂದು ಮಾರ್ಗದರ್ಶಿಯು ತಿಳಿಸಿದ್ದರು. ಶಿಬಿರದಿಂದ ತುಂಗನಾಥ ಮಂದಿರ 2.5 ಕಿ.ಮೀ ಸಂಪೂರ್ಣ ಹಿಮಾವೃತವಾಗಿದ್ದು ಅಲ್ಲಿಂದ 1.5 ಕಿ.ಮೀ ಮಾರ್ಗ ಅತಿ ಹೆಚ್ಚಿನ ಹಿಮದಿಂದ ಕೂಡಿದ ತೀವ್ರ ಆರೋಹಣ. ಅದರಂತೆ ಸೂರ್ಯೋದಯಕ್ಕೆ ಮುಂಚೆಯೇ 4.30ಕ್ಕೆ ಶಿಬಿರದಿಂದ ಹೊರಡಬೇಕೆಂದು ತಿಳಿಸಿದ್ದರು. ಏಕೆಂದರೆ ಆ ಸಮಯದಲ್ಲಿ ಹಿಮವು ಸ್ವಲ್ಪ ಗಟ್ಟಿಯಾಗಿರುವುದರಿಂದ ನಡೆಯುವುದು ಸುಲಭ, ಇಲ್ಲದಿದ್ದಲ್ಲಿ ಬಿಸಿಲಿನಲ್ಲಿ ಹಿಮವು ಕರಗಿದರೆ ಮಾರ್ಗವು ತೀವ್ರ ಜಾರುವಿಕೆಯಿಂದ ಕೂಡಿರುತ್ತದೆ. ಅದರಂತೆ ಎಲ್ಲರೂ ಬೆಳಗ್ಗೆ 3 ಗಂಟೆಗೆ ಎದ್ದು ನಾಲ್ಕಕ್ಕೆ ಬೆಳಗಿನ ಉಪಹಾರ ಸೇವಿಸಿ ಜೊತೆಗೆ ಹಣ್ಣು , ಬಿಸ್ಕತ್ ಗಳನ್ನು ಹೆಗಲು ಚೀಲದಲ್ಲಿ ಹಾಕಿಕೊಂಡು ತಲೆ ದೀಪ (Head torch) ಧರಿಸಿ ಚಾರಣ ಪ್ರಾರಂಭಿಸಿ ಒಂದು ಗಂಟೆ ಹಿಮದ ಮೇಲೆ ನಡೆದ ಮೇಲೆ ಬೆಳಗಾಗಿ ಹಿಮಾವೃತ ಮಾರ್ಗದಲ್ಲಿ ಬೆಟ್ಟವನ್ನೇರತೊಡಗಿದೆವು.

ಸುಮಾರು 7.45ಕ್ಕೆ ತುಂಗನಾಥನ ಮಂದಿರ ತಲುಪಿ ಮಾರ್ಗದರ್ಶಿಯ ಸೂಚನೆಯಂತೆ ತುಂಗನಾಥ ಮಂದಿರಕ್ಕೆ ಹೋಗದೆ ಚಂದ್ರಶಿಲೆಯೆಡೆಗೆ ಹತ್ತತೊಡಗಿದೆವು. 7.45ರ ಹೊತ್ತಿಗೆ ನಾವು ತುಂಗನಾಥ ಮಂದಿರದೆಡೆಗೆ ಬಂದಾಗ ಬಿಸಿಲು ಚುರುಕಾಗಿತ್ತು ಹಾಗೂ ಹಿಮದ ಮೇಲೆ ಅದರ ಪ್ರತಿಫಲನೆಯು ನಮ್ಮ ಕಣ್ಣುಗಳಿಗೆ ತೊಂದರೆಯಾಗುವುದರಿಂದ ತಂಪು ಕನ್ನಡಕ ಧರಿಸಿ ಚಂದ್ರಶಿಲೆಯೆಡೆ ಹತ್ತತೊಡಗಿದೆವು.

ಮಾರ್ಗವು ಅತ್ಯಂತ ಕಡಿದಾಗಿ ಪುಡಿಪುಡಿಯಾದ ಹಿಮದಿಂದ ಕೂಡಿತ್ತು. ಕಾಲುಗಳು ಹಿಮದೊಳಗೆ ಹೂತುಹೋಗುತ್ತಿತ್ತು. ಕಷ್ಟಪಟ್ಟು ಹತ್ತತೊಡಗಿದೆವು. ಸುಮಾರು 45 ನಿಮಿಷ ಹತ್ತುವುದು ಕೂಡ ಕಷ್ಟದಿಂದ ಕೂಡಿತ್ತು. ಕೆಲವು ಕಡೆ ತಾಂತ್ರಿಕ ಮಾರ್ಗದರ್ಶಿ ಕೈ ಹಿಡಿದು ಹತ್ತಿಸಿದರು. ನಂತರದ 15 ನಿಮಿಷಗಳ ಮಾರ್ಗ ಹಿಮದಿಂದ ಕೂಡಿದ್ದರೂ ನಡೆಯಲು ಕಷ್ಟವಾಗಲಿಲ್ಲ. ಕಡೆಗೆ 8.45ಕ್ಕೆ ಶಿಖರ ತಲುಪಿದಾಗ ಸಂತೋಷವಾಯಿತು. ಅಸಾಧ್ಯವೆಂದುಕೊಂಡಿದ್ದನ್ನು ಸಕಾರಾತ್ಮಕ ಚಿಂತನೆಯಿಂದ ಹಾಗೂ ಧೃಢಮನಸ್ಸಿನಿಂದ ಸಾಧಿಸಿದೆವು. ಇದು ನನಗೆ ಅತ್ಯಂತ ಸಂತೋಷ ನೀಡಿತು.

ಶಿಖರದ ತುದಿಯಲ್ಲಿ ಕೆಲವರು ಕೊಟ್ಟ ಸಿಹಿಯನ್ನು ತಿಂದು ನೀರನ್ನು ಕುಡಿದು ವಿಶ್ರಾಂತಿಯ ನಂತರ ತಾಂತ್ರಿಕ ಮಾರ್ಗದರ್ಶಿ ಸುತ್ತಲಿನ ಪರ್ವತ ಶಿಖರಗಳ ಪರಿಚಯ ಮಾಡಿಕೊಟ್ಟರು. ಅದರಂತೆ ನಂದಾದೇವಿ, ತ್ರಿಶೂಲ್, ನಂದಗುಂಟಿ, ಕಾಮೆಟ್, ದ್ರೋಣಗಿರಿ, ಚೌಖಾಂಬಾ, ಕೇದಾರ ಡೂಮ್, ತಲೈಸಾಗರ, ಜಹಾನುಕೂಟ್, ರಾವಣಶಿಲಾ ಹಾಗೂ ಗಂಗೋತ್ರಿ ಪರ್ವತ ಶ್ರೇಣಿಗಳನ್ನು ವೀಕ್ಷಿಸಿದೆವು.

ಸುಮಾರು 10.15 ಗಂಟೆಗೆ ತುಂಗನಾಥ ಮಂದಿರದೆಡೆಗೆ ಇಳಿದು ಹೋಗಲು ಮಾರ್ಗದರ್ಶಿ ಸೂಚಿಸಿದರು. ನಾನು ಎಲ್ಲರಿಗಿಂತ ಮುಂಚಿತವಾಗಿ ಅಲ್ಲಿಂದ ಇಳಿಯತೊಡಗಿದೆ. ಕೆಲವು ಕಡೆ ಕುಳಿತು ಜಾರುಬಂಡೆಯಲ್ಲಿ ಜಾರುವಂತೆ ಜಾರುತ್ತ ತುಂಗನಾಥನ ಮಂದಿರ ತಲುಪಿದೆ. ಈ ಅನುಭವ ಸಂತೋಷ ತಂದಿತು.

ಸಾಮಾನ್ಯವಾಗಿ ಯಾವುದೇ ಚಾರಣದಲ್ಲೂ ಗುರಿ ತಲುಪಿದನಂತರ ಮರಳಿ ಶಿಬಿರದೆಡಗಿನ ಮರುಪ್ರಯಾಣವು ನೀರಸವಾಗಿರುತ್ತದೆ. ಇಲ್ಲೂ ಕೂಡ ಹಾಗೇ ಆಗಿತ್ತು. ನಾನು ತುಂಗನಾಥ ಮಂದಿರದಿಂದ ಇಳಿದು ಮೊದಲಿಗೆ ನಡೆಯತೊಡಗಿದೆ. ಇಳಿಯುವುದು ಕೆಲವು ಕಡೆ ಸ್ವಲ್ಪ ಕಷ್ಟವಾಗಿತ್ತು. ಎಷ್ಟು ನಡೆದರೂ ರಸ್ತೆ ಕಾಣಿಸದೆ ನನ್ನ ಜೊತೆ ಯಾರೂ ಇರಲಿಲ್ಲವಾದ್ದರಿಂದ ಕೆಲವು ಕಡೆ ಮಾರ್ಗವನ್ನು ಬೇರೆಯವರಲ್ಲಿ ಕೇಳಿಕೊಂಡು ಸರಿಯಾದದ್ದೆಂದು ಖಚಿತಪಡಿಸಿಕೊಳ್ಳಬೇಕಾಯಿತು. ನಾನು ನಿಧಾನವಾಗಿ ನಡೆದು ಶಿಬಿರವನ್ನು 1.15 ಕ್ಕೆ ತಲುಪಿದೆ. ನಂತರ ಉಳಿದ ಚಾರಣಿಗರು ನಿಧಾನವಾಗಿ ಬಂದರು. ಮಧ್ಯಾಹ್ನದ ಊಟ ರುಚಿಕರವಾಗಿತ್ತು. ನಂತರ ಎಲ್ಲರೂ ಶಿಬಿರದ ಸುತ್ತಮುತ್ತ ಅಡ್ಡಾಡತೊಡಗಿ ಸಂಜೆಗೆ ಮಳೆ ಬರತೊಡಗಿ ಎಲ್ಲರೂ ಶಿಬಿರದೊಳಗೆ ಸೇರಿ ಸ್ವಲ್ಪ ಹೊತ್ತು ಮಲಗಿ ಮಳೆ ನಿಂತ ಮೇಲೆ ಹೊರಬಂದು ಕೆಲವರು ಚಾರಣಕ್ಕೆಂದೆ ಕೊಟ್ಟಿದ್ದ ನೀಲಿ ಬಣ್ಣದ ಅಂಗಿ ಧರಿಸಿ ಫೋಟೋ ತೆಗೆಸಿಕೊಂಡರು.

ಚಾರಣ ಮುಗಿದ ನಂತರದ ಕೆಲವು ಅನುಭವಗಳು / ಪ್ರಸಂಗಗಳು

24 ಮಾರ್ಚ್, ಶುಕ್ರವಾರ ಬೆಳಗ್ಗೆ ಉಪಹಾರದ ನಂತರ ನಾವು 8 ಮಂದಿ ಚಾರಣಿಗರು 8.30ಕ್ಕೆ ಚೋಪ್ತಾದಿಂದ ಹರಿದ್ವಾರದೆಡೆಗೆ ಹೊರಟೆವು. ಸುಮಾರು 8 ಕಿ.ಮೀ ಪ್ರಯಾಣದ ನಂತರ ನಮ್ಮ ವಾಹನ ಎದುರಿನಿಂದ ಬರುತ್ತಿರುವ ದೊಡ್ಡ ವಾಹನವು ಕೆಸರಿನಲ್ಲಿ ಸಿಕ್ಕಿಕೊಂಡು ರಸ್ತೆಗೆ ಅಡ್ಡಲಾಗಿ ನಿಂತಿದ್ದು ಮುಂದೆ ಹೋಗಲಾಗಲಿಲ್ಲ. ಸುಮಾರು ವಾಹನಗಳು ನಮ್ಮ ಕಡೆಯಿಂದ ಹಾಗೂ ಎದುರು ಕಡೆಯಿಂದ ಬಂದು ನಿಂತಿದ್ದವು. ಅರ್ಧ ಮುಕ್ಕಾಲು ಗಂಟೆಯ ನಂತರ ಒಂದು ಜೆ.ಸಿ.ಬಿ. ವಾಹನ ಅಲ್ಲಿಗೆ ಬಂದು ಸಿಕ್ಕಿಕೊಂಡಿದ್ದ ವಾಹನವನ್ನು ಕೆಸರಿನಿಂದ ಹೊರಗೆ ಎಳೆದ ನಂತರ ನಮ್ಮ ಪ್ರಯಾಣ ಮುಂದುವರೆಯಿತು.

ಹರಿದ್ವಾರವನ್ನು ತಲುಪಿದ ನಂತರ ಗಂಗಾ ಸ್ನಾನವನ್ನು ಮಾಡೋಣವೆಂದು ಸಲಹೆಯನ್ನಿತ್ತೆ. ಅದರಂತೆ ಎಲ್ಲರೂ ಗಂಗಾ ಸ್ನಾನ ಮಾಡಿದೆವು. ಮಾರನೇದಿನ ಬೆಳಗ್ಗೆ ಮತ್ತೆ ಗಂಗಾ ಸ್ನಾನ ಮಾಡಿ ತಿಂಡಿ ತಿಂದು ಕೇಬಲ್ ಕಾರಿನ ಮೂಲಕ ಮಾನಸಾದೇವಿ ಮಂದಿರ ತಲುಪಿ ದೇವಿ ದರ್ಶನ ಮಾಡಿ ಸಂಜೆ ನಾಲ್ಕು ಗಂಟೆಗೆ ಹರ್‌ಕೀಪುರಿಯಲ್ಲಿನ ಗಂಗಾರತಿಯನ್ನು ವೀಕ್ಷಿಸಿದೆವು. ಈ ಕಾರ್ಯಕ್ರಮವು ಎಲ್ಲರಿಗೂ ಬಹಳ ಸಂತೋಷವನ್ನು ನೀಡಿತು.

ಕುವರಿ ಪಾಸ್ ಚಾರಣದ ಅನುಭವಗಳು

ಹಿಮಾಲಯದ "ಕುವರಿ ಪಾಸ್ ಶಿಖರ"ದ ಚಾರಣ ಮಾಡಲು ನಾನು ಬಹಳ ದಿವಸದಿಂದ ಕಾಯುತ್ತಿದ್ದೆ. ಇದನ್ನು ಎರಡು ಸಂದರ್ಭದಲ್ಲಿ ಚಾರಣ ಮಾಡಬಹುದು. ಚಳಿಗಾಲ ಹಾಗೂ ಮಳೆಗಾಲ ಕಳೆದ ನಂತರದಲ್ಲಿ. ಚಳಿಗಾಲದಲ್ಲಿ ಚಾರಣ ಮಾಡಿದರೆ ಹಾದಿ ಹಿಮಾವೃತವಾಗಿರುತ್ತದೆ. ಮಳೆಗಾಲ ಕಳೆದನಂತರದ ಚಾರಣ ಮಾಡಿದರೆ ಹಾದಿ, ಇಡೀ ಪರ್ವತ ಹಸಿರು ಸೀರೆಯನ್ನುಟ್ಟಂತೆ ಕಂಗೊಳಿಸುತ್ತಿರುತ್ತದೆ. ಚಾರಣ ಮಾಡಲು INDIA HIKES (IH) ಚಾರಣ ಸಂಸ್ಥೆಯ ಮೂಲಕ 2017, ಸಪ್ಟೆಂಬರ್ 24ರಿಂದ 30 ರ ವರೆಗೆ ಹೋಗಲು ತೀರ್ಮಾನಿಸಿ ಅದರಲ್ಲಿ ಸ್ಥಳವನ್ನು ಕಾಯ್ದಿರಿಸಿದೆ. ಬೆಂಗಳೂರಿನಿಂದ ದೆಹಲಿಗೆ ಹಾಗೂ ಅಲ್ಲಿಂದ ಮರಳಲು ವಿಮಾನದಲ್ಲಿ ಪಯಣಿಸಲು ತೀರ್ಮಾನಿಸಿ ಅದರಂತೆ ಪ್ರಯಾಣದ ಚೀಟಿಯನ್ನು ಖರೀದಿಸಿದೆ. ದೆಹಲಿ-ಹರಿದ್ವಾರಕ್ಕೆ ರೈಲಿನಲ್ಲಿ ಸ್ಥಳವನ್ನು ಕಾಯ್ದಿರಿಸಿದೆ. ಚಾರಣ ಮಾಡುವ ಮೊದಲು ಅನುಸರಿಸಬೇಕಾದ ನಿಯಮಗಳನ್ನು ನನ್ನೊಂದಿಗೆ ಬರಲಿರುವ ಸ್ನೇಹಿತ ವೆಂಕಟಸುಬ್ಬಯ್ಯ ಅವರಿಗೆ ವಿವರಿಸಿದ್ದೆ.

ಸಪ್ಟೆಂಬರ್ 23 ರಂದು ಬೆಳಗಿನ ವಿಮಾನದಲ್ಲಿ ದೆಹಲಿ ತಲುಪಿ ಅಲ್ಲಿಂದ ಹರಿದ್ವಾರವನ್ನು ರೈಲಿನ ಮೂಲಕ ರಾತ್ರಿ 8ಕ್ಕೆ ತಲುಪಿದೆವು. ಮೊದಲೇ ಕಾಯ್ದಿರಿಸಿದ್ದ IRCTC ತಂಗು ಕೋಣೆಯಲ್ಲಿ ರಾತ್ರಿ ಕಳೆದೆವು.

24ರ ಬೆಳಗ್ಗೆ 5 ಘಂಟೆಗೆ ಎದ್ದು ಬಿರ್ಲಾ ಘಾಟಿಗೆ ಹೋಗಿ ಗಂಗಾ ಸ್ನಾನ ಮಾಡಿ ನಂತರ 6.30ಕ್ಕೆ ರೈಲು ನಿಲ್ದಾಣದ ಮುಂಭಾಗದಲ್ಲಿ ನಮಗಾಗಿ ಕಾಯುತ್ತಿದ್ದ ಉಳಿದ 7 ಜನರ ಪರಿಚಯದ ನಂತರ ಔಳಿ (AULI) ಕಡೆಗೆ ನಮ್ಮ ಪ್ರಯಾಣವನ್ನು ಪ್ರಾರಂಭಿಸಿ ದಾರಿಯಲ್ಲಿ ಒಂದು ಹೋಟೆಲಿನಲ್ಲಿ ಬಿಸಿ ಬಿಸಿ ಆಲೂ ಪರಾಠ ತಿಂದು ನಂತರ 10.30ರ ಹೊತ್ತಿಗೆ ದೇವಪ್ರಯಾಗ ತಲುಪಿ ನಾವಿಬ್ಬರೂ ಕೆಳಗಿಳಿದು

ನದಿಯ ಮೇಲಿನ ಸೇತುವೆ ದಾಟಿ ಅಲಕನಂದಾ ಹಾಗೂ ಭಾಗೀರಥಿ ಸಂಗಮ ತಲುಪಿ ದೇವಪ್ರಯಾಗದಲ್ಲಿನ ದೇವಸ್ಥಾನಕ್ಕೆ ಹೋಗಿ ವಿಷ್ಣುವಿನ ದರ್ಶನ ಪಡೆದೆವು.

ನಂತರ 3.30 ಕ್ಕೆ ಊಟ ಮಾಡಿ ಎರಡು ಘಂಟೆ ತಡವಾಗಿ ರಾತ್ರಿ 8ಕ್ಕೆ ಕತ್ತಲಿನಲ್ಲೇ ದಾರಿಯನ್ನು ಹುಡುಕಿಕೊಂಡು ಔಳಿ ಬಿಡಾರ ತಲುಪಿದೆವು. ಊಟದ ಡೇರೆಯಲ್ಲಿ ಚಾರಣದ ನಾಯಕ ಹಾಗೂ ಮಾರ್ಗದರ್ಶಕರ ಪರಿಚಯ ಹಾಗೂ ಎಲ್ಲ ಚಾರಣಿಗರ ಪರಿಚಯದ ನಂತರ ರಾತ್ರಿಯ ಊಟ ಮಾಡಿದೆವು. ನಮ್ಮ ತಂಡದಲ್ಲಿ ನಾನು ಹಾಗೂ ಮತ್ತೊಬ್ಬ ಚಾರಣಿಗರನ್ನು ಬಿಟ್ಟರೆ ಉಳಿದ 7 ಮಂದಿ ಮೊದಲ ಚಾರಣಮಾಡಲು ಹಿಮಾಲಯದೆಡೆಗೆ ಬಂದಿದ್ದರು ಹಾಗೂ ಉತ್ಸಾಹ ಮತ್ತು ಕುತೂಹಲ ಉಳ್ಳವರಾಗಿದ್ದರು. ಚಾರಣದ ನಾಯಕರು ನಾವುಗಳು ಚಾರಣದಲ್ಲಿ ನೋಡಬಹುದಾದ ಶಿಖರಗಳ ಬಗ್ಗೆ ಸ್ವಲ್ಪ ಮಾಹಿತಿ ನೀಡಿದರು.

ಅದರಂತೆ ನಾವುಗಳು ವೀಕ್ಷಿಸಬಹುದಾದ ಶಿಖರಗಳೆಂದರೆ:

ಕ್ರ ಸಂ	ಪ್ರದೇಶ	ಎತ್ತರ (ಮೀಟರ್‌ಗಳಲ್ಲಿ)
1	ನಂದಾದೇವಿ	7818
2	ದೂನಾಗಿರಿ	7066
3	ಹಾತಿ ಪರ್ವತ	6727
4	ಕಾಮೆಟ್ ಪರ್ವತ	7756
5	ಕಳಂಕ	6932
6	ಚೌಂಖಾಂಬಾ 1ರಿಂದ 4	7138
7	ಚಾಂಗ್ ಬಾಂಗ್ (ಹೊಳೆಯುವ ಪರ್ವತ)	6864
8	ನೀಲಕಾಂತ್	6596
9	ಋಷಿಪಹಾಡ್	6992
10	ಮೃಗುತನಿ	6565
11	ತ್ರಿಶೂಲ್	7210

ಮೊದಲ ದಿನ : 25 ಸೆಪ್ಟೆಂಬರ್ 2017 : Auli ಯಿಂದ ಗೋಡ್ಸನ್ ಕ್ಯಾಂಪವರೆಗೂ ಚಾರಣ – 9184 ಅಡಿಯಿಂದ 10500 ಅಡಿ ಎತ್ತರದವರೆಗಿನ ಚಾರಣ

ಭಾನುವಾರ ಬೆಳಗ್ಗೆ 8.30ಕ್ಕೆ ಚಾರಣ ಪ್ರಾರಂಭಿಸಿದಾಗ ತೀವ್ರ ಏರು ದಾರಿ ಹಾಗೂ ಮೆಟ್ಟಿಲುಗಳ ಹಾದಿ ನಮಗೆ ಎದುರಾಯಿತು. ಇದು ಕೆಳಗಿನಿಂದ ಮೇಲಕ್ಕೆ ಜನಗಳನ್ನು ಕರೆದೊಯ್ಯುವ CABLE CARನ ಎತ್ತರದ ಕಡೆಯ ನಿಲ್ದಾಣದವರೆಗೂ ಹತ್ತಬೇಕಿತ್ತು. ಅಲ್ಲಿ ಒಂದು ಗಾಜಿನ ಕೋಣೆ ನಮಗೆದುರಾಯಿತು. ಇಲ್ಲಿ ಎಲ್ಲರೂ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಮತ್ತೆ ಹತ್ತಲು ಪ್ರಾರಂಭಿಸಿದೆವು. ಅರ್ಧ ಘಂಟೆಯ ನಂತರ ಗೋಡ್ಸನ್ ಹುಲ್ಲುಗಾವಲು ಎದುರಾಯಿತು. ಇದಕ್ಕೆ ಮೊದಲು ನಾವು ಒಂದು ಕೃತಕ ಕೊಳ ವೀಕ್ಷಿಸಿದೆವು. ಇದರ ಹೆಸರು (**AULI ARTIFICIAL POND**). ಈ ಕೊಳ ಉತ್ತರಾಖಂಡ ಸರ್ಕಾರ ಕೃತಕ ಹಿಮವನ್ನು ಸೃಷ್ಟಿಸುವ ಸಲುವಾಗಿ ಸ್ಥಾಪಿಸಿದೆ, ಹಾಗೂ ಇದು ಪ್ರಪಂಚದ ಅತಿ ಎತ್ತರದ ಪ್ರದೇಶದಲ್ಲಿನ ಕೃತಕ ಕೊಳ. ಈ ಪ್ರದೇಶವು skiing ಕ್ರೀಡೆಗೆ ಅತ್ಯಂತ ಪ್ರಶಸ್ತ ಸ್ಥಳವಾಗಿದ್ದು ಪ್ರತಿ ಚಳಿಗಾಲದಲ್ಲೂ ನೂರಾರು ಕ್ರೀಡಾ ಪ್ರೇಮಿಗಳು ಇಲ್ಲಿಗೆ ಬರುವರು. ಯಾವುದೇ ಚಳಿಗಾಲದಲ್ಲೂ ಹಿಮದ ಕೊರತೆಯುಂಟಾದಾಗ ಈ ಕೊಳದ ನೀರನ್ನು ಉಪಯೋಗಿಸಿಕೊಂಡು ಕೃತಕ ಹಿಮ ಸೃಷ್ಟಿಮಾಡುವರು. ಇದರಿಂದ ಹಿಮಪಾತ ಕಡಿಮೆ ಆದಾಗ ಕೃತಕ ಹಿಮವನ್ನು ಹೊರಗೆ ಚೆಲ್ಲುತ್ತಾರೆ. ಹಾಗಾಗಿ ಪ್ರವಾಸಿಗರು ಸುಲಭವಾಗಿ ಜಾರುವ ಅನುಭವ ಪಡೆಯುತ್ತಾರೆ ಎಂದು ತಿಳಿದುಬಂದಿತು. ಇಲ್ಲಿಂದ ನಾವು 2000 ಅಡಿ ಎತ್ತರದ ಹಾದಿಯಲ್ಲಿ ಸುಮಾರು ಒಂದು ಘಂಟೆ ಹತ್ತಿದನಂತರ ದೇವದಾರು ವೃಕ್ಷದ ದಟ್ಟವಾದ ಕಾಡನ್ನು ಪ್ರವೇಶಿಸಿ ಕಾಡೊಳಗೆ ಒಂದು ಎತ್ತರದ ಪ್ರದೇಶದಲ್ಲಿರುವ ಸಣ್ಣ ಗುಡಿಯನ್ನು ತಲುಪಿದೆವು. ಈ ಗುಡಿಯಲ್ಲಿ ನಂದಾದೇವಿಯ ವಿಗ್ರಹವನ್ನು ನೋಡಿದೆವು. ಅಲ್ಲಿಯೇ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದೆವು. ಈ ಸಮಯದಲ್ಲಿ ನಾನು ಚಾರಣ ನಾಯಕರನ್ನು ರೂಪಕುಂಡದಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ನಂದಾದೇವಿಯ ಜಾತ್ರೆಯ ಬಗ್ಗೆ ಎಲ್ಲರಿಗೂ ವಿವರಿಸುವಂತೆ ವಿನಂತಿಸಿಕೊಂಡೆ. ಅವರು ವಿವರವಾಗಿ ಎಲ್ಲರಿಗೂ ತಿಳಿಸಿದರು. ಅಲ್ಲಿಂದ ಮಧ್ಯಾಹ್ನ 1.30ಕ್ಕೆ ನಾವು 10500 ಅಡಿ ಎತ್ತರದ ಗೋಡ್ಸನ್ ಹುಲ್ಲುಗಾವಲಿನ ಶಿಬಿರ ತಲುಪಿದೆವು.

ಮಧ್ಯಾಹ್ನದ ಬಿಸಿ ಊಟದ ನಂತರ ಸ್ವಲ್ಪ ವಿಶ್ರಾಂತಿ ಪಡೆದು ಸಂಜೆಯವರೆಗೂ ಹುಲ್ಲುಗಾವಲಿನಲ್ಲಿ ಬಹಳ ದೂರದವರೆಗೆ ನಾನು ಹಾಗೂ ವೆಂಕಟಸುಬ್ಬಯ್ಯ ನಡೆದಾಡಿದೆವು. ಇಲ್ಲಿಂದ ನೇರವಾಗಿ ನಮಗೆ ಹಾತಿ ಗೋಡಾ ಪರ್ವತ ಕಾಣಿಸುತ್ತಿತ್ತು. ಸ್ವಲ್ಪ ಹೊತ್ತಿಗೆ ಈ ಪರ್ವತವನ್ನು ಮೋಡಗಳು ಮರೆಮಾಡತೊಡಗಿದವು.

ಹಾಗೆಯೇ 4.30ಕ್ಕೆ ಮಳೆಯೂ ಶುರುವಾಯಿತು. ನಾವುಗಳೆಲ್ಲರೂ ಡೇರೆಯೊಳಗೆ ನುಸುಳಿ ಮಳೆ ನಿಲ್ಲುವವರೆಗೂ ವಿಶ್ರಾಂತಿ ಪಡೆದೆವು. ಅನಂತರ 5ಕ್ಕೆ ಚಹಾ, 6ಕ್ಕೆ ಖಾರವಾದ ಸೂಪ್ ಕುಡಿದು ಕತ್ತಲಿನಲ್ಲಿ 7ಕ್ಕೆ ರಾತ್ರಿ ಊಟ ಮಾಡಿ ಮಲಗಿದೆವು.

ಎರಡನೇ ದಿನ : 26 ಸಪ್ಟೆಂಬರ್ : ಗೋಡ್ಸನ್ ಕ್ಯಾಂಪಿನಿಂದ ಚಿತ್ರಕಾಂತ ಹುಲ್ಲುಗಾವಲಿನ ಕ್ಯಾಂಪ್‌ವರೆಗಿನ ಚಾರಣ – 10500 ಅಡಿಯಿಂದ 11000 ಅಡಿ ಎತ್ತರದವರೆಗಿನ ಚಾರಣ

ಬೆಳಗ್ಗೆ ಬೇಗನೆ ಎದ್ದು ಶುಭ್ರವಾದ ಆಕಾಶದಲ್ಲಿ ಮತ್ತೊಮ್ಮೆ ಹಾತಿ ಗೋಡಾ ಪರ್ವತ ವೀಕ್ಷಿಸಿ ಅಲ್ಲಿಂದ ಚಿತ್ರಕಾಂತ ಕಾಡಿನೆಡೆಗೆ ಚಾರಣ ಪ್ರಾರಂಭಮಾಡಿದೆವು. ಮೊದಲ ಅರ್ಧ ಘಂಟೆ ಹುಲ್ಲುಗಾವಲಿನಲ್ಲಿ ಹತ್ತಬೇಕಿತ್ತು. ನಿಧಾನವಾಗಿ ನಡೆಯುತ್ತಾ ದಾರಿಯುದ್ದಕ್ಕೂ ಚಾರಣ ನಾಯಕರೊಡನೆ ಮಾತನಾಡುತ್ತಾ ಹೋದೆವು. ಸ್ವಲ್ಪ ಸಮಯದ ನಂತರ ನಾವು KWANI ಹುಲ್ಲುಗಾವಲನ್ನು ಪ್ರವೇಶಿಸಿದೆವು. ಹಲವಾರು ಗುಡ್ಡಗಳನ್ನು ಸುತ್ತಿ ಬಳಸುತ್ತಾ ತೀವ್ರವಾದ ಹಾಗೂ ಕಡಿದಾದ ಹಾದಿಯಲ್ಲಿ ನಡೆಯತೊಡಗಿದೆವು. ಆದರೆ ಅಷ್ಟೇನೂ ಆಯಾಸವಾಗಲಿಲ್ಲ. ಸುಮಾರು ನಾಲ್ಕು ಘಂಟೆ ನಡೆದನಂತರ ಒಂದು ಕಡೆ ಮೇಲಿನಿಂದ ಹರಿದುಬರುತ್ತಿರುವ ನೀರಿನ ತೊರೆಯ ಜಾಗ ತಲುಪಿದೆವು. ಈ ಜಾಗದಲ್ಲಿ ಸುಮಾರು ಅರ್ಧ ಗಂಟೆ ವಿಶ್ರಾಂತಿ ನಂತರ ಮುಂದುವರೆಯಬೇಕೆನ್ನುವಷ್ಟರಲ್ಲಿ ಕುದುರೆಯ ಮೇಲೆ ನಮ್ಮ ಅಡುಗೆ ಸಾಮಾನುಗಳನ್ನು ಸಾಗಿಸುತ್ತಿದ್ದವರಲ್ಲಿ ಒಬ್ಬನು ಚಿತ್ರಕಾಂತ ಕಾಡಿನ ನಂತರದ ಸಮತಟ್ಟಾದ ಜಾಗದ ಬಳಿ ನೀರಿನ ಸೌಕರ್ಯವಿಲ್ಲವೆಂದು ತಿಳಿಸಿದ. ನಮ್ಮ ಮಾರ್ಗದರ್ಶಿ ಸ್ವಲ್ಪ ಸಮಯ ಚಿಂತಾಕ್ರಾಂತರಾದರು. ನಾವೆಲ್ಲರೂ ಅವರಿಗೆ ಸಮಾಧಾನ ಹೇಳಿ ಅಲ್ಲೇ ಹೋಗಿ ತಂಗೋಣವೆಂದೂ ಹಾಗೂ ಕಡಿಮೆ ನೀರನ್ನು ಉಪಯೋಗಿಸೋಣವೆಂದು ತಿಳಿಸಿದೆವು. ಆದರೆ ನಮಗೆ ಆ ಪರಿಸ್ಥಿತಿ ಬರಲಿಲ್ಲ, ಏಕೆಂದರೆ ನಮ್ಮ ಡೇರೆಯ ಹತ್ತಿರದಲ್ಲೇ ನೀರಿನ ಸೌಕರ್ಯವಿರುವುದು ಪತ್ತೆಯಾಯಿತು. ಸುಮಾರು 7.5 ಕಿ.ಮೀ ನಡೆದಮೇಲೆ ನಾವು ಖಿಲ್ಲಾರ ಪ್ರದೇಶಕ್ಕೆ ಹೋಗದೇ ಚಿತ್ರಕಾಂತ ಕಾಡಿನ ಹೊರಗಿನ ಹುಲ್ಲುಗಾವಲಿನಲ್ಲಿ ನಮ್ಮ ಡೇರೆಗಳನ್ನು ಮಧ್ಯಾಹ್ನ 2.00 ಘಂಟೆಗೆ ಸ್ಥಾಪಿಸಿದೆವು. ಏಕೆಂದರೆ ಖಿಲ್ಲಾರ ಪ್ರದೇಶದಲ್ಲಿ ನೀರಿನ ಸೌಕರ್ಯವಿರಲಿಲ್ಲ ಹಾಗೂ ಅಲ್ಲಿಂದ ಪರ್ವತ ಶಿಖರಗಳನ್ನು ವೀಕ್ಷಿಸುವುದು ಅನುಕೂಲಕರವಾಗಿರಲಿಲ್ಲ.

ಮೂರನೇ ದಿನ : 27 ಸಪ್ಟೆಂಬರ್ : ಚಿತ್ರಕಾಂತ ಕ್ಯಾಂಪ್ – ಕುವರಿ ಟಾಪ್
11000 ಅಡಿಯಿಂದ 13000 ಅಡಿ ಎತ್ತರದವರೆಗಿನ ಚಾರಣ

ನನ್ನ ಅನುಭವದ ಪ್ರಕಾರ ಚಿತ್ರಕಾಂತ ಹುಲ್ಲುಗಾವಲು ಅಷ್ಟೇನೂ ಸುಂದರವಾಗಿರಲಿಲ್ಲ. ಅದನ್ನು ಹುಲ್ಲುಗಾವಲು ಎಂದು ಕರೆಯುವ ಹಾಗಿರಲಿಲ್ಲ. ಆದರೂ ಅಲ್ಲಿಂದ ಸುತ್ತಲಿನ ಪರ್ವತ ವೀಕ್ಷಣೆಯು ಅದ್ಭುತವಾಗಿತ್ತು. ಮಧ್ಯಾಹ್ನ ಊಟದ ನಂತರ ಸ್ವಲ್ಪಹೊತ್ತು ಹುಲ್ಲುಗಾವಲಿನಲ್ಲಿ ಸುತ್ತಾಡಿ ಡೇರೆಯೊಳಗೆ ವಿಶ್ರಾಂತಿ ಪಡೆದೆವು. ಸಂಜೆಗೆ ಚಳಿಯು ಶುರುವಾಯಿತು. ರಾತ್ರಿ ಊಟದ ನಂತರ ಎಲ್ಲರೂ ಮಲಗಿದೆವು. ಬೆಳಗಿನ ಝಾವ ಸುಮಾರು 4 ಗಂಟೆಗೆ ಮಳೆ ಶುರುವಾಗಿ ಬೆಳಗ್ಗೆ 8ರ ವರೆಗೂ ಬರುತ್ತಲೇ ಇತ್ತು. ನಂತರ ಮಳೆ ನಿಂತಿತು. 8.45 ಕ್ಕೆ ಕುವರಿ ಟಾಪ್ ಕಡೆಗೆ ಹೊರಟು ಹಾದಿ ಸ್ವಲ್ಪ ಏರಿಳಿತಗಳಿಂದ ಕೂಡಿದ್ದರೂ ಯಾರಿಗೂ ಅಷ್ಟೇನೂ ಆಯಾಸವಾಗಲಿಲ್ಲ. 11.15ಕ್ಕೆ ಕುವರಿ ಟಾಪ್ ಪ್ರದೇಶ ತಲುಪಿದೆವು. ಇದಕ್ಕೆ ಮೊದಲು ನಾವು ಬಾವುಟ ಗುಡ್ಡವನ್ನು ತಲುಪಿ ಅಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನಂತರ ಮುಂದುವರೆದೆವು. ಕುವರಿ ಟಾಪ್ ಪ್ರದೇಶ ಕುವರಿ ಪಾಸ್ ನಲ್ಲಿನ ಅತಿ ಎತ್ತರದ ಪ್ರದೇಶ ಹಾಗೂ ಇದು ಸುಮಾರು 13000 ಅಡಿ ಎತ್ತರದ ಪ್ರದೇಶ. ಇಲ್ಲಿಂದ ಕುವರಿ ಪಾಸ್ ಕಡೆಗೆ ಹೋಗಬೇಕಾದರೆ ಮತ್ತೆ ಒಂದು ಗಂಟೆ ನಡೆಯಬೇಕಿತ್ತು. ನಾವು ಬೆಳಗ್ಗೆ 5.30ಕ್ಕೆ ನಮ್ಮ ಡೇರೆಯಿಂದ ಹೊರಟಿದ್ದರೆ ಕುವರಿ ಪಾಸ್ ಕಡೆಗೆ ಹೋಗಿ ಬರಬಹುದಾಗಿತ್ತು. ಆದರೆ ನಾವು ಸುಮಾರು 3 ಘಂಟೆ ತಡವಾಗಿ ಹೊರಟಿದ್ದರಿಂದ ಕುವರಿ ಪಾಸ್ ಕಡೆಗೆ ಹೋದರೆ ಮರಳಿ ನಮ್ಮ ಬಿಡಾರಕ್ಕೆ ತಲುಪುವುದು ಬಹಳ ತಡವಾಗಬಹುದು ಹಾಗೂ ಪರ್ವತ ಪ್ರದೇಶದಲ್ಲಿ ಸಾಮಾನ್ಯವಾಗಿ ಮಧ್ಯಾಹ್ನ 2 ಗಂಟೆಯ ನಂತರ ಮಳೆಬರುವುದು ವಾಡಿಕೆಯಾದ್ದರಿಂದ ನಮ್ಮ ಮಾರ್ಗದರ್ಶಕರು ಕುವರಿ ಪಾಸ್ ಕಡೆಗೆ ಹೋಗುವುದು ಬೇಡವೆಂದು ನಮಗೆ ತಿಳಿಸಿ ನಮ್ಮ ಒಪ್ಪಿಗೆಯ ನಂತರ ಡೇರೆಕಡೆಗೆ ಮರಳಲು ಸೂಚಿಸಿದರು.

ಕುವರಿ ಟಾಪ್ ನಿಂದ ಮರಳುವ ಮೊದಲು ಚಾರಣ ನಾಯಕರು ಎಲ್ಲರಿಗೂ ಮತ್ತೊಮ್ಮೆ ವಿವರವಾಗಿ ಎಲ್ಲ ಹಿಮಪರ್ವತದ ಶಿಖರಗಳ ಹೆಸರುಗಳನ್ನು ತಿಳಿಸಿ, ಹಾಗೂ ಕುವರಿ ಪಾಸ್ ಶ್ರೇಣಿಯ ಬಗ್ಗೆ ವಿವರ ನೀಡಿದರು. ಅಲ್ಲಿಂದ ರೂಪಕುಂಡದೆಡೆಗೆ ಹೋಗುವ ಚಾರಣ ಹಾದಿಯನ್ನೂ ನಮಗೆ ತೋರಿಸಿದರು. ಆ ಹಾದಿಯಲ್ಲಿ ಹಲವಾರು ಚಾರಣಿಗರು ರೂಪಕುಂಡದೆಡೆಗೆ ಹೋಗುತ್ತಿರುವುದನ್ನು ನೋಡಿದೆವು. ನಂತರ ನಾವು ಯಾವುದೇ ತೊಂದರೆ ಇಲ್ಲದೇ ಬಂದ ಹಾದಿಯಲ್ಲೇ ನಡೆದು 2.15ಕ್ಕೆ ನಮ್ಮ ಬಿಡಾರಕ್ಕೆ ಮರಳಿದೆವು. ಊಟವಾದ ಸ್ವಲ್ಪ ಹೊತ್ತಿನಲ್ಲೇ ಮಳೆ ಶುರುವಾಯಿತು. ಎಲ್ಲರೂ ಬಿಡಾರದೊಳಗೆ ತೂರಿಕೊಂಡು ಹರಟೆ

ಹೊಡೆಯತೊಡಗಿದೆವು. ಸಂಜೆ 7 ಗಂಟೆಯವರೆಗೂ ಮಳೆ ಬರುತ್ತಲೇ ಇದ್ದದ್ದರಿಂದ ನಾವುಗಳು ಚಹಾ ಕುಡಿಯಲು ಹೊರಬರಲಿಲ್ಲ. ನಂತರದ ಸೂಪನ್ನು ನಮ್ಮ ಟೆಂಟ್ ಬಳಿಯೇ ನೀಡಿದರು. ಮಳೆ ನಿಂತಮೇಲೆ ರಾತ್ರಿ ಊಟ ಮುಗಿಸಿ ಎಲ್ಲರೂ ಮಲಗಿದೆವು.

ನಾಲ್ಕನೇ ದಿನ : 28 ಸಪ್ಟೆಂಬರ್ : ಚಿತ್ರಕಾಂತ – ಥಾಕ್ ಹಳ್ಳಿ – 11300 ಅಡಿಯಿಂದ 6750 ಅಡಿವರೆಗಿನ 10 ಕಿ.ಮೀ ಚಾರಣ

ಮಾರನೇ ದಿನ ಬೆಳಗ್ಗೆ ಶುಭ್ರ ಆಕಾಶದೊಡನೆ ಬೆಳಗಿನ ಸೂರ್ಯೋದಯದ ಮೊದಲ ಕಿರಣ ದೂರದ ಹಿಮಪರ್ವತದ ಶಿಖರದ ಮೇಲೆ ಬಿದ್ದು ಬಂಗಾರದ ಬಣ್ಣ ಬಳಿದಿದ್ದನ್ನು ವೀಕ್ಷಿಸಿ ಎಲ್ಲರೂ ಅತ್ಯಂತ ಸಂತೋಷಪಟ್ಟೆವು. ಕಟ್ಟ ಕಡೆಯದಾಗಿ ಮತ್ತೊಮ್ಮೆ ಎಲ್ಲ ಶಿಖರಗಳನ್ನೂ ಮಾರ್ಗದರ್ಶಕರ ಸಹಾಯದಿಂದ ಗುರುತಿಸಿ ತೃಪ್ತಿಪಟ್ಟೆವು.

ಕೊನೆಯ ದಿನದ ಚಾರಣ ಚಿತ್ರಕಾಂತ ಬಿಡಾರದಿಂದ ಥಾಕ್ ಹಳ್ಳಿಯೆಡೆಗೆ 10 ಕಿ.ಮೀ ದೂರದ ಮಾರ್ಗ ಇಳಿಜಾರಿನದ್ದಾಗಿತ್ತು. ಬೆಳಗ್ಗೆ 9ಕ್ಕೆ ಹೊರಟು ಮಧ್ಯಾಹ್ನ 2ಕ್ಕೆ ಥಾಕ್ ಪ್ರದೇಶ ತಲುಪಿದೆವು. ಮೊದಲಿಗೆ ಹಾದಿ ಅರಣ್ಯದೊಳಗೆ ಮಣ್ಣಿನಿಂದಾಗಿತ್ತು. ಚಾರಣ ನಾಯಕ ಅರಣ್ಯದೊಳಗಿನ ಮರಗಿಡಗಳ ಪರಿಚಯ ಮಾಡಿಕೊಡುತ್ತಾ ನಮ್ಮ ಜೊತೆ ನಡೆಯುತ್ತಿದ್ದರು. ಸುಮಾರು ಎರಡು ಘಂಟೆಯ ತೀವ್ರ ಇಳಿಜಾರಿನಿಂದ ಕೂಡಿದ ಹಾದಿ ಕ್ರಮಿಸಿದ ನಂತರ ಸಮತಟ್ಟಾದ ಹುಲ್ಲುಗಾವಲನ್ನು ಪ್ರವೇಶಿಸಿ ಅಲ್ಲಿಯೇ 30 ನಿಮಿಷ ವಿಶ್ರಾಂತಿ ಪಡೆದೆವು.

ನಂತರ ಹಾದಿ ಕಲ್ಲಿನಿಂದ ಕೂಡಿದ ಇಳಿಜಾರಿನದಾಗಿತ್ತು. ಇದೇ ಹಾದಿಯಲ್ಲಿ ಬಹು ದೂರ ನಡೆದನಂತರ ಒಂದು ಹಳ್ಳಿ ಪ್ರವೇಶಿಸಿ ಅಲ್ಲಿಂದ ತೋಟದೊಳಗಿನ ಕಿರಿದಾದ ಹಾದಿಯಲ್ಲಿ ಬಹಳ ಹೊತ್ತು ನಡೆದು ಸುಸ್ತಾಗಿ ಒಂದು ನೀರಿನ ತೊರೆಯ ಬಳಿ ವಿಶ್ರಾಂತಿ ಪಡೆದೆವು. ಅಷ್ಟುಹೊತ್ತಿಗೆ ಕುದುರೆಗಳು ನಮ್ಮ ಮುಂದೆ ಹಾದುಹೋದವು. ನಾನು ಅದರ ಹಿಂದೆಯೇ ಹೊರಟೆ, ಉಳಿದವರು ಇನ್ನೂ ಅಲ್ಲೇ ವಿಶ್ರಾಂತಿ ಪಡೆಯುತ್ತಿದ್ದರು. ಬಹಳ ದೂರದವರೆಗೂ ಕಲ್ಲಿನಿಂದ ಕೂಡಿದ ಹಾಗೂ ಹಲವಾರು ಕಡೆ ಮೆಟ್ಟಿಲನ್ನು ಇಳಿಯುತ್ತಾ ನಡೆಯಬೇಕಿತ್ತು. ಹೀಗೆ ನಡೆಯುತ್ತಾ ರಸ್ತೆ ಮುಗಿಯುವವರೆಗೂ ಹೋದೆ. ನನ್ನ ಜೊತೆ ಇಬ್ಬರು ಚಾರಣಿಗರೂ ಇದ್ದರು. ರಸ್ತೆಯ ಬಲಗಡೆಗೆ ಕೆಳಗೆ ಇರುವ ಮತ್ತೊಂದು ರಸ್ತೆಗೆ ಸಾಹಸದಿಂದ ಇಳಿದು ಅಲ್ಲಿಗೆ ಉಳಿದವರು ಬರುವವರೆಗೂ ಕುಳಿತಿದ್ದೆವು. ಮತ್ತೆ ಅಲ್ಲಿಂದ ಅರ್ಧ ಘಂಟೆ ನಡೆದು ವಾಹನ ನಮ್ಮನ್ನು ಕರೆದೊಯ್ಯುವ ಸ್ಥಳ

ತಲುಪಿದೆವು. ಅಲ್ಲಿಂದ 12 ಕಿ.ಮೀ ದೂರ ನಡೆದನಂತರ ಜ್ಯೋರ್ತಿಮಠ ತಲುಪಿ ಅಲ್ಲಿನ ಕಾಮೆಟ್ ಹೋಟೆಲಿಗೆ ಹೋದೆವು.

ಅಲ್ಲಿಗೆ ಕುವರಿ ಪಾಸ್ ಚಾರಣ ಮುಗಿದಂತಾಯಿತು. ಹೋಟೆಲಿನಲ್ಲಿ ನಮ್ಮ ಕೋಣೆಯನ್ನು ಪ್ರವೇಶಿಸಿ, ಸ್ನಾನ ಮಾಡಿ ವೆಂಕಟಸುಬ್ಬಯ್ಯ ಅವರೊಂದಿಗೆ ಬದರಿ ಕ್ಷೇತ್ರಕ್ಕೆ ಹೋಗಲು ತೀರ್ಮಾನಿಸಿ ಒಂದು ವಾಹನ ಗೊತ್ತುಮಾಡಿಕೊಂಡು ಬದರೀನಾರಾಯಣನ ದರ್ಶನ ಎರಡು ಬಾರಿ ಮಾಡಿ ಧನ್ಯರಾಗಿ ಮರಳಿ

ಜೋತಿರ್ಮಠಕ್ಕೆ ರಾತ್ರಿ 9ಕ್ಕೆ ತಲುಪಿದೆವು. ಮಾರನೇ ದಿನ ಅಲ್ಲಿಂದ ಹೊರಟು ಸಂಜೆಯವೇಳೆಗೆ ಹರಿದ್ವಾರ ತಲುಪಿ ಅದೇ ದಿನ ರಾತ್ರಿ ಒಂದು ಗಂಟೆಗೆ ಹೊರಡುವ ರೈಲಿನಲ್ಲಿ ದೆಹಲಿ ತಲುಪಿ ಅಲ್ಲಿಂದ ಬೆಳಗ್ಗೆ 9.30 ಕ್ಕೆ ಹೊರಡುವ ವಿಮಾನದಲ್ಲಿ ಮಧ್ಯಾಹ್ನ 12.30ಕ್ಕೆ ಬೆಂಗಳೂರನ್ನು ತಲುಪಿದೆವು.

ಕೇದಾರ್‌ಕಾಂತ ಶಿಖರಾರೋಹಣದ ಅನುಭವಗಳು

ಫೆಬ್ರವರಿ ತಿಂಗಳಲ್ಲಿ ಬಿ.ವಿ.ರಮೇಶ್ ಬಂಗಾಳದ ಸಂಡಕ್ಫೂ ಚಾರಣ ಮಾಡುವ ಮೊದಲೇ ನನ್ನ ಗುಜರಾತ್ ರಾಜ್ಯದಲ್ಲಿನ ಕಛ್ ಪ್ರವಾಸದಲ್ಲಿ ಜಯಂತ್ ಅವರಿಗೆ ಮಾತು ಕೊಟ್ಟಂತೆ ಏಪ್ರಿಲ್ ತಿಂಗಳಿನಲ್ಲಿ ಕೇದಾರ್‌ಕಾಂತ ಶಿಖರಾರೋಹಣ ಮಾಡಲು ತೀರ್ಮಾನಿಸಿ ಅದರಂತೆ ಜನವರಿ ತಿಂಗಳಲ್ಲೆ ಇಂಡಿಯಾ ಹೈಕ್ ಸಂಸ್ಥೆಯಲ್ಲಿ ಸ್ಥಳ ಕಾಯ್ದಿರಿಸಿದ್ದೆ. ಹಾಗೂ ಜಯಂತ್ ಅವರೂ ಕೂಡ ತಮ್ಮ ಸ್ಥಳವನ್ನು ಕಾಯ್ದಿರಿಸಿದ್ದರು. ಅದರಂತೆ ನಾನು ಪ್ರಯಾಣಕ್ಕೆ ಸಂಬಂಧಿಸಿದಂತೆ ರೈಲಿನಲ್ಲಿ ಟಿಕೆಟ್ ಬುಕ್ ಮಾಡಿದ್ದೆ.

ಏಪ್ರಿಲ್ 10ರಂದು ಬೆಂಗಳೂರಿನಿಂದ ನವದೆಹಲಿಗೆ ವಿಮಾನದಲ್ಲಿ ಪ್ರಯಾಣಿಸಿ ನಂತರ ಅಲ್ಲಿಂದ ಮಧ್ಯಾಹ್ನ ಜನಶತಾಬ್ದಿ ರೈಲಿನಲ್ಲಿ ಡೆಹರಾಡೂನ್ ಪ್ರಯಾಣಿಸಿ ರಾತ್ರಿ 9.30ಕ್ಕೆ ತಲುಪಿ ರೈಲ್ವೆ ರಿಟೈರಿಂಗ್ ರೂಮಿನಲ್ಲಿ ರಾತ್ರಿಯ ಊಟವನ್ನು ಮುಗಿಸಿ ಮಲಗಿದೆ.

ಮೊದಲ ದಿನ: 11 ಏಪ್ರಿಲ್ 2016 – ಡೆಹಾರಾಡೂನ್ – ಸಾಂಕ್ರಿ (190 ಕಿ.ಮೀ) ಪ್ರಯಾಣ

ಭಾನುವಾರ ಬೆಳಗ್ಗೆ ಬೇಗನೆ ಎದ್ದು ಹೆಗಲ ಚೀಲ ಪ್ಯಾಕ್ ಮಾಡಿ ರೈಲ್ವೆ ನಿಲ್ದಾಣದಿಂದ ನಾವು ನಾಲ್ಕೂ ಚಾರಣಿಗರು ಹೊರಬಂದೆವು. ರೈಲ್ವೆನಿಲ್ದಾಣದ ಎದುರು IH sticker ಹೊಂದಿದ್ದ ನಾಲ್ಕು ವಾಹನ ಗುರುತಿಸಿ ಅದರಲ್ಲಿನ ಒಂದು ವಾಹನದಲ್ಲಿ ನನ್ನ ಹಾಗೂ ಬರೋಡದಿಂದ ಬಂದಿದ್ದ ಜಯಂತ್ ಅವರ ಬ್ಯಾಕ್ ಪ್ಯಾಕ್ ಇರಿಸಿ ಅಲ್ಲಿಗೆ ಆಗಲೇ ಬಂದಿದ್ದ ಕೆಲವು ಚಾರಣಿಗರ ಪರಿಚಯ ಮಾಡಿಕೊಂಡೆವು. ಅನಂತರ ನಾವು ಚಹಾ ಸೇವಿಸಿದೆವು.

ಡೆಹಾರಾಡೂನ್-ಸಾಂಕ್ರಿ 190 ಕಿ.ಮೀ ಪ್ರಯಾಣ ಮುಸ್ಸೋರಿ ಮುಖಾಂತರ ಮನೋಹರವಾಗಿರುವುದೆಂದು ಹೇಳಬೇಕಿಲ್ಲ. ಬೆಳಗಿನ ಪ್ರಯಾಣದಲ್ಲಿ ದಾರಿಯುದ್ದಕ್ಕೂ ಮನಮೋಹಕ ಪೈನ್ ವೃಕ್ಷಗಳು ಸೂರ್ಯಕಿರಣವನ್ನು ತಡೆದು ತಡೆದು ಬಿಡುತ್ತಿರುವುದು ಮತ್ತು ತಂಪಾದ ಗಾಳಿ ನಮ್ಮ ಕೆನ್ನೆಗಳನ್ನು ಸವರುತ್ತಿರುವ ಮೋಹಕ ಮಾರ್ಗದಲ್ಲಿ ಮೊತ್ತ ಮೊದಲಿಗೆ ಪ್ರಯಾಣಿಸುತ್ತಿದ್ದೆವು. ಮಾರ್ಗದಲ್ಲಿ ನಾವು ಸುಂದರ ಹಾಗೂ ಸಣ್ಣದಾದ ನೌಗಾವ್, ಪುರೋಲ, ಮೋರಿ, ನೈಟ್ವಾರ ಹಳ್ಳಿಗಳ ಮೂಲಕ ಸಾಂಕ್ರಿ ಶಿಬಿರ ಸಂಜೆ 4ಕ್ಕೆ ತಲುಪಿದೆವು. ಪುರೋಲದಲ್ಲಿ ಮಧ್ಯಾಹ್ನದ ಊಟ ಮುಗಿಸಿ ಹಾಗೇ ಒಂದು ಸೂಕ್ತಪ್ರದೇಶದಲ್ಲಿ ವಾಹನ ನಿಲ್ಲಿಸಿ ಯಮುನಾ ನದಿಗೆ ಇಳಿದು ಹೋಗಿ ತಂಪಾದ ನೀರಿನಲ್ಲಿ ಮುಖ ತೊಳೆದು ಆಯಾಸ ಪರಿಹಾರ ಮಾಡಿಕೊಂಡೆವು. ಪುರೋಲ ಹಳ್ಳಿಯಿಂದ ಆಚೆಗೆ ಪ್ರಕೃತಿ ಸೌಂದರ್ಯ ಅತ್ಯಂತ ಮನೋಹರವಾಗಿತ್ತು.

ಸಾಂಕ್ರಿ ಶಿಬಿರ ಹತ್ತಿರ ಬರುತ್ತಿದ್ದಂತೆ ಮೊದಲಬಾರಿಗೆ ಹಿಮಾಲಯದ ಹಿಮಾವೃತ ಶಿಖರಗಳನ್ನು ನೋಡಿ ಎಲ್ಲರೂ ಸಂತೋಷಪಟ್ಟೆವು.

ನಮ್ಮ ಕಡೆಯ ಹಂತದ ಚಾರಣದಲ್ಲಿ ನಾವು ದೂರದ ಬೆಟ್ಟಗಳ ಆಚೆಗೆ ಹಿಮಾವೃತ ಶಿಖರ ನೋಡಿ ಬಹುಶಃ ಅದರಲ್ಲಿನ ಒಂದು ಶಿಖರವನ್ನು ನಾವು ಹತ್ತುತ್ತೇವೆಂದು ನನ್ನ ಒಳಮನಸ್ಸು ಹೇಳುತ್ತಿತ್ತು.

ಕಡೆಗೆ ಗೋವಿಂದ್ ರಾಷ್ಟ್ರೀಯ ಉದ್ಯಾನದ ಪ್ರವೇಶದ್ವಾರವನ್ನು ತಲುಪಿ ನಮ್ಮ ಪರಿಚಯ ಪತ್ರಗಳನ್ನು ಉದ್ಯಾನದ ಅಧಿಕಾರಿಗಳಿಗೆ ತೋರಿಸಿ ಅಲ್ಲೇ ಕೆಲವು ಭಾವ ಚಿತ್ರಗಳನ್ನು ತೆಗೆದುಕೊಂಡು ಅಲ್ಲಿಂದ 11 ಕಿ.ಮೀ ದೂರದ ಸಾಂಕ್ರಿಯೆಡೆಗೆ ಪ್ರಯಾಣಿಸಿದೆವು.

ಸಾಂಕ್ರಿ ತಲುಪಿದೊಡನೆ ನಮಗೆ ಹೊಸದಾದ ವೈಲ್ಡ್ ಆರ್ಚಿಡ್ಸ್ ಹೋಟಲಿನಲ್ಲಿ ತಂಗಲು ಅನುಕೂಲಮಾಡಿಕೊಟ್ಟರು. ಅಲ್ಲಿ ನಾವು ಚಾರಣ ನಾಯಕರನ್ನು ಭೇಟಿಮಾಡಿದೆವು. ಹೋಟೆಲಿನ ಕೋಣೆಗೆ ತೆರಳಿ ಸ್ವಲ್ಪ ವಿಶ್ರಾಂತಿಯ ನಂತರ ಎಲ್ಲರೂ ಮೇಲ್ಗಡೆಯಲ್ಲಿರುವ ವಿಶಾಲವಾದ ಹಾಲಿನಲ್ಲಿ ಸೇರಿ ನಮ್ಮ ಪರಿಚಯ ಪತ್ರಗಳನ್ನು ಚಾರಣ ನಾಯಕರಿಗೆ ಸಲ್ಲಿಸಿದೆವು. ನಂತರ ಚಹಾ, ಪಕೋಡ ಸೇವಿಸಿ ಪರಸ್ಪರ ಪರಿಚಯ ಮಾಡಿಕೊಂಡೆವು. ಅನಂತರ ಮುಂದಿನ ನಾಲ್ಕುದಿನಗಳ ಚಾರಣದ ಸೂಕ್ಷ್ಮ ಪರಿಚಯ ಮಾರ್ಗದರ್ಶಿ ಮಾಡಿಕೊಟ್ಟರು. ಹೋಟಲಿನ ಬಾಲ್ಕನಿಯಿಂದ ಕಾಣಿಸುತ್ತಿದ್ದ ವಿಶಾಲವಾದ ಕಣಿವೆ ಹಾಗೂ ಅದರ ತಳಭಾಗದಲ್ಲಿ ಹರಿಯುತ್ತಿರುವ ಸುಪಿನ್ ನದಿಯ ದೃಶ್ಯಗಳು ಅತ್ಯಂತ ಸುಂದರವಾಗಿತ್ತು. ಅಲ್ಲೇ ನಿಂತು ನಮ್ಮ ಜೊತೆಗಿದ್ದ ಇತರ ಸಹಚಾರಣಿಗರೊಂದಿಗೆ ನನ್ನ ಮೊದಲನೇ ಬಾರಿಯ ಚಾರಣದ ಅನುಭವಗಳನ್ನು ಹಂಚಿಕೊಂಡೆ.

ನಾವು ಮಾರನೇದಿನದ ಜುದಾ ಕ ತಲ್ಲಾಬ್ ಚಾರಣ ನೆನೆಸಿಕೊಂಡು ರಾತ್ರಿ ನಿದ್ರಾದೇವಿಯ ಮಡಿಲಿಗೆ ಜಾರಿದೆವು.

ಎರಡನೇ ದಿನ: 12 ಏಪ್ರಿಲ್ 2016 – ಸಾಂಕ್ರಿ – ಜುದಾ-ಕ-ತಲ್ಲಾಬ್ ಕ್ಯಾಂಪ್ – ಚಾರಣ 6450 ಅಡಿ – 9150 ಅಡಿ ಚಾರಣ – 3 ಕಿ.ಮೀ ನಡಿಗೆ.

ಬೆಳಗಿನ ಕೊರೆಯುವ ಛಳಿಯಲ್ಲಿ ಉಪಹಾರ ಸೇವಿಸಿ ಉಳಿದ ಪದಾರ್ಥಗಳನ್ನು ಪ್ಯಾಕ್ ಮಾಡಿ ಹೇಸರಗತ್ತೆಗಳ (Mule) ಮೇಲೆ ಕಳುಹಿಸಬೇಕಾದ ಬ್ಯಾಕ್ ಪ್ಯಾಕ್ ಅನ್ನು ಹೊರಗೆ ತಂದಿಟ್ಟೆ. ಹೊರಗೆ ಆಕಾಶ ಶುಭ್ರವಾಗಿ ಬೆಳಕು ಚೆನ್ನಾಗಿತ್ತು. ಇದು ಶುಭ ಸೂಚನೆಯೆಂದು ನಮಗೆ ಸಂತೋಷವಾಯಿತು.

ತಲೆ ಮೇಲೆತ್ತಿನೋಡಿದರೆ ನಮಗೆ ಸಾಂಕ್ರಿಯಿಂದ ಬೇರೆ ಬೇರೆ ಕಡೆಗೆ ಹೋಗುವ ಸೂಚನಾಫಲಕ ಕಾಣಿಸಿತು. ಜುದಾ ಕ ತಲ್ಲಾಬ್ ಕೇವಲ 3 ಕಿ.ಮೀ ದೂರವಷ್ಟೆ!

ಎಲ್ಲರೂ ಬಂದನಂತರ ಒಟ್ಟಾಗಿ ರಸ್ತೆಯಲ್ಲಿ ನಡೆಯಲು ಶುರುಮಾಡಿದೆವು. ನಾವು ಒಟ್ಟು 21 ಮಂದಿ ಅದರಲ್ಲಿ ಮೂರು ಜನ ಹಿರಿಯ ನಾಗರೀಕರು, ಮತ್ತೆ ಉಳಿದವರೆಲ್ಲಾ ಯುವಕ/ ಯುವತಿಯರು. ನನಗೆ ಕೇದಾರಕಾಂತ ಶಿಖರಾರೋಹಣವು ಎರಡನೇಯಬಾರಿ ಹಾಗೂ ಉಳಿದವರಿಗೆ ಹಿಮಾಲಯ ಶಿಖರಾರೋಹಣವು ಮೊದಲಬಾರಿ. ಎಲ್ಲರೂ ಬಹಳ ಸಂತೋಷ ಹಾಗೂ ಹುಮ್ಮಸ್ಸಿನಿಂದ ಚಾರಣಕ್ಕೆ ಕಾತುರರಾಗಿದ್ದರು. ಮೊದಲ 10 ನಿಮಿಷ ರಸ್ತೆಯಲ್ಲಿ ನಡೆದು ನಂತರ ಬಲಕ್ಕೆ ತಿರುಗಿ ಏರುದಾರಿಯಲ್ಲಿ ಹತ್ತಲು ಶುರುಮಾಡಿದೆವು. ಸ್ವಲ್ಪ ಸಮಯದಲ್ಲೇ, ಬ್ಯಾಕ್ ಪ್ಯಾಕನ್ನು ಹೊತ್ತು ಬರುತ್ತಿದ್ದ ಹಲವರಿಗೆ ಆಯಾಸವಾಗಿ ಹೆಗಲುಚೀಲವನ್ನು ಕೆಳಗಿರಿಸಿ ವಿಶ್ರಾಂತಿ ತೆಗೆದುಕೊಂಡರು. ನಾವು ದಟ್ಟವಾದ ಓಕ್ ವೃಕ್ಷಗಳಿಂದ ಕೂಡಿದ ಕಾಡಿನಲ್ಲಿ ಏರು ಹಾದಿಯಲ್ಲಿ ಮೇಲೇರತೊಡಗಿದೆವು. 30 ನಿಮಿಷದಲ್ಲಿ ನಾವು ಒಂದು ಮರದ ಮನೆ ತಲುಪಿದೆವು. ಅಲ್ಲಿ ಸ್ವಲ್ಪ ವಿಶ್ರಾಂತಿ ಪಡೆದು ಮರದ ಮನೆಯ ಹತ್ತಿರ ಕೆಲವು ಫೋಟೋ ತೆಗೆದು ನಮ್ಮ ಪ್ರಯಾಣ ಮುಂದುವರೆಸಿದೆವು. ಕಾಡಿನ ಮತ್ತೊಂದು ಜಾಗದಲ್ಲಿ ನಾನು ಒಂದು ಅಗಾಧವಾದ ಓಕ್ ಮರವನ್ನು ತಬ್ಬಿ ಹಿಡಿದಿರುವ ಫೋಟೋ ತೆಗೆಸಿಕೊಂಡೆ. ಮಧ್ಯಾಹ್ನ 1.30ಕ್ಕೆ ಇಂಡಿಯಾ ಹೈಕ್ ದ ಒಂದು ಬ್ಯಾನರನ್ನು ಕಂಡಾಗ ನಾವು ಜುದಾ ಕ ತಲ್ಲಾಬ್ (9150 ಅಡಿ) ಶಿಬಿರ ತಲುಪಿದೆವೆಂದು ತಿಳಿಯಿತು. ಶಿಬಿರದ ಸುತ್ತಲಿನ ಸೌಂದರ್ಯವು ಮನೋಹರವಾಗಿದ್ದರೂ ನನಗೆ ಸ್ವಲ್ಪ ನಿರಾಶೆಯಾಯಿತು. ಏಕೆಂದರೆ ಜುದಾ ಕ ತಲ್ಲಾಬ್ ಕೊಳವು ಕಡಿಮೆ ನೀರಿನಿಂದ ಹಾಗೂ ಕೊಳಕಾಗಿ

ಕಾಣುತ್ತಿತ್ತು. ಅಲ್ಲಿ ಸುತ್ತಲೂ ಹಿಮವಿರಬಹುದೆಂದು ನಿರೀಕ್ಷಿಸಿದ್ದೆ. ಆದರೆ ಅದರ ಬದಲು ಸುತ್ತಲೂ ಹಸುರಿನ ಮೈದಾನವಿತ್ತು. ಎಲ್ಲರೂ ಅಲ್ಲಿನ ವಾತಾವರಣ ವೀಕ್ಷಿಸಿ ಅತ್ಯಂತ ಸಂತೋಷಪಟ್ಟೆವು. ನಮಗಾಗಿ 8 ಶಿಬಿರಗಳನ್ನು ನಿರ್ಮಿಸಿದ್ದರು ಹಾಗೂ ಎಡಭಾಗದಲ್ಲಿ ಆಕಾಶವನ್ನು ಮುತ್ತಿಡುವ ದಟ್ಟವಾದ ಮರಗಳು, ಬಲಭಾಗದಲ್ಲಿ ಹುಲ್ಲುಗಾವಲು ಹಾಗೂ ಎದುರುಗಡೆ ದೂರದಲ್ಲಿ ಹಿಮದಿಂದಾವೃತವಾದ ಮನೋಹರವಾದ ಶಿಖರಗಳು.

ರುಚಿಯಾದ ಊಟದ ನಂತರ ಎಲ್ಲರೂ ಕ್ಯಾಂಪ್ ಸುತ್ತ ಅಡ್ಡಾಡಿ ಫೋಟೋ ತೆಗೆದು, ನಂತರ ಹರಟೆ ಹೊಡೆಯಲು ಶುರುಮಾಡಿದೆವು. ಸಂಜೆಗೆ ಚಹಾ ಹಾಗೂ ತಿಂಡಿ ಸೇವನೆಯ ನಂತರ ಚಾರಣ ನಾಯಕರು ಎಲ್ಲರ ರಕ್ತದೊತ್ತಡವನ್ನು ಪರೀಕ್ಷಿಸಿದರು. ಬಿಸಿ ಸೂಪ್ ಅನ್ನು ಸೇವಿಸಿ ಎಲ್ಲರೂ ಅರ್ಧಚಂದ್ರಾಕೃತಿಯಲ್ಲಿ ಸೇರಿ ಎಲ್ಲರ ಹೆಸರನ್ನು ನೆನಪಿಸುವ ಒಂದು ಆಟವನ್ನು ಆಡಿದೆವು. ಈ ಆಟವು ಎಲ್ಲರನ್ನೂ ಮತ್ತಷ್ಟು ಹತ್ತಿರ ಸೇರಿಸಿತು. ಅನಂತರ ರಾತ್ರಿಯ ಭೋಜನದ ನಂತರ ಎಲ್ಲರೂ ಸ್ಲೀಪಿಂಗ್ ಬ್ಯಾಗ್ ಒಳಗೆ ನುಸುಳಿ ನಿದ್ರಾದೇವಿಗೆ ಶರಣಾದೆವು.

ಮೂರನೇ ದಿನ 13 ಏಪ್ರಿಲ್ 2016: ಜುದಾ ಕ ತಲ್ಲಾಬ್(9150 ಅಡಿ) – ಕೇದಾರಕಾಂತ ಬೇಸ್ ಶಿಬಿರ (11250 ಅಡಿ) 3 ರಿಂದ 4 ಕಿ.ಮೀ ನಡಿಗೆ

ಬೆಳಗ್ಗೆ 6 ಘಂಟೆಗೆ ಎದ್ದು ಚಹಾ, 7ಕ್ಕೆ ಉಪಾಹಾರ ಸೇವಿಸಿ 8ಕ್ಕೆ ಜುದಾ ಕ ತಲ್ಲಾಬ್ ಶಿಬಿರಕ್ಕೆ ವಿದಾಯ ಹೇಳಿ ಮುಂದಿನ ಶಿಬಿರದೆಡೆಗೆ ಹೊರಟೆವು. ಹವಾಮಾನ ಹಿತಕರವಾಗಿತ್ತು. ದಾರಿಯುದ್ದಕ್ಕೂ ನೋಟವು ಅತ್ಯಂತ ಮನೋಹರವಾಗಿ ಹಾಗೂ ಹಸಿರು ಹುಲ್ಲುಗಾವಲಿನಿಂದ ಕೂಡಿತ್ತು. ಹಾದಿಯಲ್ಲಿ ನಮಗೆ ದೇವದಾರು, ಪೈನ್ ಹಾಗೂ ಅಲ್ಲಲ್ಲಿ ಮೇಪಲ್ ವೃಕ್ಷಗಳು ಹೇರಳವಾಗಿ ಕಾಣಿಸಿದವು.

ಮಧ್ಯಾಹ್ನದ ಹೊತ್ತಿಗೆ 3–4 ಕಿ.ಮೀ ನಡಿಗೆ ಹಾಗೂ 2100 ಅಡಿ ಎತ್ತರದ ಹಾದಿ ನಡೆದು ಕೆ.ಕೆ.ಬೇಸ್ ಕ್ಯಾಂಪ್ ತಲುಪಿದೆವು. ಇಲ್ಲಿಯೂ ಕೂಡ ನಮಗೆ ಶಿಬಿರದಲ್ಲಿ ಹಿಮ ಇರಲಿಲ್ಲ. ನಾನು ಕಳೆದಬಾರಿ ಇಲ್ಲಿಗೆ ಬಂದಿದ್ದಾಗ ಶಿಬಿರದ ಸುತ್ತ ಮುತ್ತಲೂ ಹಾಗೂ ಕಣ್ಣು ಕಾಣಿಸುವಷ್ಟು ದೂರದವರೆಗೂ ಹಿಮವಿತ್ತು. ಶಿಬಿರದಿಂದ ದೂರ ನೋಡಿದರೆ ನಮಗೆ ಕೆ.ಕೆ. ಶಿಖರವು ಕಾಣಿಸುತ್ತಿತ್ತು. ಮಧ್ಯಾಹ್ನದ ಊಟದ ನಂತರ ಎಲ್ಲರೂ ಸುತ್ತಲಿನ ಹುಲ್ಲಿನ ಮೈದಾನ ವೀಕ್ಷಿಸಲು ಬೇರೆ ಬೇರೆ ದಿಕ್ಕಿಗೆ ಹೋದೆವು.

ಸಂಜೆಯ ಚಹಾನಂತರ ಮಾರ್ಗದರ್ಶಿ ಎಲ್ಲರಿಗೂ ಮಾರನೇ ದಿನದ ಕಾರ್ಯಕ್ರಮ ವಿವರಿಸಿದರು. ರಾತ್ರಿಯ ಊಟ ಮುಗಿಸಿ ಬೆಳಗಿನ 3 ಘಂಟೆಗೆ

ಏಳಬೇಕಾದುದನ್ನು ನೆನಪಿಸಿಕೊಂಡು ಬೇಗನೆ ಮಲಗಿದೆವು. ನಮ್ಮಲ್ಲಿ ಕೆಲವರು 2.30ಕ್ಕೆ ಎದ್ದು ಹೊರಗೆ ಬಂದು ನಕ್ಷತ್ರ ವೀಕ್ಷಣೆ ಮಾಡತೊಡಗಿದರು. ಎಲ್ಲರೂ 4ಕ್ಕೆ ಉಪಾಹಾರ ಸೇವಿಸಿ ಕ್ಯಾಂಪ್ ಅಪ್ ಹಾಗೂ ಗ್ಯಟರ್ ಗಳನ್ನು ಧರಿಸಿ 4.50ಕ್ಕೆ ಕೆ.ಕೆ.ಶಿಖರ ಏರಲು ತಯಾರಾದೆವು.

ನಾಲ್ಕನೇ ದಿನ: 14 ಏಪ್ರಿಲ್ 2016 – ಕೆ.ಕೆ. ಬೇಸ್ ಶಿಬಿರದಿಂದ (11250 ಅಡಿ) – ಕೆ.ಕೆ.ಶಿಖರದೆಡೆಗೆ (12500 ಅಡಿ) ನಂತರ ಹರ್ಗಾಂವ್ ಶಿಬಿರದೆಡೆಗೆ (8900 ಅಡಿ)

ಬೆಳಗಿನ ಝಾವ 4.50ಕ್ಕೆ ಎಲ್ಲರೂ ಸಾಲಾಗಿ ಟಾರ್ಚ್ ಸಹಾಯ – ದಿಂದ ಸುತ್ತಲೂ ಕಪ್ಪಗಿನ ದೇವದಾರು ವೃಕ್ಷಗಳನ್ನೊಳಗೊಂಡ ಕಡಿದಾದ ಆದರೆ ಹಿಮರಹಿತ ಹಾದಿಯನ್ನು 30 ನಿಮಿಷ ನಡೆದನಂತರ ಎತ್ತರದ ಪೂರ್ವದಿಕ್ಕಿನಿಂದ ಸೂರ್ಯನ ಮಸುಕಾದ ಬೆಳಕು ಕಾಣಿಸತೊಡಗಿತು. ಟಾರ್ಚ್ ಆರಿಸಿ ಮುಂದುವರೆದೆವು. ಹಾದಿಯುದ್ದಕ್ಕೂ ಶಿಖರ ನಮ್ಮ ಹತ್ತಿರದಲ್ಲೇ ಇರುವಂತೆ ಭಾಸವಾಗುತ್ತಿದ್ದರೂ ಅದು ಇನ್ನೂ ಎತ್ತರದಲ್ಲಿತ್ತು. ಅದನ್ನು ತಲುಪಲು ನಾವು ಬಹಳ ಉತ್ಸಾಹದಿಂದ ನಡೆಯ ತೊಡಗಿ ಸ್ವಲ್ಪ ಸಮಯದ ನಂತರದ ಮಾರ್ಗ ಸಂಪೂರ್ಣ ಹಿಮಾವೃತವಾಗಿತ್ತು. ಹಾಗಾಗಿ ಇಲ್ಲಿಂದ ನಮ್ಮ ನಡಿಗೆ ನಿಧಾನವಾಯಿತು.

ನಮಗೆ ಈ ದಿನ ಚಂದ್ರಾಸ್ತಮಾನ ಹಾಗೂ ಸೂರ್ಯೋದಯ ಎರಡನ್ನೂ ಚಾರಣದಲ್ಲಿ ನೋಡುವ ಅವಕಾಶವು ಲಭಿಸಿತು. ಸುಮಾರು 7.30ಕ್ಕೆ ಒಂದು ಸಮತಟ್ಟಾದ ಸ್ಥಳ ತಲುಪಿ ಅಲ್ಲಿಂದ ಸೂರ್ಯೋದಯ ವೀಕ್ಷಿಸಿ ಫೋಟೊ ತೆಗೆದ ನಂತರ ಕ್ಯಾಮರ/ಮೊಬೈಲ್ ಚಾರ್ಜ್ ಮುಗಿಯಿತು. ಇಲ್ಲಿಂದ ಹಾದಿ ಅತ್ಯಂತ ಕಡಿದಾಗಿತ್ತು. ಎಲ್ಲರೂ ಬಹಳ ಸುಸ್ತಾಗಿದ್ದರೂ ಶಿಖರವನ್ನೇರುವ ಉತ್ಸಾಹ ಕಡಿಮೆಯಾಗಿರಲಿಲ್ಲ. ಮುನ್ನಡೆಯುತ್ತಿದ್ದಂತೆ ದೃಶ್ಯ ಸುಂದರವಾಗಿ ಕಾಣಿಸತೊಡಗಿತು.

ನನಗೆ ಈಗಲೂ ನೆನಪಾಗುತ್ತಿರುವುದೇನೆಂದರೆ ನಾನು ಶಿಖರ ತಲುಪಿದಕೂಡಲೇ ಶಿವ ಪಾರ್ವತಿಯರ ಚಿಕ್ಕದಾದ ಗುಡಿ ಹಾಗೂ ಸಣ್ಣ ಗಣಪತಿ ವಿಗ್ರಹವಿದ್ದು ಎದುರಿಗೆ ಒಂದು ತ್ರಿಶೂಲವಿತ್ತು. ಅಲ್ಲೇ ನಿಂತು ನಾನು ಶಿವನನ್ನು ಮನಸಾರೆ ಧ್ಯಾನಿಸಿ ಎರಡನೇ ಬಾರಿಗೆ ಇಲ್ಲಿಗೆ ಬರಲು ಶಕ್ತಿ ದಯಪಾಲಿಸಿದ ಭಗವಂತನಿಗೆ ನನ್ನ ನಮನ ಸಲ್ಲಿಸಿದೆ.

ನಂತರ ಚಾರಣ ನಾಯಕರು ಎಲ್ಲರನ್ನೂ ಒಂದೆಡೆಗೆ ಕರೆದು ಸುತ್ತ ಕಾಣಿಸುವ ಮುಖ್ಯವಾದ ಶಿಖರಗಳ ಹೆಸರುಗಳನ್ನು ಪರಿಚಯಿಸಿದರು. ಬಂದರ್ಪೂಂಚ್ ಪರ್ವತಶ್ರೇಣಿ, ಕಾಲನಾಗ್ ಶಿಖರ, ಸ್ವರ್ಗಾರೋಹಿಣಿ – 1,2,3,4 ಹರ ಕಿ ದುನ್ ಕಣಿವೆ ಹಾಗೂ ಬಲಗಡೆ ತುದಿಯಲ್ಲಿ ಕಾಣುವ ಗೋಯ್ಚಾಲ ಕಣಿವೆ. ನಂತರ

ಗ್ರೂಪ್ ಫೋಟೋ ತೆಗೆಸಿಕೊಂಡೆವು. ಸ್ವಲ್ಪ ಸಮಯದ ನಂತರ ಅಲ್ಲಿಂದ ಕೆಳಗಿಳಿಯತೊಡಗಿದೆವು. ನಮ್ಮ ಗೈಡ್ ನಮಗೆ ಎರಡು ಸಲಹೆಗಳನ್ನು ಅಂದರೆ ಹಿಮದ ಹಾದಿಯನ್ನು ಕಾಲ್ನಡಿಗೆಯಿಂದ ಇಳಿಯುವ ಅಥವಾ ಹಲವಾರು ಕಡೆ ಕುಳಿತು ಜಾರುವುದನ್ನು ನೀಡಿದರು. ಎಲ್ಲರೂ ಎರಡನೇ ಸಲಹೆ ಸ್ವೀಕರಿಸಿದೆವು. ಜಾರುವ ಹಾದಿಯಲ್ಲಿ ನಾನೇ ಮೊದಲಿಗೆ ಸಲೀಸಾಗಿ ಜಾರಿದೆ. ನನ್ನ ನಂತರ ಎಲ್ಲರೂ ಜಾರತೊಡಗಿದರು. ಎಲ್ಲರೂ ಸಂತೋಷಪಟ್ಟರು. ನಂತರ ಮತ್ತೆ ಮೂರು ಕಡೆ ಜಾರುತ್ತ ಇಳಿದೆವು. ಅಲ್ಲಿಂದ ಎಲ್ಲರೂ ಬೇರೆ ಬೇರೆಯಾಗಿ ತಮಗೆ ತೋಚಿದ ಹಾದಿಯಲ್ಲಿ ಹಿಮದ ಮೇಲೆ ನಡೆದು ಕೆ.ಕೆ.ಬೇಸ್ ಕ್ಯಾಂಪ್ ತಲುಪಿ ಸ್ವಲ್ಪ ವಿಶ್ರಾಂತಿಯ ನಂತರ ಊಟ ಮಾಡಿ 50 ನಿಮಿಷ ನಡೆದು ಸುಂದರ ಹರ್ಗಾವ್ ಶಿಬಿರ ತಲುಪಿ ಉಳಿದ ಸಮಯ ಮಾತನಾಡುತ್ತ ಕಳೆದೆವು. ಸಂಜೆ ಸೂಪ್ ಕುಡಿದ ನಂತರ ಎಲ್ಲರೂ ಡೈನಿಂಗ್ ಟೆಂಟಿನಲ್ಲಿ ಚಾರಣದ ಅನುಭವ ಹಂಚಿಕೊಂಡೆವು. ಅನಂತರ ಟ್ರೆಕ್ ಲೀಡರ್ ಅವರು ಅಡಿಗೆಯವರ ಸಹಾಯದಿಂದ ಒಂದು ಮುಚ್ಚಿದ್ದ ಪಾತ್ರೆಯಲ್ಲಿ ಕೇಕ್ ತಂದು ಅದನ್ನು ಶ್ರೀ.ಗುಂಜನ್ ಹಾಗೂ ಅವರ ಪತ್ನಿ ಶ್ರೀಮತಿ ರೂಪಾಲಿ ಅವರಿಗೆ ತೆರೆಯಲು ತಿಳಿಸಿದರು. ಅದನ್ನು ತೆರೆದು ನೋಡಿದಾಗ ಅವರಿಬ್ಬರಿಗೂ ಅತ್ಯಂತ ಸಂತೋಷವಾಯಿತು. ಅಂದು ಅವರ ವಿವಾಹ ವಾರ್ಷಿಕದಿನವಾಗಿದ್ದರಿಂದ ಅವರಿಂದ ಕೇಕ್ ಕಟ್ ಮಾಡಿಸಿ ಅವರನ್ನು ಅಭಿನಂದಿಸಿದೆವು. ಅವರೂ ಕೂಡ ತಮ್ಮ ಸಂತೋಷವನ್ನು ಎಲ್ಲರೊಡನೆ ಹಂಚಿಕೊಂಡರು. ಅದಾದ ನಂತರ ರಾತ್ರಿ ವಿಶೇಷ ಊಟ ಮಾಡಿ ಎಲ್ಲರೂ ಕೆ.ಕೆ. ಟ್ರೆಕ್‌ನ ಕಡೆಯ ರಾತ್ರಿಯನ್ನು ಸಂತೋಷದಿಂದ ಕಳೆದೆವು.

ಐದನೇ ದಿನ: 15 ಏಪ್ರಿಲ್ 2016 – ಹರ್ಗಾಂವ್ – ಸಾಂಕ್ರಿ

ಐದನೇದಿನ ಬೆಳಗ್ಗೆ ನಿಧಾನವಾಗಿ ಎದ್ದು ಸೂರ್ಯನ ಬಿಸಿಲು ಕಾಯಿಸಿಕೊಳ್ಳುತ್ತಾ ಚಹಾ ಸೇವಿಸಿ ಸುತ್ತಲಿನ ಹುಲ್ಲುಗಾವಲಿನಲ್ಲಿ ಎಲ್ಲರೂ ಅಡ್ಡಾಡತೊಡಗಿದರು. ನಾನೂ ಕೂಡ ನನ್ನ ಬೈನಾಕ್ಯುಲರ್‌ನಿಂದ ಸುತ್ತಲಿನ ಪ್ರಕೃತಿ ಸೌಂದರ್ಯ ನೋಡಿ ಎಲ್ಲರಿಗೂ ಅದನ್ನು ಕೊಟ್ಟು ಹಿಮಾವೃತ ಶಿಖರವನ್ನ ಮತ್ತೊಮ್ಮೆ ನೋಡಲು ಪ್ರೇರೇಪಿಸಿದೆ. ಎಲ್ಲರೂ ಬೈನಾಕ್ಯುಲರ್ ಮೂಲಕ ಸುತ್ತಲಿನ ಸೌಂದರ್ಯ ವೀಕ್ಷಿಸಿದರು. ವಾತಾವರಣ ಹಿತಕರವಾಗಿತ್ತು. ಎಲ್ಲರ ಮುಖದಲ್ಲೂ ಸಾಂಕ್ರಿಯಿಂದ ಹೊರಡುವಾಗ ಸಾಧಿಸಿದ ತೃಪ್ತಿ ಮನೆಮಾಡಿತ್ತು. ಇಲ್ಲಿಂದ ಹೊರಡುವ ಮೊದಲು ಉಳಿದ ಸಮಯ ಪ್ರಕೃತಿಯೊಡನೆ ಸಂಪೂರ್ಣವಾಗಿ ಕಳೆಯಲು ಎಲ್ಲರೂ

ನಿರ್ಧರಿಸಿದಂತಿತ್ತು. ನನಗೆ ನನ್ನ ಪ್ರತಿಯೊಂದು ಟ್ರೆಕ್ ಮುಗಿಯುವ ಹಂತದಲ್ಲೂ ಇದೇ ಭಾವನೆ ಬರುತ್ತಿತ್ತು.

ಈ ದಿನ ಟ್ರೆಕ್ ನಾಯಕರಿಂದ ಬೇಗ ಹೊರಡುವ ಒತ್ತಾಯವಿಲ್ಲದೆ ಎಲ್ಲರೂ ಸಾವಧಾನವಾಗಿ ತಯಾರಾಗಿ ಕಡೆ ಬ್ರೀಫಿಂಗ್ ಆಲಿಸಲು ಒಂದೆಡೆ ಸೇರಿದೆವು.

ಎಲ್ಲರೂ ಶಿಬಿರದಿಂದ ಒಲ್ಲದ ಮನಸ್ಸಿನಿಂದ ಹೊರಟೆವು. ಎಂದಿನಂತೆ ಶುಭ್ರವಾದ ಆಕಾಶ ಹಾಗೂ ಹಿತವಾದ ಸೂರ್ಯನ ಬೆಳಕಿನಲ್ಲಿ ಕಾಡಿನ ಹಾದಿ ಕ್ರಮಿಸತೊಡಗಿದೆವು. ದಾರಿಯುದ್ದಕ್ಕೂ ಹಚ್ಚ ಹಸಿರು, ರೋಡೋಡೆಂಡ್ರಾನ್ ಹೂವುಗಳನ್ನೊಳಗೊಂಡ ಸುಂದರ ಗಿಡಗಳು ಮಾರ್ಗವನ್ನು ಮತ್ತಷ್ಟು ಸುಂದರವಾಗಿಸಿದ್ದವು. ಅಲ್ಲಲ್ಲಿ ಶೀತಲ ನೀರಿನಿಂದ ಕೂಡಿದ ತೊರೆಗಳು ನಮ್ಮನ್ನು ಮುದಗೊಳಿಸುತ್ತಿದ್ದವು. ಕೆಲವರು ಸುತ್ತಲಿನ ದೃಶ್ಯಗಳನ್ನು ತಮ್ಮ ಕ್ಯಾಮರದಲ್ಲಿ ಸೆರೆಹಿಡಿಯುತ್ತಾ ನಿಧಾನವಾಗಿ ನಡೆಯುತ್ತಿದ್ದರೆ, ಮತ್ತೆ ಕೆಲವರು ಅಲ್ಲಲ್ಲೇ ಕುಳಿತು ತಮ್ಮ ಮೊಬೈಲ್ ಮೂಲಕ ಹಾಡುಗಳನ್ನು ಕೇಳುತ್ತಿದ್ದರು, ಮತ್ತುಳಿದವರು ದಾರಿಯಲ್ಲಿ ಸಿಕ್ಕಿದ ಸೇತುವೆಯ ಬಳಿ ಕುಳಿತು ಕೆಳಗಿನ ಹರಿಯುವ ನೀರನ್ನು ನೋಡುತ್ತಾ ತಮ್ಮ ಬಳಿಯಿದ್ದ ಡ್ರೈಫ್ರೂಟ್ಸ್‌ಗಳನ್ನು ಉಳಿದವರಿಗೆ ಹಂಚಿ ತಿನ್ನುತ್ತಿದ್ದರು.

11 ಗಂಟೆಗೆ ನಾನು ಒಂದು ಸೇತುವೆ ಬಳಿ ಕೆಲವು ಸಮಯ ವಿಶ್ರಾಂತಿಯನ್ನು ಪಡೆದು ಸುತ್ತಲಿನ ಮೇಪಲ್, ದೇವದಾರು ಹಾಗೂ ಪೈನ್ ವೃಕ್ಷಗಳನ್ನು ಕಡೆಯ ಬಾರಿಗೆ ಸುಮಾರು ಹೊತ್ತು ವೀಕ್ಷಿಸಿದೆ. ನಮ್ಮ ಉಳಿದ ಸಂಗಾತಿಗಳು ಬಹಳ ಹಿಂದೆ ಉಳಿದಿದ್ದರು. 11 ಘಂಟೆಗೆ ಅಲ್ಲಿಂದ ಕೆಳಗಿಳಿಯತೊಡಗಿದೆವು. 12.30ಕ್ಕೆ ಸಾಂಕ್ರಿಯ ಮುಖ್ಯ ರಸ್ತೆ ತಲುಪಿದೆವು. ಟ್ರೆಕ್ ಲೀಡರ್ ನಮ್ಮನ್ನು ಎಲ್ಲರೂ ಬರುವತನಕ ಅಲ್ಲಿಯೇ ಇರಲು ಹೇಳಿದ್ದರಿಂದ ಅಲ್ಲಿಯೇ ಕಾಯುತ್ತಿದ್ದೆವು. ಸ್ವಲ್ಪ ಹೊತ್ತಿಗೆ ಉಳಿದವರು ನಿಧಾನವಾಗಿ ತಲುಪಿದರು. ನಂತರ ಎಲ್ಲರೂ ನಿಧಾನವಾಗಿ ಹೋಟೆಲನ್ನು ತಲುಪಿದೆವು.

ನಾನು, ಹೋಟಲನ್ನು ತಲುಪಿ ಮೊದಲನೇ ತಳ ಅಂತಸ್ತಿನಲ್ಲಿ ಕೋಣೆ ಪಡೆದೆ. ಅನಂತರ ಊಟ ಮಾಡಿ ಸಂಜೆ ನಾನು, ಮೂವರು ಸಹ ಚಾರಣಿಗರೊಂದಿಗೆ ಸಾಂಕ್ರಿಯ ಮುಖ್ಯಬೀದಿಯಲ್ಲಿ ಹಿತವಾದ ಹವೆಯ ಸುಖವನ್ನನುಭವಿಸುತ್ತಾ ಸುತ್ತಾಡಿದೆವು. ದಾರಿಯಲ್ಲಿ ಕೆಲವರನ್ನು ಭೇಟಿಯಾಗಿ ಹಲವಾರು ವಿಷಯಗಳನ್ನು ಚರ್ಚಿಸಿದೆವು. ಅಲ್ಲೇ ಒಂದೆಡೆ ಚಹಾ ಕುಡಿದು ಹೋಟೆಲಿಗೆ ಬಂದೆವು. ಹೋಟೆಲಿನಲ್ಲಿ ಮತ್ತೊಮ್ಮೆ ಚಹಾ, ಕುರುಕಲು ತಿಂಡಿ ಸೇವಿಸಿದ ನಂತರ ಟ್ರೆಕ್ ಲೀಡರ್ ಎಲ್ಲರನ್ನೂ ಕರೆದು ಟ್ರೆಕ್ ಸುಸೂತ್ರವಾಗಿ ಮುಗಿಸಿದ್ದಕ್ಕೆ ಧನ್ಯವಾದ ತಿಳಿಸಿ ಎಲ್ಲರಿಗೂ ಟ್ರೆಕ್ ಮುಗಿಸಿದ್ದಕ್ಕೆ ಪ್ರಮಾಣ ಪತ್ರ ಕೊಟ್ಟರು. ಅನಂತರ ಎಲ್ಲರೂ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಎಲ್ಲರೂ ಇಂಡಿಯಾ ಹೈಕ್ ರವರ

ನೀಲಿ ಬಣ್ಣದ ಶರ್ಟನ್ನು ಕೊಂಡು ಅದನ್ನು ಹಾಕಿಕೊಂಡರು. ಟ್ರೆಕ್ ಸಮಯದಲ್ಲಿ ಅಡಿಗೆಯವರು ಒಮ್ಮೆ ಮಾಡಿದ್ದ ತಿಂಡಿ/ಊಟವನ್ನು ಮತ್ತೊಮ್ಮೆ ಮಾಡದೇ ವಿವಿಧ ತಿನಿಸುಗಳನ್ನು ನಮಗೆ ಉಣಬಡಿಸಿದ್ದನ್ನು ನೆನಸಿಕೊಂಡು ಎಲ್ಲರೂ ಅಡಿಗೆಯವರು ಹಾಗೂ ಮಾರ್ಗದರ್ಶಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ತಿಳಿಸಿ ಅವರಿಗೆ ಕಾಣಿಕೆಯನ್ನು ಎಲ್ಲರ ಪರವಾಗಿ ಸಲ್ಲಿಸಿದೆವು. ಅನಂತರ ರಾತ್ರಿಯ ಭೋಜನದ ನಂತರ ಹಾಡು, ನೃತ್ಯದೊಂದಿಗೆ ಬಹಳ ಹೊತ್ತು ಮನರಂಜನೆಯನ್ನು ಪರಸ್ಪರ ನೀಡಿ, ರಾತ್ರಿ 10ಕ್ಕೆ ಎಲ್ಲರೂ ಕೋಣೆಗೆ ತೆರಳಿ ನಿದ್ರಿಸಿದೆವು.

ಹರ್-ಕಿ-ಧುನ್ ಚಾರಣ

ಹರ್-ಕಿ-ಧುನ್, ಉತ್ತರಾಖಂಡದಲ್ಲಿರುವುದು. ಈ ಪ್ರದೇಶವು 3566ಮೀ ಎತ್ತರದಲ್ಲಿದ್ದು ಇದು ಹೊಳೆಯುತ್ತಿರುವ ಪರ್ವತಶಿಖರ ಹಾಗೂ ದಟ್ಟವಾದ ಕಾಡಿನಿಂದಾವೃತವಾಗಿದೆ. ಇದು 7000ಮೀ ಎತ್ತರದ ಸ್ವರ್ಗಾರೋಹಿಣಿ ತಪ್ಪಲಿನಲ್ಲಿದೆ. ಪಾಂಡವರು ಸ್ವರ್ಗಾರೋಹಣ ಈ ಮಾರ್ಗದಲ್ಲೇ ಮಾಡಿದರೆಂದು ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ. ಈ ಪ್ರದೇಶದಲ್ಲಿ ಹೇರಳವಾಗಿ ಭೋಜಪತ್ರ ಮರ ಕಂಡು- ಬರುವುದು ಹಾಗೂ ಬ್ರಹ್ಮಕಮಲ ನೋಡಬಹುದು. ಹರ್-ಕಿ-ಧುನ್ ಪ್ರದೇಶದಿಂದ ಈಶಾನ್ಯದಲ್ಲಿ ಸ್ವರ್ಗಾರೋಹಿಣಿ ಹಾಗೂ ಜೌಂದರ್ ಹಿಮನದಿ ಇರುವುದು. ಪಶ್ಚಿಮ ದಿಕ್ಕಿನಲ್ಲಿ ಬಂದರ್ ಪುಂಚ್ ಪರ್ವತ. ಈ ಪ್ರದೇಶದ ಕೆಲವು ಬುಡಕಟ್ಟು ಜನಗಳು ದುರ್ಯೋಧನನಿಗೆ ಮಂದಿರ ನಿರ್ಮಿಸಿ ಅವನನ್ನು ದೇವರೆಂದು ಪೂಜಿಸುವರು. ವ್ಯವಸಾಯವು ಇಲ್ಲಿನ ಜನಗಳ ಮುಖ್ಯ ಕಸುಬಾಗಿದ್ದು, ಭತ್ತ, ರಾಜ್ಮ ಮತ್ತು ಚರಸ್ ಬೆಳೆಯುವರು.

ಈ ಪ್ರದೇಶದೆಡೆಗಿನ ಚಾರಣ ನಾನು ಜನವರಿ 23, 2017-ಫೆಬ್ರವರಿ 2, 2017ವರೆಗೂ ಇಂಡಿಯಾ ಹೈಕ್ಸ್ ಸಂಸ್ಥೆಯ ಮೂಲಕ ಮಾಡಿದೆ. ಆ ಸಮಯದಲ್ಲಿ ಮೂರನೇ ದಿನದ ಚಾರಣದಿಂದ ಕೊನೆಯ ದಿನದವರೆಗೂ ಚಾರಣ ಸಂಪೂರ್ಣ ಹಿಮದಿಂದ ಕೂಡಿದ ಮಾರ್ಗದಿಂದ ಕೂಡಿದ್ದು ರೋಮಾಂಚಕ ಅನುಭವವಾಯಿತು.

ಈಗ ಇಂಡಿಯಾ ಹೈಕ್ಸ್ ಸಂಸ್ಥೆ ಈ ಚಾರಣವನ್ನು ರುಯಿನ್ ಸಾರ್ ಸರೋವರದವರೆಗೂ ವಿಸ್ತರಿಸಿದ್ದಾರೆ.

ಚಾರಣದ ಮಾರ್ಗದ ಸಂಕ್ಷಿಪ್ತ ವಿವರಣೆ ಹೀಗಿದೆ:

ದಿನ	ಪ್ರದೇಶ	ಎತ್ತರ (ಮೀಟರ್‌ಗಳಲ್ಲಿ)
1	ಡೆಹರಾಡೂನ್ ರೈಲು ನಿಲ್ದಾಣ-ಸಾಂಕ್ರಿ ಕ್ಯಾಂಪ್ ಜೀಪಿನಲ್ಲಿ 10-11 ಗಂಟೆ ಪ್ರಯಾಣ	1450
2	ಸಾಂಕ್ರಿ-ತಾಲೂಕ ಕ್ಯಾಂಪ್ ವಾಹನದಲ್ಲಿ ಪಯಣ - 12 ಕಿ.ಮೀ ತಾಲೂಕ-ಓಸ್ಲಾ ಕ್ಯಾಂಪ್ 7 ಗಂಟೆಗಳ ನಡಿಗೆ - 14 ಕಿ.ಮೀ	1800
3	ಓಸ್ಲಾ-ಹರ-ಕಿ-ಧುನ್ 6 ಗಂಟೆಗಳ 11 ಕಿ.ಮೀ ಚಾರಣ	2560
4	ಹರ-ಕಿ-ಧುನ್-ಜೌಂದರ್ ಹಿಮನದಿ ಮತ್ತು ಮರಳಿ ಹರ-ಕಿ-ಧುನ್ ಬೇಸ್ ಕ್ಯಾಂಪ್ 7 ಗಂಟೆಗಳ ನಡಿಗೆ - 15 ಕಿ.ಮೀ	3510
5	ಹರ-ಕಿ-ಧುನ್-ಓಸ್ಲಾ ಕ್ಯಾಂಪ್ 3 ಗಂಟೆ ನಡಿಗೆ - 11 ಕಿ.ಮೀ	
6	ಓಸ್ಲಾ-ಸಾಂಕ್ರಿ ಕ್ಯಾಂಪ್ 8 ಗಂಟೆಗಳ ನಡಿಗೆ - 26 ಕಿ.ಮೀ	
7	ಸಾಂಕ್ರಿ-ಡೆಹ್ರಾಡೂನ್ - ಜೀಪಿನಲ್ಲಿ ಪ್ರಯಾಣ - 11 ಗಂಟೆ	
	ಚಾರಣ ಒಟ್ಟು ದೂರ - 89 ಕಿ.ಮೀ	

ಮೊದಲನೇ ದಿನ ಜನವರಿ 23, 2017: ಡೆಹರಾಡೂನ್ ರೈಲು ನಿಲ್ದಾಣ–ಸಾಂಕ್ರಿ ಕ್ಯಾಂಪ್ (6400 ಅಡಿ) 220 ಕಿ.ಮೀ – 10 ಗಂಟೆ ಪ್ರಯಾಣ

ನಮ್ಮ ವಾಹನವು ಡೆಹರಾಡೂನ್–ಮುಸ್ಸೋರಿ ಮಾರ್ಗವಾಗಿ ನೌಗಾಂವ್, ಪುರೋಲ, ಮೋರಿ ಹಾಗೂ ನೆಟ್ವಾರ್ ಮುಖಾಂತರ ಸಾಂಕ್ರಿ ಕ್ಯಾಂಪ್ ತಲುಪಲು 10 ಗಂಟೆ ಬೇಕಾಯಿತು. ಮಾರ್ಗದಲ್ಲಿ ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮುಗಿಸಿ ಸಂಜೆ 6 ಗಂಟೆಗೆ ತಲುಪಿದೆವು. ಜನವರಿ ತಿಂಗಳ ಹವೆ ಚಾರಣಕ್ಕೆ ಸೂಕ್ತವಾಗಿದ್ದು ಮಾರ್ಗ ಪೈನ್ ವೃಕ್ಷಗಳ ಕಾಡಿನ ಮೂಲಕ ಟೋನ್ಸ್ ನದಿಯ ಪಕ್ಕದಲ್ಲೇ ಹಾದುಹೋಗುವುದು. ಮುಸ್ಸೋರಿ ನಂತರ ಇಕ್ಕೆಲಗಳ ದೃಶ್ಯ ಮನೋಹರವಾಗಿದ್ದು ಪ್ರಯಾಣ ಸುಂದರವಾಗಿತ್ತು. ಪುರೋಲ ದಾಟಿದ ನಂತರ ನಮ್ಮ ಮೊಬೈಲ್ ಕೆಲಸಮಾಡುವುದಿಲ್ಲ. ಸಾಂಕ್ರಿ ತಲಪುವುದಕ್ಕೆ ಮೊದಲು ನಾವು ಗೋವಿಂದ್ ನ್ಯಾಷನಲ್ ಪಾರ್ಕ್ ಚೆಕ್‌ಪಾಯಿಂಟಿನಲ್ಲಿ ನಮ್ಮ ಗುರುತಿನ

ಕಾರ್ಡ್ ತೋರಿಸಿ ಮುಂದುವರೆಯಬೇಕು. ನಂತರದ ಪ್ರಯಾಣ ಬಹಳ ಹಿತಕರವಾಗಿತ್ತು.

ಎರಡನೇ ದಿನ ಜನವರಿ 24, 2017: ಸಾಂಕ್ರಿಯಿಂದ–ತಾಲೂಕ ಕ್ಯಾಂಪ್ ಜೀಪ್ ಪ್ರಯಾಣ – 12 ಕಿ.ಮೀ 6400– 7200 ಅಡಿಗಳ ಎತ್ತರ – ತಾಲೂಕ ಕ್ಯಾಂಪ್– ಓಸ್ಲಾ ಕ್ಯಾಂಪ್ – 14 ಕಿ.ಮೀ ಚಾರಣ – 7 ಗಂಟೆ.

ಸಾಂಕ್ರಿಯಿಂದ ತಾಲೂಕ ಹಳ್ಳಿಗೆ ಮಾರ್ಗ ನಯನ ಮನೋಹರವಾಗಿದ್ದು ವಿವಿಧ ಸಸ್ಯಗಳನ್ನು ಎರಡೂ ಕಡೆ ಕಂಡುಬರುವುದು ಹಾಗೂ ಅನೇಕ ಜಲಪಾತ, ತೊರೆಗಳು ಎದುರಾಗುವುದು ಮತ್ತು ಮುಂದಿನ ಚಾರಣದ ಮಾರ್ಗ ಮುನ್ನವೇ ನಮಗೆ ತಿಳಿಸುವುದು. ಇಂಡಿಯಾ ಹೈಕ್ ಇಲ್ಲಿ ನಮಗೆ ಊಟದ ಬುತ್ತಿಯನ್ನು ಎಲ್ಲರಿಗೂ ಕೊಟ್ಟರು. ತಾಲೂಕ ಹಳ್ಳಿಯಲ್ಲಿ ನಮಗೆ ಕೆಲವು ಸಣ್ಣ ಕಾಂಕ್ರೀಟ್ ಮನೆಗಳು ಗೋಚರವಾದವು. ನಂತರ ನಾವೆಲ್ಲರೂ ಚಾರಣವನ್ನು ಉತ್ಸಾಹದಿಂದ ಪ್ರಾರಂಭಿಸಿದೆವು. ಮೊದಲಿಗೆ ಮಾರ್ಗ ಸುಂದರ ಟೋನ್ಸ್ ನದಿಯ ದಂಡೆಯ ಕಡೆಗೆ ಇಳಿಜಾರಿನಲ್ಲಿ ಇಳಿಯಬೇಕಿತ್ತು. ನಂತರ ಟೋನ್ಸ್ ನದಿಯನ್ನು ನಮ್ಮ ಬಲಗಡೆಗೆ ಬಿಟ್ಟುಕೊಂಡು ಸಮತಟ್ಟಾದ ಎಡಗಡೆಗೆ ಕೋನಿಫೆರಸ್ ಮರಗಳಿಂದ ಕೂಡಿದ ಮಾರ್ಗದಲ್ಲಿ ನಡೆಯತೊಡಗಿದೆವು. ನನ್ನ ಕೋರಿಕೆಯ ಮೇರೆಗೆ ನನ್ನೊಂದಿಗೆ ಒಬ್ಬ ಮಾರ್ಗದರ್ಶಿ ಇದ್ದ. ಮಾರ್ಗದಲ್ಲಿ ಬೆಟ್ಟದ ಮೇಲಿನಿಂದ ಧುಮುಕುತ್ತಿರುವ ನೀರಿಗೆ ಅಡ್ಡಲಾಗಿ ನಿರ್ಮಿಸಿದ ಸಿಮೆಂಟ್ ಸೇತುವೆ ದಾಟಿ ನಂತರ ಮತ್ತೊಂದು ಮರದ ಸೇತುವೆ ದಾಟಿ 15 ನಿಮಿಷಗಳ ನಡಿಗೆ ನಂತರ ಟೋನ್ಸ್ ನದಿ ದಾಟಿ ನಡೆಯತೊಡಗಿದಂತೆ ಸುಂದರವಾದ ಅರ್ಚಿಡ್ಸ್, ವಾಲ್ನಟ್ಸ್, ಪೈನ್, ಸಿಡಾರ್ ಮರಗಳು ಎರಡೂ ಕಡೆ ನೆರಳನ್ನು ನೀಡುತ್ತಿತ್ತು. ಮಧ್ಯಾಹ್ನ ಒಂದು ಗಂಟೆಗೆ ನಾವು ಸೂಪಿನ್ ನದಿಯ ಒಂದು ಉಪನದಿಯನ್ನು ತಲುಪಿದೆವು. ವಿಸ್ತಾರವಾದ ಮಾರ್ಗ ಕ್ರಮಿಸುತ್ತಿರುವಾಗ ನನಗೆ ಇದ್ದಕ್ಕಿದ್ದಂತೆ ನನ್ನ ಬಲತೊಡೆಯಲ್ಲಿ ನರಗಳ ಸೆಳೆತವುಂಟಾಗಿ ವಿಪರೀತ ನೋವಾಯಿತು. ಮುಂದೆ ಹೋಗುವುದೇ ಕಷ್ಟವಾಗತೊಡಗಿ ನನ್ನೊಂದಿಗಿದ್ದ ಮಾರ್ಗದರ್ಶಕ ನನಗೆ ಪ್ರಥಮ ಚಿಕಿತ್ಸೆ ನೀಡಿ ನಿಧಾನವಾಗಿ ಕೈಹಿಡಿದು ಕರೆದೊಯ್ದ. ನಂತರ ಒಂದು ಉದ್ದವಾದ ಸೇತುವೆ ತಲುಪಿದೆವು. ಅಲ್ಲಿ ನಮಗೆ ಆಹಾರದ ಅಂಗಡಿ ಎದುರಾಯಿತು. ಅಲ್ಲೇ ಕುಳಿತು ಕೆಲವರು ತಮ್ಮೊಂದಿಗಿದ್ದ ಪ್ಯಾಕ್ಡ್ ಲಂಚ್ ಜೊತೆಗೆ ಅಂಗಡಿಯಿಂದಲೂ ಕೊಂಡು ಊಟ ಮಾಡಿದರು. ನಾನು ಮಾತ್ರ ನನ್ನೊಂದಿಗೆ ತಾಲೂಕದಿಂದ ತಂದಿದ್ದ ಆಹಾರವನ್ನೇ ತಿಂದು ನೀರು ಕುಡಿದೆ. 30 ನಿಮಿಷ ವಿಶ್ರಾಂತಿ ನಂತರ ಅಲ್ಲಿಂದ

ಹೊರಟು ಸಂಜೆ 4ಕ್ಕೆ ಓಸ್ಲಾ ಕ್ಯಾಂಪ್ ತಲುಪಿದೆವು. ಇಲ್ಲಿ ನಮಗೆ ಮರದ ಮನೆಯಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯಿತ್ತು. ಇದು ನಮ್ಮ ಮೊದಲ ಕ್ಯಾಂಪ್.

ಓಸ್ಲಾ ಹಳ್ಳಿಯ ಬಗ್ಗೆ ಕೆಲವು ಮಾಹಿತಿ ನೋಡೋಣ ; ಓಸ್ಲಾ ಹಳ್ಳಿಗೆ ಪ್ರವೇಶಿಸುತ್ತಿದ್ದಂತೆ ದೀರ್ಘ ಉಸಿರು ಒಳಗೆಳೆದುಕೊಳ್ಳೋಣ ಎಂದೆನಿಸುತ್ತದೆ. ಏಕೆಂದರೆ ಅಲ್ಲಿನ ಶುದ್ಧವಾದ ಪರಿಸರ, ಮಾಲಿನ್ಯರಹಿತ ಗಾಳಿ. ಇಲ್ಲಿನ ಜನಜೀವನ ಸರಳ ಹಾಗೂ ನಿಧಾನಗತಿಯಲ್ಲಿ ಸಾಗುತ್ತಿರುವುದು. ಹರ್-ಕಿ-ದೂನ್ ಚಾರಣ ವಿಷಯ ಬಂದಾಗ ನಮಗೆ ಎದುರಾಗುವುದು ಮಹಾಭಾರತ. ಹರ್-ಕಿ-ದೂನ್ ಎಂದರೆ ದೇವತೆಗಳ ಅಥವಾ ಶಿವನ ಕಣಿವೆ ಎಂದು. ಓಸ್ಲಾದ ಬುಡಕಟ್ಟು ಜನಾಂಗ ಕೌರವ ನಾಯಕ ದುರ್ಯೋಧನನ ಅನುಯಾಯಿಗಳು. ಅವರು ದುರ್ಯೋಧನನನ್ನು ಹೊರತುಪಡಿಸಿ ಬೇರೆ ಯಾರನ್ನೂ ಪೂಜಿಸುವುದಿಲ್ಲ. ಅವನಿಗಾಗಿ ಈ ಹಳ್ಳಿಯ ಜನಗಳು ಒಂದು ದೇವಾಲಯ ನಿರ್ಮಿಸಿರುವರು. ಇದರೊಳಗೆ ಈಗ ದುರ್ಯೋಧನನ ವಿಗ್ರಹವಿಲ್ಲ. ಈ ಹಳ್ಳಿಯಲ್ಲಿ ತಮ್ಮದೇ ಆದ ಸರಕಾರವಿದ್ದು ತಮ್ಮದೇ ಕಾನೂನನ್ನು ಪಾಲಿಸುವರು. ಇಲ್ಲಿಯ ರಾಜ ತಿಂಗಳಿಗೊಮ್ಮೆ ಇಲ್ಲಿಗೆ ಬಂದು ಜನಗಳ ಕಷ್ಟ-ಸುಖಗಳನ್ನು ಆಲಿಸುವನು. ಆಗ ಇಲ್ಲಿನ ಜನಗಳು ಪೂಜಾದಿ ಕಾರ್ಯ ಮಾಡುವರು. ಈ ಹಳ್ಳಿಯಲ್ಲಿ ಸುಮಾರು 250 ಮನೆಗಳಿದ್ದು ಸುಮಾರು 600 ಜನಸಂಖ್ಯೆ. ಪ್ರತಿಯೊಂದು ಮನೆಯಲ್ಲೂ ಹಸು ಹಾಗೂ ಮೇಕೆಗಳನ್ನು ಸಾಕುವರು. ಆಲೂಗಡ್ಡೆ ಮತ್ತು ಗೋಧಿ ಬೆಳೆಯುವರು.

ಓಸ್ಲಾದಲ್ಲಿ ನಮಗೆ ಉಳಿದುಕೊಳ್ಳಲು ಎರಡಂತಸ್ತಿನ ಒಂದು ಮರದ ಮನೆ. ಮಲಗಿಕೊಳ್ಳಲು ಎಲ್ಲರಿಗೂ ದೊಡ್ಡ ಜಮಖಾನ ಹಾಸಿದ್ದರು. ಎಲ್ಲರೂ ಅಲ್ಲೇ ಕುಳಿತು ಅಲ್ಲಿನವರೆಗಿನ ಚಾರಣದ ಅನುಭವಗಳನ್ನು ಪರಸ್ಪರ ಹೇಳಿಕೊಂಡು ಸಮಯ ಕಳೆದೆವು. ಸಂಜೆಗೆ ಚಹಾ, ಮ್ಯಾಗಿ ನೂಡಲ್ಸ್ ಎಲ್ಲರಿಗೂ ನೀಡಿದರು. ರಾತ್ರೆ 8ಕ್ಕೆ ರುಚಿಯಾದ ಊಟ ಮಾಡಿ ಮಾರನೇ ದಿನದ ಚಾರಣ ಕುರಿತು ಆಲೋಚಿಸುತ್ತಾ ಎಲ್ಲರೂ ಮಲಗಿದೆವು.

ಮೂರನೇ ದಿನ ಜನವರಿ 25, 2017: ಓಸ್ಲಾದಿಂದ-ಹರ-ಕಿ-ಧುನ್ 6 ಘಂಟೆಗಳ – 11 ಕಿ.ಮೀ ಚಾರಣ 3510 ಮೀಟರ್ ಎತ್ತರ.

ಇಂದಿನ ಚಾರಣ ಹಿಮದಿಂದ ಕೂಡಿ ದೀರ್ಘವಾಗಿದ್ದು ಅದಕ್ಕಾಗಿ ತಯಾರಿ ಮಾಡಿಕೊಳ್ಳುವ ಸಲುವಾಗಿ ಚಾರಣ ನಾಯಕ ಮುಂಜಾನೆ ಚಹಾ ನಂತರ ಎಲ್ಲರನ್ನು ಒಂದೆಡೆ ಸೇರಿಸಿ ಎಲ್ಲರಿಗೂ ಹಲವಾರು ಶಾರೀರಿಕ ವ್ಯಾಯಾಮ ಮಾಡಿಸಿದರು. ಎಲ್ಲರೂ ಉತ್ಸಾಹದಿಂದ ಭಾಗವಹಿಸಿದರು.

ಬೆಳಗಿನ ಉಪಹಾರದನಂತರ ಎಲ್ಲರೂ ಊಟದ ಬುತ್ತಿ ತೆಗೆದುಕೊಂಡು ಮುಂಜಾನೆ 8ಕ್ಕೆ ಚಾರಣ ಪ್ರಾರಂಭಿಸಿದೆವು. ಯುವಕರು ಬೇಗ ಮುಂದಕ್ಕೆ ಹೋಗುತ್ತ ನನ್ನಿಂದ ಕಣ್ಮರೆಯಾದರು. ನನ್ನೊಂದಿಗೆ ಬೆಂಗಳೂರಿನ ಇಂಟೆಲ್ ಸಂಸ್ಥೆಯ ಸಾಫ್ಟವೇರ್ ಎಂಜಿನಿಯರ್ ಅಗಿದ್ದ ಯುವಕರೊಬ್ಬರು ಮಾತನಾಡುತ್ತ ನಿಧಾನವಾಗಿ ಬರತೊಡಗಿದರು. ಇದರಿಂದ ನನಗೆ ಸಮಯ ಸರಿದದ್ದು ಗೊತ್ತಾಗಲಿಲ್ಲ. ಮಾರ್ಗದುದ್ದಕ್ಕೂ ಹಿಮವಿದ್ದುದರಿಂದ ಟ್ರೆಕ್ಕಿಂಗ್ ಪೋಲಿನ ಸಹಾಯದಿಂದ ಎಚ್ಚರಿಕೆಯಿಂದ ನಡೆಯುತ್ತಿದ್ದೆ. ಕೆಲವೆಡೆ ಜಾರಿಕೆಯಿದ್ದು ನಡಿಗೆ ನಿಧಾನವಾಗತೊಡಗಿತು. ಬಿಸಿಲು ಚುರುಕಾಗಿದ್ದು ಹಿಮ ಕರಗಿ ನಮಗೆ ನಡೆಯಲು ಕಷ್ಟವಾಗತೊಡಗಿತು. ನಮ್ಮ ಚಾರಣದಲ್ಲಿ ನಮಗೆ ಇಂಡಿಯಾ ಹೈಕ್ ಸಂಸ್ಥೆ ಮೈಕ್ರೋಸ್ಪೈಕ್ಸ್‌ಗಳನ್ನಾಗಲೀ ಗೈಟರ್ಸ್‌ಗಳನ್ನಾಗಲಿ ಕೊಟ್ಟಿರದ ಕಾರಣ ನಮ್ಮ ಚಾರಣ ನಿಧಾನವಾಗಿ ಸಾಗತೊಡಗಿತು. ನಂತರ ಚಾರಣ ಬ್ಯಾಚ್‌ಗಳಿಗೆ ಮೈಕ್ರೋಸ್ಪೈಕ್ಸ್ ಹಾಗೂ ಗೈಟರ್ಸ್‌ಗಳನ್ನು ಎಲ್ಲರಿಗೂ ಕೊಟ್ಟು ಅವುಗಳನ್ನು ಹೇಗೆ ಉಪಯೋಗಿಸಬೇಕೆಂದು ಚಾರಣದ ಪ್ರಾರಂಭದ ದಿನದಲ್ಲೇ ತಿಳಿಸಿಕೊಡುತ್ತಿದ್ದರು. ಮೈಕ್ರೋಸ್ಪೈಕ್ಸ್ ಎಂದರೆ ಟ್ರೆಕ್ಕಿಂಗ್‌ಶೂಗಳ ತಳದಲ್ಲಿ ಧರಿಸುವ ಕಬ್ಬಿಣದ ಮುಳ್ಳಿನಿಂದ ಕೂಡಿದ ಸಾಧನಗಳು. ಶೂ ಧರಿಸಿದ ನಂತರ ಅದರ ಬುಡದಲ್ಲಿ ಇವುಗಳನ್ನು ಸಿಕ್ಕಿಸಿಕೊಂಡು ದಟ್ಟವಾದ ಹಿಮದಿಂದ ಕೂಡಿದ ಮಾರ್ಗದಲ್ಲಿ ನಡೆದಾಗ ನಮಗೆ ಜಾರುವ ಭಯವಿರುವುದಿಲ್ಲ. ಗೈಟರ್ಸ್‌ಗಳು ಪಾದಗಳ ಮೇಲ್ಭಾಗದಿಂದ ಮಂಡಿಯವರೆಗೂ ಧರಿಸುವ ಹಿಮದಿಂದ ರಕ್ಷಣೆಯೊದಗಿಸುವ ಸಾಧನ. ಇದನ್ನು ಚಾರಣ ಮಾರ್ಗದಲ್ಲಿ ಹೆಚ್ಚಿನ ಹಿಮದ ಶೇಖರಣೆಯಿದ್ದಾಗ ಚಾರಣಿಗರು ಧರಿಸಬೇಕು.

ನಮ್ಮ ಚಾರಣ ಪ್ರಾರಂಭವಾಗುತ್ತಿದ್ದಂತೆ ಸ್ವಲ್ಪ ಸಮಯದಲ್ಲೇ ರುಯಿನ್ಸಾರ್ ಕಣಿವೆಯಿಂದ ಹರಿದು ಬರುತ್ತಿರುವ ನದಿಯೊಂದಿಗೆ ಸೂಪಿನ್ ನದಿಯ ಸಂಗಮ ಕಂಡುಬಂದಿತು. ಇಲ್ಲಿಂದ ನಮಗೆ ರುಯಿನ್ಸಾರ್ ಕಣಿವೆಯ ಹಿಮಾವೃತವಾದ ಪರ್ವತ ಶಿಖರಗಳಾದ ಮೌಂಟ್ ಬ್ಲಾಕ್ ಜಾಕ್ ಹಾಗೂ ಹರ್-ಕಿ-ದೂನ್ ಶಿಖರಗಳು ಕಾಣತೊಡಗಿತು. ಇದರಿಂದ ಎಲ್ಲ ಚಾರಣಿಗರ ಉತ್ಸಾಹ ಇಮ್ಮಡಿಯಾಯಿತು. ಮಾರ್ಗ ಅಲ್ಲಲ್ಲಿ ತೀವ್ರ ಏರುವಿಕೆ ಹಾಗೂ ಇಳಿಯುವ ರೀತಿಯಲ್ಲಿದ್ದು ಆಯಾಸ ಎಲ್ಲರಲ್ಲೂ ಕಾಣತೊಡಗಿತು. ಮುಂದುವರೆಯುತ್ತಿದ್ದಂತೆ ಮಾರ್ಗ 65 ಡಿಗ್ರಿ ಏರುವಿಕೆಯಿಂದ ಕೂಡಿದ್ದು ಇದು ಸುಲಭವಾಗಿ ಹತ್ತಬಹುದಾಗಿದ್ದರೂ ಅತಿಯಾದ ಹಿಮದಿಂದ ಕೂಡಿದ್ದು ಪಾದಗಳು ಅದರೊಳಗೆ ಹೂತು ಹೋಗತೊಡಗಿ ನಡೆಯುವುದು ಕಷ್ಟವಾಗತೊಡಗಿತು. ಹರ್-ಕಿ-ದೂನ್ ಕ್ಯಾಂಪ್ ತಲಪುವ ಅಂತಿಮ ಮಾರ್ಗ ನದಿಯ ಪಕ್ಕದಲ್ಲೇ ಹಾದು

ಹೋಗುತ್ತಿದ್ದು ದಟ್ಟವಾದ ಕಾಡಿನ ಮೂಲಕ ನಡೆದುಕೊಂಡು ಹೋಗಬೇಕಿತ್ತು. ಕಡೆಗೆ ಹರ್-ಕಿ-ದೂನ್ ಸಮ್ಮಿಟ್ ಕ್ಯಾಂಪ್ ತಲುಪಿದೆವು. ಇಲ್ಲಿಂದ ನಮಗೆ ಸ್ವರ್ಗಾರೋಹಿಣಿ – 1 ಶಿಖರ ಹಾಗೂ ಹಿಮಾವೃತವಾದ ಹಾಟ ಶಿಖರ ಮತ್ತು ಬ್ಲಾಕ್ ಶಿಖರ ಕಾಣಿಸತೊಡಗಿತು. ನಮ್ಮ ಇಂದಿನ ಚಾರಣ ಇಲ್ಲಿಗೆ ಮುಗಿದಿದ್ದು ಎಲ್ಲರೂ ಅವರುಗಳಿಗೆ ನೀಡಿದ್ದ ಟೆಂಟ್ ಬಳಿ ಹೋಗಿ ನಮ್ಮ ಬ್ಯಾಕ್‌ಪ್ಯಾಕ್ ಇರಿಸಿ ಸ್ವಲ್ಪ ವಿಶ್ರಾಂತಿಯ ನಂತರ ನಮಗೆ ನೀಡಿದ ಚಹಾ ಸೇವಿಸಿ ಸುತ್ತಲಿನ ಪರಿಸರ ವೀಕ್ಷಿಸಲು ತೊಡಗಿದೆವು. ಸಮಯ ಆಗ 3 ಗಂಟೆಯಾಗಿತ್ತು. ಆದರೂ ಛಳಿಯಿದ್ದು ನಾವು ಯಾರೂ ನಮ್ಮ ಶೂಗಳನ್ನು ತೆಗೆಯದೆ ಹಾಗೂ ಜರ್ಕಿನ್ ಧರಿಸಿಯೇ ಇರಬೇಕಿತ್ತು. ನಮ್ಮ ಕ್ಯಾಂಪ್ ಬಳಿಯಲ್ಲೇ ನದಿ ಹರಿಯುತ್ತಿದ್ದು ನಾನು ಹಾಗೂ ಮತ್ತೆ ಕೆಲವರು ಅದರ ಪಕ್ಕದಲ್ಲೇ ನಮ್ಮ ಫೋಮ್ ಮ್ಯಾಟ್ ಹಾಕಿಕೊಂಡು ಹರಿಯುವ ನದಿಯ ನೀರನ್ನು ನೋಡುತ್ತ ನಮ್ಮ ಅಲ್ಲಿಯವರೆಗಿನ ಚಾರಣದ ಬಗ್ಗೆ ಬಹಳ ಹೊತ್ತು ಚರ್ಚಿಸುತ್ತಿದ್ದೆವು. ಸಂಜೆ 5 ಗಂಟೆಗೆ ಚಾರಣ ನಾಯಕರು ಎಲ್ಲರನ್ನೂ ಕರೆದು ಹರ್-ಕಿ-ದೂನ್‌ನಿಂದ ಹತ್ತಿರದ ಕಚ್ಚಾ ರಸ್ತೆಯಲ್ಲಿ ಹೋಗಿ ಕೆಲವು ಜಲಪಾತಗಳನ್ನು ನೋಡಬಹುದಾದರೂ ಮರಳಿ ಕ್ಯಾಂಪಿಗೆ ಬರುವ ಹೊತ್ತಿಗೆ ಕತ್ತಲಾಗುವುದರಿಂದ ಹಾಗೂ ವಿಪರೀತ ಛಳಿ ಇರುವುದರಿಂದ ಅಲ್ಲಿಗೆ ಹೋಗದಿರಲು ಎಲ್ಲರಿಗೂ ಸೂಚಿಸಿದರು. ಎಲ್ಲರೂ ಅದಕ್ಕೆ ಸಮ್ಮತಿಸಿದರು. ಅಷ್ಟುಹೊತ್ತಿಗಾಗಲೇ ಸುತ್ತಲಿನ ತಾಪಮಾನ -5°C ಇದ್ದು ಎಲ್ಲರೂ ಛಳಿಯಿಂದ ನಡುಗುತ್ತಿದ್ದರು. ಅಗ ನಮಗೆಲ್ಲರಿಗೂ ಬಿಸಿ ಬಿಸಿ ಈರುಳ್ಳಿ ಪಕೋಡ ಹಾಗೂ ಚಹ ನೀಡಿದರು. ಎಲ್ಲರೂ ಚಹಾ ಸೇವಿಸಿ ಟೆಂಟಿನೊಳಗೆ ಸೇರಿಕೊಂಡು ರಾತ್ರಿಯ ಊಟದವರೆಗೂ ಹರಟೆ ಹೊಡೆಯತೊಡಗಿದೆವು. ರಾತ್ರಿ 8ಕ್ಕೆ ಎಲ್ಲರೂ ಬಿಸಿ ಬಿಸಿ ರೋಟಿ, ಜಾಮೂನ್ ತಿಂದು ಮಾರನೆ ದಿನದ ಚಾರಣದ ಬಗ್ಗೆ ಮಾತನಾಡುತ್ತ ನಿದ್ರೆಹೋದೆವು.

ನಾಲ್ಕನೇ ದಿನ ಜನವರಿ 26, 2017: ಹರ-ಕಿ-ಧುನ್ ನಿಂದ ಜೌಂದರ್ ಹಿಮನದಿಯವರೆಗೆ ಮತ್ತು ಮರಳಿ ಹರ-ಕಿ-ಧುನ್ ಬೇಸ್ ಕ್ಯಾಂಪ್ 7 ಘಂಟೆಗಳ ನಡಿಗೆ – 15 ಕಿ.ಮೀ

ಇಂದು ನಾವು ಹರ್-ಕಿ-ಧುನ್ ಕ್ಯಾಂಪಿನಿಂದ ಜೌಂದರ್ ಹಿಮನದಿಯವರೆಗೆ ಚಾರಣ ಮಾಡಬೇಕಿತ್ತು. ಆದರೆ ಚಾರಣ ನಾಯಕ ಹಾಗೂ ಮಾರ್ಗದರ್ಶಿಗೆ ಬಂದ ಸ್ಥಳೀಯ ಮಾಹಿತಿ ಪ್ರಕಾರ ಅಂದು ಹಿಮವರ್ಷವಾಗಲಿದ್ದು ಚಾರಣ ಅಸಾಧ್ಯವೆಂದು ಅರಿತು ಅವರು ಎಲ್ಲರಿಗೂ ಈ ವಿಷಯ ತಿಳಿಸಿ ಅಲ್ಲಿಂದ ಮರಳಿ

ಓಸ್ಲಾ ಕ್ಯಾಂಪಿಗೆ ಮರಳುವುದು ಸೂಕ್ತವೆಂದು ಸೂಚಿಸಿದರು. ಎಲ್ಲರೂ ಇದಕ್ಕೆ ಸಮ್ಮತಿಸಿ ಅದರಂತೆ ಮುಂಜಾನೆ ಉಪಹಾರ ಸ್ವೀಕರಿಸಿ ಮಧ್ಯಾಹ್ನದ ಊಟದ ಬುತ್ತಿ ಪಡೆದು ನಿಧಾನವಾಗಿ ಹಿಮಾವೃತವಾದ ಮಾರ್ಗದಲ್ಲಿ ನಡೆಯತೊಡಗಿದೆವು. ನನ್ನ ಅನುಭವದ ಪ್ರಕಾರ ಚಾರಣದಲ್ಲಿ ಈ ರೀತಿಯ ಹವಾಮಾನ ವೈಪರಿತ್ಯಗಳಿಂದಾಗಿ ಚಾರಣವು ಆ ದಿನ ಸಾಧ್ಯವಾಗದೆ ಎಲ್ಲರೂ ಮರಳಬೇಕಾಗುತ್ತದೆ. 2013 ಆಗಸ್ಟ್ ತಿಂಗಳಲ್ಲಿ ನಾನು ಮೊದಲ ಬಾರಿಗೆ ಕಾಶ್ಮೀರ ಸರೋವರಗಳೆಡೆಗೆ ಚಾರಣ ಮಾಡುವ ಸಮಯದಲ್ಲಿ ಮೊದಲ ದಿನದ ಚಾರಣ – ಸೋನ್ ಮಾರ್ಗ ಬೇಸ್ ಕ್ಯಾಂಪ್ನಿಂದ ನಿಚ್ನಾಯ್ ಪಾಸ್ ಕ್ಯಾಂಪ್ ವರೆಗೂ 9 ಕಿ.ಮೀ ಚಾರಣ ಮಾಡಿ ಎಲ್ಲರೂ ಟೆಂಟಿನಲ್ಲಿ ರಾತ್ರಿ ಮಲಗಿದ್ದಾಗ ಮಧ್ಯಾರಾತ್ರಿ ಪ್ರಾರಂಭವಾದ ಮಳೆ ಮೂರು ದಿನ ಸತತವಾಗಿ ಸುರಿದು ನಾಲ್ಕನೇ ದಿನವಾದ 15 ಆಗಸ್ಟ್ ಮುಂಜಾನೆ ಬಿಟ್ಟಿತು. ಆ ಸಮಯದಲ್ಲಿ ನಮ್ಮಲ್ಲಿ ಯಾರೂ ಟೆಂಟ್‌ನಿಂದ ಹೊರಬರಲಾಗಲೇ ಇಲ್ಲ. ತೀರ ಅಗತ್ಯವಿದ್ದ ಸಮಯದಲ್ಲಿ ರೈನ್ ಕೋಟನ್ನು ಧರಿಸಿ ನಮ್ಮ ನಿತ್ಯ ಕರ್ಮಗಳನ್ನು ಪೂರೈಸಿ ಮರಳಿ ಟೆಂಟಿನೊಳಗೆ ಸೇರಿ ಕೊಳ್ಳಬೇಕಾಯಿತು. ಮುಂಜಾನೆ ಚಹ, ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ಸಂಜೆಯ ಸ್ನಾಕ್ಸ್ – ಚಹ ಹಾಗೂ ರಾತ್ರಿಯ ಊಟ ಎಲ್ಲವೂ ವಿಪರೀತ ಮಳೆಯಲ್ಲೂ ಇಂಡಿಯಾ ಹೈಕ್ಸ್ ಸಂಸ್ಥೆಯ ಸಿಬ್ಬಂದಿಗಳು ಅತ್ಯಂತ ಮುತುವರ್ಜಿಯಿಂದ ತಯಾರಿಸಿ ನಮ್ಮ ಟೆಂಟಿನೊಳಗೇ ತಂದು ಕೊಡುತ್ತಿದ್ದರು. ಅನಂತರ 15ನೇ ತಾರೀಖಿನಂದು ಚಾರಣ ನಾಯಕರು ಸಂಸ್ಥೆಯ ಬೆಂಗಳೂರು ಕಛೇರಿಯಿಂದ ಅನುಮತಿ ಪಡೆದು ಚಾರಣವನ್ನು ರದ್ದುಪಡಿಸಿ ಮರಳಿ ಶ್ರೀನಗರಕ್ಕೆ ಬರಬೇಕಾಯಿತು. ಅಂತಹ ಸಂದರ್ಭಗಳಲ್ಲಿ ಇಂಡಿಯಾ ಹೈಕ್ ಸಂಸ್ಥೆ ಎಲ್ಲ ಚಾರಣಿಗರಿಗೂ ಒಂದು ವರ್ಷದಲ್ಲಿ ಯಾವಾಗ ಬೇಕಾದರೂ ಈ ಮಾರ್ಗದಲ್ಲಿ ಚಾರಣ ಮಾಡಲು ಅನುವು ಮಾಡಿಕೊಟ್ಟು ಚಾರಣದ ಶುಲ್ಕವನ್ನು ಮಾಫಿ ಮಾಡಿದರು. ಹೀಗಾಗಿ ನಾನು ಮರುವರ್ಷ ಅಂದರೆ 2014 ಜುಲೈ ತಿಂಗಳಿನಲ್ಲಿ ಕಾಶ್ಮೀರ ಸರೋವರಗಳ ಚಾರಣ ಮಾಡಿದೆ.

ಹರ್–ಕಿ–ಧುನ್ ಕ್ಯಾಂಪಿನಿಂದ ಮರಳಿ ಓಸ್ಲಾ ಕಡೆಗೆ ಚಾರಣ ಮಾಡುವಾಗ ನಾನು ಬಹಳ ನಿಧಾನ ಹಾಗೂ ಎಚ್ಚರಿಕೆಯಿಂದ ನಡೆಯುತ್ತಾ ಇರುವಾಗ ನನ್ನ ಸಹ ಚಾರಣಿಗರು ಎಲ್ಲರೂ ಮುಂದೆ ಹೋಗತೊಡಗಿದರು. ನನ್ನ ಜೊತೆಗೆ ಇಂಟೆಲ್ ಸಂಸ್ಥೆಯ ಇಂಜಿನಿಯರ್ ಬರತೊಡಗಿದರು. ಸುತ್ತಲೂ ಯಾವುದೇ ಗಿಡ/ಮರಗಳಿಲ್ಲದೆ ಪ್ರಾಣಿಗಳ / ಪಕ್ಷಿಗಳ ಸುಳಿವೇ ಇರದೆ ಎಲ್ಲೆಲ್ಲಿ ನೋಡಿದರೂ ಹಿಮದಿಂದ ಕೂಡಿದ ನೆಲವು ಕಾಣಿಸುತ್ತಿತ್ತು. ಅದರಲ್ಲೇ ನಾವು ಅಂದಾಜಿನ ಪ್ರಕಾರ ಓಸ್ಲಾಕಡೆಗೆ ನಡೆಯ ತೊಡಗಿದೆವು. ಒಂದು ತಿರುವಿನಲ್ಲಿ ನನ್ನೊಂದಿಗಿದ್ದ ಇಂಜಿನಿಯರ್ ಕೂಡ ಮುಂದೆ ಮುಂದೆ ಹೋಗಲು ನನಗೂ ಅವರಿಗೂ ಅಂತರ

ಹೆಚ್ಚತೊಡಗಿತು. ಸ್ವಲ್ಪ ಸಮಯದ ನಂತರ ಅವರೂ ಕೂಡ ನನಗೆ ಕಾಣಿಸಲೇ ಇಲ್ಲ. ಆದರೂ ನಾನು ಧೃತಿಗೆಡದೆ ನೇರವಾಗಿ ನಡೆಯ ತೊಡಗಿದೆ. ಎಷ್ಟು ಹೊತ್ತು ನಡೆದರೂ ಯಾರೂ ನನ್ನ ಕಣ್ಣಿಗೆ ಕಾಣಿಸಲಿಲ್ಲ. ಆಗ ನನಗೆ ನಾನು ದಾರಿ ತಪ್ಪಿರಬಹುದೆಂಬ ಭಯವಾಗತೊಡಗಿತು. ಏನು ಮಾಡುವುದು ಎಂದು ಯೋಚಿಸತೊಡಗಿದೆ. ಅಲ್ಲೇ ನಿಲ್ಲುವ ಹಾಗಿಲ್ಲ , ಮುಂದಿನ ದಾರಿ ಕಾಣುತ್ತಿಲ್ಲವಲ್ಲ ಎಂದು ಯೋಚಿಸತೊಡಗಿದೆ. ಸ್ವಲ್ಪ ದೂರ ಹೋದಾಗ ಬಲಭಾಗದಲ್ಲಿ ಬಹಳ ದೂರ ಯಾರೋ ಕುರಿಕಾಯುವವನು ಕಂಡು ಬಂದ. ನಾನು ಅಲ್ಲಿಂದಲೇ ಜೋರಾಗಿ ಕೂಗಿ ಓಸ್ಲಾ ಯಾವ ಕಡೆಗೆ ಇದೆ ಎಂದು ಹಿಂದಿಯಲ್ಲಿ ಕೂಗಿದೆ. ಅವನು ತನ್ನ ಕೋಲಿನಿಂದ ದಿಕ್ಕನ್ನು ತೋರಿದ. ಬದುಕಿದೆಯಾ ಬಡ ಜೀವವೇ ಎಂದು ಆ ದಿಕ್ಕಿನಲ್ಲೇ ನಡೆಯತೊಡಗಿದೆ. 30 ನಿಮಿಷ ನನ್ನೆಲ್ಲಾ ಶಕ್ತಿಯನ್ನೂ ಸೇರಿಸಿಕೊಂಡು ವೇಗವಾಗಿ ನಡೆದ ನಂತರ ದೂರದಲ್ಲಿ ನನ್ನೊಂದಿಗಿದ್ದ

ಸಹಚಾರಣಿಗರು ಕಾಣಿಸಿದರು. ಆಗ ನನಗೆ ಧೈರ್ಯಬಂದು ಅವರನ್ನೇ ನನ್ನ ದೃಷ್ಟಿಯಲ್ಲಿಟ್ಟುಕೊಂಡು ನಡೆಯತೊಡಗಿದೆ. ಮತ್ತೊಂದು ಗಂಟೆ ನಂತರ ನನಗೆ ಓಸ್ಲಾ ಹಳ್ಳಿಯ ಕೆಲವು ಮನೆಗಳು ಸಣ್ಣದಾಗಿ ಕಾಣತೊಡಗಿತು. ಹೀಗೆ 30 ನಿಮಿಷ ನಡೆದು ಓಸ್ಲಾ ಕ್ಯಾಂಪನ್ನು ತಲುಪಿದೆ. ಅಷ್ಟರಲ್ಲಾಗಲೇ ಎಲ್ಲ ಚಾರಣಿಗರೂ ಅಲ್ಲಿಗೆ ಬಂದು ಎರಡು ದಿನ ಹಿಂದೆ ನಾವು ಇದ್ದ ಮರದ ಮನೆಯಲ್ಲಿ ಜಾಗಗಳನ್ನು ಆಕ್ರಮಿಸಿಕೊಂಡಿದ್ದರು. ನಾನೂ ಹೋಗಿ ಅಲ್ಲೇ ಸ್ವಲ್ಪ ಜಾಗ ಮಾಡಿಕೊಂಡು ನನ್ನ ಬ್ಯಾಕ್‌ಪ್ಯಾಕ್ ಇಟ್ಟುಕೊಂಡು ಕುಳಿತೆ. ನಿಧಾನವಾಗಿ ಮನೆಯೊಳಗಡೆ ವಾತಾವರಣವು ತಿಳಿಯಾಯಿತು. ಸಂಜೆ 5 ಗಂಟೆಗೆ ಎಲ್ಲರಿಗೂ ಚಹಾ ಕರೆ ಬಂತು. ಚಹಾ ನಂತರ ಓಸ್ಲಾ ಹಳ್ಳಿಯ ವೀಕ್ಷಣೆಗೆ ಹೊರಟೆವು. ನಾನೂ ಸೇರಿ ಕೆಲವರು ಹಳ್ಳಿಯ ಮಕ್ಕಳ

ಜೊತೆಗೆ ಸೇರಿ ಅವರೊಡನೆ ಫೋಟೊ ತೆಗೆದುಕೊಂಡೆವು. ಹಾಗೇ ಕೆಲವರು ಮಕ್ಕಳಿಗೆ ಚಾಕೊಲೇಟ್ ಹಂಚಿದರು. ಮತ್ತೊಮ್ಮೆ ದುರ್ಯೋಧನ ಮಂದಿರವನ್ನು ವೀಕ್ಷಿಸಿದೆ. ಅಲ್ಲಿನ ಕೆಲವು ಅಂಗಡಿಗಳಲ್ಲಿ ನಡೆಯುವ ವ್ಯಾಪಾರ ಕೂಡ ನೋಡಿದೆ. ಇಲ್ಲಿನ ನಿಯಮದ ಪ್ರಕಾರ ಹೊರಗಿಂದ ಬಂದವರು ಏನನ್ನಾದರೂ ಕೊಳ್ಳಲು ಇಚ್ಚಿಸಿದಲ್ಲಿ ತಮಗೆ ಬೇಕಾದ ಪದಾರ್ಥ ಅಂಗಡಿಯಲ್ಲಿದ್ದಲ್ಲಿ ಬೆರಳಿನಿಂದ ತೋರಬೇಕು. ಆಗ ಅಂಗಡಿ ಮಾಲೀಕ ಅದನ್ನು ನಿಮ್ಮ ಮುಂದೆ ಇಡುವನು. ನಂತರ ನೀವು ಹಣ ಅವನ ಕೈಗೆ ಕೊಡುವ ಹಾಗಿಲ್ಲ. ಬದಲಿಗೆ ಅದನ್ನು ಅವನಿಗೆ ಹತ್ತಿರದ ಸ್ಥಳದಲ್ಲಿ ಇಡಬೇಕು. ಅವನು ಅದನ್ನು ತೆಗೆದುಕೊಂಡು ಬಾಕಿ ಹಣವೇನಾದರೂ ಅವನು ಕೊಡಬೇಕಿದ್ದಲ್ಲಿ ಅದನ್ನು ಅಲ್ಲೇ ಇಡುವನು. ಇದೇ ರೀತಿಯ ನಿಯಮವು ಮಲಾನ ಹಳ್ಳಿಯಲ್ಲೂ ಕೂಡ ಇರುವುದನ್ನು ನಾನು ನನ್ನ ಚಂದರ್‌ಖೇಣಿ ಚಾರಣದಲ್ಲೂ ಗಮನಿಸಿದ್ದೆ. ಹಳ್ಳಿಯ ವೀಕ್ಷಣೆಯ ನಂತರ

ನಾವುಗಳು ಮರಳಿ ಮರದ ಮನೆಗೆ ಹಿಂದಿರುಗಿದೆವು. ಅಷ್ಟರಲ್ಲಿ ಕತ್ತಲಾಗತೊಡಗಿ ಎಲ್ಲರೂ ನಾವಿರುವ ಹಾಲ್‌ನಲ್ಲಿನ ಒಂದೇ ದೀಪದ ಸಹಾಯದಿಂದ ನಮ್ಮ ಬ್ಯಾಕ್‌ಪ್ಯಾಕಿನಲ್ಲಿನ ಪದಾರ್ಥಗಳನ್ನು ಮರುವಿಂಗಡಣೆ ಮಾಡಿಕೊಳ್ಳ ತೊಡಗಿದೆವು. ರಾತ್ರಿ 8ಕ್ಕೆ ಎಲ್ಲರಿಗೂ ಬಿಸಿಯಾದ ಊಟ ನೀಡಿದರು. ಆಯಾಸವಾಗಿದ್ದರಿಂದ ಊಟದ ನಂತರ ಎಲ್ಲರೂ ಗಡದ್ದಾಗಿ ನಿದ್ರಿಸಿದೆವು.

ಐದನೇ ದಿನ ಜನವರಿ 27, 2017: ಓಸ್ಲಾ ಕ್ಯಾಂಪ್‌ನಿಂದ ತಾಲೂಕ ಮಾರ್ಗವಾಗಿ ಸಾಂಕ್ರಿ ಕ್ಯಾಂಪ್ ಕಡೆಗಿನ ದೀರ್ಘ ಚಾರಣ 8 ಘಂಟೆಗಳ 26 ಕಿ.ಮೀ ನಡಿಗೆ.

ಮಾರನೇ ದಿನ ಅಂದರೆ ಜನವರಿ 27ರಂದು ನಾವೆಲ್ಲರೂ ಓಸ್ಲಾ ಕ್ಯಾಂಪಿನಿಂದ ಬೆಳಗಿನ ಉಪಹಾರ ಸೇವಿಸಿ ಮರು ಪ್ರಯಾಣ ಪ್ರಾರಂಭಿಸಿ ನಿಧಾನವಾಗಿ ನಡೆಯುತ್ತ ಮಧ್ಯಾಹ್ನ 2 ಗಂಟೆಗೆ ತಾಲುಕ ಹಳ್ಳಿ ತಲುಪಿದೆವು. ಅಲ್ಲಿನ ಊಟದ ಮೆಸ್‌ನಲ್ಲಿ ಎಲ್ಲರೂ ಬಿಸಿ ಚಪಾತಿ, ಅನ್ನ, ದಾಲ್ ತಿಂದು ಅರ್ಧ ಗಂಟೆ ವಿಶ್ರಮಿಸಿಕೊಂಡು ಸಾಂಕ್ರಿ ಬೇಸ್ ಕ್ಯಾಂಪ್ ತಲುಪಿ ನಮಗಾಗಿ ಕಾಯ್ದಿರಿಸಿದ ಹೋಟಲಲ್ಲಿ ರಾತ್ರಿ ಕಳೆದು ಮರುದಿನ ಸಾಂಕ್ರಿಯಿಂದ ಡೆಹರಾಡೂನ್ ಕಡೆಗೆ ಪಯಣಿಸಿದೆವು. ಇಲ್ಲಿಗೆ ಹರ್-ಕಿ-ದೂನ್ ಚಾರಣ ಸಂಪನ್ನವಾಯಿತು.

ಚಂದರ್‌ಖನಿ ಪಾಸ್ ಚಾರಣ

ಚಂದರಖನಿ ಹಿಮಾಲಯದ ಶಿವಲಿಕ್ ಪರ್ವತಶ್ರೇಣಿಗಳಲ್ಲಿರುವ ಸುಪ್ರಸಿದ್ಧ ಚಾರಣ ಮಾರ್ಗ. ಈ ಮಾರ್ಗ 12190 ಅಡಿ ಎತ್ತರದಲ್ಲಿ ಹಿಮಾಚಲ ಪ್ರದೇಶದ ಕುಲ್ಲು ಕಣಿವೆಯಲ್ಲಿ ಹಾದುಹೋಗುತ್ತದೆ. ಒಟ್ಟು ಚಾರಣ ಮಾರ್ಗ 56 ಕಿ.ಮೀ. ಈ ಮಾರ್ಗ ಅರ್ಧಚಂದ್ರಾಕಾರದಂತಿರುವುದು. 9 ದಿನಗಳ ಕುಲ್ಲು ಕ್ಯಾಂಪಿನಿಂದ ಹೊರಟು ಮಲಾನ ಹಳ್ಳಿಯ ಮೂಲಕ ಈ ಚಾರಣ ನಾನು ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯವರೊಂದಿಗೆ 31-5-2014 ರಿಂದ 09-6-2014 ವರೆಗೆ ಮಾಡಿದೆ. ಈ ಚಾರಣ ಮಧ್ಯಮದಿಂದ ತೀವ್ರಸವಾಲಿನದಾಗಿದ್ದು (Moderate to challenging) ಈ ಮಾರ್ಗದಲ್ಲಿ ದಿಯೋ ತಿಬ್ಬ, ಹನುಮಾನ್ ತಿಬ್ಬ, ಕಿನ್ನೋರ್ ಕೈಲಾಶ್, ಪಾರ್ವತಿ ಕಣಿವೆ, ಬಾರ ಬಂಗಲ್ ಹಾಗೂ ಪಿನ್ ಪಾರ್ವತಿ ಶ್ರೇಣಿಗಳನ್ನು ನೋಡಬಹುದು.

ಯಾವುದೇ ಚಾರಣ ಮಾಡುವ ಮೊದಲು ಸಂಪೂರ್ಣ ಮಾಹಿತಿ ಅರಿತಿರಬೇಕು. ಹಾಗೇ ಆ ಚಾರಣಕ್ಕೆ ಬೇಕಾಗುವ ಸಲಕರಣೆಗಳನ್ನು ಕೊಂಡೊಯ್ಯಬೇಕು. ಸಾಮಾನ್ಯವಾಗಿ ನಾನು ಮಾಡಿದ ಎಲ್ಲ ಚಾರಣಗಳಲ್ಲೂ ಈ ಎಚ್ಚರಿಕೆ ಕ್ರಮ ಅನುಸರಿಸುವುದು ನನ್ನ ನಿಯಮ. ಆದರೆ ಈ ಚಾರಣದಲ್ಲಿ ನಾನು ಎಡವಿದೆ. ಕಾರಣ YHAI ಈ ಚಾರಣದ ಬಗ್ಗೆ ಆ ಸಮಯದ ಹವಾಮಾನ, ವಿಶೇಷ ಉಡುಪುಗಳ ಬಗ್ಗೆ ಸರಿಯಾದ ಮಾಹಿತಿ ನೀಡಿರಲಿಲ್ಲ.

ಮೊದಲನೆ ದಿನ : 30ಮೇ 2014 – ದೆಹಲಿ – ಕುಲ್ಲುವಿನ ಬಳಿಯ ಸಿಯೋಬಾಗ್ ಕ್ಯಾಂಪ್ ಬಸ್ಸಿನಲ್ಲಿ ಪ್ರಯಾಣ.

31ಮೇ 2014ರಂದು ಸಿಯೋಬಾಗ್ ಕ್ಯಾಂಪನ್ನು ತಲಪುವ ಉದ್ದೇಶದಿಂದ ಬೆಂಗಳೂರಿನಿಂದ ದೆಹಲಿಗೆ ಪಯಣಿಸಿ 30ನೇ ತಾರೀಖು ರಾತ್ರೆ ISBT ಬಸ್

ನಿಲ್ದಾಣದಿಂದ ಮನಾಲಿಗೆ ಹೋಗುವ ಬಸ್ಸಿನ ಮೂಲಕ ಪ್ರಯಾಣ ಮಾಡಿ ಕುಲ್ಲು ಬಸ್ ನಿಲ್ದಾಣದಿಂದ ಸ್ವಲ್ಪ ಮುಂದೆ ಹೋಗಿ ಒಂದು ಸೇತುವೆ ಬಳಿ ಇಳಿದು ಅಲ್ಲಿಂದ ಸೇತುವೆ ದಾಟಿ ನನ್ನಲ್ಲಿನ ಬ್ಯಾಕ್‌ಪ್ಯಾಕ್ ಹಾಗೂ ಕೈ ಬ್ಯಾಗ್ ಹಿಡಿದು ಮುನ್ನಡೆಯತೊಡಗಿದೆ. ಒಬ್ಬ ಮೋಟಾರ್ ಸೈಕಲ್ ಸವಾರ ನನ್ನನ್ನು ಗಮನಿಸಿ ನನ್ನ ಮುಂದೆ ವಾಹನವನ್ನು ನಿಲ್ಲಿಸಿದರು. ಸಿಯೋಬಾಗ್ ಬೇಸ್ ಕ್ಯಾಂಪಿಗೆ ಹೋಗಬೇಕೆಂದು ಅಲ್ಲಿಗೆ ಹೋಗಲು ಯಾವುದಾದರೂ ವಾಹನ ಸಿಗುವುದೇ

ಈ ಚಾರಣದ ವಿವರಗಳು ಇಂತಿವೆ ;

ದಿನ	ಪ್ರದೇಶ	ಕ್ರಮಿಸುವ ದೂರ (ಕಿ ಮೀ)	ಎತ್ತರ (ಅಡಿಗಳಲ್ಲಿ)	ತೆಗೆದುಕೊಂಡ ಸಮಯ (ಗಂಟೆಗಳಲ್ಲಿ)
1	ಸಿಯೋಬಾಗ್ ಬೇಸ್ ಕ್ಯಾಂಪ್			
2	ಹವಾಮಾನಕ್ಕೆ ಹೊಂದಿಕೊಳ್ಳುವುದು			
3	ಬೆಟ್ಟ ಹತ್ತುವುದರ ಅಭ್ಯಾಸ			
4	ಬೇಸ್ ಕ್ಯಾಂಪಿನಿಂದ ಮಲಾನಾ ಪ್ರಾಜೆಕ್ಟ್‌ವರೆಗೂ ಬಸ್ಸಿನಲ್ಲಿ ಪ್ರಯಾಣ	5	9000	4
5	ನಂತರ ಯೋಸ್ಗೋವರೆಗೂ ಚಾರಣ	8	8900	3
6	ಯೋಸ್ಗೋ ಕ್ಯಾಂಪಿನಿಂದ ಮಲಾನ ಹಳ್ಳಿಯ ಮುಖಾಂತರ ಬೆಹಲಿ ಕ್ಯಾಂಪ್	7	9300	3
7	ಬೆಹಲಿ ಕ್ಯಾಂಪಿನಿಂದ ವಾಚಿಂಗ್ ಕ್ಯಾಂಪ್	5	10000	5
8	ವಾಚಿಂಗ್ ಕ್ಯಾಂಪಿನಿಂದ ನಗ್ರೋನಿ ಕ್ಯಾಂಪ್	14	9000	5
9	ನಗ್ರೋನಿ ಕ್ಯಾಂಪಿನಿಂದ ಚಂದರ್ಖನಿ ಪಾಸ್ ಮಾರ್ಗವಾಗಿ ನಯಾ ಟಪ್ರು	7		4
10	ನಯಾ ಟಪ್ರು ಕಾಂಪಿನಿಂದ ಖುಂಸು ಹಳ್ಳಿಯ ಮುಖಾಂತರ ನಗ್ಗರ್ ಕ್ಯಾಂಪ್			

(ಅನಂತರ ನಗ್ಗರ್‌ನಿಂದ ಸಿಯೋಬಾಗ್ ಕ್ಯಾಂಪ್ – ಬಸ್ಸಿನಲ್ಲಿನ ಪ್ರಯಾಣ)

ಸಿಯೋಬಾಗ್‌ನಿಂದ ದೆಹಲಿಗೆ ಮರು ಪ್ರಯಾಣ

ಎಂದಾಗ, "ತಾನೂ ಅದೇ ದಿಕ್ಕಿನಲ್ಲಿ ಹೋಗುತ್ತಿರುವುದಾಗಿ ತಿಳಿಸಿ, ತಮ್ಮೊಂದಿಗೆ ಬರಬಹುದೆಂದು" ತಿಳಿಸಿದರು. ಆಗ ನನಗೆ ರೊಟ್ಟಿ ಜಾರಿ ತುಪ್ಪದೊಳಗೆ ಬಿದ್ದಂತೆ ಸಂತಸವಾಗಿ ಅವರ ಹಿಂದೆ ಕುಳಿತೆ. ಅವರು ನನ್ನನ್ನು 10 ನಿಮಿಷದಲ್ಲಿ ಸಿಯೋಬಾಗ್ ಬೇಸ್ ಕ್ಯಾಂಪ್ ಬಳಿಗೆ ಕರೆದೊಯ್ದರು. ಅವರಿಗೆ ಧನ್ಯವಾದ ಹೇಳಿ ಕ್ಯಾಂಪ್ ಪ್ರವೇಶಿಸಿ ರಿಜಿಸ್ಟ್ರೇಷನ್ ಫಾರ್ಮಾಲಿಟೀಸ್ ಮುಗಿಸಿದೆ.

ಎರಡನೆ ದಿನ : 31ಮೇ 2014 – ಕ್ಯಾಂಪ್‌ನಲ್ಲಿನ ಹವಾಮಾನಕ್ಕೆ ಹೊಂದಿಕೊಳ್ಳುವುದು.

ನಾನು ಪ್ರವೇಶಿಸಿದ ಟೆಂಟಿನಲ್ಲಿ ಚೆನ್ನೈನಿಂದ ಬಂದಿದ್ದ ಇಬ್ಬರು ಕನ್ನಡಿಗ ಎಂಜಿನಿಯರಿಂಗ್ ವಿದ್ಯಾರ್ಥಿಗಳಿದ್ದರು. ನಾನು ಅವರನ್ನು ಪರಿಚಯ ಮಾಡಿಕೊಂಡು ನನ್ನ ಹಿಂದಿನ ಚಾರಣಗಳ ಬಗ್ಗೆ ಅವರೊಂದಿಗೆ ಅನುಭವಗಳನ್ನು ಹಂಚಿಕೊಂಡೆ. ಇದು ಆದದ್ದು ಮೊದಲ ದಿನ. ಆ ದಿನ ಸಂಜೆಯ ಹೊತ್ತಿಗೆ ತೀವ್ರ ಛಳಿಯ ವಾತಾವರಣದಿಂದಾಗಿ ನಾನು ಯಾವುದೇ ಸ್ವೆಟರ್ / ಜರ್ಕಿನ್ ತರದೇ ಇದ್ದದ್ದು ಅರಿವಾಗಿ ಏನು ಮಾಡುವುದು ಎಂದು ಯೋಚಿಸುತ್ತಿದ್ದಾಗ ಟೆಂಟಿನಲ್ಲಿದ್ದ ವಿದ್ಯಾರ್ಥಿಗಳು ಕ್ಯಾಂಪಿನಿಂದ 3.5 ಕಿ.ಮೀ ದೂರ ಇರುವ ಕುಲು ಬಸ್ ನಿಲ್ದಾಣದ ಬಳಿ ಇರುವ ಅಂಗಡಿಗೆ ಹೋಗಿ ಜರ್ಕಿನ್ / ಸ್ವೆಟರನ್ನು ಖರೀದಿಸಿ ತರುವುದಾಗಿ ತಿಳಿಸಿದರು. ಹೀಗಾಗಿ ನನ್ನ ಸಮಸ್ಯೆ ಇಷ್ಟು ಸುಲಭವಾಗಿ ಬಗೆ ಹರಿದಿದ್ದು ನನಗೆ ಸಮಾಧಾನವುಂಟಾಯಿತು. ಅವರು ಅರ್ಧ ಗಂಟೆಯಲ್ಲಿ ನನಗೆ ಬೇಕಿದ್ದ ಬೆಚ್ಚನೆಯ ಉಡುಪುಗಳನ್ನು ತಂದು ಕೊಟ್ಟು ಉಪಕಾರ ಮಾಡಿದರು.

31 ಮೇ, ನಮ್ಮ ಬ್ಯಾಚ್ ಚಾರಣಿಗರಿಗೆ ಸ್ಥಳೀಯ ಹವೆಗೆ ಒಗ್ಗಿಕೊಳ್ಳಲು ನಿಗದಿಪಡಿಸಿದ್ದ ದಿನವಾಗಿತ್ತು. ಮುಂಜಾನೆ ಚಹಾ ಸೇವನೆಯ ನಂತರ ಇಬ್ಬರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ನನ್ನ ಬಳಿ ಬಂದು, "ಅಂಕಲ್ ನಾವು ಇಂದು ಒಂದು ದಿನದ ಔಟಿಂಗ್ ಮಾಡಲು ನಿರ್ಧರಿಸಿ ಹತ್ತಿರದ ಪರಾಶರ್ ಸರೋವರ ನೋಡಲು ಹೋಗುತ್ತಿದ್ದೇವೆ, ನೀವು ಬರುವಿರಾ" ಎಂದು ಕೇಳಿದರು. ನಾನು ಕೂಡಲೆ ಒಪ್ಪಿದೆ. ಮತ್ತಿಬ್ಬರು ಚಾರಣಿಗರೂ ನಮ್ಮೊಂದಿಗೆ ಸೇರಿಕೊಂಡರು. ಎಲ್ಲರೂ ಉಪಹಾರದ ನಂತರ ಕ್ಯಾಂಪ್ ನಾಯಕರಿಗೆ ತಿಳಿಸಿ ಒಂದು ಉತ್ತಮ ವಾಹನದಲ್ಲಿ ಪರಾಶರ್ ಸರೋವರದೆಡೆಗೆ ಹೊರಟೆವು.

ಪರಾಶರ್ ಸರೋವರ ಕುಲು ಬಸ್ ನಿಲ್ದಾಣದಿಂದ 62.5 ಕಿ.ಮೀ ದೂರದಲ್ಲಿದ್ದು ಇದು ಅಂಡಾಕಾರವಾಗಿರುವುದು ಹಾಗೂ ಮಧ್ಯದಲ್ಲಿ ತೇಲುವ ದ್ವೀಪವಿರುವುದು. ಇದು ಸಮುದ್ರ ಮಟ್ಟದಿಂದ 2730 ಮೀ ಎತ್ತರದಲ್ಲಿರುವುದು. ಇದರಲ್ಲಿನ ನೀರು ಅತ್ಯಂತ ಶುಭ್ರವಾಗಿರುವುದು, ಏಕೆಂದರೆ ಇಲ್ಲಿ ಹಿಮಪಾತವಾಗುತ್ತಲೇ

ಆಳವಾಗಿದೆ. ಇದರ ನೀರಿನಲ್ಲಿ ಮಾಲಿನ್ಯ ಉಂಟಾಗದ ಹಾಗೆ ನೋಡಿಕೊಳ್ಳಲಾಗುವುದು. ಈ ಸರೋವರದ ಹೊರಹರಿವುಗಳ್ ಸರೋವರದ ಈ ಗಿಡಗಳ ಸರೋವರದ ಪ್ರಾಂತದಲ್ಲಿ ಎಲ್ಲೂ ಕಾಣುವುದಿಲ್ಲ. ಹೊರಹರಿವುಗಳ್ ಸರೋವರದೊಂದಿಗೆ ಇರುವ ಸರೋವರದಲ್ಲಿನ ನೀರಿನ ಸಾಂದ್ರತೆ, ಉಷ್ಣತೆ ಎಲ್ಲವುಗಳ ಸಂಬಂಧವಿಲ್ಲ ಒಂದೇ ಆಗಿರುವುದು. ಹೀಗಾಗಿ ಇದರಲ್ಲಿನ ನೀರು ಎಲ್ಲಾ ಭಾಗಗಳಲ್ಲೂ ಒಂದೇ ರೀತಿಯದಾಗಿರುತ್ತದೆ. ಈ ಸರೋವರದ ಪವಿತ್ರ ಸರೋವರವಾಗಿರುವುದರಿಂದ ಇದರಲ್ಲಿನ ನೀರನ್ನು ಮುಟ್ಟುವಂತಿಲ್ಲ. ಕೇವಲ ಇಲ್ಲಿನ ಪರಾಶರ ಮಂದಿರದ ಅರ್ಚಕರಿಗೆ ಮಾತ್ರ ಸರೋವರದ ನೀರನ್ನು ಉಪಯೋಗಿಸಿಕೊಳ್ಳಲು ಅನುಮತಿ ಇರುವುದು. ಈ ಸರೋವರದ ದಡದಲ್ಲಿ ಪರಾಶರ ಋಷಿಗಳು ತಪಸ್ಸನ್ನು ಮಾಡಿದ್ದರೆಂದು ಐತಿಹ್ಯ. ಮತ್ತೊಂದು ವೈಶಿಷ್ಟ್ಯವೆಂದರೆ ಈ ಸರೋವರದಲ್ಲಿನ ತೇಲುವ ದ್ವೀಪ. ಈ ದ್ವೀಪದಲ್ಲಿ ಬೇರೆ ಬೇರೆ ಹಂತಗಳಲ್ಲಿ ಬೆಳೆಯುತ್ತಿರುವ ಗಿಡಗಳೇ ಇರುವುದು. ಇದು ಸರೋವರದ 7% ಭಾಗ ಮಾತ್ರ ಇದ್ದು ಇದರಲ್ಲಿನ ಗಿಡಗಳ ಬುಡದಲ್ಲಿರುವ ಹುಲ್ಲಿನ ಅಸ್ತಿತ್ವ ಈ ಸರೋವರದ ಬಹುಭಾಗವನ್ನು ಬದಲಿಸಲು ಹಾಗೂ ತೇಲುವುದಕ್ಕೆ ಕಾರಣ. ಇಲ್ಲಿನ ಪರಾಶರ ಮಂದಿರವನ್ನು 13ನೇ ಶತಮಾನದಲ್ಲಿ ಬೇಣ ಎಂಬುವನು ಏಕ ವೃಕ್ಷದಿಂದ ನಿರ್ಮಿಸಿದನೆಂದು ತಿಳಿಸಲಾಗಿದೆ. ಮತ್ತೊಂದು ಮಾಹಿತಿಯ ಪ್ರಕಾರ ಈ ಮಂದಿರವನ್ನು ಬಾಣ್‌ಸೇನ್ ಎಂಬ ರಾಜನು 12 ವರ್ಷಗಳಲ್ಲಿ ನಿರ್ಮಿಸಿದನು ಎಂದು. ಈ ಸರೋವರದ ನಿಜವಾದ ಆಳ ಎಷ್ಟೆಂದು ಯಾರೂ ಅರಿಯರು. ಇಬ್ಬರು ಜರ್ಮನ್ ಈಜುಗಾರರು ಇದರೊಳಗೆ ಹೋಗಿ ಎಷ್ಟೇ ಪ್ರಯತ್ನಿಸಿದರೂ ಆಳವನ್ನು ಅರಿಯಲಾಗಲಿಲ್ಲ ಎಂದು ಇಲ್ಲಿನ ಅರ್ಚಕರ ಹೇಳಿಕೆ. ಪ್ರತಿ ವರ್ಷ ಜನವರಿ–ಮಾರ್ಚ್ ಅವಧಿಯಲ್ಲಿ ಸುಂದರವಾದ Fuchsia Pink ಬಣ್ಣದ ಹೂವಿನಿಂದ ಕೂಡಿದ Rhododendron ಗಿಡಗಳು ಇಲ್ಲಿ ನೋಡಲು ದೊರಕುವುದು.

ನಾವು ಈ ಸರೋವರದ ಸುತ್ತಲೂ ನಡೆದಾಡಿ ಸುಂದರ ದೃಶ್ಯವನ್ನು ಕಣ್ತುಂಬಿಕೊಂಡೆವು. 2 ಗಂಟೆ ಕಾಲ ಈ ಪ್ರದೇಶದಲ್ಲಿದ್ದು ನಂತರ ಅಲ್ಲಿಂದ ಹೊರಟು ಮಧ್ಯಾಹ್ನ 3ಕ್ಕೆ ಸಿಯೋಬಾಗ್ ಬೇಸ್ ಕ್ಯಾಂಪನ್ನು ತಲುಪಿದೆವು. ಹೀಗೆ ನಾವು ನಮ್ಮ ಸಮಯ ಸಾರ್ಥಕವಾಗಿ ಕಳೆದೆವು ಹಾಗೂ ಈ ಮೂಲಕ ನಾವು ಪರಸ್ಪರ ಹತ್ತಿರವಾದೆವು. ಇದು ನಮ್ಮ ಇಡೀ ಚಂದರ್ ಖನಿ ಚಾರಣಕ್ಕೆ ಉತ್ಸಾಹ ನೀಡಿತು.

ಈ ಚಾರಣದ ವೈಶಿಷ್ಟ್ಯವೆಂದರೆ ಪ್ರತಿದಿನ ಒಂದೊಂದು ಬ್ಯಾಚ್ ಚಾರಣಿಗರು ಚಾರಣ ಪ್ರಾರಂಭಿಸುವಾಗ ಉಳಿದ ಬ್ಯಾಚಿನ ಎಲ್ಲ ಚಾರಣಿಗರೂ ಎರಡೂ ಕಡೆ ಸಾಲಾಗಿ ನಿಂತು ಅವರೆಲ್ಲರಿಗೂ ಚಪ್ಪಾಳೆ ತಟ್ಟುತ್ತ ಶುಭ ಕೋರುವುದು. ಹಾಗೇ ಈ ಹಿಂದೆ ಚಾರಣಕ್ಕೆ ಹೋಗಿದ್ದ ಚಾರಣಿಗರು ಚಾರಣವನ್ನು ಮುಗಿಸಿಕೊಂಡು

ಸಂಜೆಗೆ ಬೇಸ್ ಕ್ಯಾಂಪಿಗೆ ಮರಳಿದಾಗ ಬೇಸ್ ಕ್ಯಾಂಪಿನಲ್ಲಿರುವ ಎಲ್ಲ ಚಾರಣಿಗರೂ ಎರಡೂ ಬದಿಯಲ್ಲಿ ನಿಂತು ಅವರನ್ನು ಹಾರ್ದಿಕವಾಗಿ ಸ್ವಾಗತಿಸಬೇಕು. ಇದರಿಂದ ಎಲ್ಲ ಚಾರಣಿಗರಿಗೂ ತಮ್ಮನ್ನು ಗುರುತಿಸುವರೆಂದು ಸಂತಸವುಂಟಾಗುವುದು.

ಮೂರನೆ ದಿನ : ಜೂನ್ 1, 2014 – ಚಾರಣದ ಅನುಭವವನ್ನು ಪಡೆದುಕೊಳ್ಳಲು ಹತ್ತಿರದ ಬೆಟ್ಟದೆಡೆಗೆ ಚಾರಣ ಮಾಡುವುದು.

ಈ ದಿನ ನಮ್ಮ ಬ್ಯಾಚ್ ಚಾರಣಿಗರಿಗೆ ಹತ್ತಿರದ ಬೆಟ್ಟದೆಡೆಗೆ ಚಾರಣ ಮಾಡುವುದು. ಇದು ಮರುದಿನದ ದೀರ್ಘ ಚಾರಣ ಆರಂಭವಾಗುವುದಕ್ಕೆ ಮೊದಲಿನ ತಯಾರಿ. ಅದರಂತೆ ನಮ್ಮನ್ನು ಮುಂಜಾನೆ ಉಪಹಾರದ ನಂತರ ಮಧ್ಯಾಹ್ನದ ಊಟದ ಬುತ್ತಿಯೊಂದಿಗೆ ಉತ್ಸಾಹದಿಂದ ಹೊರಟು ಅರ್ಧ ಗಂಟೆ ರಸ್ತೆ ನಡೆದು ಎಲ್ಲರೂ ಬೆಟ್ಟವನ್ನೇರಲು ಪ್ರಾರಂಭಿಸಿ ಸ್ವಲ್ಪ ಸಮಯದಲ್ಲೇ ಮೊದಲ ಬಾರಿ ಚಾರಣ ಪ್ರಾರಂಭಿಸಿರುವ ಚಾರಣಿಗರಿಗೆ ಆಯಾಸವಾಗತೊಡಗಿತು. ಸ್ವಲ್ಪ ವಿಶ್ರಾಂತಿ ನಂತರ ಮತ್ತೆ ಬೆಟ್ಟ ಹತ್ತಲು ಪ್ರಾರಂಭಿಸಿದೆ. ಮಧ್ಯೆ ಅಲ್ಲಲ್ಲಿ ನಿಂತು ನೀರು ಕುಡಿದು ದಣಿವಾರಿಸಿಕೊಂಡು ಮುಂದುವರಿದು ಕೊನೆಗೆ ಒಂದು ಎತ್ತರ ಪ್ರದೇಶ ತಲುಪಿದೆವು. ಅಷ್ಟರಲ್ಲಿ ಸಮಯ 12 ಗಂಟೆ ಆಗಿತ್ತು. ಅಲ್ಲಿ ಎಲ್ಲರನ್ನೂ ಮರಗಳ ನೆರಳಿನಲ್ಲಿ ಸೇರಿಸಿ ಮಾರ್ಗದರ್ಶಿ ಎಲ್ಲರ ಪರಸ್ಪರ ಪರಿಚಯ ಕಾರ್ಯಕ್ರಮ ಪ್ರಾರಂಭಿಸಿದರು. ಈ ಪರಸ್ಪರ ಪರಿಚಯದಲ್ಲಿ ಪ್ರತಿಯೊಬ್ಬರೂ ತಮ್ಮ ಹೆಸರು, ಊರು, ಕಾರ್ಯಕ್ಷೇತ್ರ, ವಿಶೇಷ ಹವ್ಯಾಸಗಳ ಬಗ್ಗೆ ಉಳಿದವರಿಗೆ ಪರಿಚಯಿಸಬೇಕಿತ್ತು. ಎಲ್ಲರ ಪರಿಚಯವಾದನಂತರ ಮಾರನೇ ದಿನದಿಂದ ಪ್ರಾರಂಭವಾಗಲಿರುವ ಚಾರಣದಲ್ಲಿ ಚಾರಣಿಗರ ಪರವಾಗಿ ಒಬ್ಬ ನಾಯಕನನ್ನು ಆರಿಸಬೇಕೆಂದು ಮಾರ್ಗದರ್ಶಿ ಸೂಚಿಸಿದರು. ಈ ನಾಯಕರ ಪಾತ್ರವೆಂದರೆ ಅವರು ಎಲ್ಲ ಚಾರಣಿಗರನ್ನೂ ಪ್ರತಿದಿನ ಚಾರಣ ಪ್ರಾರಂಭವಾಗುವ ಮೊದಲು ಒಂದೆಡೆ ಸೇರಿಸಿ ಮಾರ್ಗದರ್ಶಿ ಅಂದಿನ ಚಾರಣ ವೈಶಿಷ್ಟ್ಯ ವಿವರಿಸಲು ಅನುವು ಮಾಡಿಕೊಡುವುದು. ಅಲ್ಲದೆ ಚಾರಣ ಮುಗಿದ ನಂತರ ಎಲ್ಲ ಚಾರಣಿಗರಿಗೂ ಟೆಂಟ್ ಸರಿಯಾಗಿ ದೊರಕಿದೆಯೆ, ಬೇರೆ ಏನಾದರೂ ಕುಂದು ಕೊರತೆಗಳಿದ್ದಲ್ಲಿ ಅವನ್ನು ಆಲಿಸಿ ಚಾರಣ ಮಾರ್ಗದರ್ಶಿಗೆ ತಿಳಿಸಿ ಪರಿಹಾರ ಕಂಡುಕೊಳ್ಳುವುದು. ಯಾರೂ ನಾಯಕನಾಗಲು ಮುಂದೆ ಬರದೇ ಇದ್ದ ಕಾರಣ ಮಾರ್ಗದರ್ಶಿಯೇ ಒಬ್ಬ ಚಾರಣಿಗನನ್ನು ನಾಯಕನಾಗಲು ಸೂಚಿಸುವ ಸಂದರ್ಭ ಬಂತು. ಆಗ ಯಾವ ಚಾರಣಿಗನು ಈಗಾಗಲೇ YHAI ಮೂಲಕ ಹೆಚ್ಚು ಚಾರಣ ಮಾಡಿರುವರು ಎಂಬುದನ್ನು ಕಂಡುಕೊಂಡು ಅವರನ್ನೇ

ನಾಯಕರಾಗಬೇಕೆಂದು ತೀರ್ಮಾನಿಸಿದರು. ಹೀಗೆ ನಾನೇ ನಾಯಕನಾಗಬೇಕಾಯಿತು. ನಂತರ ಅಲ್ಲಿನ ಸುತ್ತಮುತ್ತಲಿನ ಬಂಡೆ, ಮರಗಳನ್ನು ವೀಕ್ಷಿಸುತ್ತ ಕೆಲವರು ಸಮಯ ಕಳೆದರೆ ಮತ್ತೆ ಕೆಲವರು ಒಂದೆಡೆ ಕುಳಿತು ಆರಾಮವಾಗಿ ಹರಟೆಯಲ್ಲಿ ಮಗ್ನರಾದರು. ಒಂದು ಗಂಟೆಗೆ ಊಟ ಮಾಡಿ ವಿಶ್ರಾಂತಿಯ ನಂತರ 3 ಗಂಟೆಗೆ ಮಾರ್ಗದರ್ಶಿಯು ಎಲ್ಲರಿಗೂ ಬೇಸ್ ಕ್ಯಾಂಪಿಗೆ ಮರಳಲು ಸೂಚಿಸಿದರು. ಅದರಂತೆ ಸಂಜೆ 5 ಗಂಟೆಗೆ ಬೇಸ್ ಕ್ಯಾಂಪನ್ನು ಸೇರಿಕೊಂಡೆವು. ಅಲ್ಲಿಗೆ ಮೊದಲ ದಿನದ ಕಾರ್ಯಕ್ರಮ ಮುಗಿದಂತಾಯಿತು. ಎಲ್ಲರೂ ಸ್ವಲ್ಪ ಹೊತ್ತು ವಿಶ್ರಾಂತಿಯ ನಂತರ ಚಹಾ ಸೇವಿಸಿ ಕೆಲವರು ಹೊರಗೆ ಹೋಗಲು ಇಚ್ಛಿಸಿದರು. YHAI ನಿಯಮದ ಪ್ರಕಾರ ಯಾರೇ ಆದರೂ ಕ್ಯಾಂಪಿನಿಂದ ಹೊರ ಹೋಗಬೇಕಾದರೆ ಮಾರ್ಗದರ್ಶಿಗೆ ವಿಷಯ ಮೊದಲೇ ತಿಳಿಸಿ ಅವರ ಒಪ್ಪಿಗೆ ಪಡೆದು 8 ಗಂಟೆಯೊಳಗೆ ಕ್ಯಾಂಪಿಗೆ ಮರಳಿ ಬರಲೇಬೇಕಿತ್ತು. ಈ ನಿಯಮವನ್ನು YHAI ಅಧಿಕಾರಿಗಳು ಬಹಳ ಕಠಣವಾಗಿ ಜಾರಿ ಮಾಡುತ್ತಿದ್ದರು. ಈಗಲೂ ಹಾಗೆ ಹೊರಗೆ ಹೋಗುವವರು ಅನುಮತಿ ಪಡೆದು ಹತ್ತಿರದ ಕುಲು ಹಳ್ಳಿಯೆಡೆಗೆ ಹೋದರು. ನಾನು ಹೊರಗೆ ಹೋಗದೆ ಕ್ಯಾಂಪಿನೊಳಗೇ ಉಳಿದವರೊಡನೆ ಮಾತನಾಡತೊಡಗಿದೆ. ರಾತ್ರಿ 8ಕ್ಕೆ ಊಟದ ನಂತರ ಮರುದಿನದ ಚಾರಣ ವಿವರಗಳನ್ನು ಮಾರ್ಗದರ್ಶಿಯಿಂದ ಪಡೆದು ಮಲಗಿದೆವು.

ನಾಲ್ಕನೆ ದಿನ : ಜೂನ್ 2, 2014 – ಬೇಸ್ ಕ್ಯಾಂಪ್–ಮಲಾನಾ ಪ್ರಾಜೆಕ್ಟ್ ಬಸ್ಸಿನಲ್ಲಿ ಪ್ರಯಾಣ – ಯೋಸ್ಗೋ ವರೆಗೂ ಚಾರಣ – 9000 ಅಡಿ ಎತ್ತರ – 5 ಕಿ.ಮೀ – 4 ಗಂಟೆ ಚಾರಣ

ಮುಂಜಾನೆ ಬೇಗನೆ ಎದ್ದು 8 ಗಂಟೆಯ ಹೊತ್ತಿಗೆ ಉಪಹಾರ ಮುಗಿಸಿ ನಂತರ ಸಾಲಾಗಿ ಬ್ಯಾಕ್‌ಪ್ಯಾಕ್‌ನೊಂದಿಗೆ ಚಾರಣಕ್ಕೆ ಸಿದ್ಧರಾಗಿ ನಿಂತೆವು. ನಮ್ಮನ್ನು ಕಳಿಸಿಕೊಡಲು ಹಿಂದಿನ ದಿನ ಚಾರಣದಿಂದ ಬಂದವರು, ಮಾರನೇ ದಿನ ಚಾರಣ ಮಾಡಲಿರುವವರು ಎರಡೂ ಕಡೆ ನಿಂತು ಕ್ಯಾಂಪಿನಿಂದ ಹೊರಹೋಗುವ ತನಕ ಚಪ್ಪಾಳೆ ತಟ್ಟುವ ಮೂಲಕ ಶುಭಕೋರಿದರು. ಹೊರಗಡೆ ನಮ್ಮನ್ನು ಮಲಾನ ಪ್ರಾಜೆಕ್ಟ್‌ವರೆಗೂ ಕರೆದೊಯ್ಯಲು ಸಿದ್ಧವಾಗಿರುವ ಬಸ್ ಹತ್ತಿದೆವು. ನಮ್ಮ ಬಸ್ ಮಲಾನ ಪ್ರಾಜೆಕ್ಟ್ ಪ್ರದೇಶ ತಲುಪಲು 20 ನಿಮಿಷ ಬೇಕಾಯಿತು. 8.45ಕ್ಕೆ ಬಸ್ಸಿನಿಂದ ಇಳಿದು ಚಾರಣಕ್ಕೆ ಸಿದ್ಧರಾದೆವು. ನಮ್ಮ ಚಾರಣ ಪ್ರಾರಂಭವಾಗುವುದಕ್ಕೆ ಮೊದಲು ಚಾರಣ ಮಾರ್ಗದರ್ಶಿ ಮಲಾನಾ ಪ್ರಾಜೆಕ್ಟ್ ಬಗ್ಗೆ ಸಂಕ್ಷಿಪ್ತವಾಗಿ ಎಲ್ಲರಿಗೂ ವಿವರಿಸಿದರು ;

"ಹಿಮಾಚಲ ಪ್ರದೇಶದ 86MW ಮಲಾನಾ ಜಲವಿದ್ಯುತ್ ಯೋಜನೆ ಹಲವು ವಿಧಗಳಲ್ಲಿ ವಿಶಿಷ್ಟವಾಗಿದೆ. ಭಿಲ್ವಾರಾ ಎನರ್ಜಿ ಲಿಮಿಟೆಡ್ ಅಭಿವೃದ್ಧಿಪಡಿಸಿದ ಈ ಯೋಜನೆ ಕುಲು ಜಿಲ್ಲೆಯ ಪರ್ಬತಿ ನದಿಯ ಉಪನದಿಯಾದ ಮಲಾನಾ ನಾಲಾದಲ್ಲಿ ನೆಲೆಗೊಂಡಿದೆ ಮತ್ತು ಅದರ ಕ್ರೆಡಿಟ್ ಹಲವು ಪ್ರಥಮಗಳನ್ನು ಹೊಂದಿದೆ. ಇದು ಭಾರತದ ಮೊದಲ ಮರ್ಚೆಂಟ್ ಪವರ್ ಪ್ರಾಜೆಕ್ಟ್ (MPP) ಮತ್ತು ಅಂತರರಾಜ್ಯ ವಿದ್ಯುತ್ ಪ್ರಸರಣ ಹೊಂದಿರುವ ಮೊದಲನೆಯದು. ಇದು ಭಾರತ ಜಲವಿದ್ಯುತ್ ವಲಯದಲ್ಲಿ ಮೊದಲ ಸ್ವತಂತ್ರ ವಿದ್ಯುತ್ ಉತ್ಪಾದಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. MPPಗಳು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ವಿದ್ಯುತ್ ಉತ್ಪಾದಿಸುತ್ತವೆ." ಪರ್ಬತಿ ನದಿ ನೀರು ಬಿಯಾಸ್ ನದಿಯಲ್ಲಿ ಕುಲು ಬಳಿಯಲ್ಲಿನ ಭುಂಟರ್ ಪ್ರದೇಶದಲ್ಲಿ ವಿಲೀನವಾಗುತ್ತದೆ.

ಮೊದಲ ಅರ್ಧಗಂಟೆಯ ಚಾರಣ ಮಲಾನ ಪ್ರಾಜೆಕ್ಟ್‌ನಿಂದ ತೀವ್ರ ಏರುವಿಕೆಯಿಂದ ಕೂಡಿದ್ದು ಅದರ ಜೊತೆಗೆ ಹಾದಿಯಲ್ಲಿ ಯಾವುದೇ ಮರಗಿಡಗಳಿಲ್ಲದೆ ಬಿಸಿಲಿನ ತಾಪವು ಅಧಿಕವಾಗಿ ಎಲ್ಲರ ಬಳಿಯಿದ್ದ ನೀರು ಖಾಲಿಯಾಗತೊಡಗಿತು. ಸ್ವಲ್ಪ ಹೊತ್ತಿಗೆ ಮಾರ್ಗದಲ್ಲಿ ನಮಗೆ ಒಂದು ಸುರಂಗ ಎದುರಾಯಿತು. ಅಲ್ಲಿ ಕೆಲವು ಫೋಟೊ ತೆಗೆದುಕೊಂಡು ನಂತರ ಸುರಂಗದೊಳಗೆ ನಡೆದೆವು. ಸುರಂಗದ ಮತ್ತೊಂದು ತುದಿಯನ್ನು ತಲುಪಿ ಅರ್ಧ ಗಂಟೆ ನಂತರ ನಮ್ಮ ಚಾರಣ ಕಾಡಿನ ಮೂಲಕ ಮರಗಳಿಂದ ಕೂಡಿದ ಕಚ್ಚಾ ಮಾರ್ಗದಲ್ಲಿ ಮುಂದುವರೆಯಿತು. ಎರಡೂ ಕಡೆಗಳಲ್ಲಿ ದಟ್ಟವಾದ ಪೈನ್ ವೃಕ್ಷಗಳಿಂದ ಕೂಡಿದ ಕಾಡನ್ನು ವೀಕ್ಷಿಸುತ್ತ ಚಾರಣ ಮಾಡತೊಡಗಿದೆವು. ಈ ದಟ್ಟವಾದ ಕಾಡಿನಲ್ಲಿ ಕೆಲವು ಜಲಪಾತಗಳು ನಮಗೆ ನೋಡಲು ಸಿಕ್ಕಿದವು. ಮುಂದಿನ ಹಾದಿ ಕಲ್ಲಿನ ಮೆಟ್ಟಲುಗಳಿಂದ ದಟ್ಟವಾದ ಕಾಡಿನಲ್ಲಿದ್ದು, ಎಡಗಡೆ ಆಳದಲ್ಲಿ ನದಿ ಹರಿಯುತ್ತಿದ್ದುದನ್ನು ನೋಡಿದೆವು. ಇದೇ ಮಾರ್ಗದಲ್ಲಿ ನಡೆದಾಗ ಮಲಾನ ಹಳ್ಳಿ ಪ್ರವೇಶಿಸುವ ಕಮಾನಿನ ಫಲಕವು ನಮಗೆದುರಾಯಿತು. ಆಗ ನಮಗೆ ನಾವು ಮಲಾನ ಹಳ್ಳಿಗೆ ಬಹಳ ಹತ್ತಿರದಲ್ಲಿದ್ದೇವೆ ಎಂದು ಅರಿವಾಯಿತು. ಅಷ್ಟು ಹೊತ್ತಿಗೆ ಮಧ್ಯಾಹ್ನ 2 ಗಂಟೆಯಾಗಿತ್ತು. ಎಲ್ಲರೂ ಸಮೀಪದಲ್ಲಿನ ಹರಿವ ನೀರಿನ ದಡದಲ್ಲಿ ಮರಗಳ ಕೆಳಗೆ ಕುಳಿತು ನಮ್ಮೊಂದಿಗೆ ತಂದಿದ್ದ ಊಟದ ಬುತ್ತಿಯನ್ನು ತೆರೆದು ಪೂರಿ, ಭಾಜಿ ತಿಂದು ನೀರು ಕುಡಿದು ಅಲ್ಲೇ ವಿಶ್ರಾಂತಿ ಪಡೆದೆವು. ಅಲ್ಲಿಂದ 3 ಗಂಟೆಗೆ ಕಾಡಿನ ಮಾರ್ಗದಲ್ಲೇ ಹೊರಟು ಮಲಾನ ಪ್ರಾಜೆಕ್ಟಿನ ಎರಡನೇ ದೊಡ್ಡ ಸೇತುವೆ ತಲುಪಿದೆವು. ಅಲ್ಲಿಂದ ಕೇವಲ 15 ನಿಮಿಷದ ಚಾರಣ ನಂತರ ನಮಗೆ ಯೋಸ್ಗೋ ಕ್ಯಾಂಪ್ ಸಿಕ್ಕಿತು. ಎಲ್ಲರೂ ಅಲ್ಲಿಗೆ ಹೋಗಿ ಟೆಂಟನೊಳಗೆ ವಿಶ್ರಾಂತಿ ಪಡೆದೆವು.

ಐದನೆ ದಿನ : ಜೂನ್ 3, 2014 – ಯೋಸ್ಗೋ ಕ್ಯಾಂಪ್ – ಮಲಾಣ ಹಳ್ಳಿ – ಬೆಹಲಿ ಕ್ಯಾಂಪ್ – 8900 ಅಡಿ – 8 ಕಿ.ಮೀ – 3 ಗಂಟೆ ಚಾರಣ

ಐದನೇ ದಿನ ಚಾರಣ ಸಮತಟ್ಟಾದ ಮಾರ್ಗದಲ್ಲಿದ್ದು 8 ಕಿ.ಮಿ ದೂರ ಸುಲಭವಾಗಿ ನಡೆದೆವು. ಮಾರ್ಗದಲ್ಲಿ ಮಲಾನ ಹಳ್ಳಿ ಪ್ರವೇಶಿಸಿ ಮಾರ್ಗದರ್ಶಿಯ ಎಚ್ಚರಿಕೆಯಂತೆ ಹಳ್ಳಿಯ ಎಲ್ಲವನ್ನೂ ದೂರದಿಂದಲೇ ನೋಡುತ್ತ ಯಾವುದನ್ನೂ ಮುಟ್ಟದೆ, ಅಂಗಡಿಯಲ್ಲಿ ಏನಾದರೂ ಕೊಳ್ಳಬೇಕಿದ್ದಲ್ಲಿ ನಮಗೆ ಬೇಕಾದ ಪದಾರ್ಥವನ್ನು ದೂರದಿಂದಲೇ ತೋರಿಸಿ ಅವನು ಅದನ್ನು ಒಂದೆಡೆ ಇಟ್ಟ ನಂತರ ಹಣ ದೂರದಿಂದಲೆ ಇಟ್ಟು ಯಾರನ್ನೂ ಮುಟ್ಟಿಸಿಕೊಳ್ಳದೆ ಮುನ್ನಡೆದೆವು. ಅಲ್ಲಿ ಎರಡು ಪ್ರಮುಖ ದೇವಸ್ಥಾನಗಳಿವೆ. ಅವುಗಳೆಂದರೆ ಜಮ್ಲು (ಮಹರ್ಷಿ ಜಮದಗ್ನಿ) ಮತ್ತು ರೇಣುಕಾದೇವಿಯ ಮಂದಿರ. ಸ್ಥಳೀಯರನ್ನು ಹೊರತು ಪಡಿಸಿ ಬೇರೆ ಯಾರೂ ದೇವಸ್ಥಾನದೊಳಗೆ ಹೋಗುವುದಿರಲಿ ಅಲ್ಲಿನ ಗೋಡೆಗಳನ್ನೂ ಮುಟ್ಟುವಹಾಗಿಲ್ಲ. ಹಾಗೇನಾದರೂ ಯಾರಾದರೂ ಮುಟ್ಟಿದಲ್ಲಿ ಅವರು ದೊಡ್ಡ ಮೊತ್ತದ ದಂಡವನ್ನು ತೆರಬೇಕಾಗುತ್ತದೆ. ಅದೇ ರೀತಿ ಯಾರನ್ನೂ ಮುಟ್ಟಿಸಿಕೊಳ್ಳುವ ಹಾಗಿಲ್ಲ. ಹಾಗೇನಾದರೂ ಮುಟ್ಟಿಸಿಕೊಂಡಲ್ಲಿ ಅವರು ಕನಿಷ್ಠ ರೂ.2000 ದಂಡ ತೆರಬೇಕಾಗುತ್ತದೆ. ಹಾಗೆ ಮುಟ್ಟಿಸಿಕೊಂಡ ಸ್ಥಳೀಯ ವ್ಯಕ್ತಿಯು ಮನೆಯೊಳಗೆ ಹೋಗುವ ಮೊದಲು ಸ್ನಾನ ಮಾಡಬೇಕು. ಅಲ್ಲದೇ ಕಸ ಎಲ್ಲೂ ಎಸೆಯುವ ಹಾಗಿಲ್ಲ. ನಿಮ್ಮ ತ್ಯಾಜ್ಯವಸ್ತುಗಳನ್ನು ನಿಮ್ಮೊಂದಿಗೆ ಕೊಂಡೊಯ್ದು ಹಳ್ಳಿಯ ಹೊರಗೆ ವಿಲೇವಾರಿ ಮಾಡಬೇಕು. ಹಾಗೇಯೇ ಅವರಿಂದ ಮಲಾನ ಹಳ್ಳಿಯ ಕುರಿತಾಗಿ ಅನೇಕ ಕುತೂಹಲಕರವಾದ ವಿಚಾರಗಳು ತಿಳಿದು ಬಂದಿತು.

ಮಲಾನಾ ಪ್ರಪಂಚದ ಅತ್ಯಂತ ಹಳೆಯ ಪ್ರಜಾಪ್ರಭುತ್ವಗಳಲ್ಲಿ ಒಂದು ಎಂದು ನಂಬಲಾಗಿದೆ. ಇದು ತನ್ನದೇ ಆದ ಕಾನೂನು, ಸಂಪ್ರದಾಯ ಹಾಗೂ ಆಡಳಿತ ವ್ಯವಸ್ಥೆ ಹೊಂದಿದೆ. ಮಲಾನಿಗಳು ಎಂದು ಕರೆಯಲ್ಪಡುವ ಈ ಗ್ರಾಮದ ಜನರು ಜಮ್ಲು ದೇವತೆಯಲ್ಲಿ ಅಪಾರ ನಂಬಿಕೆಯುಳ್ಳವರು. ಅವರು ಜಮ್ಲು (ಜಮದಗ್ನಿ) ದೈವವನ್ನು ಗ್ರಾಮದ ರಕ್ಷಕ ಎಂದು ಪರಿಗಣಿಸುತ್ತಾರೆ.

ನಾವು ದೂರದಿಂದಲೇ ಮಲಾನ ಹಳ್ಳಿಯ ಸುತ್ತ ಮುತ್ತಲಿನ ಪ್ರಕೃತಿ ಸೌಂದರ್ಯ ವೀಕ್ಷಿಸಿ ಹೊರನಡೆದೆವು. ಅಲ್ಲಿಂದ ಸುಮಾರು 4 ಕಿ.ಮೀ ಚಾರಣ ಮಾಡಿ ನಾವು ಸಂಜೆ 4ರ ಹೊತ್ತಿಗೆ ಬೆಹಲಿ ಕ್ಯಾಂಪ್ ತಲುಪಿದೆವು.

ಆರನೆ ದಿನ : ಜೂನ್ 4, 2014 – ಬೆಹಲಿ ಕ್ಯಾಂಪ್–ವಾಟಿಂಗ್ ಕ್ಯಾಂಪ್ – 9300 ಅಡಿ – 7 ಕಿ.ಮೀ – 3 ಗಂಟೆ ಚಾರಣ

ಮುಂಜಾನೆ 9ಕ್ಕೆ ಬೆಹಲಿ ಕ್ಯಾಂಪಿನಿಂದ ಬಹಳ ಹುರುಪಿನಿಂದ ಹೊರಟು ತೀವ್ರ ಏರಿಳಿತಗಳಿಂದ ಕೂಡಿದ ಮಾರ್ಗದಲ್ಲಿ ನಡೆಯತೊಡಗಿದೆವು. ಒಂದು ಭಾಗದಲ್ಲಿ ನದಿ ರಭಸದಿಂದ ಹರಿಯುತ್ತಿದ್ದು ಕೆಲವು ಕಡೆ ನೀರು ಹೆಪ್ಪುಗಟ್ಟಿ ಹಿಮ ರೂಪ ತಾಳಿದ್ದು ಸುತ್ತಲೂ ದಟ್ಟವಾದ ಮರಗಳಿಂದ ಆವೃತವಾಗಿದ್ದು ಹವಾಮಾನ ಹಿತಕರವಾಗಿತ್ತು. ಒಂದು ಇಳಿಜಾರಿನ ಹುಲ್ಲುಗಾವಲಿನ ಸ್ಥಳದಲ್ಲಿ ಒಂದೆಡೆ ಕುಳಿತೆವು. ಇಲ್ಲಿಂದ ಹಿಮಾಚ್ಛಾದಿತ ಚಂದರ್ ಖನಿ ಪಾಸ್ ಕಾಣುತ್ತಿತ್ತು. ಮಧ್ಯಾಹ್ನ 3 ಗಂಟೆಗೆ ವಾಟಿಂಗ್ ಕ್ಯಾಂಪ್ ತಲುಪಿದೆವು.

ಏಳನೆ ದಿನ : ಜೂನ್ 5, 2014 – ವಾಟಿಂಗ್ ಕ್ಯಾಂಪ್–ನಗ್ರೋಣಿ ಕ್ಯಾಂಪ್ – 10000 ಅಡಿ – 5 ಕಿ.ಮೀ – 5 ಗಂಟೆಯ ಚಾರಣ

ನಾನು ಚಂದರ್ ಖನಿ ಪಾಸ್ ಚಾರಣ ಪ್ರಾರಂಭಿಸುವ ಮೊದಲು ಪ್ರತಿದಿನ ನಡೆಯುತ್ತಿರುವಾಗ ನನ್ನ ಬಲಪಾದದ ಕೊನೆಯ ಎರಡು ಬೆರಳುಗಳ ಕೆಳಗೆ ತೀವ್ರ ನೋವುಂಟಾಗುತ್ತಿತ್ತು. ಇದರಿಂದ ಬಹಳ ಚಿಂತೆಯಾಗಿ ಡಾಕ್ಟರ್ ಬಳಿ ಹೋದಾಗ ಅವರು ನೋವಿನಿಂದ ಪರಿಹಾರ ಪಡೆದುಕೊಳ್ಳಲು Aegon ಫುಟ್ ಪ್ಯಾಡ್ ಬಳಸಲು ಸೂಚಿಸಿದರು. ಅದರಂತೆ ನಾನು ಎರಡು ಫುಟ್ ಪ್ಯಾಡ್ ಖರೀದಿಸಿ ಒಂದೆರಡು ದಿನ ಬಳಸಿ ನೋವು ಕಡಿಮೆಯಾಗುವುದನ್ನು ಖಾತರಿ ಪಡಿಸಿಕೊಂಡು ಅವನ್ನು ನನ್ನೊಂದಿಗೆ ಚಾರಣಕ್ಕೆ ತೆಗೆದುಕೊಂಡು ಬಂದಿದ್ದೆ. ಆರು ದಿನವೂ ಅವನ್ನು ಬಳಸಿ ಚಾರಣ ಮಾಡಿದ್ದೆ. ಆದರೆ ಇಂದು ಮುಂಜಾನೆ ಅದನ್ನು ಧರಿಸುವಾಗ ಅದು ಹರಿದು ಧರಿಸಲು ಅಸಾಧ್ಯವಾಯಿತು. ಮತ್ತೊಂದು ಪ್ಯಾಡ್ ಎಷ್ಟು ಹುಡುಕಿದರೂ ಸಿಗಲೇ ಇಲ್ಲ. ಏನು ಮಾಡಲೂ ತೋಚದೆ ಅದರ ಬದಲು ಉಣ್ಣೆಯ ಕಾಲುಚೀಲವನ್ನೇ ಧರಿಸಿ ಚಾರಣ ಪ್ರಾರಂಭಿಸಿದೆ. ನೋವು ಕಡಿಮೆಯಾಯಿತಾದರೂ ಪೂರ್ಣಪ್ರಮಾಣದ ಪರಿಹಾರ ದೊರಕಲಿಲ್ಲ. ಹಾಗೇ ಟ್ರೆಕ್ಕಿಂಗ್ ಪೋಲ್‌ನ ಸಹಾಯದಿಂದ ನಿಧಾನವಾಗಿ ನಡೆಯತೊಡಗಿದೆ. ಹಲವಾರು ಕಡೆ ತೀವ್ರವಾದ ಏರು ಮಾರ್ಗದಲ್ಲಿ ಹತ್ತಲು ಮಾರ್ಗದರ್ಶಿ ಸಹಾಯದಿಂದ ಹತ್ತಿದೆ. ಇಂದಿನ ಚಾರಣ ಬಹಳ ಕಷ್ಟವಾಗಿದ್ದು ನನಗೆ ಅತ್ಯಂತ ಆಯಾಸವಾಯಿತು. ಹಾಗೂ ಹೀಗೂ ಇಬ್ಬರು ಸಹ ಚಾರಣಿಗರ ಸಹಾಯದಿಂದ ನಗ್ರೋಣಿ ಕ್ಯಾಂಪ್ ತಲುಪಿದೆ. ಟೆಂಟ್ ಒಳಗೆ ಹೋಗಿ ಸ್ವಲ್ಪ ವಿಶ್ರಾಂತಿಯ ನಂತರ ನನ್ನ ಬ್ಯಾಕ್ ಪ್ಯಾಕನ್ನು ಮತ್ತೊಮ್ಮೆ ನಿಧಾನವಾಗಿ ವಿವರವಾಗಿ ಹುಡುಕಿದಾಗ

ಎರಡನೆ ಪ್ಯಾಡ್ ಒಂದು ಮೂಲೆಯಲ್ಲಿದ್ದದ್ದನ್ನು ಕಂಡು ನನಗೆ ಬಹಳ ಸಮಾಧಾನವಾಯಿತು.

ಎಂಟನೆ ದಿನ : ಜೂನ್ 6, 2014 – ನಗ್ರೋನಿ ಕ್ಯಾಂಪ್–ಚಂದರ್ ಖನಿ ಪಾಸ್– ನಯಾ ಟಪ್ರು – 9000 ಅಡಿ – 14 ಕಿ.ಮೀ – 7 ಗಂಟೆ ಚಾರಣ.

ಇಂದಿನ ಚಾರಣ ಬಹಳ ದೀರ್ಘವಾಗಿರುವುದರಿಂದ ನಾನು ತಯಾರಿ ಎಚ್ಚರಿಕೆಯಿಂದ ಮಾಡಿಕೊಂಡೆ. ಚಂದರ್ ಖನಿ ಪಾಸ್ ದಾಟುವ ಹಾದಿ ಹಿಮದಿಂದ ಕೂಡಿದ್ದು ಇಳಿಜಾರಿನ ಈ ಹಾದಿ ದಾಟಬೇಕೆಂದು ಮಾರ್ಗದರ್ಶಿ ವಿವರವಾಗಿ ನಮಗೆಲ್ಲರಿಗೂ ತಿಳಿಸಿದ್ದರು. ಆದರೆ ನಮ್ಮ ದುರ್ದೈವವೆಂದರೆ YHAI ಸಂಸ್ಥೆ ಮೈಕ್ರೋ ಸ್ಪೈಕ್ಸ್ ಹಾಗೂ ಗೈಟರ್ಸ್ಗಳನ್ನು ಚಾರಣಿಗರಿಗೆ ಕೊಡುವ ತೀರ್ಮಾನ ತೆಗೆದುಕೊಂಡಿರಲಿಲ್ಲವಾದ್ದರಿಂದ ಹಿಮ ಹಾದಿ ದಾಟುವುದು ನಮ್ಮಲ್ಲಿನ ಅನೇಕ ಚಾರಣಿಗರಿಗೆ ಅದರಲ್ಲೂ ಪ್ರಥಮ ಬಾರಿಗೆ ಚಾರಣ ಮಾಡುತ್ತಿರುವ ಚಾರಣಿಗರಿಗೆ ಕಷ್ಟವಾಗಿತ್ತು. ನನಗೆ ಒಬ್ಬ ಗೈಡ್ ಜೊತೆಗಿದ್ದು ನನ್ನ ಕೈಹಿಡಿದೇ ಈ ಮಾರ್ಗ ದಾಟಿಸಿದ.

ಮಾರ್ಗ ಮೊದಲಿಗೆ ಸಮತಟ್ಟಾದ ಹಾದಿಯಿಂದ ಕೂಡಿದ್ದು ಕ್ರಮೇಣ ಎತ್ತರದ ಹಾದಿಯಿದ್ದು ನಿಧಾನವಾಗಿ ಹತ್ತತೊಡಗಿದೆವು. ಇಂದು ನನ್ನ ಬಲಗಾಲಿನ ಕೆಳ ಪಾದಕ್ಕೆ ಘುಟ್‌ಪ್ಯಾಡ್ ಹಾಕಿಕೊಂಡಿದ್ದು ಅನುಕೂಲವಾಗಿತ್ತು. ಸುಮಾರು ಒಂದೂವರೆ ಗಂಟೆ ಏರುಹಾದಿಯಲ್ಲಿ ಚಾರಣ ಮಾಡಬೇಕಾಯಿತು. ಚಂದರ್ ಖನಿ ಪಾಸ್ ತಲುಪಿದ ನಂತರ ಸುಮಾರು ಒಂದು ಕಿ.ಮೀ ನಡೆದ ಮೇಲೆ ಪಾಸ್ ತುದಿ ತಲುಪಿದೆವು. ಇಲ್ಲಿಂದ ಪಾಸ್‌ನ ಮತ್ತೊಂದು ತುದಿ ತಲುಪಲು ಮಾರ್ಗ ತೀವ್ರ ಇಳಿಜಾರಿನಿಂದ ಕೂಡಿದ್ದು ಉಳಿದ ಕಡೆಯಲ್ಲಿನ ಹಿಮನಡಿಗೆಗಿಂತ ಭಿನ್ನವಾಗಿತ್ತು. ಇಲ್ಲಿಂದ ನಮಗೆ ಧೌಲಾಧರ್ ಪರ್ವತ ಶ್ರೇಣಿ ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಹಾಗೂ ಮಾರ್ಗದರ್ಶಿ ಇವುಗಳಲ್ಲಿನ ಪರ್ವತ ಶಿಖರಗಳ ಪರಿಚಯ ಮಾಡಿಕೊಟ್ಟರು. ಇಳಿಯುತ್ತಿರುವ ನಮ್ಮ ಬಲಗಡೆಗೆ ಪೀರ್ ಪಂಜಾಲ್ ಪರ್ವತ ಶ್ರೇಣಿ ದಾಟಿ, ಪಾರ್ವತಿ ಪರ್ವತ ಶ್ರೇಣಿಯೆಡೆಗೆ ಚಾಚಿಕೊಂಡಿತ್ತು. ಇಲ್ಲಿಂದ ಮಾರ್ಗದರ್ಶಿ ನಮಗೆ ಹನುಮಾನ್ ಟಿಬ್ಬ, ಫ್ರೆಂಡ್ಶಿಪ್ ಪೀಕ್ (Friendship peak), ಶಿಖರ ಬೆಹ್, ಇಂದ್ರಸಾನ್ ಶಿಖರಗಳನ್ನು ತೋರಿಸಿದರು. ನಮಗೆ ಕುಲ್ಲುವ್ಯಾಲಿಯ ಕಾಡಿನಲ್ಲಿನ ಸಸ್ಯ ಸಂಪತ್ತು ದೂರದಿಂದ ಅಲೆಅಲೆಯಾಗಿ ಕಂಡುಬಂದು ಪ್ರಕೃತಿ ಸೌಂದರ್ಯ ಮನೋಹರವಾಗಿತ್ತು. ದೂರದ ಕುಲು ಮನಾಲಿಯ ಹಳ್ಳಿಗಳನ್ನೂ ನೋಡಿದೆವು. ಚಂದರ್ ಖನಿಯ ತುದಿಯಲ್ಲಿ ಸ್ವಲ್ಪ ಸಮಯ ಕಳೆದನಂತರ ಮಾರ್ಗದರ್ಶಿ ಎಲ್ಲರನ್ನೂ ಹೊರಡಲು ಸೂಚಿಸಿದರು.

ನಾವು 6 ಕಿ.ಮೀ ಇಳಿಜಾರಿನ ಹಾದಿಯಲ್ಲಿ ನಯಾ ಟಪ್ರುವರೆಗೂ ನಡೆಯಬೇಕಿತ್ತು. ಮಾರ್ಗದಲ್ಲಿ ಚಕ್ಲಾನಿ ಎಂಬ ಪ್ರದೇಶದಲ್ಲಿ ನಮ್ಮ ಬಾಟಲಿಗೆ ನೀರು ತುಂಬಿಕೊಂಡು ವಿಶಾಲವಾದ ರೊಡೊಡೆಂಡ್ರಾನ್ (Rhodendron) ಹೂವುಗಳ ಗಿಡಗಳಿಂದ ಕೂಡಿದ ಹುಲ್ಲುಗಾವಲಿನ ಪ್ರದೇಶದ ಮೂಲಕ ಸಂಜೆ ಐದು ಗಂಟೆಗೆ ನಯಾ ಟಪ್ರು ಕ್ಯಾಂಪ್ ತಲುಪಿದೆವು. ಎಲ್ಲರಿಗೂ ಹಿಮಾವೃತವಾದ ಚಂದರ್ ಖನಿ ಪಾಸ್ ಚಾರಣ ಮುಗಿದಿದ್ದಕ್ಕಾಗಿ ಅತ್ಯಂತ ಸಂತಸವುಂಟಾಗಿತ್ತು. ಅಂದಿನ ರಾತ್ರಿಯನ್ನು ಸುಖನಿದ್ರೆಯಿಂದ ಕಳೆದೆವು.

ಒಂಬತ್ತನೆ ದಿನ : ಜೂನ್ 7, 2014 – ನಯಾ ಟಪ್ರು ಕ್ಯಾಂಪ್– ಖುಂಸು ಹಳ್ಳಿ ಮುಖಾಂತರ ನಗ್ಗರ್ ಕ್ಯಾಂಪ್ – 7 ಕಿ.ಮೀ – 4 ಗಂಟೆ ಚಾರಣ – ಅನಂತರ ನಗ್ಗರ್ – ಸಿಯೊಬಾಗ್ ಕ್ಯಾಂಪ್ – ಬಸ್ಸಿನ ಪ್ರಯಾಣ.

ಒಂಬತ್ತನೆ ದಿನ ಚಾರಣದಲ್ಲಿ ನಮಗೆ ಒಂದು ವಿಶೇಷ ಅನುಭವವು ಕಾಯುತ್ತಿತ್ತು. ನಯಾ ಟಪ್ರುನಿಂದ ನಾವು ನೆನ್ನೆ ಬಂದ ಮಾರ್ಗದಲ್ಲೇ ಆದರೆ ಮೂರು ಹಂತಗಳಲ್ಲಿ ತೀವ್ರ ಇಳಿಜಾರಿನ ಮಾರ್ಗದಲ್ಲಿ ಇಳಿಯುತ್ತ ಘನ್ ಕುರಾಡಿ ಎಂಬ ದಟ್ಟವಾದ ಪೈನ್ ವೃಕ್ಷಗಳಿಂದ ಕೂಡಿದ ಕಾಡಿನ ಭಾಗ ಪ್ರವೇಶಿಸಿ 30 ನಿಮಿಷ ಚಾರಣ ಮುಗಿಸಿದ ನಂತರ ಕಾಡಿನಿಂದ ಹೊರಬಂದೆವು. ಇಲ್ಲಿಂದ ವಿಶಾಲವಾದ ತೆರೆದ ಹುಲ್ಲುಗಾವಲಿನಲ್ಲಿ ಸ್ವಲ್ಪ ವಿಶ್ರಾಂತಿಯ ನಂತರ ಹುಲ್ಲುಗಾವಲು ದಾಟಿ ದೇವದಾರು, ಪೈನ್ ಹಾಗೂ ವಾಲ್ನಟ್ ಗಿಡಗಳಿಂದ ಕೂಡಿದ ದಟ್ಟವಾದ ಕಾಡನ್ನು ಪ್ರವೇಶಿಸಿ ಒಂದು ಗಂಟೆ ಚಾರಣ ಮಾಡಿ ಕೊನೆಗೆ ಕಾಡಿನಿಂದ ಹೊರಬಂದು ಖುಂಸು ಕ್ಯಾಂಪನ್ನು ತಲುಪಿದೆವು. ಆದರೆ ಅಲ್ಲಿ ನಿಲ್ಲದೆ ನಾವುಗಳು ಅಲ್ಲಿಂದ ಮತ್ತೊಂದು ಗಂಟೆ ಚಾರಣ ಮುಂದುವರೆಸಿ ಕೊನೆಗೆ ನಗ್ಗರ್ ಕ್ಯಾಂಪ್ ತಲುಪಿದೆವು. ಅಲ್ಲಿ ಸಿಯೋಬಾಗ್ ಬೇಸ್ ಕ್ಯಾಂಪಿಗೆ ಕರೆದೊಯ್ಯಲು ಬಸ್ಸು ನಿಂತಿತ್ತು. ನಮ್ಮ ಮಾರ್ಗದರ್ಶಿ ಇಲ್ಲಿನ ಮರದ ಅರಮನೆ ಹಾಗೂ ದೇವಸ್ಥಾನ ನೋಡಿ ಬೇಸ್ ಕ್ಯಾಂಪಿಗೆ ಹೋಗಲು ಸೂಚಿಸಿದ್ದರು. ಹಾಗೇ ನಗ್ಗರ್ ಪ್ರದೇಶದ ಬಗ್ಗೆ ಹೆಚ್ಚಿನ ಮಾಹಿತಿ ಹಂಚಿಕೊಂಡರು.

ನಗ್ಗರ್ ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಹಿಮಾಚಲದ ಪ್ರಸಿದ್ಧ ಸ್ಥಳ. ಇಲ್ಲಿನ ಸುಂದರ ಕೆತ್ತನೆಗಳಿಂದ ಕೂಡಿದ ಮರದ ಅರಮನೆಯಂತೂ ಎಲ್ಲರೂ ನೋಡಬೇಕಾದ ಸ್ಥಳ. ಹಿಂದೆ ಅಂದರೆ 15ನೇ ಶತಮಾನದಲ್ಲಿ ಈ ಅರಮನೆಯಲ್ಲೇ ಕುಲು ಪ್ರದೇಶ ರಾಜಮನೆತನದವರು ವಾಸಿಸುತ್ತಿದ್ದರು. ರಷ್ಯದ ಸುಪ್ರಸಿದ್ಧ ಚಿತ್ರಕಾರ ನಿಕೊಲಸ್ ರೋರಿಚ್ ಈ ಅರಮನೆ ಹಾಗೂ ಸುತ್ತಮುತ್ತಲ ಪ್ರಕೃತಿ

ಸೌಂದರ್ಯಕ್ಕೆ ಮನಸೋತು ತನ್ನ ಆರ್ಟ್ ಗ್ಯಾಲರಿ ಪ್ರಾರಂಭಿಸಿ, ಅಲ್ಲಿ ತನ್ನ ಚಿತ್ರಗಳನ್ನು ಪ್ರದರ್ಶಿಸಲು ಪ್ರಾರಂಭಿಸಿದರು. ಈಗಲೂ ಸಹಸ್ರಾರು ಚಿತ್ರಪ್ರೇಮಿಗಳು ಈ ಗ್ಯಾಲರಿ ವೀಕ್ಷಿಸುವರು. ನಾವು ಅರ್ಧ ಗಂಟೆ ಈ ಗ್ಯಾಲರಿಯಲ್ಲಿನ ಚಿತ್ರಗಳನ್ನು ವೀಕ್ಷಿಸಿದೆವು. ನಂತರ ಅರಮನೆಯ ಆವರಣದಲ್ಲಿರುವ ಲಕ್ಷ್ಮೀನಾರಾಯಣ ಮಂದಿರ, ಗೌರೀ ಶಂಕರ ಮಂದಿರ ನೋಡಿ ಅಲ್ಲಿಂದ ನಮ್ಮ ಬಸ್ಸಿನಲ್ಲಿ ಹಿಂತಿರುಗಿ ಬೇಸ್ ಕ್ಯಾಂಪ್ ತಲುಪಿದೆವು.

ಕ್ಯಾಂಪ್ ಪ್ರವೇಶಿಸಿದಾಗ ನಮಗೆ ಅಲ್ಲಿರುವ ಚಾರಣಿಗರಿಂದ ಅಭೂತಪೂರ್ವ ಸ್ವಾಗತವು ದೊರಕಿತು. ಎಲ್ಲರೂ ಎರಡೂ ಬದಿಗಳಲ್ಲಿ ನಿಂತು ಚಪ್ಪಾಳೆ ತಟ್ಟುತ್ತಾ ನಮ್ಮನ್ನು ಸ್ವಾಗತಿಸಿದರು. ನಂತರ ನಮಗೆ ಚಹಾ ನೀಡಿ ಗೌರವಿಸಿದರು. ಅಷ್ಟು ಹೊತ್ತಿಗೆ ಸಂಜೆ 6 ಗಂಟೆಯಾಗಿತ್ತು. ನಂತರ ನಮ್ಮ ಚಾರಣಿಗರ ಪೈಕಿ 6 ಚಾರಣಿಗರು ಯಾರಿಗೂ ತಿಳಿಸದೇ ಕ್ಯಾಂಪಿನಿಂದ ಹತ್ತಿರದ ಕುಲು ನಗರದೆಡೆಗೆ ಹೊರಟು ಹೋದರು. ಕ್ಯಾಂಪಿನ ನಿಯಮದ ಪ್ರಕಾರ ಯಾವುದೇ ಚಾರಣಿಗರೂ ಹೊರ ಹೋಗಬೇಕಿದ್ದಲ್ಲಿ ಡೈರಕ್ಟರ್ ಅನುಮತಿ ಪಡೆದು ಹೋಗಿ ರಾತ್ರಿ 8 ಗಂಟೆಯೊಳಗೆ ಮರಳಿಬರಬೇಕಿತ್ತು. ಆದರೆ 8.30 ಗಂಟೆ ಆದರೂ ಅವರು ಬರಲೇ ಇಲ್ಲ. ಈ ಮಧ್ಯೆ ನಮ್ಮ ಬ್ಯಾಚಿನ ಚಾರಣಿಗರಿಗೆ ಸರ್ಟಿಫಿಕೇಟ್ ವಿತರಿಸುವ ಸಮಯವು ಮೀರಿಹೋಗಿತ್ತು. ಡೈರಕ್ಟರ್‌ಗೆ ಅಸಮಾಧಾನವಾಯಿತು. ಬೇರೆ ದಾರಿಕಾಣದೆ ಅವರು ಉಳಿದ ಚಾರಣಿಗರಿಗೆ ಸರ್ಟಿಫಿಕೇಟ್ ವಿತರಿಸಿ ಎಲ್ಲರಿಗೂ ಶುಭ ಕೋರಿದರು. ನಂತರ ವಿಶೇಷ ಊಟ ಮಾಡಿ ಟೆಂಟ್‌ಗಳೆಡೆಗೆ ಹೊರಟೆವು. ಹೊರಗೆ ಹೋಗಿದ್ದ ಈ ಆರೂ ಚಾರಣಿಗರು ನಮ್ಮ ಟೆಂಟಿನಲ್ಲೇ ಇದ್ದವರು. ನಾನು ಹಾಗೂ ನಮ್ಮ ಟೆಂಟಿನ ಉಳಿದ ಚಾರಣಿಗರು ಮಲಗಲು ತಯಾರಿ ಮಾಡಿಕೊಳ್ಳುತ್ತಿರುವಾಗ ಹೊರಗೆ ಯಾರೋ ಜೋರಾಗಿ ಮಾತನಾಡುತ್ತಿರುವುದು ಕೇಳಿಸಿತು. ನಮ್ಮ ಟೆಂಟಿನಲ್ಲಿದ್ದ ಚೆನ್ನೈ ಚಾರಣಿಗರು ಹೊರಗೆ ಹೋಗಿ ನೋಡಿಕೊಂಡು ಬಂದು ಅಲ್ಲಿನ ವಿಷಯ ನನಗೆ (ನಾನು ಎಲ್ಲ ಚಾರಣಿಗರ ಪ್ರತಿನಿಧಿಯಾಗಿದ್ದರಿಂದ) ವರದಿ ಮಾಡಿದರು. ಅವರು ಹೇಳಿದ್ದೇನೆಂದರೆ ಹೊರಗೆ ಹೋಗಿದ್ದ 6 ಚಾರಣಿಗರೂ ರಾತ್ರೆ 9.30ಕ್ಕೆ ಕ್ಯಾಂಪಿನೊಳಗೆ ಬರಲು ಪ್ರಯತ್ನಿಸುತ್ತಿರುವಾಗ ಅವರನ್ನು ಸೆಕ್ಯೂರಿಟಿ ಒಳಗೆ ಬಿಡದೆ ಹೊರದಬ್ಬುತ್ತಿದ್ದ. ನಾನೂ ಹಾಗೂ ಇತರ ಚಾರಣಿಗರು ಹೊರಬಂದು ನೋಡಿದಾಗ ಅಲ್ಲಿಗೆ ಡೈರಕ್ಟರ್ ಬಂದು ಅವರನ್ನು ಕ್ಯಾಂಪಿನ ನಿಯಮ ಪಾಲಿಸದೆ ಕುಡಿದು ಬಂದಿದ್ದಕ್ಕೆ ತೀವ್ರವಾಗಿ ಆಕ್ಷೇಪಿಸಿ ಅವರೆಲ್ಲರನ್ನೂ ಅಂದು ರಾತ್ರಿ ಕ್ಯಾಂಪಿನ ಹೊರಗೇ ಇರಬೇಕೆಂದು ಆಜ್ಞಾಪಿಸಿದ್ದಲ್ಲದೆ ಚಾರಣ ಸರ್ಟಿಫಿಕೇಟ್ ತೆಗೆದುಕೊಳ್ಳದ

ಅನರ್ಹರೆಂದು ತೀರ್ಪಿತ್ತರು. ಈ 6 ಚಾರಣಿಗರ ಬೇಜವಾಬ್ದಾರಿ ವರ್ತನೆಯಿಂದಾಗಿ ಈ ಅಹಿತಕರ ಘಟನೆ ನಡೆಯಿತು.

ಮಾರನೇ ದಿನ ಸಿಯೋಬಾಗ್ ಕ್ಯಾಂಪಿನಿಂದ ನಮ್ಮ ಮರು ಪ್ರಯಾಣ ಮಾಡಬೇಕಿತ್ತು. ಆದರೆ ಚಾರಣಕ್ಕೆ ಮೊದಲು ನಾವು ಕೆಲವರು ಪರಾಶರ ಸರೋವರದೆಡೆಗೆ ಹೋಗಿದ್ದೆವಲ್ಲ ಹಾಗಾಗಿ ಎಲ್ಲರೂ ಮಣಿಕರ್ಣಿಕ ಪ್ರದೇಶಕ್ಕೆ ಹೋಗಿಬರಲು ಡೈರಕ್ಟರ್ ಅವರಿಂದ ಅನುಮತಿ ಪಡೆದು ನಮ್ಮ ಲಗ್ಗೇಜ್‌ಗಳನ್ನು ಕ್ಯಾಂಪಿನಲ್ಲೆ ಅಂದಿನ ಮಟ್ಟಿಗೆ ಇರಿಸಿ ಒಂದು ವಾಹನದಲ್ಲಿ ಹೊರಟೆವು.

ಮಣಿಕರ್ಣಿಕ ಮಂದಿರವು ಕುಲು ಬಸ್ ನಿಲ್ದಾಣದಿಂದ 45 ಕಿ.ಮೀ ದೂರದಲ್ಲಿರುವುದು ಹಾಗೂ ಇದು ಪಾರ್ವತಿ ಕಣಿವೆಯಲ್ಲಿದ್ದು ಸಮುದ್ರ ಮಟ್ಟದಿಂದ 7950 ಅಡಿ ಎತ್ತರದಲ್ಲಿದೆ. ಇಲ್ಲಿನ ವೈಶಿಷ್ಟ್ಯವೆಂದರೆ ಒಂದೆಡೆ ಪಾರ್ವತಿ ನದಿಯ ನೀರು ಶೀತಲವಾಗಿದ್ದರೆ ಆದರ ಸಮೀಪದಲ್ಲಿರುವ ಮಣಿಕರ್ಣಿಕ ಕುಂಡದಲ್ಲಿನ ನೀರು ಬಿಸಿಯಾಗಿರುವುದು. ಈ ಬಿಸಿನೀರಿನಲ್ಲಿ ನಾವು ಸ್ನಾನಮಾಡಿ ನಂತರ ಮಣಿಕರ್ಣಿಕ ಮಂದಿರದಲ್ಲಿನ ಶಿವ-ಪಾರ್ವತಿ ದರ್ಶಿಸಿದೆವು. ಸಮೀಪದಲ್ಲಿದ್ದ ಮಣಿಕರನ್‌ಸಾಬ್ ಗುರುದ್ವಾರ ನೋಡಿ ಅಲ್ಲಿಂದ ಸಿಯೋಬಾಗ್ ಕ್ಯಾಂಪ್ ತಲುಪಿ ರಾತ್ರಿ 10 ಗಂಟೆಗೆ ಅಲ್ಲಿಂದ ಮನಾಲಿಗೆ ಹೋಗಿ ಮನಾಲಿಯಿಂದ ದೆಹಲಿಗೆ 11 ಗಂಟೆಯ ಬಸ್ಸನ್ನು ಏರಿ ಮರುಪ್ರಯಾಣ ಪ್ರಾರಂಭಿಸಿ ಮಾರನೇ ದಿನ ಮುಂಜಾನೆ 8 ಗಂಟೆಗೆ ದೆಹಲಿ ತಲುಪಿ 11.30ರ ವಿಮಾನದ ಮೂಲಕ ಬೆಂಗಳೂರನ್ನು ತಲುಪಿದೆ.

ಬ್ರಹ್ಮತಾಲ್ ಸರೋವರ – ಚಾರಣ

ನಾನು 2015ರ ಚಳಿಗಾಲದಲ್ಲಿ 08–02–2015ರಿಂದ 13–2–2015ವರೆಗೆ ಬ್ರಹ್ಮತಾಲ್ ಸರೋವರದೆಡೆಗೆ ಚಾರಣವನ್ನು ಮಾಡಿದೆ. ಪೌರಾಣಿಕ ಕಥೆಯ ಪ್ರಕಾರ ಈ ಪ್ರದೇಶದಲ್ಲಿ ಬ್ರಹ್ಮನು ದೀರ್ಘಕಾಲ ಕಠಿಣವಾದ ತಪಸ್ಸನ್ನಾಚರಿಸಿದನು.

ಬ್ರಹ್ಮತಾಲ್ ಚಾರಣದಲ್ಲಿ ಹಿಮಾಲಯದ ತ್ರಿಶೂಲ್, ನಂದ ಘುಂಟಿ ಪರ್ವತಗಳ ವಿಹಂಗಮ ನೋಟವನ್ನು ನೀಡುತ್ತದೆ. ಅಲ್ಲದೆ ಈ ಚಾರಣ ರೂಪ್‌ಕುಂಡ್ ಸರೋವರದ ಭವ್ಯವಾದ ದೃಶ್ಯಗಳನ್ನೂ ವೀಕ್ಷಿಸಲು ಅನುವು ಮಾಡಿಕೊಡುವುದು. ಚಳಿಗಾಲದಲ್ಲಿ ಮಾತ್ರ ಮಾಡಬೇಕಾದ ಈ ಚಾರಣ ಸುಂದರ ಕಣಿವೆ, ಅದಕ್ಕೆಕೊಂಡಿರುವ ಹಳ್ಳಿಗಳು, ತಿಳಿನೀರಿನ ತೊರೆಗಳು ಹಾಗೂ ಕೋನಿಫೆರಸ್ ಮತ್ತು ಓಕ್ ಮರಗಳಿಂದ ಆವೃತವಾಗಿರುವ ದಟ್ಟವಾದ ಕಾಡುಗಳನ್ನೊಳಗೊಂಡಿರುವುದು. ಚಳಿಗಾಲದಲ್ಲಿ ಇಲ್ಲಿನ ಎಲ್ಲ ಪ್ರದೇಶಗಳೂ ದಟ್ಟವಾದ ಹಿಮದಿಂದ ತುಂಬಿರುವುದು ಹಾಗೂ ಈ ಸಮಯದಲ್ಲಿನ ಚಾರಣವನ್ನು ವರ್ಣಿಸಲು ಪದಗಳೇ ಸಾಲದು. ಅದನ್ನು ಕೇವಲ ಚಾರಣ ಮಾಡೇ ಅನುಭವಿಸಬೇಕು.

ಮೊದಲ ದಿನ : ಫೆಬ್ರವರಿ 8, 2015 – ಕಾತ್‌ಗೋದಾಮ್‌ನಿಂದ ಲೋಹಾಜುಂಗ್ – 225 ಕಿ.ಮೀ ಜೀಪಿನಲ್ಲಿ ಪಯಣ.

ದೆಹಲಿಯಿಂದ ರಾಣಿಖೇತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ರಾತ್ರಿ 10.05ಕ್ಕೆ ಹೊರಟು ಮುಂಜಾನೆ 5.05ಗೆ ಕಾತ್‌ಗೋದಾಮ್ ರೈಲ್ವೆ ನಿಲ್ದಾಣ ತಲುಪಿ ಮೊದಲೇ ಕಾಯ್ದಿರಿಸಿದ್ದ IRCTC ರಿಟೈರಿಂಗ್ ರೂಮಿನಲ್ಲಿ ಒಂದು ಗಂಟೆ ಮಲಗಿದ್ದು ನಂತರ ಸ್ನಾನ, ಉಪಾಹಾರ ಮುಗಿಸಿ ಹೊರಬಂದು ಚಾರಣಿಗರಿಗಾಗಿ ಕಾಯ್ದಿರಿಸಿದ

ಚಾರಣದ ಮಾರ್ಗಗಳ ವಿವರಗಳು ಇಂತಿವೆ

ದಿನ	ಸ್ಥಳದ ವಿವರ	ಕ್ರಮಿಸುವ ದೂರ ಕಿ.ಮೀ	ಏರಿದ ಎತ್ತರ ಅಡಿಗಳಲ್ಲಿ	ತೆಗೆದುಕೊಂಡ ಸಮಯ ಗಂಟೆಗಳಲ್ಲಿ
1	ಕಾತ್‌ಗೋದಾಮ್ – ಲೋಹಾಜುಂಗ್	225		
2	ಲೋಹಾಜುಂಗ್ – ಗುಜ್ರೇನಿ	4.5		5
3	ಗುಜ್ರೇನಿ – ತಿಲಾಂಡಿ ಕ್ಯಾಂಪ್	3	9200-10500	4
4	ತಿಲಾಂಡಿ – ಬ್ರಹ್ಮತಾಲ್ ಸರೋವರ ನಂತರ 10200 ಅಡಿ ಇಳಿಯುವ ಮಾರ್ಗ.	5.5	10500-12250	8
5	ಬ್ರಹ್ಮತಾಲ್ ಸರೋವರ–ಲೋಹಾಜಂಗ್	8.5	10200-7550	8
6	ಲೋಹಾಜಂಗ್ – ಕಾತ್‌ಗೋದಾಮ್ ಜೀಪಿನಲ್ಲಿನ ಪಯಣ			

ಟೆಂಪೋ ಟ್ರಾವಲರ್ ಮೂಲಕ ಇತರ ಚಾರಣಿಗರೊಂದಿಗೆ ಪ್ರಯಾಣ ಪ್ರಾರಂಭವಾಯಿತು. ಪ್ರಯಾಣ ಭೀಮ್ ತಾಲ್, ಕೈಂಚಿಧಾಮ್, ಅಲ್ಮೋಡ, ಕೌಸನಿ, ಬೈಜನಾಥ್ ಮಂದಿರ, ಗ್ವಾಲಧಾಮ್ ಮೂಲಕ ಲೋಹಾಜಂಗ್ ಕ್ಯಾಂಪನ್ನು ತಲುಪಿದೆವು. ಕೌಸನಿ ಗಿರಿಧಾಮದಲ್ಲಿ ಮಧ್ಯಾಹ್ನ ಕೌಸನಿಯಲ್ಲಿ ಊಟ ಮಾಡಿದ್ದೆವು. ಲೋಹಾಜಂಗ್ ಕ್ಯಾಂಪ್ ವಿಶಿಷ್ಟವಾಗಿತ್ತು.

ಈ ಚಾರಣಕ್ಕೆ ಮೊದಲು 2012ರಲ್ಲಿ ನಾನು ರೂಪಕುಂಡ ಸರೋವರದೆಡೆಗೆ ಚಾರಣ ಮಾಡಿದಾಗಲೂ ಇದೇ ಸ್ಥಳದಿಂದ ಚಾರಣ ಪ್ರಾರಂಭವಾಗಿತ್ತು. ಆಗ ಇಲ್ಲಿನ ಕ್ಯಾಂಪ್‌ಸೈಟ್ ಬೇರೆಕಡೆ ಇತ್ತು. ಸುತ್ತಲಿನ ಪ್ರಕೃತಿ ರಮಣೀಯವಾಗಿತ್ತು. ಸಂಜೆಯಾಗುತ್ತಿದ್ದಂತೆ ಚಳಿ ಜಾಸ್ತಿಯಾಗ– ತೊಡಗಿತು. ರಾತ್ರಿ ವಿದ್ಯುದ್ದೀಪಗಳು ಇಲ್ಲದೇ, ಪೆಟ್ರೋಮ್ಯಾಕ್ಸ್ ದೀಪದ ಬೆಳಕಿನಲ್ಲಿ ಊಟ ಮುಗಿಸಿ ಮಲಗಿದೆವು.

ಎರಡನೆ ದಿನ : ಫೆಬ್ರವರಿ 9, 2015 – ಲೋಹಾಜಂಗ್–ಮಂಡೋಲಿ ಹಳ್ಳಿ ಮುಖಾಂತರ ಗುಜ್ರೇನಿ ಕ್ಯಾಂಪ್– 4.5 ಕಿ.ಮೀ 5 ಗಂಟೆಯ ಚಾರಣ 7550 ಅಡಿಯಿಂದ 9200 ಅಡಿ ಎತ್ತರ.

ಇಂದಿನ ಚಾರಣ 4.5 ಕಿ.ಮೀ ದೂರ ಇದ್ದರೂ ಸುಮಾರು 1600 ಅಡಿ ಎತ್ತರಕ್ಕೆ ಹೋಗಬೇಕಿತ್ತು. ನಮ್ಮ ಗುಂಪಿನಲ್ಲಿ ಕೇವಲ 8 ಚಾರಣಿಗರಿದ್ದು ಅವರಲ್ಲಿ 6 ಚಾರಣಿಗರಿಗೆ ಇದು ಮೊದಲ ಹಿಮಾವೃತ ಪ್ರದೇಶದೆಡೆಗಿನ ಚಾರಣವಾಗಿತ್ತು. ಮಾರ್ಗದರ್ಶಿ ಸೂಚನೆಯಂತೆ ಬೆಳಗಿನ ಉಪಾಹಾರ ಮುಗಿಸಿ ಮಧ್ಯಾಹ್ನದ ಊಟದ ಬುತ್ತಿಯೊಂದಿಗೆ 8 ಗಂಟೆಗೆ ಚಾರಣ ಲೋಹಾಜಂಗ್ ಸೆಂಟ್ರಲ್ ಮಾರ್ಕೆಟ್‌ನಿಂದ ಪ್ರಾರಂಭಿಸಿದೆವು. ಮೊದಲಿಗೆ ಲೋಹಾಜಂಗ್‌ನಿಂದ ಮೇಲಿನ ಲೋಹಾಜಂಗ್ ಕಡೆಗೆ ಹತ್ತಿ ನಂತರ ಕಾಡಿನ ಮಾರ್ಗ ಪ್ರವೇಶಿಸಿ ಇಲ್ಲೂ ಅಲ್ಲಲ್ಲಿ ಕೆಲವು ಮನೆಗಳು ಇದ್ದದ್ದನ್ನು ಕಂಡೆವು. 15 ನಿಮಿಷಗಳ ಚಾರಣದ ನಂತರ ಎಡಗಡೆ ಮಂಡೋಲಿ ಹಳ್ಳಿ ಗೋಚರಿಸಿತು. ಅಲ್ಲಿ ಸ್ವಲ್ಪ ವಿಶ್ರಾಂತಿಯ ನಂತರ ನೀರನ್ನು ಕುಡಿದು ಕಾಳಿ ಕಣಿವೆ ತಲುಪಲು ತೀವ್ರವಾದ ಎತ್ತರದ ಮಾರ್ಗದಲ್ಲಿ ಹತ್ತತೊಡಗಿದೆವು. ನನ್ನನ್ನು ಹೊರತು ಪಡಿಸಿ ಉಳಿದವರೆಲ್ಲರೂ ತಮ್ಮ ಬ್ಯಾಕ್‌ಪ್ಯಾಕ್‌ನೊಂದಿಗೆ ಚಾರಣ ಮಾಡುತ್ತಿದ್ದರು. ನಾನು ಮಾತ್ರ ನನ್ನ ಬ್ಯಾಕ್‌ಪ್ಯಾಕ್‌ನ್ನು ಚಾರಣಕ್ಕೆ ರಿಜಿಸ್ಟ್ರೇಷನ್ ಮಾಡುವಾಗಲೇ ಆಫ್‌ಲೋಡ್ ಮಾಡಲು ಕೇಳಿಕೊಂಡಿದ್ದು ಅದಕ್ಕಾಗಿ ಹೆಚ್ಚಿನ ಹಣವನ್ನು ಕೊಟ್ಟಿದ್ದೆ. ಹಾಗಾಗಿ ನಾನು ಭಾರ ಹೊರಬೇಕಿರಲಿಲ್ಲ. ಸ್ವಲ್ಪ ಹೊತ್ತಿಗೆಲ್ಲ ನಾವು ಕಾಳಿ ಕಣಿವೆಯಲ್ಲಿ ಕಾಳಿ ಹಾಗೂ ಪಿಂಡಾರಿ ನದಿಗಳ ಸಂಗಮ ತಲುಪಿದೆವು. ಇಲ್ಲಿಂದಲೇ ಕೊಳವೆಗಳ ಮೂಲಕ ನೀರನ್ನು ಲೋಹಾಜಂಗ್ ಹಳ್ಳಿಗೆ ಸರಬರಾಜು ಮಾಡುವುದು. ಈ ಕೊಳವೆಗಳ ಪಕ್ಕದಲ್ಲೇ ನಡಿಗೆಯನ್ನು ಮುಂದುವರೆಸಿದೆವು. 30 ನಿಮಿಷಗಳ ತೀವ್ರ ಏರುವಿಕೆಯ ನಂತರ ನಮಗೆ ರೋಡೋಡೆಂಡ್ರಾನ್ (Rhododendron) ಹೂವುಗಳಿಂದ ಕೂಡಿದ ಬುಗ್ಗ ಎಂಬ ಸುಂದರ ಪ್ರದೇಶ ಎದುರಾಯಿತು. ಇಲ್ಲಿಂದ ನಮ್ಮ ಚಾರಣ ಮುಂದುವರೆಸಿ ಮಾರ್ಗದರ್ಶಿ ಪ್ರಕಾರ 8500 ಅಡಿ ಎತ್ತರ ತಲುಪಿದಾಗ ಲಿಂಕ್‌ಗಾಡ್ ಎಂಬ 10 ಮೀಟರ್ ಉದ್ದ ಸೇತುವೆ ದಾಟಿ ಮತ್ತೆ ಎರಡು ಗಂಟೆ ನಡೆದ ನಂತರ ಬೇಗಮ್ ಎಂಬ ಹುಲ್ಲುಗಾವಲಿನಲ್ಲಿ 15 ನಿಮಿಷ ವಿಶ್ರಾಂತಿಯ ಸಮಯವನ್ನು ಪ್ರಕೃತಿ ಸೌಂದರ್ಯ ವೀಕ್ಷಿಸಿ ಅಲ್ಲಿಂದ ನವಲಿ ಹಾಗೂ ಬೇದ್ನಿ ಬುಗ್ಯಾಲ್‌ಗಳನ್ನೂ ನೋಡಿದೆವು. ಇಲ್ಲಿಂದ ಮತ್ತೆ 15 ನಿಮಿಷ ಚಾರಣ ಮಾಡಿದ ನಂತರ ಮತ್ತೊಂದು ನೀರಿನ ತೊರೆ ಎದುರಾಯಿತು. ಇಲ್ಲಿಂದ ಮತ್ತೊಂದು ಗಂಟೆ ಚಾರಣ ನಂತರ ಗುಜ್ರೇನಿ ಕ್ಯಾಂಪ್ ತಲುಪಿದೆವು. ಇಲ್ಲಿನ ಹುಲ್ಲುಗಾವಲಿನಲ್ಲಿ 4 ಟೆಂಟ್‌ಗಳನ್ನು

ಸ್ಥಾಪಿಸಿದ್ದರು. ಆರು ಜನ ಚಾರಣಿಗರಿಗೆ 3 ಟೆಂಟ್ ಕೊಟ್ಟು ಒಂದರಲ್ಲಿ ಮಾರ್ಗದರ್ಶಿ ಹಾಗೂ ಚಾರಣ ನಾಯಕರು ಇದ್ದರು. ಹತ್ತಿರದಲ್ಲೇ ಅಡಿಗೆ ಟೆಂಟ್ ಕೂಡ ಸ್ಥಾಪಿಸಿದ್ದರು. ಸ್ವಲ್ಪ ಸಮಯದಲ್ಲಿ ಚಹಾ ಬಿಸ್ಕಟ್ಟುಗಳನ್ನು ಕೊಟ್ಟರು. ಕತ್ತಲಾಗಲು ಇನ್ನೂ ಒಂದು ಗಂಟೆ ಇದ್ದದ್ದರಿಂದ ಟೆಂಟಿನಿಂದ ಹೊರಬಂದು ಕ್ಯಾಂಪ್ ಸುತ್ತಲಿನ ಪ್ರಕೃತಿ ಸೌಂದರ್ಯ ಆಸ್ವಾದಿಸಿದೆವು. ನನ್ನ ಬಳಿ ಬೈನಾಕ್ಯುಲರ್ ಇತ್ತು. ಮೊದಲ ನೋಟಕ್ಕೆ ನನಗೆ ಕಂಡಬಂದದ್ದೆಂದರೆ ಸುತ್ತಲ ಆಕಾಶ ಚುಂಬಿಸುವಂತಿರುವ ಹಸಿರು ಹಾಗೂ ಬೂದು ಬಣ್ಣದ ಓಕ್ ಮರಗಳು ಹಾಗೂ ಬಣ್ಣ ಬಣ್ಣದ ರೋಡೋಡೆಂಡ್ರಾನ್ (Rhododendron) ಹೂವುಗಳಿಂದ ಕೂಡಿದ ಗಿಡಗಳು. ಇದೆಲ್ಲವೂ ಮನಸ್ಸಿಗೆ ಮುದ ನೀಡಿ ಚಾರಣದ ಆಯಾಸ ಮರೆಸುವಂತೆ ಮಾಡಿತು. ಕಾಡಿನ ಹೊರಗಿರುವ ಹುಲ್ಲುಗಾವಲಿನಲ್ಲಿ ಹವೆ ಸ್ವಲ್ಪ ಬಿಸಿಯಾಗಿತ್ತು. ಮಾರ್ಗದರ್ಶಿಯಿಂದ ತಿಳಿದುಬಂದದ್ದು ಏನೆಂದರೆ ಇಲ್ಲಿ ಸೂರ್ಯನು ಮುಂಜಾನೆ 8ಕ್ಕೆ ಕಾಣಿಸಿಕೊಂಡು ಸಂಜೆ 5ಕ್ಕೆ ಪಶ್ಚಿಮ ದಿಕ್ಕಿಗೆ ಕಾಣೆಯಾಗುತ್ತಾನೆ ಎಂದು. ಸುತ್ತಮುತ್ತಲಿನ ಮರಗಿಡಗಳಲ್ಲಿ ಅನೇಕ ಪಕ್ಷಿಗಳು ಕಂಡುಬಂದವು. ನಾನು ನನ್ನ ಬೈನಾಕ್ಯುಲರ್ ಮೂಲಕ ಕೆಲವನ್ನು ನೋಡಿ ಅವುಗಳ ಬಗ್ಗೆ ಮಾರ್ಗದರ್ಶಿಯಿಂದ ಅವರಿಗೂ ತೋರಿಸುತ್ತ ಮಾಹಿತಿಯನ್ನು ಪಡೆದುಕೊಂಡೆ. ಮಾರ್ಗದರ್ಶಿಯ ಪ್ರಕಾರ ನಾನು ನೋಡಿದ ಪಕ್ಷಿಗಳೆಂದರೆ – Himalayan woodpecker, Asian Barred owlet, Blue–fronted red start ಮತ್ತು Solitary snipe. ಇದರೊಂದಿಗೆ ಜೋರಾಗಿ ಬೊಗಳುವ ಜಿಂಕೆಗಳೂ ಕಂಡುಬಂದವು (Barking deer). ಈ ಕ್ಯಾಂಪಿನ ಮತ್ತೊಂದು ಆಕರ್ಷಣೆಯೆಂದರೆ ಹತ್ತಿರದಲ್ಲೇ ಹರಿಯುತ್ತಿರುವ ನೀರಿನ ತೊರೆ. ಇವನ್ನೆಲ್ಲ ನೋಡುತ್ತಿರುವಂತೆ ಕತ್ತಲಾಗತೊಡಗಿ ಚಳಿಯಾಗತೊಡಗಿತು. ನಾವೆಲ್ಲರೂ ಟೆಂಟ್‌ಬಳಿ ಹೋಗಿ ಅಲ್ಲೇ ಹೊರಗೆ ಕುಳಿತುಕೊಂಡು ನಮ್ಮ ಹಿಂದಿನ ಚಾರಣಗಳ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳತೊಡಗಿದೆವು. 7 ಗಂಟೆಗೆ ಎಲ್ಲರಿಗೂ ಬಿಸಿ ಬಿಸಿ ಸೂಪ್‌ನ್ನು ನೀಡಿದರು. 8 ಗಂಟೆಗೆ ಊಟಮಾಡಿ ಮಲಗಿದೆವು.

ಮೂರನೆ ದಿನ : ಫೆಬ್ರವರಿ 10, 2015 – ಗುಜ್ರೇನಿ ಕ್ಯಾಂಪ್ ನಿಂದ ತಿಲಾಂಡಿ ಕ್ಯಾಂಪ್ ವರೆಗೂ – 3 ಕಿ.ಮೀ 4 ಘಂಟೆಯ ಚಾರಣ 9200 ಅಡಿಯಿಂದ 10500 ಅಡಿಎತ್ತರ.

ಮೂರನೇ ದಿನ ಮುಂಜಾನೆ 9ಕ್ಕೆ ಚಾರಣ ಪ್ರಾರಂಭಿಸಿ ಸ್ವಲ್ಪದೂರ ನಡೆದ ನಂತರ ನೀರಿನ ತೊರೆ ಎದುರಾಗಿ ಇಲ್ಲಿಂದ ಮಾರ್ಗ ತೀವ್ರ ಏರಿಕೆಯಾದಾಗಿಟು

ದಟ್ಟವಾದ ಓಕ್ ಮತ್ತು ರೋಡೋಡೆಂಡ್ರಾನ್ (Rhododendron) ಮರಗಿಡಗಳಿಂದ ಆವೃತವಾಗಿತ್ತು. ಎಡಗಡೆ ಇಳಿಜಾರು ಮಾರ್ಗ ಕೆಳಗಿನ ಕಣಿವೆಗೆ ಹೋಗುತ್ತಿದ್ದರೆ ಬಲಗಡೆ ಕಾಣವುದೇ ಬೇಕಾಲ್ ತಾಲ್ ಎಂದು ಮಾರ್ಗದರ್ಶಿ ವಿವರಿಸಿದರು. ಮೇಲೆ ಹತ್ತುತ್ತಿರುವಂತೆ ಅರ್ಧಭಾಗ ರೋಡೋಡೆಂಡ್ರಾನ್ (Rhododendron) ಹೂವುಗಳಿರುವ ಗಿಡಗಳಿಂದ ಸುಂದರವಾಗಿ ಕಾಣುತ್ತಿದ್ದವು. ಇನ್ನೂ ಮುಂದೆ ಹೋಗುತ್ತಿದ್ದಂತೆ ಓಕ್ ವೃಕ್ಷಗಳ ಕಾಡನ್ನು ಪ್ರವೇಶಿಸಿದೆವು. ಇಲ್ಲಿಂದ ಒಂದು ಗಂಟೆ ಕಾಲ ಹತ್ತಿದಾಗ ವಿಶಾಲವಾದ ಹುಲ್ಲುಗಾವಲು ಎದುರಾಯಿತು. ಅಲ್ಲೆ ನಮ್ಮೆದುರಿಗೆ ದೂರದಲ್ಲಿ ತ್ರಿಶೂಲ್ ಪರ್ವತ ಹಾಗೂ ನಂದಗುಂಟಿ ಪರ್ವತ ಗೋಚರವಾಗತೊಡಗಿತು. ಹುಲ್ಲುಗಾವಲಿನ ಒಂದು ತುದಿಯಲ್ಲಿ ನಮ್ಮ ತಿಲಾಂಡಿಯಲ್ಲಿನ ಕ್ಯಾಂಪ್ ಗೋಚರಿಸಿತು. ಇಲ್ಲಿಂದ ಕೆಳಗೆ ನೋಡಿದರೆ ಕಂಡುಬಂದಿದ್ದು ಪ್ರಸಿದ್ಧವಾದ ರೂಪಕುಂಡ್ ಚಾರಣದಲ್ಲಿನ ಅಲಿ ಹಾಗೂ ಬೇದ್ನಿ ಬುಗ್ಯಾಲ್ ಗಳು. ನಾವು ಕಾಡಿನೊಳಗೆ ಅಲ್ಲಲ್ಲಿ ವಿಶ್ರಾಂತಿ ಪಡೆದು ಬಂದದ್ದರಿಂದ ಕ್ಯಾಂಪಿಗೆ ಬರುವ ಹೊತ್ತಿಗೆ 2 ಗಂಟೆಯಾಗಿತ್ತು. ಕ್ಯಾಂಪಿನಲ್ಲೇ ನಮ್ಮ ಮಧ್ಯಾಹ್ನದ ಊಟವಾಯಿತು.

ನಾಲ್ಕನೆ ದಿನ : ಫೆಬ್ರವರಿ 11, 2015 – ತಿಲಾಂಡಿ ಕ್ಯಾಂಪ್–ಬ್ರಹ್ಮತಾಲ್ ಸರೋವರ ಕ್ಯಾಂಪ್ – 5.5 ಕಿ.ಮೀ–8 ಗಂಟೆ ಚಾರಣ 9200 ಅಡಿಯಿಂದ 12250 ಅಡಿ ಎತ್ತರ ತಲುಪಿ ನಂತರ 10200 ಅಡಿ ಇಳಿಯುವ ಮಾರ್ಗ.

ಇಂದಿನ ಚಾರಣ ಲೋಹಾಜಂಗ್ ಬೇಸ್ ಕ್ಯಾಂಪ್‌ವರೆಗೂ ಇಳಿಜಾರಿನ ಹಾದಿ. ಫೆಬ್ರವರಿ ತಿಂಗಳಲ್ಲಿ ನಾವು ಚಾರಣ ಮಾಡಿದ ಸಂದರ್ಭದಲ್ಲಿ ಎಲ್ಲೆಡೆ ಅಪಾರವಾದ ಹಿಮ ಶೇಖರಣೆಯಾಗಿದ್ದು ಚಾರಣ ಎಲ್ಲರಿಗೂ ಬಹಳ ಕಷ್ಟವಾಗಿತ್ತು. ಏಕೆಂದರೆ ಚಾರಣದಲ್ಲಿ ನಮಗೆ ಮೈಕ್ರೋಸ್ಪೈಕ್ಸ್ ಕೊಟ್ಟಿರಲಿಲ್ಲ. ಹಾಗಾಗಿ ಚಾರಣ ಹೆಚ್ಚು ಸಮಯ ತೆಗೆದುಕೊಂಡಿದ್ದಲ್ಲದೆ ತೀವ್ರ ಆಯಾಸವಾಗತೊಡಗಿತು. ಹಿಮದಲ್ಲಿ ಒಂದು ಹೆಜ್ಜೆ ಇಟ್ಟರೆ ಅದು ಮೊಣಕಾಲಿನ ತನಕ ಹೂತುಹೋಗುತ್ತಿತ್ತು. ಅಲ್ಲದೇ ಇಳಿಯುವ ಪ್ರಕ್ರಿಯೆಯೂ ಮತ್ತಷ್ಟು ಕಷ್ಟಕರವಾಗಿತ್ತು. ಚಾರಣ ಮಾರ್ಗ ಹೇಗಿತ್ತೆಂದರೆ ಎತ್ತರದ ಪ್ರದೇಶದೆಡೆಗೆ ಚಾರಣ ಮಾಡುತ್ತಿದ್ದಾಗ ನಮ್ಮಿಂದ ಮೇಲೆ ಮರಗಳಿದ್ದರೆ, ಇಳಿಯುವಾಗ ನಮ್ಮಿಂದ ಕೆಳಗೆ ಮರಗಳು ಇದ್ದವು. ವೃಕ್ಷಗಳೆಲ್ಲ ರೋಡೋಡೆಂಡ್ರಾನ್ (Rhododendron) ಮತ್ತು ಓಕ್ ವೃಕ್ಷಗಳು. ಮೇಲಿನ ಹಂತಕ್ಕೆ ಹತ್ತುವುದಕ್ಕೆ ನಮಗೆ ಒಂದೂವರೆ ಗಂಟೆ ಹಿಡಿಯಿತು. ಕೊನೆಗೆ ನಾವು ಝೂಂಡಿ ಟಾಪ್ ತಲುಪಿದೆವು. ಇದು ಇಲ್ಲಿಯವರೆಗಿನ ಚಾರಣದಲ್ಲಿ ಅತಿ ಹೆಚ್ಚು

ಎತ್ತರದ ಸ್ಥಳ. ಇಲ್ಲಿಂದ ನಮಗೆಲ್ಲರಿಗೂ ಸುತ್ತಲೂ ಹಿಮಾವೃತವಾದ ಪರ್ವತಗಳ ದರ್ಶನವಾಯಿತು. ಇಲ್ಲಿಂದ ತ್ರಿಶೂಲ್ ಹಾಗೂ ನಂದಗುಂಟಿ ಪರ್ವತಗಳ ಭವ್ಯವಾದ ದೃಶ್ಯಗಳನ್ನು ಹತ್ತಿರದಿಂದ ನೋಡುವ ಅದೃಷ್ಟ ನಮ್ಮದಾಯಿತು. ಇಲ್ಲಿಂದ ನಮಗೆ ರೂಪಕುಂಡ್ ಸರೋವರದೆಡೆಗಿನ ಸಂಪೂರ್ಣ ಮಾರ್ಗವು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ನನಗೆ 2012ರಲ್ಲೇ ರೂಪಕುಂಡ ಸರೋವರದೆಡೆಗೆ ಚಾರಣ ಮಾಡಿದ್ದರಿಂದ ಈ ಮಾರ್ಗ ಸ್ಪಷ್ಟವಾಗಿ ಗುರುತಿಸಲು ಸಹಾಯವಾಯಿತು. ಇಲ್ಲಿಂದ ಹೊರಡಲು ಯಾರಿಗೂ ಮನಸ್ಸೇ ಬರುತ್ತಿರಲಿಲ್ಲ. ಅರ್ಧಗಂಟೆ ಕಾಲ ಇಲ್ಲೇ ಇದ್ದು ಸುತ್ತಲಿನ ಅತಿ ಸುಂದರ ಪ್ರಕೃತಿಯನ್ನು ಮತ್ತೆ ಮತ್ತೆ ನೋಡಿ ಕಣ್ತುಂಬಿಕೊಂಡೆ. ಧನ್ಯತಾಭಾವದಿಂದ ಅಲ್ಲಿಂದ ನಾವೆಲ್ಲರೂ ನಮ್ಮ ಚಾರಣ ಮುಂದುವರೆಸಿ ಇಲ್ಲಿಂದ ಇಳಿಯುತ್ತಿರುವಾಗ ಇಲ್ಲಿನ ಭವ್ಯವಾದ ಪರ್ವತಗಳು, ಕಣ್ತುಂಬುವ ಕಣಿವೆಗಳು ನಮಗೆ "ಹೋಗಿ ಮತ್ತೊಮ್ಮೆ ಬನ್ನಿ" ಎಂದು ಹೇಳುತ್ತಿವೆಯೋ ಎಂಬಂತೆ ಭಾಸವಾಗುತ್ತಿತ್ತು. ಭಾರವಾದ ಹೃದಯದಿಂದ ಹಾಗೂ ಧನ್ಯತಾಭಾವದಿಂದ ಇಲ್ಲಿಂದ ಇಳಿಯತೊಡಗಿದೆವು. ಇದರೊಡನೆ ನಮಗೆ 7ರಿಂದ 8 ಪದರಗಳಲ್ಲಿ ಪರ್ವತ ಶ್ರೇಣಿಗಳು ಒಂದರ ಹಿಂದೊಂದರಂತೆ ಕಾಣಿಸತೊಡಗಿದವು. ಈ ರೀತಿಯ ಹಿಮಾಲಯದ ಭವ್ಯವಾದ ದೃಶ್ಯಗಳು ನಾನು ಮಾಡಿದ ಬೇರಾವುದೇ ಹಿಮಾಲಯದ ಚಾರಣದಲ್ಲಿ ಕಂಡುಬಂದಿಲ್ಲ. ಹಾಗಾಗಿ ಯಾವುದೇ ಚಾರಣಿಗನಾದರೂ ಬ್ರಹ್ಮತಾಲ್ ಸರೋವರದೆಡೆಗಿನ ಚಾರಣವನ್ನು ತಪ್ಪಿಸಲೇಕೂಡದು. ನನ್ನ ಮಟ್ಟಿಗೆ ಬ್ರಹ್ಮತಾಲ್ ಚಾರಣವು ರೂಪಕುಂಡ ಸರೋವರದೆಡೆಗಿನ ಚಾರಣಕ್ಕಿಂತ ರೋಮಾಂಚನಕಾರಿಯಾದದ್ದು.

ಝಾಂಡಿ ಟಾಪ್ ಪ್ರದೇಶದಿಂದ ನಾವು ಬಲಭಾಗದ ಮಾರ್ಗವನ್ನು ಆರಿಸಿಕೊಂಡು ನಡೆಯಲು ಪ್ರಾರಂಭಿಸಿದೆವು. ಈ ಮಾರ್ಗವೂ ಸಹ ಬ್ರಹ್ಮತಾಲ್‌ವರೆಗೂ (12250 ಅಡಿ) ತೀವ್ರ ಏರುಹಾದಿಯಾಗಿತ್ತು. ಉದ್ದಕ್ಕೂ ಪರ್ವತ ಶಿಖರಗಳು ನಮ್ಮೊಡನೇ ಇದ್ದದ್ದನ್ನು ಅನುಭವಿಸಿದೆವು. ಒಂದು ಗಂಟೆಯ ಚಾರಣದ ನಂತರ ನಾವು ಬ್ರಹ್ಮತಾಲ್ ಟಾಪ್‌ನ್ನು ತಲುಪಿದೆವು. ಇಲ್ಲೂ ಸಹ ನಾವು ಅರ್ಧಗಂಟೆ ಇದ್ದು ಎಲ್ಲ ಪರ್ವತ ಶಿಖರಗಳ ದೃಶ್ಯಗಳನ್ನು ಮತ್ತೊಮ್ಮೆ ಕಣ್ತುಂಬಿಸಿಕೊಂಡೆವು.

ಈಗ ನಾವು ಬ್ರಹ್ಮತಾಲ್ ಟಾಪ್ನಿಂದ ಬ್ರಹ್ಮತಾಲ್ ಸರೋವರದೆಡೆಗೆ ನಿಧಾನವಾಗಿ ಇಳಿದು ಹೋಗಬೇಕು. ಇಳಿಜಾರಿನ ಮೊಣಕಾಲಿನವರೆಗೂ ಶೇಖರಣೆಗೊಂಡಿರುವ ಹಿಮದ ಮಾರ್ಗದಲ್ಲಿ ನಾವು ಇಳಿಯಬೇಕಿತ್ತು. ಹಿಮವು ಹತ್ತಿಯಂತೆ ಮೆತ್ತಗಿದ್ದು ಜಾರುವುದಕ್ಕೂ ಆಗುತ್ತಿರಲಿಲ್ಲ. ಕೇವಲ ನಡೆದೇ ಹೋಗಬೇಕಿತ್ತು. ನನ್ನ ವಯಸ್ಸನ್ನು ನೋಡಿ ನನ್ನನ್ನು ಒಬ್ಬ ಮಾರ್ಗದರ್ಶಿ

ಕೈಹಿಡಿದೇ ನಿಧಾನವಾಗಿ ಇಳಿಸತೊಡಗಿದ. ಅವರ ಸಹಾಯವಿಲ್ಲದಿದ್ದರೆ ನಾವು ಇಳಿಯುವುದು ಅಸಾಧ್ಯವೇ ಆಗಿತ್ತು. ಬ್ರಹ್ಮತಾಲ್ ಸರೋವರ ಮೊದಲ ನೋಟದಲ್ಲೇ ಯಾರಾದರೂ ಸಂಪೂರ್ಣ ಮೋಹಿತರಾಗುವುದರಲ್ಲಿ ಸಂಶಯವಿಲ್ಲ. ನನಗಂತೂ ಮಿಶ್ರಭಾವನೆಗಳು ಒಂದರ ಮೇಲೊಂದರಂತೆ ಹೊರಬರುತ್ತಿತ್ತು. ಸರೋವರ ನೋಡುತ್ತಿದ್ದರೆ ನಮಗೆಲ್ಲರಿಗೂ ಕಣ್ಣುಗಳನ್ನು ಬೇರೆಡೆಗೆ ತಿರುಗಿಸಲು ಸಾಧ್ಯವೇ ಆಗುತ್ತಿರಲಿಲ್ಲ. ನಾವು ಅಲ್ಲಿಗೆ ಹೋದ ಸಂದರ್ಭದಲ್ಲಿ ಸರೋವರ ಸಂಪೂರ್ಣವಾಗಿ ಹೆಪ್ಪುಗಟ್ಟಿತ್ತು. ಬೇಸಿಗೆಯಲ್ಲಿ ಇಲ್ಲಿ ಬಂದು ಸರೋವರವನ್ನು ರಾತ್ರಿಯಲ್ಲಿ ಹೊತ್ತು ನೋಡಿದರೆ ಆಗಸದ ನಕ್ಷತ್ರಗಳ ಪ್ರತಿಬಿಂಬವು ಸ್ಪಷ್ಟವಾಗಿ ಕಾಣುವುದೆಂದು ಮಾರ್ಗದರ್ಶಿಯು ನಮಗೆ ತಿಳಿಸಿದರು. ನಾವು ಈ ಸ್ಥಳಕ್ಕೆ ಬಂದಾಗ ಸೂರ್ಯಾಸ್ತಮಾನ ಆಗುವ ಸಮಯವು ಸಮೀಪಿಸುತ್ತಿತ್ತು. ಸರೋವರದಿಂದ ಕೇವಲ 500 ಮೀಟರ್ ದೂರದಲ್ಲೆ ನಮ್ಮ ಟೆಂಟ್‌ಗಳು ಇರುವುದೆಂದು ಮಾರ್ಗದರ್ಶಿಯು ತಿಳಿಸಿದರು. ಅಲ್ಲಿಂದ ನಾವು ವೇಗವಾಗಿ ನಮ್ಮ ಟೆಂಟ್‌ಗಳೆಡೆಗೆ ಹೋಗಿ ಸೂರ್ಯಾಸ್ತವನ್ನು ನೋಡಿ ಧನ್ಯರಾದೆವು.

ಐದನೆ ದಿನ : ಫೆಬ್ರವರಿ 12, 2015 – ಬ್ರಹ್ಮತಾಲ್ ಸರೋವರದಲ್ಲಿನ ಕ್ಯಾಂಪ್‌ನಿಂದ ಲೋಹಾಜಂಗ್ ಬೇಸ್ ಕ್ಯಾಂಪ್ – 8.5 ಕಿ.ಮೀ 8 ಘಂಟೆಯ ಚಾರಣ 10200 ಅಡಿಯಿಂದ 7550 ಅಡಿ ಕೆಳಗಿನ ಸ್ತರದೆಡೆಗೆ ಚಾರಣ.

ಮುಂಜಾನೆಯ ಉಪಾಹಾರದ ನಂತರ ನಮ್ಮ ಬೇಸ್ ಕ್ಯಾಂಪ್ ಕಡೆಗಿನ ಮರು ಚಾರಣವನ್ನು ಪ್ರಾರಂಭಿಸಿದೆವು. ಮನದಲ್ಲಿ ಆಪ್ಯಾಯಮಾನವಾದ ಭಾವನೆಗಳು ತುಂಬಿಕೊಂಡಿದ್ದು ನನ್ನ ಜೀವನದಲ್ಲಿ ಅತ್ಯಂತ ಮಹತ್ವವಾದ ಪ್ರಕೃತಿಯೊಡನೆಯ ಸುಂದರವಾದ ಸಂವಾದವನ್ನು ನಾಲ್ಕು ದಿನಗಳಲ್ಲಿ ಮಾಡಿ ಐದನೆ ದಿನದ ಹಿಮಾಲಯದೊಂದಿಗಿನ ಕೊನೆಯ ದಿನವನ್ನು ಕಳೆಯಲು ಪ್ರಾರಂಭಿಸಿದೆ. ಬ್ರಹ್ಮತಾಲ್ ಸರೋವರದಿಂದ ಝೂಂಡಿ ಟಾಪ್‌ವರೆಗೂ ತೀವ್ರ ಹಿಮದಿಂದ ಕೂಡಿದ ಇಳಿಜಾರಿನ ಮಾರ್ಗದಲ್ಲಿ ಮಾರ್ಗದರ್ಶಿಯ ಕೈಯನ್ನು ಹಿಡಿದೇ ಇಳಿಯತೊಡಗಿದೆ. ಮಾರ್ಗದರ್ಶಿಯ ಸಹಾಯವಿಲ್ಲದಿದ್ದರೆ ನನ್ನಂತಹ ಹಿರಿಯ ಚಾರಣಿಗರಿಗೆ ಇಂತಹ ಕಷ್ಟಕರವಾದ ಚಾರಣ ಮಾಡಲು ಅಸಾಧ್ಯವೇ ಸರಿ. ಝೂಂಡಿ ಟಾಪ್‌ನ್ನು ತಲುಪುವ ಹಾದಿಯಲ್ಲಿ ಪರ್ವತಗಳು ಕಣ್ಣಾಮುಚ್ಚಾಲೆಯಾಡುತ್ತ ಆಗಾಗ ನಮಗೆ ಕಾಣಿಸುತ್ತ ಮತ್ತೆ ಕೆಲವು ಸಮಯ ಮಾಯವಾಗುತ್ತ ಇತ್ತು. ಝೂಂಡಿ ಟಾಪ್‌ನಿಂದ ಎಡಗಡೆಯ ಹಾದಿ ಆರಿಸಿಕೊಂಡು ನಾವು ಲೋಹಾಗಂಜ್‌ವರೆಗಿನ ಇಳಿಯುವ ಮಾರ್ಗದಲ್ಲಿ ಇಳಿಯತೊಡಗಿದೆವು. ಇಲ್ಲೂ ಕೂಡ ಹಿಮವು ನಮ್ಮೊಂದಿಗೆ ಇದ್ದೇ ಇದ್ದವು. ಒಂದು ಕಿ,ಮೀ ಇಳಿದ

ನಂತರ ನಮಗೆ ಓಕ್ ಮರಗಳು ಕಾಣಿಸತೊಡಗಿದವು. ಅದರೂ ಹಿಮವು ಇದ್ದೇ ಇದ್ದವು. ಸ್ವಲ್ಪ ದೂರದ ನಂತರ ವಿಶಾಲವಾದ ಪ್ರದೇಶ ಪ್ರವೇಶಿಸಿದೆವು. ಈ ಪ್ರದೇಶವನ್ನು "ಖೋರುರೈ" ಅಥವಾ "ಖೋರು" ಅಂದರೆ ಓಕ್ ಪ್ರದೇಶವೆಂದು ಕರೆಯುವರೆಂದು ಮಾರ್ಗದರ್ಶಿ ತಿಳಿಸಿದರು. ಈ ಸ್ಥಳದಲ್ಲಿ ಕುಳಿತು ನೀರು ಕುಡಿದು ವಿಶ್ರಾಂತಿ ಪಡೆದುಕೊಳ್ಳುವಂತೆ ಮಾರ್ಗದರ್ಶಿ ತಿಳಿಸಿದರು. ಇಲ್ಲಿಂದ ಒಂದೂವರೆ ಕಿ.ಮೀ ಇಳಿದ ನಂತರ ಮುಖ್ಯ ಮಾರ್ಗ ಎದುರಾಯಿತು ಹಾಗೇ ಹಿಮದ ಹಾದಿಯೂ ಮಾಯವಾಯಿತು. ಇದರಿಂದ ನಮಗೆ ನಮ್ಮ ಮುಂದಿನ ನಡಿಗೆ ಸುಲಭವಾಗಿ ಎಲ್ಲರೂ ಸಮಾಧಾನದಿಂದ ಇಳಿಯತೊಡಗಿದೆವು. ಈ ಮಾರ್ಗ ನಮ್ಮನ್ನು ಬೆಟ್ಟದಲ್ಲಿನ ಮನೆಗಳ ಮಾರ್ಗದೆಡೆಗೆ ಕೊಂಡೊಯ್ದವು. ಇಲ್ಲಿಂದ ತಿಲಾಂಡಿಯವರೆಗೂ ಮರಗಿಡಗಳು ಬಹಳ ಕಡಿಮೆ ಇದ್ದು ನಮ್ಮ ನಡಿಗೆ ಸುಲಭವಾಗತೊಡಗಿತು. ಮಾರ್ಗದಲ್ಲಿ ನಮಗೆ ಎರಡು ತೊರೆಗಳು ಎದುರಾಯಿತು. ಅವುಗಳನ್ನು ದಾಟಿ ಮತ್ತೊಂದು ಗಂಟೆಯ ಚಾರಣದ ನಂತರ ನಾವುಗಳು ಕುರಿಕಾಯುವವರ ಗುಡಿಸಲುಗಳನ್ನು ಸಮೀಪಿಸಿದೆವು. ಈ ಪ್ರದೇಶವನ್ನು ಸ್ಥಳೀಯರು "ಚಾವ್ನಿ" ಎಂದು ಕರೆಯುವರು ಹಾಗೂ ಸ್ಥಳೀಯ ಕುರುಬರು ಇಲ್ಲಿ ತಮ್ಮ ಕುರಿಕಾಯುವ ಸಾಮಾನುಗಳನ್ನು ಹಾಗೂ ಹುಲ್ಲುಗಳನ್ನು ಶೇಖರಿಸುವರು ಎಂದು ಮಾರ್ಗದರ್ಶಿ ತಿಳಿಸಿದರು. ಇಲ್ಲಿಂದ ಮತ್ತೆ ಅರ್ಧಗಂಟೆ ಚಾರಣ ಮಾಡಿದ ನಂತರ ನಾವು ಲೋಹಾಜಂಗ್‌ನ ಮುಖ್ಯ ಮಾರಾಟ ಪ್ರದೇಶ ಪ್ರವೇಶಿಸಿದೆವು. ಇಲ್ಲಿಂದ ನಮ್ಮ ಬೇಸ್ ಕ್ಯಾಂಪ್ ಕೇವಲ 10 ನಿಮಿಷದ ನಡಿಗೆ. ಕೊನೆಗೆ ಎಲ್ಲರೂ ಬೇಸ್ ಕ್ಯಾಂಪನ್ನು ತಲುಪಿ ನಮ್ಮ ಕೋಣೆಗಳನ್ನು ಪ್ರವೇಶಿಸಿ ವಿಶ್ರಾಂತಿ ಪಡೆದೆವು. ಇಲ್ಲಿಗೆ ನಮ್ಮ ಬ್ರಹ್ಮತಾಲ್ ಸರೋವರದ ಚಾರಣವು ಮುಗಿದು ಇನ್ನು ಉಳಿದ ಕೆಲಸವೆಂದರೆ ಇಲ್ಲಿಂದ ಕಾತ್ಗೋದಾಮ್‌ನ್ನು ಟೆಂಪೋ ಟ್ರಾವೆಲರ್ ಮೂಲಕ ತಲುಪುವುದು ಮಾತ್ರ.

ಲೋಹಾಜಂಗ್ ಬೇಸ್ ಕ್ಯಾಂಪಿನಿಂದ ಫೆಬ್ರವರಿ 13ರಂದು ಮುಂಜಾನೆ ಪ್ರಯಾಣ ಮಾಡಿ ಸಂಜೆ ಹೊತ್ತಿಗೆ ಕಾತ್ಗೋದಾಮ್ ರೈಲ್ವೆ ನಿಲ್ದಾಣ ತಲುಪಿ ಅಲ್ಲಿ ಮೊದಲೇ ನಾನು ಕಾಯ್ದಿರಿಸಿದ್ದ ರಿಟೈರಿಂಗ್ ರೂಮಿನಲ್ಲಿ ರಾತ್ರಿ ಮಲಗಿದ್ದು ಫೆಬ್ರವರಿ 14ರಂದು ಅಲ್ಲಿಂದ ದೆಹಲಿಗೆ ಹೊರಟು ಸಂಜೆ ದೆಹಲಿ ತಲುಪಿ ರಾತ್ರಿ 7 ಗಂಟೆಯ ವಿಮಾನದಲ್ಲಿ ಬೆಂಗಳೂರನ್ನು ತಲುಪಿದೆ. ಹಿಮಾಲಯದ ಅತ್ಯಂತ ಕಷ್ಟಕರ ಅದರೆ ಸಾಹಸದಿಂದ ಕೂಡಿದ ಬ್ರಹ್ಮತಾಲ್ ಸರೋವರದೆಡೆಗಿನ ಚಾರಣವನ್ನು ಮಾಡಿದ ತೃಪ್ತಿ ದೊರೆತು ಮುಂದಿನ ಹಿಮಾಲಯ ಚಾರಣದ ಬಗ್ಗೆ ಯೋಚಿಸಲು ಅನುವಾದೆ. ಆ ಚಾರಣವೇ ಹಿಮಾಲಯದಲ್ಲಿನ ಮತ್ತೊಂದು ರೋಚಕ ಸಾಹಸಮಯ ಚಾರಣ. ಅದರ ಕುರಿತಾದ ವಿವರಗಳನ್ನು ಮುಂದಿನ ಪುಟಗಳಲ್ಲಿ ಓದಿರಿ.

ರೂಪಿನ್ ಪಾಸ್ ಕಡೆಗಿನ ಸಾಹಸಮಯ ಚಾರಣ

ಈ ಅದ್ಭುತವಾದ, ಬೇರಾವ ಚಾರಣದೊಂದಿಗೂ ಹೋಲಿಸಲಾಗದ ಅನುಭವಿ ಚಾರಣಿಗನಿಗೂ ಸವಾಲನ್ನೊಡ್ಡುವ ರೂಪಿನ್ ಪಾಸ್ ಚಾರಣ ನಾನು 29ಮೇ 2015 ರಿಂದ ಜೂನ್ 7, 2015ರಲ್ಲಿ ಮಾಡಿದೆ. ಇದು ನನ್ನ ಚಾರಣ ಜೀವನದಲ್ಲೇ ಅತ್ಯಂತ ಸುಂದರವಾದ, ಕಠಿಣವಾದ ಹಾಗೂ ಜೀವನದಲ್ಲಿ ಪರಮ ತೃಪ್ತಿ ನೀಡಿದ ಅತ್ಯುತ್ತಮ ಚಾರಣ.

15380 ಅಡಿ ಎತ್ತರದಲ್ಲಿರುವ ರೂಪಿನ್ ಪಾಸ್ ಉತ್ತರಾಖಂಡ್ ರಾಜ್ಯದ ಸರಹದ್ದಿನಿಂದಾಚೆಗೆ ಹಾಗೂ ಹಿಮಾಚಲ ಪ್ರದೇಶದ ಆಗ್ನೇಯ ದಿಕ್ಕಿನಲ್ಲಿದೆ. ಈ ಚಾರಣದ ಬಹು ಭಾಗವು ಉತ್ತರಾಖಂಡ್ ರಾಜ್ಯದಲ್ಲಿನ ಗೋವಿಂದ್ ಪಶುವಿಹಾರ್ ರಾಷ್ಟ್ರೀಯ ಉದ್ಯಾನದಲ್ಲಿರುವುದು. ಇದೇ ಉದ್ಯಾನವನದಲ್ಲಿ ಕೇದಾರಕಾಂತ ಮತ್ತು ಹರ್-ಕಿ-ಧುನ್ ಚಾರಣಗಳು ಇರುವುದು.

ರೂಪಿನ್ ಪಾಸ್ ಚಾರಣದಲ್ಲಿ ಪ್ರತಿಯೊಂದು ತಿರುವಿನಲ್ಲೂ ದೃಶ್ಯಾವಳಿಗಳು ಸಿನಿಮೀಯ ರೀತಿಯಲ್ಲಿ ಬದಲಾಗುತ್ತಿರುತ್ತದೆ. ಮೊದಲನೇ ದಿನದ ಚಾರಣದಿಂದಲೇ ಆಶ್ಚರ್ಯದ ಮೇಲೆ ಆಶ್ಚರ್ಯಗಳು ಎದುರಾಗುತ್ತವೆ. ಇವುಗಳಲ್ಲಿ ಪ್ರಮುಖವಾದದ್ದು:

ಚಾರಣದುದ್ದಕ್ಕೂ ನಮ್ಮೊಂದಿಗೆ ರೂಪಿನ್ ನದಿ ಸದಾ ಹರಿಯುತ್ತಿರುತ್ತದೆ. ಇದ್ದಕ್ಕಿದ್ದಂತೆ ನೇತಾಡುವ ಹಳ್ಳಿಗಳು ಗೋಚರಿಸುತ್ತವೆ.

ಚಾರಣ ಮಾರ್ಗ ದಟ್ಟವಾದ ಪೈನ್ ವೃಕ್ಷಗಳಿಂದ ಕೂಡಿದ ಅರಣ್ಯದೊಳಗೆ ಐಕ್ಯವಾಗುತ್ತದೆ.

ಚಾರಣ ಮಾರ್ಗ ಹಿಮಗಾವಲುಗಳು, ಹಿಮಸೇತುವೆಗಳು, ದಟ್ಟವಾದ ಹಿಮದ ಕಣಿವೆಗಳು, ಹಿಮದ ಮೈದಾನಗಳು ಮತ್ತು ನೂರಾರು ಜಲಪಾತಗಳನ್ನೊಳಗೊಂಡಿದೆ. ಇವೆಲ್ಲ ಆಶ್ಚರ್ಯಗಳೊಂದಿಗೆ ನಮ್ಮೊಂದಿಗೆ ಸದಾ ಇರುವುದೇ ರೂಪಿನ್ ನದಿ. ಈ ನದಿ ಮೂರು ಹಂತದ ಸುಪ್ರಸಿದ್ಧ ಜಲಪಾತದೊಂದಿಗೆ U ಆಕಾರದ ಹಿಮಕಣಿವೆಯಲ್ಲಿ ಮುಕ್ತಾಯವಾಗುವುದು.

ಈ ಚಾರಣದ ಮತ್ತಷ್ಟು ವೈಶಿಷ್ಟ್ಯಗಳೆಂದರೆ

ಲೋಯರ್ ವಾಟರ್‌ಫಾಲ್ಸ್ ಕ್ಯಾಂಪ್‌ಸೈಟ್ , ಸಾಹಸಮಯವಾದ 200 ಮೀಟರ್ ಎತ್ತರದ ಜಾರುವ ಹಿಮದಮೇಲೆ ಹತ್ತುತ್ತಾ ರೂಪಿನ್ ಪಾಸ್‌ನ್ನು ದಾಟುವುದು. ಕಿನ್ನೋರ್ ಭಾಗದಲ್ಲಿನ ಸಾಂಗ್ಲಾ ಕಾಂಡದವರೆಗಿನ ವಿಶಾಲವಾದ ಹುಲ್ಲುಗಾವಲು

ರೂಪಿನ್ ಪಾಸ್ ಚಾರಣದ ಸಂಕ್ಷಿಪ್ತ ವಿವರಗಳು ಇಂತಿವೆ

ದಿನ	ಸ್ಥಳದ ವಿವರ	ಕ್ರಮಿಸುವ ದೂರ	ಏರಿದ ಎತ್ತರ ಅಡಿಗಳಲ್ಲಿ	ತೆಗೆದುಕೊಂಡ ಸಮಯ ಗಂಟೆಗಳಲ್ಲಿ
1	ದೆಹಲಿ – ರೋಹ್ರು (ROHRU)			13-14
2	ರೋಹ್ರು-ಜಿಸ್ಕುನ್	85		5
3	ಜಿಸ್ಕುನ್ – ಜಕ ಕ್ಯಾಂಪ್	4	7630–8755	4
4	ಜಕ – ಸರುವಾಸ್ ಥ್ಯಾಚ್	7	8755–10770	6
5	ಸರುವಾಸ್ ಥ್ಯಾಚ್ – ಧಂಡೇರಾಸ್	3	10770–11700	2
6	ಧಂಡೇರಾಸ್ ಥ್ಯಾಚ್-ಅಪ್ಪರ್ ವಾಟರ್ ಫಾಲ್ಸ್		11700–13385	3
7	ಅಪ್ಪರ್ ವಾಟರ್ ಫಾಲ್-ರೂಪಿನ್ ಫಾಲ್ಸ್ – ರೋಂಟಿಫಡ್	8	13385–13139	11
8	ರೋಂಟಿಫಡ್ – ಸಾಂಗ್ಲಾಕಾಂಡ – ಸಾಂಗ್ಲಾ		13139–877	6
9	ಸಾಂಗ್ಲಾ-ಶಿಮ್ಲಾ-ಜೀಪಿನಲ್ಲಿ ಪ್ರಯಾಣ			

ಮೊದಲನೇ ದಿನ – 29, ಮೇ 2015– ರೋಹ್ರು – ಜಿಸ್ಕುನ್ ಕ್ಯಾಂಪ್ (7630 ಅಡಿ ಎತ್ತರ) ಜೀಪಿನಲ್ಲಿ – 5 ಗಂಟೆ – 85 ಕಿ.ಮೀ.

ಮೊದಲಿಗೆ ನಾನು ಮೇ 28ರಂದೇ ಬೆಂಗಳೂರಿನಿಂದ ದೆಹಲಿಗೆ ವಿಮಾನದಲ್ಲಿ ಬಂದು ನಂತರ 28ರಂದು ದೆಹಲಿಯಿಂದ ISBT, Kashmiri Gate ಬಸ್ ನಿಲ್ದಾಣದಿಂದ ಸಂಜೆ 4.30ಕ್ಕೆ ರೋಹ್ರುಗೆ ಹೋಗುವ ಬಸ್ಸಿನಲ್ಲಿ ಪಯಣಿಸಿ ಮುಂಜಾನೆ 8 ಗಂಟೆಗೆ ರೋಹ್ರು ತಲುಪಿದೆ. ಅಲ್ಲಿಂದ ಮೊದಲೆ ನಿಗದಿ ಪಡಿಸಿದಂತೆ ಜೀಪಿನಲ್ಲಿ 9 ಗಂಟೆಗೆ ಜಿಸ್ಕುನ್ ಕ್ಯಾಂಪ್ ಕಡೆಗೆ ಚಾರಣಿಗರೊಂದಿಗೆ ಹೊರಟೆ. ರೋಹ್ರುವಿನಿಂದ ರಸ್ತೆ ಇಬ್ಭಾಗವಾಗುವುದು. ಒಂದು ರಸ್ತೆ ಜಾಂಗ್ಲಿಕ್ ಕಡೆಗೆ ಹೋದರೆ ಇನ್ನೊಂದು ಜಿಸ್ಕುನ್ ಕಡೆಗೆ ಹೋಗುವುದು. ಈ ರಸ್ತೆ ಸುಂದರವಾದ ಚೈನ್‌ಶೀಲ್ ಬುಗ್ಯಾಲ್ ಮಾರ್ಗವಾಗಿ ಮಧ್ಯಾಹ್ನ 2.30ಕ್ಕೆ ಜಿಸ್ಕುನ್ ತಲುಪಿದೆ. ಜಿಸ್ಕುನ್ ಕ್ಯಾಂಪ್ ರೂಪಿನ್ ಹಾಗೂ ನರ್ಗನಿ ನದಿಗಳ ಸಂಗಮದಲ್ಲಿರುವುದು. ಕೆಳಗಿನ ಜಿಸ್ಕುನ್ ಪ್ರದೇಶವನ್ನು ಬಟ್ವಾ ಎಂದು ಕರೆಯುವರು. ನಾವು ಮೇಲಿನ ಜಿಸ್ಕುನ ಪ್ರದೇಶವನ್ನು ತಲುಪಿ ನಮಗಾಗಿ ಸಿದ್ಧಪಡಿಸಿದ್ದ ಟೆಂಟ್ ಪ್ರವೇಶಿಸಿದೆವು.

ಈ ಕ್ಯಾಂಪಿನಲ್ಲಿ ಚಾರಣದ ನಾಯಕರು ಹಾಗೂ ಅವರ ಅನೇಕ ಸಹಚರ ಮಾರ್ಗದರ್ಶಿಗಳು ನಮ್ಮನ್ನು ಅತ್ಯಂತ ಪ್ರೀತಿಯಿಂದ ಸ್ವಾಗತಿಸಿ ನಮಗೆ ಚಹಾ ಮತ್ತು ಸ್ನ್ಯಾಕ್ಸ್ ನೀಡಿದರು. ನಂತರ ಎಲ್ಲರ ಪರಿಚಯ ಮಾಡಿಕೊಂಡದ್ದಲ್ಲದೆ ನಮ್ಮ ಚಾರಣವನ್ನು ಸಂಪನ್ನಗೊಳಿಸಲು ಸಹಕರಿಸಬೇಕಾದ ಚಾರಣ ನಾಯಕರು, ಮಾರ್ಗದರ್ಶಿಗಳು, ಸಹಾಯಕರು, ಅಡಿಗೆ ತಯಾರಿಸುವ ಸಿಬ್ಬಂದಿಗಳು ಎಲ್ಲರ ಪರಿಚಯ ಮಾಡಿಕೊಟ್ಟರು. ವಿಶೇಷವಾಗಿ ಈ ಚಾರಣದಲ್ಲಿ ಮಾರ್ಗದರ್ಶಿಗಳು, ಸಹಾಯಕರುಗಳ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು ಎಂಬುದು ನನಗೆ ಮೊದಲೆ ಅರಿವಿತ್ತು. ಹೇಗೆಂದರೆ ಚಾರಣಕ್ಕೆ ಬರುವ ಮೊದಲೇ ನಾನು ಅನೇಕ ವಿಡಿಯೋಗಳನ್ನು ನೋಡಿದ್ದಲ್ಲದೇ ಇಂಡಿಯಾ ಹೈಕ್ ಸಂಸ್ಥೆಯೊಡನೆ ಈಗಾಗಲೇ ಈ ಚಾರಣ ಮಾಡಿದವರ ಅನುಭವ ಕಥನಗಳನ್ನೂ ಓದಿಕೊಂಡಿದ್ದೆ. ಕತ್ತಲಿನ ರಾತ್ರಿಯಲ್ಲಿ ಒಂದೆರಡು ಸೋಲಾರ್ ದೀಪಗಳ ಸಹಾಯದಿಂದ ಹಾಗೂ ನಮ್ಮೊಡನೆ ತಂದಿದ್ದ ಹೆಡ್‌ಟಾರ್ಚ್‌ಗಳ ಸಹಾಯದಿಂದ ಊಟ ಮುಗಿಸಿ ನಮ್ಮ ಟೆಂಟಿನೊಳಗೆ ಹೋಗಿ ಸ್ಲೀಪಿಂಗ್‌ಬ್ಯಾಗ್‌ನೊಳಗೆ ತೂರಿಕೊಂಡು ಚೆನ್ನಾಗಿ ನಿದ್ರಿಸಿದೆವು.

ಎರಡನೇ ದಿನ – 30, ಮೇ 2015– ಜಿಸ್ಕುನ್ (7630ಅಡಿ)ದಿಂದ ಜಕಾ ಕ್ಯಾಂಪ್ (8755ಅಡಿ) – 4 ಕಿ.ಮೀ – 4 ಗಂಟೆ ಚಾರಣ

ಮುಂಜಾನೆ ಬೇಗನೆ ಎದ್ದು ಬೆಳಗಿನ ಉಪಾಹಾರ ನಂತರ ಜಕಾ ಕ್ಯಾಂಪ್‌ಕಡೆಗೆ

ನಮ್ಮ ಚಾರಣ ಪ್ರಾರಂಭಿಸಿದೆವು. ಹಿಂದಿನ ದಿನದ ಪರಸ್ಪರ ಪರಿಚಯದ ಸಂದರ್ಭದಲ್ಲಿ ನನ್ನ ಇಲ್ಲಿಯವರೆಗಿನ ಚಾರಣಗಳ ಬಗ್ಗೆ ಅರಿತ ಇತರ ಚಾರಣಿಗರು ನನ್ನ ಬಗ್ಗೆ ಬಹಳ ಅಭಿಮಾನ ಹಾಗೂ ಪ್ರೀತಿ ವ್ಯಕ್ತಪಡಿಸತೊಡಗಿದರು. ನಮ್ಮ ಗುಂಪಿನಲ್ಲಿ 21 ವರ್ಷದ ಕನ್ನಡಿಗನೊಬ್ಬನೂ ಇದ್ದು ಅವನು ನನಗೆ ಹತ್ತಿರವಾಗಿದ್ದನು. ಜಿಸ್ಕುನ್ ನಿಂದ ಹೊರಬರುವ ಮಾರ್ಗ ದೇವದಾರು ಹಾಗೂ ವಾಲ್‌ನಟ್ ಮರಗಳಿಂದ ಕೂಡಿದ್ದು ಇಳಿಜಾರಿನ ಹಾದಿಯಲ್ಲಿ ನಡೆದುಕೊಂಡು ಹೋಗಬೇಕಿತ್ತು. ಮೊದಲಿಗೆ ನಮಗೆ ಒಂದು ಹಳೆಯ ಮರದ ಸೇತುವೆ ಕಂಡುಬಂತು. ಅದು ಹಸಿರು ಎಲೆಗೊಂಚಲುಗಳಿಂದ ಮುಚ್ಚಿತ್ತು. ಇದರ ಪಕ್ಕದಲ್ಲೇ ಮತ್ತೊಂದು ಹೊಸ ಮರದ ಸೇತುವೆ ಮೂಲಕ ಬಂಡೆಯನ್ನು ಕತ್ತರಿಸಿ ಮಾಡಿದ್ದ ಮಾರ್ಗದಲ್ಲಿ ಮುನ್ನಡೆಯತೊಡಗಿದೆವು. ಇಲ್ಲಿಂದ ಮುಂದಿನ ಒಂದು ಗಂಟೆ ತೀವ್ರ ಏರುಮಾರ್ಗವಿದ್ದು ಇದು ಅತ್ಯಂತ ಪ್ರಶಸ್ತವಾದ ಮಾರ್ಗವೆಂದು ಮಾರ್ಗದರ್ಶಿ ನಮಗೆ ತಿಳಿಸಿದರು. ಮಾರ್ಗವು ನಮ್ಮನ್ನು ಮೋಡಿಮಾಡುವ ಮಿಶ್ರ ಅರಣ್ಯದ ಮೂಲಕ ಇರುವುದು ನನ್ನ ಗಮನಕ್ಕೆ ಬಂತು. ಸ್ವಲ್ಪ ಸಮಯದಲ್ಲೆ ಮಾರ್ಗ ಇಬ್ಭಾಗವಾಗಿದ್ದು ನಾವು ಬಲಭಾಗದ ಮಾರ್ಗ ಆಯ್ಕೆಮಾಡಿಕೊಳ್ಳಬೇಕೆಂದು ಮಾರ್ಗದರ್ಶಿ ತಿಳಿಸಿದರು. ಅದರಂತೆ ಸ್ವಲ್ಪದೂರ ಏರುಹಾದಿಯಲ್ಲಿ ನಡೆದು ಜಕಾದಲ್ಲಿನ ಒಂದು ಶಾಲೆಯ ಆವರಣ ಪ್ರವೇಶಿಸಿದೆವು. ಅಲ್ಲೇ ನಮ್ಮ ಅಂದಿನ ವಾಸ್ತವ್ಯ ಎಂದು ತಿಳಿದುಬಂತು.

ರಾತ್ರಿಯ ಊಟದ ನಂತರ ಚಾರಣ ನಾಯಕರು ನಮ್ಮ ನಾಳಿನ ಚಾರಣದ ಬಗ್ಗೆ ವಿವರಗಳನ್ನು ತಿಳಿಸಿಕೊಟ್ಟರು. ಅದರಂತೆ ಮಾರನೇ ದಿನ ನಾವು 7 ಕಿ.ಮೀ ದೂರ, 8790 ಅಡಿಯಿಂದ 10770 ಅಡಿಯ ಎತ್ತರ ತಲುಪಬೇಕಿದ್ದು ಒಟ್ಟು ಚಾರಣದ ಸಮಯ 6 ಗಂಟೆ ಇರುವುದು ಎಂದು ತಿಳಿದು ನಾನು ನಾಳಿನ ಚಾರಣವನ್ನು ನೆನೆಸಿಕೊಂಡು ಸುಖ ನಿದ್ರೆಗೆ ಜಾರಿದೆ.

ಮೂರನೇ ದಿನ – 31, ಮೇ 2015– ಜಕಾ (8790ಅಡಿ) – ಸರುವಾಸ್ ಥ್ಯಾಚ್ ಕ್ಯಾಂಪ್ (10770ಅಡಿ) – 7 ಕಿ.ಮೀ– 6 ಘಂಟೆ

ಇಂದಿನ ಚಾರಣ ಸವಾಲಿನಿಂದ ಕೂಡಿದ್ದು 1900ಅಡಿ ಎತ್ತರದವರೆಗೂ ಆರೋಹಣ ಮಾಡಬೇಕಿತ್ತು. ಇಂದಿನಿಂದ ನಮ್ಮ ನಿಜವಾದ ಚಾರಣ ಪ್ರಾರಂಭವಾಗುವುದು ಎಂದು ಚಾರಣ ನಾಯಕರು ನಮಗೆಲ್ಲರಿಗೂ ತಿಳಿಸಿ ಅದನ್ನು ನೀವೆಲ್ಲರೂ ಖಂಡಿತವಾಗಿ ಸಾಧಿಸಬಲ್ಲಿರಿ ಎಂದು ನಮ್ಮನ್ನು ಹುರಿದುಂಬಿಸಿದರು. ಇಂದಿನ ಚಾರಣದಲ್ಲಿ ನಾವು ಉತ್ತರಾಖಂಡ ರಾಜ್ಯದಿಂದ

ಹಿಮಾಚಲ ಪ್ರದೇಶವನ್ನು ಪ್ರವೇಶಿಸಲಿದ್ದೇವೆ ಎಂದು ಮಾರ್ಗದರ್ಶಿ ವಿವರಿಸಿದರು. ಮುಂಜಾನೆ ಉಪಹಾರದ ನಂತರ ಊಟದ ಬುತ್ತಿಯೊಡನೆ 8 ಗಂಟೆಗೆ ಚಾರಣ ಪ್ರಾರಂಭಿಸಿದೆವು. ನಾವೆಲ್ಲರೂ ನಿಧಾನವಾಗಿ ನಮ್ಮದೇ ಆದ ವೇಗದಲ್ಲಿ ಫರ್ ಮರಗಳಿಂದ ಕೂಡಿದ ಮಾರ್ಗದಲ್ಲಿ ಆರೋಹಣ ಮಾಡಲು ಮಾರ್ಗದರ್ಶಿ ತಿಳಿಸಿದರು.

ಆಟದ ಮೈದಾನ ದಾಟಿ ಮುನ್ನಡೆಯುತ್ತಿರುವಾಗ ಇದ್ದಕ್ಕಿದ್ದಂತೆ ಯಾರೋ ಬಾಗಿಲನ್ನು ತೆರೆದಂತೆ ಅನುಭವಕ್ಕೆ ಬಂದು ನೂರಾರು ವರ್ಷಗಳಷ್ಟು ಹಳೆಯದಾದ ಫರ್ ಮರಗಳಿಂದಾವೃತವಾದ ಕಾಡನ್ನು ಪ್ರವೇಶಿಸಿದೆವು. ಈ ಮರಗಳ ನಡುವೆ ಮೇಪಲ್ ಗಿಡಗಳು ಕಂಡುಬಂದವು. ನಮ್ಮ ಎದುರಿಗೆ ಮೇಲೆ 'V' ಆಕಾರದ ಕಣಿವೆ ಕಾಣಿಸುತ್ತಿತ್ತು. ಕಣಿವೆಯಲ್ಲಿ ಅಲ್ಲಲ್ಲಿ ಹಿಮದ ಹೆಕ್ಕೆಗಳು ಕಂಡುಬಂದವು. ಇಲ್ಲಿಂದ ಒಂದು ಗಂಟೆ ಇಳಿಜಾರಿನಲ್ಲಿ ನಡೆದ ನಂತರ ನಮಗೆ ಮತ್ತೊಂದು ಆಶ್ಚರ್ಯವು ಕಾದಿತ್ತು. ಅದೇನೆಂದರೆ ರೂಪಿನ್ ನದಿಗೆ ಅಡ್ಡಲಾಗಿ ಹಿಮದಿಂದಾವೃತವಾದ ಸೇತುವೆ ಎದುರಾಯಿತು. ಈ ರೀತಿಯ ಸೇತುವೆ ನಾನು ಇದುವರೆಗೂ ನೋಡೇ ಇರಲಿಲ್ಲ. ಇಲ್ಲಿಗೆ ಹೋಗುವ ಮೊದಲು ನಾವು ತಂಪು ಕನ್ನಡಕ (COOLING GLASS) ಧರಿಸಿಬೇಕಿತ್ತು. ಹಿಮ ನೆಲದ ಮೇಲೆ ನಡೆಯುತ್ತ ನಿಧಾನವಾಗಿ ಹಿಮ ಸೇತುವೆಯ ಮೇಲೆ ನಡೆದು ನದಿಯನ್ನು ದಾಟಿ ಮುಂದಿನ ಹಾದಿಯನ್ನು ತಲುಪಿದೆವು. ಇಲ್ಲಿಂದ ಮಾರ್ಗವು ಚಿಕ್ಕದಾಗಿದ್ದು ಬಹುತೇಕ ಕುರಿಗಾಹಿಗಳು ನಡೆದು ನಿರ್ಮಿಸಿದ್ದ ಮಾರ್ಗವಾಗಿತ್ತು. ಕೆಲವೇ ಕ್ಷಣದಲ್ಲಿ ವಾಲ್‌ನಟ್, ದಟ್ಟವಾದ ದೇವದಾರು ವೃಕ್ಷಗಳ ನೆರಳನ್ನು ಪ್ರವೇಶಿಸಿ ನಡೆಯತೊಡಗಿದೆವು. ಮಾರ್ಗ ತೀವ್ರ ಆರೋಹಣದಿಂದ ಕೂಡಿದ್ದು ನಡಿಗೆ ನಿಧಾನವಾಗತೊಡಗಿತು. ಎಲ್ಲರೂ ನಿಧಾನವಾಗಿ ಹತ್ತತೊಡಗಿದೆವು. ಹೀಗೆ ದಟ್ಟವಾದ ಕಾಡಿನೊಳಗೆ 2 ಗಂಟೆ ಚಾರಣ ಮಾಡಿ ನದಿಗೆ ಅಡ್ಡಲಾಗಿರುವ ಒಂದು ಮರದ ಸೇತುವೆ ಸಮೀಪಿಸಿದೆವು. ಅಷ್ಟರಲ್ಲಿ ಸಮಯ 10 ಗಂಟೆಯಾಗಿತ್ತು. ನಮ್ಮ ಮಾರ್ಗದರ್ಶಿ ನಮಗೆಲ್ಲರಿಗೂ ಇಲ್ಲಿ ಅರ್ಧ ಗಂಟೆ ವಿಶ್ರಾಂತಿ ಪಡೆಯಲು ಅನುಮತಿಸಿದರು. ನಾವು ನಮ್ಮೊಡನೆ ತಂದಿದ್ದ ಒಣ ಹಣ್ಣುಗಳಾದ ಖರ್ಜೂರ, ದ್ರಾಕ್ಷಿ, ಬದಾಮಿ, ಗೋಡಂಬಿಗಳನ್ನು ಪರಸ್ಪರ ಹಂಚಿಕೊಂಡು ತಿಂದು ನೀರನ್ನು ಕುಡಿದು ನಂತರ ಸೇತುವೆ ದಾಟಿದೆವು. ಸೇತುವೆಯ ಬಲಗಡೆಯ ಮೇಲ್ಭಾಗದಲ್ಲಿ ಹುಲ್ಲುಗಾವಲಿರುವುದನ್ನು ಗಮನಿಸಿದೆವು. ಈ ಪ್ರದೇಶವೇ ಉಡನ್ಕಲ್ ಎಂಬುದು. ಇಲ್ಲಿಗೆ ನಾವು ಬೇಗನೆ ತಲುಪಿರುವುದರಿಂದ ತಂಗುವುದು ಸೂಕ್ತವಲ್ಲವೆಂದು ಮಾರ್ಗದರ್ಶಿ ತಿಳಿಸಿ ಮುಂದುವರೆಯುವಂತೆ ಸೂಚಿಸಿದರು. ಇಲ್ಲಿಂದ ನಾವು ರೂಪಿನ್ ನದಿಯೊಡನೆ ನಡೆಯತೊಡಗಿದೆವು. ಇಲ್ಲಿಂದ ರೂಪಿನ್ ನದಿಯ

ನೀರು ನೀಲಿಬಣ್ಣವಾಗಿದ್ದು ಪರಿಶುದ್ಧವಾಗಿತ್ತು. ಇಲ್ಲಿಂದ ನದಿಯನ್ನು ಸೇರಿಕೊಳ್ಳುತ್ತಿರುವ ಸಣ್ಣ ಸಣ್ಣ ತೊರೆಗಳ ಮಧ್ಯೆ ದೊಡ್ಡ ಕಲ್ಲುಗಳ ಮೇಲೆ ನಡೆಯುತ್ತ ಒಂದೂವರೆ ಗಂಟೆಯ ನಂತರ ಮಾರ್ಗವು ಏರು ಹಾದಿಯಿಂದ ಕೂಡಿದ್ದು ಮುಂದೆ ಸಣ್ಣ ಹುಲ್ಲುಗಾವಲನ್ನು ಪ್ರವೇಶಿಸಿದೆವು. ಮಾರ್ಗದರ್ಶಿ ಈ ಸ್ಥಳವನ್ನು ಬುರಾನ್ಸ್ ಕಂಡಿ ಎಂದು ಕರೆಯುವರೆಂದು ತಿಳಿಸಿದರು. ಇಲ್ಲಿಂದ 10 ನಿಮಿಷಗಳ ಆರೋಹಣದ ನಂತರ ನಾವು ಸಮತಟ್ಟಾದ ಪ್ರದೇಶ ಪ್ರವೇಶಿಸಿದ ಕೂಡಲೇ ನಾವು ರೋಡೋಡೆಂಡ್ರಾನ್ ಸಣ್ಣ ಸಣ್ಣ ಗಿಡಗಳಿರುವ ವನಪ್ರದೇಶ ಪ್ರವೇಶಿಸಿ ಅಲ್ಲಿ ನಮ್ಮ ಸುತ್ತಲೂ ಬಿಳಿ, ಎಳೆಗೆಂಪು ಮತ್ತು ನೇರಳೆ ಬಣ್ಣದ ಸಣ್ಣ ಹೂವುಗಳು ಇರುವುದನ್ನು ಕಂಡು ಬೆರಗಾದೆವು. ಇಲ್ಲಿಂದ ಮತ್ತಷ್ಟು ದೂರ ನಡೆದ ನಂತರ ನಮಗೆ ಹಸಿರು ಜಮಖಾನೆಯಂತೆ ಕಾಣುವ ಒಂದು ಸಣ್ಣ ದ್ವೀಪವು ಗೋಚರಿಸಿತು. ಇಲ್ಲಿಂದ ನಮಗೆ ಮೊತ್ತಮೊದಲ ಬಾರಿಗೆ ದೂರದಲ್ಲಿ ಪ್ರಸಿದ್ಧವಾದ ರೂಪಿನ್ ಜಲಪಾತವು ಗೋಚರಿಸಿತು. U ಆಕಾರದ ಕಣಿವೆ ಹಾಗೂ ಅದರ ಮೇಲಿಂದ ಮೋಡಗಳ ಮಧ್ಯದಿಂದ ಉಕ್ಕಿ ಹೊರಬರುತ್ತಿರುವ ರೂಪಿನ್ ನದಿಯ ನೀರನ್ನು ನೋಡುತ್ತ ಆಶ್ಚರ್ಯಚಕಿತನಾದೆ. ಅದೇ ಸಮಯದಲ್ಲಿ ನಮ್ಮ ಕಣ್ಣಿಗೆ ನೇರವಾಗಿ ಕೆಳಗೆ ಧುಮುಕುತ್ತಿರುವ ನೀರು ಬಹಳ ಚಾರಣಿಗರಿಗೆ ಕಾಣಿಸುವುದೇ ಇಲ್ಲ. ಏಕೆಂದರೆ ಅವರ ದೃಷ್ಟಿಯು ಮೇಲ್ಗಡೆಯಿಂದ ಧುಮುಕುತ್ತಿರುವ ನೀರಿನ ಕಡೆಗೇ ಇರುವುದರಿಂದ. ಇಲ್ಲಿಂದ ನಮ್ಮ ಬಲಗಡೆಯಲ್ಲಿನ ಪರ್ವತದ ಬುಡದಲ್ಲಿರುವ ಹಿಮವನ್ನು ನೋಡುತ್ತ ಮುಂದುವರೆಯುತ್ತಿರುವಾಗ ಮಾರ್ಗದಲ್ಲಿ ಭೋಜಪತ್ರ ಮರಗಳು ಕಾಣಿಸಿತು. ಈ ಮರದ ತೊಗಟೆಯು ನಮ್ಮ ಕೈಗೇ ಸಿಗುವಂತಿದ್ದು ನಿಮಗಿಷ್ಟವಾದಲ್ಲಿ ಅದನ್ನು ತೆಗೆದುಕೊಂಡು ನೆನಪಿಗಾಗಿ ನಿಮ್ಮೊಂದಿಗೆ ಕೊಂಡೊಯ್ಯಿರಿ ಎಂದು ಮಾರ್ಗದರ್ಶಿ ಹೇಳಿದಾಗ ಕೆಲವರು ಹಾಗೇ ಮಾಡಿದರು. ರಾಮಾಯಣವನ್ನು ಈ ಭೋಜಪತ್ರ ಮರದ ತೊಗಟೆಯಲ್ಲಿಯೇ ಬರೆದರೆಂದು ಪುರಾಣದಲ್ಲಿ ಉಲ್ಲೇಖವಾಗಿದೆ ಎಂದು ಮಾರ್ಗದರ್ಶಿ ತಿಳಿಸಿದರು. ಸ್ವಲ್ಪ ದೂರದಲ್ಲೇ ಸಾರ್ವಾಸ್ ಥ್ಯಾಚ್ ಕ್ಯಾಂಪ್ ನಮಗೆದುರಾಯಿತು. ಇಲ್ಲಿ ನಮಗಾಗಿ ಟೆಂಟ್‌ಗಳನ್ನು ಸ್ಥಾಪಿಸಿದ್ದರು. ನಮ್ಮ ಚಹಾ ಸೇವನೆ ಸಮಯ ಸಮೀಪಿಸಿ ನಮಗೆಲ್ಲರಿಗೂ ಬಿಸಿ ಬಿಸಿ ಮ್ಯಾಗಿ ನೂಡಲ್ಸ್ ನೀಡಿದರು ನಂತರ ಚಹಾ ಸೇವನೆ ಮುಗಿಯಿತು. ರಾತ್ರೆ 8 ಗಂಟೆಗೆ ನಿತ್ಯದಂತೆ ಭೋಜನವಿತ್ತು. ಆದರೆ ಅದರಲ್ಲಿನ ವಿಶೇಷವೆಂದರೆ ಭೋಜನ ಪ್ರಾರಂಭಿಸುವ ಮೊದಲು ಚಾರಣ ನಾಯಕರು ಒಂದು ದೊಡ್ಡ ಕೇಕನ್ನು ತಂದು ಎಲ್ಲರ ಮುಂದೆ ಒಂದು ಟೀಪಾಯಿಯ ಮೇಲಿಟ್ಟು ಎಲ್ಲರಿಗೂ ಅಚ್ಚರಿಯಾಗುವಂತೆ ನಮ್ಮ ಚಾರಣಿಗರಲ್ಲಿ ಒಬ್ಬರ ಜನ್ಮದಿನವನ್ನು ಅವರಿಂದ ಕೇಕ್ ಕಟ್ ಮಾಡಿಸುವುದರ

ಮೂಲಕ ಎಲ್ಲರೂ ಅಚರಿಸುವಂತೆ ಮಾಡಿದರು. ಈ ಕೆಲಸ ಬರ್ತ್ ಡೇ ಬಾಯ್, ಹಾಗೂ ಎಲ್ಲ ಚಾರಣಿಗರಿಗೂ ಅಚ್ಚರಿ ಹಾಗೂ ಸಂತಸವನ್ನುಂಟು ಮಾಡಿತು. ಎಲ್ಲರೂ ಒಟ್ಟಾಗಿ ಸೇರಿ ಹುಟ್ಟು ಹಬ್ಬದ ಶುಭಾಶಯ ತಿಳಿಸಿದೆವು. ನಂತರ ಊಟ ಮುಗಿಸಿ ಎಲ್ಲರೂ ರಾತ್ರಿ 9.30ಕ್ಕೆ ನಿದ್ರಿಸಿದೆವು.

ನಾಲ್ಕನೇ ದಿನ – 1, ಜೂನ್ 2015– ಸಾರುವಾಸ್ ಥ್ಯಾಚ್ (10770ಅಡಿ) – ಧಾಂಡೇರಾಸ್ ಥ್ಯಾಚ್ (ಲೋಯರ್ ವಾಟರ್ ಫಾಲ್ಸ್) (11700ಅಡಿ) – 3 ಗಂಟೆ – 4 ಕಿ.ಮೀ

ಇಂದು ಮುಂಜಾನೆ ಉಪಾಹಾರದ ನಂತರ ನಾವು ನೆನ್ನೆಯ ಹಾಗೆ ಮತ್ತೊಂದು ರೋಚಕ ಚಾರಣ ಮಾಡಲಿದ್ದೇವೆ ಎಂದು ಚಾರಣ ನಾಯಕರು ನಮಗೆ ವಿವರಿಸಿದರು. ಈ ಮಾತುಗಳನ್ನು ಕೇಳಿ ನಾವೆಲ್ಲರೂ ಉತ್ಸಾಹದಿಂದ ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದೆವು. ಇಂದಿನ ಚಾರಣದಲ್ಲಿ ನಾವುಗಳು ಸುಮಾರು 1000 ಅಡಿಗಳಷ್ಟು ಎತ್ತರವನ್ನು ಏರಬೇಕಿದೆ. ಆದರೆ ಒಮ್ಮೆಲೆ ಇಷ್ಟು ಎತ್ತರ ಏರಬೇಕಾದ ಸಂದರ್ಭ ಬರಲಿಲ್ಲ. ಬದಲಿಗೆ ಆರೋಹಣವು ನಿಧಾನವಾಗಿದ್ದು ನಮಗೆ ಹೆಚ್ಚಿನ ಆಯಾಸವುಂಟಾಗಲಿಲ್ಲ. 'U' ಆಕಾರದ ಕಣಿವೆಯ ಮುಂಭಾಗದಿಂದ ಸಾವಿರಾರು ಜಲಪಾತಗಳು ಹರಿದುಬಂದು ರೂಪಿನ್ ನದಿ ಸೇರುತ್ತಿರುವುದನ್ನು ಎಲ್ಲರೂ ವೀಕ್ಷಿಸಿದೆವು. ಇದರ ಎದುರಿನಲ್ಲಿ ಸಾವಿರಾರು ಹಳದಿ ಬಣ್ಣದ ಮಾರಿಗೋಲ್ಡ್ ಹೂವುಗಳಿಂದ ಕೂಡಿದ ಹುಲ್ಲುಗಾವಲನ್ನು ನೋಡುವ ಅದೃಷ್ಟ ನಮ್ಮದಾಯಿತು. ಈಗ ನಾವು ಈ ಹಳದಿ ಹೂವುಗಳ ಕಣಿವೆಯೆಡೆಗೆ ನಡೆಯತೊಡಗಿದೆವು. ಮಾರ್ಗದಲ್ಲಿ ನಮಗೆದುರಾದ ಹಿಮದ ಸೇತುವೆ ಎಚ್ಚರಿಕೆಯಿಂದ ದಾಟಿ ರೂಪಿನ್ ನದಿಯ ಎಡದಂಡೆ ಪ್ರವೇಶಿಸಿದೆವು. ಮುಂದೆ ನೀಲಿ, ನೇರಳೆ, ಹಸಿರು, ಹಳದಿ ಬಿಳಿ ಬಣ್ಣದ ಕಾಡು ಹೂವುಗಳಿನ ಪ್ರದೇಶ ತಲುಪಿದೆವು. ಇಲ್ಲಿಂದ ನದಿಯ ದಡದಲ್ಲೇ ನಡೆದು ದೊಡ್ಡ ಹಿಮ ಸೇತುವೆ ಎಚ್ಚರಿಕೆಯಿಂದ ದಾಟಿ ಕೆಳಗಿಳಿದು ತಳವನ್ನು ತಲುಪಿದೆವು. ಇಲ್ಲಿನ ವಿಶಾಲವಾದ ಹುಲ್ಲುಗಾವಲು ನಮ್ಮನ್ನು ಅಲ್ಲೇ ಅಂದಿನ ರಾತ್ರಿ ವಾಸ್ತವ್ಯಮಾಡುವಂತೆ ಕರೆಯುತ್ತಿರುವುದೇನೋ ಎಂದು ಭಾಸವಾಯಿತು. ಅದು ನಿಜವೆಂಬಂತೆ ಅಲ್ಲಿ ನಮಗೆ ಟೆಂಟುಗಳು ಕಂಡುಬಂದವು. ಮಾರ್ಗದರ್ಶಿ ಈ ಪ್ರದೇಶವನ್ನೇ ಧಾಂಡೇರಾಸ್ ಥ್ಯಾಚ್ ಎಂದು ತಿಳಿಸಿದರು. ಈ ಪ್ರದೇಶದಲ್ಲಿನ ಉಸಿರುಗಟ್ಟಿಸುವ ಸೌಂದರ್ಯದಿಂದ ಕೂಡಿದ ದೃಶ್ಯ ಹಾಗೂ ಇಲ್ಲಿನ ಹಸಿರು ಹುಲ್ಲುಗಾವಲು ಹಿಮಾಲಯದಲ್ಲಿನ ಅತ್ಯಂತ ವಿಶಾಲವಾದದ್ದೆಂದು ಪ್ರಸಿದ್ಧಿ ಪಡೆದಿದೆ. ಎಷ್ಟು

ಸುಂದರವಾದ ಸ್ಥಳದಲ್ಲಿ ಸ್ಥಾಪಿಸಿದ್ದಾರೆಂದರೆ ಇದುವರೆಗೂ ಇಂತಹ ಕ್ಯಾಂಪನ್ನು ಕಂಡೇ ಇರಲಿಲ್ಲ. ಸಾಯಂಕಾಲವಾಗುತ್ತಿದ್ದಂತೆ ಇಲ್ಲಿನ ವಾತಾವರಣವು –5°C ಗಳಷ್ಟು ಇಳಿದು ನಮಗೆ ಟೆಂಟಿನಿಂದ ಹೊರಬರುವುದೇ ಅಸಾಧ್ಯವಾಗತೊಡಗಿತು. ಹಾಗಾಗಿ ನಾವುಗಳೆಲ್ಲರೂ ಕೇವಲ ರಾತ್ರಿ ಊಟದ ಸಮಯದಲ್ಲಿ ಮಾತ್ರ ಹೊರಬಂದು ನಂತರ ನಿದ್ರಾಚೀಲದೊಳಗೆ ತೂರಿಕೊಂಡು ನಿದ್ರಿಸಿದೆವು.

ಐದನೇ ದಿನ – 2, ಜೂನ್ 2015– ಧಾಂಡೇರಾಸ್ ಥಾಚ್ (ಲೋವರ್ ಜಲಪಾತ) (11700ಅಡಿ) – ಅಪ್ಪರ್ ಜಲಪಾತ (13275ಅಡಿ) – 3 ಗಂಟೆ – 2.5 ಕಿ.ಮೀ

ಇಂದಿನ ಚಾರಣ 1600 ಅಡಿ ಎತ್ತರ ಹತ್ತುವುದಾದರೂ ಹಿಮದಿಂದ ಕೂಡಿದ ಮಾರ್ಗದಲ್ಲಿ ಇದು ಬಹಳ ಅಪಾಯದ್ದು. ನಮ್ಮ ಚಾರಣ ಬೇಸಿಗೆ ಸಂದರ್ಭದಲ್ಲಾದ್ದರಿಂದ ಮಾರ್ಗದರ್ಶಿಯ ಪ್ರಕಾರ ನಾವು ಜಲಪಾತವನ್ನು ಗಟ್ಟಿಯಾದ ಹಿಮಸೇತುವೆಯ ಮೂಲಕ ದಾಟಬೇಕಿರುವುದು ಎಂದು ತಿಳಿಸಿದರು.

ಇಂದಿನ ಚಾರಣ ಅತ್ಯಂತ ಮಹತ್ವದ್ದಾಗಿದ್ದು ಇದನ್ನು ಮುಗಿಸಿದಾಗ ನಮಗೆ ನಾಳೆಯ ಚಾರಣ ಪರೀಕ್ಷೆ ಎದುರಿಸಿ ಪಾಸಾಗಲು ಆತ್ಮಸ್ಥೈರ್ಯ ತಂದು ಕೊಡುವುದು ಹಾಗೂ ಎತ್ತರದ ಹವಾಮಾನಕ್ಕೆ ಶರೀರವು ಹೊಂದಿಕೊಳ್ಳಲು ಸಹಾಯವಾಗುವುದು. ಮಾರ್ಗದರ್ಶಿ ನಮ್ಮ ಇಂದಿನ ಚಾರಣ 9.30ರ ನಂತರ ಪ್ರಾರಂಭಿಸಲು ಸೂಚಿಸಿದ್ದರು. ಅದರಂತೆ ನಾವು ಮುಂಜಾನೆ ಉಪಾಹಾರ ಮುಗಿಸಿ 9.30ಕ್ಕೆ ಎಲ್ಲರೂ ಸಾಲಾಗಿ ಬ್ಯಾಕ್‌ಪ್ಯಾಕ್ ಹಾಗೂ ಟ್ರೆಕ್ಕಿಂಗ್‌ಪೋಲ್‌ಗಳೊಂದಿಗೆ ನಿಂತಿದ್ದೆವು. ಎಲ್ಲರ ಹತ್ತಿರ ಬಂದು ಚಾರಣ ಮಾರ್ಗದರ್ಶಿ ಅವರ ಭುಜಗಳನ್ನು ಆತ್ಮೀಯವಾಗಿ ಒತ್ತಿಹಿಡಿದು ನೀವು ಖಂಡಿತ ಈ ಚಾರಣ ಮುಗಿಸಿವಿರೆಂದು ಸಕಾರಾತ್ಮಕವಾಗಿ ಹೇಳಿದರು. ನಂತರ ಎಲ್ಲರೂ ಒಬ್ಬರ ಹಿಂದೆ ಒಬ್ಬರಂತೆ ನಿಧಾನವಾಗಿ ಹೆಪ್ಪುಗಟ್ಟಿದ್ದ ಹಿಮನದಿಯ ಎದುರು ಭಾಗದಲ್ಲಿ ಹತ್ತತೊಡಗಿದೆವು. ಪ್ರತಿ 5 ಚಾರಣಿಗರಿಗೆ ಒಬ್ಬರಂತೆ ಮಾರ್ಗದರ್ಶಿಗಳು ಜೊತೆ ಜೊತೆಗೇ ಬರತೊಡಗಿದ್ದು ಎಂತಹ ಅಪಾಯವನ್ನೂ ಎದುರಿಸುವ ಸ್ಥೈರ್ಯ ತುಂಬತೊಡಗಿದ್ದರು ಹಾಗೂ ಚಾರಣಿಗರಿಗೂ ತಮ್ಮೊಡನೆ ನುರಿತ ಮಾರ್ಗದರ್ಶಿ ಇರುವುದು ಹೆಚ್ಚಿನ ಧೈರ್ಯ ತುಂಬಿತು. ನಮ್ಮ ಕ್ಯಾಂಪ್‌ನಿಂದ ಜಲಪಾತದ ಬುಡ ತಲುಪಲು ಒಂದು ಕಿ.ಮೀ ಚಾರಣ ಮಾಡಿದೆವು. ಮಾರ್ಗದಲ್ಲಿ ಅನೇಕ ನೀರಿನ ತೊರೆಗಳು ಎದುರಾಗಿ ಅವುಗಳನ್ನು ದಾಟಿ ಮುಂದೆ ಹೋಗತೊಡಗಿದೆವು. ಇದರೊಂದಿಗೆ ಹಳದಿ ಬಣ್ಣದ ಹೂವುಗಳ ನೋಟಗಳು ನಮ್ಮ ಮನಸ್ಸಿಗೆ ಮುದವನ್ನುಂಟು ಮಾಡುತ್ತಿದ್ದವು. ಜಲಪಾತದ ಬುಡದಲ್ಲಿ ಹಿಮದ ಭಾಗ ತಲುಪಿದಾಗ ನಮ್ಮ ಚಾರಣ

ಕಠಿಣವಾಗತೊಡಗಿತು. ಹಿಮವಿರುವ ಜಾಗದಲ್ಲಿ ನಮ್ಮ ಕಾಲನ್ನು ಊರದೇ ಅದರಿಂದ ದೂರದಲ್ಲಿ ಹೆಜ್ಜೆಯನ್ನು ಇಡುತ್ತ ಜಲಪಾತದ ವಿರುದ್ಧ ದಿಕ್ಕಿನಲ್ಲಿ ದಪ್ಪ ದಪ್ಪ ಕಲ್ಲುಗಳಿಂದ ಕೂಡಿದ ಮಾರ್ಗದಲ್ಲಿ ಹತ್ತತೊಡಗಿದೆವು. ಹೀಗೆ ಅರ್ಧ ಗಂಟೆ ಹತ್ತಿದ ಮೇಲೆ ನಮ್ಮ ಮಾರ್ಗವು ಎಡಕ್ಕೆ ತಿರುಗಿ ಹೆಪ್ಪುಗಟ್ಟಿದ ಜಲಪಾತದ ಆಚೆಯ ದಡದೆಡೆಗೆ ಹೋಗುತ್ತಿತ್ತು. ಅಂದರೆ ನಾವು ತೀವ್ರವಾಗಿ ಜಾರುತ್ತಿರುವ ಹೆಪ್ಪುಗಟ್ಟಿದ ಜಲಪಾತ ದಾಟಿ ಆಚೆ ಕಡೆಗೆ ಹೋಗಬೇಕಿತ್ತು. ನಮ್ಮ ನಡಿಗೆಗೆ ಸಹಾಯವಾಗಲು ಮಾರ್ಗದರ್ಶಿಗಳು ತಮ್ಮಲ್ಲಿದ್ದ ಹಿಮಗೊಡಲಿಗಳಿಂದ ದಾಟುವ ಮಾರ್ಗದಲ್ಲಿ ಮೆಟ್ಟಿಲನ್ನು ಮಾಡಿದ್ದರು. ಆದರೂ ನಾವು ದಾಟಲು ಟ್ರೆಕ್ಕಿಂಗ್‌ಪೋಲ್‌ಗಳ ಸಹಾಯ ಪಡೆದೇ ದಾಟಬೇಕಿತ್ತು. ನನ್ನಂತಹ ಹಿರಿಯ ಚಾರಣಿಗರನ್ನು ಮಾರ್ಗದರ್ಶಿಗಳು ಟ್ರೆಕ್ಕಿಂಗ್ ಪೋಲ್‌ನೊಂದಿಗೆ ನಮ್ಮ ಮತ್ತೊಂದು ಕೈಯನ್ನು ಹಿಡಿದು ದಾಟಿಸಿದರು. ಈ ಸಹಾಯಕ್ಕೆ ನಾನು ಅವರಿಗೆ ಕೃತಜ್ಞತೆಯನ್ನು ಅರ್ಪಿಸಿದೆ. ಇದಾದ ನಂತರ ನಾವು ಜಲಪಾತದ ಮಧ್ಯಭಾಗ ತಲುಪಿದ್ದೆವು. ಹೀಗೆ ನಾವು ನಮ್ಮ ಹತ್ತುವ ಕಾರ್ಯ ಮುಂದುವರೆಸುತ್ತ ಅಲ್ಲಲ್ಲಿ ಬಿದ್ದಿರುವ ಹಿಮಾವೃತವಾದ ಹೆಕ್ಕೆಗಳನ್ನು ಎಚ್ಚರಿಕೆಯಿಂದ ದಾಟುತ್ತ ರೂಪಿನ್ ನದಿಯ ಮೇಲಿನ ದೊಡ್ಡ ಹಿಮಸೇತುವೆ ಸಮೀಪಿಸಿದೆವು. ಈ ಸೇತುವೆ ಅರ್ಧದವರೆಗೂ ದಾಟಿ ಅಲ್ಲಿಂದ ಮೇಲಿನ ಜಲಪಾತ ನೋಡುವುದು ಅತ್ಯಂತ ರೋಮಾಂಚಕಾರಿ ಅನುಭವವಾಯಿತು ಹಾಗೂ ಕಾಲ್ಕೆಳಗೇ ರೂಪಿನ್ ನದಿ ಸೇತುವೆಯು ಮಾಯವಾದಂತೆ ಕಂಡಿತು. ಈ ಸ್ಥಳದಲ್ಲಿ ನಾವು ಜಲಪಾತದ ಮಧ್ಯಭಾಗದಲ್ಲಿದ್ದೆವು ಎಂದು ಮಾರ್ಗದರ್ಶಿ ನನಗೆ ತಿಳಿಸಿದರು. ಹಿಮ ಸೇತುವೆ ದಾಟಿ ಮತ್ತೊಂದು ಕಡೆ ಹೋದಮೇಲೆ ಮಾರ್ಗವು ತೀವ್ರ ಆರೋಹಣದಿಂದ ಕೂಡಿದ್ದು ಪ್ರಕೃತಿ ನಮಗೆ ಮತ್ತೊಂದು ಪರೀಕ್ಷೆಯನ್ನೊಡ್ಡಿತ್ತು. ಇದು ಒಂದು ಗೋಡೆಯ ಅಂಚನ್ನು ಹತ್ತುವ ರೀತಿಯಲ್ಲಿದ್ದು ಅದನ್ನು ಅತಿ ಎಚ್ಚರದಿಂದ ಮಾರ್ಗದರ್ಶಿಯ ಸಹಾಯದಿಂದ ಹತ್ತಿ ಜಲಪಾತದ ತುತ್ತತುದಿಯನ್ನು ತಲುಪಿದೆವು. ಅಷ್ಟರಲ್ಲಾಗಲೇ ಬಹುತೇಕ ಚಾರಣಿಗರು ಅಲ್ಲಿಗೆ ಬಂದಿದ್ದು ಮೊದಲಬಾರಿ ಹಿಮಚಾರಣ ಮಾಡುತ್ತಿರುವ ಇಬ್ಬರು ಚಾರಣಿಗರು ಇನ್ನೂ ಹತ್ತುತ್ತಿದ್ದರು. ಜಲಪಾತದ ಮೇಲ್ಭಾಗದಲ್ಲಿ ನಾವು ನಿರೀಕ್ಷಿಸಿದ್ದಕ್ಕೆ ವಿರುದ್ಧವಾಗಿ ವಿಶಾಲವಾದ ಹುಲ್ಲುಗಾವಲಿದ್ದು ನಮಗೆಲ್ಲರಿಗೂ ಅಚ್ಚರಿಯನ್ನುಂಟುಮಾಡಿತು. ಈ ಹುಲ್ಲುಗಾವಲು ಕೊನೆಗೆ ಒಂದು ತಟ್ಟೆಯಾಕಾರದ ಭೂಮಿಯಲ್ಲಿ ಒಂದಾಗಿ ಆ ತಟ್ಟೆಯಾಕಾರದ ಭಾಗದಲ್ಲಿ ಪರ್ವತದ ಮೇಲಿನ ಹಿಮನದಿ ಕರಗಿ ನೀರಾಗಿ ಹರಿದು ಅಲ್ಲಿಂದ ಜಲಪಾತದಂತೆ ಕೆಳಗೆ ಧುಮ್ಮಿಕ್ಕುವ ಮೂಲಕ ರೂಪಿನ್ ನದಿಯ ಜನನ ಎಂದು ಮಾರ್ಗದರ್ಶಿ ತಿಳಿಸಿದರು. ಜಲಪಾತದ ಮೂತಿಯಿಂದ ಇಳಿದು ಒಂದು ತುದಿಯಲ್ಲಿ ನಾವೆಲ್ಲರೂ ಕುಳಿತೆವು. ಇಲ್ಲಿಂದ ನಮ್ಮ ಕಾಲ್ಗಳನ್ನು

ಇಳಿಬಿಟ್ಟುಕೊಂಡು ಆಗ ತಾನೇ ಜನಿಸಿದ ರೂಪಿನ್ ನದಿ ಜಲಪಾತದ ಮೂಲಕ ಧುಮ್ಮಿಕ್ಕುತ್ತಿರುವುದನ್ನು ಕಣ್ಣು ಬಾಯ್ಗಳನ್ನು ಬಿಟ್ಟುಕೊಂಡು ಅಶ್ಚರ್ಯಚಕಿತರಾಗಿ ನೋಡತೊಡಗಿದೆವು. ಈ ಪ್ರದೇಶವೇ ಜಲಪಾತದ ಪ್ರಾರಂಭದ ಮಾರ್ಗ ಹಾಗೂ ಇದನ್ನೇ ನಾವು ಎಂದು ನೋಡುವೆವೋ ಎಂದು ಎರಡು ದಿನಗಳಿಂದ ಹಂಬಲಿಸುತ್ತಿದ್ದೆವು. ಇಲ್ಲಿಂದ ಸ್ವಲ್ಪ ದೂರದಲ್ಲೇ ನಮ್ಮ ಟೆಂಟ್‌ಗಳನ್ನು ನಿರ್ಮಿಸಿದ್ದರು. ಅರ್ಧ ಗಂಟೆಯ ಅದ್ಭುತ ಪ್ರಕೃತಿ ಸೌಂದರ್ಯವನ್ನು ಕಣ್ಮನ ತುಂಬಿಕೊಂಡು ನಾವೆಲ್ಲರೂ ಟೆಂಟಿನೆಡೆಗೆ ನಡೆದೆವು.

ಆರನೇ ದಿನ – 3, ಜೂನ್ 2015– ವಿಶ್ರಾಂತಿಯ ದಿನ

ಇಂದು ನಮ್ಮ ಚಾರಣದ ಕಾರ್ಯಕ್ರಮದಲ್ಲಿ ವಿಶ್ರಾಂತಿಯ ದಿನವಾಗಿತ್ತು. ಹಾಗಾಗಿ ನಾವುಗಳೆಲ್ಲರೂ ನಿಧಾನವಾಗಿ 8 ಗಂಟೆಯ ನಂತರ ಎದ್ದು ಹೊರಗಿಣುಕಿ ನೋಡಿದರೆ ಎಲ್ಲೆಲ್ಲೂ ಹಿಮದಿಂದ ಕೂಡಿದ ದೃಶ್ಯಗಳೆ ಕಂಡುಬಂದವು. ಹೊರಬರಬೇಕಾದರೆ ನಾವು ನಮ್ಮ ಟ್ರೆಕ್ಕಿಂಗ್ ಶೂಗಳು, ಕೈಗವಸುಗಳನ್ನು ಧರಿಸಿ ಟ್ರೆಕ್ಕಿಂಗ್ ಪೋಲ್ಲೊಂದಿಗೆ ಮಾತ್ರ ಹೊರಬರಬೇಕಿತ್ತು. ಹಾಗಾಗಿ ನಾವೆಲ್ಲರೂ ಮತ್ತೊಂದು ಗಂಟೆ ಟೆಂಟಿನೊಳಗೆ ಮಾತನಾಡುತ್ತ ಸಮಯ ಕಳೆದೆವು. 9.30 ಕ್ಕೆ ನಮಗೆ ಬೆಳಗಿನ ಉಪಹಾರಕ್ಕೆ ಕರೆ ಬಂತು. ಆಗ ವಿಧಿಯಿಲ್ಲದೇ ನಾವೆಲ್ಲರೂ ಶೂಗಳನ್ನು ಧರಿಸಿ ನಮ್ಮ ನಮ್ಮ ಉಪಾಹಾರದ ತಟ್ಟೆ ಲೋಟ ಹಿಡಿದೇ ಹೊರಬಂದೆವು. ನಂತರ ನಿಧಾನವಾಗಿ ಬಿಸಿಲು ಕಾಣಿಸಿಕೊಳ್ಳತೊಡಗಿತು. ಆಗ ಸುತ್ತಲಿನ ಪ್ರಕೃತಿ ಸೌಂದರ್ಯವು ನಮ್ಮ ಮನಸ್ಸನ್ನು ಸೂರೆಗೊಂಡಿತು. ಒಂದೆಡೆ ಜಲಪಾತ ಹಾಗೂ ಸುತ್ತಲೂ ಪರ್ವತಗಳು ನೋಡುತ್ತ ಇದ್ದರೆ ಕಣ್ಣುಗಳನ್ನು ಬೇರೆಡೆಗೆ ತಿರುಗಿಸಲೂ ಅಗುವುದಿಲ್ಲ. ನಾನು ನನ್ನ ಬೈನಾಕ್ಯುಲರ್ ಮೂಲಕ ಜಲಪಾತ ಹಾಗೂ ಪರ್ವತಗಳನ್ನು ಹತ್ತಿರದಿಂದಲೇ ಸ್ಪಷ್ಟವಾಗಿ ನೋಡಿ ಇತರರಿಗೂ ಅದನ್ನು ತೋರಿಸಿ ಸಂತಸ ಹಂಚಿಕೊಂಡೆ. ಮಧ್ಯಾಹ್ನದ ಊಟದ ನಂತರ ಸ್ವಲ್ಪಹೊತ್ತು ನಿದ್ರಿಸಿ ನಂತರ ಎಲ್ಲರೂ ಮಾರ್ಗದರ್ಶಿಯ ಕರೆಯ ಮೇರೆಗೆ ಹೊರಬಂದೆವು. ಅವರು ನಮಗೆ ಮುಂದಿನ ಚಾರಣದ ವಿವರಗಳನ್ನು ತಿಳಿಸಿ ಕಡೆಯ ದಿನದ ಪಾಸ್ ದಾಟುವ ಚಾರಣದ ಬಗ್ಗೆ ಎಚ್ಚರಿಕೆಯ ವಿಷಯಗಳನ್ನು ನಿಧಾನವಾಗಿ ವಿವರಿಸಿದರು. ನಮ್ಮಲ್ಲಿ ಕೆಲವರು ಕೆಲವು ಸಂದೇಹಗಳನ್ನು ಪರಿಹರಿಸಿಕೊಂಡರು. ರಾತ್ರಿ ಊಟದ ನಂತರ ಎಲ್ಲರೂ ನಮ್ಮ ನಮ್ಮ ಟೆಂಟ್‌ಗಳಲ್ಲಿ ಚೆನ್ನಾಗಿ ನಿದ್ರಿಸಿದೆವು.

ಏಳನೇ ದಿನ - 5, ಜೂನ್ 2015 - ಅಪ್ಪರ್ ವಾಟರ್ ಫಾಲ್ಸ್ ಕ್ಯಾಂಪ್(13385ಅಡಿ)ನಿಂದ ರಾಟಿ ಫೇರಿ ಮುಖಾಂತರ ರೂಪಿನ್ ಪಾಸ್ (15279ಅಡಿ) ಅಲ್ಲಿಂದ ರೋಂಟಿಘಡ್(13139ಅಡಿ) - 10-11 ಗಂಟೆ

ಇಂದು ನಾವು 1844 ಅಡಿಯಷ್ಟು ಹಿಮಮಾರ್ಗದಲ್ಲಿ ತೀವ್ರ ಆರೋಹಣ ಮಾಡಿ ರೂಪಿನ ಪಾಸ್ ದಾಟಿ ಅಲ್ಲಿಂದ 2140 ಅಡಿಯಷ್ಟು ತೀವ್ರ ಅವರೋಹಣವನ್ನು ಮಂಡಿಮುಚ್ಚುವಷ್ಟು ಹಿಮದ ಹಾದಿಯಲ್ಲಿ ಚಾರಣ ಮಾಡಬೇಕಿತ್ತು. ಇಂದು ನಮ್ಮೆಲ್ಲರ ಆತ್ಮಸ್ಥೈರ್ಯವನ್ನು ಪರೀಕ್ಷಿಸುವ ಸಮಯವಾಗಿತ್ತು. ಮುಂಜಾನೆ ಎದ್ದ ಕೂಡಲೇ ಮಾರ್ಗದರ್ಶಿ ಎಲ್ಲರ ಬಿ.ಪಿ ಹಾಗೂ ಆಮ್ಲಜನಕ ಲೆವೆಲ್ ಪರೀಕ್ಷಿಸಿ ಎಲ್ಲರೂ ಚಾರಣ ಮಾಡಬಲ್ಲರೆಂದು ಖಾತರಿಪಡಿಸಿಕೊಂಡರು.

ರೂಪಿನ್ ಪಾಸ್‌ಕಡೆಗೆ ತೀವ್ರ ಆರೋಹಣ ನಂತರ ತೀವ್ರ ಅವರೋಹಣದಿಂದ ಕೂಡಿದ 11 ಗಂಟೆಯ ಇಂದಿನ ಚಾರಣವು ಅತ್ಯಂತ ಕಠಿಣವಾಗಿದ್ದು ಹೃದಯಬಡಿತವನ್ನು ಹೆಚ್ಚಿಸುವುದಾಗಿತ್ತು. ಅಲ್ಲದೇ ಈ ದಿನದ ಚಾರಣವು ಅತ್ಯಂತ ಸಾಹಸಮಯವಾಗಿದ್ದು ಈ ಅನುಭವವು ನಮ್ಮ ಮನದಲ್ಲಿ ಹಚ್ಚ ಹಸಿರಾಗಿ ಬಹಳ ಕಾಲ ನೆಲೆಸಿರುವುದರಲ್ಲಿ ಯಾರಿಗೂ ಸಂಶಯವಿರಲಿಲ್ಲ. ನಾನು ಈ ಚಾರಣದ ಅನುಭವಗಳನ್ನು 9 ವರ್ಷದ ನಂತರವೂ ಈ ಲೇಖನದ ಮೂಲಕ ಓದುಗರಿಗೆ ಅರ್ಪಿಸುತ್ತಿರುವುದೇ ಇದಕ್ಕೆ ಸಾಕ್ಷಿ.

ಮಾರ್ಗದರ್ಶಿ ಸೂಚನೆ ಮೇರೆಗೆ ನಾವು ಇಂದಿನ ಚಾರಣವನ್ನು ಮುಂಜಾನೆ 4.30ಕ್ಕೆ ಉಪಾಹಾರದ ಬುತ್ತಿಯೊಂದಿಗೆ ಪ್ರಾರಂಭಿಸಿದೆವು. ರಾಟಿಫೇರಿಯೆಡೆಗಿನ ಮಾರ್ಗವು ಹುಲ್ಲುಗಾವಲಿನ ಎಡಭಾಗದಿಂದ ಪ್ರಾರಂಭವಾಗಿ ಹಿಮದ ಹೆಕ್ಕೆಗಳಿಂದ ಕೂಡಿದ ತೀವ್ರ ಆರೋಹಣದಿಂದ ಕೂಡಿದ್ದು ತುಂಬಾ ಮೈಲುಗಳನ್ನೇ ದಾಟಬೇಕೆನಿಸುತ್ತಿತ್ತು. ಒಂದು ಗಂಟೆಯ ಆರೋಹಣದ ನಂತರ ನಮ್ಮ ಹಾದಿ ಎಡಕ್ಕೆ ತಿರುಗಿ ದಿಬ್ಬದ ಭುಜದ ಭಾಗವನ್ನು ಬಳಸಿ ರಾಟಿಫೇರಿ ಕ್ಯಾಂಪಿನ ಮೈದಾನದೆಡೆಗೆ ನಮ್ಮನ್ನು ಕೊಂಡೊಯ್ಯುತ್ತಿತ್ತು. ಇಲ್ಲಿ ಅರ್ಧಗಂಟೆ ವಿಶ್ರಾಂತಿ ಪಡೆದು ನೀರು ಕುಡಿದು ಬದಲಾದ ಪ್ರಕೃತಿಯ ಸೌಂದರ್ಯವನ್ನು ಅಶ್ಚರ್ಯದಿಂದ ನೋಡತೊಡಗಿದೆವು. ನಂತರ ನಿಧಾನವಾಗಿ ನಮ್ಮ ಸಾಹಸವನ್ನು ಮುಂದುವರೆಸಿದೆವು. ಕಳೆದ ಅರು ದಿನಗಳಿಂದ ನಮ್ಮನ್ನೇ ನೋಡುತ್ತಿದ್ದ ರೂಪಿನ್ ಕಣಿವೆ ಈಗ ನಮ್ಮ ಕಣ್ಣಿಂದ ಮರೆಯಾಗಿತ್ತು, ಬದಲಿಗೆ ಕಣಿವೆಯುದ್ದಕ್ಕೂ ಹಸಿರಾದ ಧೌಲಾಧರ ಪರ್ವತ ಶ್ರೇಣಿಗಳು ಎದುರಾದವು. ಇಲ್ಲಿಂದ ರೂಪಿನ್ ಪಾಸ್ ತಲಪುವವರೆಗೂ ನಮಗೆ ಈ ಪರ್ವತ ಶ್ರೇಣಿಗಳೊಂದಿಗೆ ಹಿಮದಿಂದ ಕೂಡಿದ ವಿಶಾಲವಾದ ಪ್ರದೇಶಗಳೇ ಕಾಣಿಸುತ್ತಿತ್ತು. ಈ ಸ್ಥಳದಲ್ಲಿ ನಮ್ಮ ಗೈಟರ್ಸ್ ಧರಿಸಿಕೊಳ್ಳಿ ಎಂದು

ಮಾರ್ಗದರ್ಶಿ ತಿಳಿಸಿದರು. ಅದರಂತೆ ನಾನು ಮಾರ್ಗದರ್ಶಿಯ ಸಹಾಯದಿಂದ ನಾನು ತಂದಿದ್ದ ಗ್ಲೈಟರ್ಸ್ ಧರಿಸಿ ಮುಂದಿನ ಚಾರಣಕ್ಕೆ ಸಿದ್ಧನಾದೆ. ರಾಟಿಫೇರಿಯಿಂದ ವಿಶಾಲವಾದ ಹಿಮಪ್ರದೇಶದಲ್ಲಿ ಮೊತ್ತ ಮೊದಲ ಬಾರಿಗೆ ನಮಗೆ ರೂಪಿನ್‌ಪಾಸ್‌ನ ದೃಶ್ಯವು ಧೌಲಾಧರ್ ಪರ್ವತ ಶ್ರೇಣಿಯಲ್ಲಿ ಒಂದು ಸಣ್ಣ ಕಿಂಡಿಯಂತೆ ಕಂಡುಬರತೊಡಗಿತು. ಹಾಗಾಗಿ ಇದು ಬಹಳ ದೂರದಲ್ಲಿರುವಂತೆ ಕಂಡುಬಂದು ಅದನ್ನು ನಾವು ಯಾವಾಗ ತಲುಪುವೆವು ಎಂಬ ಕಾತುರ ನಮ್ಮ ಮನದಲ್ಲಿ ಮೂಡಿತು. ಅಲ್ಲದೇ ನಾವು ಅ ಸಣ್ಣ ಕಿಂಡಿಯ ಮೂಲಕವೇ ರೂಪಿನ್ ಪಾಸ್ ದಾಟಿ ರೋಂಟಿಗಡ್ ಕ್ಯಾಂಪ್ ಕಡೆಗೆ ಹೋಗಬೇಕು ಎಂಬ ಆಲೋಚನೆ ನಮ್ಮ ಮನದಲ್ಲಿ ಹೊಳೆಯಲೇ ಇಲ್ಲ. ಅಲೆಅಲೆಯಾದ ಹಿಮದಿಂದ ಕೂಡಿದ ಹಿಮಮೈದಾನವು ಮಗಿಯುವುದೇ ಇಲ್ಲವೋ ಎಂಬಂತೆ ನಿಧಾನವಾಗಿ ಹತ್ತುತ್ತಿದ್ದ ನಮಗೆ ಕಂಡುಬಂದಿತು. ಬಿಸಿಲು ಹೆಚ್ಚಾಗುತ್ತಿದ್ದಂತೆ ಹಿಮದ ಮೇಲಿನ ನಡಿಗೆಯೂ ಕಠಿಣವಾಗತೊಡಗಿತು. ಕೆಲವೆಡೆ ನಮ್ಮ ಕಾಲುಗಳು ಜಾರಿ ಕೆಳಗೆ ಬೀಳುವ ಸಂದರ್ಭವುಂಟಾದರೆ ಮತ್ತೆ ಕೆಲವೆಡೆ ಮಂಡಿಯವರೆಗೂ ನಮ್ಮ ಕಾಲುಗಳು ಹೂತುಹೋಗಿ ಏರುವುದು ಅತ್ಯಂತ ಕಠಿಣವಾಗತೊಡಗಿತು. ಆದರೆ ನಮ್ಮ ಪ್ರಾಣ ಹೋಗುವುದೇನೋ ಎಂಬ ಭಯವೇನೂ ಉಂಟಾಗಲಿಲ್ಲ. ಇಲ್ಲಿಂದ ಎಲ್ಲೆಲ್ಲಿ ನೋಡಿದರೂ ಶುಭ್ರ ಬಿಳುಪಿನಿಂದ ಕೂಡಿದ ಹಿಮಪ್ರದೇಶಗಳೇ ನಮ್ಮ ಕೂಲಿಂಗ್ ಗ್ಲಾಸ್ ಧರಿಸಿದ್ದ ಕಣ್ಣುಗಳಿಗೆ ಕಂಡು ಬರುತ್ತಿತ್ತು. ಇಲ್ಲಿಂದ ಮಾರ್ಗ ಹಿಮದಿಂದ ಮುಚ್ಚಿಹೋಗಿದ್ದು ಮುಂದಿನ ಹಾದಿ ರೂಪಿನ್ ಪಾಸ್ ದಿಕ್ಕನ್ನೇ ದೃಷ್ಟಿಯಲ್ಲಿಟ್ಟುಕೊಂಡು ನಾವು ಹತ್ತಬೇಕಿತ್ತು. ಅದರೆ ಈ ಕಷ್ಟವನ್ನು ಪರಿಹರಿಸುವ ನಿಟ್ಟಿನಲ್ಲಿ ನಮ್ಮ ಎಲ್ಲ ಮಾರ್ಗದರ್ಶಿಗಳೂ ಎರಡೂ ಬದಿಯಲ್ಲಿ ಅಲ್ಲಲ್ಲಿ ನಿಂತು ನಮ್ಮನ್ನು ಧೈರ್ಯದಿಂದ ಹತ್ತುವಂತೆ ಹುರಿದುಂಬಿಸುತ್ತಿದ್ದರು. ಒಂದೂವರೆ ಗಂಟೆಯ ಕಠಿಣ ಆರೋಹಣದ ನಂತರ ನಾವೆಲ್ಲರೂ ಒಬ್ಬೊಬ್ಬರಾಗಿ ರೂಪಿನ್‌ಪಾಸ್‌ನ ಗಲ್ಲಿಯ ಬುಡ ತಲುಪಿದೆವು. ಇಲ್ಲಿ ಕೆಲವು ಸಮಯ ವಿಶ್ರಾಂತಿ ಪಡೆದು ಇಲ್ಲಿಯವರೆಗೂ ನಮ್ಮ ಚಾರಣವು ಸುಲಲಿತವಾಗಿ ಮುಗಿದಿದ್ದಕ್ಕೆ ಪ್ರಕೃತಿ, ಚಾರಣ ಮಾರ್ಗದರ್ಶಿಗಳು ಹಾಗೂ ಎಲ್ಲಕ್ಕು ಮಿಗಿಲಾದ ದೈವಕ್ಕೆ ಕೃತಜ್ಞತೆ ಅರ್ಪಿಸಿದೆನು. ಕಟ್ಟಕಡೆಯದಾಗಿ ಇಲ್ಲಿಂದ ಮತ್ತಷ್ಟು ಸಾಹಸಮಯವಾದ ರೂಪಿನ್ ಪಾಸ್ ಗಲ್ಲಿಯ ಮೂಲಕ ಚಾರಣ ಮಾಡಲು ತಯಾರಾದೆವು. ಇಲ್ಲಿಂದ ರೂಪಿನ್ ಪಾಸ್ ಗಲ್ಲಿ ಕೇವಲ 200 ಮೀಟರ್ ಎತ್ತರದಲ್ಲಿದ್ದರೂ ಅಲ್ಲಿಗೆ ಹತ್ತುವುದು ಅತ್ಯಂತ ಕಠಿಣವಾಗಿತ್ತು, ಏಕೆಂದರೆ ಉದ್ದಕ್ಕೂ ಪ್ರತಿಹೆಜ್ಜೆಯಲ್ಲೂ ಹಿಮದೊಳಗಿರುವ ಉರುಳುವ ದುಂಡನೆಯ ಕಲ್ಲುಗಳು ಹಾಗೂ ಉರುಳುವ ಬಂಡೆಗಳು ಕಾರಣ. ಇದಕ್ಕೆ ತಿಲಕವಿಟ್ಟಂತೆ ಹಿಮದಲ್ಲಿನ ತೀವ್ರ ಅರೋಹಣವೂ ನಮ್ಮ ಧೈರ್ಯವನ್ನು

ಕೆಡಿಸಲು ಮುಂದಾಗಿದ್ದವು. ಕಾಲುಗಳನ್ನು ಈ ಸ್ಥಳದಲ್ಲಿ ಭದ್ರವಾಗಿಡಲು ಹರಸಾಹಸ ಪಡಬೇಕಿತ್ತು ಹಾಗೂ ಕೆಲವು ಸ್ಥಳಗಳಲ್ಲಿ ನಮ್ಮ ಕೈ ಹಾಗೂ ಕಾಲುಗಳನ್ನು ಭೂಮಿಯಮೇಲೆ ಇಟ್ಟುಕೊಂಡು ಹತ್ತಬೇಕಾಗಿ ಬಂತು. ಇದರೊಂದಿಗೆ ಮಾರ್ಗದರ್ಶಿಗಳು ತಮ್ಮ ಹಿಮಗೊಡಲಿಯಿಂದ ದಾರಿ ಮಾಡಿಕೊಟ್ಟದ್ದು ಅತ್ಯಂತ ಸಹಕಾರಿಯಾಗಿದ್ದು ನಮ್ಮ ಚಾರಣ ಮುಗಿಸಲು ಸಹಕಾರಿಯಾಗಿತ್ತು. ಇದಲ್ಲದೆ ಮಾರ್ಗದರ್ಶಿಗಳು ಮೊದಲು ಮುಂದೆ ಹೋಗಿ ತಮ್ಮ ಹಿಮಗೊಡಲಿಯಿಂದ ಮಾರ್ಗವನ್ನು ಸರಿಪಡಿಸಿದ್ದಲ್ಲದೇ ನನ್ನಂತಹ ಹಿರಿಯ ನಾಗರೀಕರಿಗೆ ತಮ್ಮ ಕೈಗಳನ್ನು ಚಾಚಿ ಮೇಲೆ ಹತ್ತಿಸಿಕೊಂಡಿದ್ದು ಮರೆಯಲಾಗದ ಸಂಗತಿ. ಮಾರ್ಗದರ್ಶಿ ಈಗಾಗಲೇ ಹೆಜ್ಜೆಯಿಟ್ಟದ್ದ ಗುರುತನ್ನು ಗಮನಿಸಿ ಪ್ರತಿ ಹೆಜ್ಜೆಯನ್ನೂ ಅದರ ಮೇಲೆ ಊರುತ್ತ ಹತ್ತತೊಡಗಿದ್ದಲ್ಲದೇ ಮೇಲಿಂದ ಉರುಳಿ ಬರುತ್ತಿರುವ ಸಣ್ಣ ಸಣ್ಣ ಉರುಳು ಕಲ್ಲುಗಳನ್ನು ಗಮನಿಸುತ್ತ ಮೇಲೇರತೊಡಗಿದೆವು. ಪಾಸ್‌ನ ಗಲ್ಲಿಯು ಅರ್ಧಚಂದ್ರಾಕಾರದಲ್ಲಿ ಪರ್ವತವನ್ನು ಕತ್ತರಿಸಿದಂತೆ ಕಂಡುಬರುತ್ತಿತ್ತು. ಈ ಗಲ್ಲಿಯ ಮೂಲಕ ಚಾರಣಿಗರ ಮಾತನಾಡುವ ಧ್ವನಿಗಳು ಅವರು ಮೇಲೇರುತ್ತಿದ್ದಂತೆ ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಮೇಲೇರುತ್ತಿದ್ದಂತೆ ನಮ್ಮ ಕತ್ತುಗಳನ್ನು ಕೊಕ್ಕರೆಗಳ ಕತ್ತಿನಂತೆ ಮೇಲೆಕ್ಕೆ ಎತ್ತಿ ಗಲ್ಲಿಯನ್ನೇ ದಿಟ್ಟಿಸುತ್ತ ಅಲ್ಲಿ ಈಗಾಗಲೇ ನೆಟ್ಟಿರುವ ಅಸಂಖ್ಯ ಬಣ್ಣ ಬಣ್ಣದ ಬಾವುಟಗಳು ಗಾಳಿಯಲ್ಲಿ ಹಾರಾಡುತ್ತಿರುವುದನ್ನು ನೋಡಿ ಇನ್ನೇನು ನಾವೂ ಅಲ್ಲಿಗೆ ಬಂದೇ ಬಿಟ್ಟೆವು ಎಂದು ಸಂಭ್ರಮ ಪಡುವಂತಾಯಿತು. ರೂಪಿನ್‌ಪಾಸ್‌ನ ಗಲ್ಲಿಯು ಹತ್ತಿರ ಹತ್ತಿರವಾಗುತ್ತಿದ್ದಂತೆ ನಮಗೆಲ್ಲರಿಗೂ ರೋಮಾಂಚನವಾಗತೊಡಗಿತು. ಮತ್ತೆ 10 ನಿಮಿಷ ಹತ್ತಿದ ನಂತರ ನಮ್ಮನ್ನು ರೂಪಿನ್ ಪಾಸ್‌ನಲ್ಲಿ ಸ್ವಾಗತಿಸಲು ಬಿಸಿ ಬಿಸಿ ಚಹಾ ಕೆಟಲ್‌ನೊಂದಿಗೆ ಮಾರ್ಗದರ್ಶಿಗಳು ಕಾಯುತ್ತಿದ್ದರು. ಈ ದೃಶ್ಯವನ್ನು ಕಂಡು ಎಲ್ಲ ಚಾರಣಿಗರೂ ಭಾವೋದ್ವೇಗಕ್ಕೆ ಒಳಗಾದರು. ಹಾಗೂ ಮಿಶ್ರ ಭಾವನೆಗಳಿಂದ ಎರಡೂ ಕೈಗಳನ್ನು ಆಕಾಶದೆಡೆಗೆ ಎತ್ತಿ ತಮ್ಮೊಳಗಿನ ಭಾವನೆಗಳನ್ನು ವಿವಿಧ ರೀತಿಯಲ್ಲಿ ಕೂಗುತ್ತ ಹೊರಹಾಕತೊಡಗಿದರು. ಇಲ್ಲಿಗೆ ಬಂದ ನಂತರ ಮೊತ್ತ ಮೊದಲಿಗೆ ನಾವು ರೂಪಿನ್‌ಪಾಸ್‌ನ ಇನ್ನೊಂದು ಭಾಗದ ಮೂಲಕ ಸಾಂಗ್ಲಾ ಕಡೆಯ ಪರ್ವತಗಳನ್ನು ನೋಡಲು ಸಾಧ್ಯವಾಯಿತು. ರೂಪಿನ್ ಪಾಸ್ ಏರುವ ಮೊದಲಿನ ಹಿಮಾವೃತವಾದ ಪರ್ವತಗಳನ್ನು ಹೋಲಿಸಿದರೆ ಮತ್ತೊಂದು ಭಾಗದ ಪರ್ವತಗಳು ಹಸಿರು ಬಣ್ಣದಿಂದ ಕಂಗೊಳಿಸುತ್ತಿದ್ದವು. ಇಲ್ಲಿಂದ ಸುತ್ತಲೂ ನಾವು ನೋಡಿದಾಗ ಧೌಲಾಧರ್ ಪರ್ವತದ ಅನೇಕ ಶಿಖರಗಳು ಜೇಡನ ಕಾಲುಗಳಂತೆ ರೂಪಿನ್ ಪಾಸ್‌ನಿಂದ ಹೊರಬರುತ್ತಿದ್ದಂತೆ ಕಂಡುಬಂದವು. ಇಲ್ಲಿ ಸ್ವಲ್ಪ ವಿಶ್ರಾಂತಿ ಪಡೆದು ನಮ್ಮೊಂದಿಗೆ ತಂದಿದ್ದ ಊಟದ ಬುತ್ತಿ ತೆರೆದು ಪೂರಿ

ಭಾಜಿ ತಿಂದು ನೀರು ಕುಡಿದು ನಂತರ ಸಂಗ್ಲಾ ಹುಲ್ಲುಗಾವಲಿನೆಡೆಗೆ ಇಳಿಯಲು ಸಿದ್ಧರಾದೆವು. ಇಲ್ಲಿಂದ ಇಳಿಯುವುದು ಕಡಿಮೆ ಸಮಯ ತೆಗೆದುಕೊಂಡು ವೇಗವೂ ಹೆಚ್ಚಾಗಿತ್ತು. ಕಾಲುಗಳು ಪುಡಿ ಹಿಮದಲ್ಲಿ ಹೂತು ಹೋಗುತ್ತಿದ್ದರೂ ಲೆಕ್ಕಿಸದೇ ನಾವೆಲ್ಲರೂ ವೇಗವಾಗಿ ಇಳಿಯತೊಡಗಿದೆವು. ಮಾರ್ಗದರ್ಶಿಯ ಸಹಾಯದಿಂದ ಕೆಲವೆಡೆ ನಾವು ಜಾರುತ್ತ ಮಾರ್ಗವನ್ನು ಕ್ರಮಿಸತೊಡಗಿದೆವು. ಜಾರುವ ಪ್ರಕ್ರಿಯೆಯು ಮೂರು ನಾಲ್ಕು ಸ್ಥಳಗಳಲ್ಲಿ ಜರುಗಿದ್ದು ಎಲ್ಲ ಚಾರಣಿಗರಲ್ಲೂ ಮಗುವಿನ ಭಾವನೆಗಳು ಹೊರಬಂದು ಅನಂದದಿಂದ ಜೋರಾಗಿ ಕಿರುಚುವಂತಾಯಿತು. ಪ್ರತಿಯೊಂದು ಜಾರುವಿಕೆಯಲ್ಲೂ ಕ್ಷಣಾರ್ಧದಲ್ಲಿ 400 ಅಡಿ ಕೆಳಗೆ ಇಳಿಯಲು ಸಾಧ್ಯವಾಗತೊಡಗಿತು. ಈ ರೀತಿ ಜಾರುವಿಕೆ ಮುಗಿದ ನಂತರ ನಾವು ಸಮತಟ್ಟಾದ ಪ್ರದೇಶವನ್ನು ತಲುಪಿದೆವು. ಇಲ್ಲಿಂದ ನಾವು ಹಿಮದಿಂದ ಕೂಡಿದ ಮಾರ್ಗದಲ್ಲಿ ನಡೆದುಕೊಂಡು ಹೋಗತೊಡಗಿದೆವು. ಮಾರ್ಗದಲ್ಲಿ ಅಲ್ಲಲ್ಲಿ ಹಿಮ ಕರಗಿ ನಮ್ಮ ಪಾದದಕೆಳಗೆ ನೀರಿರುವುದನ್ನು ಗಮನಿಸತೊಡಗಿದೆವು. ಕ್ರಮೇಣ ಈ ನೀರು ಹೆಚ್ಚಾಗಿ ವೇಗದಿಂದ ರುಕ್ತಿಗಡ್ ಕಡೆಗೆ ಹರಿದು ಹೋಗುತ್ತಿದ್ದದ್ದನ್ನು ಮಾರ್ಗದರ್ಶಿ ನಮಗೆ ತೋರಿಸಿದರು. ರೂಪಿನ್‌ಪಾಸ್ ಗಲ್ಲಿಯಿಂದ ಕೆಳಗೆ ಬರಲು ಕೇವಲ ಒಂದು ಗಂಟೆ ಹಿಡಿಯಿತು. ಇಲ್ಲಿಂದ ಮೇಲೆ ನೋಡಿದಾಗ ರೂಪಿನ್‌ಪಾಸ್ ಒಂದು ಸಣ್ಣ ಹಕ್ಕಿಯಂತೆ ಕಾಣುತ್ತಿತ್ತು. ಇಲ್ಲಿಂದ ಮತ್ತಷ್ಟು ಕೆಳಗೆ ಇಳಿದು 3 ಗಂಟೆಗಳ ಚಾರಣದ ನಂತರ ನೀರಿನ ಸೌಕರ್ಯವಿರುವ ಒಂದು ಸಮತಟ್ಟಾದ ಸ್ಥಳದಲ್ಲಿ ಟೆಂಟ್‌ಗಳನ್ನು ಮಾರ್ಗದರ್ಶಿಗಳು ಬಂದು ಆಗಲೇ ಸ್ಥಾಪಿಸಿದ್ದರು. ಈ ಸ್ಥಳವನ್ನೇ ರೋಂಟಿಗಡ್ ಎಂದು ಕರೆಯಲಾಗಿದ್ದು ಸುತ್ತಲೂ ಹಸಿರಿನ ಹುಲ್ಲುಗಾವಲು ನಮ್ಮ ಕಣ್ಮನಗಳಿಗೆ ತೃಪ್ತಿಯನ್ನುಂಟುಮಾಡುತ್ತಿತ್ತು. ಈ ಕ್ಯಾಂಪಿನಲ್ಲಿ ತೀವ್ರ ಛಳಿಯಿದ್ದು ಉಷ್ಣತೆಯು –5°C ಇರುವುದು ಎಂದು ಮಾರ್ಗದರ್ಶಿ ನಮಗೆ ಬೆಚ್ಚಗಿರಲು ಸೂಚಿಸಿದರು. ಅದರಂತೆ ನಾವು ನಮ್ಮ ಬಟ್ಟೆಗಳನ್ನು ಬದಲಿಸಿ ಚಹಾ ಸೇವನೆ ನಂತರ ಟೆಂಟಿನೊಳಗೆ ಹೋಗಿ ಸ್ಲೀಪಿಂಗ್‌ಬ್ಯಾಗ್‌ನೊಳಗೆ ತೂರಿಕೊಂಡು ಮಲಗಿದೆವು.

ಎಂಟನೇ ದಿನ – 6, ಜೂನ್ 2015 – ರೋಂಟಿಘಡ್(13139ಅಡಿ)ದಿಂದ ಸಾಂಗ್ಲಾ ಕಂಡಾ(11427ಅಡಿ) ಮುಖಾಂತರ ಸಾಂಗ್ಲಾ (8776ಅಡಿ) – 6 ಗಂಟೆ

ಇಂದಿನ ಚಾರಣ ಸಂಪೂರ್ಣವಾಗಿ 6 ಗಂಟೆ ಪರ್ಯಂತ ಇಳಿಯುತ್ತಾ 8776 ಅಡಿಯಲ್ಲಿರುವ ಚಾರಣದ ಅಂತಿಮ ಸ್ಥಳವಾದ ಸಾಂಗ್ಲಾ ಪಟ್ಟಣವನ್ನು ತಲಪುವುದು. ಈ ದಿನದ ಚಾರಣವು ಅಂತಿಮದಿನದ ಚಾರಣವಾದರೂ ಮಾರ್ಗದಲ್ಲಿ ನಮಗೆದುರಾಗುವ ಸುಂದರ ಹುಲ್ಲುಗಾವಲುಗಳು, ಪರ್ವತಶ್ರೇಣಿಗಳ

ವಿವಿಧ ರೂಪಗಳು ಹಾಗೂ ಕೊನೆಯಲ್ಲಿ ಬಸ್ಪಾ ನದಿಯ ದೃಶ್ಯಗಳು ನಾವು ಇನ್ನೂ ಚಾರಣದ ಗುಂಗಿನಲ್ಲೇ ಇರುವುವೇನೋ ಎಂಬ ಭಾವನೆ ಮೂಡುವುದು. ತೀವ್ರ ಅವರೋಹಣವು ನಮ್ಮ ಮಂಡಿ ಹಾಗೂ ಪಾದಗಳಿಗೆ ಅತಿಯಾದ ನೋವು ಹಾಗೂ ಆಯಾಸವನ್ನುಂಟು ಮಾಡಿದರೂ ಮಾರ್ಗದಲ್ಲಿನ ಸುಂದರ ದೃಶ್ಯಗಳು ಈ ನೋವು ಆಯಾಸವನ್ನು ಮರೆಮಾಡುವುದು. ಈ ದಿನದ ಚಾರಣದಲ್ಲಿ ಮೊತ್ತ ಮೊದಲಬಾರಿಗೆ ಕಿನ್ನೋರ್ ಕೈಲಾಷ್ ಪರ್ವತ ಹಾಗೂ ಬಸ್ಪಾ ಕಣಿವೆಯಲ್ಲಿನ ನೀಲಿ ಪೈನ್ ವೃಕ್ಷಗಳು ಸ್ಪಷ್ಟವಾಗಿ ಕಾಣಿಸುವುದು. ಮಾರ್ಗದರ್ಶಿ ನಮ್ಮ ಇಂದಿನ ಚಾರಣವನ್ನು 9.30ಗೆ ಪ್ರಾರಂಭಿಸಲು ಸೂಚಿಸಿದರು. ಅದರಂತೆ ಬೆಳಗಿನ ಉಪಾಹಾರ ಸೇವಿಸಿ ನಿಧಾನವಾಗಿ ಇಳಿಯಲು ಪ್ರಾರಂಭಿಸಿದೆವು. ಮಾರ್ಗದಲ್ಲಿ ಕುರಿಕಾಯುವವರನ್ನು ನೋಡುತ್ತ ನಡೆಯ ತೊಡಗಿದೆವು. ಚಾರಣದ ಜಾಡುಗಳು ಕುರಿಕಾಯುವವರ ಹೆಜ್ಜೆಯಿಂದಾಗಿದ್ದು ಅನೇಕ ದಿಕ್ಕಿಗೆ ಚದುರಿರುವುದನ್ನು ನೋಡಿದೆವು. ಮಾರ್ಗದರ್ಶಿ ಕೆಳಗೆ ಇಳಿಯುವ (ನದಿಯ ಕಡೆಗೆ ಹೋಗುವ) ಜಾಡನ್ನು ಹೊರತುಪಡಿಸಿ ಬೇರಾವ ಜಾಡಿನಲ್ಲಾದರೂ ಹೋಗಬಹುದೆಂದು (ಏಕೆಂದರೆ ಎಲ್ಲ ಜಾಡುಗಳೂ ಕೊನೆಗೆ ತಲಪುವುದಾದ್ದರಿಂದ) ತಿಳಿಸಿದರು. ಸುಮಾರು ಒಂದೂವರೆ ಗಂಟೆಯ ಚಾರಣ ಹಾಗೂ 1500 ಅಡಿಯಷ್ಟು ಕೆಳಗಿಳಿದ ನಂತರ ರೋಂಟಿಗಡದ ಕಿರಿದಾದ ಮಾರ್ಗವು ಮುಗಿದು ಎಡಕ್ಕೆ ತಿರುಗಿ ರುಕ್ತಿಗಡದಲ್ಲಿನ ವಿಶಾಲವಾದ ಪ್ರದೇಶವನ್ನು ಪ್ರವೇಶಿಸಿತು. ಇಲ್ಲಿನ ಹಸಿರು ಹುಲ್ಲುಗಾವಲು ಪರ್ವತದ ಸಂಪೂರ್ಣ ಇಳಿಜಾರನ್ನು ಆಕ್ರಮಿಸಿಕೊಂಡಿದ್ದು ಕಿನ್ನೋರ್ ಕೈಲಾಶ್ ಪರ್ವತದ ದೃಶ್ಯವು 20000 ಅಡಿಗಳ ಸಮಸ್ತ ಹುಲ್ಲುಗಾವಲನ್ನು ಆಕ್ರಮಿಸಿಕೊಂಡು ನಮ್ಮನ್ನು ಮಂತ್ರಮುಗ್ಧರನ್ನಾಗಿಸಿ ಅಲ್ಲೇ ಸ್ವಲ್ಪ ಹೊತ್ತು ಆ ದೃಶ್ಯಗಳನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿರುವಂತಾಯಿತು. ದೂರದ ಕೆಳಭಾಗದಲ್ಲಿ ಸಾಂಗ್ಲಾ ಕಾಂಡ ಸರೋವರ ಹಾಗೂ ಸಣ್ಣ ಸಣ್ಣ ಮನೆಗಳು ಕಂಡುಬರುತ್ತಿದ್ದು ಪಟ್ಟಣದ ನಾಗರೀಕತೆಯ ಸೂಚನೆಯನ್ನು 7 ದಿನಗಳ ಕಾಲ ಅದರಿಂದ ಹೊರಗಿದ್ದ ನಮಗೆ ಕೊಡತೊಡಗಿತು. ಹತ್ತಿರದಲ್ಲಿನ ಚಹಾ ಅಂಗಡಿಯಿಂದ ಚಹಾ ಸೇವಿಸುತ್ತ ನಾವುಗಳು ನಮ್ಮ ಚಾರಣದ ಅನುಭವಗಳನ್ನು ಆರಾಮವಾಗಿ ಮೆಲುಕುಹಾಕತೊಡಗಿದೆವು. ಹಳ್ಳಿಗರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಅನೇಕ ದಿನಗಳ ನಂತರ ಮೊದಲ ಬಾರಿಗೆ ಮರಗಳ ಕೆಳಗೆ ನಡೆಯತೊಡಗಿದೆವು. ಸ್ವಲ್ಪ ಸಮಯದ ನಂತರ ಇದ್ದಕ್ಕಿದ್ದಂತೆ ನೀಲಿ ಬಣ್ಣದ ಪೈನ್ ವೃಕ್ಷಗಳಿಂದ ಕೂಡಿದ ಕಾಡನ್ನು ಪ್ರವೇಶಿಸಿದ್ದು ನಮ್ಮನ್ನು ಚಕಿತರನ್ನಾಗುವಂತೆ ಮಾಡಿತು. ರುಕ್ತಿಗಡದೊಡನೆ ಸಾಂಗ್ಲಾದೆಡೆಗಿನ ಮಾರ್ಗವು 500 – 600 ಅಡಿ ಕೆಳಗೆ ಕರೆದೊಯ್ಯತೊಡಗಿತು. ಸ್ವಲ್ಪ ದೂರ ನಡೆದ ನಂತರ ನಾವುಗಳು ಸೇಬುಹಣ್ಣಿನ ತೋಟಗಳನ್ನು ಪ್ರವೇಶಿಸಿ ಸುತ್ತಲಿನ ಟೆಲಿಫೋನ್ ಲೈನ್‌ಗಳು ಹಾಗೂ

ಮೊಬೈಲ್‌ಟವರ್‌ಗಳು ನಮ್ಮನ್ನು ಸಾಂಗ್ಲಾ ಪ್ರವೇಶಿಸುತ್ತಿರುವಿರೆಂದು ನೆನಪು ಮಾಡಿಕೊಡುತ್ತಿತ್ತು. ಅರ್ಧ ಗಂಟೆಯ ನಡಿಗೆಯ ನಂತರ ಬಸ್ಪಾ ಸೇತುವೆಯೆಡೆಗೆ ತೀವ್ರ ಇಳಿಜಾರಿನ ಮಾರ್ಗವನ್ನು ಪ್ರವೇಶಿಸಿ ಸೇತುವೆ ದಾಟಿದ ನಂತರ ಅನೇಕ ಕಾಂಕ್ರೀಟ್ ಮಾರ್ಗಗಳು ನಮಗೆದುರಾಯಿತು. ಆಗ ನಾವು ಸ್ಥಳೀಯರನ್ನು ಸಾಂಗ್ಲಾ ಬಸ್ ನಿಲ್ದಾಣಕ್ಕೆ ಹೋಗುವ ಮಾರ್ಗ ಕೇಳಿಕೊಂಡು ಬಸ್ ನಿಲ್ದಾಣ ತಲುಪಿದೆವು. ನಾವು ಸಾಂಗ್ಲಾ ತಲುಪಿದಾಗ ಸಂಜೆ 5 ಗಂಟೆಯಾಗಿತ್ತು. ನಾನು ಹಾಗೂ ನನ್ನೊಂದಿಗೆ ಚಾರಣ ಮಾಡಿದ್ದ ಬೆಂಗಳೂರಿನ ಇಂಜಿನಿಯರ್ ಯುವಕನನ್ನು ಕೂಡಿಕೊಂಡು ಹತ್ತಿರದ ಒಂದು ಲಾಡ್ಜ್‌ನಲ್ಲಿ ಕೋಣೆ ಪಡೆದು ಮೊದಲು ಸ್ನಾನ ಮಾಡಿ ನಂತರ ಅಲ್ಲೇ ಊಟ ಮುಗಿಸಿ ರಾತ್ರಿ 9 ಗಂಟೆಗೆ ಅಲ್ಲಿಂದ ಶಿಮ್ಲಾ ಕಡೆಗೆ ಒಂದು ಟ್ಯಾಕ್ಸಿ ಮಾಡಿಕೊಂಡು ಹೊರಟೆವು. ದೀರ್ಘ ಪ್ರಯಾಣದ ನಂತರ ಮುಂಜಾನೆ 5.30ಕ್ಕೆ ಶಿಮ್ಲಾ ತಲುಪಿ ಅಲ್ಲಿನ YHAI ಸಂಸ್ಥೆಯ ಗೆಸ್ಟ್ ಹೌಸ್‌ನಲ್ಲಿ ಒಂದು ಕೋಣೆಯನ್ನು ಪಡೆದು ಒಂದು ದಿನ ಅಲ್ಲೇ ತಂಗಿದ್ದೆವು. ಮಾರನೇ ದಿನ ನಾವಿಬ್ಬರೂ ಶಿಮ್ಲಾದಿಂದ ದೆಹಲಿಗೆ ರಾತ್ರಿ ಬಸ್ಸಿನಲ್ಲಿ ಪಯಣಿಸಿ ವಿಮಾನ ನಿಲ್ದಾಣವನ್ನು ತಲುಪಿದೆವು. ನಮ್ಮಿಬ್ಬರ ವಿಮಾನ ಪ್ರಯಾಣದ ಸಮಯವು ಬೇರೆಯಾದ್ದರಿಂದ ಅವರಿಂದ ಬೀಳ್ಕೊಂಡು ನಾನು ಬೆಂಗಳೂರಿಗೆ ಹೊರಟೆ.

ಹಿಮಾಲಯದಲ್ಲಿ ಪ್ರತಿ ಗಂಟೆಗೂ ಬೇರೆ ಬೇರೆ ದೃಶ್ಯಗಳನ್ನು ನಿಮಗೆ ಅರಿವಿಲ್ಲದಂತೆ ತೋರಿಸುವ ಹಾಗೂ ಪ್ರತಿ ಗಂಟೆಯಲ್ಲೂ ಆಶ್ಚರ್ಯವುಂಟಾಗುವ ಚಾರಣವೇನಾದರೂ ಇದ್ದರೆ ಅದೇ ರೂಪಿನ್ ಪಾಸ್ ಚಾರಣ. ಆರ್ಕೆಸ್ಟ್ರಾದಲ್ಲಿನ ಹಾಡುಗಳು ತಮ್ಮ ಗತಿಯನ್ನು ವೇಗವಾಗಿ ಬದಲಿಸುತ್ತ ಇರುವಂತೆ ಈ ಚಾರಣವೂ ಪ್ರತಿ ಹಂತದಲ್ಲೂ ಆಶ್ಚರ್ಯವನ್ನು ನೀಡುತ್ತ ದೃಶ್ಯಗಳು ನಿಮಗೆ ಸುಳಿವು ಕೊಡದೇ ನಿಮ್ಮೆದುರಿಗೆ ಧುತ್ತೆಂದು ನಿಲ್ಲುತ್ತದೆ. ಹಿಮಾಲಯದಲ್ಲಿನ ಇಷ್ಟು ಎತ್ತರದ ಪ್ರದೇಶವನ್ನು ಏರುವ ಸಾಹಸದಿಂದ ಕೂಡಿದ ಚಾರಣ ಮಾಡುವುದು ಎಲ್ಲರಿಗೂ ಸಾಧ್ಯವಾಗದೇ ಹೋಗಬಹುದು. ಕೇವಲ ಕೆಲವು ಅದೃಷ್ಟವಂತರಿಗೆ ಮಾತ್ರ ಇದು ಸಾಧ್ಯವಾಗುವುದು. ಅ ಅದೃಷ್ಟವಂತರ ಪೈಕಿ ನಾನೂ ಒಬ್ಬನಾಗಿದ್ದೆ ಎಂಬುದು ಹೆಮ್ಮೆಯ ವಿಷಯ. ಈ ಚಾರಣ ಮುಗಿದ ನಂತರ ಕೇವಲ ಒಂದು ತಿಂಗಳು ಮುಗಿಯುವುದರಲ್ಲೇ ನನ್ನ ಮನಸ್ಸು ಹಿಮಾಲಯದಲ್ಲಿನ ಮತ್ತೊಂದು ಚಾರಣ ಮಾಡಲು ತವಕಿಸುತ್ತಿತ್ತು. ಅದಕ್ಕೆ ತಕ್ಕಂತೆ ಕಾಶ್ಮೀರದಲ್ಲಿನ ಮತ್ತೊಂದು ಅತ್ಯಂತ ಸುಂದರವಾದ ಸರೋವರಗಳೆಡೆಗೆ ಚಾರಣ ಮಾಡಲು ಇಂಡಿಯಾ ಹೈಕ್ ಚಾರಣ ಸಂಸ್ಥೆಯಿಂದ ಕರೆ ಬಂದಿತು. ಕೂಡಲೇ ನಾನು ಈ ಅವಕಾಶವನ್ನು ಬಾಚಿಕೊಂಡೆ. ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ನನ್ನ ಮುಂದಿನ ಅಧ್ಯಾಯದಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುವೆ.

ಕಾಶ್ಮೀರದಲ್ಲಿನ ಅತಿ ಎತ್ತರ ತರ್‌ಸಾರ್ – ಮರ್‌ಸಾರ್ – ಸುಂದರಸಾರ್ ಸರೋವರಗಳು

ಜೂನ್ 2015ರ ಮೊದಲವಾರದಲ್ಲಿ ನಾನು ರೂಪಿನ್ ಪಾಸ್ ಚಾರಣವನ್ನು ಮಾಡಿದ ನಂತರ ಕೆಲವೇ ದಿನಗಳಲ್ಲಿ ನನಗೆ ಕಾಶ್ಮೀರದ ಸುಂದರ ಪ್ರದೇಶಗಳು ಬಾ ಬಾ ಎಂದು ಪದೇ ಪದೇ ಕರೆಯತೊಡಗಿತು. ಈ ಕರೆಯನ್ನು ಕಡೆಗಣಿಸಲು ಸಾಧ್ಯವಾಗದೆ ನಾನು ತರ್‌ಸಾರ್ – ಮರ್‌ಸಾರ್ – ಸುಂದರ್‌ಸಾರ್ ಸರೋವರಗಳ ಚಾರಣವನ್ನು 2015, ಜುಲೈ 11–17 ರಲ್ಲಿ ಇಂಡಿಯಾ ಹೈಕ್ ಸಂಸ್ಥೆಯ ಮಾರ್ಗದರ್ಶನದಲ್ಲಿ ಮಾಡಲು ನಿಶ್ಚಯಿಸಿದೆ.

ಜುಲೈ 2014ರಲ್ಲಿ ಕಾಶ್ಮೀರದಲ್ಲಿನ ಏಳು ಸರೋವರಗಳೆಡೆಗೆ ಚಾರಣ ಮಾಡಿದ ನಂತರ ನನ್ನ ದೃಷ್ಟಿಯಲ್ಲಿ ಕಾಶ್ಮೀರದಲ್ಲಿನ ಚಾರಣ ಮಾರ್ಗಗಳಲ್ಲಿ ಇದೇ ಸರ್ವಶ್ರೇಷ್ಠ ಚಾರಣವೆಂದು ಭಾವಿಸಿದ್ದೆ. ಬರೇ ಭಾವಿಸಿದ್ದಲ್ಲದೆ ಅನೇಕರೊಂದಿಗೆ ಈ ಭಾವನೆಯನ್ನು ಹಂಚಿಕೊಂಡಿದ್ದೆ ಕೂಡ. ಆದರೆ ಕೆಲವೇ ತಿಂಗಳುಗಳಲ್ಲಿ ನನ್ನ ಅಭಿಪ್ರಾಯವನ್ನು ಬದಲಿಸುಕೊಳ್ಳುವ ಸಮಯವು ಬಂದೇ ಬಿಟ್ಟಿತು. ಆ ಸಮಯವೇ ತರ್‌ಸಾರ್ – ಮರ್‌ಸಾರ್ ಚಾರಣ.

ತರ್‌ಸಾರ್ – ಮರ್‌ಸಾರ್ ಚಾರಣದಲ್ಲಿ ಅಲ್ಪೈನ್ ಸರೋವರಗಳು ತಮ್ಮದೇ ಆದ ಜೀವವನ್ನು ಪಡೆದುಕೊಳ್ಳುವುದು. ಬರೀ ನೀಲಿಬಣ್ಣದ ಸರೋವರಗಳ ದಡದಲ್ಲಿ ಏಕಾಂತವನ್ನನುಭವಿಸುವ ಕ್ಯಾಂಪ್ ಮಾಡುವುದಲ್ಲದೆ, ಚಾರಣಿಗರು ಸರೋವರದ ಸುತ್ತ ಪರಿಕ್ರಮಣ ಮಾಡುತ್ತಾ ವಿವಿಧ ಸ್ಥಳಗಳಿಂದ ಸರೋವರದ ಸೌಂದರ್ಯ ಸವಿಯಲು ಅವಕಾಶ ಸಿಗುತ್ತದೆ. ನಂತರ ಸದಾ ಮೋಡಗಳಿಂದ ಮರೆಯಲ್ಲಿದ್ದು ಯಾವಾಗಲೂ ಕಾಣಲು ಸಿಗದೇ ಮರೆಯಾಗಿರುವ ಮರ್‌ಸಾರ್ ಸರೋವರ. ಬೇರೆಲ್ಲ ಸರೋವರಗಳಿಗಿಂತ ಈ ಸರೋವರವನ್ನು ನಾವು 600–

700 ಅಡಿಗಳಷ್ಟು ಕೆಳಗೆ ಕುಳಿತು ನೋಡುವೆವು. ಇಲ್ಲಿಂದ ಸರೋವರದ ಮೇಲೆ ಸೂರ್ಯೋದಯದ ಪ್ರತಿಬಿಂಬವನ್ನು ನೋಡುವುದೆಂದರೆ ಅದ್ಭುತವಾದ ಅನುಭವವೇ ಸರಿ. ಈ ಚಾರಣದಲ್ಲಿನ ಇತರೆ ವೈಶಿಷ್ಟ್ಯಗಳೆಂದರೆ:

ತರ್‌ಸಾರ್ ಹಾಗೂ ಸುಂದರ್‌ಸಾರ್ ಸರೋವರಗಳ ನಡುವೆ ಕ್ಯಾಂಪ್. ನಿಮ್ಮ ಟೆಂಟ್‌ನೊಳಗೇ ಕುಳಿತು/ಮಲಗಿಕೊಂಡೇ ಎರಡೂ ಬದಿಗಳಲ್ಲಿ ಸರೋವರಗಳನ್ನು ವೀಕ್ಷಿಸಬಹುದು.

ಲಿಡ್ಡರ್‌ವಾಟ್ ಕ್ಯಾಂಪ್ ತಲಪುವುದಕ್ಕೆ ಮೊದಲು ನಿಮಗೆ ಕಂಡುಬರುವ ಹಸಿರು ಹುಲ್ಲುಗಾವಲುಗಳು. ಈ ಹುಲ್ಲುಗಾವಲು ನಿಮಗೆ ತ್ರಿಶೂಲಾಕಾರದ ಮರಗಳ ದಟ್ಟವಾದ ಕಾಡನ್ನು ದಾಟಿದ ಕೂಡಲೇ ಕಂಡುಬರುವುದು. ಈ ಹುಲ್ಲುಗಾವಲಿನ ಮಧ್ಯದಲ್ಲಿ ಗುಜ್ಜಾರ್ ಗುಡಿಸಿಲೊಂದು ಸಿನಿಮೀಯ ರೀತಿಯಲ್ಲಿ ಧುತ್ತೆಂದು ಕಣ್ಮುಂದೆ ಬಂದು ನಿಲ್ಲುವುದು.

ಸುಂದರ್‌ಸಾರ್ ಸರೋವರದ ಬಳಿಯ ಕ್ಯಾಂಪ್‌ನ್ನು ಹತ್ತುವುದಕ್ಕೆ ಮೊದಲು ಕಂಡುಬರುವ ಪ್ರಕೃತಿ ಸೌಂದರ್ಯವು ನಿಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಅದೇ ಜಗ್‌ಮರಗಿ ಹುಲ್ಲುಗಾವಲು. ಇದನ್ನು ನೋಡಿದಕೂಡಲೇ ನೀವು ಮೂಕವಿಸ್ಮಿತರಾಗುವುದರಲ್ಲಿ ಸಂಶಯವಿಲ್ಲ.

ಅರು, ಬೇಸ್ ಕ್ಯಾಂಪ್ – ಯಾವುದೇ ಚಾರಣದಲ್ಲಿ ಅತ್ಯಂತ ಸುಂದರವಾದ ಬೇಸ್ ಕ್ಯಾಂಪ್ ಯಾವುದು ಎಂಬುದರ ಬಗ್ಗೆ ಚರ್ಚೆಯಾದಾಗ ತರ್‌ಸಾರ್ – ಮರ್‌ಸಾರ್ ಚಾರಣದ ಬೇಸ್ ಕ್ಯಾಂಪ್ ಅರು ಅತ್ಯಂತ ಸುಂದರವಾದದ್ದು ಎಂಬುದು ನಿರ್ವಿವಾದವಾದದ್ದು. ಇದನ್ನು ಬಿಟ್ಟರೆ ಮತ್ತೊಂದು ಬೇಸ್ ಕ್ಯಾಂಪ್ ಎಂದರೆ ಪಶ್ಚಿಮ ಬಂಗಾಲದಲ್ಲಿನ ಸಂಡಕ್ಫು ಚಾರಣದ ಬೇಸ್ ಕ್ಯಾಂಪ್ – ಜೌಭಾರಿ. ಸುಂದರವಾದ ಹುಲ್ಲುಗಾವಲುಗಳು ಹಾಗೂ ಇಳಿಜಾರಿನ ಟಿನ್ ಮೇಲ್ಛಾವಣಿಗಳಿಂದ ಕೂಡಿದ ರಮಣೀಯವಾದ ಮನೆಗಳಿಂದ ಕುಡಿದ ಅರು ಹಳ್ಳಿಯ ಮಧ್ಯದಲ್ಲೇ ಶುಭ್ರವಾದ ನೀರಿನ ತೊರೆಯು ಹರಿಯುತ್ತಾ ಸುತ್ತಲೂ ವಿಲ್ಲೋ ಮತ್ತು ಪಾಪ್ಲರ್ ಮರಗಳಿಂದ ಕೂಡಿದ್ದು ಈ ಹಳ್ಳಿಯು ನೋಡಿದ ಕೂಡಲೇ ಯುರೋಪಿಯನ್ ಹಳ್ಳಿಗಳನ್ನು ನೆನಪಿಸುತ್ತದೆ.

ಹೆಚ್ಚೇಕೆ! ಇದರ ಸೌಂದರ್ಯವನ್ನು ಸ್ವತಃ ಚಾರಣದ ಮೂಲಕ ಮಾತ್ರ ಅನುಭವಿಸಲು ಸಾಧ್ಯ. ಚಾರಣದ ಸಂಕ್ಷಿಪ್ತ ವಿವರಗಳು ಇಂತಿವೆ:

ಮೊದಲನೇ ದಿನ – ಶ್ರೀನಗರದಿಂದ ಪಹೆಲ್‌ಗಾವ್ ಮಾರ್ಗವಾಗಿ 112 ಕಿ.ಮೀ ಜೀಪಿನಲ್ಲಿನ ಪಯಣ. ಪಹೆಲ್‌ಗಾವ್‌ನಿಂದ ಲಿಡ್ಡರ್ ನದಿಯ ಪಕ್ಕದಲ್ಲೇ 12 ಕಿ.ಮೀ ಪ್ರಯಾಣ ಮಾಡಿದರೆ ಅತ್ಯಂತ ಸುಂದರವಾದ ಅರು ಹಳ್ಳಿಯು ಸಿಗುವುದು.

ಎರಡನೇ ದಿನ – ಅರು (7958ಅಡಿ) ಹಳ್ಳಿಯಿಂದ ಲಿಡ್ಡರ್‌ವಾಟ್(9131ಅಡಿ) – 10 ಕಿ.ಮೀ 6 ಘಂಟೆ ಚಾರಣ

ಮೂರನೇ ದಿನ – ಲಿಡ್ಡರ್‌ವಾಟ್(9131ಅಡಿ) ನಿಂದ ಶೇಕ್‌ವಾಸ್(11039ಅಡಿ) 5.6 ಕಿ.ಮೀ 5 ಘಂಟೆ ಚಾರಣ

ನಾಲ್ಕನೇ ದಿನ – ಶೇಕ್‌ವಾಸ್(11039ಅಡಿ)ನಿಂದ ತರ್‌ಸಾರ್ ಸರೋವರ (12449ಅಡಿ) 5 ಕಿ.ಮೀ 4 ಘಂಟೆ ಚಾರಣ

ಐದನೇ ದಿನ – ತರ್‌ಸಾರ್ ಸರೋವರ (12449ಅಡಿ)ದಿಂದ ಸುಂದರ್‌ಸಾರ್ ಸರೋವರ (12946ಅಡಿ) 5 ಕಿ.ಮೀ 5 ಘಂಟೆ ಚಾರಣ

ಆರನೇ ದಿನ – ಸುಂದರ್‌ಸಾರ್ ಸರೋವರ (12946ಅಡಿ) – ಮರ್‌ಸಾರ್ ಸರೋವರದ (13165 ಅಡಿ) ಮುಖಾಂತರ ಹೋಮ್‌ವಾಸ್ (11300ಅಡಿ) ಅವರೋಹಣ 9 ಕಿ.ಮೀ 7 ಗಂಟೆ ಚಾರಣ.

ಏಳನೇ ದಿನ – ಹೋಮ್ ವಾಸ್ (11300ಅಡಿ)– ಅರು ಕ್ಯಾಂಪ್ (7960ಅಡಿ) ಹಾಗೂ ಅಲ್ಲಿಂದ ಶ್ರೀನಗರದೆಡೆಗೆ ಪ್ರಯಾಣ. 6 ಗಂಟೆಯ 13 ಕಿ.ಮೀ ಚಾರಣ.

ಮೊದಲನೇ ದಿನ 2015 ಜುಲೈ 11 – ಶ್ರೀನಗರದಿಂದ ಪಹೆಲ್‌ಗಾವ್ ಮಾರ್ಗವಾಗಿ 100 ಕಿ.ಮೀ ಜೀಪಿನಲ್ಲಿನ ಪಯಣ. ಪಹೆಲ್‌ಗಾವ್‌ನಿಂದ ಲಿಡ್ಡರ್ ನದಿಯ ಪಕ್ಕದಲ್ಲೇ ಅರು ಹಳ್ಳಿ 12 ಕಿ.ಮೀ.

ನಾನು ಬೆಂಗಳೂರಿನಿಂದ ದೆಹಲಿಗೆ ನಂತರ ದೆಹಲಿಯಿಂದ ಶ್ರೀನಗರ ವಿಮಾನ ನಿಲ್ದಾಣಕ್ಕೆ ಜುಲೈ 10ರಂದು ಮಧ್ಯಾನ್ಹ 11.30ಕ್ಕೆ ಬಂದಿಳಿದೆ. ನಂತರ ಅಲ್ಲಿಂದ ಮೊದಲೇ ಕಾಯ್ದಿರಿಸಿದ ಹೋಟೆಲ್‌ನಲ್ಲಿ ಸ್ನಾನ, ಊಟ ಮುಗಿಸಿ ಒಂದು ಗಂಟೆ ವಿಶ್ರಾಂತಿಯ ನಂತರ 4 ಗಂಟೆಗೆ ಹತ್ತಿರದಲ್ಲಿರುವ ಶಂಕರಾಚಾರ್ಯ ಬೆಟ್ಟವನ್ನು ಹತ್ತಿ ದರ್ಶನ ಪಡೆಯಲು ಹೊರಟೆ. ಇದೇ ಬೆಟ್ಟವನ್ನು ಈ ಹಿಂದೆ ನಾನು ಕಾಶ್ಮೀರ್ ಗ್ರೇಟ್ ಲೇಕ್ ಚಾರಣದ ಸಮಯದಲ್ಲೂ 2014ರಲ್ಲಿ ಹತ್ತಿದ್ದೆ. ನಂತರ ಹೋಟೆಲಿಗೆ ಮರಳಿ ರಾತ್ರಿ ಊಟ ನಿದ್ರೆ ಮುಗಿಸಿ ಮಾರನೇ ದಿನ ಅಂದರೆ 11 ಜುಲೈ ಮಧ್ಯಾಹ್ನ 2 ಗಂಟೆಗೆ ಶ್ರೀನಗರದ ಇಂಟರ್ ಸಿಟಿ ಬಸ್ ನಿಲ್ದಾಣದೆಡೆಗೆ ಹೋದೆ. ಅಲ್ಲಿಗೆ ಮತ್ತಿಬ್ಬರು ಚಾರಣಿಗರು ಬೆಂಗಳೂರಿನಿಂದ ಈಗಾಗಲೇ ಬಂದಿರುವುದು ಕಂಡು ಬಂತು. ಅವರ ಪರಿಚಯದ ನಂತರ ಉಳಿದ ಚಾರಣಿಗರ ಆಗಮನಕ್ಕೆ ಕಾಯತೊಡಗಿದೆವು. ಚಾರಣಕ್ಕೆ ಬರಲಿರುವ ಚಾರಣಿಗರ ಹೆಸರುಗಳ ಪಟ್ಟಿ ನನ್ನ ಬಳಿ ಇತ್ತು. 2.45ಕ್ಕೆ ಎಲ್ಲರೂ ಬಂದು ನಮಗಾಗಿ ಕಾಯುತ್ತಿದ್ದ ಟೆಂಪೋ ಟ್ರಾವೆಲರ್ ಹತ್ತಿ ಬಿಜಬೆಹ್ರಾ ಮಾರ್ಗವಾಗಿ ಪಹೆಲ್ ಗಾವ್ ಕಡೆಗೆ 3 ಗಂಟೆಗೆ

ಹೊರಟೆವು. ಸಂಜೆ 6ಕ್ಕೆ ಪಹೆಲ್ ಗಾವ್ ತಲುಪಿ ಅಲ್ಲಿಂದ ನಮ್ಮ ಬೇಸ್ ಕ್ಯಾಂಪ್ ಇರುವ ಅರು ಹಳ್ಳಿಯು 12 ಕಿ.ಮೀ ದೂರ. ಇದನ್ನು ತಲುಪಲು 30 ನಿಮಿಷ ಬೇಕಾಯಿತು. ಸಂಜೆ 6.30ಕ್ಕೆ ಅರು ಹಳ್ಳಿಯನ್ನು ತಲುಪಿ ಅಲ್ಲಿನ ಹೋಮ್‌ಸ್ಟೇ ಬೇಸ್‌ಕ್ಯಾಂಪ್ ತಲುಪಿದೆವು. ಚಾರಣ ನಾಯಕರು ಎಲ್ಲರಿಗೂ ಚಹಾ ನೀಡಿ, ಮಾರ್ಗದರ್ಶಿ, ಅಡುಗೆ ಸಿಬ್ಬಂದಿಗಳನ್ನು ನಮಗೆಲ್ಲರಿಗೂ ಪರಿಚಯಿಸಿ ನಂತರ ನಮ್ಮ ಪರಿಚಯಗಳನ್ನು ಕೇಳಿಕೊಂಡದ್ದಲ್ಲದೆ ನಾವು ತಂದಿದ್ದ ದಾಖಲೆಗಳನ್ನು ಪರಿಶೀಲಿಸಿದರು. ನಂತರ 8 ಗಂಟೆಗೆ ಊಟಮಾಡಿ ನಮ್ಮ ಕೋಣೆಗಳಲ್ಲಿ ಸುಖವಾಗಿ ನಿದ್ರಿಸಿದೆವು.

ಎರಡನೇ ದಿನ 2015 ಜುಲೈ 12 – ಅರು (7958ಅಡಿ) ಹಳ್ಳಿ – ಲಿಡ್ಡರ್‌ವಾಟ್(9131ಅಡಿ) – 10 ಕಿ.ಮೀ 6 ಘಂಟೆ ಚಾರಣ

ಮುಂಜಾನೆ 8ಕ್ಕೆ ಚಾರಣ ಪ್ರಾರಂಭಿಸಿ ಕ್ಯಾಂಪಿನಿಂದ ಹೊರಬಂದು 20 ನಿಮಿಷ ನಿಧಾನವಾಗಿ ನಡೆದು ಒಂದು ಎತ್ತರದ ಪ್ರದೇಶ ತಲುಪಿದೆವು. ಮಾರ್ಗದರ್ಶಿ ನಮಗೆಲ್ಲರಿಗೂ ಇಲ್ಲಿಂದ ಹಳ್ಳಿಯ ದೃಶ್ಯಗಳನ್ನು ನೋಡುವಂತೆ ತಿಳಿಸಿದರು. ಓಹ್! ಅದೆಂತಹ ಸುಂದರ ದೃಶ್ಯ! ಇಡೀ ಹಳ್ಳಿಯಲ್ಲಿನ ಹಸಿರು ಹುಲ್ಲುಗಾವಲುಗಳು ಸಣ್ಣ ಸಣ್ಣಗೆ ಕಾಣುವ ಮನೆಗಳು ನಮಗೆ ಕಂಡು ಬಂದವು. ಬೇರಾವುದೇ ಚಾರಣದಲ್ಲಿ ಈ ರೀತಿಯ ದೃಶ್ಯವು ಅಲಭ್ಯ. ಇಲ್ಲಿಂದ ನಮ್ಮ ಮಾರ್ಗವು ಫರ್ ಮರಗಳಿಂದ ಕೂಡಿದ ಕಾಡಿನೊಳಗೆ ಹೋಗಿದ್ದು ಅದನ್ನು ಅನುಸರಿಸಿ ಅರ್ಧ ಗಂಟೆ ಚಾರಣದ ನಂತರ ಗುಜ್ಜರ್ ಗುಡಿಸಲುಗಳಿರುವ ಡಲ್ಲ ಎಂಬ ಪ್ರದೇಶದಲ್ಲಿ ನಾವೆಲ್ಲರೂ ಕಾಡಿನಿಂದ ಹೊರಬಂದು ಸಮತಟ್ಟಾದ ದಟ್ಟವಾದ ಪೈನ್ ವೃಕ್ಷಗಳಿಂದ ಕೂಡಿದ ಮಾರ್ಗದಲ್ಲಿ ಮತ್ತೆ 20 ನಿಮಿಷ ನಡೆದ ನಂತರ ಮತ್ತೊಂದು ವಿಶಾಲ ಮಾರ್ಗವು ಗುಜ್ಜರ್ ಜನಗಳು ವಾಸಿಸುವ ಮನೆಗಳ ಗುಂಪಿನಲ್ಲಿನ ನಂದಕಿ ಎಂಬ ಪ್ರದೇಶದೆಡೆಯಿಂದ ಲಿಡ್ಡರ್ ಕಡೆಗೆ ಹಾದು ಹೋಗುತ್ತಿತ್ತು. ಈ ಮಾರ್ಗದಲ್ಲೇ ನಡೆಯಲು ತೊಡಗಿದೆವು. ಸ್ವಲ್ಪಹೊತ್ತಿನಲ್ಲಿ ಮರಗಳು ವಿರಳವಾಗುತ್ತ ವಿಶಾಲವಾದ ಹುಲ್ಲುಗಾವಲನ್ನು ಪ್ರವೇಶಿಸಿದೆವು. ಇಲ್ಲಿ ಗುಜ್ಜರ್ ಸ್ಥಳೀಯರು ಹಾಗೂ ಅವರ ಕುಟುಂಬದವರು ಕುದುರೆಗಳ ಮೇಲೆ ಕುಳಿತು ಓಡಾಡುತ್ತಿರುವುದನ್ನು ನೋಡಿದೆವು. ಮತ್ತೆ ಅರ್ಧ ಗಂಟೆಯ ಚಾರಣದ ನಂತರ ಜಾಡು ಅಡ್ಡಾದಿಡ್ಡಿಯಾಗಿದ್ದು ಎರಡು ಸೇತುವೆಗಳನ್ನು ದಾಟಬೇಕಾಯಿತು. ಎರಡನೇ ಸೇತುವೆ ಮರದ ಹಲಗೆಗಳಿಂದ ಮಾಡಿದ್ದಾಗಿತ್ತು. ಸೇತುವೆ ಕೆಳಗೆ ಹರಿಯುತ್ತಿದ್ದ ನೀರು ಶುದ್ಧವಾಗಿದ್ದು ಕುಡಿಯಲು ಯೋಗ್ಯವಾಗಿರುವುದೆಂದು ಮಾರ್ಗದರ್ಶಿ ತಿಳಿಸಿದಾಗ ಒಂದಿಬ್ಬರು ಕೆಳಗೆ ಇಳಿದು ತಮ್ಮ ನೀರಿನ ಬಾಟಲುಗಳಲ್ಲಿ ಹರಿಯುವ ನೀರನ್ನು ತುಂಬಿಕೊಂಡರು. ಇಲ್ಲಿಂದ

ನಮ್ಮ ಮುಂದಿನ ಕ್ಯಾಂಪ್ ಕಡೆಗೆ ಒಂದು ಗಂಟೆಯ ಚಾರಣ ಮಾಡಬೇಕಿತ್ತು. ಸೇತುವೆ ದಾಟಿದ ಮೇಲೆ ಮಾರ್ಗವು ಮೇಲಕ್ಕೇರುತ್ತ ಪೈನ್ ವೃಕ್ಷಗಳ ಕಾಡನ್ನು ಪ್ರವೇಶಿಸಿತು. ಇಲ್ಲಿ ಬಲಗಡೆ ನಮಗೆ ಒಂದು ಚಹಾ ಅಂಗಡಿಯು ಕಂಡುಬಂದಿತು. ನಾವೆಲ್ಲರೂ ಅಲ್ಲಿ ನಿಂತು ಚಹಾ ಕುಡಿದು ನಂತರ ನಮ್ಮ ಚಾರಣವನ್ನು ಮುಂದುವರೆಸಿದೆವು. ಇಲ್ಲಿಂದ ಸ್ವಲ್ಪ ದೂರ ನಡೆದ ಮೇಲೆ ನಾವು ಒಂದು ದಿಬ್ಬವನ್ನು ಹತ್ತಿದೆವು. ಇಲ್ಲಿಂದ ಸುತ್ತಲಿನ ಪ್ರಕೃತಿ ಸೌಂದರ್ಯ ನಮ್ಮನ್ನು ಮಂತ್ರಮುಗ್ಧರ ನ್ನಾಗಿಸಿತು. ಇಲ್ಲಿನ ಕಣಿವೆಯ ಕೆಳಭಾಗದಲ್ಲಿ ಲಿಡ್ಡರ್ ನದಿಯು ನಮ್ಮ ಮಾರ್ಗದಲ್ಲಿ ಕಂಡುಬಂದಿತು. ಈ ನದಿಯ ಪಕ್ಕದಲ್ಲೇ ನಮ್ಮ ಮಾರ್ಗವು ಇದ್ದು ಚಾರಣಕ್ಕೆ ಹೊಸ ಮೆರುಗನ್ನುಂಟುಮಾಡಿತು. ಲಿಡ್ಡರ್ ನದಿಯನ್ನು ದಾಟಿದ ನಂತರ ನಮಗೆ ಫಿರ್ ಮರಗಳ ಕಾಡು ಎದುರಾಯಿತು. ಈ ಕಾಡಿನಲ್ಲಿ ಅರ್ಧ ಗಂಟೆ ಚಾರಣ ಮಾಡಿ ನಾವು ಮತ್ತೊಂದು ಫಿರ್ ಮರಗಳ ಕಾಡನ್ನು ಪ್ರವೇಶಿಸಿದೆವು. ಮಾರ್ಗದರ್ಶಿ ನಮ್ಮನ್ನು ಚಾರಣದ ಮುಖ್ಯ ಮಾರ್ಗದಿಂದ ವಿಶಾಲವಾದ ಹುಲ್ಲುಗಾವಲಿಗೆ ಕರೆದೊಯ್ದರು. ಈ ಹುಲ್ಲುಗಾವಲಿನಲ್ಲಿ ಅಲ್ಲಲ್ಲಿ ನೀರಿನ ತೊರೆಗಳನ್ನು ಕಂಡೆವು. ಅಡಿಗೆಯವರಿಗೆ ಹಾಗೂ ಚಾರಣಿಗರಿಗೂ ಈ ನೀರು ಬಹಳ ಉಪಯೋಗಕ್ಕೆ ಬರುತ್ತಿತ್ತು. ಹಾಗಾಗಿ ಮಾರ್ಗದರ್ಶಿ ಇಲ್ಲೇ ಕ್ಯಾಂಪ್ ನಿರ್ಮಿಸಲು ತೀರ್ಮಾನಿಸಿ ಟೆಂಟ್‌ಗಳನ್ನು ಫಿಕ್ಸ್ ಮಾಡಲು ತೊಡಗಿದರು. ಅವರಿಗೆ ನಾವುಗಳೂ ಸಹಾಯ ಮಾಡಲು ತೊಡಗಿದೆವು. ನಂತರ ಚಹಾ ಕುಡಿದು ನಾವೆಲ್ಲರೂ ಹುಲ್ಲುಗಾವಲಿನಲ್ಲಿ ಸುಮಾರು ಒಂದು ಗಂಟೆ ಸುತ್ತಾಡಿದೆವು. ನಂತರ ರಾತ್ರಿಯ ಊಟ ಮುಗಿಸಿ ನಿದ್ರಿಸಿದೆವು.

ಮೂರನೇ ದಿನ 2015 ಜುಲೈ 13 – ಲಿಡ್ಡರ್‌ವಾಟ್(9131ಅಡಿ) – ಶೇಕ್‌ವಾಸ್(11039ಅಡಿ) 5.6 ಕಿ.ಮೀ 5 ಘಂಟೆ ಚಾರಣ

ಇಂದಿನ ನಮ್ಮ ಚಾರಣ ನದಿಯ ಪಕ್ಕದಲ್ಲೇ ಆರೋಹಣ ಹಾದಿಯಲ್ಲಿ ನಡೆದು ಸ್ವಲ್ಪ ಸಮಯದಲ್ಲೇ ನಾವು ನದಿಯಿಂದ ಬೇರೆಯಾಗಿ ಮೇಲಿನ ಪೈನ್ ವೃಕ್ಷಗಳಿಂದ ಕೂಡಿದ ಕಾಡನ್ನು ಹತ್ತತೊಡಗಿದೆವು. ಇದೇ ರೀತಿ ಒಂದೂವರೆಗಂಟೆ ಚಾರಣ ಮಾಡಿದ ಮೇಲೆ ನಮ್ಮನ್ನು ದಿಗ್ಭ್ರಮೆಗೊಳಿಸುವ ದೃಶ್ಯವು ಎದುರಾಯಿತು. ಕಿರಿದಾದ ಲಿಡ್ಡರ್ ಕಣಿವೆಯಿಂದ ಹೊರಬಂದು ವಿಶಾಲವಾದ ಹುಲ್ಲುಗಾವಲನ್ನು ದಿಢೀರನೆ ಪ್ರವೇಶಿಸಿದೆವು. ಈ ಹುಲ್ಲುಗಾವಲು ಹಿಮದ ಹೆಕ್ಕೆಗಳಿಂದ ಕೂಡಿದ್ದು ಎದುರಿನ ಪರ್ವತವನ್ನು ಆಲಂಗಿಸಿಕೊಳ್ಳುವಂತೆ ಕಂಡುಬಂದಿತು. ಇಲ್ಲಿಂದ ಇದು ಒಂದೇ ಕಣಿವೆಯಾಗಿರದೇ ಅನೇಕ ಕಣಿವೆಗಳು ಒಂದಕ್ಕೊಂದು ಬಾಚಿ ತಬ್ಬಿಕೊಂಡಂತೆ ಕಾಣಿಸುತ್ತಿತ್ತು. ನದಿಯ ಬಲಭಾಗದಲ್ಲೇ ನಡೆಯುತ್ತ ಮುಂದೆ

ಹೋದಾಗ ಮಾರ್ಗವು ಹತ್ತಿರದಲ್ಲೇ ಮೇಲ್ಗಡೆ ಇದ್ದ ಭಾಕರ್ವಾಲ್ ಶೆಲ್ಟರ್ಸ್ ಬಳಿ ಐಕ್ಯವಾಗಿತ್ತು. ಇಲ್ಲಿಂದ ಮುಂದೆ ನಡೆಯತೊಡಗಿದಾಗ ಅನೇಕ ನೀರಿನ ತೊರೆಗಳು ನಮಗೆದುರಾಗಿ ಅವುಗಳನ್ನು ನಿಧಾನವಾಗಿ ದಾಟಿಕೊಂಡು ಮನ್ನಡೆಯಬೇಕಿತ್ತು. ಇಲ್ಲಿಂದ ಕೆಳಗಿರುವ ನದಿಯೆಡೆಗೆ ಇಳಿದು ಅದರ ಪಕ್ಕದಲ್ಲೇ ನಡೆಯಬೇಕೆಂದು ಮಾರ್ಗದರ್ಶಿ ಸೂಚಿಸಿದರು. ಹೀಗೆ ನದಿಯ ಪಕ್ಕದಲ್ಲೆ ಏರು ಹಾದಿಯಲ್ಲಿ ಹತ್ತುತ್ತ ಅರ್ಧ ಗಂಟೆ ನಡೆದ ಮೇಲೆ ಮಾರ್ಗವು ಬಾಗಿ ವಿಶಾಲವಾದ ಹೋಮ್ವಾಸ್ ಪ್ರದೇಶದೆಡೆಗೆ ಕರೆದೊಯ್ದಿತು. ಇಲ್ಲಿ ಗುಜ್ಜಾರ್ ಸ್ಥಳಿಯರ ಚಹಾ ಅಂಗಡಿಯೊಂದು ಗೋಚರವಾಯಿತು. ಅಲ್ಲಿ 30 ನಿಮಿಷ ವಿಶ್ರಾಂತಿ ಪಡೆದು ಚಹಾ ಸೇವನೆಯ ನಂತರ ಚಾರಣ ಮುಂದುವರೆಸಿದೆವು. ವಿಶಾಲವಾದ ಹುಲ್ಲುಗಾವಲಿನಲ್ಲಿ ಚಾರಣ ಮಾಡುವುದೆಂದರೆ ಎಲ್ಲ ಚಾರಣಿಗರಿಗೂ ಪಾಯಸ ಕುಡಿದಷ್ಟು ಸಂತೋಷವಾಗುತ್ತಿತ್ತು. ಹೀಗೆ ಚಾರಣ ಮಾಡುತ್ತಿದ್ದಾಗ ಮಾರ್ಗವು ಕಿರಿದಾಗಿ ನೀಲಿ ಬಣ್ಣದ ನದಿಯ ಪಕ್ಕದಲ್ಲೇ ಮುಂದುವರೆಯುತ್ತಿತ್ತು. ಆ ಮಾರ್ಗದಲ್ಲೇ ಒಂದು ಗಂಟೆ ನಡೆದ ನಂತರ ಭೋಜಪತ್ರ ವೃಕ್ಷಗಳ ಗುಂಪನ್ನು ಪ್ರವೇಶಿಸಿದೆವು. ಪುರಾತನಕಾಲದಲ್ಲಿ ಈ ಭೋಜಪತ್ರ ಮರದ ತೊಗಟೆಗಳನ್ನು ಬಳಸಿಕೊಂಡು ಬರವಣಿಗೆಯನ್ನು ಮಾಡುತ್ತಿದ್ದರು. ಈ ವಿಷಯ ಗೊತ್ತಿದ್ದರಿಂದ ನನಗೆ ಈ ವೃಕ್ಷಗಳನ್ನು ನೋಡಲು ಅವಕಾಶ ದೊರಕಿದ್ದು ಸಂತಸವನ್ನುಂಟುಮಾಡಿತು. ಕೆಲವು ವೃಕ್ಷಗಳನ್ನು ನಿಧಾನವಾಗಿ ನೋಡಿ ಮುನ್ನಡೆಯತೊಡಗಿದೆವು. ಇಲ್ಲಿಂದ ಮುಂದೆ ಕಣಿವೆಯ ಮಾರ್ಗವು ವಿಶಾಲವಾದ ಹಸಿರು ಹುಲ್ಲುಗಾವಲಾಗಿ ಎರಡು ವಿಶಾಲವಾದ ಹಸಿರಿನ ಕಣಿವೆಗಳನ್ನು ಪ್ರವೇಶಿಸಿತು. ಈ ಹುಲ್ಲುಗಾವಲಿನ ಆಚೆಗೆ ಕಪ್ಪು ಬಣ್ಣದ ಹಾಗೂ ಎತ್ತರದ ಹಿಮದಿಂದಾವೃತವಾದ ಪರ್ವತ ಶಿಖರಗಳು ಕಂಡುಬಂದವು. ಇಲ್ಲಿಂದ ಮಾರ್ಗ ಏರುಹಾದಿಯಲ್ಲಿ ಸಾಗಿ 30 ನಿಮಿಷದಲ್ಲಿ ಗುಜ್ಜರ್ ಗುಡಿಸಿಲುಗಳನ್ನು ದಾಟಿ ಶೇಖವಾಸ್ ಕ್ಯಾಂಪ್‌ನಲ್ಲಿರುವ ಟೆಂಟ್‌ಗಳನ್ನು ಸಮೀಪಿಸಿದೆವು. ತರ್‌ಸಾರ್ ಮರ್‌ಸಾರ್ ಸರೋವರದೆಡೆಗೆ ಹೋಗುವ ದೀರ್ಘ ಚಾರಣ ಮಾಡಿ ದಣಿದ ನಮ್ಮಂತಹ ಚಾರಣಿಗರಿಗೆ ಈ ಕ್ಯಾಂಪ್ ವಿಶ್ರಾಂತಿ ಪಡೆದು ಮುಂದುವರೆಯಲು ಹೇಳಿಮಾಡಿಸಿದ ಕ್ಯಾಂಪಾಗಿತ್ತು. ಚಹಾ ಸೇವನೆಯ ನಂತರ ಮಾರ್ಗದರ್ಶಿಗಳು ನಾವು ಧರಿಸಿದ್ದ ಶೂಗಳನ್ನು ಕಳಚಿ ಬರಿಗಾಲಿನಲ್ಲೇ ಎದುರಿಗಿರುವ ಹುಲ್ಲುಗಾವಲಿನಲ್ಲಿ ನಡೆದು ಅಲ್ಲಿರುವ ಗುಡ್ಡವನ್ನು ಹತ್ತಿ ಆದಷ್ಟು ಎತ್ತರಕ್ಕೆ ಹೋಗಿ ಅಲ್ಲೆ ಒಂದೆಡೆ ಕುಳಿತು ಸೂರ್ಯಾಸ್ತವನ್ನು ವೀಕ್ಷಿಸುವಂತೆ ಸಲಹೆ ಕೊಟ್ಟರು. ಎಲ್ಲರೂ ಸಂತೋಷದಿಂದ ಅದೇ ರೀತಿ ಅನುಸರಿಸಿ ಮನೋಹರವಾದ ಸೂರ್ಯಾಸ್ತವನ್ನು ವೀಕ್ಷಿಸಿ ನಮ್ಮ ಅಯಾಸವನ್ನು ಪರಿಹರಿಸಿಕೊಂಡು ಮರಳಿ ಟೆಂಟ್ ಬಳಿ ಬಂದೆವು. ರಾತ್ರಿ 8 ಗಂಟೆಗೆ ವಿಶೇಷ ತಿನಿಸುಗಳಿಂದ ಕೂಡಿದ ಊಟ ಮುಗಿಸಿ ಮಲಗಿದೆವು.

ನಾಲ್ಕನೇ ದಿನ 2015 ಜುಲೈ 14 – ಶೇಕ್‌ವಾಸ್(11039ಅಡಿ)– ತರ್‌ಸಾರ್ ಸರೋವರ (12449ಅಡಿ) 5 ಕಿ.ಮೀ 4 ಗಂಟೆ ಚಾರಣ

ಇಂದಿನ ಚಾರಣವು ಪ್ರಾರಂಭದಿಂದ ಕೊನೆಯವರೆಗೂ ಆರೋಹಣದಿಂದ ಕೂಡಿದ್ದಾದರೂ ತೀವ್ರ ಏರು ಹಾದಿ ಇರುವುದಿಲ್ಲ. ಇಡೀ ದಿನದ ಚಾರಣದಲ್ಲಿ ನಾವು ಸುಮಾರು 1300 ಅಡಿ ಎತ್ತರವನ್ನು ಹತ್ತಬೇಕು. ತರ್‌ಸಾರ್ ಸರೋವರ ತಲುಪುವುದರೊಳಗೆ ಆಶ್ಚರ್ಯಕರ ದೃಶ್ಯಗಳು ಎದುರಾಗುವುವು ಎಂದು ಇಂದಿನ ಚಾರಣ ಪ್ರಾರಂಭಿಸುವ ಮೊದಲೇ ಮಾರ್ಗದರ್ಶಿ ನಮಗೆಲ್ಲರಿಗೂ ತಿಳಿಸಿದ್ದರು. ಇದರೊಂದಿಗೆ ಮಾರ್ಗದರ್ಶಿ ನಾವು ತರ್‌ಸಾರ್ ಸರೋವರವನ್ನು ತಲುಪಿದ ನಂತರ ಮರೆಯದೇ ಎದುರಿಗಿರುವ ಗುಡ್ಡವನ್ನು ಹತ್ತಿ ಮೇಲಕ್ಕೆ ಹೋಗಿ ಅಲ್ಲಿ ಮೇಲ್ಗಡೆ ಮರ್‌ಸಾರ್ ಸರೋವರ ಹಾಗೂ ಕೆಳಗಿನ ತರ್‌ಸಾರ್ ಸರೋವರ ಎರಡನ್ನೂ ಒಂದೇ ಸ್ಥಳದಿಂದ ನೋಡಬೇಕೆಂದೂ ತಿಳಿಸಿದ್ದರು.

ಮಾರ್ಗದರ್ಶಿ ಸೂಚನೆಗಳನ್ನು ಮನದಲ್ಲಿಟ್ಟುಕೊಂಡು ನಾವೆಲ್ಲರೂ ಚಾರಣ ಪ್ರಾರಂಭಿಸಿದೆವು. ಪ್ರಾರಂಭದಿಂದಲೂ ಹಸಿರು ಹುಲ್ಲಿನ ಮೇಲೆ ನಡೆಯತೊಡಗಿ ಕೊನೆಗೆ ನಮ್ಮ ಕ್ಯಾಂಪ್ ಬಳಿಯಿದ್ದ ತೊರೆಯನ್ನೇ ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ಎದುರಿನ ದಿಬ್ಬವನ್ನು ಹತ್ತಿ ಮೇಲಿಂದ ಅದನ್ನು ವೀಕ್ಷಿಸಿದೆವು. ಇಲ್ಲಿಂದ ಎದುರಿಗಿರುವ ತ್ರಿಕೋನಾಕಾರದ ದೊಡ್ಡದಾದ ಬೆಟ್ಟವನ್ನು ಹತ್ತಲು ಪ್ರಾರಂಭಿಸಿದೆವು. ಹೀಗೆ ಎರಡು ಗಂಟೆ ಚಾರಣ ಮಾಡಿದ ನಂತರ ದಿಬ್ಬವು ಮುಗಿದು ದೂರದಲ್ಲಿನ ತರ್‌ಸಾರ್ ಸರೋವರವು ಸಣ್ಣದಾಗಿ ಕಾಣತೊಡಗಿತು. ಅದನ್ನು ನೋಡುತ್ತ ನಮ್ಮಲ್ಲಿನ ಕೆಲವು ಯುವ ಚಾರಣಿಗರು ಸಂತಸದಿಂದ ಕೂಗುತ್ತ ಸರೋವರದ ಬಳಿಗೆ ಓಡತೊಡಗಿದರು. ಸ್ವಲ್ಪ ದೂರ ಓಡಿದ ಮೇಲೆ ಕಲ್ಲು ಬಂಡೆಗಳ ಮೂಲಕ ತೊರೆಯ ನೀರನ್ನು ದಾಟಿ ಮುಂದಿರುವ ಹಸಿರು ಹುಲ್ಲಿನ ಮೇಲೆ ನಡೆಯತೊಡಗಿದೆವು. ಅಲ್ಲಿಂದ ನಮ್ಮ ಟೆಂಟ್‌ಗಳು ಸಮೀಪದಲ್ಲೆ ಕಾಣಿಸುತ್ತಿದ್ದವು. ಮೊದಲು ಟೆಂಟನ್ನು ಸಮೀಪಿಸಿ ನಮ್ಮ ಬ್ಯಾಕ್‌ಪ್ಯಾಕ್‌ಗಳನ್ನು ಇಳಿಸಿ ಸ್ವಲ್ಪ ವಿಶ್ರಾಂತಿ ನಂತರ ಚಹಾ ಸೇವಿಸಿ ಎದುರಿಗಿರುವ ದೊಡ್ಡ ಬೆಟ್ಟ ಹತ್ತಲು ಪ್ರಾರಂಭಿಸಿದೆವು. ಮೇಲೆ ಹತ್ತಿದ ನಂತರ ನಮಗೆ ಮರ್‌ಸಾರ್ ಸರೋವರ ಕಾಣಿಸಿತು. ಅಲ್ಲಿಂದಲೇ ನಾವು ಕೆಳಗಿನ ತರ್‌ಸಾರ್ ಸರೋವರವನ್ನೂ ನೋಡಿಕೊಂಡು ಸ್ವಲ್ಪ ಹೊತ್ತಿನ ನಂತರ ಕೆಳಗೆ ಇಳಿಯತೊಡಗಿದೆವು. ಕೆಳಗಿಳಿದ ನಂತರ ತರ್‌ಸಾರ್ ಸರೋವರದ ಸುತ್ತಲೂ ನಡೆದು ಮತ್ತೊಂದು ತುದಿಯನ್ನು ತಲುಪಿದೆವು. ಇಲ್ಲಿಂದ ಸರೋವರವು ಅತ್ಯಂತ ರಮಣೀಯವಾಗಿ ಕಾಣಿಸುತ್ತಿತ್ತು. ಪ್ರಕೃತಿಯು ಭೂಮಿಯ ಮೇಲಿನ ವಸ್ತುವೊಂದನ್ನು ವಿವಿಧ ಸ್ಥಳಗಳಿಂದ

ನೋಡಿದಾಗ ದೃಶ್ಯಗಳನ್ನು ಬದಲಿಸುವ ಅಪಾರ ಶಕ್ತಿಯನ್ನು ಹೊಂದಿರುವುದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಈ ದಿಕ್ಕಿನಿಂದ ಸರೋವರವು ಸುತ್ತಲೂ ಹಿಮದ ಹೆಕ್ಕೆಗಳಿಂದ ಆವೃತವಾದ ಕಡಾಯಿಯಲ್ಲಿನ ನೀರಿನಂತೆ ಕಡು ನೀಲಿ ಬಣ್ಣದಿಂದ ಕಂಗೊಳಿಸುತ್ತಿತ್ತು. ಭೂಮಿಯ ಮೇಲೆ ಸ್ವರ್ಗ ಸದೃಶವಾದ ಸ್ಥಳವೊಂದಿದ್ದರೆ ಅದೇ ತರ್‌ಸಾರ್ ಸರೋವರ ಎಂದು ನನಗನಿಸಿ ಅನಂದತುಂದಿಲನಾದೆ. ಇದೇ ಸಂತೋಷದಲ್ಲಿ ಊಟಮಾಡಿ ಅಂದಿನ ರಾತ್ರಿ ಚೆನ್ನಾಗಿ ನಿದ್ರಿಸಿದೆ.

ಐದನೇ ದಿನ 2015 ಜುಲೈ 15 – ತರ್‌ಸಾರ್ ಸರೋವರ (12449ಅಡಿ)– ತರ್‌ಸಾರ್ ಕಣಿವೆಯ ಮುಖಾಂತರ ಸುಂದರ್‌ಸಾರ್ ಸರೋವರ (12946ಅಡಿ) 5 ಕಿ.ಮೀ 5 ಗಂಟೆ ಚಾರಣ

ತರ್‌ಸಾರ್ ಸರೋವರದಿಂದ ತರ್‌ಸಾರ್ ಪಾಸ್ ಕಡೆಗಿನ ದೃಶ್ಯವು ಅತ್ಯಂತ ರಮಣೀಯ ಹಾಗೂ ಅಕರ್ಷಣೀಯವಾಗಿ ಕಾಣಿಸುವುದು. ಹುಲ್ಲುಗಾವಲಿನಿಂದ ಕೂಡಿದ ಕಣಿವೆ ಎಡದಿಂದ ಬಲಕ್ಕೆ ನಮ್ಮ ಕಣ್ಣುಗಳಿಗೆ ಎಷ್ಟುದೂರ ಕಾಣುವುದೋ ಅಲ್ಲಿಯವರೆಗೂ ಹರಡಿಕೊಂಡಿದ್ದು ಇಲ್ಲಿನ ಸೌಂದರ್ಯ ಊಹೆಗೂ ಮೀರಿದ್ದಾಗಿದ್ದು ಇದರ ವರ್ಣನೆ ಕೇವಲ ಕವಿಗಳ ಕಲ್ಪನೆಗೆ ಮಾತ್ರ ನಿಲುಕುವಂತದ್ದು. ಆ ಸ್ಥಳದಲ್ಲಿ ನಾವು ಚಾರಣ ಮಾಡುತ್ತೇವೆ ಎಂಬ ಕಲ್ಪನೆಯೇ ಸಾಕು ನಮ್ಮ ಹೃದಯದ ಬಡಿತವನ್ನು ಹೆಚ್ಚಿಸಲು. ಹಾಗೆ ನೋಡಿದರೆ ತರ್‌ಸಾರ್ ನಿಂದ ಸುಂದರಸಾರ್ ಕಡೆಗೆ ಹೋಗಲು ಮತ್ತೊಂದು ದೂರದ ಹಾದಿಯಿದೆ. ಅದೆಂದರೆ ತರ್‌ಸಾರ್ ಸರೋವರದ ಕ್ಯಾಂಪಿನಿಂದ ಶೇಕಾವಸ್ ಕಡೆಗೆ ನಡೆದು ಅಲ್ಲಿಂದ ಎಡಕ್ಕೆ ತಿರುಗಿ ಸುಂದರ್‌ಸಾರ್ ಕಣಿವೆಯ ಮೂಲಕ ಹೋಗುವುದು. ಇದು 3–4 ಕಿ.ಮೀ ದೂರದ ಮಾರ್ಗ. ಇದರ ಬದಲು ನಾವು ಆರಿಸಿಕೊಂಡಿರುವ ಮಾರ್ಗವು ಸಮೀಪದಾಗಿದ್ದು ಮೊದಲಿಗೆ ಸ್ವಲ್ಪ ಎತ್ತರವನ್ನು ಹತ್ತಿದಲ್ಲಿ 3–4 ಕಿ.ಮೀ ಮಾರ್ಗ ಉಳಿಸಿದ್ದಲ್ಲದೆ ಸಮಯವನ್ನೂ ಉಳಿಸಲು ಅನುಕೂಲವಾಗಿ ಸುಂದರ್‌ಸಾರ್ ಸರೋವರದ ಕ್ಯಾಂಪ್ ಬಳಿ ಹೆಚ್ಚು ಸಂಧ್ಯಾ ಸಮಯವನ್ನು ಕಳೆಯಬಹುದು. ಹೀಗಾಗಿ ನಮ್ಮ ಮಾರ್ಗದರ್ಶಿ ಈ ಮಾರ್ಗವನ್ನೇ ಸೂಚಿಸಿದರು.

ಕುರಿಗಾಹಿಗಳ ಮಾರ್ಗದಲ್ಲೇ ಕಣಿವೆಯ ಬುಡಕ್ಕೆ ತಲುಪುವ ಮಾರ್ಗದಲ್ಲಿ ಇಳಿಯತೊಡಗಿ ಬುಡದಲ್ಲಿ ನದಿಯ ಪಕ್ಕದಲ್ಲೇ ನಡೆದು ಕಣಿವೆಯ ಹುಲ್ಲು ಹಾಸಿನ ಪ್ರದೇಶ ತಲುಪಿ ಅಲ್ಲಿಂದ ಎಡಭಾಗದಲ್ಲಿನ ಜಾಡನ್ನೇ ಅನುಸರಿಸಿಕೊಂಡು ನಡೆಯುತ್ತ ಹತ್ತು ನಿಮಿಷದಲ್ಲೇ ಎಡಕ್ಕೆ ಕಾಣಿಸುವ ಬಕ್ಕರವಾಲ್ ಆಶ್ರಯದಾಣ ತಲುಪಿದೆವು. ಈ ಆಶ್ರಯಗಳ ಹಿಂಭಾಗದಲ್ಲಿ ಮಾರ್ಗ ಸ್ವಲ್ಪ ದೂರ ಏರುಹಾದಿಯಿಂದ

ಕೂಡಿದ್ದು ಅದನ್ನು ಹತ್ತಿದ ನಂತರ ದೂರದಲ್ಲಿ ಕಂಡುಬರುವ ದಿಬ್ಬದ ಹಿಂಭಾಗದಲ್ಲಿ ಕಂಡು ಬಂದ ದೃಶ್ಯ ಅದೆಷ್ಟು ಸೌಂದರ್ಯದಿಂದ ಕೂಡಿತ್ತೆಂದರೆ ಅದರ ವರ್ಣನೆ ಮಾಡಲು ಕವಿಗಳಿಗೆ ಮಾತ್ರ ಸಾಧ್ಯವಾಗಿತ್ತು. ನಾವು ಮಾತ್ರ ಅದೆಷ್ಟು ಅದೃಷ್ಟವಂತರೆಂದರೆ ಮೆತ್ತನೆಯ ಹುಲ್ಲುಗಾವಲಿನ ಮೇಲೆ ಆನಂದದಿಂದ ನಡೆಯುವ ಭಾಗ್ಯ ನಮ್ಮದಾಗಿತ್ತು. ಇಂತಹ ಮಾರ್ಗವು ಅತಿ ವಿರಳ. ಇಲ್ಲಿ ಕುರಿಗಳನ್ನು ತಳ್ಳುತ್ತಾ ನಡೆದರೂ ಕುರಿಗಳು ಅದ್ಯಾವುದನ್ನೂ ಗಮನಿಸದೆ ತಮ್ಮ ಪಾಡಿಗೆ ತಾವು ಹುಲ್ಲನ್ನು ಸಾವಕಾಶವಾಗಿ ತಿನ್ನುತ್ತಿದ್ದವು ಹಾಗೂ ಕುದುರೆಗಳೂ ಸಹ ಯಾವ ಭಯವೂ ಇಲ್ಲದೆ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತ ಹುಲ್ಲನ್ನು ನಿಧಾನವಾಗಿ ಜಗಿಯುತ್ತಿರುವುದನ್ನು ಕಂಡೆವು. ಈ ಹುಲ್ಲುಗಾವಲಿನ ಮಧ್ಯದಲ್ಲಿ ಮೇಲಿಂದ ಹರಿದುಬರುತ್ತಿರುವ ನೀರಿನ ಸಣ್ಣ ಸಣ್ಣ ಝರಿಗಳು ಕೂಡಿಕೊಂಡು ಒಂದು ಸುಂದರ ಕೊಳದಲ್ಲಿ ಒಂದಾಗುತಿದ್ದವು. ಎದುರಿಗೆ ಕಂಡು ಬರುತ್ತಿದ್ದ ಹಿಮದ ತೇಪೆಗಳು ಕೆಳಗಿರುವ ಹುಲ್ಲುಗಾವಲಿನ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತಿದ್ದವು. ಇಂತಹ ಪ್ರಕೃತಿ ಸೌಂದರ್ಯ ಅರ್ಧ ಗಂಟೆ ವೀಕ್ಷಿಸಿ ಸಂತಸಪಟ್ಟೆವು. ಈ ಹುಲ್ಲುಗಾವಲನ್ನು ಜಗ್‌ಮರ್ಗಿ ಪ್ರದೇಶವೆಂದು ಕರೆಯುವರೆಂದು ಮಾರ್ಗದರ್ಶಿ ನಮಗೆ ತಿಳಿಸಿದರು. ಈ ಪ್ರದೇಶ ಬಹುಪಾಲು ಸುಂದರ ಹೂವುಗಳಿಂದ ಕೂಡಿದ್ದು ಅದರ ಕೆಳಗೆ ನೀರಿನ ತೊರೆಗಳಿದ್ದು ನೋಡಲು ಎರಡು ಕಣ್ಣುಗಳು ಸಾಲದಾಗಿತ್ತು. ದೂರದ ಹುಲ್ಲುಗಾವಲನ್ನು ನಾನು ಬೈನಾಕ್ಯುಲರ್ ಮೂಲಕ ನೋಡಿ ಆನಂದಿಸಿದೆ. ಸುಂದರವಾದ ಈ ಜಗ್‌ಮರ್ಗಿ ಹುಲ್ಲುಗಾವಲು ಇನ್ನೇನು ಮುಗಿದುಹೋಗುವುದೋ ಎಂಬ ಭಾವನೆಯಿಂದ ನಾನು ನಿಧಾನವಾಗಿ

ನಡೆಯತೊಡಗಿದೆ. ಹೀಗೆ ಹುಲ್ಲುಗಾವಲಿನ ಅಂಚಿನವರೆಗೂ ನಡೆದು ಅಂಚಿನಲ್ಲಿ ನಮಗೆ ಬಂಡೆಗಳ ಗುಂಪು ಕಾಣಿಸಿತು. ಈ ಬಂಡೆಗಳ ಗುಂಪು ಕೆಳಗಿನ ನೀರಿನ ತೊರೆಯನ್ನು ದಾಟಲು ಅನುಕೂಲವಾಗಿತ್ತು. ಬಂಡೆಗಳು ಅದೆಷ್ಟು ನಾಜೂಕಾಗಿ ಕೂಡಿಕೊಂಡಿತ್ತೆಂದರೆ ಅದು ಮಾನವ ನಿರ್ಮಿತ ಆಗಿವೆಯೇನೋ ಎಂದು ಭಾಸವಾಗುತ್ತಿತ್ತು. ಈ ಬಂಡೆಗಳ ಮೇಲೆ ಹಾರುತ್ತಾ ನಾವುಗಳು 15 ನಿಮಿಷಗಳ ನಂತರ ಹುಲ್ಲುಗಾವಲನ್ನು ಬೇರ್ಪಡಿಸುವ ಒಂದು ದಿಬ್ಬದ ಬುಡ ತಲುಪಿದೆವು. ಇಲ್ಲಿಂದ ದಿಬ್ಬದ ತುದಿಯನ್ನು ಇಕ್ಕಟ್ಟಾದ ಕಲ್ಲಿನಿಂದ ಕೂಡಿದ ಹಾದಿಯಲ್ಲಿ ಹತ್ತುತ್ತಾ 15 ನಿಮಿಷಗಳ ನಂತರ ದಿಬ್ಬದ ತುದಿ ತಲುಪಿದೆವು. ನಂತರ ಕಂಡು ಬಂದ ಸುಂದರ ದೃಶ್ಯವು ಕವಿಮನದ ಚಾರಣಿಗರಿಗೆ ಮತ್ತೊಂದು ಕವಿತೆ ರಚಿಸುವ ಅವಕಾಶ ಸೃಷ್ಟಿಸಿತ್ತು. ಇಲ್ಲಿ ನಮಗೆ ಕಂಡು ಬಂದ ದೃಶ್ಯವೆಂದರೆ ನಾವು ಈ ಹಿಂದೆ ನೋಡಿದ ಹುಲ್ಲುಗಾವಲಿಗಿಂತ ಎರಡು ಪಟ್ಟು ವಿಶಾಲವಾದ ಸುಂದರ ಹುಲ್ಲುಗಾವಲು. ಈ ಹುಲ್ಲುಗಾವಲಿನ ಸೌಂದರ್ಯ ವರ್ಣಿಸಲು

ಪದಗಳೇ ಸಾಲದಾಗಿತ್ತು. ಇದು ಉತ್ಪ್ರೇಕ್ಷೆಯಲ್ಲ, ಇದರ ಸೌಂದರ್ಯ ನೋಡಿ ಅನುಭವಿಸಿದಾಗಲೇ ಅರಿವಾಗುವುದು. ಇಲ್ಲಿಂದ ದೂರದಲ್ಲಿ ಕಾಣುವ ಮತ್ತೊಂದು ದಿಬ್ಬದ ತುದಿಯನ್ನು ಹತ್ತಿದ ನಂತರ ಕಾಣುವುದೇ ತರ್‌ಸಾರ್ ಚಾರಣದಿಂದ ಹೊರಹೋಗುವ ಮಾರ್ಗ. ಇಲ್ಲಿಂದ ಎಡಕ್ಕೆ ನೋಡಿದಾಗ ಪದರಗಳುಳ್ಳ ಪರ್ವತದ ದೃಶ್ಯ ಕಾಣುವುದು. ಈ ಪದರಗಳ ಪರ್ವತ ಹಿಮದಿಂದಾವೃತವಾದ ಸುಂದರ ದೃಶ್ಯವನ್ನು ತೋರುವುದು. ಕೆಳಗೆ ಹರಿಯುತ್ತಿರುವ ತೊರೆಯ ವಿರುದ್ಧದಿಕ್ಕಿನ ಆರೋಹಣ ಮಾರ್ಗದಲ್ಲಿ ಹತ್ತತೊಡಗಿದೆವು. ಈ ಮಾರ್ಗವು ಈ ಹಿಂದೆ ಕಂಡ ಬಂಡೆಗಳ ಮಾರ್ಗದಂತೆ ಇರುವ ಮಾರ್ಗ ತಲುಪಿರುವುದು ಕಂಡು ಬಂದು ಅದೇ ಮಾರ್ಗದಲ್ಲಿ ಬಂಡೆಗಳ ಮೇಲೆ ಹಾರುವ ನಡಿಗೆಯಲ್ಲಿ ಕ್ರಮಿಸಿದೆವು. ಹತ್ತು ನಿಮಿಷದ ನಂತರ ನಮಗೆ ಹುಲ್ಲುಗಳಿಂದಾವೃತವಾದ ಸಣ್ಣ ದಿಬ್ಬಗಳು ಕಂಡು ಬಂದವು. ಇವುಗಳನ್ನು ದಾಟಿದ ನಂತರ ಸುಂದರ್‌ಸಾರ್ ಸರೋವರದ ದಡವು ಕಾಣಿಸತೊಡಗಿತು. ಬಲಬದಿಯ ಹಿಂಭಾಗದಲ್ಲಿ ಬಿಡಾರಗಳು ಕಂಡು ಬಂದವು. ಬಿಡಾರದಲ್ಲಿ ಕೆಲ ಹೊತ್ತು ವಿಶ್ರಾಂತಿ ಹಾಗೂ ಚಹಾ ಸೇವಿಸಿದ ನಂತರ ಸುಂದರ್‌ಸಾರ್ ಸರೋವರದ ಸೌಂದರ್ಯ ಸವಿಯಲು ಹೋದೆವು. ನಂತರ ಬಿಡಾರಕ್ಕೆ ಮರಳಿ ಬಂದು ಸರೋವರದಲ್ಲಿ ಸ್ನಾನ ಮಾಡಲು ನಿರ್ಧರಿಸಿ ನಾನು ಹಾಗೂ ಮತ್ತಷ್ಟು ಚಾರಣಿಗರು ಬಟ್ಟೆಯೊಂದಿಗೆ ಸರೋವರ ತಲುಪಿ ಸ್ನಾನ ಮಾಡಿ ಆಯಾಸ ಪರಿಹರಿಸಿಕೊಂಡೆವು.

ಆರನೇ ದಿನ 2015 ಜುಲೈ 16 – ಸುಂದರ್‌ಸಾರ್ ಸರೋವರ (12946ಅಡಿ) – ಮರ್‌ಸಾರ್ ಸರೋವರದ (13165 ಅಡಿ) ಮುಖಾಂತರ ಹೋಮ್‌ವಾಸ್ (11300ಅಡಿ) ಅವರೋಹಣ 9 ಕಿ.ಮೀ 7 ಗಂಟೆ ಚಾರಣ.

ಮುಂಜಾನೆ 6 ಗಂಟೆಗೆ ಎಲ್ಲರೂ ಸುಂದರ್‌ಸಾರ್ ಸರೋವರದ ಬಲಭಾಗದಲ್ಲೇ ನಡೆಯುತ್ತಾ ಸರೋವರದಿಂದ ದೂರ ನಡೆದಮೇಲೆ ಎರಡು ಮಾರ್ಗಗಳು ಗೋಚರಿಸಿದವು. ಮಾರ್ಗದರ್ಶಿ ಈ ಎರಡೂ ಮಾರ್ಗಗಳು ಮರ್‌ಸಾರ್ ಸರೋವರದೆಡೆಗೆ ಹೋಗುವುದೆಂದು ತಿಳಿಸಿ ಎಲ್ಲರನ್ನೂ ಒಂದೇ ಮಾರ್ಗದಲ್ಲಿ ಹೋಗುವಂತೆ ಸೂಚಿಸಿದರು. ಅದರಂತೆ ನಾವೆಲ್ಲರೂ ಎಡಭಾಗದಲ್ಲಿ ಕಾಣುವ ಹಿಮದಿಂದ ಅವೃತವಾದ ಬಂಡೆಗಳ ಮಾರ್ಗವನ್ನು ಹತ್ತುತ್ತಾ ಅರ್ಧ ಗಂಟೆ ನಡೆದು ಹುಲ್ಲಿನಿಂವಾವೃತವಾದ ಕಣಿವೆ ಪ್ರವೇಶಿಸಿದೆವು. ಈ ಕಣಿವೆಯ ಕೆಳಭಾಗದಲ್ಲಿ ಸಮತಟ್ಟಾದ ಪ್ರದೇಶವಿದ್ದು ಅಲ್ಲಲ್ಲಿ ನೀರಿನ ತೊರೆಗಳನ್ನು ದಾಟುತ್ತಾ ಹೋದೆವು. ಇಲ್ಲಿಂದ ಒಂದು ದಿಬ್ಬವನ್ನು ಹತ್ತಿ ಹತ್ತು ನಿಮಿಷದಲ್ಲಿ ಸುಮಾರು 600 ಅಡಿ ಕೆಳಗೆ ಮರ್‌ಸಾರ್ ಸರೋವರ ಗೋಚರಿಸಿತು. ಈ ಸರೋವರ ಮೋಡಗಳಿಂದ

ಮುಸುಕಿದ್ದು ಸುಂದರ್‌ಸಾರ್ ಸರೋವರದಷ್ಟೇ ವಿಶಾಲವಾಗಿತ್ತು. ಸರೋವರದ ಒಂದೆಡೆ ಹಿಮಾವೃತವಾದ ಶಿಖರಗಳು ಗೋಚರಿಸುತ್ತಿದ್ದವು. ನಮ್ಮಲ್ಲಿನ ಯುವ ಚಾರಣಿಗರು ಕೆಳಗೆ ಇಳಿದು ಸರೋವರದ ಹತ್ತಿರಕ್ಕೆ ಹೋಗಿ ಅಲ್ಲಿ ಸ್ವಲ್ಪ ಹೊತ್ತು ಸಮಯ ಕಳೆದು ಫೋಟೋ ಕ್ಲಿಕ್ಕಿಸಿ ಮರಳಿದರು. ಸರೋವರದ ಬಲಭಾಗದಲ್ಲಿ ಕಂಡು ಬರುವ ದಟ್ಟವಾದ ಕಾಡನ್ನು ದಾಚಿಗಮ್ ಅರಣ್ಯವೆಂದು ಮಾರ್ಗದರ್ಶಿ ತಿಳಿಸಿದರು. ಅರ್ಧ ಗಂಟೆಯ ನಂತರ ಇಲ್ಲಿಂದ ಹತ್ತಿಬಂದ ಮಾರ್ಗದಲ್ಲೇ ಇಳಿದು 40 ನಿಮಿಷಗಳಲ್ಲಿ ಸುಂದರ್‌ಸಾರ್ ಸರೋವರ ತಲುಪಿ ಮುಂಜಾನೆಯ ಉಪಾಹಾರ ಸೇವಿಸಿ ನಮ್ಮ ಚಾರಣವನ್ನು ಹೋಮ್‌ವಾಸ್ ಕಡೆಗೆ ಪ್ರಾರಂಭಿಸಿದೆವು. ಈ ಚಾರಣವು ನಮ್ಮನ್ನು ಮತ್ತೊಮ್ಮೆ ಜಗ್‌ಮರ್ಗಿ ಕಣಿವೆಯಲ್ಲಿ ನಡೆದುಕೊಂಡು ಹೋಗುವ ಅವಕಾಶವನ್ನು ಕಲ್ಪಿಸಿಕೊಟ್ಟದ್ದಲ್ಲದೆ ಮರು ಚಾರಣವು ಬೇರೆ ದಿಕ್ಕಿನ ಮೂಲಕ ಕರೆದೊಯ್ದಿತು. ತರ್‌ಸಾರ್ ಪಾಸ್‌ನ್ನು ದಾಟುವುದರ ಬದಲಾಗಿ ಮಾರ್ಗವು ಶೇಖ್‌ವಾಸ್ ಮುಖಾಂತರ ಹೋಮ್‌ವಾಸ್ ಶಿಬಿರಕ್ಕೆ ನಮ್ಮನ್ನು ಕರೆದೊಯ್ದಿತು. ನಾವೆಲ್ಲರೂ ಹೋಮ್‌ವಾಸ್‌ನ್ನು ಮಧ್ಯಾಹ್ನದ ಊಟದ ಸಮಯಕ್ಕೆ ತಲುಪಿದೆವು. ಇಂದಿನ ನಮ್ಮ ವಾಸ್ತವ್ಯವು ಹೋಮ್‌ವಾಸ್ ಕ್ಯಾಂಪಿನಲ್ಲೆ ಎಂದು ಮೊದಲೇ ಮಾರ್ಗದರ್ಶಿ ನಿರ್ಧರಿಸಿದ್ದರು. ಹಾಗಾಗಿ ನಾವೆಲ್ಲರೂ ಅಲ್ಲಿಯೇ ಅಂದಿನ ರಾತ್ರಿ ಕಳೆದೆವು.

ಏಳನೇ ದಿನ 2015 ಜುಲೈ 17 – ಹೋಮ್ ವಾಸ್ (11300ಅಡಿ)– ಅರು ಕ್ಯಾಂಪ್ (7960ಅಡಿ) ಹಾಗೂ ಅಲ್ಲಿಂದ ಶ್ರೀನಗರದೆಡೆಗೆ ಪ್ರಯಾಣ. 6 ಗಂಟೆಯ 13 ಕಿ.ಮೀ ಚಾರಣ.

ಹೋಮ್‌ವಾಸ್‌ನಿಂದ ಮುಂಜಾನೆ 6 ಗಂಟೆಗೆ ನಮ್ಮ ಚಾರಣವನ್ನು ಅವರೋಹಣ ಮಾರ್ಗದಲ್ಲಿ ಅರು ಕ್ಯಾಂಪಿನಿಂದ ಲಿಡ್ಡರ್‌ವಾಟ್ ಮುಖಾಂತರ ಹತ್ತಿ ಬಂದ ಮಾರ್ಗದಲ್ಲಿ ಇಳಿಯುತ್ತ ಪ್ರಾರಂಭಿಸಿದೆವು. ಎರಡು ಗಂಟೆಗಳ ಅವರೋಹಣ ಮಾರ್ಗ ಕ್ರಮಿಸಿದ ನಂತರ ನಾವು ಲಿಡ್ಡರ್‌ವಾಟ್‌ನ್ನು ತಲುಪಿದೆವು. ಈ ಮರುಚಾರಣದ ವೈಶಿಷ್ಟ್ಯವೆಂದರೆ ನಾವು ಅರು ಕ್ಯಾಂಪಿನಿಂದ ಬರುವಾಗ ಕಾಣದೇ ಇದ್ದ ಪ್ರಕೃತಿ ಸೌಂದರ್ಯ ನಮ್ಮೆದುರಿಗೆ ತೆರೆದುಕೊಂಡದ್ದು. ಅದರಲ್ಲಿ ಪ್ರಮುಖವಾದದ್ದೆಂದರೆ ಕ್ಷೀಣಿಸುತ್ತಿರುವ ಕೊಲಹೋಯ್ ಹಿಮನದಿ ಹಾಗೂ ಮೊದಲ ದಿನ ಕಂಡ ಪೈನ್ ಅರಣ್ಯದ ಮತ್ತೊಂದು ಸುಂದರ ಮುಖ. ಈ ದೃಶ್ಯ ನಮಗೆ ಮೊದಲ ದಿನ ಕಂಡುಬಂದಿರಲಿಲ್ಲ. ಈ ಎಲ್ಲ ಬದಲಾವಣೆಗಳನ್ನೂ ನಮಗೆ ಮಾರ್ಗದರ್ಶಿ ವಿವರಿಸಿದನಂತರವೇ ಮನನವಾಯಿತು. ಲಿಡ್ಡರ್ ವಾಟ್ ಪ್ರದೇಶದಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನಂತರ ಅಲ್ಲಿಂದ ಅರು ಕ್ಯಾಂಪಿನೆಡೆಗೆ

4 ಗಂಟೆಗಳ 10 ಕಿ.ಮೀ ಚಾರಣ ಪ್ರಾರಂಭಿಸಿದೆವು. ಮಾರ್ಗದಲ್ಲಿ ಮಧ್ಯಾಹ್ನ 2 ಗಂಟೆಗೆ ಒಂದೆಡೆ ಎಲ್ಲರೂ ಕುಳಿತು ನಮ್ಮೊಂದಿಗೆ ಹೋಮ್ ವಾಸ್ ಕ್ಯಾಂಪಿನಿಂದ ತಂದಿದ್ದ ಊಟ ಮಾಡಿ ಸ್ವಲ್ಪ ಹೊತ್ತು ವಿಶ್ರಾಂತಿಯ ನಂತರ ಸಂಜೆ 4 ಗಂಟೆಗೆ ಅರು ಹಳ್ಳಿಯನ್ನು ತಲುಪಿ ಅಲ್ಲಿ ನಮಗಾಗಿ ಕಾಯುತ್ತಿದ್ದ ವಾಹನವನ್ನು ಏರಿ ಶ್ರೀನಗರದೆಡೆಗೆ ಪ್ರಯಾಣ ಪ್ರಾರಂಭಿಸಿದೆವು. ಶ್ರೀನಗರವನ್ನು ರಾತ್ರಿ 8 ಗಂಟೆಗೆ ತಲುಪಿದೆವು. ಮೊದಲೇ ಕಾಯ್ದಿರಿಸಿದ್ದ ಹೋಟಲ್ಲಿನಲ್ಲಿ ಮಲಗಿದ್ದು ಮುಂಜಾನೆ ವಿಮಾನವನ್ನು ಏರಿ ಬೆಂಗಳೂರನ್ನು ಸಂಜೆ ನಾಲ್ಕಕ್ಕೆ ತಲುಪಿದೆ. ಇದರೊಂದಿಗೆ ಕಾಶ್ಮೀರದ ಮತ್ತೊಂದು ಸುಂದರ ಚಾರಣವನ್ನು ಮುಗಿಸಿದಂತಾಯಿತು.

ವ್ಯಾಲಿ ಆಫ್ ಫ್ಲವರ್ಸ್ ಮತ್ತು ಹೇಮಕುಂಡ್ ಸಾಹಿಬ್ ಸರೋವರ ಚಾರಣ

ಉತ್ತರಾಖಂಡ ರಾಜ್ಯದಲ್ಲಿನ ಉತ್ತರ ಚಮೋಲಿ ಜಿಲ್ಲೆಯಲ್ಲಿನ 12000 ಅಡಿ ಎತ್ತರದಲ್ಲಿರುವ ವ್ಯಾಲಿ ಆಫ್ ಫ್ಲವರ್ಸ್ (ಹೂವುಗಳ ಕಣಿವೆ) ಸುಂದರ ಉದ್ಯಾನವನ ಕೇವಲ ನೂರು ವರ್ಷಗಳ ಹಿಂದೆ ಭಾರತೀಯ ಪ್ರಕೃತಿ ಪ್ರಿಯ ಚಾರಣಿಗರಿಗೆ ಗೊತ್ತಿರದ ಸ್ಥಳವಾಗಿತ್ತೆಂದರೆ ಯಾರೂ ನಂಬಲಾರರು. ಆದರೆ, ಇದು ಸತ್ಯ. ಆದರೆ ಈಗ ಈ ಉದ್ಯಾನವನ ಅಪಾರ ಆಕರ್ಷಣೆ ಹೊಂದಿ ಒಂದು ವಾಣಿಜ್ಯ ಕೇಂದ್ರವಾಗಿ ಇಲ್ಲಿಗೆ ಬರುವ ಚಾರಣಿಗರನ್ನು ಕೈ ಬೀಸಿ ಕರೆಯುತ್ತಿದೆ.

ಈ ಉದ್ಯಾನವನವನ್ನು Frank S Smythe, Eric Shooting ಮತ್ತು RL Holdsworth ಎಂಬ ವಿದೇಶೀ ಪರ್ವತಾರೋಹಿಗಳು 1931ರಲ್ಲಿ ಕಾಮೆಟ್ ಪರ್ವತಾರೋಹಣದಿಂದ ಮರಳುತ್ತಿದ್ದಾಗ ಆಕಸ್ಮಿಕವಾಗಿ ಕಂಡು 1938ರಲ್ಲಿ ಅದರ ಬಗ್ಗೆ ಒಂದು ಪುಸ್ತಕ ಪ್ರಕಟಿಸಿದರು. ಆನಂತರ Royal Botanic Garden, Kew ಸಂಸ್ಥೆ 1939ರಲ್ಲಿ Joan Margaret Legged ಅವರನ್ನು ಇಲ್ಲಿನ ಎಲ್ಲ ಹೂವುಗಳ ಬಗ್ಗೆ ವೈಜ್ಞಾನಿಕ ಅಧ್ಯಯನ ಮಾಡಲು ಕಳಿಸಿಕೊಟ್ಟಿತು. ಆದರೆ ದುರ್ದೈವವಶಾತ್ ಆಕೆ ಇಲ್ಲಿನ ಒಂದು ಶಿಖರದಿಂದ ಕೆಳಗೆ ಬಿದ್ದು ಸತ್ತಳು. ಅವಳ ಅಕ್ಕ ನಂತರ ಇಲ್ಲಿಗೆ ಬಂದು ಅಧ್ಯಯನ ಪೂರ್ಣಗೊಳಿಸಿದಳು. ಇಲ್ಲಿ ಅಂದಾಜು 520 ಜಾತಿಯ ಸಸ್ಯಗಳಿದ್ದು ಅವುಗಳಲ್ಲಿ 498 ಸಸ್ಯಗಳು ಹೂವು ಬಿಡುವುದು. ಇದನ್ನು 2005ರಲ್ಲಿ ವಿಶ್ವ ಪರಂಪರಾ ಸ್ಥಳ (World Heritage Site) ಎಂದು ಘೋಷಿಸಲಾಗಿದೆ.

ವಿಸ್ಮಯ ಉಂಟುಮಾಡುವ ಹೇಮಕುಂಡ ಸರೋವರವು ಸಿಖ್ಖರ ಪವಿತ್ರ ಯಾತ್ರಾಸ್ಥಳವಾದ ಹೇಮ್ ಕುಂಡ್ ಸಾಹಿಬ್ ಕ್ಷೇತ್ರದಲ್ಲಿರುವುದು. ಈ ಸರೋವರದ

ಸುತ್ತಳತೆ 2 ಕಿ.ಮೀ ಇದ್ದು 14200 ಅಡಿ ಎತ್ತರದಲ್ಲಿದ್ದು ಸುತ್ತಲೂ 15200 ಅಡಿ ಎತ್ತರದ ಪರ್ವತಗಳಿವೆ. ಈ ಪ್ರದೇಶ ತಲುಪಲು ಘಾಂಗ್ರಿಯ (3046 ಮೀಟರ್) ದಿಂದ 6 ಕಿ.ಮೀ ಚಾರಣ ಮಾಡಬೇಕು. ವ್ಯಾಲಿ ಆಫ್ ಫ್ಲವರ್ಸ್ ಮತ್ತು ಹೇಮಕುಂಡ್ ಸಾಹಿಬ್ ಸರೋವರದೆಡೆಗಿನ ಚಾರಣ ನಾನು 2015ರ, ಆಗಸ್ಟ್ 23ರಿಂದ 28ರ ಸಮಯದಲ್ಲಿ ಇಂಡಿಯಾ ಹೈಕ್ಸ್ ಸಂಸ್ಥೆಯೊಂದಿಗೆ ಮಾಡಿದೆ. ಈ ಚಾರಣದ ಸಂಕ್ಷಿಪ್ತ ಮಾಹಿತಿ ಹೀಗಿದೆ:

ಮೊದಲನೇ ದಿನ – ಹರಿದ್ವಾರ–ಗೋವಿಂದಘಾಟ್ – ಜೀಪಿನಲ್ಲಿ ಪ್ರಯಾಣ
ಎರಡನೇ ದಿನ – ಗೋವಿಂದಘಾಟ್ (1900ಮೀ)–ಘಾಂಗ್ರಿಯ(3046 ಮೀ) 13 ಕಿ.ಮೀ ಕಠಿಣವಾದ 7 ಗಂಟೆಗಳ ಚಾರಣ
ಮೂರನೇ ದಿನ –ಘಾಂಗ್ರಿಯ(3046ಮೀ)–ವ್ಯಾಲಿ ಆಫ್ ಫ್ಲವರ್ಸ್ (3500ಮೀ) ಮತ್ತು ಘಾಂಗ್ರಿಯಗೆ ಮರಳಿದ್ದು – 10 ಕಿ.ಮೀ
ನಾಲ್ಕನೇ ದಿನ – ಘಾಂಗ್ರಿಯ(3046 ಮೀ)ದಿಂದ ಹೇಮಕುಂಡ ಸಾಹಿಬ್ ಸರೋವರ(4300ಮೀ) ಮತ್ತು ಮರಳಿ ಘಾಂಗ್ರಿಯ(3046 ಮೀ) 6X2 ಕಿ.ಮೀ ಹಾಗೂ 1300 ಮೀ ಎತ್ತರದ ಕಠಿಣವಾದ 7 ಗಂಟೆಗಳ ಚಾರಣ. – ಘಾಂಗ್ರಿಯ (3046 ಮೀ)
ಐದನೇ ದಿನ ಘಾಂಗ್ರಿಯ(3046ಮೀ)ದಿಂದ ಗೋವಿಂದ ಘಾಟ್ (1900ಮೀ) – 13 ಕಿ.ಮೀ ದೂರದ 5 ಗಂಟೆಗಳ ಚಾರಣ.
ಆರನೇ ದಿನ – ಗೋವಿಂದ ಘಾಟ್‌ನಿಂದ ಹರಿದ್ವಾರ – ಜೀಪಿನಲ್ಲಿ ಪ್ರಯಾಣ.

ಮೊದಲನೇ ದಿನ 2015 ಆಗಸ್ಟ್ 23 – ಹರಿದ್ವಾರ–ಗೋವಿಂದಘಾಟ್ (1900 ಮೀ) ಜೀಪಿನ ಪ್ರಯಾಣ.

ಹರಿದ್ವಾರದಿಂದ ಗೋವಿಂದ ಘಾಟ್‌ಗೆ 11 ಗಂಟೆಯ ಪ್ರಯಾಣ ಅತ್ಯಂತ ಮನೋಹರವಾಗಿದ್ದು. ಮೊದಲದಿನ ಹರಿದ್ವಾರದಿಂದ ಮುಂಜಾನೆ 7 ಕ್ಕೆ ಹೊರಟು ಮಾರ್ಗದಲ್ಲಿ ಅಲಕನಂದ–ಭಾಗೀರಥಿ ನದಿಗಳ ಸಂಗಮ ದೇವಪ್ರಯಾಗ್ ಹಾಗೂ ರುದ್ರಪ್ರಯಾಗ್‌ನಲ್ಲಿ ಅಲಕನಂದ–ಮಂದಾಕಿನಿ ಸಂಗಮ; ಕರ್ಣಪ್ರಯಾಗದಲ್ಲಿ ಅಲಕನಂದ–ಪಿಂಡಾರಿ ನದಿಗಳ ಸಂಗಮ ದಾಟಿ ಜೋಷಿಮಠ ತಲುಪಿ ಅಲ್ಲಿಂದ ಗೋವಿಂದಘಾಟ್ ಪ್ರದೇಶವನ್ನು ಸಂಜೆ 6 ಗಂಟೆಗೆ ತಲುಪಿ ಅಲ್ಲಿ ನಮಗೆ ಹೋಟೆಲೊಂದರಲ್ಲಿ ವಾಸ್ತವ್ಯವನ್ನು ಇಂಡಿಯಾ ಹೈಕ್ ಸಂಸ್ಥೆಯು ನಿಗದಿಪಡಿಸಿತ್ತು. ಚಹಾ ಸೇವನೆಯ ನಂತರ ಚಾರಣ ನಾಯಕರು ನಮ್ಮೆಲ್ಲರ ಚಾರಣ ದಾಖಲೆಗಳನ್ನು ಪರಿಶೀಲಿಸಿ ಎಲ್ಲರ ಪರಸ್ಪರ ಪರಿಚಯ ಮಾಡಿಕೊಳ್ಳಲು

ಅನುವು ಮಾಡಿಕೊಟ್ಟರು. ನಂತರ ವ್ಯಾಲಿ ಆಫ್ ಫ್ಲವರ್ಸ್ ಮತ್ತು ಹೇಮಕುಂಡ ಸರೋವರದ ಚಾರಣದ ಬಗ್ಗೆ ಎವರಿಸಿದರು. ಮರುದಿನದ ದೀರ್ಘ ಚಾರಣ ಮನಸ್ಸಿನಲ್ಲೇ ಮೆಲಕು ಹಾಕುತ್ತ ಎಲ್ಲರೂ ಅಂದಿನ ರಾತ್ರಿಯನ್ನು ಕಳೆದೆವು.

ಎರಡನೇ ದಿನ 2015 ಆಗಸ್ಟ್ 24–ಗೋವಿಂದಘಾಟ್ (1900ಮೀ)–ಘಾಂಗ್ರಿಯ(3046 ಮೀ). – 13 ಕಿ.ಮೀ ಕಠಿಣವಾದ 7 ಗಂಟೆ ಚಾರಣ.

ಗೋವಿಂದ ಘಾಟ್‌ನಿಂದ ಪೂಲ್ನಾದವರೆಗೂ ಕಾಂಕ್ರೀಟ್ ರಸ್ತೆಯಿದ್ದು ಇಡೀ 4 ಕಿ.ಮೀ ದೂರವನ್ನು ಜೀಪಿನ ಮೂಲಕವೂ ಪ್ರಯಾಣ ಮಾಡುವ ಸೌಲಭ್ಯವಿದ್ದರೂ ಮಾರ್ಗದರ್ಶಿ ನಡೆಯಲು ಸೂಚಿಸಿದರು. ಚಾರಣಿಗರಿಗೆ ಇದು ಮೊದಲ ದಿನವಾದ್ದರಿಂದ ಹಾಗೂ ಮುಂದಿನ ದಿನಗಳ ಚಾರಣ ಕಠಿಣವಾಗಿರುವುದರಿಂದ ಮೊದಲ ದಿನ ನಡೆದಲ್ಲಿ ನಮ್ಮ ಶರೀರವು ಕಠಿಣ ಚಾರಣಕ್ಕೆ ಹೊಂದಿಕೊಳ್ಳಲು ಸಹಕಾರಿಯಾಗುವುದು ಎಂಬುದು ಮಾರ್ಗದರ್ಶಿಯ ಹಿತವಚನ. ಅದರಂತೆ ಕಾಂಕ್ರೀಟ್ ರಸ್ತೆಯಲ್ಲಿ ಹತ್ತುತ್ತಾ ನಡೆಯತೊಡಗಿದೆವು. ಕೇವಲ 20 ನಿಮಿಷ ನಡೆಯುವುದರಲ್ಲಿ ಎಲ್ಲರಿಗೂ ಆಯಾಸವಾಗತೊಡಗಿತು. ಕಾಡಿನೊಳಗಿನ ಮಣ್ಣಿನ ರಸ್ತೆಯಲ್ಲಿ ಹುಲ್ಲುಗಾವಲಿನ ರಸ್ತೆಯಲ್ಲಿ ಚಾರಣ ಮಾಡುವುದಕ್ಕೂ ಕಾಂಕ್ರೀಟ್ ರಸ್ತೆಯಲ್ಲಿ ಚಾರಣ ಮಾಡುವುದಕ್ಕೂ ಅಪಾರ ವ್ಯತ್ಯಾಸವಿರುವುದು. ಇದು ಈ ಎರಡೂ ಮಾರ್ಗಗಳಲ್ಲಿ ಚಾರಣ ಮಾಡಿರುವ ಚಾರಣಿಗರಿಗೆ ಅರಿವಾಗುವುದು. ಚಾರಣದುದ್ದಕ್ಕೂ ಅಲ್ಲಲ್ಲಿ ನೆರಳಿದ್ದರೂ ಬಹುತೇಕ ಬಿಸಿಲಿನಿಂದ ಕೂಡಿದ್ದು ತೀವ್ರ ಆಯಾಸ ಅನುಭವಿಸಬೇಕಾಯಿತು. ಪೂಲ್ನಾದಿಂದ ಸುಮಾರು 9 ಕಿ.ಮೀ .ಮಾರ್ಗದುದ್ದಕ್ಕೂ ನದಿಯು ಕಂಡುಬರುತ್ತಿತ್ತು. ಈ ಮಾರ್ಗ ಯಾತ್ರಾರ್ಥಿಗಳ ಮಾರ್ಗವಾಗಿತ್ತು. ಪ್ರತಿದಿನ ಈ ಮಾರ್ಗದಲ್ಲಿ ಯಾತ್ರಾರ್ಥಿಗಳು ನಡೆಯುತ್ತಿದ್ದರೂ ಹಾಗೂ ಅಕ್ಕ ಪಕ್ಕದ ಅಂಗಡಿಗಳು ಮಾರಾಟಮಾಡುವ ಪ್ಲಾಸ್ಟಿಕ್ ಕವರಿನಲ್ಲಿರುವ ತಿನಿಸುಗಳು ಇದ್ದರೂ ಮಾರ್ಗವು ಬಹುತೇಕ ಶುಭ್ರವಾಗಿರುವುದನ್ನು ಕಂಡು ಒಂದು ಅಂಗಡಿಯಲ್ಲಿ ನಾನು ಇದರ ಬಗ್ಗೆ ವಿಚಾರಿಸಿದಾಗ ತಿಳಿದು ಬಂದದ್ದೇನೆಂದರೆ ಪ್ರತಿನಿತ್ಯವೂ ಸ್ವಯಂಸೇವಕರು ಮಾರ್ಗವನ್ನು ಗುಡಿಸುವುದರ ಮೂಲಕ ಶುಚಿಯಾಗಿಡುವುದೆಂಬುದು. ಮಾರ್ಗದಲ್ಲಿ ನಾವು ಅಂಗಡಿಗಳು ಕಂಡುಬಂದಾಗಲೆಲ್ಲ ನಿಂತು ನಮ್ಮಲ್ಲಿನ ನೀರನ್ನು ಅಥವಾ ಅಂಗಡಿಯಲ್ಲಿ ದೊರಕುವ ತಂಪು ಪಾನೀಯವನ್ನು ಕುಡಿದು ಚಾರಣ ಮುಂದುವರೆಸುತ್ತಿದ್ದೆವು. ಅರ್ಧಭಾಗ ನಡೆದ ನಂತರ ನದಿಯನ್ನು ಸೇತುವೆ ಮೂಲಕ ದಾಟಿದೆವು. ಅಲ್ಲಿಂದ ನಮ್ಮ ಜೊತೆಗೆ ನದಿ ಇರಲಿಲ್ಲ. ಇಲ್ಲಿಂದ ಸುಮಾರು 5 ಗಂಟೆ ಚಾರಣ ಮಾಡಿದ

ಮೇಲೆ ನಾವು ಒಂದು ಸಮತಟ್ಟಾದ ಜಾಗ ತಲುಪಿದೆವು. ಆಗ ನಮ್ಮ ಮಾರ್ಗದರ್ಶಿ ಘಾಂಗ್ರಿಯ ಪ್ರದೇಶ ಸಮೀಪಿಸುತ್ತಿರುವುದಾಗಿ ತಿಳಿಸಿದರು. ಘಾಂಗ್ರಿಯಾದಲ್ಲಿ ಒಂದು ಸಣ್ಣ ಹೆಲಿಪ್ಯಾಡ್ ಇರುವುದು. ಇದರ ಮತ್ತೊಂದು ಬದಿಯಲ್ಲಿ ಒಂದು ಸಾಲಿನ ಘಾಂಗ್ರಿಯ ಹಳ್ಳಿಯಿದ್ದು ಇದರ ಇಕ್ಕೆಲಗಳಲ್ಲಿ ಸಣ್ಣ ಸಣ್ಣ ಹೋಟೆಲುಗಳು ಹಾಗೂ ವಾಸ್ತವ್ಯಗಳು ಕಾಣಿಸಿದವು. ಇಲ್ಲಿನ ಗುರುದ್ವಾರದಲ್ಲಿ ಹೇಮಕುಂಡ ಸರೋವರದೆಡೆಗೆ ಪಯಣಿಸುವ ಯಾತ್ರಿಕರಿಗೆ ಇಳಿದುಕೊಳ್ಳಲು ಅವಕಾಶವಿದ್ದು ಅಲ್ಲಿ ಅವರಿಗೆ ಉಚಿತ ಊಟ ಹಾಗೂ ಉಳಿದುಕೊಳ್ಳಲು ಸೌಕರ್ಯವಿರುವುದು. ನಮಗೆ ಇಂಡಿಯಾ ಹೈಕ್ ಸಂಸ್ಥೆ ಒಂದು ಸಣ್ಣ ಹೋಟೆಲಿನ ರೂಮುಗಳಲ್ಲಿ ರಾತ್ರಿ ನಿದ್ರಿಸಲು ಅನುಕೂಲ ಮಾಡಿಕೊಟ್ಟಿದ್ದು ಹತ್ತಿರದ ಭೋಜನ ಶಾಲೆಯಲ್ಲಿ ಊಟತಿಂಡಿಗಳ ವ್ಯವಸ್ಥೆ ಮಾಡಿತ್ತು. ನಾವು ಸಂಜೆ ಚಹಾ ಸೇವಿಸಿ ಹೊರಬಂದು ರಸ್ತೆಯುದ್ದಕ್ಕೂ ಅಡ್ಡಾಡಿ ನಂತರ ಅಲ್ಲಿನ ಭೋಜನ ಶಾಲೆಯಲ್ಲಿ ಊಟಮಾಡಿ ರಾತ್ರಿ ಮಲಗಿದೆವು. ಈ ಮಧ್ಯೆ ನನ್ನೊಂದಿಗೆ ಬೆಂಗಳೂರಿನಿಂದ ಬಂದಿದ್ದ ಮೊದಲ ಬಾರಿಗೆ ಚಾರಣಮಾಡಲಿರುವ ಇಬ್ಬರು ಚಾರಣಿಗರ ಕಾಲುಗಳು ವಿಪರೀತ ನೋವನ್ನುಂಟು ಮಾಡಿದ್ದರಿಂದ ನಾನು ಹೊರಬಂದು ಒಬ್ಬ ಎಣ್ಣೆಯಿಂದ ಕಾಲನ್ನು ಮ್ಯಾಸೇಜ್ ಮಾಡುವವನನ್ನು ಕರೆತಂದು ಅವರ ಕಾಲುಗಳಿಗೆ ಮ್ಯಾಸೇಜ್ ಮಾಡಿಸಬೇಕಾಯಿತು.

ಮೂರನೇ ದಿನ 2015 ಆಗಸ್ಟ್ 25 ಘಾಂಗ್ರಿಯ(3046 ಮೀ)ದಿಂದ ವ್ಯಾಲಿ ಆಫ್ ಫ್ಲವರ್ಸ್(3500ಮೀ) ಮತ್ತು ಮರಳಿ ಘಾಂಗ್ರಿಯ – 10 ಕಿ.ಮೀ.

ಮುಂಜಾನೆ 6 ಗಂಟೆಗೆ ಸರಿಯಾಗಿ ಉಪಾಹಾರ ಸೇವಿಸಿ ಮಧ್ಯಾಹ್ನದ ಊಟದ ಬುತ್ತಿಯೊಂದಿಗೆ ಘಾಂಗ್ರಿಯಾದಿಂದ ಹೊರಟೆವು. ಈ ಚಾರಣದ ವೈಶಿಷ್ಟ್ಯವೆಂದರೆ ಚಾರಣಿಗರ ಪೈಕಿ ವೈದ್ಯ ದಂಪತಿಗಳಿದ್ದದ್ದು. ನಮಗಿಂತ ಅವರೇ ಹೆಚ್ಚು ಸಂತೋಷವನ್ನು ಅನುಭವಿಸಿದರು ಎಂದು ಹೇಳಬಹುದು. ನಮಗಾದರೋ ಯಾವಾಗ ಬೇಕಾದರೂ ಯಾವ ಕಡೆಗಾದರೂ ಚಾರಣ ಮಾಡಬಹುದು. ಅವರಿಗೆ ಹಾಗಲ್ಲ. ಇಬ್ಬರಿಗೂ ರಜೆ ಸಿಗಬೇಕು, ಸಮಯವಿರಬೇಕು ಹಾಗೂ ಚಾರಣ ಮಾಡಲು ಒಂದೇ ಮನಸ್ಸಿರಬೇಕು. "ಕೇವಲ ಏಕಮುಖವಾಗಿ ಸುಮಾರು 5 ಕಿ.ಮೀ ಚಾರಣ ಮಾಡಲು ಏಕೆ ಮುಂಜಾನೆ 6 ಗಂಟೆಗೇ ಹೊರಡಬೇಕು?" ಎಂಬ ಪ್ರಶ್ನೆ ಉದ್ಭವಿಸಬಹುದು. ಅದಕ್ಕೆ ಸಮಾಧಾನವೆಂದರೆ ಹೂವಿನ ತೋಟದಲ್ಲಿ ಹೆಚ್ಚಿನ ಸಮಯ ಕಳೆದು ಅನೇಕ ಸುಂದರ ದೃಶ್ಯಗಳನ್ನು ವೀಕ್ಷಿಸಿ ಸಾಧ್ಯವಾದರೆ ಹೂವಿನ ತೋಟದ ಮತ್ತೊಂದು ತುದಿಯನ್ನು ತಲುಪಿ ಅಲ್ಲಿನ ಹಿಮನದಿ

ನೋಡುತ್ತ ತಂಪಾದ ನೀರಿನ ತೊರೆಯಲ್ಲಿ ಕಾಲುಗಳನ್ನು ಇಳಿಬಿಟ್ಟುಕೊಂಡು ಅನುಭವಿಸುವುದಕ್ಕೋಸ್ಕರ ನಾವು ಮುಂಜಾನೆ 6 ಗಂಟೆಗೆ ಹೊರಡಬೇಕು. ಹೂವಿನ ಕಣಿವೆಯಲ್ಲಿನ ದೃಶ್ಯವು ಗಂಟೆ ಗಂಟೆಗೂ ಬದಲಾಗುತ್ತ ತನ್ನಲ್ಲಿನ ವೈವಿಧ್ಯಮಯ ದೃಶ್ಯಗಳನ್ನು ಮಾನವನಿಗೆ ತೋರುತ್ತದೆ. ಇಲ್ಲಿನ ವಿವಿಧ ರೀತಿಯ ಸಸ್ಯ, ಹೂವುಗಳು, ಅವುಗಳ ಬಣ್ಣ, ಸುವಾಸನೆ, ಬಿಂಕ ಎಲ್ಲವನ್ನೂ ವೀಕ್ಷಿಸಿ ಆನಂದಿಸುವಂತಹ ಅವಕಾಶ ನಮಗೆ ಮತ್ತೊಮ್ಮೆ ಸಿಗದೆ ಇರಬಹುದು. ಹಾಗಾಗಿ ನಾವುಗಳು ಆದಷ್ಟು ಸಮಯವನ್ನು ಹೂತೋಟದಲ್ಲೇ ಕಳೆಯಲು ನಿರ್ಧರಿಸಿದ್ದೆವು.

ಘಾಂಗ್ರಿಯದ ಕ್ಯಾಂಪಿನಿಂದ ಹೊರಟ ಕೆಲವೇ ಸಮಯದಲ್ಲಿ ಮಾರ್ಗವು ಎರಡು ಕವಲಾಗಿದ್ದದ್ದನ್ನು ನಾವು ಗಮನಿಸಿದೆವು. ಮಾರ್ಗದರ್ಶಿ ಬಲ ಬದಿಯ ಮಾರ್ಗವು ಹೇಮಕುಂಡ ಸರೋವರದೆಡೆಗೆ ಹೋಗುವುದೆಂದು ತಿಳಿಸಿ ಆ ಮಾರ್ಗದಲ್ಲಿ ನಾವು ಮಾರನೇ ದಿನ ಚಾರಣ ಮಾಡಬೇಕಿದೆಯೆಂದು ವಿವರಿಸಿ ಈಗ ನಾವು ಎಡಕ್ಕೆ ತಿರುಗಿ ಚಾರಣ ಮುಂದುವರೆಸಬೇಕೆಂದು ಸೂಚಿಸಿದರು. ಅದರಂತೆ ನಾವು ನಮ್ಮ ನಡಿಗೆಯನ್ನು ಮುಂದುವರೆಸಿದವು. ಸ್ವಲ್ಪ ದೂರದಲ್ಲಿ ಹೂಕಣಿವೆಯನ್ನು ಪ್ರವೇಶಿಸಲು ಟಿಕೆಟ್ ಕೊಳ್ಳುವ ಕೌಂಟರ್ ಎದುರಾಯಿತು. ನಮ್ಮ ಮಾರ್ಗದರ್ಶಿ ಆಗಲೇ ಟಿಕೆಟ್ ಕೊಂಡಿದ್ದರಿಂದ ನಾವು ಅಲ್ಲಿ ಕಾಯುವ ಅವಶ್ಯಕತೆ ಇರಲಿಲ್ಲವಾಗಿ ನಾವು ಹೂಕಣಿವೆಯನ್ನು ಪ್ರವೇಶಿಸಿ ನಡೆಯತೊಡಗಿದೆವು. ಇಲ್ಲಿ ಮಾರ್ಗವು ಕಿರಿದಾಗತೊಡಗಿ ಕೊನೆಗೆ ಕೇವಲ ಕಾಲುದಾರಿ ಕಾಣತೊಡಗಿತು. ನಮ್ಮ ಕಾಲ್ಬುಡದಲ್ಲೇ ನೀರು ನಿಧಾನವಾಗಿ ಹರಿಯುತ್ತಿದ್ದು ಅಲ್ಲಲ್ಲಿ ಹಿಮದ ಹೆಕ್ಕೆಗಳು ಕಾಣುತ್ತಿದ್ದವು. ವಾತಾವರಣವು ತಂಪಾಗಿದ್ದು ಅಲ್ಲಿನ ಸುಂದರ ದೃಶ್ಯ ನೋಡಲು ಮನಮೋಹಕವಾಗಿತ್ತು. ಮುಂದೆ ಮುಂದೆ ಹೋಗುತ್ತಿದ್ದಂತೆ ಜನಗಳು ಹೆಚ್ಚಾಗಿರದೆ ವಿರಳವಾಗತೊಡಗಿದರು. ಇದರಿಂದ ನಮಗೆಲ್ಲರಿಗೂ ಹೂವುಗಳನ್ನು ವಿವರವಾಗಿ ನೋಡಲು ಅನುಕೂಲವಾಯಿತು. ಹೀಗೆ 3 ಕಿ.ಮೀ ನಡೆದ ನಂತರ ನಮ್ಮ ಬಲಕ್ಕೆ ಮಾರ್ಗ ವಿಶಾಲವಾದ ಕಣಿವೆಯೆಡೆಗೆ ತೆರೆದುಕೊಂಡಿತ್ತು. ಇಲ್ಲಿಂದ ಮುಂದೆ ಇಡೀ ಕಣಿವೆ ನೀಲಿ, ಕೆಂಪು, ಹಸಿರು, ಹಳದಿ, ಬಣ್ಣಗಳಿಂದ ಕೂಡಿದ ಹೂವುಗಳಿಂದ ಕೂಡಿದ ನೆಲಹಾಸಿನಂತೆ ಕಂಗೊಳಿಸುತ್ತಿತ್ತು. ಈ ಹೂವಿನ ಕಣಿವೆಯ ಕೆಳ ಭಾಗದಲ್ಲಿ ವೃಕ್ಷಗಳಿಂದ, ಮಧ್ಯದಲ್ಲಿ ಬೂದುಬಣ್ಣದ ಹಾಗೂ ಕಂದು ಬಣ್ಣದ ಮಣ್ಣಿನಿಂದ ಕೂಡಿದ್ದ ಹಾಗೂ ಮೇಲಿನ ಭಾಗದಲ್ಲಿ ಹೊಳೆಯುತ್ತಿರುವ ಹಿಮಗಳಿಂದ ಕೂಡಿದ ಪರ್ವತ ಸುತ್ತುವರೆದಿತ್ತು. ನಾವು ಇಲ್ಲಿಗೆ ಬಂದ ದಿನ ಆಕಾಶ ಶುಭ್ರವಾಗಿದ್ದು ಕಲ್ಪನೆಗೂ ಮೀರಿದ ದೃಶ್ಯಗಳು ನಮ್ಮೆದುರಿಗೆ ತೆರೆದುಕೊಳ್ಳುತ್ತಿದ್ದವು. ಇಲ್ಲಿನ ಹೂವುಗಳನ್ನು ಸುತ್ತುವರೆದು ಕಣಿವೆಯ ಅನೇಕ ದುಂಬಿಗಳು, ಹಾರಾಡುವ ಕೀಟಗಳು ಅಂದ ಮತ್ತಷ್ಟು ಹೆಚ್ಚಿಸಿತ್ತು. ಮತ್ತಷ್ಟು

ದೂರ ನಾವು ನಡೆದ ಮೇಲೆ ನಮಗೆ ಮತ್ತು ಬರಿಸುವಷ್ಟು ಸುಗಂಧಭರಿತ ವಾತಾವರಣ ಎದುರಾಯಿತು. ಇದೀ ಕಣಿವೆಯು 7 ಕಿ.ಮೀ ದೂರದವರೆಗೂ ವ್ಯಾಪಿಸಿದ್ದು ಕೊನೆಯಲ್ಲಿ ಹಿಮನದಿಯ ಹತ್ತಿರದಲ್ಲಿ ಮುಗಿಯುತ್ತಿತ್ತು. ಸಮಯಾಭಾವದಿಂದಾಗಿ ಕಣಿವೆ ತುದಿಯವರೆಗೂ ಹೋಗಲು ಸಾಧ್ಯವಾಗದೆ ಕಾಲುಗಳನ್ನು ನೀರಿನೊಳಗೆ ಇಳಿಬಿಟ್ಟು ಅತ್ಯಂತ ಸುಂದರ ಅನುಭವ ಪಡೆದುಕೊಂಡೆವು. ನಾವು ಚಾರಣ ಮಾಡಿದ ಸಮಯ ಆಗಸ್ಟ್ ತಿಂಗಳಿನಲ್ಲಿ ಕಂಡುಬರುವ ಹೆಸರುಗಳನ್ನು ಮಾರ್ಗದರ್ಶಿಯ ಸಹಾಯದಿಂದ ತಿಳಿದುಕೊಂಡೆವು. ಅವು ಯಾವುವೆಂದರೆ – Meadow Geranium, Snake Foil, Hooked Stick Seed, Himalayan Rose, Blue Poppy, River Anemone, White Leaf Hog Foot and Dog Flowers. Dow. ನಮ್ಮೊಂದಿಗೆ ತಂದಿದ್ದ ಊಟದ ಬುತ್ತಿ ಖಾಲಿ ಮಾಡಿ ಸ್ವಲ್ಪ ವಿಶ್ರಾಂತಿ ನಂತರ ನಮ್ಮ ಮರುಪ್ರಯಾಣವನ್ನು 3 ಗಂಟೆಗೆ ಪ್ರಾರಂಭಿಸಿದೆವು. ಈ ಕಣಿವೆಯಲ್ಲಿ ಕಾಫಿ, ಚಹಾ, ತಿಂಡಿ ತಿನಿಸುಗಳು ಸಿಗುವುದಿಲ್ಲ ಹಾಗೂ ರಾತ್ರಿ ಕ್ಯಾಂಪ್ ಮಾಡುವಹಾಗಿಲ್ಲ. ನಮ್ಮ ಮರು ಪ್ರಯಾಣದ ಸಮಯದಲ್ಲಿ ಸುತ್ತಲಿನ ದೃಶ್ಯಗಳು ಸಮಯದ ವ್ಯತ್ಯಾಸದಿಂದಾಗಿ ಮತ್ತಷ್ಟು ವಿಶಿಷ್ಟ ಹಾಗೂ ಸುಂದರವಾಗಿ ಕಂಡುಬರುತ್ತಿತ್ತು. ಮರಳಿ ಘಾಂಗ್ರಿಯ ಹೋಟೆಲ್ಲನ್ನು ಸಂಜೆ 6 ಗಂಟೆಗೆ ತಲುಪಿದೆವು. ಮಾರನೇ ದಿನದ ಹೇಮಕುಂಡ ಸರೋವರದೆಡೆಗಿನ ಕಠಿಣ ಚಾರಣವನ್ನು ನೆನೆಸಿಕೊಂಡು ರಾತ್ರಿ ಊಟದ ನಂತರ ಮಲಗಿದೆವು.

ನಾಲ್ಕನೇ ದಿನ 2015 ಆಗಸ್ಟ್ 26 ಘಾಂಗ್ರಿಯ(3046 ಮೀ)ದಿಂದ ಹೇಮಕುಂಡ ಸಾಹಿಬ್ ಸರೋವರ(4300ಮೀ) ಮತ್ತು ಮರಳಿ ಘಾಂಗ್ರಿಯ(3046 ಮೀ) 6X2 ಕಿ.ಮೀ ಹಾಗೂ 1300 ಮೀ ಎತ್ತರದ ಕಠಿಣವಾದ 7 ಗಂಟೆಗಳ ಚಾರಣ.

ಇಂದಿನ ನಮ್ಮ ಚಾರಣವು ಅತ್ಯಂತ ಕಠಿಣವಾಗಿದ್ದು ಹಾಗೂ ಮದ್ಯಾಹ್ನ ಇಲ್ಲಿನ ಹವಾಮಾನವು ಇದ್ದಕ್ಕಿದ್ದಂತೆ ಬದಲಾಗಿ ಮಳೆಬರಬಹುದಾದ್ದರಿಂದ ಮಾರ್ಗದರ್ಶಿಯು ನಮಗೆ ಮುಂಜಾನೆ 5 ಗಂಟೆಗೆ ಚಾರಣವನ್ನು ಪ್ರಾರಂಭಿಸಲು ಸೂಚಿಸಿದ್ದರು. ಅಂದರೆ ನಾವು ಮುಂಜಾನೆ 4 ಕ್ಕೆ ಎದ್ದು ತಯಾರಿ ನಡೆಸಬೇಕಿತ್ತು. ಇದಕ್ಕೆ ಸಹಕಾರಿಯಾಗುವಂತೆ ಇಲ್ಲಿನ ಗುರುದ್ವಾರದಲ್ಲಿ ಪ್ರತಿನಿತ್ಯವೂ ಮುಂಜಾನೆ 4ಕ್ಕೆ ಸರಿಯಾಗಿ ಭಜನೆ ಪ್ರಾರಂಭವಾಗುತ್ತಿತ್ತು. ನಮ್ಮಲ್ಲಿ ಹಲವರು 1300 ಮೀ ಎತ್ತರವನ್ನು ಏರಲು ಸಿದ್ಧರಾಗಿರದ ಕಾರಣ ಅವರೆಲ್ಲರೂ ಕುದುರೆಯನ್ನು ಬಳಸಲು ತೀರ್ಮಾನಿಸಿದರು. ಅದರಲ್ಲಿ ನನ್ನ ಜೊತೆ ಬೆಂಗಳೂರಿನಿಂದ ಬಂದಿದ್ದ ಮೂರು ಚಾರಣಿಗರ ಪೈಕಿ ಇಬ್ಬರು ಸೇರಿದ್ದರು. ಪ್ಯಾಕ್ ಉಪಾಹಾರವನ್ನು ಹೋಟೆಲಿನಿಂದ

ಪಡೆದುಕೊಂಡು (ಮಧ್ಯಾಹ್ನದ ಊಟವು ಹೇಮಕುಂಡದಲ್ಲಿನ ಗುರುದ್ವಾರದಲ್ಲಿ ದೊರಕುತ್ತಿತ್ತು) ಒಬ್ಬೊಬ್ಬರಾಗಿ ಕುದುರೆಗಳ ಮೇಲೆ ಹಾಗೂ ಕಾಲ್ನಡಿಗೆಯ ಮೂಲಕ ಹೊರಟೆವು. ನಾನು ನಡೆದೇ ಹೋಗಲು ತೀರ್ಮಾನಿಸಿದ್ದೆ. ಅದರಂತೆ ನಾನು ನನ್ನ ನಡಿಗೆಯನ್ನು ಪ್ರಾರಂಭಿಸಿದೆ. ಮೊದಲಿಗೆ ನನ್ನ ಜೊತೆ ಕೆಲವರು ನಡೆದು ಬರುತ್ತಿದ್ದರು. ಕಾಂಕ್ರೀಟ್ ಮಾರ್ಗವು ಒಂದು ಕಿ.ಮೀ ನಂತರ ಬಲಕ್ಕೆ ಹೊರಳಿ ಮೆಟ್ಟಿಲುಗಳ ಮೂಲಕ ಹಾದು ಹೋಗುತ್ತಿತ್ತು. ಮಾರ್ಗವು ಮೆಟ್ಟಿಲುಗಳಿಂದ ಕೂಡಿದ್ದು ತೀವ್ರ ಆರೋಹಣದಿಂದ ಕೂಡಿತ್ತು. ಅರ್ಧ ಗಂಟೆ ಹತ್ತಿದ ಮೇಲೆ ಬಲಭಾಗದಲ್ಲಿ ಒಂದು ಜಲಪಾತವು ಕಂಡು ಬಂದಿತು. ಅಲ್ಲಿ ಸ್ವಲ್ಪ ವಿಶ್ರಾಂತಿ ಪಡೆದು ನೀರನ್ನು ಕುಡಿದು ಹತ್ತಲು ಪ್ರಾರಂಭಿಸಿದೆ. ಹೀಗೆ ನಿಧಾನವಾಗಿ ಹತ್ತುತ್ತ 2 ಗಂಟೆಗಳ ನಂತರ ನಮ್ಮ ಕೆಳಗೆ ಮರಗಿಡಗಳು ಕಾಣಿಸತೊಡಗಿದೆವು. ಅಂದರೆ ನಾವು ಮರಗಳಿಗಿಂತ ಎತ್ತರದಲ್ಲಿ ನಡೆಯುತ್ತಿರುವುದು ಅರಿವಾಯಿತು. ಮೇಲಿಂದ ನಮಗೆ ವ್ಯಾಲಿ ಆಫ್ ಫ್ಲವರ್ಸ್ ಕಡೆಗಿನ ಮಾರ್ಗವು ಹಾಗೂ ಅಲ್ಲಿ ಹರಿಯುತ್ತಿರುವ ನದಿಯು ಕಾಣಿಸತೊಡಗಿತು. ಹೀಗೆ ಅಲ್ಲಲ್ಲಿ ನಿಂತು ವಿಶ್ರಾಂತಿಯನ್ನು ಪಡೆದುಕೊಂಡು ಒಂದು ಗಂಟೆ ಹತ್ತುತ್ತಾ ಇರುವಾಗ ನಮ್ಮಲ್ಲಿ ಅನೇಕರಿಗೆ ಉಸಿರಾಟವು ಕಷ್ಟವಾಗತೊಡಗಿತು. ಈ ಪ್ರದೇಶದಲ್ಲಿ ಆಕ್ಸಿಜನ್ ವಿರಳವಾಗತೊಡಗಿತ್ತು. ನನಗೂ ಇದು ಅನುಭವಕ್ಕೆ ಬಂದರೂ ಅಷ್ಟೇನೂ ಕಷ್ಟವಾಗಲಿಲ್ಲ. ಏಕೆಂದರೆ ನನ್ನ ಬಳಿ ಕರ್ಪೂರವಿತ್ತು. ಅದನ್ನು ಆಗಾಗ್ಗೆ ಮೂಸುತ್ತಿದ್ದದ್ದರಿಂದ ಅದರ ಮೂಲಕ ಆಮ್ಲಜನಕ ಸಿಗುತ್ತಿತ್ತು. ಅರ್ಧ ಗಂಟೆಯ ಆರೋಹಣದ ನಂತರ ನಮಗೆ ಕರಗಿ ಬರುತ್ತಿರುವ ಹಿಮನದಿಯು ಗೋಚರವಾಯಿತು. ಅಲ್ಲೇ ಸ್ವಲ್ಪಹೊತ್ತು ವಿಶ್ರಾಂತಿಯನ್ನು ತೆಗೆದುಕೊಂಡು ನಿಧಾನವಾಗಿ ಟ್ರೆಕ್ಕಿಂಗ್ ಪೋಲ್ ಸಹಾಯದಿಂದ ನಿಧಾನವಾಗಿ ಹತ್ತುತ್ತಿದ್ದೆ. ಇದೇ ರೀತಿ ಅನೇಕರು ಹತ್ತುತ್ತಿದ್ದರು ಹಾಗೂ ಮೇಲಿಂದ ಮುಂಜಾನ ಇಳಿಯಲು ಪ್ರಾರಂಭಿಸಿದವರು ನಿಧಾನವಾಗಿ ನಮ್ಮ ಮುಂದೆ ಹೋಗುತ್ತಿದ್ದರು. ನಾವುಗಳು ಯಥೇಚ್ಚವಾಗಿ ವಿಶ್ರಾಂತಿಯನ್ನು ಅಲ್ಲಲ್ಲೇ ಪಡೆಯುತ್ತಿದ್ದೆವು. ಆದರೆ ಎಲ್ಲೂ ಕುಳಿತುಕೊಳ್ಳುವಹಾಗಿರಲಿಲ್ಲ ಏಕೆಂದರೆ ಹಾಗೆ ಕುಳಿತುಕೊಂಡರೆ ನಮ್ಮ ಕಾಲಿನ ಮಾಂಸಖಂಡಗಳು ಸೆಟೆದುಕೊಳ್ಳುವ ಸಾಧ್ಯತೆಯಿತ್ತು ಹಾಗೂ ಅಂತಹ ಸಂದರ್ಭದಲ್ಲಿ ನಡೆಯುವುದು ತೀವ್ರ ಕಷ್ಟವಾಗುತ್ತಿತ್ತು. ಅನೇಕ ಕಡೆಗಳಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತ ಮತ್ತೊಂದು ಗಂಟೆ ಹತ್ತಿದ ನಂತರ ನಾನು ಹೇಮಕುಂಡ ಗುರುದ್ವಾರವನ್ನು ತಲುಪಿದೆ. ಮುಂದೆ ಇರುವುದೇ ಹೇಮಕುಂಡ ಸರೋವರ. ಮತ್ತೊಂದು ದಡದಲ್ಲಿ ಹಿಮಾವೃತವಾದ ಹೇಮಕುಂಡ ಪರ್ವತವು ಕಾಣುತ್ತಿತ್ತು ಹಾಗೂ ಇಲ್ಲಿಂದ ಹಿಮ ಕರಗಿ ಸಣ್ಣ ಸಣ್ಣ ಝರಿಗಳಾಗಿ ಹರಿದು ಬಂದು ಸರೋವರವನ್ನು ಕೂಡಿಕೊಳ್ಳುತ್ತಿತ್ತು. ಸರೋವರದ ಕಲ್ಲು ಬೆಂಚುಗಳ

ಮೇಲೆ ಅನೇಕರು ಕುಳಿತು ಆಯಾಸ ಪರಿಹರಿಸಿಕೊಳ್ಳುತ್ತಿದ್ದರು. ನಾನೂ ಕೂಡ ಅಲ್ಲೇ ಕುಳಿತೆ. ಸ್ವಲ್ಪ ಸಮಯದ ನಂತರ ಸರೋವರ ಸಮೀಪಿಸಿ ತಣ್ಣಗೆ ಕೊರೆಯುತ್ತಿದ್ದ ನೀರಿನಲ್ಲಿ ನನ್ನ ಕೈ ಕಾಲು ಮುಖವನ್ನು ತೊಳೆದುಕೊಂಡೆ. ಸ್ನಾನಮಾಡುವ ಮನಸ್ಸಿರಲಿಲ್ಲ. ಅಷ್ಟುಹೊತ್ತಿಗೆ ಸಮಯ ಒಂದು ಗಂಟೆಯಾಗಿತ್ತು. ನಂತರ ನಾನು ಗುರುದ್ವಾರದೊಳಗೆ ಹೋಗಿ ಅಲ್ಲಿ ಕೊಡುತ್ತಿದ್ದ ಬಿಸಿ ಬಿಸಿ ಚಹಾ ಹಾಗೂ ಖಿಚಡಿ ಸೇವಿಸಿ ಹೊರಬಂದು ಹತ್ತಿರದಲ್ಲಿದ್ದ ಲಕ್ಷ್ಮಣ ಮಂದಿರ ದರ್ಶನಮಾಡಿಕೊಂಡು ಅಲ್ಲಿನ ಪ್ರಶಾಂತವಾದ ಹಾಗೂ ಸುಂದರವಾದ ಪ್ರಕೃತಿಯನ್ನು ಮನದಣಿಯೆ ವೀಕ್ಷಿಸಿ ಅಲ್ಲಿಂದ ಮಧ್ಯಾಹ್ನ 2 ಗಂಟೆಗೆ ನಿಧಾನವಾಗಿ ಇಳಿಯಲು ತೊಡಗಿದೆ. ಮೇಲೆ ಹತ್ತುವುದಕ್ಕಿಂತ ಕೆಳಗಿಳಿಯುವುದು ತೀವ್ರ ಕಷ್ಟದ್ದಾಗಿದ್ದು ಪಾದ ಹಾಗೂ ಮಂಡಿಗಳಿಗೆ ತೀವ್ರ ಒತ್ತಡವುಂಟಾಗುವುದು ಹಾಗೂ ಹಾಗೂ ಆಯಾಸವೂ ಅಧಿಕವಾಗುವುದು. ನಮ್ಮ ಬ್ಯಾಚಿನಲ್ಲಿ ಹತ್ತಿ ಬಂದ ಚಾರಣಿಗರೆಲ್ಲರೂ ತಮಗೆ ಅನುಕೂಲವಾಗುವ ಸಮಯದಲ್ಲಿ ಇಳಿದು ಬರುತ್ತಿದ್ದರು. ಈ ಚಾರಣಕ್ಕೆ ಮಾರ್ಗದರ್ಶಿ ಅಗತ್ಯವಿರದೇ ಇದ್ದದ್ದರಿಂದ ನಮ್ಮ ಸಮಯ ನೋಡಿಕೊಂಡು ಇಳಿಯತೊಡಗಿದೆವು. ಘಾಂಗ್ರಿಯಾ ಹೋಟೆಲಿಗೆ ನಮ್ಮಲ್ಲಿನ ಯುವ ಚಾರಣಿಗರು 5 ಗಂಟೆಗೆಲ್ಲ ಬಂದಿದ್ದರೂ ನಾನು ಅಲ್ಲಿಗೆ ತಲಪುವ ಹೊತ್ತಿಗೆ ಸಂಜೆ 7 ಗಂಟೆಯಾಗಿತ್ತು. ಅಲ್ಲಿನ ಹೋಟಲಲ್ಲಿ ಬಿಸಿ ಬಿಸಿ ಚಹಾ ಸೇವಿಸಿ ನಮ್ಮ ಕೋಣೆಗಳಲ್ಲಿ ಒಂದು ಗಂಟೆ ಮಲಗಿ ಆಯಾಸ ಪರಿಹರಿಸಿಕೊಂಡವು. ನಂತರ ರಾತ್ರಿ 8 ಗಂಟೆಗೆ ಊಟಮುಗಿಸಿ ಮಲಗಿದೆವು.

ಐದನೇ ದಿನ 2015 ಆಗಸ್ಟ್ 27– ಘಾಂಗ್ರಿಯ(3046)– ಗೋವಿಂದಘಾಟ್ (1900ಮೀ) 13 ಕಿ.ಮೀ ಕಠಿಣವಾದ 7 ಗಂಟೆ ಚಾರಣ.

ಈ ದಿನದ ಚಾರಣ ನಮ್ಮ ಕಾರ್ಯಕ್ರಮದ ಕೊನೆಯ ದಿನದ ಚಾರಣವಾಗಿದ್ದು ಮೊದಲದಿನ ನಾವು ಗೋವಿಂದ ಘಾಟ್–ಘಾಂಗ್ರಿಯದೆಡೆಗೆ ಬಂದ ಹಾದಿಯಾಗಿತ್ತು. ಮಾರ್ಗವು ಅವರೋಹಣದಿಂದ ಅನುಕೂಲಕ್ಕೆ ತಕ್ಕಂತೆ ಕೂಡಿದ್ದು ಎಲ್ಲರೂ ಮುಂಜಾನೆ 8 ಗಂಟೆಗೆ ಹೊರಟು ನಿಧಾನವಾಗಿ ಇಳಿಯುತ್ತ ನಮ್ಮ ಚಾರಣದ ಅನುಭವಗಳನ್ನು ಮೆಲುಕುಹಾಕುತ್ತ ಮಧ್ಯಾಹ್ನ 2 ಗಂಟೆಗೆ ಗೋವಿಂದ ಘಾಟ್ ತಲುಪಿದವು. ಅಲ್ಲಿ ಹೋಟೆಲಿನ ಊಟಮಾಡಿದ ನಂತರ ನಮ್ಮ ಲಗ್ಗೇಜ್ ಪಡೆದುಕೊಂಡು ಕೆಲವರು 25 ಕಿ.ಮೀ ದೂರದ ಬದರಿನಾಥ್ ಕ್ಷೇತ್ರದೆಡೆಗೆ ಪ್ರತ್ಯೇಕ ವಾಹನದಲ್ಲಿ ಹೊರಟರು. ನಾನು ಹಾಗೂ 8 ಚಾರಣಿಗರು ಒಂದು ಟೆಂಪೋ ಟ್ರಾವೆಲರ್‌ನಲ್ಲಿ 4 ಗಂಟೆಗೆ ಜೋಷಿಮಠದೆಡೆಗೆ ಹೊರಟೆವು, ಜೋಶಿಮಠದ ಒಂದು ಹೋಮ್ ಸ್ಟೇದಲ್ಲಿ ರಾತ್ರ ಮಲಗಿದ್ದು ಅಲ್ಲಿಂದ ಮಾರನೆ

ದಿನ ಮುಂಜಾನೆ ಅದೇ ವಾಹನದಲ್ಲಿ ಹರಿದ್ವಾರದೆಡೆಗೆ ಪಯಣಿಸಿದೆವು. ಹರಿದ್ವಾರ ರಾತ್ರಿ 7ಕ್ಕೆ ತಲುಪಿ ನಂತರ ನಾನು ಮೊದಲೇ ರಿಸರ್ವ್ ಮಾಡಿದ್ದ ರೈಲ್ವೆ ರಿಟೈರಿಂಗ್ ರೂಮಿನಲ್ಲಿ ಮಲಗಿದ್ದು ರಾತ್ರಿ 11.30ರ ನವದೆಹಲಿಗೆ ಹೋಗುವ ರೈಲಿನಲ್ಲಿ ಹೊರಟು ಮುಂಜಾನೆ 5.30ಕ್ಕೆ ದೆಹಲಿ ತಲುಪಿ ಅಲ್ಲೂ ಕೂಡ ಮೊದಲೇ ರಿಸರ್ವ್ ಮಾಡಿದ್ದ ರೈಲ್ವೆ ರಿಟೈರಿಂಗ್ ರೂಮಿನಲ್ಲಿ ಸ್ನಾನ ಮಾಡಿಕೊಂಡು 10.30ರ ವಿಮಾನದಲ್ಲಿ ಬೆಂಗಳೂರಿಗೆ ಹೊರಟೆ. ಇಲ್ಲಿಗೆ ನನ್ನ ಕನಸಿನ ಚಾರಣವಾದ ವ್ಯಾಲಿ ಆಫ್ ಫ್ಲವರ್ಸ್ ಹಾಗೂ ಹೇಮಕುಂಡ ಸಾಹಿಬ್ ಸರೋವರ ಚಾರಣ ತೃಪ್ತಿಕರವಾಗಿ ಮುಗಿಯಿತು.

ಹಿಮಾಚಲ ಪ್ರದೇಶದಲ್ಲಿನ ಹಂಪ್ಟಾ ಪಾಸ್

ಹಿಮಾಲಯದಲ್ಲಿನ ಹಂಪ್ಟಾ ಪಾಸ್ ಒಂದು ಮಹತ್ವಪೂರ್ಣ ಸಿನಿಮೀಯವಾದ ಮಾರ್ಗವೆಂದರೆ ತಪ್ಪಾಗಲಾರದು. ಈ ಚಾರಣದ ಪ್ರಾರಂಭದಿಂದಲೂ ಚಾರಣಮಾರ್ಗ ತನ್ನ ಭೂಪ್ರದೇಶದಲ್ಲಿ ಚಾರಣದ ಪರಾಕಾಷ್ಠತೆಗೆ ಪೀಠಿಕೆಯನ್ನು ಹಾಕುತ್ತದೆ. ಈ ಪೀಠಿಕೆಯ ಮೊದಲನೇ ಕ್ಯಾಂಪ್ ಸೈಟ್ ಆದ ಜೋಬ್ರದಿಂದಲೇ ಪ್ರಾರಂಭವಾಗುವುದು. ಎರಡನೇ ಕ್ಯಾಂಪ್ ಸೈಟ್ ಜ್ವಾರ – ಒಂದು ಕಾಡುಹೂವುಗಳಿಂದ ಕೂಡಿದ ಹುಲ್ಲುಗಾವಲು – ಇದು ಕಣಿವೆ ಪ್ರವೇಶಿಸುವ ಜಾಗ. ಅನಂತರ ನಮಗೆ ಎದುರಾಗುವುದೇ ಬಾಲು–ಕ–ಗೇರ ಹಾಗೂ ಶಿಯಾ ಗೋರು –ಮರುಭೂಮಿಯಲ್ಲಿನ ಓಯಸಿಸ್. ಐದು ದಿನಗಳ ಚಾರಣ ಕ್ಷಣ ಕ್ಷಣಕ್ಕೂ ವೇಗದಿಂದ ಬದಲಾಗುವ ಪ್ರಕೃತಿ ಸೌಂದರ್ಯದಿಂದ ಕೂಡಿದ್ದು ಚಾರಣಿಗನಿಗೆ ಉಸಿರುಗಟ್ಟುವಂತಾಗುತ್ತದೆ. ಈ ರೀತಿಯ ಅನುಭವ ಆಗುವುದು ಏಕೆಂದರೆ ಹಂಪ್ಟಾ ಕಣಿವೆ ಇಕ್ಕಟ್ಟಾದದ್ದು. ಈ ಕಣಿವೆ ಒಂದು ರೀತಿ ಕೊಳವೆಯಾಕಾರದಲ್ಲಿದ್ದು ಈ ಆಕಾರ ಚಾರಣದ ಕಡೆಯ ಕ್ಯಾಂಪ್ ಛಾತ್ರುವರೆಗೂ ಇರುವುದು. ಅಂದರೆ ಈ ಇಕ್ಕಟ್ಟಿನ ಭೂಪ್ರದೇಶದಲ್ಲಿರುವ ಎಲ್ಲ ಪರಿಸರ ವ್ಯವಸ್ಥೆಯೂ ಹಳ್ಳದಂತಿರುವ ಕಣಿವೆಯಲ್ಲಿ ಸಿಕ್ಕಿಕೊಂಡಿರುವುದು.

ಈಗ ಹಂಪ್ಟಾ ಪಾಸ್ ದಾಟುವ ಪ್ರದೇಶವು ಒಂದು ಕೇಕ್ ಮೇಲಿರುವ ಚೆರಿ ಹಣ್ಣಿನಂತೆ ಇರುವುದು. ಈ ಜಾಡು (ಮಾರ್ಗ) ಹಚ್ಚ ಹಸಿರಾದ ಕುಲ್ಲು ಕಣಿವೆಯಿಂದ ಲಂಬವಾಗಿ ಪರ್ವತದ 14065 ಅಡಿ ಎತ್ತರ ಏರುತ್ತಾ ಸಾಗಿಹೋಗುವುದು. ಈ 14065 ಅಡಿ ಎತ್ತರದ ಸ್ಥಳವೇ ಹಂಪ್ಟಾ ಪಾಸ್. ಈ ಸ್ಥಳವು ಒಂದು ರೀತಿಯ ಪ್ರಕೃತಿ ನಿರ್ಮಿತವಾದ ಬಾಲ್ಕನಿ ಎನ್ನಬಹುದು. ಏಕೆಂದರೆ ಇಲ್ಲಿಂದ ಸುತ್ತಲಿನ ಪ್ರಕೃತಿಯ ವೈವಿಧ್ಯಮಯವಾದ ದೃಶ್ಯಗಳನ್ನು ನೋಡಬಹುದು. ಒಂದೆಡೆ ಲಾಹೌಲ್ ಮರುಭೂಮಿ, ಲಾಹೌಲ್ ಕಣಿವೆ ಹಾಗೂ ಸುತ್ತಲಿನ ಪರ್ವತಗಳನ್ನು ಉಸಿರುಗಟ್ಟುತ್ತಾ ನೋಡಬಹುದು. ಇದೊಂದು ಭೂಪ್ರದೇಶದಲ್ಲಿನ ನಂಬಲಾಗದ ಅನಿರೀಕ್ಷಿತ ಬದಲಾವಣೆ. ಇವೆಲ್ಲ ಅನುಭವಿಸಲು ನೀವು ಕಷ್ಟಪಡಲೇಬೇಕು.

ಹಂಪ್ಟಾ ಪಾಸ್ ದಾಟುವ ದಿನದ ಚಾರಣವು ಬಹಳ ದೂರ ಹಾಗೂ ಆಯಾಸದಿಂದ ಕೂಡಿರುವುದು.

ಈ ಚಾರಣವನ್ನು ನಾನು ಅನಿರೀಕ್ಷಿತವಾಗಿ 2015ರ ಅಗಸ್ಟ್ 2ರಿಂದ 6ರ ವರೆಗೂ ಮಾಡುವ ಸಂದರ್ಭವು ಒದಗಿಬಂತು.

ಹಂಪ್ಟಾ ಪಾಸ್ ಚಾರಣದ ಸಂಕ್ಷಿಪ್ತ ವಿವರಗಳು ಹೀಗಿವೆ

ಮೊದಲನೇ ದಿನ – ಮನಾಲಿಯಿಂದ ಜೋಬ್ರಾ ಹಳ್ಳಿಯೆಡೆಗೆ ಜೀಪಿನಲ್ಲಿ ಪ್ರಯಾಣ – ಜೋಬ್ರಾ ಹಳ್ಳಿಯಿಂದ ಜೋಬ್ರಾ ಕ್ಯಾಂಪ್ ಕಡೆಗೆ 30 ನಿಮಿಷಗಳ ಚಾರಣ
ಎರಡನೇ ದಿನ – ಜೋಬ್ರಾ(9379ಅಡಿ) ಕ್ಯಾಂಪ್‌ನಿಂದ ಜ್ವಾರ (11194ಅಡಿ) – 4 ಘಂಟೆಗಳಲ್ಲಿ 4.5 ಕಿ.ಮೀ ಚಾರಣ
ಮೂರನೇ ದಿನ – ಜ್ವಾರ (11194ಅಡಿ) ಕ್ಯಾಂಪ್‌ನಿಂದ ಬಾಲು–ಕ–ಘೇರಾ(12411ಅಡಿ) – 4 ಘಂಟೆಗಳಲ್ಲಿ 5 ಕಿ.ಮೀ ಚಾರಣ
ನಾಲ್ಕನೇ ದಿನ – ಬಾಲು–ಕ–ಘೇರಾ(12411ಅಡಿ)ದಿಂದ ಹಂಪ್ಟಾ ಪಾಸ್(14065ಅಡಿ) ಮಾರ್ಗವಾಗಿ ಶಿಯಾ ಗೊರೂ(12864ಅಡಿ) – 9 ಘಂಟೆಗಳ 5 ಕಿ.ಮೀ ಚಾರಣ
ಐದನೇ ದಿನ – ಶಿಯಾ ಗೊರೂ(12864ಅಡಿ)ದಿಂದ ಛಾತ್ರು ಕ್ಯಾಂಪ್(10898ಅಡಿ) – 4.5 ಘಂಟೆಗಳ 6 ಕಿ.ಮೀ ಚಾರಣ. ನಂತರ ಚಂದ್ರತಾಲ್ ಸರೋವರಕ್ಕೆ(13940ಅಡಿ) ಜೀಪಿನಲ್ಲಿ ಪಯಣಿಸಿ ಮರಳಿ ಛಾತ್ರು ಕ್ಯಾಂಪ್. (ಇದು ಹವಾಮಾನವು ಸರಿಯಿದ್ದಲ್ಲಿ ಮಾತ್ರ).
ಆರನೇ ದಿನ : ಛಾತ್ರುವಿನಿಂದ ಮನಾಲಿಗೆ ಜೀಪಿನಲ್ಲಿ ಪ್ರಯಾಣ.

ನಾನು ಚಾರಣ ಮಾಡಿದ ಸಮಯದಲ್ಲಿ ನನಗೆ ಸುಂದರವಾದ ಚಂದ್ರತಾಲ್ ಸರೋವರಕ್ಕೆ ಹೋಗಿ ಬರುವ ಬೋನಸ್ ಅವಕಾಶ ಒದಗಿ ಬಂದಿತ್ತು. ಇದು ಎಲ್ಲ ಚಾರಣದ ಸಮಯದಲ್ಲೂ ದೊರಕದೆ ಇರಬಹುದು.

ಮೊದಲನೇ ದಿನ 02.08.2015 – ಮನಾಲಿಯಿಂದ ಜೋಬ್ರಾ ಹಳ್ಳಿಯೆಡೆಗೆ ಜೀಪಿನಲ್ಲಿ ಪ್ರಯಾಣ – ಜೋಬ್ರಾ ಹಳ್ಳಿಯಿಂದ ಜೋಬ್ರಾ ಕ್ಯಾಂಪ್ (9379 ಅಡಿ) ಕಡೆಗೆ 30 ನಿಮಿಷಗಳ ಚಾರಣ.

ಮನಾಲಿಗೆ ನಾನು ಬೆಂಗಳೂರಿನಿಂದ ಜುಲೈ 31ರಂದೇ ವಿಮಾನದ ಮೂಲಕ ದೆಹಲಿಗೆ ತಲುಪಿ ಅಂದು ರಾತ್ರಿ ದೆಹಲಿಯಿಂದ ಮನಾಲಿಗೆ ಬಸ್ಸಿನಲ್ಲಿ ಪಯಣಿಸಿ ಆಗಸ್ಟ್ ಒಂದರಂದು ಮುಂಜಾನೆ 8 ಗಂಟೆಗೆ ಮನಾಲಿ ತಲುಪಿ ಅಲ್ಲಿ

ಮೊದಲೇ ಕಾಯ್ದಿರಿಸಿದ್ದ ಹೋಟೆಲಿಗೆ ಹೋಗಿ ಸ್ನಾನ ಉಪಹಾರ ಸೇವಿಸಿ ಮನಾಲಿ ನಗರ ವೀಕ್ಷಣೆಗೆ ಹೊರಟೆ. ನಂತರ ಮಧ್ಯಾಹ್ನ ಹೋಟೆಲಿಗೆ ಬಂದು ಊಟ ಮಾಡಿ ವಿಶ್ರಾಂತಿ ಪಡೆದೆ. ಮತ್ತೆ ಸಂಜೆಗೆ ಮಾರನೇ ದಿನ ಚಾರಣ ಸಂಸ್ಥೆಯವರು ಮೊದಲೇ ನಿರ್ಧರಿಸಿದ್ದ ಚಾರಣಿಗರೆಲ್ಲರೂ ಸೇರಲಿರುವ ಸ್ಥಳವನ್ನು ಹುಡುಕಿಕೊಂಡು ಹೊರಟೆ. ಅದು ಮನಾಲಿಯ ಉತ್ತರ ದಿಕ್ಕಿನಲ್ಲಿನ ಒಂದು ಅರೆ ಕಾಡಿನ ಪ್ರದೇಶದಲ್ಲಿತ್ತು. ಅದನ್ನು ನೋಡಿಕೊಂಡು ಮರಳಿ ಹೋಟೆಲಿಗೆ ಬಂದು ರಾತ್ರಿ ಊಟದ ನಂತರ ನಿದ್ರಿಸಿದೆ. ಹೀಗೆ ಮಾಡಿದ್ದರಿಂದ ಪ್ರಯಾಣದ ಅಯಾಸವು ಸಂಪೂರ್ಣವಾಗಿ ಹೋಗಿ ನನ್ನ ಶರೀರ ಹಾಗೂ ಮನಸ್ಸು ಮಾರನೇ ದಿನದಿಂದ ಪ್ರಾರಂಭವಾಗಲಿರುವ ಚಾರಣಕ್ಕೆ ಸಿದ್ಧವಾಗತೊಡಗಿತ್ತು. ಮಾರನೇ ದಿನ 2.8.2015ರಂದು ಮುಂಜಾನೆ 7.30ಕ್ಕೆ ಮನಾಲಿಯಲ್ಲಿನ ಜಂಗಲ್ ಲೈನ್ ಕ್ಯಾಂಪ್ ಬಳಿಗೆ ಹೋಟೆಲಿನಿಂದ ನಡೆದೇ ಹೋದೆ. ಅಲ್ಲಿ ಅಗಲೇ ಕೆಲವು ಚಾರಣಿಗರು ಬಂದಿದ್ದರು. ಅವರೆಲ್ಲರ ಪರಿಚಯದ ನಂತರ 7.45ಕ್ಕೆ ಚಾರಣ ಮಾರ್ಗದರ್ಶಿ ಬಂದು ಎಲ್ಲರನ್ನೂ ವಿಶ್ವಾಸದಿಂದ ಮಾತನಾಡಿಸಿದರು. ನಮ್ಮ ಗುಂಪಿನಲ್ಲಿ 12 ಚಾರಣಿಗರಿದ್ದರು. 8 ಗಂಟೆಗೆ ಸರಿಯಾಗಿ ಎಲ್ಲರೂ ಅಲ್ಲಿಂದ ಮೊದಲೇ ನಿರ್ಧರಿಸಿದ್ದ ಎರಡು ಜೀಪ್‌ಗಳಲ್ಲಿ ಕುಳಿತು ಜೋಬ್ರಾ ಹಳ್ಳಿಯ ಕಡೆಗೆ ಹೊರಟೆವು. ಕಿರಿದಾದ ಮಾರ್ಗದ ಬಲ ಬದಿಯಲ್ಲಿ ಅಕಾಶವನ್ನು ಮುತ್ತಿಕ್ಕುವಂತಹ ಎತ್ತರದ ಮರಗಳಿದ್ದು ಎಡಬದಿ ಪ್ರಕೃತಿಯನ್ನು ವೀಕ್ಷಿಸಲು ತೆರೆದುಕೊಂಡಿದ್ದು ದೂರದ ಕುಲ್ಲು ಕಣಿವೆ ರಮ್ಯವಾಗಿ ಗೋಚರಿಸುತ್ತಿದ್ದು ವಾತಾವರಣವು ಹಿತವಾಗಿತ್ತು. 20 ನಿಮಿಷಗಳ ಪ್ರಯಾಣದ ನಂತರ ಅಲ್ಲಿಯವರೆಗೂ ನಾವು ಮುಂದೆ ಚಾರಣ ಮಾಡಲಿರುವ ರಾಣಿನಲ್ಲ ಪ್ರದೇಶ ಹಂಪ್ಟಾ ಪಾಸ್‌ನಲ್ಲಿನ ಹಿಮದೊಳಗೆ ಸೇರಿಕೊಂಡು ಅದೃಶ್ಯವಾಗಿತ್ತು, ಅದು ಈಗ ನಮ್ಮೊಂದಿಗೆ ಬರತೊಡಗಿತ್ತು. ಇಲ್ಲಿಂದ 10 ನಿಮಿಷಗಳ ಜೀಪಿನ ಪ್ರಯಾಣದ ನಂತರ ನಾವು ಜೋಬ್ರಾ ಲೈನ್ ಪ್ರಾರಂಭ ಸ್ಥಳ ತಲುಪಿದೆವು. ಇಲ್ಲಿ ನಾವೆಲ್ಲರೂ ಇಳಿದು ನಮ್ಮ ಬ್ಯಾಕ್ ಪ್ಯಾಕ್ ಸಹಿತ 30 ನಿಮಿಷಗಳ ಪೈನ್, ಮ್ಯಾಪೆಲ್, ಹಾಗೂ ಹೊಳೆಯುವ ಬೆಳ್ಳಿ ಬಿರ್ಚ್ ಮಿಶ್ರಣಗಳ ಕಾಡಿನೊಳಗೆ ಪ್ರವೇಶಿಸಿ ನಿಧಾನವಾಗಿ ನಡೆಯತೊಡಗಿದೆವು. ಮತ್ತೆ 20 ನಿಮಿಷಗಳಷ್ಟು ನಡೆದ ನಂತರ ನಮಗೆ ಒಂದು ತಿರುವಿನಲ್ಲಿ ದೊಡ್ಡ ಬಂಡೆ ಕಾಣಿಸಿಕೊಂಡು ಅಲ್ಲಿಂದ ಮುಂದೆ ಹೋದಾಗ ಸಣ್ಣ ಸಣ್ಣ ಬಂಡೆಗಳಿಂದ ಕೂಡಿದ ವಿಶಾಲವಾದ ಹುಲ್ಲುಗಾವಲಿನ ಪ್ರದೇಶದಲ್ಲಿ ನಾಲ್ಕು ಟೆಂಟ್‌ಗಳನ್ನು ಕಂಡೆವು. ಈ ಪ್ರದೇಶವೇ ಜೋಬ್ರಾ ಕ್ಯಾಂಪ್. ಇಷ್ಟರಲ್ಲಿ ಸಮಯವು 11 ಗಂಟೆಯಾಗಿತ್ತು. ಮುಂಜಾನೆಯ ಚಹಾ ಸೇವಿಸಿ ಎಲ್ಲರೂ ನಮ್ಮ ನಮ್ಮ ಟೆಂಟ್‌ಗಳಲ್ಲಿ ಸ್ವಲ್ಪಹೊತ್ತು ವಿಶ್ರಾಂತಿ ಪಡೆದು

ನಂತರ ಸುತ್ತಲಿನ ಪ್ರದೇಶ ವೀಕ್ಷಿಸಿದೆವು. ರಾತ್ರಿ ಊಟದ ನಂತರ ಮಾರನೇ ದಿನದ ಚಾರಣದ ಬಗ್ಗೆ ಮಾರ್ಗದರ್ಶಿ ಎಲ್ಲರಿಗೂ ವಿವರಿಸಿದರು.

ಎರಡನೇ ದಿನ 03.08.2015 – ಜೋಬ್ರಾ(9379ಅಡಿ) ಕ್ಯಾಂಪ್‌ನಿಂದ ಜ್ವಾರ (11194ಅಡಿ) – 4 ಗಂಟೆಗಳಲ್ಲಿ 4.5 ಕಿ.ಮೀ ಚಾರಣ.

ನಾವಿದ್ದ ಜೋಬ್ರಾ ಕ್ಯಾಂಪಿನ ಹುಲ್ಲುಗಾವಲಿನಲ್ಲೇ ಎರಡೂ ಬದಿಗಳಲ್ಲಿ ರಾಣಿ ನದಿ ನಿಧಾನವಾಗಿ ಹರಿಯುತ್ತಿದ್ದು ನದಿಯ ಆಚೆ ದಡಗಳಲ್ಲಿ ಮ್ಯಾಪಲ್ ಮತ್ತು ಪೈನ್ ವೃಕ್ಷಗಳಿದ್ದು ಅದರ ಬದಿಯಲ್ಲಿನ ಹುಲ್ಲುಗಾವಲಿನಲ್ಲಿ ಹಸು ಹಾಗೂ ಕುರಿಗಳು ಹುಲ್ಲನ್ನು ಮೇಯುತ್ತಿರುವುದರ ದೃಶ್ಯ ಕಂಡುಬರುತ್ತಿತ್ತು.

ಜೋಬ್ರಾ ಕ್ಯಾಂಪಿನಿಂದ ಜ್ವಾರ ಕ್ಯಾಂಪ್ ಕಡೆಗೆ ಚಾರಣ ಪ್ರಾರಂಭಿಸಲು ಎರಡು ಮಾರ್ಗಗಳಿವೆ ಎಂದು ಮಾರ್ಗದರ್ಶಿ ತಿಳಿಸಿದರು. ಮೊದಲ ಮಾರ್ಗ ಹುಲ್ಲುಗಾವಲಿನ ಹಾದಿಯಲ್ಲೇ ನಡೆಯುವುದು, ಎರಡನೇ ಮಾರ್ಗ ನಮ್ಮ ಎಡಭಾಗದಲ್ಲಿನ ಗುಡ್ಡ ಹತ್ತಿ ಮುನ್ನಡೆಯುವುದು. ಎರಡನೇ ಮಾರ್ಗದಲ್ಲಿ ನಡೆದರೆ ದೂರ ಕಡಿಮೆಯಾಗಿರುವುದು. ನಾವು ಎರಡನೇ ಮಾರ್ಗವನ್ನೇ ಆಯ್ದುಕೊಂಡು ಗುಡ್ಡವನ್ನು ಹತ್ತಿ ಸಮತಟ್ಟಾದ ಪ್ರದೇಶ ತಲುಪಿದೆವು. ಇಲ್ಲಿ ನದಿ ನಮ್ಮೊಂದಿಗೆ ಹರಿಯುತ್ತಿದ್ದು ಕುಡಿಯುವ ನೀರಿಗೆ ಸಮಸ್ಯೆಯಿರಲಿಲ್ಲ. ಅರ್ಧ ಗಂಟೆ ನಡೆದ ಮೇಲೆ ನಾವು ಚಿಕ ಎಂಬ ಪ್ರದೇಶ ಸಮೀಪಿಸಿದೆವೆಂದು ಮಾರ್ಗದರ್ಶಿ ನಮಗೆ ತಿಳಿಸಿ ಇಲ್ಲಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಿದರು. ಇಲ್ಲಿಂದ ಬಲಕ್ಕೆ ಹೊರಳಿ ನಡೆಯುತ್ತಿದ್ದಂತೆ ದೂರದಲ್ಲಿ ಕೆಲವು ಜಲಪಾತಗಳು ಕಾಣಿಸುತ್ತಿದ್ದವು. ನದಿಯನ್ನು ನಮ್ಮ ಬಲಬದಿಗೆ ಇಟ್ಟುಕೊಂಡು ನಡೆಯಲು ಮಾರ್ಗದರ್ಶಿ ಸೂಚಿಸಿದರು. ಅದರಂತೆ ನಾವು ನಡೆಯತೊಡಗಿದೆವು. ಮೊದಲಿಗೆ ಬಂಡೆಗಳನ್ನು ಹತ್ತುವುದರ ಮೂಲಕ ದಾಟುತ್ತಾ ಹೋಗಬೇಕಿತ್ತು. ನದಿಯ ಬಲಭಾಗದಲ್ಲಿ ಹೂವುಗಳಿರುವ ಸಣ್ಣ ಸಣ್ಣ Rhododendron ಗಿಡಗಳು ಪರ್ವತದ ತಳಭಾಗ ಹಾಗೂ ಮಧ್ಯ ಭಾಗಗಳಲ್ಲಿ ಹೇರಳವಾಗಿ ಕಂಡುಬರುತ್ತಿದ್ದುದಲ್ಲದೆ ತುದಿಯ ಭಾಗದಲ್ಲಿ ಬೆಳ್ಳಿಯ ಬಿರ್ಚ್ ಮರಗಳನ್ನು ಗಮನಿಸಿದೆವು. ಇಲ್ಲಿಂದ ಹಿಂದಿರುಗಿ ನೋಡಿದಾಗ ನಮಗೆ ಹಿಮಾಚ್ಛಾದಿತ ದೌಲಾಧರ್ ಪರ್ವತ ಶ್ರೇಣಿ ಕಾಣಿಸುತ್ತಿತ್ತು. ಇಲ್ಲಿಂದ ಸ್ವಲ್ಪ ದೂರ ನಡೆದ ನಂತರ ನಮ್ಮ ಎಡಭಾಗದಲ್ಲಿ ಒಂದು ಜಲಪಾತವಿರುವುದನ್ನು ಗಮನಿಸಿ ಮಾರ್ಗದರ್ಶಿ ಸೂಚಿಸಿದಂತೆ ಇಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನೀರನ್ನು ಕುಡಿದು ನಮ್ಮ ನಡಿಗೆ ಮುಂದುವರೆಸಿದೆವು. ಇಲ್ಲಿಂದ ಬಲಭಾಗಕ್ಕೆ ತಿರುಗಿ ರಾಣಿ ನದಿಯೆಡೆಗೆ ನಡೆಯತೊಡಗಿದೆವು. ನದಿಯಲ್ಲಿ ದೊಡ್ಡ ದೊಡ್ಡ ಬಂಡೆಗಳಿದ್ದವು. ಮಾರ್ಗದರ್ಶಿ ನಮಗೆಲ್ಲರಿಗೂ ಶೂ ಕಳಚಿ

ಬಂಡೆ ದಾಟುವಂತೆ ಸೂಚಿಸಿದರು. ಕೆಲವರಿಗೆ ಮಾರ್ಗದರ್ಶಿ ಕೈಹಿಡಿದು ಬಂಡೆಗಳನ್ನು ದಾಟಲು ಸಹಾಯ ಮಾಡಿದರು. ಹಾಗೆ ಮಾರ್ಗದರ್ಶಿಯ ಸಹಾಯ ಪಡೆದವರಲ್ಲಿ ನಾನೂ ಒಬ್ಬನಾಗಿದ್ದೆ. ನದಿಯಲ್ಲಿನ ನೀರು ನಾವು ಅಂದುಕೊಂಡಂತೆ ವಿಪರೀತವಾಗಿ ತಣ್ಣಗಿತ್ತು. ಇಲ್ಲಿಂದ ಅರ್ಧ ಗಂಟೆ ನಡೆದ ಮೇಲೆ ನಾವು ಎರಡೂ ಬದಿಯಲ್ಲಿರುವ ಬಂಡೆಗಳ ಗೋಡೆಗಳ ಮಧ್ಯದಲ್ಲಿನ ಕಿರಿದಾದ ಮಾರ್ಗ ಪ್ರವೇಶಿಸಿದೆವು. ಈ ಪ್ರದೇಶವು ನಮ್ಮ ಇಂದಿನ ಚಾರಣದ ಮಧ್ಯಭಾಗವಾಗಿತ್ತು. ನಮ್ಮ ಮುಂದಿನ ಜ್ವಾರ ಕ್ಯಾಂಪ್ ತಲುಪಲು ನಾವು ಈಗ ನಡೆದು ಬಂದಷ್ಟೇ ದೂರ ಮಾರ್ಗ ಕ್ರಮಿಸಬೇಕಿತ್ತು. ಈಗಾಗಲೇ ಸಮಯ 12 ಗಂಟೆಯಾಗಿತ್ತು. ಇಲ್ಲಿಂದ ಬಹು ದೂರ ನಡೆದ ನಂತರ ಕಣಿವೆಯ ಒಂದೆಡೆ ಬೆಟ್ಟಗಳಿಂದ ಕೂಡಿದ್ದು ಮತ್ತೊಂದೆಡೆ ಕೆಳಗೆ ರಾಣಿ ನದಿಯು ಹರಿಯುತ್ತಿತ್ತು. ಇಲ್ಲಿಂದ ನದಿ ದಾಟಿದ ನಂತರ ಜ್ವಾರ ಕ್ಯಾಂಪ್ ಬಳಿ ಬಂದೆವು. ಇಲ್ಲಿನ ದೃಶ್ಯವು ನಮಗೆಲ್ಲರಿಗೂ ದಂಗುಬಡಿಸುವಷ್ಟು ಮನೋಹರವಾಗಿತ್ತು.

ಜ್ವಾರ ಪ್ರದೇಶವನ್ನು ಬಹಳ ದೂರದಿಂದಲೇ ಗುರುತಿಸಬಹುದು. ಕಾರಣ ಅಲ್ಲಿನ ಸಣ್ಣ ಸಣ್ಣ ಜಲಪಾತಗಳು ಪರ್ವತದಲ್ಲಿನ ಕೊರಕುಗಳಿಂದ ಹೊರಬರುತ್ತಿರುವ ಹಿಮಕರಗಿದ ನೀರು. ಕ್ಯಾಂಪ್ ಹತ್ತಿರಕ್ಕೆ ಬರುತ್ತಿದ್ದಂತೆ ನಾವು ಎಷ್ಟು ದೂರ ಕಣ್ಣು ಹಾಯಿಸಿದರೂ ಎಲ್ಲೆಡೆ ಬಣ್ಣ ಬಣ್ಣದ ಹೂವುಗಳಿಂದ ಕೂಡಿದ ಸ್ವರ್ಗ. ಹಾಗಾಗಿ ಈ ಪ್ರದೇಶ ಹಿಮಾಚಲ ಪ್ರದೇಶದ Valley of Flowers ಎಂದೇ ಎಲ್ಲರೂ ಗುರುತಿಸುತ್ತಾರೆ. ಪ್ರತಿ ವರ್ಷವೂ ಜುಲೈ ಹಾಗೂ ಆಗಸ್ಟ್ ತಿಂಗಳಿನಲ್ಲಿ ಬಣ್ಣ ಬಣ್ಣದ ಹೂವುಗಳು ಅರಳುತ್ತವೆ. ನಾವು ಆಗಸ್ಟ್ ತಿಂಗಳಿನ ಮೊದಲ ವಾರದಲ್ಲೇ ಈ ಪ್ರದೇಶಕ್ಕೆ ಬಂದಿದ್ದು ನಮಗೆ ಎಲ್ಲ ಹೂವುಗಳು ಅರಳಿರುವ ದೃಶ್ಯವು ಕಂಡು ಬಂದಿದ್ದು ನಮ್ಮ ಸೌಭಾಗ್ಯವೆಂದೇ ನಾನು ಭಾವಿಸಿದೆ. ಈ ಪ್ರದೇಶದ ನೆಲದಲ್ಲಿನ ಬಣ್ಣಗಳು ಬದಲಾಯಿಸುತ್ತಿರುವುದು. ನಾನು ಕಂಡ ಕೆಲವು ಬಣ್ಣಗಳೆಂದರೆ Purple, Pink ಹಾಗೂ Yellow. ಇಡೀ ಪ್ರದೇಶ ಈ ಮೂರು ಬಣ್ಣಗಳಿಂದ ಆವೃತವಾಗಿತ್ತು. ನಮ್ಮ ಟೆಂಟ್ ಕೂಡ ಈ ಬಣ್ಣಗಳ ಹೂವುಗಳಿಂದ ಸುತ್ತುವರೆದಿತ್ತು. ನಮ್ಮ ಮಾರ್ಗದರ್ಶಿ ಇಲ್ಲಿನ ಹೂವುಗಳ ಹೆಸರನ್ನು ನಮಗೆಲ್ಲರಿಗೂ ತಿಳಿಸಿದರು. ಅವರ ಪ್ರಕಾರ ನಾವು ನೋಡಿದ ಹೂವುಗಳೆಂದರೆ yellow Marigolds, Himalayan Blue Poppy, Pink Hill Geranium, Himalayan Primrose and Himalayan Windflower. ನಮ್ಮ ಕ್ಯಾಂಪ್ ಇರುವ ಕಣಿವೆ ಕಿರಿದಾಗಿದ್ದರೂ ಇಲ್ಲಿನ ಜಲಪಾತಗಳು, ಬಣ್ಣ ಬಣ್ಣದ ಹೂವಿನ ಹಾಸಿಗೆಗಳು ಕಣಿವೆಯನ್ನು ವಿಶಾಲವನ್ನಾಗಿಸಿದ್ದು ನಮ್ಮ ಮನಸ್ಸಿಗೆ ಮುದ ತಂದುಕೊಟ್ಟಿತ್ತು. ಈ ಭಾಗದ ರಾಣಿ ನದಿ ನಮ್ಮ ಹಿಂದಿನ ಕ್ಯಾಂಪ್ ಬಳಿ ರಭಸವಾಗಿ ಹರಿಯುತ್ತಿದ್ದಂತೆ ಇರದೆ

ಇಲ್ಲಿ ನದಿಯು ಅನೇಕ ಭಾಗಗಳಾಗಿ ನಿಧಾನವಾಗಿ ಹರಿಯುತ್ತಿತ್ತು. ಸಮಯ ಕಳೆದದ್ದೇ ನಮಗೆ ಅರಿವಾಗಲಿಲ್ಲ. ರಾತ್ರಿ ಟೆಂಟಿನೊಳಗೆ ಮಲಗಿದ್ದಾಗಲೂ ನಮಗೆ ಸುಗಂಧಭರಿತ ಸುವಾಸನೆ ಪರಿಮಳದ ಅನುಭವವಾಗುತ್ತಿತ್ತು. ಈ ಸುಂದರವಾದ ವಾತಾವರಣದಲ್ಲಿ ನಾವೆಲ್ಲರೂ ರಾತ್ರಿ ಕಳೆದು ಮುಂಜಾನೆ ಮಾರನೇ ದಿನದ ಚಾರಣಕ್ಕೆ ಸಿದ್ಧರಾಗತೊಡಗಿದೆವು.

ಮೂರನೇ ದಿನ 04.08.2015 – ಜ್ವಾರ (11194ಅಡಿ) ಕ್ಯಾಂಪ್‌ನಿಂದ ಬಾಲು-ಕ-ಘೇರಾ(12411ಅಡಿ) – 4 ಗಂಟೆಗಳಲ್ಲಿ 5 ಕಿ.ಮೀ ಚಾರಣ.

ಜ್ವಾರಾ ಕ್ಯಾಂಪಿನಿಂದ ರಾಣಿನದಿಯ ಪಕ್ಕದಲ್ಲೇ ನಡೆಯುತ್ತ ಒಂದು ಆಯತಾಕಾರದ (Rectangular) ಕಣಿವೆ ಪ್ರವೇಶಿಸಿದೆವು. ಮಾರ್ಗದಲ್ಲಿ ನಮಗೆ purple, yellow, pink ಬಣ್ಣದ ಹೂವುಗಳುಳ್ಳ ಗಿಡಗಳು ಎಲ್ಲೆಲ್ಲೂ ಕಾಣಿಸತೊಡಗಿತು. ಹಿಂದೆ ಕಾಣಿಸುತ್ತಿದ್ದ ಮರಗಳು ಇಲ್ಲಿಂದ ಇಲ್ಲವಾಯಿತು. ಈ ಕಣಿವೆ ದಾಟಲು ನಾವು ಅರ್ಧ ಗಂಟೆ ನಡೆಯಬೇಕಿತ್ತು.

ಇಲ್ಲಿಂದ ರಾಣಿನದಿಯ ಪಕ್ಕದಲ್ಲೇ ನಡೆಯುತ್ತಾ ಇಲ್ಲಿಯವರೆಗಿನ ಅನುಭವಗಳನ್ನು ಮೆಲುಕು ಹಾಕತೊಡಗಿದೆವು. ಹೀಗೆ ಮುಂದೆ ನಡೆಯುತ್ತ ಮಾರ್ಗ ಸಮತಟ್ಟಾಗಿದ್ದು ನಡಿಗೆ ಸುಲಭವಾಗತೊಡಗಿತು. ನಾವು ಛೋಟಾ ಬಾಲು-ಕ-ಘೇರ ಪ್ರದೇಶ ತಲುಪಿ ಅಲ್ಲಿ ಡ್ರೈಫ್ರೂಟ್ಸ್ ತಿಂದು ಸ್ವಲ್ಪ ವಿಶ್ರಾಂತಿ ನಂತರ ನದಿ ಪಕ್ಕದಲ್ಲೇ ನಡೆಯುತ್ತ ಸಣ್ಣ ಸಣ್ಣ ತೊರೆ ದಾಟುತ್ತ ಮಧ್ಯದಲ್ಲಿ ಸಿಗುವ ಬಂಡೆಗಳ ಮೇಲೆ ಹಾರುತ್ತ ಕೆಲವೆಡೆ ಎತ್ತರದ ಬಂಡೆ ದಾಟಲು ಮಾರ್ಗದರ್ಶಿ ಸಹಾಯ ಪಡೆದುಕೊಂಡು ಮುಂದುವರೆದು ಮರಳಿನ ಹಾಸಿಗೆ – ಬಾಲು-ಕ-ಘೇರಾ ಕ್ಯಾಂಪನ್ನು ತಲುಪಿದೆವು. ನಮ್ಮ ಕ್ಯಾಂಪಿನ ಹಿಂಭಾಗದಲ್ಲಿ ನಾವು ಮಾರನೇ ದಿನ ಹಂಪ್ಟಾ ಪಾಸ್ ಕಡೆಗೆ ಹೋಗಲಿರುವ ಮಾರ್ಗವು ಗೋಚರಿಸುತ್ತಿತ್ತು. ಇಲ್ಲಿಂದ ಸಂಜೆಯ ಸಮಯದಲ್ಲಿನ ಹನುಮಾನ್ ಟಿಬ್ಬ ಶಿಖರದ ಹಿನ್ನೆಲೆಯಲ್ಲಿನ ಸೂರ್ಯಾಸ್ತವನ್ನು ವೀಕ್ಷಿಸಲು ನಮಗೆ ಅವಕಾಶ ದೊರಕಿತು. ಈಗ ನಾವು 12500 ಅಡಿ ಎತ್ತರದ ಪ್ರದೇಶದಲ್ಲಿ ಇದ್ದೆವು.

ನದಿಯ ದಡದಲ್ಲಿ ಕ್ಯಾಂಪಿನಲ್ಲಿ ದಿನ ಕಳೆಯುವುದೇ ಒಂದು ರೋಚಕ ಅನುಭವ. ಬಾಲು-ಕ-ಘೇರಾದಲ್ಲಿ ರಾಣಿ ನದಿಯು ಅನೇಕ ಶಾಖೆಗಳಾಗಿ ಹರಿದು ಹಿಂದಿನ ಕ್ಯಾಂಪಿಗಿಂತ ಭಿನ್ನವಾಗಿ ತೋರುತ್ತಿದ್ದು ನೀರು ರಭಸದಿಂದ ಹರಿಯದೇ ನಿಧಾನವಾಗಿ ಹರಿಯುತ್ತಿತ್ತು. ನದಿ ನಮ್ಮ ಕ್ಯಾಂಪ್ ಸುತ್ತುವರೆದು ಮುಂದೆ ಹರಿಯುತ್ತಿತ್ತು. ಈ ಕ್ಯಾಂಪ್ ಪ್ರದೇಶವು ಹೂವಿನ ಗಿಡಗಳ ಕೆಳಗೆ ಮರಳಿನಿಂದ ಕೂಡಿದ್ದು ಮಣ್ಣು ಮೆತ್ತಗಿದ್ದು ಬರಿಗಾಲಿನಲ್ಲಿ ನಡೆಯಲು ಪ್ರಶಸ್ತವಾಗಿತ್ತು. ಬಾಲು-ಕ-ಘೇರಾ ಎಂದರೆ "ಮರಳಿನ ಹಾಸಿಗೆ" ಎಂದು ಅರ್ಥೈಸುವರು. ಸುತ್ತಲೂ

ಅಲ್ಲಲ್ಲಿ ನೆಲಗಳಲ್ಲಿ ಬಣ್ಣ ಬಣ್ಣ ಹೂವುಗಳನ್ನು ಕಾಣಬಹುದು. ಅಲ್ಲಲ್ಲಿ ಕುದುರೆಗಳು ಸಾವಕಾಶವಾಗಿ ಹುಲ್ಲನ್ನು ಮೇಯುತ್ತಿರುವುದನ್ನು ಕಾಣಬಹುದು. ಸಂಜೆಯಾಗುತ್ತಿದ್ದಂತೆ ಮಾರ್ಗದರ್ಶಿ ಸೂಚನೆ ಮೇರೆಗೆ ನಾನು ಹಾಗೂ ನಮ್ಮಲ್ಲಿನ ಕೆಲವು ಚಾರಣಿಗರು ಟೆಂಟಿನಿಂದ ಹೊರಬಂದು ಬರಿಗಾಲಿನಲ್ಲಿ ನದಿಯನ್ನು ದಾಟಿ ಮಧ್ಯದಲ್ಲಿರುವ ಬಂಡೆಗಳಮೇಲೆ ಕುಳಿತು ಸುತ್ತಲಿನ ಪ್ರಕೃತಿ ಸೌಂದರ್ಯ ವೀಕ್ಷಿಸತೊಡಗಿದೆವು. ಬೇರಾವ ಕ್ಯಾಂಪ್ ಪ್ರದೇಶದಲ್ಲೂ ಈ ರೀತಿ ಅವಕಾಶಗಳು ದೊರಕುವುದಿಲ್ಲ ಎಂದು ಮಾರ್ಗದರ್ಶಿ ತಿಳಿಸಿದರು. ಸಂಜೆ ಹೊತ್ತಿನಲ್ಲಿ ನೀರಿನ ಹರಿವು ನಿಧಾನವಾಗಿರುವುದರಿಂದ ಅಪಾಯದ ಭಯವಿರುವುದಿಲ್ಲ. ಮಧ್ಯಾಹ್ನದ ಹೊತ್ತಿನಲ್ಲಿ ಪರ್ವತದ ಹಿಮಗಳು ಕರಗಿ ನೀರು ಹರಿದುಬಂದು ನದಿ ಸೇರುವುದರಿಂದ ನೀರಿನ ರಭಸ ಹೆಚ್ಚಾಗಿರುವುದು. 12400 ಅಡಿ ಎತ್ತರದಲ್ಲಿ ಈ ಕ್ಯಾಂಪ್ ಬಳಿ ಹಿಮದ ಹೆಕ್ಕೆಗಳು ಹೇರಳವಾಗಿ ಕಾಣಿಸುವುದು. ಕುಲ್ಲು ಕಣಿವೆಯಲ್ಲಿನ ಹಸಿರು ಪ್ರದೇಶಗಳ ಕಟ್ಟ ಕಡೆಯ ಕ್ಯಾಂಪ್ ಇದಾಗಿದ್ದು ಇಲ್ಲಿಂದ ಮುಂದೆ ಚಾರಣ ಮಾಡುವಾಗ ನಮಗೆ ಹಸಿರು ಹುಲ್ಲುಗಾವಲು ಕ್ರಮೇಣ ಕಡಿಮೆಯಾಗಿ ವೃಕ್ಷಗಳು ಕಾಣಿಸುವುದಿಲ್ಲ. ಇಲ್ಲಿಂದ ಮುಂದೆ ನಮಗೆ ಹಂಪ್ಟಾ ಪಾಸ್ ಕಡೆಗಿನ ಹಿಮಾಚ್ಛಾದಿತ ಮಾರ್ಗವು ಗೋಚರಿಸುವುದು ಹಾಗೂ ಹಿಂಬಾಗದಲ್ಲಿ ಹಸಿರಾಗಿರುವ ಕುಲ್ಲು ಕಣಿವೆ ಕಾಣಿಸುವುದು.

ನಾಲ್ಕನೇ ದಿನ 05.08.2015 –ಬಾಲು–ಕ–ಘೇರಾ (12411ಅಡಿ) ದಿಂದ ಹಂಪ್ಟಾ ಪಾಸ್ (14065ಅಡಿ) ಮಾರ್ಗವಾಗಿ ಶಿಯಾಗೊರೂ (12864ಅಡಿ) – 9 ಗಂಟೆಗಳ 5 ಕಿ.ಮೀ ಚಾರಣ.

ಇಂದಿನ ಚಾರಣ ಹಂಪ್ಟಾ ಪಾಸ್ ಚಾರಣದಲ್ಲಿನ ಅತ್ಯಂತ ಕಠಿಣದ್ದಾಗಿದ್ದು ಚಾರಣಿಗರ ಫಿಟ್ನೆಸ್ ಪರೀಕ್ಷೆಯ ದಿನ. ಮೊದಲಿಗೆ ಮಂಡಿಯವರೆಗಿನ ಹಿಮದಲ್ಲಿ ಸುಮಾರು 2 ಗಂಟೆಗಳ ಸಮಯ 2000 ಅಡಿಗಳಷ್ಟು ಹತ್ತಿ ನಂತರ ಅದೇ ಹಿಮದಲ್ಲಿ ಹಂಪ್ಟಾಪಾಸ್ ದಾಟಿದ ನಂತರ 1000 ಅಡಿಗಳಷ್ಟು ಇಳಿಜಾರಿನ ಹಾದಿಯಲ್ಲಿ ಕ್ರಮಿಸಬೇಕಿತ್ತು. ಇಂದಿನ ಚಾರಣ ಎರಡು ಭಾಗಗಳಾಗಿ ವಿಂಗಡಿಸಬಹುದೆಂದು ಮಾರ್ಗದರ್ಶಿ ವಿವರಿಸುತ್ತ ಮೊದಲನೆ ಭಾಗ ಹಂಪ್ಟಾಪಾಸ್ ವರೆಗಿನ ಕಠಿಣ ಮಾರ್ಗ ಹತ್ತುವುದು ಹಾಗೂ ನಂತರ ಶಿಯಾ ಗೊರೂವರೆಗಿನ ಕಡಿದಾದ ಇಳಿಜಾರಿನ ಮಾರ್ಗ ಬಹುಪಾಲು ಹಿಮದಲ್ಲಿ ಇಳಿಯುವುದು. ಮುಂಜಾನೆ 6 ಗಂಟೆಗೆಲ್ಲ ಬೆಳಗಿನ ಉಪಹಾರ ಸೇವಿಸಿ ಮಧ್ಯಾಹ್ನದ ಊಟದ ಬುತ್ತಿಯೊಂದಿಗೆ ಬಾಲು–ಕ–ಘೇರಾ ಕ್ಯಾಂಪಿನಿಂದ ಹೊರಟೆವು. ಮಾರ್ಗದರ್ಶಿ ಸಲಹೆಯಂತೆ ಆದಷ್ಟು ಬೇಗ ಅಂದರೆ ಸುಮಾರು 11 ಗಂಟೆಗೆ ಹಂಪ್ಟಾಪಾಸ್

ತುದಿ ತಲುಪಿ ಸ್ವಲ್ಪ ವಿಶ್ರಾಂತಿ ಪಡೆದು ಅಲ್ಲೇ ಊಟ ಮುಗಿಸಿ ನಂತರ ಇಳಿಜಾರಿನ ಮಾರ್ಗದಲ್ಲಿ ಇಳಿದು 5 ಗಂಟೆಗೆ ಶಿಯಾ ಗೊರೂ ತಲುಪುವುದಾಗಿತ್ತು. ನಾವೆಲ್ಲರೂ ನಮ್ಮ ಚಾರಣವನ್ನು ಮಾರ್ಗದರ್ಶಿಯೊಂದಿಗೆ ಪರ್ವತದ ದಿಕ್ಕಿಗೆ ನಡೆಯಲು ಪ್ರಾರಂಭಿಸಿದೆವು. ಮಾರ್ಗದುದ್ದಕ್ಕೂ ನಮಗೆ ನದಿ ಜೊತೆಗಿದ್ದುದಲ್ಲದೆ

ಸುತ್ತಲೂ ಬಣ್ಣ ಬಣ್ಣದ ಹೂವುಗಳು ಕಂಡುಬರುತ್ತಿತ್ತು. ಒಂದು ಗಂಟೆ ನಡಿಗೆ ನಂತರ ನಾವು ಪರ್ವತದ ತುದಿಯಲ್ಲಿದ್ದೆವು. ಮುಂದೆ ಕೆಲವೆಡೆ ಮಾರ್ಗ ಸರಿಯಾಗಿ ಕಾಣಿಸದೇ ಹಾದಿ ತಪ್ಪುವ ಸಾಧ್ಯತೆಯಿದ್ದದ್ದರಿಂದ ಮಾರ್ಗದರ್ಶಿ ನಮಗೆಲ್ಲರಿಗೂ ಒಟ್ಟಾಗಿ ತನ್ನ ಜೊತೆಯಲ್ಲೇ ಚಾರಣ ಮಾಡುವಂತೆ ಸೂಚಿಸಿದರು. ಅದರಂತೆ ನಾವೆಲ್ಲ ಒಟ್ಟಾಗಿ ನಡೆಯತೊಡಗಿದೆವು. ಮತ್ತೊಂದು ಗಂಟೆಗಳಷ್ಟು ಹೊತ್ತಿನ ಪರ್ವತದ ಮೇಲಿಂದ ಬೀಳುವ ಕಲ್ಲು ಮಣ್ಣುಗಳಿಂದ ದೂರದಲ್ಲಿದ್ದು ಹತ್ತುತ್ತ ಮುಂದೆ ತೀವ್ರ ಕಠಿಣವಾದ ಆರೋಹಣದ ಮಾರ್ಗ ಕ್ರಮಿಸಬೇಕಾಯಿತು. ಇಲ್ಲಿಂದ ನಮ್ಮ ಕಷ್ಟಗಳು ಪ್ರಾರಂಭವಾದವು. ನಾವೆಲ್ಲರೂ ಸಕಾರಾತ್ಮಕವಾಗಿ ಚಿಂತಿಸುತ್ತ ಹತ್ತತೊಡಗಿದೆವು. ಅರ್ಧ ಗಂಟೆ ಆರೋಹಣದ ನಂತರ ಮೊದಲ ಸಮತಟ್ಟಾದ ಪ್ರದೇಶವನ್ನು ತಲುಪಿ ಇಲ್ಲಿಂದ ದಿಯೋ ಟಿಬ್ಬ ಶಿಖರ ಕಂಡು ಬಂದಿತು. ಈ ಪ್ರದೇಶಕ್ಕೆ ಬೇಸಿಗೆ ಪ್ರಾರಂಭವಾಗುವ ಸಮಯದಲ್ಲಿ ಬಂದರೆ ಈ ಪ್ರದೇಶವು ಸಂಪೂರ್ಣವಾಗಿ ಹಿಮಾವೃತವಾಗಿರುವುದೆಂದು ಮಾರ್ಗದರ್ಶಿ ನಮಗೆ ತಿಳಿಸಿದರು. ಆದರೆ ನಾವು ಇಲ್ಲಿಗೆ ಬಂದ ಸಮಯದಲ್ಲಿ ಕೇವಲ ಅಲ್ಲಲ್ಲಿ ಮಾತ್ರ ಹಿಮದ ಹೆಕ್ಕೆಗಳು ಕಾಣಿಸುತ್ತಿದ್ದವು. ಈ ಸ್ಥಳದಲ್ಲಿ ಎಲ್ಲರೂ ಬರುವವರೆಗೂ ಕಾಯುವಂತೆ ಮಾರ್ಗದರ್ಶಿ ಸೂಚಿಸಿದರು.

ಇಲ್ಲಿಂದ ಮತ್ತೊಂದು ಇಳಿಜಾರಿನ ಹಂತದಲ್ಲಿ ಇಳಿಯಬೇಕಿತ್ತು. ಈ ಹಂತವನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ ಎಂದು ಮಾರ್ಗದರ್ಶಿ ನಮಗೆ ವಿವರಿಸಿದರು. ಈ ಹಂತವನ್ನು ನಾವುಗಳು ಬಹಳ ಎಚ್ಚರಿಕೆಯಿಂದ ಹಿಮದಲ್ಲಿ ಇಳಿಯುತ್ತ 45 ನಿಮಿಷಗಳಲ್ಲಿ ಕಡೆಗೆ ಒಂದು ದಿಬ್ಬವನ್ನು ತಲುಪಿದೆವು. ಇಲ್ಲಿಂದ ನಮಗೆ ಮತ್ತೊಂದು ಸಮಾನಾಂತರ ಇಳಿಜಾರಿನ ಹಂತವು ಎದುರಾಯಿತು. ಈ ಮಾರ್ಗದಲ್ಲಿ ಇಳಿಯುವ ಮೊದಲು ಮಾರ್ಗದರ್ಶಿ ನಮಗೆ ದಿಬ್ಬದ ಮೇಲೆ ಸ್ವಲ್ಪ ದೂರ ನಡೆಯಲು ಸೂಚಿಸಿದರು. ಅದರಂತೆ ನಾವೆಲ್ಲರೂ ಸ್ವಲ್ಪ ದೂರ ನಡೆದ ನಂತರ ನಮಗೆ ಸುತ್ತಲೂ ಪರ್ವತ ಪ್ರದೇಶ ವೀಕ್ಷಿಸಲು ಸಾಧ್ಯವಾಯಿತು. ಇಲ್ಲಿ ನಮಗೆ ಕುತೂಹಲವಾದ ಪೀಕ್ 5260 ಕಾಣಿಸಿತು. ನಂತರ ಮರಳಿ ಮೊದಲಿನ ಸ್ಥಳಕ್ಕೆ ಬಂದು ಅಲ್ಲಿಂದ ಮಾರ್ಗದರ್ಶಿ ಸಹಾಯದಿಂದ 20 ನಿಮಿಷಗಳಲ್ಲಿ ಇಳಿದು ಕೊನೆಗೆ ಒಂದು ಸ್ಥಳವನ್ನು ತಲುಪಿದೆವು. ಇಲ್ಲಿಂದ ಲಂಬವಾದ ಮಾರ್ಗದಲ್ಲಿ ನಿಧಾನವಾಗಿ ಹತ್ತುತ್ತ 30 ನಿಮಿಷಗಳ ನಂತರ 14000

ಅಡಿ ಎತ್ತರದ ಹಂಪ್ಟಾ ಪಾಸ್ ತಲುಪಿದೆವು. ಎಲ್ಲರೂ ಬರುವವರೆಗೂ ಅಲ್ಲೇ ಸಣ್ಣ ಸಣ್ಣ ಬಂಡೆಗಳ ಮೇಲೆ ಕುಳಿತಿದ್ದು ನಂತರ ಎಲ್ಲರೂ ಒಂದೆಡೆ ಸೇರಿ ಚಾರಣ ಸಂಸ್ಥೆ - ಇಂಡಿಯ ಹೈಕ್ ಅವರ ಬ್ಯಾನರಿನಡಿಯಲ್ಲಿ ಫೋಟೋ ತೆಗೆದುಕೊಂಡು ಎಲ್ಲರೂ ಆನಂದದಿಂದ ಜೋರಾಗಿ ಜೈಕಾರ ಮಾಡತೊಡಗಿದೆವು. ಇಲ್ಲಿಂದ ಸ್ವಲ್ಪ ಮುಂದೆ ಹೋದಾಗ ನಾವು ಇಳಿಯಬೇಕಾದ ತೀವ್ರ ಇಳಿಜಾರಿನ ಹಿಮ ಮಾರ್ಗ ಗೋಚರಿಸಿತು. ಹೇಗೆ ಇಳಿಯುವುದು ಎಂಬುದರ ಬಗ್ಗೆ ಚಿಂತಿಸದೆ ನಾವೆಲ್ಲರೂ ನಮಗೆ ಸಿಕ್ಕಿದ ಬಂಡೆಗಳ ಮೇಲೆ ಕುಳಿತು ನಮ್ಮೊಂದಿಗೆ ತಂದಿದ್ದ ಊಟ ಮಾಡಲು ಪ್ರಾರಂಭಿಸಿದೆವು. ನಂತರ ಸ್ವಲ್ಪ ವಿಶ್ರಾಂತಿ ಪಡೆದು ಸುತ್ತಲಿನ ಪ್ರಕೃತಿಯನ್ನು ವೀಕ್ಷಿಸುವಾಗ ಹಿಂತಿರುಗಿ ನೋಡಿದಾಗ ನಾವು ಇಂದು ಮುಂಜಾನೆ ಬಾಲು-ಕ-ಘೇರಾ ಕ್ಯಾಂಪಿನಿಂದ ಹತ್ತಿ ಬಂದ ಮಾರ್ಗ ಬೆಳ್ಳಿಯ ಬಣ್ಣದಿಂದ ಕೂಡಿದ ಹಿಮಾವೃತವಾಗಿ ಕಿರಿದಾಗಿ ಕಾಣಿಸುತ್ತಿತ್ತು. ಇದೇ ಸ್ಥಳದಲ್ಲಿ ಹೆಚ್ಚು ಸಮಯ ಕಳೆಯದೆ ಎಲ್ಲರೂ ಶಿಯಾಗೋರು ಕ್ಯಾಂಪಿನೆಡೆಗೆ ಇಳಿಯಲು ಮಾರ್ಗದರ್ಶಿ ತಿಳಿಸಿದರು. ಇಲ್ಲಿಂದ ಕೆಳಗಿಳಿಯುವುದು ಅಲ್ಲಿಗೆ ಹತ್ತುವುದಕ್ಕಿಂತ ಅಪಾಯಕಾರಿಯಾದದ್ದು. ಮಾರ್ಗವು ಹಿಮದಿಂದ ಕೂಡಿದ್ದರಂತೂ ಮತ್ತೂ ಕಷ್ಟವಾದದ್ದು. ಅದರಲ್ಲೂ ನಾವು ಇಳಿಯುವ ಸಮಯದಲ್ಲಿ ಮಂಡಿಯವರೆಗೂ ಪುಡಿಯಾಗಿರುವ ಹಿಮವಿದ್ದು ಪ್ರತಿ ಹೆಜ್ಜೆ ಇಟ್ಟಾಗಲೂ ಕಾಲುಗಳು ಹೂತುಹೋಗುತ್ತಿತ್ತು. ಟ್ರೆಕ್ಕಿಂಗ್ ಪೋಲ್ ಕೂಡಾ ಅಷ್ಟೇನೂ ಸಹಕಾರಿಯಾಗಿರಲಿಲ್ಲ. ಕೆಲವೆಡೆ ಬಿಸಿಲು ಹೆಚ್ಚಾಗಿದ್ದದ್ದರಿಂದ ಹಿಮ ಕರಗಿ ನಡೆಯುವಾಗ ಜಾರುವ ಅನುಭವವುಂಟಾಗುತ್ತಿತ್ತು. ಹಿಮವಿದ್ದದ್ದರಿಂದ ಒಂದೇ ಅನುಕೂಲವೆಂದರೆ ಸಾಧ್ಯವಾದ ಕಡೆಗಳಲ್ಲಿ ಮಾರ್ಗದರ್ಶಿ ಸೂಚನೆಯಂತೆ 100-200 ಅಡಿಗಳಷ್ಟು ಕೆಳಕ್ಕೆ ಜಾರುವುದು. ನಾವೆಲ್ಲರೂ ಈ ರೋಮಾಂಚಕ ಅನುಭವ ಪಡೆದುಕೊಂಡು ಅನೇಕ ಕಡೆಗಳಲ್ಲಿ ಜಾರತೊಡಗಿದೆವು.

ಹಂಪ್ಟಾಪಾಸ್ ದಿಬ್ಬದಿಂದ ಬಲಕ್ಕೆ ಹೊರಳಿ ಇಳಿಯತೊಡಗಿದಾಗ ನಮಗೆ ಲಾಹೌಲ್ ಕಣಿವೆಯ ಸ್ಪಷ್ಟ ಚಿತ್ರಣ ಕಾಣಿಸತೊಡಗಿತು. ಅರ್ಧ ಗಂಟೆ ಇಳಿದ ನಂತರ ಮೊದಲ ಭಾಗದ ಇಳಿಯುವ ಹಂತ ಮುಗಿದು ಅಲ್ಲಿಂದ ಯೂ ಟರ್ನ ಮಾಡಿದಾಗ ಕಣಿವೆಯ ತಳಭಾಗ ತಲುಪಿದೆವು. ಇಲ್ಲಿಂದ ಮುಂದಿನ ಹಾದಿ ಹಿಮದಲ್ಲಿ ನೇರ ಇಳಿಯುವ ರೀತಿಯಲ್ಲಿತ್ತು. ಇಲ್ಲಿ ನಾವು ಝಿಗ್ ಝ್ಯಾಗ್ (Zig-Zag) ಮಾರ್ಗವಾಗಿ ಕೆಳಗಿಳಿದು ಅರ್ಧ ಗಂಟೆಯಲ್ಲಿ ಕಣಿವೆಯ ತಳಭಾಗವನ್ನು ತಲುಪಿದೆವು. ಇಲ್ಲಿ ಮೂರು ದಿಕ್ಕಿನಲ್ಲೂ ಎತ್ತರವಾದ ಹಿಮದಿಂದ ಕೂಡಿದ ಪರ್ವತಗಳು ನಮ್ಮನ್ನು ಸುತ್ತುವರೆದಿದ್ದವು ಹಾಗೂ ನಾಲ್ಕನೇ ದಿಕ್ಕು ಶಿಯಾಗೋರೂ ಕಡೆಗೆ ನಮ್ಮನ್ನು ಕರೆದೊಯ್ಯುತ್ತಿತ್ತು. ಇಲ್ಲಿಂದ ಸುಮಾರು 5 ಕಿ.ಮೀ ಸಮತಟ್ಟಾದ

ಹುಲ್ಲುಗಾವಲಿನ ಪ್ರದೇಶದಲ್ಲಿ ನಡೆದ ನಂತರ ನಮಗೆ ಶಿಯಾಗೋರೂ ಕ್ಯಾಂಪ್ ಸಿಗುವುದೆಂದು ಮಾರ್ಗದರ್ಶಿ ತಿಳಿಸಿದರು. ಅದರಂತೆ 3 ಕಿ.ಮೀ ನಡೆದ ಮೇಲೆ ನಮಗೆ ಒಬ್ಬ ವ್ಯಕ್ತಿ ಒಂದು ಸಣ್ಣ ಗುಡ್ಡದ ಮೇಲೆ ಕುಳಿತಿರುವುದು ಕಂಡು ಬಂದಿತು. ಕುತೂಹಲದಿಂದ ನಾವುಗಳು ಅವನ ಬಳಿಹೋದಾಗ ಅವನು ಬೇರೆ ಯಾರೋ ಅಗಿರದೆ ಇಂಡಿಯಾ ಹೈಕ್ ಸಂಸ್ಥೆಯ ಸಿಬ್ಬಂದಿಯಾಗಿದ್ದು ಅವನು ನಮಗೆ ನಿಂಬೆ ಶರಬತ್ತನ್ನು ಕೊಡುವ ಸಲುವಾಗಿ ಹತ್ತಿರದ ಶಿಯಾಗೋರೂ ಕ್ಯಾಂಪಿನಿಂದ ಬಂದಿದ್ದ. ನಮಗೆಲ್ಲರಿಗೂ ಆನಂದವಾಗಿ ಅವನಿಂದ ಶರಬತ್ತನ್ನು ಪಡೆದು ಎರಡೆರಡು ಬಾರಿ ಕುಡಿದೆವು. ನಂತರ ನಮ್ಮ ನಡಿಗೆಗೆ ಶಕ್ತಿಬಂದು 30 ನಿಮಿಷದಲ್ಲೇ ಕ್ಯಾಂಪನ್ನು ತಲುಪಿದೆವು.

ಹಂಪ್ಟಾ ಪಾಸ್ ಚಾರಣದಲ್ಲಿನ ಅತಿ ಸುಂದರವಾದ ಕ್ಯಾಂಪ್ ಎಂದರೆ ಶಿಯಾಗೋರೂ ಕ್ಯಾಂಪ್. ಎದುರಿಗೇ ಶಿಯಾ ನಾಲಾ ಹರಿಯುತ್ತಿದ್ದು ಹಾಗೂ ಎರಡೂ ಬದಿಗಳಲ್ಲಿ ಗಗನಚುಂಬಿ ಪರ್ವತಗಳಿದ್ದು ಮಧ್ಯದಲ್ಲಿ ಹಸಿರು ಹುಲ್ಲುಗಾವಲಿನಲ್ಲಿ ನಮ್ಮ ಕ್ಯಾಂಪ್ ಇದ್ದು ಲಾಹೌಲ್ ಮರುಭೂಮಿಯಲ್ಲಿನ ಓಯಸಿಸ್ ಅಗಿತ್ತು. ಶಿಯಾ ನಾಲ ಛಾತ್ರ ಕ್ಯಾಂಪಿನವರೆಗೂ ಹರಿಯುತ್ತಿದ್ದು ಛಾತ್ರ ಬಳಿ ಚಿನಾಬ್ ನದಿಯನ್ನು ಸೇರುವುದು ಎಂದು ಮಾರ್ಗದರ್ಶಿ ತಿಳಿಸಿದರು. ನಾವು ಶಿಯಾಗೋರೂ ಕ್ಯಾಂಪ್ ತಲುಪಿದ ಕೂಡಲೆ ಕಂಡುಬಂದ ಆಶ್ಚರ್ಯಕರವಾದ ಬದಲಾವಣೆಯೆಂದರೆ ಹವಾಮಾನ ತೀವ್ರ ಛಳಿಯಿಂದ ಕೂಡಿದ್ದು. ಶಿಯಾಗೋರೂ ಎಂದರೆ ಶೀತಕಣಿವೆ ಎಂದು ಮಾರ್ಗದರ್ಶಿ ನಮಗೆ ತಿಳಿಸಿದರು. ಜೂನ್ ತಿಂಗಳಿನಲ್ಲೂ ಈ ಪ್ರದೇಶವೆಲ್ಲ ಹಿಮದಿಂದ ಕೂಡಿರುವುದು ಎಂದು ತಿಳಿಸಿದ ಮಾರ್ಗದರ್ಶಿ ನಾವು ಆಗಸ್ಟ್ ತಿಂಗಳಿನಲ್ಲಿ ಇಲ್ಲಿಗೆ ಬಂದಿರುವುದರಿಂದ ಕಣಿವೆ ಹಸಿರಿನಿಂದ ಕೂಡಿದೆ ಎಂದು ವಿವರಿಸಿದರು. ಮಧ್ಯರಾತ್ರಿಯಲ್ಲಿ ಆಸಕ್ತ ಚಾರಣಿಗರು ಟೆಂಟಿನಿಂದ ಹೊರಬಂದು ಅಕಾಶದಲ್ಲಿ ನಕ್ಷತ್ರಗಳನ್ನು ವೀಕ್ಷಿಸಬಹುದು ಎಂಬ ಮಾಹಿತಿ ಮಾರ್ಗದರ್ಶಿ ನಮಗೆ ತಿಳಿಸಿದರು. ಸಂಜೆಯಾಗುತ್ತಿದ್ದಂತೆ ವಿಪರೀತ ಛಳಿ ಪ್ರಾರಂಭವಾಗಿ ಹವಾಮಾನ –5 ಡಿಗ್ರಿ ತಲುಪಿತ್ತು. ನಾವೆಲ್ಲರೂ ಬೆಚ್ಚಗಿನ ಉಡುಪು ಧರಿಸಿ ಟೆಂಟಿನೊಳಗೆ ನುಸುಳಿಕೊಂಡೆವು. 7 ಗಂಟೆಗೆ ಬಿಸಿ ಬಿಸಿ ಮ್ಯಾಗಿ ನೂಡಲ್ಸ್, ಚಹಾ ಸೇವಿಸಿ ರಾತ್ರಿ 8 ಗಂಟೆಗೆ ಬಿಸಿಯಾದ ಊಟಮಾಡಿ ಮಾರನೆ ದಿನದ ಛಾತ್ರ ಕ್ಯಾಂಪ್ ಕಡೆಗಿನ ಚಾರಣ ನೆನೆಯುತ್ತ ಹಾಗೂ ಇಂದಿನ ಹಂಪ್ಟಾಪಾಸ್ ಚಾರಣದ ಅನುಭವಗಳನ್ನು ನೆನೆಯುತ್ತ ಮಲಗಿದೆ.

ಐದನೇ ದಿನ 06.08.2015 – ಶಿಯಾಗೋರು(12864ಅಡಿ)ದಿಂದ ಛಾತ್ರ ಕ್ಯಾಂಪ್(10898ಅಡಿ) – 4.5 ಗಂಟೆಗಳ 6 ಕಿ.ಮೀ ಚಾರಣ. ನಂತರ ಚಂದ್ರತಾಲ್ ಸರೋವರಕ್ಕೆ (13940ಅಡಿ) ಜೀಪಿನಲ್ಲಿ ಪಯಣ

ಶಿಯಾಗೋರು ಕ್ಯಾಂಪಿನಿಂದ ಶಿಯಾ ನಾಲದ ಬದಿಯಲ್ಲೆ ನಡೆದು ಹತ್ತು ನಿಮಿಷದಲ್ಲಿ ನಾವು ಶಿಯಾನಾಲ ದಾಟುವ ಸ್ಥಳ ತಲುಪಿ ಶೂಗಳನ್ನ ಕಳಚಿ ಬರಿಗಾಲಿನಲ್ಲಿ ರಭಸವಾಗಿ ಹರಿಯುತ್ತಿದ್ದ ಶೀತದಿಂದ ಕೂಡಿದ್ದ ನೀರಲ್ಲಿ ಇಳಿದು ಮಾರ್ಗದರ್ಶಿ ಸಹಾಯದಿಂದ ದಾಟಿದೆವು. ಇಲ್ಲಿಂದ ಪರ್ವತದ ಹಾದಿಯಲ್ಲೇ ನಡೆಯುತ್ತೊಡಗಿ ಮೂರೂವರೆ ಗಂಟೆ ನಡೆದ ಮೇಲೆ ಪರ್ವತ ಪ್ರದೇಶದಿಂದ ಹೊರಬಂದೆವು. ಇನ್ನೂ ನಾವು ಸಾಕಷ್ಟು ಎತ್ತರದ ಪ್ರದೇಶದಲ್ಲೇ ಇದ್ದರೂ ಪಕ್ಕಾ ರಸ್ತೆಯಿತ್ತು. ಚಂದ್ರಾ (ಚೆನಾಬ್) ನದಿ ನಮಗೂ ಹಾಗೂ ರಸ್ತೆಗೂ ಮಧ್ಯದಲ್ಲಿ ರಭಸದಿಂದ ಹರಿಯುತ್ತಿತ್ತು. ಮಾರ್ಗದಲ್ಲಿ ಮೂರು ಕಡೆ ಅಗಾಧ ಪ್ರಮಾಣದ ಹಿಮದಿಂದ ಕೂಡಿದ ನೀರು ರಭಸದಿಂದ ಮೇಲಿಂದ ಧುಮುಕಿ ನದಿ ಸೇರುತ್ತಿತ್ತು. 20 ನಿಮಿಷದ ನಂತರ ಒಂದು ಸೇತುವೆ ದಾಟಿ ರಸ್ತೆಯಲ್ಲಿ ನಡೆದು ಛಾತ್ರ ಕ್ಯಾಂಪ್ ತಲುಪಿದೆವು. ನಮ್ಮ ಕ್ಯಾಂಪಿನ ಸಮೀಪದಲ್ಲೇ ಚಂದ್ರಾ ನದಿ ರಭಸದಿಂದ ಹರಿಯುತ್ತಿತ್ತು. ಈ ಸ್ಥಳ ಕೂಡ ನಕ್ಷತ್ರ ವೀಕ್ಷಣೆಗೆ ಪ್ರಶಸ್ತವಾದ ಸ್ಥಳ ಎಂದು

ಮಾರ್ಗದರ್ಶಿ ತಿಳಿಸಿದರು. ಇಲ್ಲಿಂದ 70 ಕಿ.ಮೀ ದೂರದಲ್ಲಿ ಚಂದ್ರಸರೋವರ ಇರುವುದು ಹಾಗೂ ಅಲ್ಲಿಂದ ಚಂದ್ರಾ ನದಿ ಜನಿಸುವುದು ಎಂಬುದು ತಿಳಿಯಿತು. ನಾವು ಊಟದ ನಂತರ 2 ಗಂಟೆಗೆ ಎರಡು ಜೀಪುಗಳಲ್ಲಿ ಚಂದ್ರತಾಲ್ ಸರೋವರದೆಡೆಗೆ ಮಾರ್ಗದರ್ಶಿಯೊಂದಿಗೆ ಹೊರಟೆವು. ರಸ್ತೆ ಅನೇಕ ಕಡೆ ಬಂಡೆಗಳಿಂದ ಕೂಡಿದ್ದು ಅಲ್ಲಲ್ಲಿ ಮೇಲಿಂದ ಹರಿದು ಬರುವ ಹಿಮನದಿಗಳ ನೀರು ನಮ್ಮ ಪ್ರಯಾಣ ಕಠಿಣವಾಗಿಸಿತ್ತು. ನಾವು 5 ಗಂಟೆಗೆ ಚಂದ್ರತಾಲ್ ಸರೋವರ ತಲುಪಿ ಅಲ್ಲಿ ಒಂದು ಗಂಟೆ ಪ್ರಕೃತಿ ಸೌಂದರ್ಯ ಹಾಗೂ ಸೂರ್ಯಾಸ್ತ ವೀಕ್ಷಿಸಿ ರಾತ್ರಿ 8 ಗಂಟೆಗೆ ಕ್ಯಾಂಪನ್ನು ತಲುಪಿದೆವು. ಮಾರ್ಗದಲ್ಲಿ ಮಾರ್ಗದರ್ಶಿ ಚಂದ್ರತಾಲ್ ಸರೋವರ ಕುರಿತಾಗಿ ಹಲವು ಕಥೆಗಳು ಹಾಗೂ ಪರಲೋಕದಿಂದ ಬಂದ UFO ಬಗ್ಗೆ ತಿಳಿಸಿದರು.

ಚಂದ್ರಾ ಸರೋವರ (Chandra Tal) ಲಾಹೌಲ್ ಕಣಿವೆಯಲ್ಲಿದ್ದು 14100 ಅಡಿ ಎತ್ತರದಲ್ಲಿರುವುದು. ಇದು ಕುನ್ಜುಮ್ ಕಣಿವೆಯಿಂದ 6 ಕಿ.ಮೀ ದೂರದಲ್ಲಿರುವುದು. ಈ ಸರೋವರ ಒಂದು ಪವಿತ್ರ ಸರೋವರವೆಂದು ನಂಬಿಕೆ. ಇದು ಚಂದ್ರಭಾಗಾ ನದಿಯ (Chenab) ಉಪನದಿಯಾದ ಚಂದ್ರಾ ನದಿಯ ಉಗಮ ಸ್ಥಳ. ಈ ನದಿಯೊಂದಿಗೆ ಮೂರು ದಂತಕಥೆಗಳು ಹೆಣೆದುಕೊಂಡಿವೆ.

ಒಂದು ಜಾನಪದ ಕಥೆಯ ಪ್ರಕಾರ ಈ ಪ್ರದೇಶದಲ್ಲಿ ಒಮ್ಮೆ ಚಂದ್ರನ ಮಗಳಾದ ಚಂದ್ರಾ ಹಾಗೂ ಸೂರ್ಯನ ಮಗನಾದ ಭಾಗ ಅವರುಗಳು ಪ್ರೀತಿಸಿದ ಸ್ಥಳ. ಇವರಿಬ್ಬರೂ ವಿವಾಹವಾಗಲು ನಿರ್ಧರಿಸಿದರು. ಆದರೆ ವಿಧಿಯ ನಿರ್ಣಯದ ಪ್ರಕಾರ ಇವರಿಬ್ಬರ ನಿರ್ಧಾರ ಕೈಗೂಡಲಿಲ್ಲವಾದ ಕಾರಣ ಅವರು ತಾವು ಮೊದಲ ಬಾರಿ ಭೇಟಿಯಾದ ಸ್ಥಳವಾದ ಸಮೀಪದಲ್ಲಿರುವ Baralacha La ಕಣಿವೆಯೆಡೆಗೆ ಓಡಿಹೋದರು. ಆದರೆ ದುರದೃಷ್ಟವಶಾತ್ ಅವರಿಬ್ಬರೂ ಅಲ್ಲಿ ಭೇಟಿಯಾಗದೇ ರಭಸದಿಂದ ಹರಿಯುತ್ತಿರುವ ಚಂದ್ರಭಾಗಾ ನದಿಯಲ್ಲಿ ಭೇಟಿಯಾಗಿ ಸ್ವರ್ಗದಲ್ಲಿ ಒಂದಾದರು. ಇವರಿಬ್ಬರ ಪ್ರೀತಿಯ ದ್ಯೋತಕವಾಗಿ ಚಂದ್ರಾ ಹಾಗೂ ಭಾಗಾ ಸರೋವರಗಳು ಉತ್ಪತ್ತಿಯಾದವು. ಮತ್ತೊಂದು ಕಥೆಯ ಪ್ರಕಾರ ಪಾಂಡವರು ಸ್ವರ್ಗಾರೋಹಣದ ಸಮಯದಲ್ಲಿ ಧರ್ಮರಾಯನನ್ನುಳಿದು ಮಿಕ್ಕ ಪಾಂಡವರು ಹಾಗೂ ದ್ರೌಪದಿ ಇಹಲೋಕ ತ್ಯಜಿಸಿದ ನಂತರ ಯುಧಿಷ್ಠಿರನನ್ನು ಇಂದ್ರನು ದೇವಲೋಕದಿಂದ ಈ ಸ್ಥಳಕ್ಕೆ ರಥದಲ್ಲಿ ಬಂದು ಸ್ವರ್ಗಲೋಕಕ್ಕೆ ಕರೆದೊಯ್ದನೆಂದು ನಂಬಲಾಗಿದೆ.

ಇನ್ನೊಂದು ಕಾಲ್ಪನಿಕ ಕಥೆಯ ಪ್ರಕಾರ ಒಮ್ಮೆ ದನಕಾಯುವ ಹನ್ನ ಎಂಬ ಒಬ್ಬ ಹಳ್ಳಿಯವನು ತನ್ನ ದನಗಳೊಂದಿಗೆ ಈ ಸರೋವರದ ಬಳಿ ಬಂದಾಗ ಒಬ್ಬ ದೇವಕನ್ಯೆಯನ್ನು ನೋಡಿದ. ಅವರಿಬ್ಬರೂ ಪರಸ್ಪರ ಪ್ರೀತಿಯ ಸೆಳೆತಕ್ಕೆ ಒಳಗಾದರು. ದನಕಾಯುವ ಹನ್ನ ವಿವಾಹಿತನಾಗಿದ್ದರೂ ಅ ವಿಷಯ ಮರೆಮಾಚಿ ಅವಳೊಂದಿಗೆ ಬಳಿಯಲ್ಲಿನ ಸರೋವರದಲ್ಲಿ ಅನೇಕ ಕಾಲ ಪ್ರೀತಿಸುತ್ತ ಕಳೆದು, ಒಮ್ಮೆ ದನಕಾಯುವ ಹನ್ನನು ಎಚ್ಚರತಪ್ಪಿ ತನ್ನ ಹಿಂದಿನ ವಿವಾಹದ ಬಗ್ಗೆ ದೇವಕನ್ಯೆಗೆ ಹೇಳಿದಾಗ ಅವಳು ಇವನನ್ನು ತೊರೆದು ದೇವಲೋಕಕ್ಕೆ ಹೋದಳು. ಇದರಿಂದ ದುಃಖಿತನಾದ ಹನ್ನ ಚಂದ್ರಾ ಸರೋವರದ ದಡದಲ್ಲೇ ಮೃತಪಟ್ಟ. ಯಾರಾದರೂ ಇಲ್ಲಿಗೆ ಬಂದು ರಾತ್ರಿ ಕಳೆದರೆ ಕೆಲವು ಸಮಯದಲ್ಲಿ ಮೃತನಾದ ಹನ್ನನ ಅತ್ಮವು ಅಲೆಯುವುದನ್ನು ನೋಡುವರು ಎಂದು ನಂಬಲಾಗಿದೆ.

ಆರನೇ ದಿನ 07.08.2015 – ಛಾತ್ರುವಿನಿಂದ ಮನಾಲಿಗೆ ಜೀಪಿನಲ್ಲಿ 64 ಕಿ.ಮೀ – 5 ಗಂಟೆಗಳ ಪ್ರಯಾಣ.

ಮುಂಜಾನೆ 9 ಗಂಟೆಗೆ ಛಾತ್ರುವಿನಿಂದ Rohtang pass ಮುಖಾಂತರ ಮನಾಲಿಗೆ ಹೊರಟು ಪ್ರಕೃತಿ ಸೌಂದರ್ಯ ಸವಿಯುತ್ತ ಮಧ್ಯಾಹ್ನ 2.30ಕ್ಕೆ ಮನಾಲಿ ತಲುಪಿದೆವು. ನಾನು ರಾತ್ರಿ 8 ಗಂಟೆಗೆ ಮನಾಲಿಯಿಂದ ಬಸ್ಸಿನಲ್ಲಿ ಪಯಣಿಸಿ ಮುಂಜಾನೆ 8 ಗಂಟೆಗೆ ದೆಹಲಿ ತಲುಪಿ ಅಲ್ಲಿಂದ ವಿಮಾನದಲ್ಲಿ ಬೆಂಗಳೂರಿಗೆ ಹೋದೆ.

ಮನಮೋಹಕ ದಯಾರಾ ಬುಗ್ಯಾಲ್

ಪರಿಪೂರ್ಣವಾದ ಹಿಮಾಲಯದ ಚಾರಣಗಳಲ್ಲಿನ ಎಲ್ಲ ವಿಶೇಷತೆಗಳನ್ನೂ ಒಳಗೊಂಡಿರುವ ಹಾಗೂ ಹಿಮಾಲಯದ ಚಾರಣ ಪ್ರಾರಂಭ ಮಾಡಬೇಕೆಂದಿರುವ ಚಾರಣಿಗರಿಗೆ ಹೇಳಿ ಮಾಡಿಸಿದ ಚಾರಣವೇ ದಯಾರಾ ಬುಗ್ಯಾಲ್ ಚಾರಣ. ಅತ್ಯುತ್ತಮವಾದ ಅರಣ್ಯಗಳು, ಸುಂದರವಾದ ಕ್ಯಾಂಪ್ ಸೈಟ್‌ಗಳು, ಪುರಾತನ ಹಳ್ಳಿಗಳು, ಎತ್ತರದ ಪ್ರದೇಶದೆಡೆಗಿನ ರೋಮಾಂಚಕರವಾದ ಆರೋಹಣಗಳು, ಅದ್ಭುತ ಹಾಗೂ ಸುಂದರವಾದ ಪರ್ವತ ದೃಶ್ಯ , ಮತ್ತು ಉತ್ತರಾಖಂಡದಲ್ಲಿನ ಅತ್ಯುತ್ತಮವಾದ ಅಲ್ಪೈನ್ ಹುಲ್ಲುಗಾವಲು ಈ ಚಾರಣದ ವೈಶಿಷ್ಟ್ಯ . ನವೆಂಬರ್‌ನಿಂದ ಏಪ್ರಿಲ್ ಮಧ್ಯಭಾಗದವರೆಗೂ ಚಳಿಗಾಲದಲ್ಲಿ ಈ ಹುಲ್ಲುಗಾವಲುಗಳು ಹಿಮದಿಂದ ಸಂಪೂರ್ಣವಾಗಿ ಆವೃತವಾಗಿ ಆ ಸಮಯದಲ್ಲೂ ಹಿಮಚಾರಣ ಮಾಡಲು ಸಿದ್ಧವಾಗಿರುವ ಚಾರಣಿಗರನ್ನು ನೋಡಬಹುದು.

ಈ ಚಾರಣದಲ್ಲಿ ಆಕಾಶದಲ್ಲಿ ಬಿಳಿಯಾದ ಬಾಗಿದ ರೇಖೆಯಂತೆ ಗಂಗೋತ್ರಿ ಪರ್ವತ ಶ್ರೇಣಿಗಳ ನಡುವೆ ಬಂದರ್‌ಪೂಂಚ್ ಎದ್ದು ಕಾಣುವುದು ಒಂದು ವೈಶಿಷ್ಟ್ಯವೇ ಸರಿ. ಮೇಲೆ ಹತ್ತಿ ದಯಾರಾ ಟಾಪ್, ಬಕರಿಯಾ ಟಾಪ್‌ಗಳ ಬಳಿಗೆ ಹೋಗುತ್ತಿದ್ದಂತೆ ಈ ಪರ್ವತಗಳು ತಮ್ಮ ಭವ್ಯತೆಯನ್ನು ನಿಮಗೆ ಎತ್ತಿ ತೋರಿಸುತ್ತವೆ. ಪ್ರತಿಯೊಂದು ಋತುಗಳಲ್ಲೂ ಈ ಚಾರಣವು ತನ್ನದೇ ಆದ ವೈಭವೋಪೇತವಾದ ದೃಶ್ಯಗಳನ್ನು ಪ್ರದರ್ಶಿಸುತ್ತದೆ. ಬೇಸಗೆಯ ಪೂರ್ವಭಾವಿಯಾಗಿ ಇಲ್ಲಿ ಸಹಸ್ರ ಸಹಸ್ರ ಹಳದಿ, ನೇರಳೆ ಮತ್ತು ಶ್ವೇತ ವರ್ಣದ ಹೂವುಗಳು ಅರಳಿ ಇಡೀ ಹುಲ್ಲುಗಾವಲನ್ನು ಹೂವಿನ ತೋಟವನ್ನಾಗಿ ಪರಿವರ್ತಿಸಿದರೆ, ಶರತ್ಕಾಲದಲ್ಲಿ ಇದೇ ಪ್ರದೇಶವು ಬಂಗಾರದ ಬಣ್ಣವನ್ನು ಹೊಂದುತ್ತದೆ. ಚಳಿಗಾಲದಲ್ಲಿ ಇದೇ ಪ್ರದೇಶವು ಪುಡಿ ಪುಡಿಯಾದ ಹಿಮದೊಳಗೆ ಹುದುಗಿ ಹೋಗುತ್ತದೆ. ಹೀಗಾಗಿ ಈ ಚಾರಣವು ಸಾರ್ವಕಾಲಿಕ ಚಾರಣ ಮಾರ್ಗ.

ನಾನು ಈ ಚಾರಣವನ್ನು ಬಹಳವಾಗಿ ಪ್ರೀತಿಸಿ 2015ರಲ್ಲಿನ ಸಪ್ಟೆಂಬರ್ 27ರಿಂದ ಅಕ್ಟೋಬರ್ 2ರವರೆಗೂ ಇಂಡಿಯಾ ಹೈಕ್ಸ್ ಸಂಸ್ಥೆಯೊಂದಿಗೆ ಮಾಡಿದೆ.

ಚಾರಣದ ವಿವರ ಹೀಗಿದೆ

ಮೊದಲನೇ ದಿನ – ಹರಿದ್ವಾರದಿಂದ ಬರ್ಸು ಬೇಸ್ ಕ್ಯಾಂಪ್ ಕಡೆಗೆ ಜೀಪಿನಲ್ಲಿನ 220 ಕಿ.ಮೀ ಪ್ರಯಾಣ

ಎರಡನೇ ದಿನ – ಬರ್ಸು ಕ್ಯಾಂಪ್(7400ಅಡಿ)ನಿಂದ ದಯಾರಾ ಬುಗ್ಯಾಲ್(11050ಅಡಿ) – 4–5 ಗಂಟೆಗಳ 8 ಕಿ.ಮೀ ಚಾರಣ

ಮೂರನೇ ದಿನ – ದಯಾರಾ ಬುಗ್ಯಾಲ್ (11050ಅಡಿ)ನಿಂದ ಬಕಾರಿಯದೆಡೆಗೆ (12500ಅಡಿ) ನಂತರ ದಯಾರಾ ಕ್ಯಾಂಪ್ ಕಡೆಗೆ – 5–6 ಗಂಟೆಗಳ 8 ಕಿ.ಮೀ ದೂರದ ಚಾರಣ

ನಾಲ್ಕನೇ ದಿನ – ದಯಾರಾ ಕ್ಯಾಂಪ್‌ನಿಂದ ಸಿಯಾರಿಯೆಡೆಗೆ – ಮಾರ್ಗದಲ್ಲಿ ಗಿಡ್ಡಾರಾ ಬುಗ್ಯಾಲ್, ದೇವಿಕುಂಡದ ದಿಬ್ಬ, ಸೂರ್ಯಾ ಟಾಪ್, ಗಿಡ್ಡಾರಾ ಪಾಸ್, ಮತ್ತೆ ಗಿಡ್ಡಾರಾ ಬುಗ್ಯಾಲ್ ಮಾರ್ಗವಾಗಿ ಸಿಯಾರಿಯ ಕಡೆಗಿನ ಚಾರಣ.

ಐದನೇ ದಿನ – ಸಿಯಾರಿಯಿಂದ ಬರ್ಸು ಬೇಸ್ ಕ್ಯಾಂಪ್

ಆರನೇ ದಿನ – ಬರ್ಸು ಬೇಸ್ ಕ್ಯಾಂಪ್‌ನಿಂದ ಹರಿದ್ವಾರ – ಜೀಪಿನಲ್ಲಿನ ಪ್ರಯಾಣ.

ಮೊದಲನೇ ದಿನ – 26.09.2015 ಹರಿದ್ವಾರದಿಂದ ಬರ್ಸು ಬೇಸ್ ಕ್ಯಾಂಪ್ ಜೀಪಿನಲ್ಲಿನ 220 ಕಿ.ಮೀ ಪ್ರಯಾಣ

ಮುಂಜಾನೆ 7 ಗಂಟೆಗೆ ಹರಿದ್ವಾರ ರೈಲ್ವೆ ನಿಲ್ದಾಣದಿಂದ ಒಟ್ಟು 12 ಚಾರಣಿಗರು ಒಂದು ವಾಹನದಲ್ಲಿ ಪ್ರಯಾಣ ಪ್ರಾರಂಭಿಸಿ ಋಷಿಕೇಶ್ – ನ್ಯೂಟೆಹ್ರಿ ತಲುಪಿ ಅಲ್ಲಿಂದ ಉತ್ತರಕಾಶಿಯ ಮಾರ್ಗವಾಗಿ ಸಂಜೆ 5 ಗಂಟೆಗೆ ಬರ್ಸು ಹಳ್ಳಿಯಲ್ಲಿನ GMVN ಗೆಸ್ಟ್ ಹೌಸ್ ಬೇಸ್ ಕ್ಯಾಂಪ್ ತಲುಪಿದೆವು. ಮಾರ್ಗದುದ್ದಕ್ಕೂ ಸುಂದರ ಪ್ರಕೃತಿ ನಮ್ಮ ಪ್ರಯಾಣ ಮುದಗೊಳಿಸಿತು. ಅರ್ಧ ಗಂಟೆಯ ವಿಶ್ರಾಂತಿಯ ನಂತರ ಚಹಾ ಸೇವಿಸಿ ನಾನು ಹಾಗೂ

ಮತ್ತಿಬ್ಬರು ಬರ್ಸು ಕ್ಯಾಂಪಿನಿಂದ ದಯಾರ ಬುಗ್ಯಾಲ್ ಕಡೆಗೆ ಹೋಗುವ Welcome Arch ವಿಕ್ಷಿಸಲು ಹೊರಟೆವು. ನಂತರ ಮರಳಿ ಗೆಸ್ಟ್ ಹೌಸ್ ಗೆ ಬಂದು ಸುತ್ತಲಿನ ಹೂಗಿಡಗಳಲ್ಲಿನ ಸುಂದರ ಹೂವುಗಳನ್ನು ಕತ್ತಲಾಗುವವರೆಗೂ ನೋಡಿದೆವು. ರಾತ್ರಿ ಊಟಮಾಡಿ ನಿದ್ರಿಸಿದೆವು.

ಎರಡನೇ ದಿನ – 27.09.2015 ಬರ್ಸು ಕ್ಯಾಂಪ್(7400ಅಡಿ)ನಿಂದ ದಯಾರಾ ಬುಗ್ಯಾಲ್(11050ಅಡಿ) – 4-5 ಗಂಟೆಗಳ 8 ಕಿ.ಮೀ ಚಾರಣ

ಮುಂಜಾನೆಯ ಉಪಹಾರದ ನಂತರ 8 ಗಂಟೆಗೆ ನಾವೆಲ್ಲರೂ ಚಾರಣಕ್ಕೆ ಸಿದ್ಧರಾಗಿ ಮಾರ್ಗದರ್ಶಿಯೊಂದಿಗೆ ದಯಾರಾ ಬುಗ್ಯಾಲ್ ಕಡೆಗೆ ಚಾರಣ ಪ್ರಾರಂಭಿಸಿದೆವು. ಮಧ್ಯದಲ್ಲಿ ಮೂರು ಕಡೆಗಳಲ್ಲಿ ಕಡಿದಾದ ಮಾರ್ಗವನ್ನು ಹತ್ತಬೇಕಿತ್ತು. ಮಾರ್ಗ ಓಕ್ ಮರಗಳ ಹಾಗೂ ರೋಡೋಡೆಂಡ್ರಾನ್ ಗಿಡಗಳಿಂದ ಕೂಡಿದ್ದು ಅನೇಕ ಕಡೆ ಮೆಟ್ಟಿಲುಗಳು ಇದ್ದು ಹತ್ತುವುದು ಎಲ್ಲರಿಗೂ ಸಾಧ್ಯವಾಯಿತು.

ಸುಮಾರು 2 ಗಂಟೆಗಳ ತೀವ್ರ ಏರುಮಾರ್ಗದಲ್ಲಿ ಚಾರಣ ಮಾಡಿದ ಮೇಲೆ ನಾವು ಪೈನ್ ವೃಕ್ಷಗಳಿಂದ ಸುತ್ತುವರೆದ ಬರ್ನಾಲ ಹುಲ್ಲುಗಾವಲನ್ನು ಕುರಿಕಾಯುವವರ ಗುಡಿಸಿಲುಗಳ ಮುಖಾಂತರ ತಲುಪಿದೆವು. ಹತ್ತಿರದಲ್ಲೇ ಬರ್ನಾಲಾ, ಉಪ್ಪಿನ ಸಣ್ಣಕೊಳ ಇರುವುದೆಂದು ಮಾರ್ಗದರ್ಶಿ ತಿಳಿಸಿದ್ದರಿಂದ ಅದನ್ನು ನೋಡಲು ನಾವು ಅಲ್ಲಿಗೆ ಹೋದೆವು.

ಇಲ್ಲಿಂದ ನಮಗೆ Srikanta, Jaonli, Gangotri ಪರ್ವತ ಶ್ರೇಣಿಗಳನ್ನು ನೋಡಲು ಸಾಧ್ಯವಾಯಿತು. 11 ಗಂಟೆಗೆ ಇಲ್ಲಿಂದ ಚಾರಣ ಮುಂದುವರೆಸಿ ಎರಡನೇ ಹಂತದ ಕಾಡಿನ ಏರು ಮಾರ್ಗದಲ್ಲಿ ದಯಾರಾ ಬುಗ್ಯಾಲ್ ಕಡೆಗೆ ಹೊರಟೆವು. ಹುಲ್ಲುಗಾವಲಿನ ಕೊನೆ ತಲುಪಿ ಮರಗಳ ಸಾಲಿರುವ ಮಾರ್ಗ ಪ್ರವೇಶಿಸಲು ಬಲಕ್ಕೆ ತಿರುಗಿ ನಡೆಯತೊಡಗಿದೆವು. ಇಲ್ಲಿಂದ ಮತ್ತೆ 2 ಗಂಟೆ ಕಾಲ ತೀವ್ರ ಏರುಮಾರ್ಗದಲ್ಲಿ ಹತ್ತಿದ ನಂತರ ಸಾಲುಮರಗಳ ಕೊನೆಗೆ ಬಂದು ತಲುಪಿದೆವು. ಇಲ್ಲಿಂದ ನಾವು 26 ಚದರ ಕಿಲೋ ಮೀಟರಿನ ದಯಾರಾ ಕುರಿ/ ಹಸುಗಳು ಹುಲ್ಲುಮೇಯುವ ಪ್ರದೇಶ ಪ್ರವೇಶಿಸಿದೆವು. ಇಲ್ಲಿಂದ ಮತ್ತೊಂದು ಕಿಲೋಮೀಟರ್ ಬಲ ಭಾಗದ ಮಾರ್ಗದಲ್ಲಿ ನಡೆದು ಒಂದು ತೊರೆಯನ್ನು ದಾಟಿ ಮುನ್ನಡೆದಾಗ ನಮಗೆದುರಾದುದೇ ವಿಶಾಲವಾದ ದಯಾರಾ ಹುಲ್ಲುಗಾವಲು. ಇಲ್ಲಿಂದ ಎಡಕ್ಕೆ ನಡೆದು ಓಕ್ ಹಾಗೂ ಪೈನ್ ವೃಕ್ಷಗಳ ಮಧ್ಯದಲ್ಲಿನ ಸಮತಟ್ಟಾದ ಪ್ರದೇಶದಲ್ಲಿ ಈಗಾಗಲೇ ಇಂಡಿಯಾ ಹೈಕ್ ಸಂಸ್ಥೆ ನಿರ್ಮಿಸಿದ್ದ ಕ್ಯಾಂಪ್ ತಲುಪಿ ಅಲ್ಲಿನ ಟೆಂಟ್ ಪ್ರವೇಶಿಸಿದೆವು. ಸಮಯ 2 ಗಂಟೆಯಾಗಿತ್ತು. ಚಹಾ ನಂತರ 3 ಗಂಟೆಗೆ ಬಿಸಿ ಬಿಸಿ ಮ್ಯಾಗಿ ನೂಡಲ್ಸ್ ನೀಡಿದರು. ಸಂಜೆ ಸುತ್ತಲಿನ ಹುಲ್ಲುಗಾವಲಿನಲ್ಲಿ ಒಂದು ಗಂಟೆ ಸುತ್ತಾಡಿ ಹತ್ತಿರದಲ್ಲಿನ ಒಂದು ವೀಕ್ಷಣಾ ಕಟ್ಟಡದೆಡೆಗೆ ಹೋಗಿ ಅಲ್ಲಿ ಸ್ವಲ್ಪ ಸಮಯ ಇದ್ದು ಮರಳಿ ಕ್ಯಾಂಪಿಗೆ ಬಂದು ರಾತ್ರಿ ಊಟಮಾಡಿ ನಮ್ಮ ಟೆಂಟಿನೊಳಗೆ ಹೋಗಿ ಸ್ಲೀಪಿಂಗ್ ಬ್ಯಾಗಿನೊಳಗೆ ತೂರಿಕೊಂಡು ಮಲಗಿದೆವು.

ಮೂರನೇ ದಿನ – 28.09.2015 ದಯಾರಾ ಬುಗ್ಯಾಲ್ (11050ಅಡಿ)ನಿಂದ ಬಕಾರಿಯದೆಡೆಗೆ (12500ಅಡಿ) ನಂತರ ದಯಾರಾ ಕ್ಯಾಂಪ್ ಕಡೆಗೆ – 5–6 ಗಂಟೆ – 8 ಕಿ.ಮೀ

ಇಂದಿನ ಚಾರಣದಲ್ಲಿ ದಯಾರಾ ಬುಗ್ಯಾಲಿನ ಎತ್ತರದ ಪ್ರದೇಶಗಳ ಅನ್ವೇಷಣೆ. ಇಂದು ನಾವು 1500 ಅಡಿ ಎತ್ತರದ ಪ್ರದೇಶ ತಲುಪಬೇಕಿತ್ತು. ಕ್ಯಾಂಪಿನಿಂದ ನೇರವಾಗಿ ಹುಲ್ಲುಗಾವಲಿನಲ್ಲಿ ಹಲವು ದಿಬ್ಬಗಳನ್ನು ಹತ್ತುತ್ತಾ ಮುನ್ನಡೆದೆವು. ನಮ್ಮ ಎಡಗಡೆ ಹತ್ತಿದ ಮೊದಲನೆ ದಿಬ್ಬವೇ ಮೂಸಥಂಗಿ ಎಂದು ಮಾರ್ಗದರ್ಶಿ ತಿಳಿಸಿದರು. ಇಲ್ಲಿ ಅಪ್ಪಟ ಹಸಿರು ಹುಲ್ಲುಗಾವಲು ನಮ್ಮ ಮುಂದೆ ಕಾಣಿಸುತ್ತಿತ್ತು. ಮೂಸಾಥಂಗಿ ದಿಬ್ಬದಿಂದ ಬಂದರ್ ಪೂಂಚ್ ಪರ್ವತ ಶ್ರೇಣಿಗಳು ಸ್ಪಷ್ಟವಾಗಿ ಕಾಣಿಸತೊಡಗಿತು. ಇಲ್ಲಿನ 180 ಡಿಗ್ರಿ ಆಕಾರದಲ್ಲಿನ ಪರ್ವತ ಶ್ರೇಣಿಗಳ ದೃಶ್ಯ ನೋಡುತ್ತ ನಾನು ಭಾವಪರವಶನಾದೆ. ಈ ಪರ್ವತ ಶ್ರೇಣಿ ದಯಾರಾ ಹುಲ್ಲುಗಾವಲಿಗೆ ಹತ್ತಿರದಲ್ಲಿದ್ದು ತನ್ನ ಭವ್ಯರೂಪ ನಮಗೆ ತೋರುತ್ತಿತ್ತು. ಮೂಸಥಂಗಿ ಪ್ರದೇಶದಿಂದ ಬಕಾರಿಯ ಟಾಪ್ ಕೇವಲ ಮೂರು ದಿಬ್ಬಗಳ ನಂತರ ಕಾಣುವುದು ಎಂದು ಮಾರ್ಗದರ್ಶಿ ತಿಳಿಸಿದರು. ಬಕಾರಿಯಾ ಟಾಪ್‌ನಿಂದ ಹಲವು ಮಾರ್ಗ ಎದುರಾಗುವುದು. ಇಲ್ಲಿಂದ ಅಘೋಡ ಹಳ್ಳಿಯನ್ನು ಸ್ಪಷ್ಟವಾಗಿ ಕಾಣಬಹುದು. ಈ ಹಳ್ಳಿಯ ಹಿಂಭಾದಗಲ್ಲೇ ಉತ್ತರಕಾಶಿ ಪಟ್ಟಣವಿರುವುದು ಎಂಬ ಮಾಹಿತಿ ಮಾರ್ಗದರ್ಶಿ ತಿಳಿಸಿದರು. ಬಕಾರಿಯಾ ಟಾಪ್ ನಿಂದ ಬಲಭಾಗದ ಮಾರ್ಗ ಸಿಯಾರಿ ಹಾಗೂ ಗಿಡ್ಡಾರಾಬುಗ್ಯಾಲ್ ಕಡೆಗೆ ಕರೆದೊಯ್ಯುವುದು ಎಂಬ ಮಾಹಿತಿ ಮಾರ್ಗದರ್ಶಿಯಿಂದ ಅರಿವಾಯಿತು. ಈ ಎರಡೂ ಬುಗ್ಯಾಲ್‌ಗಳು 12000 ಅಡಿಗಳಿಗಿಂತಲೂ ಎತ್ತರದಲ್ಲಿರುವುದು. ಈಗ ಬಕಾರಿಯಾ ಟಾಪ್‌ನಿಂದ ಮರಳಿ ದಯಾರಾ ಬುಗ್ಯಾಲಿನ ಕ್ಯಾಂಪ್ ಕಡೆಗೆ ಮರಳಿದೆವು.

ನಾಲ್ಕನೇ ದಿನ – 29.09.2015 ದಯಾರಾ ಕ್ಯಾಂಪ್ ನಿಂದ ಸಿಯಾರಿ ಬಗ್ಯಾಲ್ – ಮಾರ್ಗದಲ್ಲಿ ಗಿಡ್ಡಾರಾ ಬುಗ್ಯಾಲ್, ದೇವಿಕುಂಡ ದಿಬ್ಬ, ಸೂರ್ಯಾ ಟಾಪ್, ಗಿಡ್ಡಾರಾ ಪಾಸ್, ಮತ್ತೆ ಗಿಡ್ಡಾರಾ ಬುಗ್ಯಾಲ್ ಮಾರ್ಗವಾಗಿ ಸಿಯಾರಿ ಬುಗ್ಯಾಲ್ ಕಡೆಗೆ ಚಾರಣ.

ಇಂದು ನಾವು ದಯಾರಾ ಕ್ಯಾಂಪಿನಿಂದ ಬಕಾರಿಯಾ ಟಾಪ್ ಕಡೆಗೆ ಹೋಗದೆ ಮೂಸಾಥಂಗಿಯಿಂದ ಬಲಕ್ಕೆ ಕಾಣುವ ಮತ್ತೊಂದು ಮಾರ್ಗದಿಂದ ನೇರವಾಗಿ ಸಿಯಾರಿ ಬುಗ್ಯಾಲ್ ಹಾಗೂ ಗಿಡ್ಡಾರಾ ಬುಗ್ಯಾಲ್ ಕಡೆಗೆ ಹುಲ್ಲುಗಾವಲಿನಲ್ಲೇ ಬೆಟ್ಟ ಹತ್ತತೊಡಗಿದೆವು. ಇದು ಅತ್ಯಂತ ಶ್ರಮದಾಯಕವಾಗಿತ್ತು.

ಆದರೆ ನೆಲವು ಹುಲ್ಲುಗಾವಲಿನದಾದ್ದರಿಂದ ನಮ್ಮ ಪಾದಗಳಿಗೆ ಹೆಚ್ಚೇನೂ ನೋವುಂಟಾಗಲಿಲ್ಲ. ಬದಲಾಗಿ 12000 ಅಡಿಗಳಷ್ಟು ಎತ್ತರವನ್ನು ತಲಪುವ ಮತ್ತೊಂದು ಸಾಹಸ ಮಾಡಿದಂತಾಯಿತು.

ಗಿಡ್ಡಾರಾ ಬುಗ್ಯಾಲಿನಿಂದ ಮಾರ್ಗದರ್ಶಿ ನಮ್ಮನ್ನು ಮತ್ತೊಂದು ಎತ್ತರದ ದಿಬ್ಬವಾದ ದೇವಿಕುಂಡ ದಿಬ್ಬದವರೆಗೂ ಕರೆದೊಯ್ದು ಅಲ್ಲಿಂದ ಮತ್ತೂ ಎತ್ತರದ ದಿಬ್ಬವಾದ ಸೂರ್ಯಾ ಟಾಪ್ ಹತ್ತುವಂತೆ ತಿಳಿಸಿದರು. ಅದರಂತೆ ನಾವುಗಳೆಲ್ಲರೂ ಸೂರ್ಯಾ ಟಾಪ್ ಹತ್ತಿ ಅಲ್ಲಿಂದ ತೀವ್ರವಾದ ಇಳಿಜಾರಿನ ಮಾರ್ಗದ ಮೂಲಕ ಗಿಡ್ಡಾರಾ ಬುಗ್ಯಾಲ್ ತಲುಪಿ ಅಲ್ಲಿಂದ ಸಿಯಾರಿಯ ಕಡೆಗೆ ಇಳಿದು ಬಂದೆವು. ಸಿಯಾರಿಯಾ ಬುಗ್ಯಾಲಿನಲ್ಲೇ ಇಂದಿನ ಕ್ಯಾಂಪನ್ನು ಸ್ಥಾಪಿಸಿದ್ದರು. ಇದರೊಂದಿಗೆ ನಾಲ್ಕನೇ ದಿನದ ಚಾರಣವು ಮುಗಿದು ಮಧ್ಯಾಹ್ನದ ಊಟವನ್ನು ಮಾಡಿ ಟೆಂಟಿನೊಳಗೆ ಒಂದು ಗಂಟೆ ವಿಶ್ರಾಂತಿ ಪಡೆದು ನಂತರ ಅಲ್ಲಿನ ಹುಲ್ಲುಗಾವಲಿನ ಪ್ರದೇಶದಲ್ಲೇ ಸುತ್ತಾಡಿ ರಾತ್ರಿ ಊಟಮಾಡಿ ನಿದ್ರಿಸಿದೆವು.

ಐದನೇ ದಿನ –30.09.2015 ಸಿಯಾರಿಯ ಕ್ಯಾಂಪಿನಿಂದ ಬರ್ಸು ಬೇಸ್ ಕ್ಯಾಂಪ್

ಇಂದು ನಾವು ಸಿಯಾರಿಯಾ ಬುಗ್ಯಾಲಿಂದ ಬೆಳಗ್ಗೆ 9 ಗಂಟೆಗೆ ಹೊರಟು ತೀವ್ರ ಇಳಿಜಾರಿನ ಮಾರ್ಗದಲ್ಲಿ ನಡೆದು ದಯಾರಾ ಕ್ಯಾಂಪ್ ಸೈಟ್ ಬಳಿ ಬಂದು ಕೆಲವು ಹೊತ್ತು ವಿಶ್ರಾಂತಿ ನಂತರ ಅಲ್ಲಿಂದ ಸಂಜೆ 5 ಗಂಟೆಗೆ ಬರ್ಸು ಬೇಸ್ ಕ್ಯಾಂಪ್ ತಲುಪಿದೆವು.

ಐದನೇ ದಿನದ ರಾತ್ರಿ ಬರ್ಸು ಹಳ್ಳಿಯಲ್ಲಿನ ಗೆಸ್ಟ ಹೌಸ್ ನಲ್ಲೇ ಕಳೆದು ಮಾರನೇ ದಿನ ಅಕ್ಟೋಬರ್ ಒಂದರಂದು ಬರ್ಸು ಕ್ಯಾಂಪಿನಿಂದ ಟೆಂಪೋ ಟ್ರಾವಲರ್ ನಲ್ಲಿ ಪಯಣಿಸಿ ಸಂಜೆ 6 ಗಂಟೆಗೆ ಹರಿದ್ವಾರ ತಲುಪಿದೆವು.

ಸಂಡಕ್ಫು ಮತ್ತು ಫಾಲೂಟ್

ಬೆಂಗಾಲಿ ಜನಗಳು ತಾವು ಪ್ರೀತಿಯಿಂದ ಇಷ್ಟಪಟ್ಟು ತಿನ್ನುವ ಮೀನಿನ ಖಾದ್ಯಕ್ಕಿಂತ ಅಧಿಕವಾಗಿ ಪ್ರೀತಿಸುವುದೊಂದಿದೆ. ಅದೇನು ಎಂದು ಅಲೋಚಿಸುತ್ತಿದ್ದೀರಾ?

ಪಶ್ಚಿಮ ಬಂಗಾಲದಲ್ಲಿನ ಹಿಮಾಲಯದ ಅತಿ ಎತ್ತರದ ಶಿಖರವೆಂದರೆ ಸಂಡಕ್ಫು (3636 ಮೀ). ಬಂಗಾಲಿ ಚಾರಣಿಗರು ಈ ಚಾರಣವನ್ನು "ಚಾರಣಗಳ ಮಾತೆ" ಎಂದು ಪರಿಗಣಿಸಿ ಬೇರೆಡೆಗೆ ಚಾರಣ ಮಾಡುವ ಮೊದಲು ಸಂಡಕ್ಫು ಚಾರಣ ಮಾಡುತ್ತಾರೆ.

ಸಂಡಕ್ಫು ಚಾರಣದಲ್ಲಿ ನಮಗೆ ಹಿಮಾಲಯದ ಅನೇಕ ಸುಪ್ರಸಿದ್ಧ ಶಿಖರಗಳು ಕಂಡುಬರುತ್ತದೆ. ಅವುಗಳೆಂದರೆ – ಲ್ಹೋಟ್ಸೆ(8516ಮೀ) ಮತ್ತು ಮಕಲು(8463ಮೀ) ವಿಶ್ವದ ಅತಿ ಎತ್ತರವಾದ ಶಿಖರಗಳಲ್ಲಿ ನಾಲ್ಕನೇ ಹಾಗೂ ಐದನೇ ಶಿಖರಗಳು. ಇವೆರಡರ ನಡುವೆ ಇರುವುದೇ ವಿಶ್ವದ ಅತಿ ಎತ್ತರದ ಶಿಖರ ಮೌಂಟ್ ಎವೆರೆಸ್ಟ್(8848ಮೀ). ಇದಲ್ಲದೆ ಈ ಚಾರಣದ ಮತ್ತೊಂದು ವೈಶಿಷ್ಟ್ಯವೆಂದರೆ ಹಿಮಾಲಯದಲ್ಲಿನ ಹಲವಾರು ಶಿಖರಗಳು ಒಂದು ಗುಂಪಾಗಿದ್ದು, ಚಾರಣದ ಮೂರನೇ ದಿನ (ಟೋಂಗ್ಲೂ) ಸೂರ್ಯೋದಯದ ಸಮಯದಲ್ಲಿ ದೂರದಿಂದ ನೋಡಿದರೆ "ನಿದ್ರಿಸುತ್ತಿರುವ ಬುದ್ಧನಂತೆ" ಕಂಡುಬರುವುದು. ಈ ಗುಂಪಿನ ಶಿಖರಗಳೆಂದರೆ – ನೀವು ಪೂರ್ವದಿಕ್ಕಿಗೆ ಮುಖ ಮಾಡಿಕೊಂಡು ನಿಂತಾಗ ಎಡದಿಂದ ಬಲಕ್ಕೆ – ಕುಂಭಕರ್ಣ, ಕಾಂಚೆನ್‌ಝೋಂಗ್ ಮತ್ತು ಸಿಂವ್ರೋ, ಹಿಂಭಾಗದಲ್ಲಿ ಕಾಂಚೆನ್‌ಝೋಂಗ್ ಶಿಖರದ ತಳಭಾಗದಲ್ಲಿ ಕಾಣುವುದು ಕೋಕ್ಟಾಂಗ್, ರಟೋಂಗ್, ಫ್ರೇ, ಉತ್ತರ ಹಾಗೂ ದಕ್ಷಿಣದ ಕಬ್ರು, ಕವಲಾಗಿರುವ ಕಬ್ರು, ಗೋಯ್ಚ್ ಮತ್ತು ಪಾಂಡಿಮ್‌ಗಳು ಗೋಯ್ಚಾಲಾ, ಟೆಂಚೆಂಖಾಂಗ್, ಜುಪೋನೋ ಮತ್ತು ನರ್ಸಿಂಗ್. ಈ ಶಿಖರಗಳಲ್ಲಿ ಕುಂಭಕರ್ಣ ಶಿಖರವು ನಿದ್ರಿಸುತ್ತಿರುವ ಬುದ್ಧನ ಶಿರ ಹಾಗೂ ಮುಖವಾದರೆ, ಕಾಂಚೆನ್‌ಝೋಂಗ್

ಶಿಖರವು ಬುದ್ಧನ ದೇಹದ ಮೇಲ್ಭಾಗ. ಉಳಿದ ಶಿಖರಗಳು ಬುದ್ಧನ ದೇಹದ ಉಳಿದ ಭಾಗವಿದ್ದು ಅದರಲ್ಲಿ ಪಾಂಡಿಮ್ ಬುದ್ಧನ ಪಾದ.

ಸಂಡಕ್ಫು ಚಾರಣದಲ್ಲಿನ ಹಲವು ವಿಶೇಷತೆಗಳೆಂದರೆ :

ಈ ಚಾರಣ ಸಂಪೂರ್ಣವಾಗಿ ಭಾರತ-ನೇಪಾಳ ಗಡಿಯಲ್ಲೇ ಇರುವುದು. ಕೆಲವು ಕಡೆಯಂತೂ ಬಲಹೆಜ್ಜೆಯನ್ನು ಭಾರತದಲ್ಲಿಟ್ಟರೆ ಎಡಹೆಜ್ಜೆ ನೇಪಾಳದಲ್ಲಿ ಇಟ್ಟಿರುತ್ತೀರಿ. ಈ ಚಾರಣದಲ್ಲಿ ನಮಗೆ ಸಿಗುವ ಕಾಲಪೋಕ್ರಿ (ಕಪ್ಪುಕೊಳ)- ಇದು ಬೌದ್ಧರಿಗೆ ಪವಿತ್ರವಾದ ಕೊಳ. ಈ ಕೊಳದಲ್ಲಿನ ನೀರು ಎಂತಹ ಚಳಿಗಾಲದಲ್ಲೂ ಹೆಪ್ಪುಗಟ್ಟುವುದಿಲ್ಲ.

ಸಂಡಕ್ಫು ಪ್ರದೇಶದಲ್ಲಿನ ಕೆಳಭಾಗದಲ್ಲಿರುವ ಬೀಖೆ ಭಾನ್‌ಜ್ಯಾಂಗ್ ಕಣಿವೆ. ಇಲ್ಲಿ ಹೇರಳವಾಗಿ ಬೆಳೆಯುವ ವಿಷಪೂರಿತವಾದ Aconite ಹೂವುಗಳಿಂದಾಗಿ ಈ ಕಣಿವೆಯನ್ನು ವಿಷಪೂರಿತ ಕಣಿವೆ ಎಂದು ಕರೆಯಲಾಗುತ್ತದೆ.

ಹಿಮಾಲಯದಲ್ಲಿನ ಇತರ ಚಾರಣಗಳಂತೆ ಈ ಚಾರಣದಲ್ಲಿ ಚಾರಣಿಗರು ಟೆಂಟ್‌ಗಳಲ್ಲಿ ಮಲಗಬೇಕಿಲ್ಲ ಹಾಗೂ ಚಾರಣ ಸಂಸ್ಥೆಯ ಅಡಿಗೆಯವರು ಮಾಡಿದ ಅಡಿಗೆಯನ್ನು ತಿನ್ನಬೇಕಿಲ್ಲ. ಈ ಚಾರಣವನ್ನು "ಟೀ ಹೌಸ್ ಚಾರಣ" ಎನ್ನುವರು. ಅಂದರೆ ನೇಪಾಳಿಗರ ಮನೆಗಳಲ್ಲೇ ಊಟ ವಸತಿಗಳು ದೊರಕುವುದು. ಇಲ್ಲಿನ ವೈಶಿಷ್ಟ್ಯವೆಂದರೆ ನೇಪಾಳಿ ಚಹಾ.

ಸಂಡಕ್ಫು ಚಾರಣದ ಬೇಸ್ ಕ್ಯಾಂಪ್ ಜೌಬಾರಿ. ಈ ಕ್ಯಾಂಪ್ ಹಿಮಾಲಯದಲ್ಲಿನ ಚಾರಣಗಳಲ್ಲಿನ ಬೇಸ್ ಕ್ಯಾಂಪ್‌ಗಳ ಪೈಕಿ ಎರಡನೇ ಅತಿ ಸುಂದರವಾದ ಬೇಸ್ ಕ್ಯಾಂಪ್. ಸಂಡಕ್ಫುವಿನಿಂದ ಫಾಲುಟ್ ಕಡೆಗಿನ ಚಾರಣವು ಒಂದೇ ಹಂತದಲ್ಲಿರುವುದರಿಂದ ಅಷ್ಟೇನೂ ಕಠಿಣವಾಗಿರುವುದಿಲ್ಲ. ಹಾಗೂ ಇಲ್ಲಿಂದ ಕಾಂಚೆನಜುಂಗ ಪರ್ವತ ಮತ್ತಷ್ಟು ಸ್ಪಷ್ಟವಾಗಿ ಕಾಣುವುದು. ನಾನು ಚಾರಣ ಮಾಡಿದಾಗ ಹವಾಮಾನ ವೈಪರೀತ್ಯದಿಂದಾಗಿ ಇಲ್ಲಿಗೆ ಹೋಗುವುದಕ್ಕಾಗಲಿಲ್ಲ. ಅದಕ್ಕೆ ಬದಲಾಗಿ ಬೇರೊಂದು ಕಡೆಯಲ್ಲಿನ ಪಿಡಬ್ಲ್ಯೂ ಅತಿಥಿಗೃಹದಲ್ಲಿ ತಂಗಿದ್ದು ಅಲ್ಲಿಂದ ನೇರವಾಗಿ ಗೋರ್ಖೆ ಕ್ಯಾಂಪ್ ಕಡೆಗೆ ಚಾರಣ ಮಾಡಿದೆವು.

ಸಂಡಕ್ಫು ಚಾರಣವನ್ನು ನಾನು ನನ್ನ ಆತ್ಮೀಯ ಸ್ನೇಹಿತರುಗಳಾದ ಶ್ರೀ ಬಿ.ವಿ.ರಮೇಶ್ ಹಾಗೂ ಶ್ರೀ ಕೆ.ವಿ.ಆಚಾರ್ಯ ಅವರೊಂದಿಗೆ ಇಂಡಿಯಾ ಹೈಕ್ಸ್ ಸಂಸ್ಥೆಯೊಂದಿಗೆ 2016 ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ಮಾಡಿದೆ. ಈ ಸಂದರ್ಭದಲ್ಲಿ ನಮ್ಮ ದೀರ್ಘಕಾಲ (3300 ಕಿ.ಮೀ) ರೈಲು ಪ್ರಯಾಣದ ಅನುಭವಗಳು ಮರೆಯಲಾರದ್ದಾಗಿದೆ. ಮೂರು ದಿನಗಳ ಬೆಂಗಳೂರು-

ನ್ಯೂಜಲ್ಪೈಗುರಿ ರೈಲು ಪ್ರಯಾಣದಲ್ಲಿ ಬೆಳಗಿನ ಚಹಾ, ಉಪಹಾರ, ಊಟ, ಸಂಜೆ ಚಹಾ–ಸ್ನ್ಯಾಕ್ಸ್ ಹಾಗೂ ರಾತ್ರಿ ಊಟ ಮತ್ತು ದೊಡ್ಡ ಪಾತ್ರೆಯಲ್ಲಿನ ರುಚಿಯಾದ ರಸಗುಲ್ಲಗಳ ಸೇವನೆ! ವ್ಹಾ ಇಂತಹ ರಸದೌತಣ ಸವಿಯಲು ಮತ್ತೊಮ್ಮೆ ಅವಕಾಶ ಒದಗೀತೆ ಎಂದು ಕಾತುರದಿಂದ ಕಾಯುತ್ತಿರುವೆ.

ಮೊದಲನೇ ದಿನ – 26.02.2016 ಯಶವಂತಪುರ ರೈಲ್ವೆ ನಿಲ್ದಾಣದಿಂದ ನ್ಯೂ ಜಲಪೈಗುರಿ ಗುರಿ ಮಾರ್ಗವಾಗಿ ಜೌಬಾರಿ ಬೇಸ್ ಕ್ಯಾಂಪ್ ಕಡೆಗೆ ಪ್ರಯಾಣ.

ಬೆಂಗಳೂರಿನ ಯಶವಂತಪುರ ರೈಲ್ವೆ ನಿಲ್ದಾಣದಿಂದ ನನ್ನ ಇಬ್ಬರು ಚಾರಣಿಗರೊಂದಿಗೆ ರೈಲಿನಲ್ಲಿ ಪಯಣಿಸಿ 29.02.2016ರಂದು ಮುಂಜಾನೆ 9.30ಕ್ಕೆ ನ್ಯೂ ಜಲಪೈಗುರಿ ನಿಲ್ದಾಣ ತಲುಪಿ ಅಲ್ಲಿಂದ 12.30ಕ್ಕೆ ಉಳಿದ ಚಾರಣಿಗರೊಂದಿಗೆ ಟೆಂಪೋ ಟ್ರಾವಲರ್ ಮೂಲಕ ಡಾರ್ಜಲಿಂಗ್ – ಮಾನೆಭನ್ ಜ್ಯಾಂಗ್ ಮುಖಾಂತರ ಜೌಬಾರಿ ಬೇಸ್ ಕ್ಯಾಂಪನ್ನು ಸಂಜೆ 5.30ಕ್ಕೆ ತಲುಪಿದೆವು. ಮಾರ್ಗದುದ್ದಕ್ಕೂ ಚಹಾ ತೋಟಗಳ ಸುಂದರ ದೃಶ್ಯ ಮನಮೋಹಕವಾಗಿತ್ತು.

ರಸ್ತೆಯಲ್ಲಿ ಜನಗಳು ಸಾವಕಾಶದಿಂದ ಬೈಸಿಕಲ್ ಸವಾರಿ ಮಾಡುತ್ತ ಪದಾರ್ಥಗಳನ್ನು ಮಾರುತ್ತಿದ್ದರು. ಇದಲ್ಲದೇ ಇಲ್ಲಿನ ಪ್ರತಿಯೊಂದು ಮನೆಯೂ ಬಣ್ಣ ಬಣ್ಣಗಳಿಂದ ಕೂಡಿದ್ದು ಸುತ್ತಲೂ ತೋಟ ಹಾಗೂ ಎತ್ತರದ ಮರಗಳಿದ್ದು ಸೂರ್ಯಾಸ್ತ ವೀಕ್ಷಿಸಲು ಅನುಕೂಲವಾಗಿತ್ತು. ಸಂಜೆ ಚಹಾ ನಂತರ ಚಾರಣ ನಾಯಕರು ಎಲ್ಲರ ಪರಿಚಯ ಮಾಡಿಸಿ ನಮ್ಮಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಸಂಡಕ್ಫು ಚಾರಣದ ಬಗ್ಗೆ ಮಾಹಿತಿ ಹಂಚಿಕೊಂಡ ನಂತರ ನಮ್ಮನ್ನು ಅಲ್ಲಿನ ಹವೆಗೆ ಒಗ್ಗಿಕೊಳ್ಳುವ ಸಲುವಾಗಿ ರಸ್ತೆಯಲ್ಲಿ ಅರ್ಧ ಗಂಟೆ ನಡೆಯುವಂತೆ ಸೂಚಿಸಿದರು. ಅದರಂತೆ ರಸ್ತೆಯಲ್ಲಿ ನಡೆದು ಅಲ್ಲಿನ ವಾತಾವರಣಕ್ಕೆ ಹೊಂದಿಕೊಡೆವು. ರಾತ್ರಿ 8ಕ್ಕೆ ಊಟಮಾಡಿ ನಮಗಾಗಿ ಸಿದ್ಧಪಡಿಸಿದ್ದ ಕೋಣೆಗಳಲ್ಲಿ 6 ಚಾರಣಿಗರು ಒಂದು ಕೋಣೆಯಲ್ಲಿ ಮಲಗಿದೆವು.

ಎರಡನೇ ದಿನ – 01.03.2016 ಜೌಬಾರಿಯಿಂದ (2240 ಮೀ) ಟುಮ್ಲಿಂಗ್ (2875 ಮೀ) – 9 ಕಿ.ಮೀ ಚಾರಣ – 7–8 ಗಂಟೆ.

ಜೌಬಾರಿಯಲ್ಲಿ ಸೂರ್ಯೋದಯ ಮುಂಜಾನೆ 4.30ಕ್ಕೆ ಆಗುವುದು. ಹಾಗಾಗಿ ನಾವೆಲ್ಲರೂ ಸೂರ್ಯೋದಯಕ್ಕೆ ಮುಂಚೆ ಎದ್ದು ಚಾರಣಕ್ಕೆ ಸಿದ್ಧರಾಗಲು ಚಾರಣ ನಾಯಕರು ತಿಳಿಸಿದ್ದರು. ಅದರಂತೆ ನಾವೆಲ್ಲರೂ ಎದ್ದು ಸ್ನಾನ ಬೆಳಗಿನ ಉಪಹಾರ ಮುಗಿಸಿ 7.30ಕ್ಕೆ ಚಾರಣ ಪ್ರಾರಂಭಿಸಲು ಸಿದ್ಧರಾದೆವು.

ಚೌಬಾರಿಯಲ್ಲಿ ವಿದ್ಯುತ್ ಸೌಕರ್ಯವಿದ್ದದ್ದರಿಂದ ನಮ್ಮ ಮೊಬೈಲ್ಗಳನ್ನು ಚಾರ್ಜ್‌ಮಾಡಿಕೊಂಡಿದ್ದೆವು. ನಮ್ಮ ಕ್ಯಾಂಪಿನಿಂದ ಮುಖ್ಯರಸ್ತೆಗೆ ಬರಲು 10 ನಿಮಿಷ. ನಂತರ ಕೆಲವೇ ನಿಮಿಷಗಳಲ್ಲಿ ಮುಖ್ಯರಸ್ತೆ ಬಿಟ್ಟು ಬಲಕ್ಕೆ ಹೊರಳಿ ಕಾಡನ್ನು ಪ್ರವೇಶಿಸಿ ಹತ್ತತೊಡಗಿದೆವು. ಇಲ್ಲಿಂದ ಒಂದೂವರೆ ಗಂಟೆ ಹತ್ತಿದ ನಂತರ ನಾವು ಸಿಮೆಂಟ್ ರಸ್ತೆ ತಲುಪಿದೆವು. ಮಾರ್ಗ ಬಹುತೇಕ ಕಾಡು ಹಾಗೂ ಸಿಮೆಂಟ್ ರಸ್ತೆಗಳ ಮಿಶ್ರಣದಿಂದ ಕೂಡಿರುವುದು ಎಂದು ಮಾರ್ಗದರ್ಶಿ ನಮಗೆ ಮೊದಲೇ ತಿಳಿಸಿದ್ದರು. ಇಲ್ಲಿಂದ ಸಿಮೆಂಟ್ ರಸ್ತೆಯಲ್ಲಿ 5 ನಿಮಿಷ ನಡೆದು ನಂತರ ಎತ್ತರದ ಮರಗಳಿಂದ ಕೂಡಿದ ಕಾಡನ್ನು ಪ್ರವೇಶಿಸಿದೆವು. ಮಾರ್ಗದಲ್ಲಿ ಜಿಂಕೆಗಳ ಕೂಗು ಹಾಗೂ ಪಕ್ಷಿಗಳ ಚಿಲಿಪಿಲಿ ಶಬ್ದಗಳು ಕೇಳಿಬರುತ್ತಿದ್ದು ವಾತಾವರಣ ಚಾರಣಕ್ಕೆ ಸೊಗಸಾಗಿತ್ತು. ಅರ್ಧ ಗಂಟೆಯ ಚಾರಣದ ನಂತರ ಮಾರ್ಗದ ಇಕ್ಕೆಲಗಳಲ್ಲಿ ಕಂಡುಬರುತ್ತಿದ್ದ ಮರಗಳು ವಿರಳವಾಗಿ ಕೇವಲ ಸಣ್ಣ ಕುರುಚಲು ಗಿಡಗಳು ಗೋಚರಿಸತೊಡಗಿತು. ಕೆಲವೇ ನಿಮಿಷಗಳಲ್ಲಿ ನಮಗೆ ವಾಹನಗಳು ಚಲಿಸುವ ಶಬ್ದ ಕೇಳಿ ಬಂದಿತಾದರೂ ಅವನ್ನು ನೋಡಲು ಆಗುತ್ತಿರಲಿಲ್ಲ. ಸುಮಾರು ಎರಡೂವರೆ ಕಿಲೋ ಮೀಟರ್ ಚಾರಣದ ನಂತರ ಎತ್ತರದ ಮಾರ್ಗ ಕಡಿಮೆಯಾಗಿ ಕೆಲವೇ ನಿಮಿಷಗಳಲ್ಲಿ ಇಳಿಜಾರಿನ ಮಾರ್ಗವಿದ್ದು ಮುಂದೆ ಹೋಗುತ್ತಿದ್ದಂತೆ ಮೆಟ್ಟಿಲುಗಳ ಮಾರ್ಗವು ಗೋಚರವಾಗಿ ಅವುಗಳು ಕೊಳಕಾಗಿದ್ದುದಲ್ಲದೆ ಒಣಗಿದ ಎಲೆಗಳಿಂದ ಆವೃತವಾಗಿತ್ತು. ವಾತಾವರಣ ತಂಪಾಗಿ ಮಳೆ ಬರುವ ಸೂಚನೆಯಿದ್ದು ವಾತಾವರಣ ಹೀಗಿದ್ದರೂ ಚಾರಣದ ಸಮಯದಲ್ಲಿ ನಮ್ಮ ಬಳಿ ಸಾಕಷ್ಟು ಕುಡಿಯುವ ನೀರು ಇರಲೇಬೇಕಿತ್ತು. ನಾವು ಚಿತ್ರೆ, ಲಮಾಯ್ಧುರ ಮತ್ತು ಮೇಘ್ಮ ಹಳ್ಳಿಗಳನ್ನು ದಾಟಿ ಮನ್ನಡೆಯತೊಡಗಿದೆವು. ಚಿತ್ರೆ ಹಳ್ಳಿಯಿಂದ ನೇಪಾಳ ಪ್ರವೇಶಿಸಿದೆವು. ಚಿತ್ರೆ ಹಳ್ಳಿಯಿಂದ 3 ಕಿ.ಮೀ ನಡೆದನಂತರ ಲಾಮಾಯ್ಧುರ ಹಳ್ಳಿಯು ಎದುರಾಯಿತು. ಇಲ್ಲಿಂದ ಮುನ್ನಡೆದು 6ನೇ ಕಿ.ಮೀ ಕಲ್ಲನ್ನು ತಲುಪಿದಾಗ ಮತ್ತೆ ಸಿಮೆಂಟ್ ರಸ್ತೆ ಕಂಡಿತು. ಇಲ್ಲಿಂದ ಒಂದು ಗಂಟೆ ಚಾರಣ ಮಾಡಿದ ಮೇಲೆ ನಾವು ಒಂದು ಸಣ್ಣ ದಾಭವನ್ನು ತಲುಪಿದೆವು. ಇಲ್ಲಿ ನಮ್ಮ ಮಧ್ಯಾಹ್ನದ ಊಟ ಮುಗಿಸಿ ಸ್ವಲ್ಪ ವಿಶ್ರಾಂತಿಯ ನಂತರ ಮುಂದುವರೆಯುತ್ತ ಅಲ್ಲಲ್ಲಿ ಇಂಡಿಯಾ ಸರಹದ್ದನ್ನು ಪ್ರವೇಶಿಸಿ ಮತ್ತೆ ಕೂಡಲೇ ನೇಪಾಳ ಸರಹದ್ದನ್ನು ಪ್ರವೇಶಿಸುತ್ತ ಭಾರತ–ನೇಪಾಳಗಳ ನಡುವೆ ಚಾರಣ ಮಾಡತೊಡಗಿದೆವು. ಸಂಜೆ 4.30 ಕ್ಕೆ ನಾವು ಟುಮ್ಲಿಂಗ್ ಹೋಮ್ ಸ್ಟೇಯನ್ನು ತಲುಪಿದೆವು. ಇಲ್ಲಿಗೆ ನಮ್ಮ ಮೊದಲದಿನದ ಚಾರಣವು ಮುಗಿದು ನಾವು ಹೋಮ್ ಸ್ಟೇಯಲ್ಲಿ ನಮಗೆ ಕಾಯ್ದಿರಿಸಿದ್ದ ಕೋಣೆಗಳನ್ನು ಪ್ರವೇಶಿಸಿ ಸ್ನ್ಯಾಕ್ಸ್ ಹಾಗೂ ಚಹಾ ಸೇವಿಸಿದೆವು.

ಮೂರನೇ ದಿನ – 02.03.2016 ಟುಮ್ಲಿಂಗ್ (2875 ಮೀ) ಕ್ಯಾಂಪಿನಿಂದ ಕಾಲಾಪೋಕ್ರಿ (2990ಮೀ) ಕ್ಯಾಂಪಿನೆಡೆಗೆ – 15 ಕಿ.ಮೀ – 8–9 ಗಂಟೆ ಚಾರಣ.

ಸಂಡಕ್ಫೂ ಚಾರಣದಲ್ಲಿ ಹಿಮಾಲಯ ಪ್ರದೇಶದಲ್ಲಿನ ಇತರೆ ಚಾರಣಗಳಿಗಿಂತ ರಾತ್ರಿಯನ್ನು ಸ್ವಲ್ಪ ಹೆಚ್ಚಿನ ಶಾಖಯಿಂದು ಕೂಡಿದ ಕೋಣೆಗಳಲ್ಲಿ ನಿದ್ರಿಸಿದರೂ ಬೆಳಗಾಗುವುದರಲ್ಲಿ ಚಾರಣಿಗರ ಆಯಾಸ ಪರಿಹಾರವಾಗಿ ಮಾರನೇ ದಿನದ ಚಾರಣಕ್ಕೆ ಉತ್ಸಾಹ ಮರುಕಳಿಸುವುದು. ಈ ದಿನ ನಾವು 15 ಕಿ.ಮೀ ದೂರದ ಚಾರಣ ಮಾಡಬೇಕಿದ್ದು ಸುತ್ತಲಿನ ಪ್ರಕೃತಿ ಸೌಂದರ್ಯ ಅಮೋಘವಾಗಿದ್ದು ಆಯಾಸವನ್ನು ನಮ್ಮಿಂದ ದೂರ ಇಡುವುದೆಂದು ಮಾರ್ಗದರ್ಶಿ ಮೊದಲೇ ತಿಳಿಸಿದರು. ಹಾಗೇ ಮಾರ್ಗದರ್ಶಿ ಮುಂಜಾನೆ ಸೂರ್ಯೋದಯವಾಗುತ್ತಲೇ ಸ್ಲೀಪಿಂಗ್ ಬುದ್ಧ ದೃಶ್ಯ ನೋಡಬಹುದು ಎಂದು ತಿಳಿಸಿ ಸೂರ್ಯೋದಯವು ಬೆಳಗಿನ ಝಾವ 4.30ಕ್ಕೆ ಅಗುವುದೆಂದು ತಿಳಿಸಿದರು. ನಾವೆಲ್ಲರೂ ಮುಂಜಾನೆ 4ಕ್ಕೆ ಎದ್ದು ಸಂಭ್ರಮದಿಂದ ಸೂರ್ಯೋದಯ ಎದುರುನೋಡತೊಡಗಿದೆವು. ನಮ್ಮ ಅದೃಷ್ಟಕ್ಕೆ ಸೂರ್ಯೋದಯದ ಸಮಯದಲ್ಲಿ ಪೂರ್ವದಿಕ್ಕಿನ ಆಕಾಶ ಮೋಡರಹಿತವಾಗಿ ಶುಭ್ರವಾಗಿತ್ತು. ಹಾಗಾಗಿ ಸೂರ್ಯನ ಕಿರಣವು ಎದುರಿಗಿನ ಪರ್ವತಗಳ ಮೇಲೆ ಸ್ಪರ್ಶಿಸತೊಡಗಿದಂತೆ ಬೆಳ್ಳಿಯ ಬಣ್ಣದ ಹಿಮಾವೃತವಾದ ಪರ್ವತಗಳು ಬಂಗಾರ ಬಣ್ಣಕ್ಕೆ ತಿರುಗಿ ನಮಗೆಲ್ಲರಿಗೂ ಅದ್ಭುತ ದೃಶ್ಯ ನೋಡಲು ಅನುವಾಯಿತು. ಸೂರ್ಯನ ಕಿರಣಗಳು ನಿಧಾನವಾಗಿ ಎಡದಿಂದ ಬಲಕ್ಕೆ ಚಲಿಸುತ್ತಿರುವಂತೆ ಇಡೀ ಪರ್ವತ ಶ್ರೇಣಿ ಬಂಗಾರ ಬಣ್ಣ ತಾಳಿತು. ಈ ದೃಶ್ಯವು ಕೇವಲ10 ನಿಮಿಷದಷ್ಟು ಮಾತ್ರ ಇದ್ದು ನಂತರ ಬಣ್ಣ ಮೊದಲಿನ ಬೆಳ್ಳಿ ಬಣ್ಣಕ್ಕೆ ತಿರುಗಿತು.

ಇಂದಿನ ಚಾರಣ ಅತ್ಯಂತ ದೀರ್ಘವಾಗಿದ್ದು ಪ್ರಾರಂಭದಲ್ಲಿ ಎರಡು ರಸ್ತೆಗಳು ಬೇರೆ ದಿಕ್ಕಿಗೆ ಕರೆದೊಯ್ಯುವುದು. ನಾವು ಸಿಂಗಲೀಲಾ ನ್ಯಾಷನಲ್ ಪಾರ್ಕಿಗೆ ಹೋಗುವ ರಸ್ತೆಯಲ್ಲಿ ನಡೆದು 15 ನಿಮಿಷದಲ್ಲೇ ಪ್ರವೇಶದ್ವಾರ ತಲುಪಿದೆವು. ಇಂಡಿಯಾ ಹೈಕ್ ಸಂಸ್ಥೆ ಮೊದಲೇ ಪರ್ಮಿಟ್ ತೆಗೆದುಕೊಂಡಿದ್ದರು. ನಮ್ಮ ಆಧಾರ್ ಕಾರ್ಡ್ ತೋರಿಸಿ ಒಳಗೆ ಪ್ರವೇಶಿಸಿದೆವು. ಇಂದು ಆಕಾಶ ಶುಭ್ರವಾಗಿದ್ದರಿಂದ ನಮಗೆ ಮೌಂಟ್ ಎವರೆಸ್ಟ್ ಸ್ಪಷ್ಟವಾಗಿ ಕಾಣುತ್ತಿತ್ತು. ಇಲ್ಲಿಂದ ಗೈರಿಬಸ್ – ಕೈಯಕಟ್ಟ – ಕಾಲಿಪೋಕ್ರಿ (ಕಪ್ಪು ಸರೋವರ)ವರೆಗೂ ರಸ್ತೆ ಕೆಲವೆಡೆ ಕಲ್ಲುಹಾಸಿನಿಂದ ಕೂಡಿದ್ದು ಮತ್ತೆ ಕೆಲವೆಡೆ ಮೆಟ್ಟಿಲುಗಳಿಂದ ಕೂಡಿದ್ದುದಲ್ಲದೇ ಮತ್ತಷ್ಟು ದೂರ ರಸ್ತೆ ಮಣ್ಣಿನಿಂದ ಕೂಡಿದ್ದು ಕೆಲವೆಡೆ ತೀವ್ರ ಏರುಹಾದಿಯಿರುವುದು ಎಂದು ಮಾರ್ಗದರ್ಶಿ ಮೊದಲೇ ತಿಳಿಸಿದ್ದರು. ಮಧ್ಯಾಹ್ನದ ಊಟದ ನಂತರದ 2 ಕಿ.ಮೀ ಮಾರ್ಗ ಸಿಂಗಲೀಲಾ ನ್ಯಾಷನಲ್ ಪಾರ್ಕಿನೊಳಗಿದ್ದದ್ದರಿಂದ ನಮಗೆ

ಅನೇಕ ವಿಧದ ಸಸ್ಯ, ಪಶುಪಕ್ಷಿಗಳನ್ನು ನೋಡುವ ಅವಕಾಶ ದೊರಕಿತು. ಮತ್ತಷ್ಟು ನಡೆದ ನಂತರ ನಮಗೆ ಬಣ್ಣದ ಪ್ರಾರ್ಥನಾ ಬಾವುಟಗಳಿಂದ ಕೂಡಿದ ಒಂದು ಸರೋವರ ಕಾಣಿಸಿತು. ಇಲ್ಲಿಂದ ಬಲಕ್ಕೆ ಹೊರಳಿ ನಡೆದು ಭಾರತ-ನೇಪಾಳಗಳ ಜಂಟಿ ಪ್ರದೇಶದಲ್ಲಿ ಒಂದು ಹಳ್ಳಿ ತಲುಪಿದೆವು. ಈ ಹಳ್ಳಿಯೇ ಕಾಲಪೋಕ್ರಿ. ಇಲ್ಲಿನ ಒಂದು ಸುಂದರ ಹೋಮ್ ಸ್ಟೇ ನಮ್ಮನ್ನು ಸ್ವಾಗತಿಸಿತು. ನಾವು ಈಪ್ರದೇಶಕ್ಕೆ ಬಂದಾಗ ಸಮಯವು ಸಂಜೆ 4 ಗಂಟೆಯಾಗಿತ್ತು. ಚಹಾ ಸೇವನೆ ಹಾಗೂ ವಿಶ್ರಾಂತಿ ನಂತರ ನಾವೆಲ್ಲರೂ ಹತ್ತಿರದಲ್ಲಿದ್ದ ಕಾಲಾಪೋಕ್ರಿ (ಕಪ್ಪು ಸರೋವರ) ನೋಡಲು ಹೋದೆವು. ಒಂದು ಗಂಟೆ ನಂತರ ಹೋಮ್ ಸ್ಟೇಗೆ ಮರಳಿದೆವು.

ನಾಲ್ಕನೇ ದಿನ – 03.03.2016 ಕಾಲಾಪೋಕ್ರಿ (2990ಮೀ) ಕ್ಯಾಂಪಿನಿಂದ ಸಂಡಕ್ಫು (3627 ಮೀ)–5ಕಿ.ಮೀ– 3–4 ಗಂಟೆ ಚಾರಣ.

ಕಾಲಾಪೋಕ್ರಿ – ಸಂಡಕ್ಫು ಚಾರಣ ಮಾರ್ಗದಲ್ಲಿ ಕಂಡುಬರುವ ಹಿಮಾಚ್ಛಾದಿತ ಪರ್ವತ ಶ್ರೇಣಿಗಳ ಮುಂಜಾನೆಯ ಸುಂದರ ದೃಶ್ಯಗಳನ್ನು ವೀಕ್ಷಿಸಲು ನಾವು ಬೆಳಗ್ಗೆ 7 ಗಂಟೆಗೆಲ್ಲ ಕಾಲಾಪೋಕ್ರಿ ಕ್ಯಾಂಪಿನಿಂದ ಚಾರಣ ಪ್ರಾರಂಭಿಸಿ ಬಿಕೆಭಾನ್ಜಾನ್ ಕಡೆಗೆ ನಿಧಾನವಾಗಿ ನಡೆಯತೊಡಗಿದೆವು. ಬಿಕೆಭಾನ್ಜಾನ್ ಎಂದರೆ ವಿಷಪೂರಿತ ಕಣಿವೆ. ಈ ಪ್ರದೇಶದಲ್ಲಿ ಅಕೊನೈಟ್ (Aconite) ಸಸ್ಯಗಳು ಯಥೇಚ್ಛವಾಗಿದ್ದು ಇದಕ್ಕೆ ವಿಷಪೂರಿತ ಕಣಿವೆ ಎಂದು ಹೆಸರು ಬರಲು ಕಾರಣ. ಮೊದಲ 2 ಗಂಟೆ ಚಾರಣ ಸಮತಟ್ಟಾದ ಹಾದಿಯಲ್ಲಿದ್ದು ನಂತರ ಸಂಡಕ್ಫುವರೆಗೂ ಇಳಿಜಾರಿನ ಹಾದಿಯಾಗಿದ್ದು ಮಾರ್ಗವು ಅಲ್ಲಲ್ಲಿ ಸಿಮೆಂಟಿನಿಂದ ಕೂಡಿತ್ತು. ಉಳಿದ ಮಾರ್ಗಗಳು ಕಾಡಿನ ರಸ್ತೆ. ಸಿಮೆಂಟ್ ರಸ್ತೆಯಲ್ಲಿ ನಡೆಯಲು ಇಷ್ಟಪಡದವರಿಗಾಗಿ ಗುಡ್ಡಗಳ ನಡುವೆ ಮಣ್ಣಿನ ಹಾದಿಯಿತ್ತಾದರೂ ಆ ಮಾರ್ಗ ಮಳೆಯಿಂದಾಗಿ ಕೊರಕಲುಗಳಾಗಿ ನಡೆಯುವುದು ಕಷ್ಟವಾಗಿತ್ತು. ನಾವುಗಳು ಸಿಮೆಂಟ್ ಹಾದಿಯಲ್ಲೇ ನಡೆದೆವು. ಸಂಡಕ್ಫುನಲ್ಲಿನ ಹೋಮ್ ಸ್ಟೇ ವಿಶಾಲ ಪ್ರದೇಶದಲ್ಲಿದ್ದು ಸುತ್ತಲೂ ಹಿಮಾವೃತವಾಗಿತ್ತು ಹಾಗೂ ಎದುರಿಗೆ ಸಮೀಪದಲ್ಲೇ ಪರ್ವತಗಳನ್ನು ವೀಕ್ಷಿಸುವ ಸ್ಥಳವಿತ್ತು. 5 ಗಂಟೆಗೆ ಹೋಮ್ ಸ್ಟೇ ಒಳಗೆ ಹೋಗಿ ನಮ್ಮ ಬ್ಯಾಕ್ ಪ್ಯಾಕ್ ಗಳನ್ನು ಅಲ್ಲಿರಿಸಿ ಸ್ವಲ್ಪ ವಿಶ್ರಾಂತಿ ಪಡೆದು ಚಹಾ ಸೇವಿಸಿ ಹೊರಬಂದು ವೀಕ್ಷಣಾ ಸ್ಥಳದೆಡೆಗೆ ಧಾವಿಸಿದೆವು. ಈ ಜಾಗವು ವಿಶಾಲವಾದ ಹಾಗೂ ಎತ್ತರವಾದ ಹಿಮದಿಂದ ಕೂಡಿದ ಸ್ಥಳವಾದ್ದರಿಂದ ಗಾಳಿ ರಭಸದಿಂದ ಬೀಸುತ್ತಿತ್ತು. ಮಾರ್ಗದರ್ಶಿಯೊಂದಿಗೆ ಅಲ್ಲಿಗೆ ಹೋಗಿ ಎದುರಿಗಿರುವ ಪರ್ವತಗಳನ್ನು ಒಂದೊಂದಾಗಿ ಸೂರ್ಯಾಸ್ತದವರೆಗೂ ನೋಡುತ್ತಲೇ ಇದ್ದೆವು. ಎಷ್ಟು

ನೋಡಿದರೂ ತೃಪ್ತಿಯಾಗಲೇ ಇಲ್ಲ. ನಾನು ನನ್ನ ಬೈನಾಕ್ಯುಲರ್ ಮೂಲಕ ಪರ್ವತ ಶಿಖರಗಳನ್ನು ನೋಡಿ ನನ್ನ ಸಹಚಾರಣಿಗರಿಗೂ ನೋಡಲು ಕೊಟ್ಟೆ. ನಾವು ನೋಡಿದ ಹಿಮಶಿಖರಗಳೆಂದರೆ – ಮೌಂಟ್ ಎವರೆಸ್ಟ್, ಮಕಾಲು, ಕಾಂಚನಗಂಗ, ಲ್ಹೋಟ್ಸೆ, ಚಮೋಲ್ಹರಿ, ಪಾಂಡಿಮ್, ತ್ರೀ ಸಿಸ್ಟರ್ಸ್, ಕುಂಭಕರ್ಣ ಹಾಗೂ ಇನ್ನೂ ಇತರೆ ಶಿಖರಗಳು ನಮ್ಮೆದುರಿಗೆ ತೆರೆದುಕೊಂಡಿದ್ದವು.

ಹೀಗೆ ನಾವು ಸಂಡಕ್ಪು ಚಾರಣದ ತುತ್ತತುದಿ ತಲುಪಿದೆವು. ಗಾಳಿಯ ವೇಗವು ತೀವ್ರವಾಗಿದ್ದದ್ದರಿಂದ ನಿಧಾನವಾಗಿ ಹೋಮ್ ಸ್ಟೇ ಕಡೆಗೆ ನಡೆಯತೊಡಗಿದೆವಾದರೂ ನಮ್ಮ ದೃಷ್ಟಿಯನ್ನು ಪರ್ವತ ಶ್ರೇಣಿಗಳಿಂದ ಬದಲಿಸಲಾಗಲಿಲ್ಲ. ಹೋಮ್ ಸ್ಟೇಯ ಮುಂದುಗಡೆ ನಿಂತುಕೊಂಡೇ ಅವುಗಳನ್ನು ಕತ್ತಲಾಗುವವರೆಗೂ ನೋಡುತ್ತಲೇ ಇದ್ದೆವು. ಉಳಿದ ಚಾರಣಿಗರು ಅಲ್ಲಿನ ಹಿಮನೆಲದಲ್ಲಿ ಪರಸ್ಪರ ಹಿಮದ ಹೆಕ್ಕೆಗಳನ್ನು ಎರಚಿಕೊಳ್ಳುತ್ತಿದ್ದರು. ರಾತ್ರಿ 7 ಗಂಟೆಗೆ ನಮಗೆಲ್ಲರಿಗೂ ಬಿಸಿ ಸೂಪ್ ಹಾಗೂ ಮ್ಯಾಗಿ ನೂಡಲ್ಸ್ ದೊರಕಿತು. ನಂತರ 8.30ಕ್ಕೆ ಬಿಸಿ ಊಟದ ಕಾರ್ಯಕ್ರಮವು ಜರುಗಿ ಎಲ್ಲರೂ ಮಲಗಿದೆವು. ಮಾರನೇ ದಿನ ನಾವು ಸಂಡಕ್ಪುವಿನಿಂದ ಮತ್ತಷ್ಟು ಎತ್ತರ ಪ್ರದೇಶವಾದ ಫಾಲುಟ್ ಕಡೆಗೆ ಹೋಗಬೇಕಿತ್ತು, ಆದರೆ ....!

ಐದನೇ ದಿನ – 04.03.2016 ಸಂಡಕ್ಪು (3627ಮೀ) ಸರಕಾರಿ ಗೆಸ್ಟ್ ಹೌಸ್ – 9 ಕಿ.ಮೀ – 7–8 ಗಂಟೆಗಳು

ಬೆಳಗಿನ ಉಪಹಾರದ ನಂತರ ಸುಮಾರು 7.30ಕ್ಕೆ ಹೊರಟು ಫಾಲುಟ್ ಕಡೆಗೆ ಹೊರಡಬೇಕಿತ್ತು. ಆದರೆ ಮಾರ್ಗದರ್ಶಿಗೆ ಬಂದ ಸುದ್ದಿಯಂತೆ ಅಲ್ಲಿನ ಹವೆ ತೀರ ಕೆಟ್ಟಿದ್ದರಿಂದ ಅಲ್ಲಿಗೆ ಹೋಗಲು ಅಸಾಧ್ಯವೆಂದು ನಿರ್ಧರಿಸಿ ನಮ್ಮ ಚಾರಣವನ್ನು ಗೋರ್ಕೆ ಕ್ಯಾಂಪಿನ ದಿಕ್ಕಿನಲ್ಲಿ ಸಿಗುವ ಕಾಡಿನೊಳಗಿನ ಒಂದು ಸರಕಾರಿ ಗೆಸ್ಟ್ ಹೌಸ್ ವರೆಗೂ ಚಾರಣ ಮಾಡಬಹುದು ಎಂದು ತಿಳಿಸಿದರು. ಅದರಂತೆ ನಾವು ದಟ್ಟವಾದ ಕಾಡಿನಲ್ಲಿ 9 ಕಿ.ಮೀ ಚಾರಣ ಮಾಡಿ ಸಂಜೆ 4 ಗಂಟೆಗೆ ಸರಕಾರಿ ಗೆಸ್ಟ್ ಹೌಸ್ ತಲುಪಿದೆವು. ರಾತ್ರಿ ಅಲ್ಲೇ ಕಳೆದು ಮಾರನೇ ದಿನದ ನಮ್ಮ ಚಾರಣ ಗೋರ್ಕೆ ಕ್ಯಾಂಪಿನೆಡೆಗೆ ಎಂದು ನಮಗೆ ಮಾರ್ಗದರ್ಶಿ ತಿಳಿಸಿದರು.

ಆರನೇ ದಿನ – 05.03.2016 ಸರಕಾರಿ ಗೆಸ್ಟ್ ಹೌಸ್ (3508ಮೀ) ಗೋರ್ಕೆ (2400 ಮೀ) – 12 ಕಿ.ಮೀ – 5 ಗಂಟೆಗಳು

ಇಂದಿನ ಚಾರಣ ಮಾರ್ಗವು ಇಳಿಯುವ ದಾರಿಯಾಗಿದ್ದು 1100 ಮೀ ಕೆಳಗೆ ಇಳಿಯಬೇಕಿತ್ತು. ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ರೋಡೋಡೆಂಡ್ರಾನ್‌ಗಳ

ಮರಗಳಿದ್ದು ಅವುಗಳಿಂದ ಒಣಗಿದ ಎಲೆಗಳು ಉದುರಿ ದಾರಿ ಮೆತ್ತನೆಯ ಹಾಸಿಗೆಯಂತಿದ್ದು ನಿಧಾನವಾಗಿ ಹೆಚ್ಚಿನ ಆಯಾಸವಿಲ್ಲದೆ ಚಾರಣ ಆರು ಕಿ.ಮೀ ಮುಗಿಸಿದೆವು. ಇಲ್ಲಿಂದ ಮುಂದೆ ಮಾರ್ಗವು ಎರಡೂ ಬದಿಗಳಲ್ಲಿ ಬಿದಿರಿನ ಗಿಡಗಳಿಂದ ಕೂಡಿದ್ದು ಜಾರುವಂತಿತ್ತು. ಹಾಗಾಗಿ ನಾವು ಅತಿ ಎಚ್ಚರದಿಂದ ನಡೆಯಬೇಕಿತ್ತು. ಇಲ್ಲಿಂದ 6 ಕಿ.ಮೀ ನಡೆದ ಮೇಲೆ ನಾವು ಗೋರ್ಕೆ ಪ್ರದೇಶ ತಲುಪಿದೆವು. ಗೋರ್ಕೆ ಅತ್ಯಂತ ಸುಂದರವಾದ ಹಳ್ಳಿಯಾಗಿದ್ದು ಅದು ಪರ್ವತದ ಶಿಖರದ ಮೇಲೆ ಇತ್ತು. ಈ ಪ್ರದೇಶದ ಹಿನ್ನೆಲೆಯಲ್ಲಿ ಹೊಲಗಳು ಮತ್ತು ಅದರ ಬುಡದಲ್ಲಿ ನದಿಯು ಹರಿಯುತ್ತಿತ್ತು. ಈ ನದಿ ಪಶ್ಚಿಮ ಬಂಗಾಳ ಹಾಗೂ ನೇಪಾಳವನ್ನು ಬೇರ್ಪಡಿಸಿತ್ತು. ಮಧ್ಯಾಹ್ನದ ಊಟದ ಸಮಯಕ್ಕೆ ನಾವು ಗೋರ್ಕೆ ತಲುಪಿ ಅಲ್ಲಿ ನಮಗಾಗಿ ಸಿದ್ಧಪಡಿಸಿದ್ದ ರುಚಿಯಾದ ಊಟ ಮಾಡಿ ಹಳ್ಳಿಯ ಸೌಂದರ್ಯ ಸವಿಯುತ್ತ ಸಂಜೆಯವರೆಗೂ ಇಲ್ಲಿಯ ಮನೆಗಳ ರಚನೆ ಮತ್ತು ಒಳಭಾಗದ ನೋಟಗಳನ್ನು ನೋಡುತ್ತ ಈ ವಿಲಕ್ಷಣವಾದ ಪುಟ್ಟ ಹಳ್ಳಿಯ ಆಹ್ಲಾದಕರ ಕಂಪನ್ನು ಸವಿಯುತ್ತ ಕಳೆದೆವು.

ಏಳನೇ ದಿನ – 06.03.2016 ಗೋರ್ಕೆ (2400ಮೀ) ಸೆಪಿ (1900 ಮೀ) – 20 ಕಿ.ಮೀ – 8 ಗಂಟೆಗಳು

ಇಂದು ನಾವು ಗೋರ್ಕೆಯಿಂದ ಸೆಪಿ ತಲುಪಲು 20 ಕಿ.ಮೀ ಚಾರಣಮಾಡಬೇಕಾದ್ದರಿಂದ ಮುಂಜಾನೆ 7 ಗಂಟೆಗೆ ಹೊರಟೆವು. ಮಾರ್ಗ ಸಂಪೂರ್ಣವಾಗಿ ಇಳಿಯುವ ರೀತಿಗಯಾದ್ದು ಚಾರಣ ಸುಲಭವಾಗಿತ್ತಾದರೂ ಎಚ್ಚರಿಕೆಯಿಂದ ಇಳಿಯಬೇಕಿತ್ತು. ಅದರಂತೆ ನಿಧಾನವಾಗಿ ನಡೆಯತೊಡಗಿ 4 ಗಂಟೆಯ ಚಾರಣದ ನಂತರ ಒಂದೆಡೆ ನಮ್ಮೊಂದಿಗೆ ತಂದಿದ್ದ ಊಟ ಮುಗಿಸಿ ಒಂದು ಗಂಟೆಯ ವಿಶ್ರಾಂತಿಯ ನಂತರ ಮಧ್ಯಾಹ್ನ ಒಂದು ಗಂಟೆಗೆ ಅಲ್ಲಿಂದ ಹೊರಟು 5 ಗಂಟೆಗೆ ಸೆಪಿ ಕ್ಯಾಂಪ್ ತಲುಪಿ ರಾತ್ರಿ ಅಲ್ಲೇ ಇದ್ದು ಮಾರನೇ ದಿನ ಬೆಳಗ್ಗೆ 8 ಗಂಟೆಗೆ ಅಲ್ಲಿಂದ ನಮಗಾಗಿ ಕಾಯ್ದಿರಿಸಿದ್ದ ಟೆಂಪೋ ಟ್ರಾವಲರಿನಲ್ಲಿ 140 ಕಿ.ಮೀ ದೂರದ ಬಾಗ್ಡೋಗ್ರ ವಿಮಾನ ನಿಲ್ದಾಣಕ್ಕೆ ಮದ್ಯಾಹ್ನ ಒಂದು ಗಂಟೆಗೆ ತಲುಪಿ ಅಲ್ಲಿನ ಹೋಟೆಲಿನಲ್ಲಿ ಊಟವನ್ನು ಮುಗಿಸಿ 3 ಗಂಟೆಯ ವಿಮಾನದ ಮೂಲಕ ಬೆಂಗಳೂರಿಗೆ ತಲುಪಿ ನಮ್ಮ ಸಂಡಕ್ಫೂ ಚಾರಣದ ಮಧುರ ಕ್ಷಣಗಳನ್ನು ನೆನಪಿಸಿಕೊಳ್ಳುತ್ತ ಸಂಜೆ ನನ್ನ ಮನೆ ತಲುಪಿದೆನು.

ಸಿಕ್ಕಿಮ್ ರಾಜ್ಯದಲ್ಲಿನ ಗೊಯ್ಚಾಲದೆಡೆಗಿನ ದೀರ್ಘ ಚಾರಣ

ವಿಶ್ವದ ಮೂರನೇ ಅತಿ ಎತ್ತರದ ಪರ್ವತದ ತೀರಾ ಹತ್ತಿರಕ್ಕೆ ಕೊಂಡೊಯ್ಯುವ ಚಾರಣವೆಂದರೆ ಅದೇ ಗೋಯ್ಚಾಲಾ ಚಾರಣ.

ಯಾವುದೇ ಚಾರಣ ಮಾಡಬೇಕಿದ್ದಲ್ಲಿ ಶಾರೀರಿಕ ಹಾಗೂ ಮಾನಸಿಕ ತಯಾರಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಅದರಲ್ಲೂ ಹಿಮಾಲಯದಲ್ಲಿನ ಅತಿ ಎತ್ತರದ ಪ್ರದೇಶಗಳಲ್ಲಿ ಚಾರಣ ಮಾಡಬೇಕಾದರೆ ಈ ರೀತಿಯ ತಯಾರಿ ಆಗಿರಲೇಬೇಕು. ಈ ನಿಟ್ಟಿನಲ್ಲಿ ಚಾರಣ ಸಂಸ್ಥೆಗಳು ಕಟ್ಟುನಿಟ್ಟಿನ ನಿಯಮಗಳನ್ನು ವಿಧಿಸಿದ್ದರೂ ಕೆಲವು ಸಲ ಕೆಲವರು ಅದನ್ನು ಲಘುವಾಗಿ ಪರಿಗಣಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಚಾರಣಕ್ಕೆ ಬಂದಿರುವ ಘಟನೆಗಳನ್ನೂ ನಾನು ನೋಡಿರುವೆ. ಏಕೆ ಈ ವಿಷಯ ಇಷ್ಟು ಗಂಭೀರವಾಗಿ ಹೇಳುತ್ತಿರುವೆನೆಂದರೆ, ಈ ಚಾರಣದಲ್ಲೂ ಅಂತಹದೇ ಘಟನೆ ಮರುಕಳಿಸಿತು. ಇಷ್ಟೇ ಆಗಿದ್ದರೆ ಬೇರೇನೂ ಆಗುತ್ತಿರಲಿಲ್ಲ. ಆದರೆ ಇಲ್ಲಿ ಈ ರೀತಿ ಶಾರೀರಿಕ ತಯಾರಿಮಾಡಿಕೊಳ್ಳದೆ ಮುಂಬೈ ನಗರದಿಂದ ಬಂದಿದ್ದ ಚಾರಣಿಗಳೊಬ್ಬಳು, ಚಾರಣ ಒಂದು ಪ್ರವಾಸವೆಂದು ಹಗುರವಾಗಿ ಪರಿಗಣಿಸಿ ಅತಿ ಎತ್ತರ ಪ್ರದೇಶದಲ್ಲಿನ ದೀರ್ಘ ಚಾರಣಕ್ಕೆ ಬಂದು ಕೇವಲ ಮೂರೇ ದಿನದ ಚಾರಣ ಮಾಡುವುದರೊಳಗಾಗಿ Altitude Mountain Sicknessನಿಂದ ನರಳುತ್ತಾ ಈಗಲೋ ಆಗಲೋ ಅನ್ನುವ ಪರಿಸ್ಥಿತಿ ತಲುಪಿದ್ದಾಗ, ಕೊರೆಯುವ ಚಳಿಯಲ್ಲಿ ಅವಳನ್ನು ಟ್ರೆಕ್ ಲೀಡರ್, ಟ್ರೆಕ್ ಗೈಡಿನ ಸಹಾಯದಿಂದ ಮಧ್ಯ ರಾತ್ರಿ ಸ್ಟ್ರೆಚರ್‌ನಲ್ಲಿ ಹೊತ್ತುಕೊಂಡು 18 ಕಿ.ಮೀ ದೂರದವರೆಗೂ ಪರ್ವತ ಇಳಿದು ಯುಕ್ಸೋಮ್ ಕ್ಯಾಂಪ್ ತಲುಪಿ ಡಾಕ್ಟರ್ ಕಡೆಯಿಂದ ತುರ್ತು ಚಿಕಿತ್ಸೆ ಕೊಡಿಸದಿದ್ದರೆ ಅವಳು ಸಾವನ್ನಪ್ಪಬೇಕಿತ್ತು. ಅದೂ ಅಲ್ಲದೆ ತಲುಪುವುದು ಒಂದು ಘಂಟೆ ತಡವಾಗಿದ್ದರೂ ಅವಳು ಮಾರ್ಗದಲ್ಲೇ ಸಾವನ್ನಪ್ಪಬೇಕಿತ್ತು.

ಈ ಘಟನೆಯ ಪರಿಣಾಮ ಉಳಿದ ಚಾರಣಿಗರಿಗೂ ತಟ್ಟಿ (ಏಕೆಂದರೆ ಅತಿಯಾದ ಆಯಾಸದಿಂದ ಬಳಲುತ್ತಿದ್ದ ಟ್ರೆಕ್ ಲೀಡರ್ ಹಾಗೂ ಗೈಡ್‌ಗಳು ಮಾರನೇ ದಿನ ಬಂದು ನಮ್ಮನ್ನು ಮುಂದಿನ ಚಾರಣಕ್ಕೆ ಕರೆದೊಯ್ಯಲಾಗದೇ ಇದ್ದದ್ದರಿಂದ) ಚಾರಣ ಸಂಸ್ಥೆ ಮುಂದಿನ ಚಾರಣ ರದ್ದು ಪಡಿಸಿ ಎಲ್ಲರನ್ನೂ ಬೇಸ್ ಕ್ಯಾಂಪಿಗೆ ಒಬ್ಬ ಗೈಡ್‌ನ ಮಾರ್ಗದರ್ಶನದಲ್ಲಿ ಮರಳುವಂತೆ ಆದೇಶಿಸಿತು. ಹೀಗಾಗಿ ನಮ್ಮ ಚಾರಣ ಅರ್ಧದಲ್ಲೇ ಅನಿರೀಕ್ಷಿತವಾಗಿ ಮುಕ್ತಾಯವಾಯಿತು. ಬೇಸ್ ಕ್ಯಾಂಪಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಆ ಚಾರಣಿಗಳು ತನಗೇನೂ ಆಗೇ ಇಲ್ಲದವಳಂತೆ ಹಾಗೂ ತಾನೇನೂ ತಪ್ಪೇ ಮಾಡದವಳಂತೆ ಅದೇ ಹುಡುಗಾಟದಿಂದ ವರ್ತಿಸುತ್ತಿದ್ದಳು. ಇದರಿಂದ ಉಳಿದ ಎಲ್ಲ ಚಾರಣಿಗರಿಗೂ ನಿರಾಶೆ ಹಾಗೂ ಅವಳ ಬಗ್ಗೆ ಜುಗುಪ್ಸೆ ಉಂಟಾಯಿತು.

ಆದರೆ, ನನ್ನ ಮಟ್ಟಿಗೆ ಮೂರು ದಿನಗಳ ಚಾರಣದಲ್ಲಿ 13024 ಅಡಿ ಎತ್ತರದ Dzongri ಶಿಖರ ಹತ್ತಿದ್ದೇ ಒಂದು ವೈಯುಕ್ತಿಕ ಸಾಧನೆ. ಇದರ ಬಗೆಗೆ ನನ್ನ ಕೆಲವು ಅನುಭವಗಳನ್ನು ಇಲ್ಲಿ ವಿವರಿಸುವೆ ;

2017ರ ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿನ ಒಂದು ಬ್ಯಾಚ್‌ನಲ್ಲಿ ಚಾರಣ ಮಾಡಲು ನಿರ್ಧರಿಸಿ ಇಂಡಿಯಾ ಹೈಕ್ಸ್ ಸಂಸ್ಥೆಯಲ್ಲಿ ನನ್ನ ಹೆಸರನ್ನು ದಾಖಲಿಸಿ ಈ ಚಾರಣದ ಬಗ್ಗೆ ಎಲ್ಲ ವಿಷಯಗಳನ್ನೂ ಸಂಗ್ರಹಿಸಿ ಚಾರಣ ಮಾರ್ಗವನ್ನು ಅನೇಕಬಾರಿ ಅಧ್ಯಯನ ಮಾಡಿ ಶಾರೀರಿಕ ತಯಾರಿ ಮಾಡಿಕೊಳ್ಳತೊಡಗಿದೆ. ಕೆಲವು ದಿನಗಳ ನಂತರ ಬೆಂಗಳೂರಿನಿಂದ ನಾಲ್ಕು ಚಾರಣಿಗರು ಬರಲಿರುವರೆಂದು ಅರಿತು, ಅವರನ್ನು ಸಂಪರ್ಕಿಸಿ, ಅವರೆಲ್ಲರೂ ಹಿಮಾಲಯದ ಚಾರಣ ಮೊದಲಬಾರಿ ಮಾಡುತ್ತಿರು ವರೆಂದು ಅರಿತು, ಅವರನ್ನು ಲಾಲ್‌ಬಾಗ್‌ನಲ್ಲಿ ಒಂದು ದಿನ ಮುಂಜಾನೆ ಸಂಧಿಸಿ ಅವರಿಗೆ ಚಾರಣದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದಲ್ಲದೆ ಶಾರೀರಿಕ ತಯಾರಿ ಹೇಗೆ ಮಾಡಬೇಕೆಂಬುದರ ಬಗ್ಗೆ ವಿವರಿಸಿದೆ. ಅವರೆಲ್ಲರೂ ಅದರಂತೆ ತಯಾರಿ ಮಾಡಿಕೊಂಡು ಚಾರಣಕ್ಕೆ ಬಂದಿದ್ದರು. ಹೀಗಾಗಿ ನಮಗೆ Dzongri top ತನಕ ಚಾರಣ ಮಾಡುವುದು ಸುಲಭವೇ ಆಗಿತ್ತು.

ನಾವೆಲ್ಲರೂ ಮುಂದಿನ ಐದು ದಿನಗಳ ಚಾರಣ ಮಾಡಲು ಉತ್ಸುಕರಾಗಿದ್ದರೂ, ನಮ್ಮ ಮರುಪ್ರಯಾಣವು ಆಗಲೇ ನಿರ್ಧರಿಸಿ ವಿಮಾನದಲ್ಲಿ ಟಿಕೆಟ್ಟನ್ನು ಖರೀದಿಸಿದ್ದರಿಂದಾಗಿ ನಾವೆಲ್ಲರೂ ನಿರಾಶರಾಗಿ ಮರಳ ಬೇಕಾಯಿತು.

ನನ್ನ ಮೊದಲ ನಾಲ್ಕು ದಿನ ಚಾರಣ ವಿವರಗಳನ್ನು ಕೆಳಗೆ ಇಂತಿವೆ

1. ಸಿಲಿಗುರಿ – ಯುಕ್ಸೊಮ್ – 140 ಕಿ.ಮೀ ಜೀಪಿನಲ್ಲಿ ಪ್ರಯಾಣ
2. ಯುಕ್ಸೊಮ್ – ಸಾಚೆನ್ – 5840 ಅಡಿ – 7400 ಅಡಿ – 7.5 ಕಿ.ಮೀ ಚಾರಣ – 6 ಗಂಟೆ
3. ಸಾಚೆನ್ – ಟ್ಶೋಕ – 7400 ಅಡಿ – 9790 ಅಡಿ – 6.50 ಕಿ.ಮೀ ಚಾರಣ – 5.30 ಗಂಟೆ
4. ಟ್ಶೋಕ – ಡ್ಝೋಂಗ್ರಿ – 9790 ಅಡಿ – 13190 ಅಡಿ – 8.4 ಕಿ.ಮೀ ಚಾರಣ – 9 ಗಂಟೆ
5. ಡ್ಝೋಂಗ್ರಿ – ಡ್ಝೋಂಗ್ರಿ ಟಾಪ್ – ನಂತರ ಮರಳಿ ಡ್ಝೋಂಗ್ರಿ ಕ್ಯಾಂಪ್ – 13190 – 13670 – 13190 ಅಡಿ – 2 ಕಿ.ಮೀ – 3 ಗಂಟೆ

ಮೊದಲ ದಿನ : ಬಾಗ್ಡೋಗ್ರಾ ವಿಮಾನ ನಿಲ್ದಾಣ – ಯುಕ್ಸೊಮ್ – 160 ಕಿ.ಮೀ ಜೀಪಿನಲ್ಲಿ ಪ್ರಯಾಣ

ನಾನು ಬೆಂಗಳೂರಿನಿಂದ ಕೊಲ್ಕತ್ತಗೆ ವಿಮಾನದಲ್ಲಿ ಬಂದಿಳಿದು ಅಲ್ಲಿಂದ ಮತ್ತೊಂದು ವಿಮಾನದಲ್ಲಿ ಬಾಗ್ಡೋಗ್ರ ತಲುಪಿ ತಡವಾಗಿ ತಲುಪಿದ್ದರಿಂದ ನನ್ನೊಂದಿಗೆ ಬರಲಿದ್ದ ಮೂರು ಸಹಚಾರಣಿಗರು ಅಗಲೇ ಅಲ್ಲಿಂದ ಹೊರಟುಹೋಗಿದ್ದ ಕಾರಣ ನಾನೊಬ್ಬನೇ ಒಂದು ಟ್ಯಾಕ್ಸಿಯಲ್ಲಿ ಸಂಜೆ 3 ಗಂಟೆಗೆ ಹೊರಟು ರಾತ್ರೆ 9.30ಕ್ಕೆ ಯುಕ್ಸೊಮ್ ತಲುಪಿದೆ. ಬಾಗ್ಡೋಗ್ರದಿಂದ ಸಿಲಿಗುರಿಗೆ 10 ಕಿ.ಮೀ. ಅಲ್ಲಿಂದ ಸಿಕ್ಕಿಂಮ್ಮಿನ ಹಳೆಯ ರಾಜಧಾನಿಯಾದ ಯುಕ್ಸೊಮ್‌ಗೆ 150 ಕಿ.ಮೀ. ಸಿಲಿಗುರಿಯಿಂದ ಪಶ್ಚಿಮ ಬಂಗಾಳ ಗಡಿಯವರೆಗೂ ಟೀಸ್ತಾ ನದಿ ಜೊತೆಗೇ ಇದ್ದರೆ ಸಿಕ್ಕಿಂ ಪ್ರವೇಶಿಸುತ್ತಿದ್ದಂತೆ ಟೀಸ್ತಾ ನದಿ ಸೇರಿಕೊಳ್ಳುವ ರಂಗಿತ್ ನದಿ ಯುಕ್ಸೊಮ್‌ವರೆಗೂ ಜೊತೆಗಿರುವುದನ್ನು ಗಮನಿಸಿದೆ.

ಯುಕ್ಸೊಮ್‌ನಿಂದ ಚಾರಣ ಪ್ರಾರಂಭಿಸುವುದಕ್ಕೆ ಮೊದಲು ಪ್ರತಿಯೊಬ್ಬ ಚಾರಣಿಗನೂ ಫೋಟೋ ಸಹಿತ ಗುರುತಿನ ಕಾರ್ಡ್ ಹೊಂದಿರಬೇಕು.

ಬೆಂಗಳೂರಿನಿಂದ ಬಂದಿದ್ದ ನಾವು ಐದು ಚಾರಣಿಗರೂ ಸಿಕ್ಕಿಮ್‌ನಿಂದ ಕಾಲಿಂಪಾಂಗ್‌ಗೆ ಬಂದು ಅಲ್ಲಿ ಒಂದು ದಿನ ವಿಶ್ರಾಂತಿ ಪಡೆದು ಅಲ್ಲಿ 20 ನಿಮಿಷಗಳ ಪ್ಯಾರಾ ಗ್ಲೈಡಿಂಗ್ ಮಾಡಿ ಅದ್ಭುತ ಅನುಭವ ಪಡೆದುಕೊಂಡೆವು. ನನಗಂತೂ ನನ್ನ ಜೀವಮಾನದಲ್ಲಿ ಹಿಂದೆಂದೂ ಹಾಗೂ ಮುಂದೆಂದೂ ಈ ಅನುಭವ ಪಡೆಯಲು ಅಸಾಧ್ಯ. ಸಂಪೂರ್ಣವಾಗದ ಚಾರಣದಲ್ಲೇ ಅನೇಕ ಸುಂದರ ದೃಶ್ಯ, ಅಭೂತಪೂರ್ವ ಅನುಭವ ನಮ್ಮದಾಯಿತು.

ಎರಡನೇ ದಿನ : ಯುಕ್ಸೊಮ್ (5840 ಅಡಿ) – ಸಾಚೆನ್ (7400 ಅಡಿ) 7.5 ಕಿ.ಮೀ – 6 ಗಂಟೆ

ಇಂದಿನ ನಮ್ಮ ಚಾರಣ ಕೇವಲ 7.5 ಕಿ.ಮೀ ದೂರವಿದ್ದರೂ 1600 ಅಡಿಗೂ ಹೆಚ್ಚಿನ ಎತ್ತರ ಏರಬೇಕಿತ್ತು. 2 ಕಿ.ಮೀ ದೂರ ನಡೆದ ಮೇಲೆ ಮಾರ್ಗವು ಕಾಡಿನ ಅಂಚಿನಲ್ಲೇ ಹಾದುಹೋಗಿದ್ದು 30 ನಿಮಿಷಗಳ ವಿಶ್ರಾಂತಿಯ ನಂತರ ಫಕೋಲಾ ಬಳಿ ಒಂದು ಸೇತುವೆಯನ್ನು ತಲುಪಿದೆವು. ಇಲ್ಲಿಂದ ನಾವು ದಟ್ಟವಾದ ಕಾಡನ್ನು ಪ್ರವೇಶಿಸಿ ತಂಪಾದ ಹವೆಯಲ್ಲಿ ಮೇಲಕ್ಕೆ ಹತ್ತತೊಡಗಿದೆವು.

ಒಂದೂವರೆ ಗಂಟೆ ನಿಧಾನವಾಗಿ ನಡೆದ ನಂತರ ನಮ್ಮ ಬಲಕ್ಕೆ ಒಂದು ಜಲಪಾತ ಕಂಡುಬಂದಿತು. ಮಾರ್ಗದರ್ಶಿ ಜಲಪಾತದ ಹೆಸರನ್ನು ಟ್ಸುಷೇ ಖೋಲಾ (Tshushay Khola) ಎಂದು ಪರಿಚಯಿಸಿದರು. ಮುಂದುವರೆಯುತ್ತಾ ಇರುವಾಗ ಅನೇಕ ಸಣ್ಣ ಜಲಪಾತಗಳು ಮೇಲಿಂದ ಹರಿದುಬಂದು ಕೆಳಗೆ ಕಾಣಿಸುತ್ತಿದ್ದ ಪ್ರೆಕ್ ಚು(Prek Chu) ನದಿಯನ್ನು ಸೇರುತ್ತಿರುವುದನ್ನು ನಾವು ಗಮನಿಸಿದೆವು. ಇಲ್ಲಿಂದ ಒಂದು ಗಂಟೆ ಮೇಲಕ್ಕೆ ಹತ್ತುತ್ತಾ ನಡೆದಮೇಲೆ ಒಂದು ಸಿಮೆಂಟಿನ ಸೇತುವೆ ತಲುಪಿದೆವು. ಮಾರ್ಗದರ್ಶಿ ಆ ಸೇತುವೆಯ ಹೆಸರನ್ನು ಮೆಂಟೊಗಾಂಗ್ ಖೋಲಾ (Mentogang Khola) ಎಂದು ತಿಳಿಸಿದರು. ಇಲ್ಲಿಗೆ ನಾವು 7100 ಅಡಿ ಎತ್ತರ ತಲುಪಿದ್ದೆವು. ಇಲ್ಲಿಂದ 20 ನಿಮಿಷ ನಡೆದ ನಂತರ ಸಾಚೆನ್‌ನಲ್ಲಿನ ಮರದ ಗುಡಿಸಿಲನ್ನು ತಲುಪಿದೆವು.

7400 ಅಡಿ ಎತ್ತರದಲ್ಲಿ ಸಾಚೆನ್ ಇದ್ದು ಇಲ್ಲಿ ಕೇವಲ ಒಂದು ಮರದ ಗುಡಿಸಿಲು ಹಾಗೂ ಮುಂದೆ ನಡೆಯಲು ಮಾರ್ಗ ಮಾತ್ರ ಇರುವುದು ಕಂಡುಬಂದಿತು. ಮರದ ಗುಡಿಸಿಲಿನಲ್ಲಿ 7–8 ಚಾರಣಿಗರು ಮಾತ್ರ ಉಳಿದುಕೊಳ್ಳಲು ಸಾಧ್ಯವಾಗಿದ್ದರಿಂದ ಅಲ್ಲಿಂದ ಈ ಗುಡಿಸಿಲಿನ ಎದುರು ಬದಿಯಲ್ಲಿ ಮಾರ್ಗದಿಂದ ಸ್ವಲ್ಪ ಕೆಳಗೆ ನಮಗಾಗಿ 8 ಟೆಂಟ್ ಸಿದ್ಧಪಡಿಸಿದ್ದರು. ಅಲ್ಲಿಗೆ ಹೋಗಿ ಟೆಂಟ್ ಪ್ರವೇಶಿಸಿದೆವು. ಇಲ್ಲಿಂದ ಕೆಳಗೆ ಪ್ರೆಕ್‌ಚು ನದಿ ಹರಿಯುತ್ತಿದ್ದು ಅದರ ಧ್ವನಿ ಸಣ್ಣದಾಗಿ ಕೇಳಿಸುತ್ತಿದ್ದರೂ ನದಿ ಕಾಣಿಸುತ್ತಿರಲಿಲ್ಲ.

ಮೂರನೇ ದಿನ : ಸಾಚೆನ್ (7400ಅಡಿ)–ಬಾಕಿಮ್(8640ಅಡಿ) ಮಾರ್ಗವಾಗಿ ಟ್ಸೋಕ – (9790 ಅಡಿ) 6.5 ಕಿ.ಮೀ – 6 ಗಂಟೆ

ಸೇತುವೆಯ ಎಡಭಾಗದಲ್ಲಿನ ಮಾರ್ಗದ ಮೂಲಕ ಹತ್ತತೊಡಗಿ ಓಕ್ ಮರಗಳ ಕಾಡನ್ನು ಪ್ರವೇಶಿಸಿದೆವು. 30 ನಿಮಿಷಗಳು ಹತ್ತಿದ ನಂತರ ರೊಡೋಡೆಂಡ್ರಾನ್ (Rhododendron) ಗಿಡಗಳು ಕಾಣತೊಡಗಿದವು.

ಇಲ್ಲಿಂದ ತಂಪಾದ ಹವೆಯನ್ನು ಅನುಭವಿಸತೊಡಗಿದೆವು. ಇಲ್ಲಿಂದ ಒಂದು ದಿಬ್ಬವನ್ನು ಹತ್ತಿ ಅಲ್ಲಿಂದ 30 ನಿಮಿಷ ಹತ್ತುತ್ತಾ ಕೊನೆಗೆ ಬಾಕಿಮ್ ಪ್ರದೇಶ ತಲುಪಿ ಪ್ರೆಕ್‌ಚು ನದಿಯಿಂದ ನಾವು ಕೇವಲ ಒಂದು ಕಿ.ಮೀ ದೂರ ನಡೆದಿದ್ದರೂ ಎಷ್ಟೋ ದೂರ ನಡೆದಂತೆ ಭಾಸವಾಗುತ್ತಿತ್ತು. ಬಾಕಿಮ್ ಪ್ರದೇಶದಲ್ಲಿ ಒಂದು ಅರಣ್ಯ ವಿಶ್ರಾಂತಿ ಗೃಹವಿದ್ದರೂ ಇಲ್ಲಿ ಉಳಿದುಕೊಳ್ಳಲು ಬೇರಾವ ಸೌಕರ್ಯವಿಲ್ಲವೆಂದು ಮಾರ್ಗದರ್ಶಿ ತಿಳಿಸಿ ಇಲ್ಲಿಂದ ಯುಕ್ಸೋಮ್ ಕಣಿವೆಯನ್ನು ವೀಕ್ಷಿಸಿ ಚಹಾ ಸೇವಿಸಿ ಟ್ಸೋಕ ಕ್ಯಾಂಪಿನೆಡೆಗೆ ನಮ್ಮನ್ನು ನಡೆಯಲು ತಿಳಿಸಿದರು. ನಲವತ್ತು ನಿಮಿಷ ತೀವ್ರ ಎತ್ತರದ ಹಾದಿಯನ್ನು ಹತ್ತುತ್ತ ಬೆಟ್ಟದ ಮತ್ತೊಂದು ಭಾಗವನ್ನು ತಲುಪಿ 9000 ಅಡಿ ಎತ್ತರ ತಲುಪಿದಾಗ ನಮ್ಮ ಸುತ್ತಲೂ ಬಣ್ಣ ಬಣ್ಣದ ಹೂವುಗಳಿಂದ ಕೂಡಿರುವ ರೊಡೋಡೆಂಡ್ರಾನ್ (Rhododendron) ಗಿಡಗಳು ಕಂಡುಬಂದವು. ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಚಾರಣಿಗರ ಗುಡಿಸಿಲುಗಳು ಎದುರಾಗಿ ನಾವು ಟ್ಸೋಕ ಕ್ಯಾಂಪ್ ತಲುಪಿದ್ದೆವು. ಟೆಂಟನ್ನು ಪ್ರವೇಶಿಸಿ ಚಹಾ ಕುಡಿದ ನಂತರ ನಾವು ಹತ್ತಿರದಲ್ಲಿರುವ ಮೊನೆಸ್ಟ್ರಿಯನ್ನು ನೋಡಲು ಹೋದೆವು. ಇಲ್ಲಿಂದ ಹಿಮಾಚ್ಛಾದಿತ ಪಾಂಡಿಮ್ ಪರ್ವತ ಸ್ಪಷ್ಟವಾಗಿ ಗೋಚರಿಸುತ್ತಿದ್ದು ಮತ್ತಷ್ಟು ಎತ್ತರ ತಲುಪಿದ ಮೇಲೆ ಅಲ್ಲಿಂದ ಕೆಳಗಿರುವ ಶುದ್ಧವಾದ ನೀರಿನ ಕೊಳ ಹಾಗೂ ಹಿಮಶಿಖರವು ಗೋಚರಿಸುತ್ತಿತ್ತು.

ನಾಲ್ಕನೇ ದಿನ : ಟ್ಸೋಕ – (9790 ಅಡಿ) ಫೆಡಂಗ್ (12105ಅಡಿ)–ಮಾರ್ಗವಾಗಿ ಡ್ಸೋಂಗ್ರಿ (13190ಅಡಿ) 8.5 ಕಿ.ಮೀ – 6 ಗಂಟೆ

ಇಂದಿನ ನಮ್ಮ ಚಾರಣ 3400 ಅಡಿಯಷ್ಟು ಹತ್ತುವ ತೀವ್ರವಾದ ಮಾರ್ಗದಿಂದ ಕೂಡಿದ್ದು ಜೊತೆಗೆ ಕನಿಷ್ಟ 2 ಲೀಟರ್ ನೀರನ್ನು ಕೊಂಡೊಯ್ಯಬೇಕಿತ್ತು. ಮಾರ್ಗದುದ್ದಕ್ಕೂ ಕೆಂಪು ಬಣ್ಣದ ರೊಡೋಡೆಂಡ್ರಾನ್ (Rhododendron) ಗಿಡಗಳು ದಟ್ಟವಾಗಿದ್ದು ವಾತಾವರಣ ತಂಪಾಗಿತ್ತು. 30 ನಿಮಿಷಗಳ ಅತಿ ಎತ್ತರದ ಹಾದಿ ಹತ್ತತೊಡಗಿದೆವು. ಇಲ್ಲಿಂದ ಮರದ ದಿಮ್ಮಿಗಳಿಂದ ಜೋಡಿಸಿದ್ದ ಮಾರ್ಗ ನಾವು ಹತ್ತತೊಡಗಿದೆವು. ಮರದ ದಿಮ್ಮಿಗಳಿಂದ ಕೂಡಿದ ಮಾರ್ಗ ನಡೆದ ನಂತರ ನಮಗೆ ಕಲ್ಲಿನ ಮೆಟ್ಟಿಲುಗಳಿಂದ ಕೂಡಿದ ಹಾದಿ ಎದುರಾಯಿತು. ಇಲ್ಲಿಂದ 20 ನಿಮಿಷ ಹತ್ತಿ ನಡೆದ ನಂತರ ನಮಗೆ ಫೆಡಂಗ್ ಪ್ರದೇಶ ಎದುರಾಯಿತು. ಈಗ ನಾವು 13000 ಅಡಿ ತಲುಪಿದ್ದೇವೆ ಎಂದು ಮಾರ್ಗದರ್ಶಿ ತಿಳಿಸಿದರು. ಇಲ್ಲಿಂದ ಹಿಮಾಚ್ಛಾದಿತ ಪರ್ವತ ಸ್ಪಷ್ಟವಾಗಿ ಕಾಣತೊಡಗಿದವು. ಇಲ್ಲೆ ನಾವೆಲ್ಲರೂ ಅಲ್ಲಲ್ಲಿ ಕುಳಿತು ನಮ್ಮೊಂದಿಗೆ ತಂದಿದ್ದ ಊಟವನ್ನು ನಿಧಾನವಾಗಿ ಮಾಡಿದೆವು. ಇಲ್ಲಿಂದ ಬಲಕ್ಕಿರುವ ಮಾರ್ಗವು ಕಾಕ್ಚುರಾಂಗ್ (Kokchurang) ಕಡೆಗೆ

ನಮ್ಮನ್ನು ಕರೆದೊಯ್ಯುತ್ತಿತ್ತು. ಆದರೆ ನಾವು ಡ್ಜೋಂಗ್ರಿಗೆ ಹೋಗಬೇಕಿದ್ದರಿಂದ ಫೆಡಾಂಗಿನ ವಿಶಾಲ ಪ್ರದೇಶದಿಂದ ಮಾರ್ಗದ ಇಕ್ಕೆಲಗಳಲ್ಲೂ ಸಣ್ಣ ಸಣ್ಣ ರೊಡೋಡೆಂಡ್ರಾನ್ (Rhododendron) ಗಿಡಗಳಿರುವ ತೀವ್ರ ಹತ್ತುವ ಹಾದಿಯಲ್ಲಿ ಆಯಾಸದಿಂದ ಹತ್ತತೊಡಗಿದೆವು. ಅನೇಕ ದಿಬ್ಬಗಳನ್ನು ಹತ್ತುತ್ತ ಪಾಂಡಿಮ್ ಹಾಗೂ ಕಬ್ರು ಪರ್ವತ ಶ್ರೇಣಿಗಳ ಸುಂದರ ದೃಶ್ಯವನ್ನು ನೋಡುತ್ತ ಒಂದು ಗಂಟೆಯ ನಂತರ ಬಣ್ಣದ ಬಾವುಟಗಳೊಂದಿಗಿನ ಒಂದು ದೇವಾಲಯವನ್ನು ತಲುಪಿದೆವು. 13080 ಅಡಿ ಎತ್ತರದ ಈ ಪ್ರದೇಶವು ನಮ್ಮ ಇಂದಿನ ಚಾರಣದ ತುತ್ತತುದಿಯಾಗಿತ್ತು. ಸ್ವಲ್ಪ ಹೊತ್ತಿನ ವಿಶ್ರಾಂತಿಯ ನಂತರ ಇಳಿಜಾರಿನ ಮಾರ್ಗದ ಮೂಲಕ ಅಲ್ಲಲ್ಲಿ ಹಿಮದ ಹೆಕ್ಕೆಗಳನ್ನು ದಾಟುತ್ತ ಸುತ್ತಲೂ ಸಣ್ಣ ರೊಡೋಡೆಂಡ್ರಾನ್ (Rhododendron) ಗಿಡಗಳ ನಡುವೆ ನಡೆಯುತ್ತ ಮಾರ್ಗದ ತಿರುವು ತಲಪುತ್ತಿದ್ದಂತೆ ಇದ್ದಕ್ಕಿದ್ದಂತೆ ನಮ್ಮೆದುರಿಗೆ ಡ್ಜೋಂಗ್ರಿ ಪ್ರದೇಶದಲ್ಲಿ ಸ್ಥಾಪಿಸಿದ್ದ ಟೆಂಟ್ ಗೋಚರಿಸಿ ನಮ್ಮ ಇಂದಿನ ಚಾರಣವು ಮುಗಿಯಿತೆಂದು ತಿಳಿಯಿತು.

13080 ಅಡಿ ಎತ್ತರದಲ್ಲಿ ಕೆಲವು ಚಾರಣಿಗರು ಆಮ್ಲಜನಕ ಕೊರತೆಯನ್ನು ಎದುರಿಸುವರು. ಡ್ಜೋಂಗ್ರಿ ಪ್ರದೇಶ ಒಂದು ಅತಿದೊಡ್ಡ ಬಾಣಲೆಯಂತಿದ್ದು ವಿಶಾಲವಾದ ಹುಲ್ಲುಗಾವಲಿಂದಾವೃತವಾಗಿದೆ. ಸುತ್ತಲೂ ಪಾಂಡಿಮ್, ಕಾಂಚೆನ ಜುಂಗಾ ಪರ್ವತಶ್ರೇಣಿಗಳು ಇರುವುದು. ಬಹಳ ಚಾರಣಿಗರು ಇಲ್ಲಿಯವರೆಗೆ ಚಾರಣ ಮಾಡಿ ಇಲ್ಲಿಂದ ಬೇಸ್ ಕ್ಯಾಂಪಿಗೆ ಮರಳುವರು. ನಮ್ಮ ಗುಂಪಿನಲ್ಲಿನ ಚಾರಣಿಗಳೊಬ್ಬಳಿಗೆ ತೀವ್ರ ಉಸಿರಾಟದ ಸಮಸ್ಯೆಯಾಗಿ ಅವಳನ್ನು ಅಂದು ರಾತ್ರೆಯೇ ಸ್ಟ್ರೆಚರ್ ಮೂಲಕ ಬೇಸ್ ಕ್ಯಾಂಪಿಗೆ ಕೊಂಡೊಯ್ದ ಕಾರಣ ಮಾರನೇ ದಿನ ನಮ್ಮೊಂದಿಗೆ ಮಾರ್ಗದರ್ಶಿ ಇಲ್ಲದೆ ನಾವೆಲ್ಲರೂ ಮುಂದೆ ಚಾರಣ ಮಾಡಲಾಗದೆ ನಿರಾಶೆಯಿಂದ ಬೇಸ್ ಕ್ಯಾಂಪಿಗೆ ಮರಳುವಂತಾಯಿತು.

ಚೈನ್‌ಶೀಲ್ ಬುಗ್ಯಾಲ್ ಚಾರಣ

ಒಂದೊಮ್ಮೆ ರಾಜ್ಯವೊಂದರ ಪ್ರವಾಸೋದ್ಯಮ ಇಲಾಖೆ ತಮ್ಮ ರಾಜ್ಯದಲ್ಲಿನ ಪ್ರತಿಷ್ಠಿತ ಅರಣ್ಯದಲ್ಲಿ ನೂತನ ಚಾರಣ ಮಾರ್ಗ ನಿರ್ಮಿಸಿ ಅದರ ಉದ್ಘಾಟನಾ ಸಮಾರಂಭಕ್ಕೆ ಬೆಂಗಳೂರಿನಲ್ಲಿರುವ ನಿಮ್ಮನ್ನೂ ಆಹ್ವಾನಿಸಿ ಅನಂತರ ಆ ಮಾರ್ಗದಲ್ಲಿ ಚಾರಣ ಮಾಡುವಂತೆ ಆಹ್ವಾನಿಸಿದರೆ! ನಿಮಗೆ ಹೇಗನ್ನಿಸುತ್ತದೆ? ಇದೇನು! ಕನಸೋ ಅಥವಾ ನನಸೋ ಎಂಬ ಭ್ರಮೆಯೇ? ಅಲ್ಲಾ ರೀ! ಇದು ಸತ್ಯವಾದ ಘಟನೆ. ಅದು ಹೇಗೆ? ಎಂದು ಕೇಳುತ್ತೀರಾ! ಇಗೋ, ಇಲ್ಲಿದೆ ನೋಡಿ ಅದರ ವಿವರಗಳು:

2017 ಏಪ್ರಿಲ್ ತಿಂಗಳಿನಲ್ಲಿ ನಾನು ಇಂಡಿಯಾ ಹೈಕ್ಸ್ ಅವರ ವೆಬ್‌ಸೈಟಿನಲ್ಲಿ ಹೊಸ ಚಾರಣಗಳ ಬಗ್ಗೆ ಹುಡುಕುತ್ತಿದ್ದಾಗ ನನ್ನ ಕಣ್ಣಿಗೆ ಕಂಡಿದ್ದ "ಚೈನ್ ಶೀಲ್ ಬುಗ್ಯಾಲ್" ಎಂಬ ಹೆಸರಿನ ಚಾರಣ. ಅದರ ಬಗ್ಗೆ ಕುತೂಹಲದಿಂದ ವಿವರಗಳನ್ನು ಓದಿದೆ. ವಿವರಗಳು ನನ್ನನ್ನು ಈ ಚಾರಣ ಮಾಡಲು ಪ್ರೇರೇಪಿಸಿತು. ಇನ್ನೇನು? ತಡಮಾಡದೆ ಅದಕ್ಕೆ ನನ್ನ ಹೆಸರನ್ನು 2017ರ ಜೂನ್ 10-16ರ ಬ್ಯಾಚ್‌ಗೆ ನೋಂದಾಯಿಸಿಬಿಟ್ಟೆ. ಈ ಚಾರಣ 10850 ಅಡಿ ಎತ್ತರ ತಲಪುವ ಚಾರಣ. ಈ ಚಾರಣದ ಬೇಸ್ ಕ್ಯಾಂಪ್ ಡೆಹ್ರಾಡೂನ್‌ನಿಂದ 10ಘಂಟೆಯ ಪ್ರಯಾಣದ ನಂತರ ದೊರಕುವ ಬಲಾವತ್ ಹಳ್ಳಿ. ನಮ್ಮ ಬ್ಯಾಚ್‌ನಲ್ಲಿ ಹಿರಿಯಚಾರಣಿಗನೆಂದರೆ ನಾನೇ ಆಗಿದ್ದೆ. ಆಗ ನನಗೆ 67ರ ಪ್ರಾಯ. ನಮ್ಮ ಬ್ಯಾಚ್‌ನಲ್ಲಿ ಒಟ್ಟು 20 ಚಾರಣಿಗರಿದ್ದರು.

ಇನ್ನು ಈ ಚಾರಣದ ಬಗ್ಗೆ ಕೆಲವು ಮಾತನ್ನು ಹೇಳಲೇ ಬೇಕಲ್ಲವೇ! ಏಕೆಂದರೆ ಮುಂದೆ ಯಾರಾದರೂ ಬುಗ್ಯಾಲ್ ಹೆಸರಿನಿಂದ ಆಕರ್ಷಿತರಾಗಿ ಹಾಗೂ ಚಾರಣವು ಸುಲಭವಾಗಿರುವುದೆಂದು ನಂಬಿ ಚಾರಣ ಮಾಡಲು ಹೋದರೆ!

ಮಾಡಬಾರದೆಂದಲ್ಲ. ಈ ಚಾರಣವು ಸುಂದರವಾದದ್ದೆ, ಆದರೆ ಇದು ಸುಲಭವಲ್ಲ. ಹಾಗೂ ಮೊದಲ ಬಾರಿ ಚಾರಣ ಮಾಡುವವರಿಗಲ್ಲ.

ಈ ಚಾರಣ ಕೇವಲ ಹುಲ್ಲುಗಾವಲಿನಿಂದ ಕೂಡಿದ್ದಲ್ಲ. ಬದಲಿಗೆ ಪ್ರತಿದಿನ ಅನೇಕ ದೊಡ್ಡ ದೊಡ್ಡ ಬೆಟ್ಟಗಳನ್ನು ಹತ್ತಿ ಇಳಿಯಬೇಕು. ಮಾರ್ಗವೋ ತೀವ್ರವಾದ ಕಿರಿದಾದ ಜಾಡು, ಒಂದೆಡೆ ಪರ್ವತ ಹಾಗೂ ಮತ್ತೊಂದೆಡೆ ತೀವ್ರವಾದ ಪ್ರಪಾತ. ಎಚ್ಚರ ತಪ್ಪಿದರೆ ಅಥವಾ ತಪ್ಪು ಹೆಜ್ಜೆಯಿಟ್ಟಲ್ಲಿ ದೇವರೇ ಗತಿ.

ಪ್ರತಿನಿತ್ಯವೂ 10–12 ಕಿ.ಮೀನಷ್ಟು ಕಠಿಣವಾದ ಚಾರಣ ಮಾಡಬೇಕು. ಮೊದಲನೇ ದಿನವೇ 8 ಕಿ.ಮೀ ಚಾರಣವಾದರೆ ಎರಡನೇ ದಿನ 14 ಕಿ.ಮೀ! ಮೂರನೇ ದಿನ ಮತ್ತೆ 8 ಕಿ.ಮೀ. ಹೀಗೆ ಮತ್ತೆರಡು ದಿನಗಳೂ ಕೂಡಾ ಕಠಿಣವಾದ ಚಾರಣವೇ!

ಒಂದು ವಿಷಯವೆಂದರೆ ಇಂಡಿಯಾ ಹೈಕ್ಸ್ ಸಂಸ್ಥೆಯು 2017ರಲ್ಲಿ ಕೆಲವು ಚಾರಣಗಳನ್ನು ವ್ಯವಸ್ಥೆ ಮಾಡಿದ್ದರು ಹಾಗೂ ನಾನು ಅವುಗಳಲ್ಲಿ ಮೊದಲನೇ ಬ್ಯಾಚ್‌ನಲ್ಲಿ ಚಾರಣ ಮಾಡಿದ್ದೆ. ಅನಂತರ ಅದೇಕೋ ಏನೋ (ಕಾರಣ ಗೊತ್ತಿಲ್ಲ) ಅವರು ಈ ಮಾರ್ಗದಲ್ಲಿ ಚಾರಣ ಕಾರ್ಯಕ್ರಮವನ್ನು ಮುಂದುವರೆಸಲಿಲ್ಲ. ಆದರೆ Uttaraanchal – ಉತ್ತರಾಖಂಡದ ಪ್ರವಾಸೋದ್ಯಮ ಇಲಾಖೆಯವರು ಈಗಲೂ ಚಾರಣವನ್ನು ನಡೆಸುತ್ತಿದ್ದಾರೆ.

ಈ ಚಾರಣದ ಸಂಕ್ಷಿಪ್ತ ವಿವರಗಳು ಹೀಗಿವೆ

1. ಡೆಹರಾಡೂನ್ ರೈಲ್ವೆ ನಿಲ್ದಾಣದಿಂದ ಬಲಾವತ್ – 210 ಕಿ.ಮೀ ಜೀಪಿನಲ್ಲಿ ಪಯಣ.
2. ಬಲಾವತ್ ಬೇಸ್ ಕ್ಯಾಂಪಿನಿಂದ (5100 ಅಡಿ) – ಅಖೋಟಿ ಥ್ಯಾಚ್ (8350 ಅಡಿ) – 12 ಕಿ.ಮೀ – 7 ಗಂಟೆಗಳು
3. ಅಖೋಟಿ ಥ್ಯಾಚ್ – ಗುಜ್ಜಾರ್ ಹಟ್ ಕ್ಯಾಂಪ್ (9750 ಅಡಿ) – 4 ಕಿ,ಮೀ – 4 ಗಂಟೆ
4. ಗುಜ್ಜಾರ್ ಹಟ್ –ಚೈನಶೀಲ್ ಬುಗ್ಯಾಲ್ (11750ಅಡಿ)– 6 ಕಿ.ಮೀ – 5 ಗಂಟೆ ಚಾರಣ
5. ಚೈನ್ ಶೀಲ್ ಬುಗ್ಯಾಲ್ – ಅಖೋಟಿ ಥ್ಯಾಚ್ – 10 ಕಿ.ಮೀ 6 ಗಂಟೆ
6. ಅಖೋಟಿ ಥ್ಯಾಚ್ – ಬಲಾವತ್ ಕ್ಯಾಂಪ್ – 12 ಕಿ.ಮೀ – 6 ಗಂಟೆ
7. ಬಲಾವತ್ ಕ್ಯಾಂಪ್ – ಡೆಹರಾಡೂನ್ – 210 ಕಿ.ಮೀ ಜೀಪಿನಲ್ಲಿ ಪ್ರಯಾಣ.

ಮೊದಲ ದಿನ: ಡೆಹರಾಡೂನ್ ರೈಲ್ವೆ ನಿಲ್ದಾಣದಿಂದ ಬಲಾವತ್ – 210 ಕಿ.ಮೀ ಜೀಪಿನಲ್ಲಿ ಪಯಣ.

ಡೆಹರಾಡೂನ್‌ನಿಂದ ಪ್ರಾರಂಭವಾಗುವ ಹಿಂದಿನ ಚಾರಣಗಳಂತೆ

ಇಂಡಿಯಾ ಹೈಕ್ಸ್ ಸಂಸ್ಥೆಯು ಮೊದಲೇ ಸಿದ್ಧಪಡಿಸಿದ್ದ ವಾಹನದಲ್ಲಿ ಮುಂಜಾನೆ 7 ಗಂಟೆಗೆ ಬಲಾವತ್ ಬೇಸ್ ಕ್ಯಾಂಪಿನೆಡೆಗೆ ಹೊರಟೆವು. 8.30ಕ್ಕೆ ವಾಹನ ಉಪಾಹಾರಕ್ಕಾಗಿ ಒಂದೆಡೆ ನಿಲ್ಲಿಸಲಾಯಿತು. ಮುಂದೆ ಹೋಗುತ್ತ ನಮಗೆ ಅನೇಕ ಶಿಖರಗಳು ಗೋಚರಿಸತೊಡಗಿತು ಹಾಗೂ ಯಮುನಾ ನದಿಯ ಹತ್ತಿರ ಬಂದಾಗ 20 ನಿಮಿಷಗಳ ವಿರಾಮ ನೆಪದಲ್ಲಿ ಸುತ್ತಲಿನ ಪ್ರಕೃತಿ ಸೌಂದರ್ಯ ಆನಂದಿಸಿದೆವು.

ಅಲ್ಲಿಂದ ಮುಂದೆ ನಾವು ನೈನ್‌ಬಾಗ್, ದಮ್ತಾ ಮತ್ತು ನೌಗಾಂವ್‌ನ ಸಣ್ಣ ಮಾರುಕಟ್ಟೆ ಮುಖಾಂತರ ಮಧ್ಯಾಹ್ನ 1:30 ಸುಮಾರಿಗೆ ಪುರೋಲಾ ತಲುಪಿ ಊಟದ ನಂತರ ಜರ್ಮೊಲಾ ಮೂಲಕ ಸಾಂಕ್ರಿ ಕಡೆಗೆ ಮುನ್ನಡೆದೆವು. ಅಲ್ಲಿಂದ ಕೇದಾರಕಂಠದ ಹಿಂಭಾಗ ಗೋಚರಿಸುತ್ತದೆ. ಜರ್ಮೋಲಾದ ಪೈನ್ ಕಾಡಿನ ನಡುವೆ ಸುಂದರವಾದ ಜಿಗ್ ಜಾಗ್ ರಸ್ತೆ ಮೂಲಕ ಹೋಗಿ ಮೋರಿ ತಲುಪಿ ಅಲ್ಲಿಂದ ನೇರವಾಗಿ ಬಲಾವತ್ ಬೇಸ್ ಕ್ಯಾಂಪಿಗೆ ಸಂಜೆ 5 ಗಂಟೆಗೆ ತಲುಪಿದೆವು.

ನಮ್ಮ ವಾಹನಗಳು ಬಲಾವತ್ ಹಳ್ಳಿ ತಲಪುತ್ತಿದ್ದಂತೆ ನಮಗೇ ಅರಿವಿಲ್ಲದೇ ಓಲಗ, ತಮಟೆ ಹಾಗೂ ಡೋಲುಗಳ ಸದ್ದು ಕೇಳಿಸತೊಡಗಿತು. ನಮ್ಮ ವಾಹನ ಮುಂದಿದ್ದು ಅದರಿಂದ ಮುಂದೆ ಕುಳಿತಿದ್ದ ನಾನು ಇಳಿಯುತ್ತಿದ್ದಂತೆ ಒಬ್ಬ ವ್ಯಕ್ತಿ ಬಂದು ನನಗೆ ಒಂದು ಹೂವಿನ ಹಾರ ಹಾಕಿ ನನ್ನ ಕೈಕುಲುಕಿ ಸ್ವಾಗತಿಸಿದ. ಈ ರೀತಿಯ ದಿಢೀರ್ ಸ್ವಾಗತದಿಂದ ನಾನು ತಬ್ಬಿಬ್ಬಾದೆ. ಆದರೆ ಉಳಿದವರಿಗೂ ಮತ್ತಷ್ಟು ಜನಗಳು ಮುಂದೆ ಬಂದು ಹಾರ ಹಾಕಿ ಸ್ವಾಗತಿಸತೊಡಗಿದರು. ಎಲ್ಲರಿಗೂ ಇದು ಅನಿರೀಕ್ಷಿತವೇ ಆಗಿತ್ತು. ನಂತರ ಎಲ್ಲರನ್ನೂ ಹತ್ತಿರದಲ್ಲಿದ್ದ ಒಂದು ಗುಡ್ಡದ ಮೇಲೆ ನಿರ್ಮಿಸಿದ್ದ ವೇದಿಕೆಗೆ ಕರೆದೊಯ್ದು ಎಲ್ಲರನ್ನೂ ವೇದಿಕೆಯ ಮೇಲೆ ಕೂರಿಸಿದರು. ಸ್ವಲ್ಪಹೊತ್ತಿನಲ್ಲೇ ನಮಗೆ ಗೊತ್ತಾದದ್ದೆಂದರೆ ಇದು ಚೈನ್‌ಶೀಲ್ ಬುಗ್ಯಾಲ್ ಚಾರಣ ಮಾರ್ಗದ ಉದ್ಘಾಟನಾ ಕಾರ್ಯಕ್ರಮವೆಂದು ಹಾಗೂ ಆ ಕಾರ್ಯಕ್ರಮ ನಮ್ಮಿಂದಲೇ ಉದ್ಘಾಟನೆಗೊಳ್ಳಬೇಕೆಂದು ಹಾಗೂ ಇದನ್ನು ಆಯೋಜಿಸಿದವರು ಉತ್ತರಾಖಂಡ್ ಪ್ರವಾಸೋದ್ಯಮ ಇಲಾಖೆಯೆಂದೂ ಹಾಗೂ ಈ ಕಾರ್ಯಕ್ರಮಕ್ಕೆ ಪ್ರವಾಸೋದ್ಯಮ ಇಲಾಖೆ ಸಚಿವರು ಆಗಮಿಸಲಿದ್ದಾರೆ ಎಂದು.

ಸ್ವಲ್ಪ ಸಮಯದಲ್ಲೇ ನಮಗೆಲ್ಲರಿಗೂ ವಿಶೇಷ ಚಹಾ ವ್ಯವಸ್ಥೆ ಆಯಿತು. ಅನಂತರ ಎಲ್ಲರಿಗೂ ಶಾಲು ಹೊದಿಸಿ ಗೌರವಿಸಿದರು. ಎಲ್ಲರನ್ನೂ ಅವರ ಪರಿಚಯ ಮಾಡಿಕೊಡಲು ಕೇಳಿಕೊಂಡರು. ಅನಂತರ ಸಚಿವರು ಬಂದ ನಂತರ ಉದ್ಘಾಟನೆ ದೀಪಬೆಳಗುವುದರ ಮೂಲಕ ಮಾಡಿದರು. ಚಾರಣದ ನಾಯಕನಿಂದ ನಾನು ಹಿರಿಯ ಚಾರಣಿಗನೆಂದು ಅರಿತು ಪ್ರಥಮವಾಗಿ ದೀಪ ಬೆಳಗಲು ನನ್ನನ್ನು ಆಹ್ವಾನಿಸಿ ನಂತರ ಸಚಿವರು ದೀಪ ಬೆಳಗಿದರು. ಅನಂತರ ಮಾತಾಡಿದ ಸಚಿವರು

ನಮ್ಮನ್ನು "ದೇವಲೋಕದಿಂದ ದೇವಭೂಮಿಗೆ ಇಳಿದು ಬಂದ ದೇವತೆಗಳು ಹಾಗೂ ಈ ದೇವತೆಗಳೆಲ್ಲರೂ ದೇವಭೂಮಿಯಲ್ಲಿ ಚಾರಣ ಮಾಡಲು ಬಂದಿರುವರೆಂದು" ಸ್ವಾಗತಿಸಿದರು. ನಂತರದ ಕಾರ್ಯಕ್ರಮದಲ್ಲಿ ಸಣ್ಣ ವಯಸ್ಸಿನ ಮಕ್ಕಳಿಂದ ಸುಮಾರು ಎಪ್ಪತ್ತೈದು ವರ್ಷದವರೆಗಿನ ಗ್ರಾಮಸ್ಥರೆಲ್ಲರೂ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಸರದಿಯಲ್ಲಿ ನೃತ್ಯ ಮಾಡಿದರು.

ಕಾರ್ಯಕ್ರಮ ಮುಗಿದನಂತರ ಎಲ್ಲ ಚಾರಣಿಗರಿಗೂ ರಾತ್ರಿ ವಿಶೇಷ ಭೋಜನ ವ್ಯವಸ್ಥೆ ಮಾಡಿದರು. ಇಷ್ಟೇ ಅಲ್ಲ, ಚಾರಣ ಮುಗಿದ ಮೇಲೂ ಮೊದಲಿಗೆ ನಾನೇ ಬೇಸ್ ಕ್ಯಾಂಪ್ ತಲಪಿದಾಗ ಮತ್ತೊಮ್ಮೆ ನಮ್ಮೆಲ್ಲರನ್ನೂ ಬಾಜಾ ಭಜಂತ್ರಿಯೊಂದಿಗೆ ಸ್ವಾಗತಿಸಿದರು. ಇದಿಷ್ಟೂ ಈ ಚಾರಣದಲ್ಲಿ ಆದ ವಿಶೇಷ ಅನುಭವಗಳು. ಹ್ಞಾ ಮರೆತೇ ಬಿಟ್ಟಿದ್ದೆ ನೋಡಿ, ಅದೇನೆಂದರೆ ಸ್ವಾಗತ ಕಾರ್ಯಕ್ರಮದಲ್ಲಿ ಎಲ್ಲ ಚಾರಣಿಗರಿಗೂ ಅವರ ದೇಹದ ಅಳತೆಗೆ ತಕ್ಕಂತೆ ವಿಶೇಷ ಟೀ-ಶರ್ಟ್‌ನ್ನು ಕೊಟ್ಟರು. ಅದನ್ನು ಈಗಲೂ ನಾನು ಸ್ಮರಣಿಕೆಯಾಗಿ ಇಟ್ಟುಕೊಂಡಿರುವೆ.

ಎರಡನೇ ದಿನ: ಬಲಾವತ್ ಬೇಸ್ ಕ್ಯಾಂಪಿನಿಂದ (5100 ಅಡಿ) – ಅಖೋಟ ಥ್ಯಾಚ್ (8350 ಅಡಿ) – 12 ಕಿ.ಮೀ – 7 ಗಂಟೆಗಳು

ಎರಡನೇ ದಿನ ಮುಂಜಾನೆ 8ಕ್ಕೆ ಉಪಾಹಾರ ನಂತರ ಊಟದ ಬುತ್ತಿಯೊಂದಿಗೆ ಅಲ್ಲಿಂದ ಹೊರಟು ನಿಧಾನ ನಡಿಗೆಯೊಂದಿಗೆ ಚಾರಣ ಪ್ರಾರಂಭಿಸಿ ಮುಂದೆ ಕೆಲವು ಸುಲಭವಾದ ಆರೋಹಣ ಮಾರ್ಗಗಳನ್ನು ಏರುತ್ತ ಪೈನ್ ಮರಗಳ ದಟ್ಟವಾದ ಕಾಡುಗಳ ಮೂಲಕ ಮಾರ್ಗದಲ್ಲಿ ಸಿಗುವ ತೊರೆಗಳಿಂದ ಕುಡಿಯುವ ನೀರನ್ನು ಸಂಗ್ರಹಿಸಿಕೊಂಡು ಎಸ್ತಾರಿಗಡ್ ನದಿಯ ಬಲಭಾಗದಲ್ಲಿರುವ ಜಾಡನ್ನು ಪ್ರವೇಶಿಸಿ "ಹದ್ವಾರಿ" ಎಂಬ ಗ್ರಾಮ ತಲುಪಿದೆವು.

ಕಾಡಿನ ಮೂಲಕ ನಡೆಯುತ್ತ ವಿವಿಧ ಪಕ್ಷಿಗಳು ಮತ್ತು ಪ್ರಾಣಿಗಳನ್ನು ಗುರುತಿಸಲು ಪ್ರಯತ್ನಿಸುತ್ತ ಮುನ್ನಡೆಯುತ್ತಿರುವಾಗ ಹುಲ್ಲುಗಾವಲು ನಮ್ಮ ಮುಂದೆ ತೆರೆದುಕೊಂಡಿತು. ಅದೇ ಅಖೋಟ ಥ್ಯಾಚ್ ಎಂದು ಮಾರ್ಗದರ್ಶಿ ತಿಳಿಸಿದರು. ಇಲ್ಲಿನ ಕ್ಯಾಂಪ್‌ಸೈಟ್ ಅತ್ಯಂತ ಸುಂದರವಾಗಿತ್ತು. ಇಲ್ಲಿ ಹುಲ್ಲುಗಾವಲಿನ ಮಧ್ಯದಲ್ಲಿ ಕ್ಯಾಂಪ್ ಮಾಡಿ ನಮ್ಮೊಂದಿಗೆ ತಂದಿದ್ದ ಬುತ್ತಿಯನ್ನು ತೆರೆದು ಭೋಜನ ಮಾಡಿದವು. ಇಲ್ಲಿಗೆ ಎರಡನೇ ದಿನದ ಚಾರಣವು ಮುಗಿದಿತ್ತು. ಈ ಕ್ಯಾಂಪಿನಲ್ಲಿ ರಾತ್ರಿಯ ಊಟದ ನಂತರ ಡೇರೆಗಳಲ್ಲಿ ನಿದ್ರಿಸಿದೆವು.

ಮೂರನೇ ದಿನ: ಅಖೋಟ ಥ್ಯಾಚ್ – ಗುಜ್ಜಾರ್ ಹಟ್ ಕ್ಯಾಂಪ್ (9750 ಅಡಿ) – 4 ಕಿ,ಮೀ – 4 ಗಂಟೆ

ಶಿಬಿರದಲ್ಲಿ ಉಪಾಹಾರ ಸೇವಿಸಿ ನಂತರ ಗುಜರ್ ಹ್ಯಾಟ್ ಶಿಬಿರದ ಕಡೆಗೆ ಚಾರಣ ಪ್ರಾರಂಭಿಸಿದಾಗ ಉತ್ತರದ ಕಡೆಗೆ ಹಿಮಾಚಲದ ಶಿಖರಗಳ ವಿಶಿಷ್ಟವಾದ ನೋಟಗಳು ಕಂಡುಬರತೊಡಗಿತು. ಇಂದಿನ ಚಾರಣದಲ್ಲಿ ಪೈನ್ ಮತ್ತು ಇತರ ಜಾತಿಗಳ ಮರಗಳು ಮಾತ್ರ ಕಾಣಿಸಿತು. ಶಿಬಿರ ತಲುಪಿ ಕ್ಯಾಂಪ್ ಸೈಟ್‌ನಲ್ಲಿ ಬಿಸಿ ಊಟ ಆನಂದಿಸಿದೆವು.

ನಾಲ್ಕನೇ ದಿನ ಗುಜ್ಜಾರ್ ಹಟ್ –ಚೈನಶೀಲ್ ಬುಗ್ಯಾಲ್(11750ಅಡಿ) 6 ಕಿ.ಮೀ – 5 ಗಂಟೆ ಚಾರಣ

ಗುಜರ್ ಹಟ್‌ನಿಂದ ಹೊರಟು ಚೈನ್‌ಶೀಲ್ ಬುಗ್ಯಾಲ್‌ಗೆ (11750 ಅಡಿ) ಹೊರಟು, ಅರಣ್ಯದಿಂದ ಹೊರಬಂದು ಗದ್ವಾಲ್ ಹಿಮಾಲಯದ ಆಕರ್ಷಕ ನೋಟಗಳೊಂದಿಗೆ ವಿಶಾಲವಾದ ಹುಲ್ಲುಗಾವಲುಗಳನ್ನು ಹಾಗೂ ಬಂದರ್‌ಪೂಂಚ್ ಹಿಮನದಿ, ಗಂಗಾ ನದಿ ಮತ್ತು ಯಮುನಾ ನದಿಗಳನ್ನು ನೋಡುತ್ತ ಹಿಮದ ಹೆಕ್ಕೆಗಳನ್ನು ಕಾಣುತ್ತ ಮುಂದುವರೆದೆವು . ಇದರೊಂದಿಗೆ ಸ್ವರ್ಗರೋಹಿಣಿ ಶಿಖರ, ಥೋಲಾ ಶೀರ್ ಮತ್ತು ಕಪ್ಪು ಶಿಖರದ ಇಳಿಜಾರುಗಳ ರೋಮಾಂಚಕಾರಿ ದೃಶ್ಯ ನೋಡುತ್ತ ಚೈನ್‌ಶೀಲ್ ಬುಗ್ಯಾಲನ್ನು ಮಧ್ಯಾಹ್ನ 2 ಗಂಟೆಗೆ ತಲುಪಿದೆವು. ಇದು ಆಕರ್ಷಕವಾದ ಮತ್ತು ಸುಂದರವಾದ ನೋಟಗಳಿಂದ ಕೂಡಿದ್ದು ಹೂಬಿಡುವ ಸೌಂದರ್ಯದೊಂದಿಗೆ ಕಂಗೊಳಿಸುತ್ತಿತ್ತು. ಅಲ್ಲಿ ಶಿಬಿರ ಸ್ಥಾಪಿಸಿದ್ದು ರಾತ್ರಿಯ ವಾಸ್ತವ್ಯವೆಂದು ನಮಗೆ ತಿಳಿದುಬಂತು. ಊಟದ ನಂತರ ನಮಗೆ ಹುಲ್ಲುಗಾವಲನ್ನು ಪರಿಶೋಧಿಸಲು ಮಾರ್ಗದರ್ಶಿ ತಿಳಿಸಿದರು. ಮುಂದುವರೆದು ಅವರು ಹೀಗೆ ತಿಳಿಸಿದರು :"ಚೈನ್ಶೀಲ್ ಬುಗ್ಯಾಲ್ ಜೂನ್ ತಿಂಗಳಲ್ಲಿ ಪೂರ್ಣವಾಗಿ ಅರಳುತ್ತದೆ, ನೀವು ವೈವಿಧ್ಯಮಯ ಬಣ್ಣಬಣ್ಣದ ಹೂಬಿಡುವ ಹೂವುಗಳು ಮತ್ತು ಹಿತವಾದ ಹಸಿರನ್ನು ನೋಡಬಹುದು. ಈ ಎತ್ತರದ ಹುಲ್ಲುಗಾವಲುಗಳನ್ನು ಚಾರಣಿಗರು ಬಯಸುತ್ತಾರೆ; ಹಿತವಾದ ಹಸಿರು ಮತ್ತು ಉತ್ತೇಜಕ ವಾತಾವರಣ ಹೊಂದಿದ್ದು ಅದು ಎಲ್ಲರ ಮನಸ್ಸಿಗೆ ಶಾಂತಿ ತಂದುಕೊಡುತ್ತದೆ. ಈ ಪ್ರದೇಶವನ್ನು ನಿಮ್ಮ ಕ್ಯಾಮರಾ ಲೆನ್ಸ್‌ಗಳಲ್ಲಿ ಸೆರೆಹಿಡಿಯಿರಿ ಮತ್ತು ನಿಮ್ಮ ಸಾಹಸ ಡೈರಿಯಲ್ಲಿ ಕ್ಷಣಗಳನ್ನು ಸಂಗ್ರಹಿಸಲು ಮತ್ತು ಬರೆಯಲು ಸುತ್ತಾಡಿ".

"ಇಲ್ಲಿಂದ ಸೂರ್ಯೋದಯ ಮತ್ತು ಸೂರ್ಯಾಸ್ತ ನೋಡುವುದು ಒಂದು ಆನಂದವಾಗಿದೆ, ಸೂರ್ಯನು ತನ್ನ ಬೆಳಕನ್ನು ಶಿಖರಗಳ ಮೇಲೆ ಪ್ರತಿಫಲಿಸಿದಾಗ

ಬಣ್ಣವು ಕಿತ್ತಳೆ ಮತ್ತು ಚಿನ್ನದ ಬಣ್ಣಕ್ಕೆ ಬದಲಾಗುತ್ತದೆ, ಅಲ್ಲಿಂದ ನಿಮ್ಮ ಕಣ್ಣುಗಳನ್ನು ತೆಗೆಯಲು ಸಾಧ್ಯವಿಲ್ಲ. ರಾತ್ರಿಯಲ್ಲಿ ನಕ್ಷತ್ರಗಳು ಆಕಾಶವನ್ನು ಆವರಿಸುತ್ತವೆ ಮತ್ತು ಅದರಲ್ಲಿ ಅಂತರ್ಗತ ಸೌಂದರ್ಯ ಹೊಂದಿರುವ ಸ್ಥಳದಿಂದ ಲೆಕ್ಕಿಸಲಾಗದ ನಕ್ಷತ್ರಗಳನ್ನು ವೀಕ್ಷಿಸುವುದು ನಿಜವಾಗಿಯೂ ವಿಶೇಷವಾಗಿದೆ. ಅಸಾಧಾರಣ ಘಟನೆಗಳಿಗೆ ಸಾಕ್ಷಿಯಾಗುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲವಾದ್ದರಿಂದ ಈ ಕ್ಷಣಗಳನ್ನು ಅನುಭವಿಸಿ" ಎಂದು ತಿಳಿಸಿದರು. ಅವರ ಸಲಹೆಯಂತೆ ನಾವು ನಮಗೆ ಸಾಧ್ಯವಾದಷ್ಟು ಹೊತ್ತು ಹುಲ್ಲುಗಾವಲಿನಲ್ಲಿ ಸುತ್ತಾಡಿ ಸಂಜೆಯ ಸೂರ್ಯಾಸ್ತ ವೀಕ್ಷಿಸಿ ಶಿಬಿರಗಳಿಗೆ ಹಿಂತಿರುಗಿ, ಊಟ ಮಾಡಿ ಆನಂದದಿಂದ ಮಲಗಿದೆವು.

ಐದನೇ ದಿನ : ಚೈನ್ ಶೀಲ್ ಬುಗ್ಯಾಲ್–ಅಖೋಟಿ ಥ್ಯಾಚ್ – 10 ಕಿ.ಮೀ 6 ಗಂಟೆ

ಇಂದು ನಾವು ಮೊದಲೇ ಸೂರ್ಯೋದಯ ಸಮಯ ತಿಳಿದುಕೊಂಡು ಅದನ್ನು ನಮ್ಮ ಕಣ್ಣುಗಳಲ್ಲಿ ಸೆರೆಹಿಡಿದು ಅಲ್ಲಿಂದಲೆ ಮಾರ್ಗದರ್ಶಿ ಸಹಾಯದಿಂದ ಬಂದರ್‌ಪೂಂಚ್ ಶಿಖರ (6300 ಮೀಟರ್), ಕಪ್ಪು ಶಿಖರ (6387 ಮೀಟರ್), ಕಲಾನಾಗ್, ರುಯಿನ್ಸಾರಾ ಸರೋವರ (3500 ಮೀಟರ್), ಬಾಲಿ ಪಾಸ್ (4950 ಮೀಟರ್), ಮತ್ತು ಸ್ವರ್ಗಾರೋಹಿಣಿ – I, II, ಮತ್ತು III (6300 ಮೀಟರ್‌ಗಳು) ಅನೇಕ ಇತರ ಶಿಖರಗಳು! ಕೇದಾರಕಾಂತ (3800 ಮೀಟರ್) ಹರ್ ಕಿ ಡುನ್ (3645 ಮೀಟರ್) ರೂಪಿನ್ ಪಾಸ್ (4685 ಮೀಟರ್)ಗಳನ್ನು ಗುರುತಿಸಿದೆವು.

ಇಂದು ಚೈನ್‌ಶೀಲ್ ಬುಗ್ಯಾಲ್ ಚಾರಣದ ಕೊನೆಯ ದಿನವಾದ್ದರಿಂದ ಪ್ರತಿಯೊಂದನ್ನೂ ಸರಿಯಾಗಿ ನೋಡಿ ಹಿಮದಿಂದ ಆವೃತವಾದ ಪರ್ವತಗಳನ್ನು ವೀಕ್ಷಿಸುತ್ತಾ ಉಪಾಹಾರ ಮತ್ತು ಚಹಾ ಸೇವಿಸಿ ಆ ಸ್ಥಳಕ್ಕೆ ವಿದಾಯ ಹೇಳಿದೆ.

ಮಾರನೇ ದಿನದಂದು ನಮ್ಮ ಕ್ಯಾಂಪ್‌ಸೈಟ್ ಆಗಿದ್ದ ಅಖೋಟಿ ಥಾಚ್‌ಗೆ ಹೊರಟು ಅರಣ್ಯ ಪ್ರವೇಶಿಸಿ ಅಲ್ಲಿನ ಪಕ್ಷಿಗಳು ಮತ್ತು ಪ್ರಾಣಿಗಳ ವಿವಿಧ ಪ್ರಭೇದಗಳನ್ನು ಗಮನಿಸುತ್ತ ಕೆಲವೆಡೆ ಮಾರ್ಗವು ಕಠಿಣವಾಗಿದ್ದರೂ ಎಚ್ಚರಿಕೆಯಿಂದ ನಿಭಾಯಿಸಿದೆ. ರಾತ್ರಿ ಊಟದ ನಂತರ ಲೆಕ್ಕಿಸಲಾಗದ ನಕ್ಷತ್ರಗಳಿಂದ ತುಂಬಿರುವ ಆಕಾಶದ ಕೆಳಗೆ ಡೇರೆಗಳಲ್ಲಿ ಮಲಗಿ ಆನಂದಿಸಿದೆ.

ಆರನೇ ದಿನ : ಅಖೋಟಿ ಥ್ಯಾಚ್ – ಬಲಾವತ್ ಕ್ಯಾಂಪ್ – 12 ಕಿ.ಮೀ – 6 ಗಂಟೆ

ಅಖೋಟಿ ಥಾಚ್‌ನಿಂದ ಬಲಾವತ್ ಶಿಬಿರದವರೆಗಿನ ನಮ್ಮ ಚಾರಣದ ಕೊನೆಯ ದಿನ ಇಂದು. ನಮ್ಮ ಮರುಪ್ರಯಾಣ ಒಂದು ರೀತಿಯಲ್ಲಿ ನೀರಸವಾಗಿದ್ದರೂ ಚಾರಣದಲ್ಲಿ ಪಡೆದ ಸಂತೋಷ ಇವೆಲ್ಲವನ್ನೂ ದೂರಮಾಡಿತ್ತು.

ಸಂಜೆ 4 ಗಂಟೆಗೆಲ್ಲ ಬಲಾವತ್ ಕ್ಯಾಂಪನ್ನು ತಲುಪಿದೆವು. ಕ್ಯಾಂಪಿಗೆ ಮೊದಲು ಹೋದವರಲ್ಲಿ ನಾನೇ ಮೊದಲಿಗನಾಗಿದ್ದು ನನಗೆ ಸಂತಸವುಂಟಾಯಿತು. ನಮ್ಮೆಲ್ಲರನ್ನೂ ಹಳ್ಳಿಯ ಪ್ರಮುಖರು ಓಲಗವಾದ್ಯಗಳೊಂದಿಗೆ ಸ್ವಾಗತಿಸಿದರು.

ಏಳನೇ ದಿನ : ಬಲಾವತ್ ಕ್ಯಾಂಪ್ – ಡೆಹರಾಡೂನ್ – 210 ಕಿ.ಮೀ ಜೀಪಿನಲ್ಲಿ

ಬೆಳಗಿನ ಉಪಾಹಾರದ ನಂತರ ನಾವೆಲ್ಲರೂ ಮೊದಲ ದಿನ ಬಂದಿದ್ದ ವಾಹನದಲ್ಲೇ ಡೆಹರಾಡೂನಿಗೆ ಮರಳಿದೆವು.

ಅರುಣಾಚಲ ಪ್ರದೇಶದಲ್ಲಿನ ತಲ್ಲೆ ವ್ಯಾಲಿಯಲ್ಲಿನ ಚಾರಣ

ಒಂದು ವೇಳೆ ನಿಮ್ಮನ್ನು ಸಾವಿರಾರು ಮೈಲಿಗಳ ದೂರದಲ್ಲಿರುವ "ಉದಯಿಸುವ ಸೂರ್ಯನ ನಾಡು" ಪ್ರದೇಶಕ್ಕೆ ಕೆಲವು ದಿನ ಸುತ್ತಾಡಲು ಹಾಗೂ ದಟ್ಟವಾದ ಫರ್ನ್ ವೃಕ್ಷಗಳಿಂದ ಕೂಡಿದ ವಿಶಾಲವಾದ ಅರಣ್ಯ ಮತ್ತು ದಿಗ್ಭ್ರಮೆಗೊಳಿಸುವ ಹಾಗೂ ನೀವು ಹಿಂದೆಂದೂ ಕಂಡಿರದ ಅಗಾಧ ಮತ್ತು ದಟ್ಟವಾದ ಬಿದಿರಿನ ಮೆಳೆಗಳಲ್ಲಿ ಬೆಳಗಿನಿಂದ ಸಂಜೆಯವರೆಗೂ ಚಾರಣ ಮಾಡಲು ಆಹ್ವಾನಿಸಿದರೆ ಪ್ರಕೃತಿ ಹಾಗೂ ಪಕ್ಷಿಪ್ರಿಯರಾದ ನಿಮಗೆ ಹೇಗನಿಸುತ್ತದೆ? ಒಂದು ಪಕ್ಷ ನೀವು ಒಪ್ಪಿ ಅಲ್ಲಿಗೆ ಹೋದಿರಿ ಎಂದಿಟ್ಟುಕೊಳ್ಳಿ, ಸಾಹಸಪ್ರಿಯರಾದ ನಿಮಗೆ ಅಲ್ಲಿ ನೀವೆಂದೂ ಕಂಡು ಕೇಳರಿಯದ, ವಿಚಿತ್ರ ವೇಷಧರಿಸಿರುವ ಹಾಗೂ ಕೈಯಲ್ಲಿ ಈಟಿಯನ್ನು ಹಿಡಿದ ಅಪ್ತಾನಿ ಬುಡಕಟ್ಟಿನ ಯುವಕನೊಬ್ಬನು ಧುತ್ತೆಂದು ನಿಮ್ಮ ಮುಂದೆ ಪ್ರತ್ಯಕ್ಷನಾದಾಗ ನೀವು ಹೇಗೆ ಪ್ರತಿಕ್ರಿಯಿಸುವಿರಿ?

ಹಾಗೇ ನೀವು ಈ ಪ್ರದೇಶದಲ್ಲಿ ಚಾರಣ ಮಾಡುತ್ತಿರುವಾಗ ಅನಿರೀಕ್ಷಿತವಾಗಿ ನಿಮ್ಮೂರಿನವನೇ ಆದ ಒಬ್ಬ ಯುವಕ ಅದೇ ಚಾರಣಕ್ಕೆ ಬಂದಿದ್ದು ನಿಮ್ಮನ್ನು ಭೇಟಿಯಾಗಿ ಹಲೋ ಎಂದು ಮಾತ್ರ ಹೇಳಿ ದಿನದ ಚಾರಣ ಮುಗಿದ ಮೇಲೆ ನಿಮ್ಮೊಂದಿಗೇ ಟೆಂಟ್ ಪ್ರವೇಶಿಸಿ ಮಲಗಲು ಅಣಿಯಾಗುತ್ತಿರುವಾಗ ಅವನ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತಾ ಹೋದಂತೆ ಅವನು ನಿಮ್ಮ ಸಹೋದ್ಯೋಗಿಯೊಬ್ಬಳ ಮಗನೆಂದು ತಿಳಿದಾಗ ಪರಸ್ಪರ ಇಬ್ಬರಿಗೂ ಆಗುವ ಆಶ್ಚರ್ಯ, ಸಂತೋಷ ಹೇಗಿರಬಹುದು!

ಅರುಣಾಚಲ ಪ್ರದೇಶದ ಅನ್ವರ್ಥನಾಮವೇ "ಉದಯಿಸುವ ಸೂರ್ಯನ ನಾಡು". ಇದು "ಸಪ್ತ ಸಹೋದರಿಯರ" ರಾಜ್ಯಗಳಲ್ಲೊಂದು. ಈ ರಾಜ್ಯದಲ್ಲಿ ನಿಮಗೆ 550ಕ್ಕೂ ಹೆಚ್ಚಿನ ವಿವಿಧ ಜಾತಿಯ ವಿಚಿತ್ರ ಪುಷ್ಪಗಳು, ನೂರಾರು ಜಾತಿಯ ಅಪರೂಪದ ಸಸ್ಯಗಳು ನೋಡಲು ಸಿಗುವುದು. ಅರುಣಾಚಲ ಪ್ರದೇಶದ ಬಗ್ಗೆ ಸುಮ್ಮನೆ ಮಾತನಾಡುತ್ತಾ ಇರುವುದರ ಬದಲು, ಒಮ್ಮೆ ಯಾಕೆ

ಅಲ್ಲಿಗೆ ಹೋಗಿ ಬರಬಾರದು? ಈ ಆಲೋಚನೆ ಬಂದದ್ದೇ ತಡ ಇಂಡಿಯಾ ಹೈಕ್ಸ್ ವೆಬ್ ಸೈಟ್‌ನಲ್ಲಿ ಹುಡುಕಿದಾಗ "ತಲ್ಲೆ ವ್ಯಾಲಿ" ಚಾರಣದ ಬಗ್ಗೆ ವಿವರಗಳನ್ನು ನೋಡಿದೆ. ತಲ್ಲೆ ವ್ಯಾಲಿ ಝ್ಯುರೋ ಕಣಿವೆ ಅಥವಾ ಅಪ್ಟಾನಿ ಪ್ರಸ್ಥಭೂಮಿಯ ಒಂದು ಭಾಗ. ನಮ್ಮ ಚಾರಣ 2017ರ ಜನವರಿ 29ರಿಂದ ಫೆಬ್ರವರಿ 1ರ ಅವಧಿಯಲ್ಲಿ ಎಂದು ನಿಗದಿಪಡಿಸಲಾಯಿತು. ನಾಲ್ಕು ದಿನಗಳ 40 ಕಿ.ಮೀ ಚಾರಣದಲ್ಲಿ ನಾವು ಮೊದಲಿಗೆ ಝ್ಯುರೋನಲ್ಲಿನ ಮಣಿಪೋಲ್ಯಾಂಗ್ ಕ್ಯಾಂಪ್‌ನಿಂದ ಪಂಗಿ ಕಣಿವೆಯೆಡೆಗೆ 9 ಕಿ.ಮೀ ಚಾರಣ.

ಮೊದಲ ದಿನದ ಚಾರಣದ ನಂತರ ನಾನು ಪ್ರವೇಶಿಸಿದ ಟೆಂಟಿನೊಳಗೆ ಮತ್ತೊಬ್ಬ ಯುವಚಾರಣಿಗನೂ ಬಂದನು. ಈ ಚಾರಣದಲ್ಲಿ ಒಂದು ಟೆಂಟಿನಲ್ಲಿ ಇಬ್ಬರೇ ಇರುವ ಅವಕಾಶವಿತ್ತು ಏಕೆಂದರೆ ಒಟ್ಟು 8 ಚಾರಣಿಗರು ಮಾತ್ರ ಇದ್ದರು. ರಾತ್ರಿ ಮಲಗುವ ಮುನ್ನ ಪರಸ್ಪರ ಮಾತಿಗೆ ತೊಡಗಿದೆವು. ಆ ಯುವಕನ ಹೆಸರು ಅಕ್ಷಯ್ ಎಂದೂ ಹಾಗೂ ಬೆಂಗಳೂರಿನವನೆಂದು ಅಲ್ಲದೆ ಈ ಚಾರಣ ಅವನಿಗೆ ಮೊದಲ ಚಾರಣವೆಂದು ಗೊತ್ತಾಯಿತು. ಅವನ ಉದ್ಯೋಗ ಹಾಗೂ ತಂದೆ-ತಾಯಿ ಅವರ ಬಗ್ಗೆ ವಿಚಾರಿಸಿದಾಗ, ಅವನು ಸಿವಿಲ್ ಸರ್ವೀಸಸ್ ಪರೀಕ್ಷೆಯನ್ನು ಮುಗಿಸಿ ಫಲಿತಾಂಶಕ್ಕಾಗಿ ಕಾಯುತ್ತಿರುವುದಾಗಿಯೂ ತಾಯಿ ಒಬ್ಬರೇ ಇದ್ದು . ತಂದೆ ಸ್ವರ್ಗಸ್ಥರಾಗಿರುವರೆಂದು ತಿಳಿಸಿದನು. ಅವನ ತಾಯಿ SBI ನಲ್ಲಿ ಕೆಲಸದಲ್ಲಿ ಇದ್ದರೆಂದು ಗೊತ್ತಾಯಿತು.

ಎರಡನೇ ದಿನ ಪಂಗೆ ಕಣಿವೆಯಿಂದ ತಲ್ಲೆ ಕಣಿವೆಯೆಡೆಗೆ 11 ಕಿ.ಮೀ ಚಾರಣ. ಮಾರ್ಗದಲ್ಲಿನ ವಿಶೇಷತೆಯೆಂದರೆ ದಟ್ಟವಾದ ಬಿದಿರಿನ ಅರಣ್ಯ ಮತ್ತು ಇಕ್ಕೆಲಗಳಲ್ಲೂ ಎತ್ತರದ ಹಾಗೂ ಚೂಪಾದ ಎಲೆಗಳುಳ್ಳ ಫರ್ನ್ ಗಿಡಗಳಿಂದ ಕೂಡಿದ ಮಾರ್ಗ.

ಮೂರು ಹಾಗೂ ನಾಲ್ಕನೇ ದಿನ ತಲ್ಲೆ ಕಣಿವೆಯಿಂದ ಬೇರೆ ಮಾರ್ಗದಲ್ಲಿ ಮರುಪ್ರಯಾಣ.

ಅಪ್ಟಾನಿ ಬುಡಕಟ್ಟಿನ ಮೂಲನಿವಾಸಿಗಳ ಮನೆಗೆ ಭೇಟಿಯಿತ್ತು ಅವರು ತಿನ್ನುವ ಶಾಖಾಹಾರಿ ಖಾದ್ಯ ರುಚಿ ನೋಡಿ ಅವರೊಂದಿಗೆ ಸಂಭಾಷಿಸಿದೆವು. ಅನಂತರ ಸಂಜೆ ಆ ಹಳ್ಳಿಯಲ್ಲಿ ನಡೆಯುತ್ತಿದ್ದ ವಾರದ ಜಾತ್ರೆಗೆ ಹೋಗಿ ಅಲ್ಲಿ ಮಾರಾಟ ವಾಗುತ್ತಿದ್ದ ಸ್ಥಳೀಯ ವಸ್ತುಗಳನ್ನು ವೀಕ್ಷಿಸಿ ಸಂತಸಪಟ್ಟೆವು.
ಮರಳಿ ಗೌಹಾತಿಗೆ ಬಂದಮೇಲೆ ನನ್ನ ಸ್ವಂತ ನಿರ್ಧಾರದಂತೆ ಅಲ್ಲೇ ಒಂದು ದಿನವಿದ್ದು ಕಾಮಾಖ್ಯ ಮಂದಿರ, ಉಮಾನಂದ ಮಂದಿರ, ಪೂರ್ವ ತಿರುಪತಿ ಬಾಲಾಜಿ,,ವಶಿಷ್ಠ ಆಶ್ರಮ, ಶುಕ್ರೇಶ್ವರ ಮಂದಿರ, ವಶಿಷ್ಠ ಮಂದಿರ. ಭೇಟಿಕೊಟ್ಟೆ: ನಂತರ ಗೌಹಾತಿಗೆ ವಿದಾಯ ಹೇಳಿ ಬೆಂಗಳೂರಿಗೆ ಮರಳಿದೆ.

ಅಧ್ಯಾಯ - 2

ಪಶ್ಚಿಮ ಘಟ್ಟಗಳಲ್ಲಿನ ಚಾರಣಗಳು

ಕರ್ನಾಟಕ, ತಮಿಳುನಾಡು, ಕೇರಳ, ಗೋವಾ, ಮಹಾರಾಷ್ಟ್ರ ರಾಜ್ಯಗಳಲ್ಲಿ ನಾನು ಹಲವಾರು ಚಾರಣ ಮಾಡಿರುವೆ. ಅವುಗಳಲ್ಲಿ ಕೆಲವು ಚಾರಣಗಳು ಏಕ ದಿನದ ಚಾರಣಗಳಾದರೆ ಮತ್ತಷ್ಟು ಚಾರಣ ಅಧಿಕ ದಿನಗಳಿಂದ ಕೂಡಿದ್ದವು. ಅವುಗಳ ವಿವರಗಳು ಹೀಗಿವೆ:

ಕ್ರ ಸಂ	ಪ್ರದೇಶ	ರಾಜ್ಯ
1	ಪುಷ್ಪಗಿರಿವನ	ಕರ್ನಾಟಕ
2	ಕೂರ್ಗ್ ನ್ಯಾಷನಲ್	ಕರ್ನಾಟಕ
3	ನೀಲಗಿರಿ ಹಿಲ್ಸ್	ತಮಿಳುನಾಡು
4	ತಡಿಯಾಂಡಮಾಲ್	ಕರ್ನಾಟಕ
5	ಕುದುರೆಮುಖ	ಕರ್ನಾಟಕ
6	ಕೋಟಿಬೆಟ್ಟ	ಕರ್ನಾಟಕ
7	ಯಲ್ಲಾಪುರ-ಯಾಣ	ಕರ್ನಾಟಕ
8	ಕೊಡೈ-ಮುನ್ನಾರ್	ತಮಿಳುನಾಡು-ಕೇರಳ
9	ಗೋವಾ ನಾಷನಲ್	ಗೋವ
10	ನೀಲಗಿರಿ ಸರೋವರ	ತಮಿಳುನಾಡು
11	ಮಾಕಳಿ ದುರ್ಗ	ಕರ್ನಾಟಕ
12	ಪ್ರತಾಪಗಡ ಮತ್ತು ರಾಯಗಡ	ಮಹಾರಾಷ್ಟ್ರ
13	ಬ್ರಹ್ಮಗಿರಿ ಪರ್ವತ	ಮಹಾರಾಷ್ಟ್ರ

ಪುಷ್ಪಗಿರಿವನದೆಡೆಗಿನ ಚಾರಣ

2012ರಲ್ಲಿ ನಾನು ಹಿಮಾಲಯದಲ್ಲಿನ ರೂಪಕುಂಡ ಸರೋವರದೆಡೆಗೆ ಚಾರಣ ಮಾಡುವುದಕ್ಕೆ ಮೊದಲು ಹತ್ತಿರದಲ್ಲೇ ಒಂದು ಚಾರಣ ಮಾಡಿ ನನ್ನ ಶಾರೀರಿಕ ತಯಾರಿ ಸೂಕ್ತವಾಗಿದೆಯೇ ಎಂಬುದನ್ನು ಅರಿತುಕೊಳ್ಳಲು ಹಾಗೂ ವಿಶ್ವಾಸ ಹೆಚ್ಚಿಸಿಕೊಳ್ಳಲು ತೀರ್ಮಾನಿಸಿ Bangalore Mountaineering Club (BMC) ಅವರು ನಡೆಸಿಕೊಡುವ 30/9/12ರ – 2 ದಿನಗಳ ಪುಷ್ಪಗಿರಿವನ (ಕುಮಾರಪರ್ವತ) ಚಾರಣಕ್ಕೆ ರಿಜಿಸ್ಟರ್ ಮಾಡಿಕೊಂಡೆ. ಇದು ನನ್ನ ಮೊದಲ ಚಾರಣ ಹಾಗೂ ಇದರ ಮೂಲಕ ನನ್ನ ಚಾರಣ ಜೀವನ ಪ್ರಾರಂಭ ಆಯಿತೆನ್ನಬಹುದು.

ಚಾರಣವು ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಿಂದ ಪ್ರಾರಂಭವಾಯಿತು ಹಾಗೂ ಮೊತ್ತ ಮೊದಲಿಗೆ ನನಗೆ ಜಿಗಣೆ ಅಂದರೇನು ಹಾಗೂ ಅದಕ್ಕೆ ನಾವು ರಕ್ತವನ್ನು ಹೇಗೆ ದಾನಮಾಡುತ್ತೇವೆ ಎಂಬುದನ್ನು ಸ್ವಾನುಭವದಿಂದ ಕಲಿತೆ.

ಮಧ್ಯಾಹ್ನ ಒಂದು ಗಂಟೆಗೆ ನಾವು ಗಿರಿಗದ್ದೆಯಲ್ಲಿರುವ "ಭಟ್ಟರ ಮನೆ"ಯನ್ನು ತಲುಪಿ ಅಲ್ಲಿ ಊಟವನ್ನು ಮುಗಿಸಿ ಸ್ವಲ್ಪ ವಿಶ್ರಾಂತಿಯ ನಂತರ 2 ಗಂಟೆಗೆ ಅಲ್ಲಿಂದ ಬೆಟ್ಟ ಹತ್ತತೊಡಗಿದೆವು. ಮಾರ್ಗದಲ್ಲಿ ಒಂದು ಮಂಟಪ ತಲುಪಿ ಅಲ್ಲಿ ಸ್ವಲ್ಪ ವಿಶ್ರಾಂತಿ ಪಡೆದು ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಕ್ಯಾಮೆರಾದಲ್ಲಿ ಸೆರೆಹಿಡಿದು ಮತ್ತಷ್ಟು ಎತ್ತರದವರೆಗೂ 4 ಗಂಟೆಯ ತನಕ ಹತ್ತಲು ತೀರ್ಮಾನಿಸಿ ಮುಂದುವರೆದೆವು. ನಮ್ಮಲ್ಲಿ ಕೆಲವರು ಇನ್ನೂ ಮುಂದಕ್ಕೆ ಹೋಗಲು ತೀರ್ಮಾನಿಸಿದರಾದರೂ ನಾನು ಮಾತ್ರ ಮತ್ತಷ್ಟು ಚಾರಣಿಗರೊಂದಿಗೆ ಬೆಟ್ಟ ಇಳಿಯುತ್ತಾ 5.30ರ ಹೊತ್ತಿಗೆ ಭಟ್ಟರ ಮನೆಗೆ ಮರಳಿದೆವು. ಎಲ್ಲರ ಮೈ ತುಂಬಾ

ಜಿಗಣೆಗಳು ಮೆತ್ತಿಕೊಂಡಿದ್ದು ಅವುಗಳು ರಕ್ತವನ್ನು ಹೀರುತ್ತಿದ್ದದ್ದು ಅರಿವಾಗಲೇ ಇಲ್ಲ. ನಮ್ಮಲ್ಲಿ ಒಬ್ಬನಿಗೆ ಗೊತ್ತಾಗಿ ಗಾಬರಿಯಿಂದ ಅವುಗಳಿಂದ ಬಿಡಿಸಿಕೊಳ್ಳಲು ಹೆಣಗಾಡತೊಡಗಿದ. ಆಗ ನಾನು ನನ್ನ ಶೂ ಕಳಚಿದಾಗ ನನಗೂ ಜಿಗಣೆಗಳು ಕಚ್ಚುತ್ತಿರುವುದು ಅರಿವಾಯಿತು. ಆಗ ಚಾರಣದ ಮಾರ್ಗದರ್ಶಿ ತನ್ನಲ್ಲಿದ್ದ ಡೆಟ್ಟಾಲ್ ಔಷಧಿ ಸಿಂಪಡಿಸಿ ಜಿಗಣೆಗಳನ್ನು ಬೇರ್ಪಡಿಸಿದನು. ಸ್ವಲ್ಪ ಹೊತ್ತಿನಲ್ಲಿ ಜೋರಾಗಿ ಮಳೆ ಬರತೊಡಗಿತು. ಶಿಖರ ತಲುಪಬೇಕೆಂದು ಹೋಗಿದ್ದ ನಮ್ಮ ಗುಂಪಿನ ಕೆಲವು ಚಾರಣಿಗರು ದಟ್ಟವಾದ ಕಾಡು, ಕತ್ತಲು ಹಾಗೂ ಮಳೆಯಿಂದಾಗಿ ದಾರಿ ಕಾಣದಂತಿದ್ದ ಮಾರ್ಗದಲ್ಲಿ ಅತಿ ಪ್ರಯಾಸದಿಂದ ರಾತ್ರೆ 9.30ಕ್ಕೆ ಮರಳಿದರು.

ಮಾರನೇ ದಿನ ಬೆಳಗ್ಗೆ ಭಟ್ಟರ ಮನೆಯಿಂದ ಬೆಟ್ಟ ಇಳಿಯುತ್ತಾ ಕುಕ್ಕೆ ದೇವಸ್ಥಾನವನ್ನು 10.30ಕ್ಕೆ ತಲುಪಿದೆವು. ಕುಮಾರಪರ್ವತ (ಪುಷ್ಪಗಿರಿ) ಚಾರಣ ಮಧ್ಯಮ ದರ್ಜೆಯ ಕಷ್ಟದ್ದೆಂದು ಪರಿಗಣಿಸಿದ್ದು ಮೊದಲ ಬಾರಿ ಚಾರಣ ಮಾಡುವವರಿಗೆ ಅತಿಯಾದ ಆಯಾಸವನ್ನುಂಟು ಮಾಡುವುದು. ಇದೇ ಚಾರಣವನ್ನು ನಾನು ಸೋಮವಾರ ಪೇಟೆಯ ಕಡೆಯಿಂದಲೂ ಮತ್ತೊಮ್ಮೆ ಮಾಡಿದೆ.

ಕೂರ್ಗ್ ನ್ಯಾಷನಲ್ ಚಾರಣ

ಯೂಥ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರಿನ "ಗಂಗೋತ್ರಿ ಶಾಖೆ" ಡಿಸೆಂಬರ್ 2012ರಲ್ಲಿ ಆಯೋಜಿಸಿದ್ದ 9 ದಿನಗಳ 78 ಕಿ.ಮೀ ಮಾರ್ಗದ ಚಾರಣದಲ್ಲಿ ಭಾಗವಹಿಸಲು ನನ್ನ ಹೆಸರನ್ನು ನೋಂದಾಯಿಸಿಕೊಂಡೆ.

ಮುಂಜಾನೆ 8.30ಕ್ಕೆ ಬೆಂಗಳೂರಿನಿಂದ ಹೊರಟು ಮಧ್ಯಾಹ್ನ 3.30ಕ್ಕೆ ಮಡಿಕೇರಿ ತಲುಪಿ ಅಲ್ಲಿಂದ 3.5 ಕಿ.ಮೀ ದೂರದಲ್ಲಿರುವ ತಲತ್‌ಮನೆ ಬೇಸ್ ಕ್ಯಾಂಪ್ ತಲುಪಿ ಅಲ್ಲಿ YHAI ಅಧಿಕಾರಿಗಳಿಗೆ ನಮ್ಮ ದಾಖಲೆ ತೋರಿಸಿ ಕ್ಯಾಂಪ್ ಪ್ರವೇಶಿಸಿದೆ.

ಮಾರನೇ ದಿನ ಮುಂಜಾನೆ ಉಪಾಹಾರದ ನಂತರ ಕ್ಯಾಂಪ್ ಮುಖಂಡರು ಚಾರಣದ ನೀತಿ ನಿಯಮಗಳನ್ನು ವಿವರಿಸಿ ಚಾರಣದಲ್ಲಿ ನಮ್ಮೊಂದಿಗೆ ಬರುವ ಮಾರ್ಗದರ್ಶಿಯ ಪರಿಚಯ ಮಾಡಿದರು. ನಂತರ ಬೆಳಗ್ಗೆ 9 ಗಂಟೆಗೆ ಎಲ್ಲರೂ ಮೊದಲನೇ ದಿನದ ಚಾರಣ ಪ್ರಾರಂಭಿಸಿದೆವು.

ಮೊದಲ ದಿನದ ಚಾರಣ ಗಾಳಿಬೀಡು ಶಿಬಿರದ ತನಕ –ಮೊದಲೆರಡು ಕಿ.ಮೀ ಮಾರ್ಗ ಡಾಂಬರು ಹಾಗೂ ಸಿಮೆಂಟ್ ರಸ್ತೆಯಾಗಿದ್ದು ಎಲ್ಲರಿಗೂ ಬೇಸರ ಹಾಗೂ ಆಯಾಸವಾಯಿತು. ನಂತರದ ಮಾರ್ಗ ಕಾಫಿ ತೋಟದಲ್ಲಿ ಸಾಗಿತು. ಮಧ್ಯಾಹ್ನ 1.30ಕ್ಕೆ ನೀರಿನ ಸೌಕರ್ಯವಿರುವ ಒಂದು ಪ್ರದೇಶದಲ್ಲಿ ಮೂರು ಗುಂಪಾಗಿ ಕುಳಿತು ನಮಗೆ ಬೇಸ್ ಕ್ಯಾಂಪಿನಲ್ಲಿ ನೀಡಿದ್ದ ಊಟದ ಪ್ಯಾಕೆಟ್ಟನ್ನು ಬಿಚ್ಚಿ ಊಟಮಾಡಿದೆವು. ಈ ಗುಂಪುಗಳು ಪ್ರಮುಖವಾಗಿ ಕರ್ನಾಟಕ, ಮಹಾರಾಷ್ಟ್ರ ಹಾಗೂ ಇತರೆ ರಾಜ್ಯಗಳಿಂದ ಬಂದಿದ್ದ ಚಾರಣಿಗರಿಂದ ಕೂಡಿತ್ತು. ನಾನು ಕರ್ನಾಟಕದ ಚಾರಣಿಗರೊಂದಿಗೆ ಊಟಮಾಡುತ್ತಿದ್ದರೂ ಪರಸ್ಪರ

ಪರಿಚಯವಾಗಿರಲಿಲ್ಲ. ನನ್ನ ಜೊತೆಗೆ ಸಂಜಯ್ ಎಂಬ ಕನ್ನಡಿಗ ಚಾರಣಿಗನು ಬರುತ್ತಿದ್ದನು. ನಾನು ಗಾಳಿಬೀಡು ಶಿಬಿರ ತಲುಪುವ ಹೊತ್ತಿಗೆ ಕರ್ನಾಟಕದ ಚಾರಣಿಗರು ಆಗಲೇ ತಲುಪಿ ಒಂದು ಒಳ್ಳೆಯ ಡೇರೆ ಆಕ್ರಮಿಸಿಕೊಂಡಿದ್ದರು. ನಾನು ಆ ಶಿಬಿರಕ್ಕೆ ಹೋಗಿ ನನಗೂ ಒಂದು ಸ್ಥಳವಿದೆಯೇ ಎಂದು ಕೇಳಿದೆ. ಅದಕ್ಕೆ ಅವರು ಕೂಡಲೇ ಬನ್ನಿ ಎಂದು ಸ್ವಾಗತಿಸಿದರು. ಡೇರೆಯಲ್ಲಿ 9 ಚಾರಣಿಗರಿದ್ದೆವು. ಸ್ವಲ್ಪ ಹೊತ್ತಿನಲ್ಲಿ ಐವರು ಹತ್ತಿರದಲ್ಲಿದ್ದ ಕಾಲುವೆಯಲ್ಲಿ ಸ್ನಾನ ಮಾಡಲು ಹೊರಟರು. ಉಳಿದ ನಾವು 4 ಮಂದಿ ಚಹಾ ಕುಡಿದ ಮೇಲೆ ಹೋಗುವುದೆಂದು ನಿರ್ಧರಿಸಿದೆವು. ಕಾಲುವೆ ಬಳಿ ಹೋಗಿದ್ದವರು ಮರಳಿ ಬಂದು ಹತ್ತಿರದಲ್ಲಿದ್ದ ಭಾವಿಯ ಬಳಿ ಸ್ನಾನ ಮಾಡಲು ಹೋದರು. ನಾನೂ ಭಾವಿಯ ಬಳಿಹೋಗಿ ನೀರನ್ನು ಸೇದುತ್ತಿದ್ದ ವಿಜಯಕುಮಾರ ಅವರ ಸಹಾಯದಿಂದ ಮೂರು ಬಿಂದಿಗೆ ನೀರನ್ನು ಸೇದಿ ತಲೆಯ ಮೇಲೆ ಸುರಿದುಕೊಂಡು ಸ್ನಾನ ಮುಗಿಸಿದೆ. ನಂತರ ಚಾರಣದ ಆಯಾಸವು ಹೋಗಿ ಶರೀರವು ಹಗುರಾಯಿತು. ಸ್ವಲ್ಪ ಹೊತ್ತಿಗೆ ಎಲ್ಲರಿಗೂ ಚಹಾ ನೀಡಿದರು. ನಂತರ ರಾತ್ರಿ 7.30ರ ತನಕ ಎಲ್ಲರೂ ಬಿಡಾರದಲ್ಲಿ ವಿಶ್ರಾಂತಿ ಪಡೆದೆವು. ಆ ಸಮಯದಲ್ಲಿ ನನ್ನ ಸಲಹೆಯಂತೆ ಎಲ್ಲರೂ ಪರಸ್ಪರ ಪರಿಚಯ ಮಾಡಿಕೊಂಡೆವು. ಅಲ್ಲಿಂದ ಎಲ್ಲರೂ ಚಳಿ ಬಿಟ್ಟು ಪರಸ್ಪರ ಮಾತನಾಡತೊಡಗಿದರು. 7.30ಕ್ಕೆ ಬಿಸಿ ರೊಟ್ಟಿ, ಪಲ್ಯ ಹಾಗೂ ಸಿಹಿಯಾದ ಪಾಯಸ ನೀಡಿದರು. ಅರ್ಧ ಗಂಟೆಯ ನಂತರ ಎಲ್ಲರಿಗೂ ಬೋರ್ನ್‌ವಿಟ ನೀಡಿದರು. ಹವಾಮಾನವು ಹಿತಕರವಾಗಿದ್ದು ಎಲ್ಲರೂ ಚೆನ್ನಾಗಿ ನಿದ್ರಿಸಿದೆವು. ಮಾರನೇ ದಿನ 5.30ಕ್ಕೆ ಕಾಫಿ ಕುಡಿದು 7.30ಕ್ಕೆ ಬೆಳಗಿನ ಉಪಾಹಾರ ಮುಗಿಸಿ 8.45ಕ್ಕೆ ಚಾರಣ ಪ್ರಾರಂಭಿಸಿದೆವು.

ಎರಡನೇ ದಿನದ ಚಾರಣ – 3 ಕಿ.ಮೀ ದೂರದವರೆಗೂ ಸಿಮೆಂಟ್ ಹಾಗೂ ಡಾಂಬರು ರಸ್ತೆಯಿಂದ ಕೂಡಿದ್ದು ನಂತರ ಕಾಫಿ ತೋಟದ ಮೂಲಕ ಅಬ್ಬೆ ಜಲಪಾತ ತಲುಪಿದೆವು. ಜಲಪಾತದಲ್ಲಿ ಸಾಕಷ್ಟು ನೀರಿದ್ದರಿಂದ ದೃಶ್ಯವು ಸುಂದರವಾಗಿತ್ತು. ಸ್ವಲ್ಪ ಹೊತ್ತು ಅಲ್ಲಿದ್ದು ನಂತರ ಚಾರಣ ಮುಂದುವರೆಸಿದೆವು. ಮಧ್ಯೆ ಮಧ್ಯೆ ಮಾರ್ಗ ತೀವ್ರ ಎತ್ತರದ ಹಾದಿಯಾಗಿದ್ದರಿಂದ ನಮ್ಮ ಗುಂಪಿನಲ್ಲಿನ ಹೈಸ್ಕೂಲ್ ಹೆಡ್‌ಮಾಸ್ಟರ್ ಅರವಿಂದರು ಮಾರ್ಗದರ್ಶಿ ಸಂತೋಷನಿಗೆ ನನ್ನ ಹೆಗಲು ಚೀಲ ತೆಗೆದುಕೊಳ್ಳಲು ಹೇಳಿದರು. ಅದರಂತೆ ಸಂತೋಷನು ನನ್ನ ಚೀಲವನ್ನು ಹೊತ್ತು ನಡೆಯತೊಡಗಿದನು. ಅನೇಕ ಬಾರಿ ಕಡಿದಾದ ಮಾರ್ಗದಲ್ಲಿ ಅರವಿಂದರೇ ನನ್ನ ಕೈಹಿಡಿದು ಮೇಲಕ್ಕೆ ಹತ್ತಿಸಿಕೊಳ್ಳುತ್ತಿದ್ದರು. ಅಬ್ಬೆ ಜಲಪಾತದಿಂದ 13 ಕಿ.ಮೀ ಚಾರಣ ಮಾಡಿದ ಮೇಲೆ ನಮಗೆ ತಂತಿ ಹಾಗೂ ಮರದಿಂದ ನಿರ್ಮಿಸಿದ

ಸೇತುವೆಯೊಂದು ಎದುರಾಯಿತು. ಈ ಪ್ರದೇಶವನ್ನೇ ತಂತಿಪಾಲ ಎಂದು ಕರೆಯುವರು. ಸೇತುವೆ ದಾಟ ಸ್ವಲ್ಪ ದೂರ ನಡೆದು 4.30ಕ್ಕೆ ತಂತಿಪಾಲ ಬಿಡಾರ ತಲುಪಿದೆವು. ಬಿಡಾರದ ನೆಲ ಮಟ್ಟಸವಾಗಿರಲಿಲ್ಲ. ಹಾಗೂ ಹೀಗೂ ಅದನ್ನೇ ಸರಿಪಡಿಸಿಕೊಂಡು ಒಳನಡೆದೆವು. ಇಲ್ಲಿ ಸ್ನಾನಕ್ಕೆ ಅನುಕೂಲತೆಯಿರಲಿಲ್ಲ. ತಂಪು ಪಾನೀಯ ಹಾಗೂ ಚಹಾ ಸೇವನೆ ನಂತರ ಬಿಡಾರದ ನಾಯಕಿ ಶ್ರೀಮತಿ ಅನ್ನಪೂರ್ಣಮ್ಮ, ಹೆಸರಿಗೆ ತಕ್ಕಂತೆ ರುಚಿ ರುಚಿಯಾದ ಅಡುಗೆ ಮಾಡಿಸಿದ್ದರು. ರಾತ್ರಿ 7.30ಕ್ಕೆ ಊಟ ಮಾಡಿದೆವು. ಅದೇರೀತಿಯಾಗಿ ಬೆಳಗಿನ ಉಪಾಹಾರ ನೀಡಿದರು. ಟೆಂಟ್‌ನಲ್ಲಿ ಚಾರಣ ಮುಗಿಯುವವರೆಗೂ ಸದಾ ನನ್ನೊಂದಿಗೆ ಇದ್ದವರೆಂದರೆ – ಸಿದ್ದರಾಮೇಶ್ – ಪೋಲೀಸ್ ಇನ್ಸ್ಪೆಕ್ಟರ್, ಹರೀಶ್ – ಭೂವಿಜ್ಞಾನಿ, ಅರವಿಂದ್ – ಹೆಡ್ಮಾಸ್ಟರ್, ಸುರೇಂದ್ರ – ವ್ಯಾಪಾರಸ್ಥರು, ನಾಗರಾಜ್ – ಅರ್ಥಶಾಸ್ತ್ರ ಉಪನ್ಯಾಸಕ, ವಿಜಯಕುಮಾರ, ಸುನೀಲ್, ಜಗದೀಶ್ – ಎಲ್ಲರೂ ಸಾಫ್ಟ್‌ವೇರ್ ಇಂಜಿನಿಯರ್ಸ್. ರಾತ್ರಿಯ ಊಟ ಮುಗಿದನಂತರ ಸಿದ್ದರಾಮೇಶ್ ಅವರ ಸಲಹೆಯಂತೆ ಕನ್ನಡ ಚಿತ್ರಗೀತೆಗಳ ಅಂತ್ಯಾಕ್ಷರಿ ಕಾರ್ಯಕ್ರಮದಲ್ಲಿ ರಾತ್ರಿ 10ರ ವರೆಗೂ ಎಲ್ಲರೂ ಭಾಗವಹಿಸಿ ಮನಸಾರೆ ಅನಂದಿಸಿದೆವು. ಬೇರೆ ಗುಂಪಿನವರೂ ಹೊರಗಡೆ ಬಯಲಿನಲ್ಲಿ ಬೆಂಕಿಯನ್ನು ಉರಿಸಿ ಅದರ ಮುಂದೆ ಕುಳಿತು ಹಾಡುಗಳನ್ನು ಹೇಳಿಕೊಂಡು ಮನರಂಜನೆಯನ್ನು ಪಡೆದರು.

ಮೂರನೇ ದಿನದ ಚಾರಣ ತಂತಿಪಾಲದಿಂದ 18 ಕಿ.ಮೀ ದೂರದ ಆಚೆನಾಡು ಬಿಡಾರದೆಡೆಗೆ – ಚಾರಣ ಮಾರ್ಗ ಮೊದಲಿಗೆ ಸಮತಟ್ಟಾಗಿದ್ದರೂ ನಂತರ ತೀವ್ರವಾದ ಏರುದಾರಿಯಿಂದ ಕೂಡಿದ್ದು ಬಹಳಷ್ಟು ಆಯಾಸವನ್ನುಂಟು ಮಾಡುತ್ತಿತ್ತು. ಮಾರ್ಗ ಸ್ವಲ್ಪ ದೂರ ಕಾಫಿ ತೋಟದೊಳಗಿದ್ದು ನಂತರ ದಟ್ಟವಾದ ಕಾಡಿನೊಳಗೆ ಮುಂದುವರೆಯಿತು. ಈ ದಿನವೂ ನನ್ನ ಹೆಗಲುಚೀಲವನ್ನು ಮಾರ್ಗದರ್ಶಿ ಸಂತೋಷನೇ ತೆಗೆದುಕೊಂಡನು. ಅಲ್ಲದೆ ಈ ದಿನ ಏರುದಾರಿಯುದ್ದಕ್ಕೂ ಸಂಜಯ್ ನನ್ನ ಕೈಯನ್ನು ಹಿಡಿದು ಕರೆದುಕೊಂಡು ಬಂದರು. 10 ಕಿ.ಮೀ ಚಾರಣದ ನಂತರ ನಾವು 5890 ಅಡಿ ಎತ್ತರದ ಕೋಟೆಬೆಟ್ಟದ ಶಿಖರವನ್ನು ತಲುಪಿದೆವು. ಅಲ್ಲಿ ಊಟ ಮುಗಿಸಿ ಸ್ವಲ್ಪ ವಿಶ್ರಾಂತಿ ಪಡೆದು ನಂತರ ತೀವ್ರವಾದ ಇಳಿಜಾರಿನ ಮಾರ್ಗದಲ್ಲಿ ಇಳಿಯುತ್ತಾ ಸಂಜೆ 3.30ಕ್ಕೆ ಆಚೆನಾಡು ಬಿಡಾರ ತಲುಪಿದೆವು. ನಮ್ಮ ಡೇರೆಯಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನಂತರ ಹತ್ತಿರದಲ್ಲಿದ್ದ ನೀರಿನ ತೊರೆಯಲ್ಲಿ ಸ್ನಾನ ಮಾಡಿ ದಣಿವಾರಿಸಿಕೊಂಡೆವು. ತಂಪು ಪಾನೀಯ ಹಾಗೂ ಚಹಾ ಸೇವನೆಯ ನಂತರ ನಮ್ಮ ನಮ್ಮ ಬಿಡಾರಗಳಲ್ಲಿ ಹರಟೆ ಹೊಡೆಯುತ್ತಿದ್ದೆವು. ನಂತರ 5.30ಕ್ಕೆ ಕ್ಯಾಂಪ್ ನಾಯಕ ಪಾಟೀಲ್ ಅವರು

ಎಲ್ಲರನ್ನೂ ಹೊರಗೆ ಕರೆದರು. ಹೊರಗೆ ತೀವ್ರ ಚಳಿಯಿತ್ತು. ಮೊದಲಬಾರಿಗೆ ಎಲ್ಲರ ಪರಿಚಯದ ಕಾರ್ಯಕ್ರಮ ನಡೆಯಿತು. ಎಲ್ಲರಿಗೂ ಎಲ್ಲರ ಪರಿಚಯ, ಅವರ ಪ್ರತಿಭೆಗಳ ಹಾಗೂ ಹವ್ಯಾಸಗಳ ಪರಿಚಯವಾಯಿತು. ಇದರಿಂದ ನಂತರ ಪರಸ್ಪರ ಮಾತನಾಡಲು ಸಹಾಯವಾಯಿತು. 7.15ಕ್ಕೆ ಪರಿಚಯ ಕಾರ್ಯಕ್ರಮ ಮುಗಿದು, 7.30ಕ್ಕೆ ರಾತ್ರಿಯ ಊಟ. ನಂತರ 8.45ಕ್ಕೆ ಕ್ಯಾಂಪ್ ಫೈರ್‌ನ್ನು ಹೊತ್ತಿಸಿ ಎಲ್ಲರನ್ನೂ ಅಲ್ಲಿಗೆ ಬರಲು ಆಹ್ವಾನಿಸಿದರು. ಎಲ್ಲರೂ ಸೇರಿ ಹಾಡುಗಳನ್ನು ಹಾಡಿದನಂತರ ಕೆಲವು ಸ್ಥಳಗಳ ಐತಿಹಾಸಿಕ ಮಹತ್ವಗಳನ್ನು ಪರಸ್ಪರ ಅರಿತೆವು. ನನಗೆ ಪಾಟೀಲ್ ಅವರು ನನ್ನ ಹಿಂದಿನ ಚಾರಣ ರೂಪಕುಂಡ ಸರೋವರದ ಚಾರಣದ ಬಗ್ಗೆ ಮಾತನಾಡಲು ಕೇಳಿಕೊಂಡರು. ಅದರಂತೆ ನನ್ನ ಅನುಭವಗಳನ್ನು ವಿವರಿಸಿದೆ. ರಾತ್ರೆ 10ಕ್ಕೆ ಕಾರ್ಯಕ್ರಮ ಮುಗಿದು ಎಲ್ಲರೂ ಮಲಗಿದೆವು.

ನಾಲ್ಕನೇ ದಿನದ ಚಾರಣ ಆಚೆನಾಡುವಿನಿಂದ ಮಂಡಾಳಪಟ್ಟಿ ಕಾಡಿನ ಹೊರಭಾಗದ ಮೂಲಕ 16 ಕಿ.ಮೀ ದೂರದಲ್ಲಿರುವ ಕಾಳೂರು ಬಿಡಾರದೆಡೆಗೆ – ಮೊದಲ 4 ಕಿ.ಮೀ ಮಾರ್ಗ ಮಣ್ಣುರಸ್ತೆ ಹಾಗೂ ಡಾಂಬರು ರಸ್ತೆಯಿಂದ ಕೂಡಿತ್ತು. ಚಾರಣ ಮಾಡುತ್ತಾ ನಾವು ಒಂದು ಎತ್ತರದ ಗುಡ್ಡದ ಬಳಿ ಎಳನೀರು ಮಾರುವ ಅಂಗಡಿಯಲ್ಲಿ ಎಳನೀರು ಕುಡಿದು ದಣಿವಾರಿಸಿಕೊಂಡೆವು. ನಂತರದ ಹಾದಿ ಕುರುಚಲು ಗಿಡಗಳಿಂದ ಕೂಡಿದ್ದು ತೀವ್ರವಾದ ಇಳಿಜಾರಿನಿಂದ ಕೂಡಿತ್ತು. ಈ ಮಾರ್ಗದಲ್ಲಿ ಅರವಿಂದರು ನನಗೆ ಇಳಿಯಲು ಸಹಾಯ ಮಾಡಿದರು. ಕಷ್ಟಪಟ್ಟು ಇಳಿಜಾರಿನ ಮಾರ್ಗದಲ್ಲಿ ನಡೆದು ಕಾಫಿ ತೋಟಗಳ ಮೂಲಕ ನಡೆದು ಕಾಳೂರು ಗ್ರಾಮ ಪ್ರವೇಶಿಸಿದೆವು. ಇಲ್ಲಿನ ಗ್ರಾಮಸ್ಥರು ಸದಾ ಆನೆಗಳ ಹಾವಳಿ ಎದುರಿಸಬೇಕು. ಹತ್ತಿರದಲ್ಲೇ ಒಂದು ನೀರಿನ ತೊರೆಯ ಬಳಿ ಕುಳಿತು ಎಲ್ಲರೂ ಊಟ ಮಾಡಿದೆವು. ನಾವು ಊಟಮಾಡುತ್ತಿದ್ದಾಗ ಕಾಳೂರು ಬಿಡದಿಯ ನಾಯಕ ವಿಜಯಕುಮಾರ್ ಅವರು ಬಂದು ನಮ್ಮನ್ನು ಸ್ವಾಗತಿಸಿದರು. ಕಾಳೂರು ಬಿಡಾರದಲ್ಲಿ ವಿಶ್ರಾಂತಿ ಪಡೆದು ನಂತರ ಹತ್ತಿರದಲ್ಲಿದ್ದ ನೀರಿನ ತೊರೆಗೆ ಹೋಗಿ ಬಹಳ ಹೊತ್ತು ಸ್ನಾನ ಮಾಡಿ ದಣಿವಾರಿಸಿಕೊಂಡೆವು. ಬಿಡಾರಕ್ಕೆ ಬಂದು ಚಹಾ ಸೇವನೆ ನಂತರ ಮತ್ತೆ ತೊರೆಯ ಬಳಿಗೆ ಹೋಗಿ ಅಲ್ಲೇ ಕುಳಿತಿದ್ದು ಸಂಜೆ ಕಳೆದೆವು. ರಾತ್ರಿ ಊಟದ ನಂತರ ನಮ್ಮ ಡೇರೆಯಲ್ಲಿ ನಾವುಗಳು ಬ್ಯಾಂಕುಗಳು, ಪೋಲೀಸ್ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಮುಕ್ತ ಚರ್ಚೆಯ ನಂತರ ಅಂತ್ಯಾಕ್ಷರಿ ಕಾರ್ಯಕ್ರಮವನ್ನು ನಡೆಸಿ ಮಲಗಲು ತಯಾರಿ ಮಾಡಿಕೊಳ್ಳುತ್ತಿದ್ದಾಗ ವಿಜಯಕುಮಾರ್ ಬಂದು ಕಾಳೂರಿನ ರಸ್ತೆಯಲ್ಲಿ ಮಧ್ಯರಾತ್ರಿಯ ವೇಳೆಯಲ್ಲಿ ಆನೆಗಳು ಓಡಾಡುವುದೆಂದು ಹೇಳಿ ಆ ಸಮಯದಲ್ಲಿ ಹೊರಗೆ ಹೋಗುವುದು

ಅಪಾಯವೆಂದು ತಿಳಿಸಿದರು. ನಾವುಗಳು ಯಾರೂ ಆ ಸಾಹಸಕ್ಕೆ ಕೈ ಹಾಕಲಿಲ್ಲ. ಬೆಳಗ್ಗೆ ಮತ್ತೆ ಕೆಲವರು ತೊರೆಯಲ್ಲಿ ಸ್ನಾನಮಾಡಿದರು. ಬೆಳಗಿನ ಉಪಾಹಾರದ ನಂತರ ನಮ್ಮ ಚಾರಣ ಮುಂದುವರೆಯಿತು.

ಐದನೇ ದಿನದ ಚಾರಣ ಕಾಳೂರು ಬಿಡಾರದಿಂದ 3549 ಅಡಿ ಎತ್ತರದ ಅಜ್ಜಿಮೊಟ್ಟೆ ಶಿಖರದ ಮೂಲಕ 18 ಕಿ.ಮೀ ದೂರದಲ್ಲಿರುವ ವನಚಾಲು ಬಿಡದಿಯೆಡೆಗೆ – ಈ ದಿನದ ಚಾರಣ ಅತ್ಯಂತ ಕಠಿಣವಾಗಿದ್ದು ತೀವ್ರ ಇಳಿಜಾರಿನಿಂದ ಕೂಡಿದ ಮಾರ್ಗದಲ್ಲಿತ್ತು. ಮೊದಲು ನಾವು ಮಣ್ಣಿನ ರಸ್ತೆಯಲ್ಲಿ ನಡೆದು ನಂತರ ಕಾಫಿ ಹಾಗೂ ಕಿತ್ತಳೆ ತೋಟಗಳಲ್ಲಿ ಏರು ಮಾರ್ಗದಲ್ಲಿ ನಡೆಯತೊಡಗಿದೆವು. ದಾರಿಯಲ್ಲಿ ಕಿತ್ತಳೆ ಹಣ್ಣುಗಳನ್ನು ತೋಟದಿಂದಲೇ ಕೊಂಡು ನಾನು, ಅರವಿಂದ್, ಸಂಜಯ್ ಅದನ್ನು ತಿನ್ನುತ್ತಾ ನಡೆದೆವು. ಹೀಗೆ ಮುಂದುವರೆದು 3500 ಅಡಿ ಎತ್ತರದಲ್ಲಿರುವ ಶಿವ ಮಂದಿರ ತಲುಪಿದೆವು. ಅದರ ಹತ್ತಿರ ಎರಡು ನೀರಿನ ಕೊಳಗಳಿದ್ದವು. ಒಂದು ಕೊಳದ ನೀರನ್ನು ಕೇವಲ ಶಿವನ ಪೂಜೆಗೆ ಮಾತ್ರ ಬಳಸುವರೆಂದು ತಿಳಿದು, ಮತ್ತೊಂದು ಕೊಳದ ನೀರಿನಿಂದ ನಾವುಗಳು ಕೈಕಾಲು ಮುಖವನ್ನು ತೊಳೆದುಕೊಂಡು ಸ್ವಲ್ಪ ವಿಶ್ರಾಂತಿ ಪಡೆದೆವು. ನಂತರ ಶಿವನನ್ನು ದರ್ಶಿಸಿ ಸ್ವಲ್ಪ ದೂರ ನಡೆದಮೇಲೆ ಒಂದು ದೊಡ್ಡ ಬಂಡೆಯ ಮೂಲಕ ಎರಡೂ ಕಡೆ ಕಟ್ಟಿರುವ ಹಗ್ಗದ ಸಹಾಯದಿಂದ ಇಳಿಯಬೇಕಿತ್ತು. ಹಗ್ಗದ ಮೂಲಕ ಇಳಿಯುವುದು ನನಗೆ ಇದೇ ಮೊದಲು ಆದುದರಿಂದ ಕಷ್ಟವೆಂದು ನನ್ನಲ್ಲಿ ಹೆದರಿಕೆ ಇತ್ತು. ಆ ಸಮಯದಲ್ಲಿ ಅರವಿಂದ್ ಅವರು ನನ್ನಲ್ಲಿ ಧೈರ್ಯತುಂಬಿ ಇಳಿಯಲು ಹುರಿದುಂಬಿಸಿದರು, ಅಲ್ಲದೆ, ನನ್ನ ಹಿಂದೆಯೇ ಹಗ್ಗವನ್ನು ಹಿಡಿದುಕೊಂಡು ನನ್ನನ್ನು ನಿಧಾನವಾಗಿ ಇಳಿಯಲು ಹೆಜ್ಜೆ ಹೆಜ್ಜೆಗೂ ಸಹಾಯಮಾಡಿದರು. ಅವರಿಲ್ಲದಿದ್ದರೆ ನಾನು ಬಂಡೆಯ ಮೂಲಕ ಇಳಿಯಲಾಗುತ್ತಿರಲಿಲ್ಲ. ಕಡೆಗೆ ಎರಡೂ ಹಗ್ಗದ ಮೂಲಕ ಇಳಿದು ಕುರುಚಲು ಗಿಡಗಳಿಂದ ಕೂಡಿದ ಇಳಿಜಾರಿನ ಮಾರ್ಗದಲ್ಲಿ ಇಳಿಯ ತೊಡಗಿದೆ. ಇಲ್ಲಿಂದ ಇಳಿಯಲು ಸಂಜಯ್ ನನಗೆ ಸಹಾಯ ಮಾಡಿದರು. ಅಲ್ಲಿಂದ ನಾವೆಲ್ಲರೂ ಮತ್ತಷ್ಟು ಕೆಳಗೆ ಇಳಿದು ನೆರಳಿರುವ ಜಾಗದಲ್ಲಿ ಕುಳಿತು ಊಟಮಾಡಿದೆವು. ನಂತರ ನಮಗೆ ತಿಳಿದಿದ್ದೇನೆಂದರೆ ನಾವು ಬಹಳ ಕೆಳಗೆ ಇಳಿದಿದ್ದೇವೆಂದು. ಮತ್ತೆ ಮೇಲಕ್ಕೆ ಹತ್ತಿ ಕುರುಚಲು ಗಿಡಗಳ ಮಧ್ಯೆ ನಡೆಯತೊಡಗಿದೆವು. ಬಹಳ ಹೊತ್ತು ಹೀಗೆ ನಡೆದು ನಂತರ ದಟ್ಟವಾದ ಕಾಡನ್ನು ಪ್ರವೇಶಿಸಿ ಒಂದು ಗಂಟೆ ನಡೆದ ಮೇಲೆ ನಾವು ರಸ್ತೆ ತಲುಪಿದೆವು. ಅಲ್ಲಿಂದ ಸ್ವಲ್ಪ ದೂರ ನಡೆದು ಬಲಕ್ಕೆ ತಿರುಗಿ ಮತ್ತೆ ಮೇಲೇರತೊಡಗಿದೆವು. ಸುಮಾರು ಅರ್ಧ ಗಂಟೆ ನಡೆದ ಮೇಲೆ ನಮಗೆ

ಕ್ಯಾಂಪ್ ನಾಯಕ ರಾಜೇಂದ್ರನ್, ನಮ್ಮನ್ನು ವನಚಾಲು ಕ್ಯಾಂಪಿಗೆ ಸ್ವಾಗತಿಸಿದರು. ಈ ಬಿಡದಿ ಜಾನ್ ಎಂಬುವವರ ಮನೆಯ ಮುಂದುಗಡೆ ಇತ್ತು. ಕೆಲವರನ್ನು ಜಾನ್ ಅವರ ಮನೆಯಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟರು. ನಾವು ಮನೆಯ ಮುಂದಿರುವ ಡೇರೆಯಲ್ಲಿರಲು ತೀರ್ಮಾನಿಸಿದೆವು. ಸ್ವಲ್ಪ ವಿಶ್ರಾಂತಿ ನಂತರ ತಂಪು ಪಾನೀಯ ಸೇವಿಸಿ ಬಿಸಿ ಬಿಸಿ ನೀರಿನ ಸ್ನಾನ ಮಾಡಿ ಆಯಾಸ ನಿವಾರಿಸಿಕೊಂಡೆವು. ನಂತರ ನಾವು ಹಲವಾರು ವಿಷಯ ಬಗ್ಗೆ ಸುಮಾರು ಒಂದು ಗಂಟೆ ಸ್ವಾರಸ್ಯಕರವಾದ ಚರ್ಚೆ ಮಾಡಲು ತೊಡಗಿದೆವು. ಇದರಲ್ಲಿ ನಮ್ಮ ಗುಂಪಿನವರಲ್ಲದೆ ಬಿಡಾರದ ನಾಯಕ ರಾಜೇಂದ್ರನ್ ಅವರೂ ಭಾಗವಹಿಸಿದರು. ಚಹಾ ಸೇವನೆ ನಂತರ ಕೆಲವರು ಸುತ್ತಾಡಲು ಹೊರಗೆ ಹೋದರು. ರಾತ್ರಿಯ ಊಟದ ನಂತರ ಅಂತ್ಯಾಕ್ಷರಿ ಕಾರ್ಯಕ್ರಮ 10 ಗಂಟೆವರೆಗೂ ನಡೆದ ನಂತರ ಮಲಗಿದೆವು. ಸ್ವಲ್ಪ ಹೊತ್ತಿನಲ್ಲೇ ಮಳೆ ಬರಲು ಶುರುವಾಯಿತಾದರೂ ಸ್ವಲ್ಪ ಸಮಯದಲ್ಲೇ ನಿಂತಿತು. ಮಾರನೇ ದಿನ (ಅಂದರೆ ಆರನೇ ದಿನವು) ನಮ್ಮ ಚಾರಣದ ಕೊನೆಯ ದಿನ.

ಆರನೇ ದಿನದ ಚಾರಣ ವನಚಾಲು ಬಿಡದಿಯಿಂದ 3549 ಅಡಿ ಎತ್ತರದ ನಿಶಾನೆ ಬೆಟ್ಟದ ಮೂಲಕ 18 ಕಿ.ಮೀ ದೂರದ ತಲತ್‌ಮನೆ ಬೇಸ್ ಕ್ಯಾಂಪಿನೆಡೆಗೆ – ನಿಶಾನೆ ಬೆಟ್ಟಕ್ಕೆ ಬಹಳ ದೂರ ದಟ್ಟವಾದ ಕಾಡಿನಲ್ಲಿ ತೀವ್ರ ಇಳಿಜಾರು ರಸ್ತೆಯಲ್ಲಿ ನಡೆದು ಹಲವಾರು ನೀರಿನ ತೊರೆಗಳನ್ನು ದಾಟಿ ಕೊನೆಗೆ ವಿಶಾಲವಾದ ಕುರುಚಲು ಗಿಡಗಳಿಂದ ಕೂಡಿದ ಕಡಿದಾದ ಏರು ರಸ್ತೆಯಲ್ಲಿ ಹತ್ತತೊಡಗಿದೆವು. ಬಹಳ ಕಷ್ಟಪಟ್ಟು ಹತ್ತಿ ಸಮತಟ್ಟಾದ ಸ್ಥಳ ತಲುಪಿದೆವು. ಅಲ್ಲಿ ಹಿತವಾದ ತಂಗಾಳಿ ಬೀಸುತ್ತಿತ್ತು. ಇದರಿಂದ ನಮ್ಮ ಆಯಾಸ ದೂರಾಯಿತು. ಇಲ್ಲಿಂದ ಸುತ್ತಲೂ ನೋಡಿದರೆ ಎಲ್ಲೆಲ್ಲೂ ಹಸಿರು ವನರಾಶಿಯಿಂದ ಕೂಡಿದ ಬೆಟ್ಟಗಳೇ! ಮೊದಲಿಗೆ ನಾವುಗಳು ಈ ಸ್ಥಳವನ್ನೇ ನಿಶಾನೆ ಬೆಟ್ಟವೆಂದು ನಂಬಿದ್ದೆವು. ಸ್ವಲ್ಪ ಸಮಯದ ನಂತರ ಅಲ್ಲಿಂದ ಎಡಕ್ಕೆ ನಡೆಯತೊಡಗಿದೆವು. ದಾರಿಯಲ್ಲಿ ಕೆಲವು ಗಿಡಗಳಲ್ಲಿದ್ದ ಕ್ಯಾಕ್ಟಸ್ ಹೂ ಬಿಡುವ ಪರಾವಲಂಬಿ ಸಸ್ಯಗಳನ್ನು ಸಿದ್ಧರಾಮೇಶ್ ನಮಗೆ ತೋರಿಸಿದರು. ದಾರಿಯಲ್ಲಿ ಸಿಕ್ಕ ಸ್ಥಳೀಯರನ್ನು ನಿಶಾನೆ ಬೆಟ್ಟದ ಬಗ್ಗೆ ಕೇಳಿದಾಗ ಅದು ಇನ್ನೂ ಮುಂದೆ ಹೋದಮೇಲೆ ಸಿಗುತ್ತದೆ ಎಂದರು. ನಾವು ಮೊದಲು ನೋಡಿದ ಬೆಟ್ಟವು ಕಲ್ಪಬೆಟ್ಟ ಎಂದು ತಿಳಿಯಿತು. ಸ್ವಲ್ಪ ಹೊತ್ತು ನಡೆದ ಮೇಲೆ ನಾವು ನಿಶಾನೆ ಬೆಟ್ಟ ತಲುಪಿದೆವು. ಅಲ್ಲಿಂದ ದಟ್ಟವಾದ ಕಾಡಿನ ಮೂಲಕ ತೀವ್ರ ಇಳಿಜಾರಿನ ರಸ್ತೆಯಲ್ಲಿ ಇಳಿದು ಬಹಳ ಸಮಯದ ನಂತರ ಬಯಲಿಗೆ ಬಂದೆವು. ಇಲ್ಲಿಂದ ನಾವು 6 ಕಿ.ಮೀ ಮಣ್ಣಿನ ರಸ್ತೆಯಲ್ಲಿ ನಡೆದೂ

ನಡೆದೂ ಸಾಕಾಗಿ ಕೊನೆಗೆ ಮಡಿಕೇರಿ–ಮಂಗಳೂರು ಹೆದ್ದಾರಿ ಮಧ್ಯಾಹ್ನ 2.30ಕ್ಕೆ ತಲುಪಿದೆವು. ಯಾರೂ ಊಟ ಮಾಡಿರಲಿಲ್ಲ. ಎಲ್ಲರ ಬಳಿಯೂ ನೀರು ಖಾಲಿಯಾಗಿತ್ತು. ನಾನು ಮತ್ತು ಸಂಜಯ್ ಒಟ್ಟಿಗೆ ಬರುತ್ತಿದ್ದೆವು. ಹೆದ್ದಾರಿಯಲ್ಲಿದ್ದ ಬಸ್ ನಿಲ್ದಾಣದಲ್ಲಿ ಕುಳಿತು ಸ್ವಲ್ಪ ವಿಶ್ರಾಂತಿ ಪಡೆದು ಹೆದ್ದಾರಿಯಲ್ಲೇ ಮತ್ತೆ 30 ನಿಮಿಷ ಸುಡು ಬಿಸಿಲಿನಲ್ಲಿ ಬಾಯಾರಿಕೆಯಿಂದ ಬಳಲುತ್ತಾ ನಡೆದು 3.15ಕ್ಕೆ ತಲತ್‌ಮನೆ ಬಿಡಾರ ತಲುಪಿದೆವು. ಅಲ್ಲಿಗೆ ನಮ್ಮ ಕೂರ್ಗ್ ಚಾರಣ ಮುಗಿದಿತ್ತು. ತಂಪು ಪಾನೀಯ ಸೇವಿಸಿ ನಂತರ ಊಟಮಾಡಿದೆವು. ಕೂರ್ಗ್ ಪರ್ವತಾರೋಹಣದ ಬಗ್ಗೆ ಫೀಡ್‌ಬ್ಯಾಕ್ ಫಾರ್ಮನ್ನು ಭರ್ತಿಮಾಡಿ ಕೊಟ್ಟಿದ್ದಾಯಿತು. ಬೀಳ್ಕೊಡುಗೆ ಸಮಾರಂಭದಲ್ಲಿ ಎಲ್ಲರಿಗೂ ಪ್ರಮಾಣ ಪತ್ರ ನೀಡಿದರು. ನಂತರ ಸಂಜಯ್, ಜಗದೀಶ್, ಸುನೀಲ್ ಹಾಗೂ ನನಗೆ ಸಿದ್ಧರಾಮೇಶ್ ಯಾತ್ರಿಕರ ಬಂಗಲೆಯಲ್ಲಿ ಒಂದು ಕೋಣೆ ಕಾಯ್ದಿರಿಸಿದ್ದರು. ನಮ್ಮನ್ನು ಅಲ್ಲಿಗೆ ತಮ್ಮ ಪೊಲೀಸ್ ವಾಹನದಲ್ಲಿ ಕರೆದೊಯ್ದರು. ಅಲ್ಲಿ ಸ್ನಾನಾನಂತರ ರಾತ್ರಿ 10.30ರ ಬಸ್ಸಿನಲ್ಲಿ ಬೆಂಗಳೂರಿಗೆ ಹಿಂತಿರುಗಿದೆ.

ಕೂರ್ಗ್ ಚಾರಣವು ನನಗೆ ನಾಲ್ಕನೇ ಚಾರಣವಾಗಿತ್ತು. ಈ ಚಾರಣವು ನನಗೆ ಚಾರಣದ ಬಗ್ಗೆ ಅನೇಕ ಪಾಠಗಳನ್ನು ಕಲಿಸಿತು. YHAI ಅವರ ಪ್ರಕಾರ ಈ ಚಾರಣವು 78 ಕಿ.ಮೀ ಎಂದಿದ್ದರೂ, ನಾವು ಒಟ್ಟು 105 ಕಿ.ಮೀ ಚಾರಣ ಮಾಡಿದ್ದೆವು.

ಮಡಿಕೇರಿ ಪ್ರದೇಶದಲ್ಲಿ 2018ರ ಭೀಕರ ಮಳೆಯಿಂದುಂಟಾದ ಪ್ರವಾಹ, ಭೂಕುಸಿತಗಳಿಂದಾಗಿ ನಾವು ಹತ್ತಿದ ಬೆಟ್ಟಗುಡ್ಡಗಳು, ನೀರಿನ ತೊರೆಗಳು, ಕಾಫಿ ತೋಟಗಳು, ರಸ್ತೆಗಳೆಲ್ಲವೂ ಹೇಳಹೆಸರಿಲ್ಲದಾಗಿದೆ. ಈಗ ನಮ್ಮಲ್ಲಿ ಯಾರಾದರೂ ಅಲ್ಲಿಗೆ ಹೋದರೆ ಒಂದು ಚೂರೂ ಗುರುತು ಸಿಗುವುದಿಲ್ಲ. ಪ್ರಕೃತಿ ವಿಕೋಪದಿಂದ ಅಲ್ಲಿನ ಎಲ್ಲ ಗ್ರಾಮಗಳೂ ಸಂಪೂರ್ಣವಾಗಿ ನಾಶವಾಗಿವೆ. ನಾವು ಚಾರಣ ಮಾಡಿದ ಮಾರ್ಗಗಳಲ್ಲಿ ಯಾರೂ ಮತ್ತೆಂದೂ ಚಾರಣ ಮಾಡಲಾಗುವುದಿಲ್ಲ ಎಂದು ತಿಳಿದು ವಿಷಾದವಾಗುತ್ತದೆ.।

ಪಶ್ಚಿಮ ಘಟ್ಟಗಳ ನೀಲಗಿರಿ ಬೆಟ್ಟಗಳೆಡೆಗಿನ ಚಾರಣದ ರೋಮಾಂಚಕಾರಿ ಅನುಭವ

2012 ಡಿಸೆಂಬರ್‌ನಲ್ಲಿ ಪಶ್ಚಿಮ ಘಟ್ಟಗಳಲ್ಲಿನ ಕೂರ್ಗ್ ಬೆಟ್ಟಗಳೆಡೆಗಿನ 105 ಕಿ.ಮೀ ಚಾರಣದ ನಂತರ ಮತ್ತೊಮ್ಮೆ ಇದೇ ಪಶ್ಚಿಮಘಟ್ಟಗಳು ಮತ್ತೊಂದು ಭಾಗದಲ್ಲಿ ಚಾರಣ ಮಾಡಲು ಕೈ ಬೀಸಿ ಕರೆಯತೊಡಗಿತು. ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾದ ತಮಿಳುನಾಡು ಶಾಖೆ 2013ರ ಅಕ್ಟೋಬರ್ 6ರಿಂದ ನಡೆಸುವ ನೀಲಗಿರಿ ಚಾರಣದಲ್ಲಿ ಭಾಗವಹಿಸಲು ಆಗಸ್ಟ್ ತಿಂಗಳಿನಲ್ಲೇ ನನ್ನ ಹೆಸರನ್ನು ನೋಂದಾಯಿಸಿಕೊಂಡು ಈ ಚಾರಣದ ಬಗ್ಗೆ ಮಾಹಿತಿ ಸಂಗ್ರಹಿಸಲು ತೊಡಗಿದೆ.

ನೀಲಗಿರಿ ಬೆಟ್ಟಗಳ ಸಾಲು ಕರ್ನಾಟಕ, ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲಿ ಹರಡಿದೆ. ಅದರಲ್ಲಿ ಊಟಿ, ಕೂನೂರ್, ಕೋಟಗಿರಿ ಪ್ರದೇಶಗಳು ಪ್ರಮುಖವಾದವು. ಹಚ್ಚ ಹಸಿರಾದ ಹುಲ್ಲುಗಾವಲು, ಜಲಪಾತ, ಸರೋವರ, ನೀರಿನ ತೊರೆ, ವಿಸ್ತಾರವಾದ ಚಹಾ ತೋಟಗಳು ನೋಡಲು ಕಣ್ಣುಗಳಿಗೆ ಮನೋಹರವಾಗಿರುತ್ತವೆ. ನೀಲಗಿರಿ ಪರ್ವತ ಶ್ರೇಣಿಗಳಲ್ಲಿ 6600 ಅಡಿ ಎತ್ತರದ ಕನಿಷ್ಠ 27 ಶಿಖರಗಳು ಇರುವುವು. ಈ ಪರ್ವತ ಶ್ರೇಣಿ 2479 ಚದರ ಕಿ.ಮೀ ವಿಸ್ತಾರವಾಗಿದೆ. ಇಲ್ಲಿನ ಕೆಲವು ಪ್ರಮುಖ ಜಲಪಾತಗಳು – ಕ್ಯಾಥರಿನ್ (250 ಅಡಿ), ಮೇಲಿನ ಪ್ಯಾಕರ ಫಾಲ್ಸ್ (180), ಕೆಳಗಿನ ಪ್ಯಾಕರ ಫಾಲ್ಸ್ (200), ಕಲ್‌ಹಟ್ಟಿ ಜಲಪಾತ (170).

ಮೇಲೆ ತಿಳಿಸಿರುವ ವಿವರಗಳನ್ನು ನೋಡಿದಮೇಲೆ ಯಾರಿಗಾದರೂ ಒಮ್ಮೆಯಾದರೂ ನೀಲಗಿರಿಯಲ್ಲಿರುವ ಕೆಲವು ಶಿಖರಗಳೆಡೆಗಾದರೂ ಚಾರಣ ಮಾಡಬೇಕೆಂಬ ಹಂಬಲವು ಉಂಟಾದಲ್ಲಿ ಆಶ್ಚರ್ಯಪಡಬೇಕಿಲ್ಲ.

2013ರ ಅಕ್ಟೋಬರ್ 6ರಂದು ಮುಂಜಾನೆ 6.30ರ ಬಸ್ಸಿನಲ್ಲಿ ಊಟಿಗೆ ಹೊರಟೆ. ಮೈಸೂರಿನಲ್ಲಿ 7 ಜನ ಬಸ್ಸು ಹತ್ತಿದರು. ಅವರನ್ನು ನೋಡಿ ಅವರು ಚಾರಣಿಗರಿರಬೇಕೆಂದು ಊಹಿಸಿ ಮಾತನಾಡಿಸಿದೆ. ಅವರೂ ಸಹ ಮಹಾರಾಷ್ಟ್ರದ ಕೊಲ್ಹಾಪುರದಿಂದ ಇದೇ ಚಾರಣಕ್ಕೆ ಬರುತ್ತಿರುವರೆಂದು ಗೊತ್ತಾಯಿತು. ಊಟಿ ಬಸ್ಸ್ ನಿಲ್ದಾಣದಿಂದ ಪಾರ್ಸನ್ಸ್ ಕಣಿವೆಯೆಡೆಗೆ ಯಾವುದೂ ಬಸ್ಸು ಸಿಗಲಿಲ್ಲವಾಗಿ ಟ್ಯಾಕ್ಸಿಯಲ್ಲಿ 3.15ಕ್ಕೆ ಹೊರಟು 4.15ಕ್ಕೆ ಬೇಸ್ ಕ್ಯಾಂಪ್ ತಲುಪಿದೆವು. ಚಹಾ ಸೇವನೆಯ ನಂತರ 30 ನಿಮಿಷ ಹೊರಗೆ ಅಡ್ಡಾಡಿದೆವು. ನಂತರ ಚಳಿ ಹೆಚ್ಚಾಗಿದ್ದರಿಂದ ಕ್ಯಾಂಪಿಗೆ ಮರಳಿ ಬಂದೆವು. ಸೂಪ್ ಕುಡಿದು ಹರಟಲು ಪ್ರಾರಂಭಿಸಿದೆವು. ಸ್ವಲ್ಪ ಸಮಯದ ನಂತರ ಕ್ಯಾಂಪ್ ನಾಯಕರಾದ ಕಾರ್ತಿಕ್ ಮತ್ತು ಸುದರ್ಶನ್ ಬಂದು 6 ದಿನಗಳ ಚಾರಣದ ಬಗ್ಗೆ ಮಾಹಿತಿ ನೀಡಿ ನಂತರ ಪರಸ್ಪರ ಪರಿಚಯ ಮಾಡಿಕೊಳ್ಳಲು ಅವಕಾಶವಿತ್ತರು. ಪರಸ್ಪರ ಪರಿಚಯದ ನಂತರ ರಾತ್ರಿ ಊಟ ಮುಗಿಸಿ ಎಲ್ಲರೂ ನಿದ್ರಿಸಿದೆವು.

ಏಳನೇ ತಾರೀಖು ಮುಂಜಾನೆ ಎಲ್ಲರೂ ಪಾರ್ಸನ್ಸ್ ಕಣಿವೆಯಲ್ಲಿರುವ ಡ್ಯಾಮ್‌ಕಡೆಗೆ ಹೊರಟೆವು. ಡ್ಯಾಮ್ ಸುತ್ತಲಿನ ಪ್ರಕೃತಿ ಸೌಂದರ್ಯ ಮನೋಹರವಾಗಿತ್ತು. ಡ್ಯಾಮ್ ಬಳಿ ತಮಿಳಿನ ರೋಜಾ ಚಲನಚಿತ್ರದ ಕೊನೆಯ ಹಂತದ ಚಿತ್ರೀಕರಣ ನಡೆದ ಸ್ಥಳದಲ್ಲಿ ಫೋಟೋ ತೆಗೆದುಕೊಂಡು ನಂತರ ಬೇಸ್ ಕ್ಯಾಂಪಿಗೆ ಮರಳಿ ಉಪಾಹಾರದ ನಂತರ ಈ ಪ್ರದೇಶದ ಮೂಲನಿವಾಸಿಗಳು ವಾಸಿಸುವ ಹಳ್ಳಿಯನ್ನು ನೋಡಲು ಹೊರಟೆವು. 10.30ಕ್ಕೆ ಮತ್ತೆ ಬೇಸ್ ಕ್ಯಾಂಪಿಗೆ ಹಿಂತಿರುಗಿ 12 ಗಂಟೆಗೆ ಊಟ ಮುಗಿಸಿ ಮಾರ್ಗದರ್ಶಿ ವೇಲುವಿನೊಂದಿಗೆ ಎಲ್ಲರೂ 12 ಕಿ.ಮೀ ದೂರದಲ್ಲಿರುವ ಮೂಕುರ್ತಿಡ್ಯಾಮ್ ಶಿಬಿರದೆಡೆಗೆ ನಮ್ಮ ಚಾರಣ ಪ್ರಾರಂಭಿಸಿದೆವು. ಮೂಕುರ್ತಿ ಪ್ರದೇಶದಲ್ಲಿ ಮೂಕುರ್ತಿ ಶಿಖರ (8379ಅಡಿ) ಅಲ್ಲದೆ ಮೂಕುರ್ತಿ ರಾಷ್ಟ್ರೀಯ ಉದ್ಯಾನವನ (78 ಚದರ ಕಿ.ಮೀ) ಮತ್ತು ಮೊಯಾರ್ ನದಿಯ ಉಪನದಿಯಾದ ಪ್ಯಾಕರ ನದಿಗೆ ಅಡ್ಡಲಾಗಿ ಕಟ್ಟಿರುವ ಮೂಕುರ್ತಿಡ್ಯಾಮ್ ಇರುವುದು.

ಪಾರ್ಸನ್ಸ್ ವ್ಯಾಲಿಯಿಂದ ರಸ್ತೆ ಮಾರ್ಗದಲ್ಲಿ ನಡೆದು ಬಹುಬೇಗನೆ ಮೂಕುರ್ತಿ ರಾಷ್ಟ್ರೀಯ ಉದ್ಯಾನ ಪ್ರವೇಶಿಸಿ ಸುಮಾರು 8 ಕಿ.ಮೀ ನಡೆದು ಅಲ್ಲಲ್ಲಿ ಮಳೆಯಲ್ಲಿ ನೆನೆಯುತ್ತಾ ನಡೆದು ಮೂಕುರ್ತಿ ಅಣೆಕಟ್ಟಿನ ಹಿಂದಿರುವ ವಿಶಾಲವಾದ ನೀರಿನ ಶೇಖರಣೆಯಿರುವ ಪ್ರದೇಶವನ್ನು ತಲುಪಿದೆವು. ವಿಶ್ರಾಂತಿ ನಂತರ ಆ ಪ್ರದೇಶ ಸುತ್ತು ಬಳಸಿ ಕಾಡಿನಲ್ಲಿ ನಡೆದು ಮೂಕುರ್ತಿ ಅಣೆಕಟ್ಟಿನ ಬಳಿಗೆ ಬಂದೆವು. ಅಣೆಕಟ್ಟಿನ ಬಳಿಯಲ್ಲಿನ ವಿದ್ಯುತ್ ಉತ್ಪಾದನಾ ಘಟಕದ ಆವರಣದಲ್ಲಿ ನಮಗಾಗಿ 10 ಟೆಂಟ್ ನಿರ್ಮಿಸಿದ್ದರು. ಸಂಜೆ 4.30ಕ್ಕೆ ಅಲ್ಲಿಗೆ ಹೋಗಿ ಸ್ವಲ್ಪ ವಿಶ್ರಾಂತಿ ನಂತರ

ಚಹಾ ಸೇವಿಸಿ ಹತ್ತಿರದಲ್ಲಿದ್ದ ಸೇತುವೆಯವರೆಗೂ ನಡೆದು ಹೋಗಿ ಮರಳಿ ಬಂದು ಕ್ಯಾಂಪ್‌ಫೈರ್ ಪ್ರಾರಂಭಿಸಿದೆವು. ರಾತ್ರಿ 8 ಘಂಟೆಗೆ ಊಟ ಮುಗಿಸಿ ಮಲಗಿದೆವು.

ಮಾರನೇ ದಿನ ಮುಂಜಾನೆ ಕಾಡಿನ ಮುಖಾಂತರ ಎದುರಿಗಿದ್ದ ಅಣೆಕಟ್ಟೆಯ ಮೇಲೆ ನಡೆದು ಹೋಗಿ ದೂರದ ಮೂಕುರ್ತಿ ಶಿಖರ ನೋಡಿ ನಂತರ ವಿದ್ಯುತ್ ಉತ್ಪಾದನಾ ಘಟಕ ನೋಡಿ ಮರಳಿ ಕ್ಯಾಂಪಿಗೆ ಬಂದು ಉಪಾಹಾರದ ನಂತರ 12 ಕಿ.ಮೀ ದೂರದ ಪಾಂಡಿಯಾರ್ ಹಿಲ್ಸ್ ಕಡೆಗೆ ಚಾರಣವನ್ನು ದಟ್ಟವಾದ ಕಾಡಿನೊಳಗೆ ಪ್ರಾರಂಭಿಸಿದೆವು. ಒಂದು ಗಂಟೆಯ ಚಾರಣದಲ್ಲೇ ಕೆಲವರಿಗೆ ಆಯಾಸ ಹಾಗೂ ಮಂಡಿನೋವು ಕಾಣಿಸಿಕೊಳ್ಳತೊಡಗಿತು. ಮತ್ತೊಂದು ಘಂಟೆಯ ಚಾರಣದ ನಂತರ ಕಾಡಿನಿಂದ ಹೊರಬಂದು ಒಂದು ದಿಬ್ಬ ಹತ್ತತೊಡಗಿದೆವು. ದಿಬ್ಬದ ತುದಿಯನ್ನು ತಲುಪಿ ಅಲ್ಲಿಂದ ಪ್ಯಾಕರ ನದಿಯ ಪಾತ್ರ ನೋಡಿದೆವು. ದೂರದಲ್ಲಿರುವ ಊಟಿಯ ಕಡೆಯಿಂದ ಮಂಜು ಮುಸುಕಿದ ಮೋಡಗಳು ತೇಲಿಬಂದು ಕ್ಷಣಾರ್ಧದಲ್ಲಿ ನಾವಿರುವ ಜಾಗವನ್ನೆಲ್ಲ ಆವರಿಸಿತು. ಸ್ವಲ್ಪ ವಿಶ್ರಾಂತಿ ನಂತರ ನಾವೆಲ್ಲರೂ ದಿಬ್ಬ ಇಳಿದು ಸುಂದರವಾದ ಚಹಾ ತೋಟಗಳಲ್ಲಿ ಚಾರಣ ಮುಂದುವರೆಸಿದೆವು. ರಸ್ತೆ ಸಮತಟ್ಟಾಗಿದ್ದು ಹಾಗೂ ಹಿತಕರವಾದ ವಾತಾವರಣವಿದ್ದದ್ದರಿಂದ ನಡೆಯುವುದು ಬಹಳ ಸುಲಭ ಹಾಗೂ ಅನಂದದಾಯಕವಾಗಿತ್ತು. ಹೀಗೆ ಮತ್ತೊಂದು ಘಂಟೆ ನಡೆದ ನಂತರ ಮತ್ತೆ ಕಾಡನ್ನು ಪ್ರವೇಶಿಸಿ ಕೆಲವು ಸಮಯ ನಡೆದ ಮೇಲೆ ಸಂಜೆ 4 ಗಂಟೆಗೆ ಪಾಂಡಿಯಾರ್ ಗೆಸ್ಟ್ ಹೌಸ್ ತಲುಪಿದೆವು. ಚಹಾ ಹಾಗೂ ವಿಶ್ರಾಂತಿ ನಂತರ ಪಾಂಡಿಯಾರ್ ಶಿಬಿರದ ನಾಯಕ ಸುದರ್ಶನ್ ಅವರೊಡನೆ ಹತ್ತಿರದ ಮತ್ತೊಂದು ದಿಬ್ಬ ಹತ್ತಿ ಪ್ರಾಣಿಗಳನ್ನು ನೋಡಲು ಹೋದೆವು. ಸ್ವಲ್ಪ ದೂರ ಹೋದಮೇಲೆ ವಿಪರೀತ ಚಳಿ ಹಾಗೂ ಮಳೆಬರುವ ಸೂಚನೆ ಇದ್ದದ್ದರಿಂದ ಕ್ಯಾಂಪಿಗೆ ಮರಳಿದೆವು.

ಮಾರನೇ ದಿನದ ಚಾರಣವು 16 ಕಿ.ಮೀ ದೂರದ ಪ್ಯಾಕರ ಕ್ಯಾಂಪ್. ಅರ್ಧ ಗಂಟೆಯ ಚಾರಣದ ನಂತರ ನಾವು ಚಹಾ ತೋಟ ಪ್ರವೇಶಿಸಿದೆವು. ದೃಶ್ಯಗಳು ಅತ್ಯಂತ ಸುಂದರವಾಗಿತ್ತು. ರಸ್ತೆಯುದ್ದಕ್ಕೂ ದೃಶ್ಯ ಮಂಜು ಹಾಗೂ ಮೋಡದಿಂದ ಕೂಡಿತ್ತು. ಮತ್ತೊಂದು ಗಂಟೆ ಚಹಾ ತೋಟದಲ್ಲೇ ನಡೆದು ಒಂದು ಹಳ್ಳಿ ಪ್ರವೇಶಿಸಿದೆವು. ಸ್ವಲ್ಪ ಹೊತ್ತಿನಲ್ಲೇ ಮಳೆಬರಲು ಶುರುವಾಯಿತು. ಮಳೆಯಲ್ಲೇ ಬಹಳ ಹೊತ್ತು ನಡೆದು ಡಾಂಬರಿನ ರಸ್ತೆ ಪ್ರವೇಶಿಸಿ ಮತ್ತೊಂದು ಗಂಟೆ ನಡೆದು ಒಂದು ಎತ್ತರದ ದಿಬ್ಬದ ಮೇಲಿದ್ದ ದೇವಸ್ಥಾನದಲ್ಲಿ ಕೆಲಹೊತ್ತು ವಿಶ್ರಾಂತಿ ಪಡೆದೆವು. ನಂತರ ಮತ್ತೊಂದು ಹಳ್ಳಿ ಪ್ರವೇಶಿಸಿದೆವು. ಇಲ್ಲಿಂದ 3.5 ಕಿ.ಮೀ ದೂರದವರೆಗೂ ಕಚ್ಚಾ ರಸ್ತೆಯಲ್ಲಿ ನಡೆದು ತರಕಾರಿ ತೋಟದೊಳಗಿನ ಕಡಿದಾದ

ಮಾರ್ಗದ ಮೂಲಕ ಮೈಸೂರು-ಊಟಿ ಹೆದ್ದಾರಿ ತಲುಪಿದೆವು. ರಸ್ತೆಯಲ್ಲೇ ನೆರಳಿರುವ ಒಂದು ಜಾಗದಲ್ಲಿ ಕುಳಿತು ಊಟ ಮಾಡಿದೆವು. ಸ್ವಲ್ಪ ವಿಶ್ರಾಂತಿ ನಂತರ ನಮ್ಮ ಚಾರಣ ಮುಂದುವರೆಸಿ ಸಂಜೆ 5 ಘಂಟೆಗೆ ಪ್ಯಾಕರ ಡ್ಯಾಮ್ ಪ್ರದೇಶದಲ್ಲಿರುವ ಅರಣ್ಯ ವಿಶ್ರಾಂತಿ ಗೃಹ ತಲುಪಿದೆವು. ವಿಶ್ರಾಂತಿ ಗೃಹ ಅಚ್ಚುಕಟ್ಟಾಗಿತ್ತಾದರೂ ನೀರಿಗೆ ಅಭಾವವಿತ್ತು. ಕ್ಯಾಂಪ್ ನಾಯಕ ರಾಧಾಕೃಷ್ಣನ್ ಅವರು ದೊಡ್ಡ ಪಾತ್ರೆಗಳಲ್ಲಿ ನೀರನ್ನು ಶೇಖರಿಸಿದ್ದರು. ಮಹಿಳಾ ಚಾರಣಿಗರಿಗೆ ಬೇರೆ ವಿಶ್ರಾಂತಿ ಗೃಹವಿತ್ತು. ಚಹಾ ಸೇವನೆ ನಂತರ ಕೆಲವರು ಪ್ಯಾಕರ ಜಲಪಾತ ನೋಡಲು ಹೋದರು. ನಾವುಗಳು ಮಾರನೇ ದಿನ ಹೋಗುವುದೆಂದು ತೀರ್ಮಾನಿಸಿ ಕ್ಯಾಂಪಿನಲ್ಲೇ ವಿಶ್ರಾಂತಿ ಪಡೆದೆವು. ನಮ್ಮ ಜೊತೆಯಲ್ಲಿದ್ದ ಉದ್ಯಮಿ ಹರ್ಡಿಕರ್ ಅವರೊಂದಿಗೆ ಲಘು ಚರ್ಚೆ ಪ್ರಾರಂಭವಾಗಿ ಅದು ಬ್ಯಾಂಕ್-ಉದ್ಯಮಿಗಳ ಸಂಬಂಧಗಳ ಕಡೆಗೆ ತಿರುಗಿತು. ಚರ್ಚೆ ಬಹಳ ಸ್ವಾರಸ್ಯಕರವಾಗಿದ್ದು ನಂತರ ಅದು ಯೋಗಾಭ್ಯಾಸದ ಕಡೆಗೆ ತಿರುಗಿತು. ನಾನು ಉಳಿದ ಸದಸ್ಯರನ್ನೂ ಕರೆದೆ. ಎಲ್ಲರೂ ಅವರು ತಿಳಿಸುವ ವಿಷಯವನ್ನು ಕುತೂಹಲದಿಂದ ಕೇಳತೊಡಗಿದೆವು. ಚರ್ಚೆ ರಾತ್ರಿ 8 ಗಂಟೆವರೆಗೂ ನಡೆಯಿತು. ಅನಂತರ ಊಟ ಮಾಡಿ ಮಲಗಿದೆವು. ಮುಂಜಾನೆ ಎಲ್ಲೆಲ್ಲೂ ಮಂಜು ಕವಿದಿದ್ದು ಮೂರು ಅಡಿ ದೂರದಲ್ಲಿರುವ ವಸ್ತುಗಳನ್ನೂ ಸಹಾ ನೋಡಲಾಗುತ್ತಿರಲಿಲ್ಲ. ಆದರೆ, ದೃಶ್ಯವು ಆಹ್ಲಾದಕರವಾಗಿತ್ತು. ಸುಡುತ್ತಿರುವ ಚಹಾವನ್ನು ಅಲ್ಲೇ ನಿಂತು ಕುಡಿದು ಆನಂದಿಸಿದೆವು. 8 ಗಂಟೆಗೆ ಎಲ್ಲರೂ ಅಲ್ಲಿಂದ ಹೊರಟು ಪ್ಯಾಕರ ಡ್ಯಾಮ್ ವೀಕ್ಷಿಸಿ ನಂತರ ಜಲಪಾತ ನೋಡಲು ಹೋದೆವು. ಡ್ಯಾಮ್‌ನಿಂದ ಹೆಚ್ಚು ನೀರನ್ನು ಬಿಡದೇ ಇದ್ದದ್ದರಿಂದ ಜಲಪಾತ ಸೊರಗಿತ್ತು. ನಂತರ ಮರಳಿ ಬಂದು ಉಪಾಹಾರದ ನಂತರ ಅಲ್ಲಿಂದ 12 ಕಿ.ಮೀ ದೂರದಲ್ಲಿರುವ ಮೂಡುಮಲೈ ಬಿಡಾರದ ಕಡೆಗೆ ನಮ್ಮ ಚಾರಣ ಪ್ರಾರಂಭಿಸಿದೆವು. ಮೊದಲು ನಾವು ಪ್ಯಾಕರ ಡ್ಯಾಮ್ ಮೇಲೆ ನಡೆದು ಕೆಲವೇ ಸಮಯದಲ್ಲಿ ಕಡಿದಾದ ಹಾಗೂ ದಟ್ಟವಾದ ನೀಲಗಿರಿ ಮರಗಳಿಂದ ಕೂಡಿದ ಕಾಡಿನಲ್ಲಿ ನಿಧಾನವಾಗಿ ಮುಂದುವರೆದೆವು. ಹಾದಿಯಲ್ಲಿ ನೀಲಗಿರಿ ಎಣ್ಣೆಯನ್ನು ಉತ್ಪಾದಿಸುವ ಘಟಕ ವೀಕ್ಷಿಸಿ ಮುಂದುವರೆದು ಅರ್ಧ ಗಂಟೆಯ ನಂತರ ವಿಶಾಲವಾದ ಹುಲ್ಲುಗಾವಲನ್ನು ಪ್ರವೇಶಿಸಿದೆವು. ಮತ್ತಷ್ಟು ದೂರ ನಡೆದ ನಂತರ ಮತ್ತೆ ನೀಲಗಿರಿ ಕಾಡನ್ನು ಪ್ರವೇಶಿಸಿ ಕಡಿದಾದ ಬೆಟ್ಟ ಹತ್ತತೊಡಗಿದೆವು. ಅನಂತರ ಮತ್ತೆ ಸುಂದರವಾದ ಹುಲ್ಲುಗಾವಲನ್ನು ಪ್ರವೇಶಿಸಿ ಅಲ್ಲಿಂದ ದೂರದ ಬೆಟ್ಟ , ನದಿ ಹಾಗೂ ಹಳ್ಳಿಗಳನ್ನು ನೋಡುತ್ತಾ ಸ್ವಲ್ಪ ಹೊತ್ತು ವಿಶ್ರಾಂತಿಯ ನಂತರ ಮುಂದುವರೆದೆವು. ಮಾರ್ಗದಲ್ಲಿ ನಾವು ಇಲ್ಲಿನ ಮೂಲನಿವಾಸಿಗಳಾದ ತೋಡ ಜನರ ಗುಡಿಸಲನ್ನೂ ಹಾಗೂ ಅವರು ಪೂಜಿಸುವ

ದೇವರ ಗುಡಿಯನ್ನು ನೋಡಿದೆವು. ನಾವು ನಿಂತಿದ್ದ ಹುಲ್ಲುಗಾವಲಿನಲ್ಲೇ ತಮಿಳು, ಕನ್ನಡ ಚಿತ್ರಗಳ ಹೊರಾಂಗಣ ಚಿತ್ರೀಕರಣಗಳನ್ನು ಮಾಡುವರೆಂದು ತಿಳಿಯಿತು. ಅರ್ಧ ಘಂಟೆ ನಡೆದ ಮೇಲೆ ನಾವು ಊಟಿ–ಮೈಸೂರು ಹೆದ್ದಾರಿ ತಲುಪಿದೆವು. ಅಲ್ಲಿಂದ ನಮ್ಮನ್ನು ಕರೆದೊಯ್ಯಲು ಮೂರು ಜೀಪುಗಳು ಕಾಯುತ್ತಿದ್ದವು. ಅಲ್ಲೇ ನಾವು ಸುಟ್ಟ ಮುಸುಕಿನ ಜೋಳದ ತೆನೆ ಹಾಗೂ ಕಾಫಿ ಸೇವಿಸಿ ಜೀಪಿನಲ್ಲಿ ಹೊರಟು ಅರ್ಧ ಗಂಟೆಯ ನಂತರ ಹೋಟೆಲೊಂದರಲ್ಲಿ ಊಟ ಮಾಡಿ ಅಲ್ಲಿಂದ ಹೊರಟು 3.30ಕ್ಕೆ ಮೂಡುಮಲೈ ಶಿಬಿರ ತಲುಪಿದೆವು. ಅಲ್ಲಿನ ಬಿಡಾರವು ಎಲ್ಲರಿಗೂ ಇಷ್ಟವಾಯಿತು. ಚಹಾ ಕುಡಿದನಂತರ ಎಲ್ಲರೂ ಅಲ್ಲೇ ಒಂದು ಮರದ ಕೆಳಗಿರುವ ವಿಶಾಲವಾದ ಜಗುಲಿಯ ಮೇಲೆ ಕುಳಿತು ಗ್ರೂಪ್ ಫೋಟೋ ತೆಗೆಸಿಕೊಂಡೆವು. ಅನಂತರ 5 ಗಂಟೆಗೆ ಅದೇ ಜೀಪುಗಳಲ್ಲಿ ಕುಳಿತು ಮೂಡುಮಲೈ ಸಫಾರಿಗೆ ಹೊರಟೆವು. ಕೆಲವು ಜಿಂಕೆಗಳು, ಕಾಡೆಮ್ಮೆಗಳನ್ನು ಮಾತ್ರ ನೋಡಲು ನಮಗೆ ಸಾಧ್ಯವಾಯಿತು. ಕತ್ತಲಾದ ಮೇಲೆ ಡ್ರೈವರ್ ನಮ್ಮ ಜೀಪನ್ನು ಒಂದು ರಸ್ತೆ ಬದಿಯಲ್ಲಿ ನಿಲ್ಲಿಸಿ ಹೆಡ್ ಲೈಟನ್ನು ಆರಿಸಿದನು. ಅದರಂತೆ ಉಳಿದ ವಾಹನದವರೂ ಮಾಡಿದರು. ಬಹಳ ಹೊತ್ತು ಕಾದ ಮೇಲೆ 8–10 ಆನೆಗಳು ಗಾಂಭೀರ್ಯದಿಂದ ನಮ್ಮ ವಾಹನದಿಂದ 10 ಅಡಿ ದೂರದಲ್ಲೇ ರಸ್ತೆ ದಾಟಿದ್ದನ್ನು ನೋಡಿ ನಮಗೆಲ್ಲ ಸಂತೋಷವಾಯಿತು. ನಂತರ ಕ್ಯಾಂಪಿಗೆ ಮರಳಿದೆವು. ಊಟವಾದ ನಂತರ 11.30ರ ವರೆಗೂ ಹರಟೆ ಹೊಡೆಯುತ್ತಿದ್ದು ಆಮೇಲೆ ಮಲಗಿದೆವು. ಮಾರನೇ ದಿನ ಉಪಾಹಾರದ ನಂತರ ಅದೇ ಜೀಪುಗಳಲ್ಲಿ ನಾವುಗಳೆಲ್ಲರೂ ಬಂಡೀಪುರ ಅಭಯಾರಣ್ಯದೆಡೆಗೆ ಹೊರಟೆವು. ಅಲ್ಲಿಗೆ 8.45ಕ್ಕೆ ತಲುಪಿ ಒಂದು ಘಂಟೆಗಳ ಕಾಲ ಅಭಯಾರಣ್ಯದೊಳಗೆ ಅರಣ್ಯ ವಿಭಾಗದವರ ವ್ಯಾನಿನಲ್ಲಿ ಸುತ್ತಾಡಿ ಜಿಂಕೆ, ಕಾಡೆಮ್ಮೆಗಳನ್ನು ವೀಕ್ಷಿಸಿ ನಂತರ ಅಲ್ಲಿಂದ ಮೈಸೂರಿಗೆ ಬಸ್ಸಿನಲ್ಲಿ ತೆರಳಿದೆವು. ಮೈಸೂರಿನಲ್ಲಿ ಊಟಮಾಡಿ ಬೆಂಗಳೂರಿಗೆ ಹಿಂತಿರುಗಿದೆ. ಇಲ್ಲಿಗೆ ಸ್ವಾರಸ್ಯಕರವಾದ ನೀಲಗಿರಿ ಪರ್ವತಾರೋಹಣದ ಕಾರ್ಯಕ್ರಮ ಮುಕ್ತಾಯವಾಯಿತು. ನೀಲಗಿರಿ ಪರ್ವತಾರೋಹಣ ಪಶ್ಚಿಮ ಘಟ್ಟಗಳಲ್ಲಿ ನಾವು ವೀಕ್ಷಿಸಬಹುದಾದ ತಾಣಗಳಲ್ಲಿ ಕೇವಲ ಒಂದು ಸಣ್ಣ ಭಾಗವಷ್ಟೆ. ನೋಡಬೇಕಾದದ್ದು ಬಹಳ ಇವೆ. 2014ರ ಅಕ್ಟೋಬರ್‌ನಲ್ಲೂ ಇದೇ ಮಾರ್ಗದಲ್ಲಿ ಮತ್ತೆ ಚಾರಣ ಮಾಡಿದೆ.

ಕರ್ನಾಟಕದ ಪಶ್ಚಿಮ ಘಟ್ಟದ ತಡಿಯಾಂಡಮಾಲ್ ಶಿಖರದೆಡೆಗಿನ ಚಾರಣ

ನಾನು 2014ರ ಜುಲೈ ತಿಂಗಳಿನಲ್ಲಿ ಕಾಶ್ಮೀರ ಸರೋವರದೆಡೆಗೆ ಚಾರಣ ಮಾಡುವಾಗ ನನ್ನ ಸಹೋದ್ಯೋಗಿ ಮುತಾಲಿಕ್ ಪಾಟೀಲ್ ಅವರ ಇಬ್ಬರು ಮಕ್ಕಳು ನನ್ನೊಂದಿಗೆ ಚಾರಣ ಮಾಡಿದ್ದರು. ಅವರಲ್ಲಿ ಚಿಕ್ಕವನೇ ಪ್ರಣವ್ ಮುತಾಲಿಕ್ – ಎಂಜಿನಿಯರ್. ಇವನು ಮ್ಯಾಡ್ ವೆಂಚರ್ ಎಂಬ ಚಾರಣ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದಾನೆ. ಅದರ ಮೂಲಕ ವಾರಾಂತ್ಯದ ರಜಾದಿನಗಳಲ್ಲಿ ಒಂದು ದಿನದ ಚಾರಣಗಳನ್ನು ನಡೆಸುತ್ತಿದ್ದಾನೆ. ನನಗೂ ಕರ್ನಾಟಕದಲ್ಲಿನ ಒಂದು ದಿನದ ಚಾರಣಗಳಲ್ಲಿ ಆಸಕ್ತಿಯುಂಟಾಗಿ ಈ ಸಂಸ್ಥೆಯ ಮೂಲಕ ಆ ರೀತಿಯ ಹಲವಾರು ಚಾರಣಗಳನ್ನು ಮಾಡಿದೆ. ಅದರಲ್ಲಿ ಕೂರ್ಗ್‌ನಲ್ಲಿನ ತಡಿಯಾಂಡಮಾಲ್ ಚಾರಣವೂ ಒಂದು.

ಸಾಮಾನ್ಯವಾಗಿ ಒಂದು ದಿನದ ಚಾರಣದಲ್ಲಿ ಬೆಂಗಳೂರಿನಿಂದ ಒಂದು ರಾತ್ರಿಯ ಪ್ರಯಾಣವಿದ್ದಲ್ಲಿ ನಾವು ಶುಕ್ರವಾರ ರಾತ್ರಿ ಹೊರಟು ಶನಿವಾರ ಚಾರಣ ಮಾಡಿ, ಆ ರಾತ್ರಿ ಅಲ್ಲೇ ಉಳಿದು ನಂತರ ಭಾನುವಾರ ಅರ್ಧದಿನ ಹತ್ತಿರದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಭಾನುವಾರ ರಾತ್ರಿ ಬೆಂಗಳೂರಿಗೆ ಹಿಂತಿರುಗುತ್ತೇವೆ. ತಡಿಯಾಂಡಮಾಲ್ ಬೆಟ್ಟದೆಡೆಗಿನ ಚಾರಣವೂ ಇದೇ ರೀತಿಯದಾಗಿತ್ತು. ಈ ರೀತಿಯ ಚಾರಣದಲ್ಲಿ ಪ್ರತಿಬಾರಿ 12–15 ಚಾರಣಿಗರು ಭಾಗವಹಿಸುತ್ತಾರೆ. ಈ ಚಾರಣದಲ್ಲೂ 14 ಚಾರಣಿಗರಿದ್ದರು. ಶುಕ್ರವಾರ ರಾತ್ರಿ 10.30ಕ್ಕೆ ಬ್ಯಾಟರಾಯನಪುರ ಪೊಲೀಸ್ ಸ್ಟೇಶನ್ ಬಳಿ ನಾನು ಟೆಂಪೋ ಟ್ರಾವೆಲರ್ ಹತ್ತಿದೆ. ಅರ್ಧ ಗಂಟೆ ನಂತರ ಬಸ್ಸಿನಲ್ಲೇ ಎಲ್ಲರ ಪರಿಚಯವೂ ಆಯಿತು. ಅನಂತರ ನಮ್ಮಲ್ಲಿ ಹಲವರು ನಿದ್ರಿಸಿದರು. ಮುಂಜಾನೆ ನಮ್ಮನ್ನು ಚಾರಣ ಪ್ರಾರಂಭವಾಗುವ ನಲಕ್‌ನಾಡ್ ಪ್ಯಾಲೇಸ್ ಬಳಿಯಲ್ಲಿನ ಒಂದು ಹೋಮ್‌ಸ್ಟೇ ತಲುಪಿ ಅಲ್ಲಿ ಉಪಾಹಾರದ

ನಂತರ ಮಧ್ಯಾಹ್ನದ ಊಟದ ಬುತ್ತಿಯನ್ನು ತೆಗೆದುಕೊಂಡು ಮುಂಜಾನೆ 8.30ಕ್ಕೆ ಚಾರಣವನ್ನು ಪ್ರಾರಂಭಿಸಿದೆವು. ಚಾರಣದ ಮಾರ್ಗದಲ್ಲಿ ಅನೇಕ ಸುಂದರ ದೃಶ್ಯಗಳು ನಮ್ಮ ಕಣ್ಣುಗಳನ್ನು ಸೂರೆಗೈದವು. ಸುಂದರವಾದ ಬಣ್ಣ ಬಣ್ಣದ ಚಿಟ್ಟೆಗಳು, ಸಣ್ಣ ಸಣ್ಣ ಜಲಪಾತಗಳು ಹಾಗೂ ಅದ್ಭುತವಾದ ಕಣಿವೆಗಳು, ಓಹ್! ಪ್ರಕೃತಿಪ್ರಿಯರಿಗೆ ತಡಿಯಾಂಡಮಾಲ್ ಒಂದು ಸುಂದರ ಕೊಡುಗೆ. 4 ಕಿ.ಮೀ ಬೆಟ್ಟ ಹತ್ತಿದ ಮೇಲೆ ನಮಗೆ ಒಂದು ದೊಡ್ಡ ಬಂಡೆ ಸಿಕ್ಕಿತು. ಅಲ್ಲಿ ನಮ್ಮ ಗುಂಪಿನ ಯುವಚಾರಣಿಗರು ಬಂಡೆ ಮೇಲೆ ಹತ್ತಿ ವಿವಿಧ ಭಂಗಿಗಳಲ್ಲಿ ಫೋಟೋ ತೆಗೆದುಕೊಂಡರು. ಅಲ್ಲೇ ಸ್ವಲ್ಪಹೊತ್ತು ವಿಶ್ರಮಿಸಿ ಶಿಖರದೆಡೆಗೆ ಹತ್ತತೊಡಗಿದೆವು. ಇಲ್ಲಿಂದ ಮಾರ್ಗ ಕಠಿಣವಾಗಿದ್ದು ಹತ್ತುವುದು ಕಷ್ಟವಾಗತೊಡಗಿತು. ಈ ಮಾರ್ಗದಲ್ಲೇ ನಮಗೆ ಶೋಲಾ (ಕುರುಚಲು ಗಿಡಗಳ) ಕಾಡು ಪ್ರಾರಂಭವಾಯಿತು. ಸ್ವಲ್ಪ ಮೇಲೆ ಹತ್ತಿದ ಮೇಲೆ ಒಂದು ಶಿಖರ ತಲುಪಿದೆವು. ಅದನ್ನೇ ತಡಿಯಾಂಡಮಾಲ್ ಎಂದು ಎಲ್ಲರೂ ಭಾವಿಸಿದರು. ಆದರೆ ನಮ್ಮೊಡನಿದ್ದ ಮಾರ್ಗದರ್ಶಿ ಅದು ಅಲ್ಲವೆಂದೂ ಹಾಗೂ ಶಿಖರವನ್ನು ತಲುಪಲು ಇನ್ನೂ ಹತ್ತಬೇಕೆಂದರು. ಇಲ್ಲಿಂದ ಮಾರ್ಗ ಇನ್ನೂ ಕಿರಿದಾಗುತ್ತಾ ಹಾಗೂ ಕಡಿದಾಗುತ್ತಾ ಹೋಗಿ ಕೇವಲ 300 ಮೀಟರ್ ಮಾರ್ಗ ಸಹ ದೀರ್ಘವೆನಿಸತೊಡಗಿತು. ಶಿಖರದ ತುದಿ ತಲುಪಿದಾಗ ನಮ್ಮನ್ನೂ ಸೇರಿಕೊಂಡು ಎಲ್ಲವನ್ನೂ ಮೋಡಗಳು ಸುತ್ತುವರೆದಿದ್ದವು. ಸುತ್ತಲಿನ ಪ್ರಕೃತಿ ಸೌಂದರ್ಯ ಸವಿಯುತ್ತಾ ನಮ್ಮೊಡನೆ ತಂದಿದ್ದ ಊಟ ತಿಂದು ಮುಗಿಸಿದೆವು. ನಂತರ ಅಲ್ಲಿಂದ ನಿಧಾನವಾಗಿ ಇಳಿಯತೊಡಗಿದೆವು. ಪ್ರಕೃತಿ ಸೌಂದರ್ಯ ಅಷ್ಟು ಬೇಗ ಬಿಟ್ಟುಬರಲು ಇಷ್ಟವಿಲ್ಲದೆ ನಿಧಾನವಾಗಿ ಎಲ್ಲರಿಗಿಂತ ಹಿಂದೆ ನಾನು ಹಾಗೂ ಇನ್ನಿಬ್ಬರು ಇಳಿಯುತ್ತಿದ್ದೆವು. ನಾವುಗಳು ಕೆಳಗೆ ಬರುವ ಹೊತ್ತಿಗೆ ಕತ್ತಲಾಯಿತು. ಹೋಮ್‌ಸ್ಟೇ ತಲುಪಿದ ನಂತರ ಚಹಾ ಸೇವಿಸಿ, ಸ್ವಲ್ಪ ವಿಶ್ರಾಂತಿ ನಂತರ ರಾತ್ರಿ ವಿಶೇಷ ಭೋಜನ ಮಾಡಿ ಮಲಗಿದೆವು. ಮಾರನೇ ದಿನ ಬೆಳಗಿನ ಉಪಾಹಾರ ಸೇವಿಸಿ 34 ಕಿ.ಮೀ ದೂರದಲ್ಲಿರುವ ಲಕ್ಷ್ಮಣ ತೀರ್ಥಕ್ಕೆ ಹೋಗಿ ಅಲ್ಲಿ ಜಲಪಾತ ವೀಕ್ಷಿಸಿ ನಂತರ ಅಲ್ಲಿನ ಹೋಟೆಲೊಂದರಲ್ಲಿ ಊಟ ಮಾಡಿ ಎಲ್ಲರೂ ಬೆಂಗಳೂರಿಗೆ ಹಿಂತಿರುಗಿದೆವು.

ಕುದುರೆಮುಖ ಶಿಖರದೆಡೆಗೆ ಚಾರಣ

2014ರ ಅಕ್ಟೋಬರ್, 2 ಮತ್ತೊಮ್ಮೆ ಮ್ಯಾಡ್‌ವೆಂಚರ್ ನನ್ನನ್ನು ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಒಂದು ದಿನದ ಚಾರಣಕ್ಕೆ ಕೈಬೀಸಿ ಕರೆಯ ತೊಡಗಿತು. ಚಾರಣ ಎಂದಕೂಡಲೇ ನನಗೆ ಎಲ್ಲಿಲ್ಲದ ಆಸಕ್ತಿ ಹಾಗೂ ಕುತೂಹಲ. ಸರಿ, ಕರೆ ಬಂದಾಯಿತು, ಆದರೆ ಎಲ್ಲಿಗೆ? ಈ ಬಾರಿ ಅವರು ನಮ್ಮನ್ನು ಕರೆದುಕೊಂಡು ಹೋಗುವ ಸ್ಥಳದಲ್ಲಿ – ಹಚ್ಚ ಹಸಿರು ಉಡುಗೆಯುಟ್ಟ ಬೃಹತ್ ಬೆಟ್ಟಗಳು, ಮೋಡಗಳು ಮುತ್ತಿಕ್ಕುತ್ತಿರುವ ಬೆಟ್ಟಗಳು, ದಟ್ಟವಾದ ಕಾಡಿನ ಜಾಡುಗಳು, ಬಿದಿರಿನ ಮೆಳೆಗಳು ಮತ್ತು ಹಲವಾರು ಜಲಪಾತಗಳು

ಇವೆಲ್ಲವನ್ನೂ ಒಳಗೊಂಡಿರುವ ಒಂದು ಚಾರಣ ಸ್ಥಳ ಬೆಂಗಳೂರಿನಿಂದ ಕೇವಲ ಒಂದು ರಾತ್ರಿ ಪ್ರಯಾಣದಷ್ಟು ದೂರದಲ್ಲೇ ಇರುವುದೆಂದರೆ! ಏನು? ತಮಾಷೆ ಮಾಡುವಿರಾ ಎನ್ನಬೇಡಿ. ಅಂತಹ ಸುಂದರ ಪ್ರಕೃತಿ ತಾಣ, ಚಾರಣಿಗರ ಸ್ವರ್ಗ ಹಾಗೂ ದಕ್ಷಿಣದ ಹಿಮಾಲಯ ಎಂದು ಕರೆಯುವ ಸ್ಥಳವೊಂದಿದೆ. ಅದೇ ಕುದುರೆಮುಖ.

ಇಲ್ಲಿ ಚಾರಣ ಮಾಡುತ್ತಿದ್ದರೆ ಹೆಜ್ಜೆ ಹೆಜ್ಜೆಗೂ ಪ್ರಕೃತಿ ದೃಶ್ಯಗಳು ಬದಲಾಗುತ್ತಿದ್ದು ಖಂಡಿತವಾಗಿ ಯಾರನ್ನಾದರೂ ಆಶ್ಚರ್ಯಪಡುವಂತೆ ಮಾಡದೇ ಇರುವುದಿಲ್ಲ. ಕಟ್ಟ ಕಡೆಗೆ ಕುದುರೆಮುಖದ ಶಿಖರ ತಲುಪಿದಾಗ ಚಳಿಯಿಂದ ಕೂಡಿದ ಗಾಳಿ ನಮ್ಮನ್ನು ಒಂದು ಕ್ಷಣ ನಿಶ್ಚೇಷ್ಟಿತಗೊಳಿಸಿ ನಂತರ ಈ ಸ್ಥಳದ ಅಮೋಘವಾದ ಸೌಂದರ್ಯ ಸವಿಯಲು ಎಚ್ಚರಿಸುವುದು.

ನಾವು ಒಟ್ಟು 16 ಚಾರಣಿಗರು ರಾತ್ರಿ 10.30ಕ್ಕೆ ಬೆಂಗಳೂರಿನಿಂದ ಹೊರಟು ಚಿಕ್ಕಮಗಳೂರು ತಲುಪಿ ಅಲ್ಲಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪ್ರವೇಶಿಸಿ ಮುಲ್ಲೋಡಿ ತಲುಪಿ ಅಲ್ಲಿ ಒಂದು ಹೋಮ್‌ಸ್ಟೇಯಲ್ಲಿ ನಿತ್ಯಕರ್ಮಗಳನ್ನು

ಮುಗಿಸಿ ನಂತರ ರುಚಿಯಾದ ಉಪಾಹಾರ ಹಾಗೂ ಉತ್ಕೃಷ್ಟಮಟ್ಟದ ಕಾಫಿ ಕುಡಿದು ಊಟದ ಬುತ್ತಿ ತೆಗೆದುಕೊಂಡು ಜೀಪಿನಲ್ಲಿ ಮಧ್ಯೆ ಮಧ್ಯೆ ಸುಂದರ ಜಲಪಾತಗಳಿಂದ ಕೂಡಿದ ಕಾಫಿ ತೋಟಗಳೊಳಗೆ 6ಕಿ.ಮೀ ಪಯಣಿಸಿದೆವು. ಈ ಪ್ರಯಾಣ ರೋಮಾಂಚಕಾರಿ ಯಾಗಿತ್ತು. ಬೇಸ್ ಕ್ಯಾಂಪ್‌ಬಳಿ 360° ದೃಶ್ಯ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿನ ಶಿಖರಗಳು, ಸೋಮಾವತಿ ನದಿ ಗೋಚರಿಸುತ್ತಿತ್ತು. ಇಲ್ಲಿಂದ ಕುದುರೆಮುಖದ ಶಿಖರಕ್ಕೆ11 ಕಿ.ಮೀ ಚಾರಣ ಮಾಡಬೇಕೆಂದೂ ಹಾಗೂ ಚಾರಣದ ಮಾರ್ಗದಲ್ಲಿ ನಮಗೆ ಕನಿಷ್ಠ10 ನೀರಿನ ತೊರೆಗಳು ಕಾಣುವುದೆಂದು ಮಾರ್ಗದರ್ಶಿ ನಮಗೆ ತಿಳಿಸಿದರು. ಚಾರಣ ಪ್ರಾರಂಭಿಸುತ್ತಿದ್ದಂತೆ ನಮ್ಮ ಇಕ್ಕೆಲಗಳಲ್ಲೂ ಶಿಖರಗಳು ಕಂಡುಬಂದವು. ನನಗೋ ಅವುಗಳ ಬಗ್ಗೆ ತಿಳಿದುಕೊಳ್ಳಲು ಕುತೂಹಲ. ಮಾರ್ಗದರ್ಶಿ ನಮ್ಮ ಎಡಕ್ಕೆ ಕಾಣುವ ಶಿಖರ ದುರ್ಗದಬ್ಬ ಎಂದೂ ಹಾಗೆ ಬಲಕ್ಕೆ ಚಂದ್ರದ್ರೋಣ ಎಂದು ತಿಳಿಸಿದರು. ಚಾರಣ ಮಾರ್ಗದ ಪ್ರಾರಂಭದಲ್ಲಿ ಕಾಣುವ ಶಿಖರವನ್ನು ಗೋಮುಖ ಎನ್ನುವರೆಂದು ಮಾರ್ಗದರ್ಶಿ ನಾನು ಕೇಳುವುದಕ್ಕೆ ಮೊದಲೇ ತಿಳಿಸಿದರು. ಒಂದು ಗಂಟೆ ಚಾರಣ ಮಾಡಿ ಕಾಡಿನಿಂದ ಹೊರಬಂದಾಗ ದೊಡ್ಡದಾದ ಮರ ಕಂಡಿತು. ಅದನ್ನು ಶಾಂತಿ ವೃಕ್ಷ ಎನ್ನುವರೆಂದು ಗೊತ್ತಾಯಿತು. ಎಲ್ಲರೂ ಅಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಅಲ್ಲಿಂದ ಕಣ್ಣು ಎಷ್ಟು ದೂರ ನೋಡಬಹುದೋ ಅಲ್ಲಿಯವರೆಗೂ ವಿಶಾಲವಾಗಿ ಹರಡಿಕೊಂಡಿರುವ ಹುಲ್ಲುಗಾವಲು ಮತ್ತು ಸುತ್ತಲಿನ ಶಿಖರಗಳನ್ನು ನೋಡಿ ಆನಂದಿಸಿದೆವು. ಚಾರಣದ ಸಂಪೂರ್ಣ ಹಾದಿ ಉಷ್ಣವಲಯದ, ಮಳೆಯಿಂದ ಕೂಡಿದ ಅರಣ್ಯಗಳು ಮತ್ತು ಹುಲ್ಲುಗಾವಲುಗಳಿಂದ ಕೂಡಿತ್ತು. ದಾರಿಯುದ್ದಕ್ಕೂ ಅಲ್ಲಲ್ಲಿ ಶುಭ್ರವಾದ ನೀರಿನ ತೊರೆಗಳಿದ್ದು ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆ ನಮಗೆ ಎದುರಾಗಲಿಲ್ಲ. ಸ್ವಲ್ಪ ದೂರ ನಡೆದ ನಂತರ ನಮಗೆ ಒಂದು ಮನೆ ಎದುರಾಯಿತು. ಮಾರ್ಗದರ್ಶಿ ಅದು ಶ್ರೀ ಲೋಬೊ ಅವರ ಮನೆಯೆಂದು ತಿಳಿಸಿದರು. ಇಲ್ಲಿಂದ ತೀವ್ರ ಏರುವಿಕೆಯಿಂದ ಕೂಡಿದ ಮಾರ್ಗ ಪ್ರಾರಂಭವಾಯಿತು. ಮೇಲೆ ಹತ್ತಿ ಹೋದಮೇಲೆ ನನಗೆ ಕಂಡುಬಂದದ್ದು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಹುಲ್ಲುಗಾವಲುಗಳಿಂದ ಕೂಡಿದ ಹೊಸ ಪ್ರಪಂಚ. ಇಲ್ಲಿಂದ ಅಂಕು ಡೊಂಕಿನ ಚಾರಣ ಮಾರ್ಗದ ಮೂಲಕ ಮೇಲ್ಗಡೆ ನಮಗೆ ಕುದುರೆಮುಖದ ಶಿಖರವು ಕಾಣತೊಡಗಿತು. ಮಳೆಗಾಲದ ಅರಣ್ಯ ಪ್ರವೇಶಿಸುತ್ತಿದ್ದಂತೆ ದಟ್ಟವಾದ ಕತ್ತಲು ಅವರಿಸಿಕೊಂಡಿತು. ಇಕ್ಕೆಲಗಳಲ್ಲೂ ಮುಳ್ಳಿನಿಂದ ಕೂಡಿದ ಗಿಡಗಳು ಕಾಣಿಸತೊಡಗಿತು. ಇನ್ನಷ್ಟು ಮೇಲೆ ಹತ್ತಿದಮೇಲೆ ನಮಗೆ ಸುಮಾರು 30 ಅಡಿ

ಎತ್ತರದಿಂದ ಧುಮುಕುತ್ತಿರುವ ಜಲಪಾತ ಎದುರಾಯಿತು. ಜಲಪಾತದ ನೀರಿನಿಂದ ಮುಖ ತೊಳೆದುಕೊಂಡು ಮತ್ತಷ್ಟು ಉತ್ಸಾಹದಿಂದ ಜಲಪಾತದಿಂದ ಮತ್ತಷ್ಟು ದೂರ ನಡೆದ ಮೇಲೆ ಬಲಕ್ಕೆ ಶಿಖರವನ್ನು ಮೋಡಗಳು ಸಂಪೂರ್ಣವಾಗಿ ಆವರಿಸಿದ್ದವು. ಅಂಕು ಡೊಂಕಾದ ತೀವ್ರ ಏರುವಿಕೆಯಿಂದ ಕೂಡಿದ ಮಾರ್ಗ ಶಿಖರವನ್ನು ತಲಪುವ ಕಡೆಯ ಜಾಡನ್ನು ಕೂಡುತ್ತಿತ್ತು. ಹೀಗೆ ನಾವು ಹತ್ತುತ್ತಾ ಹೋಗುತ್ತಿರುವಾಗ ನಮ್ಮ ಬಲಗಡೆ ದಟ್ಟವಾದ ಕಾಡಿದ್ದರೆ, ಎಡಕ್ಕೆ ಆಳವಾದ ಕಂದಕವಿದ್ದದ್ದು ಕಂಡುಬಂದಿತು. ಇಷ್ಟರಲ್ಲಾಗಲೇ ನಾವೆಲ್ಲರೂ ಏದುಸಿರುಬಿಡುತ್ತಾ ಇನ್ನೂ ಎಷ್ಟು ದೂರ ಹತ್ತಬೇಕಪ್ಪಾ ಎಂದು ಚಿಂತಿಸುತ್ತಿರುವಾಗ ಮಾರ್ಗದರ್ಶಿ ಅಲ್ಲಿಗೆ ಬಂದು ಕುದುರೆಮುಖದ ಶಿಖರವು ಕೇವಲ 200 ಅಡಿ ದೂರದಲ್ಲಿರುವುದೆಂದು ತಿಳಿಸಿದರು. ಕೂಡಲೇ ನಮ್ಮಲ್ಲಿದ್ದ ಇದ್ದಬದ್ದ ಶಕ್ತಿಯನ್ನೆಲ್ಲಾ ಉಪಯೋಗಿಸಿಕೊಂಡು ಮೇಲೆ ಹತ್ತಿದೆವು. ಶಿಖರ ತಲಪುತ್ತಿದ್ದಂತೆ ನನಗನಿಸಿದ್ದೇನೆಂದರೆ ಇದಕ್ಕಿಂತ ಉತ್ಕೃಷ್ಟವಾದ ಪ್ರಪಂಚವೊಂದಿಲ್ಲ ಎಂದು. ಎಲ್ಲ ಮೋಡಗಳೂ ನಮ್ಮ ಕಾಲ್ಬುಡದಲ್ಲೇ ಇದೆಯೇನೋ ಎನಿಸುವಂತಿತ್ತು. ಇಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ನಾವು ತಂದಿದ್ದ ಊಟದ ಬುತ್ತಿಯನ್ನು ವೇಗವಾಗಿ ಖಾಲಿಮಾಡಿ ಅಳಿದುಳಿದ ನೀರನ್ನು ಕುಡಿದು ಆನಂದದಿಂದ ಕೇಕೆ ಹಾಕುತ್ತಾ ಕೆಳಗಿಳಿಯತೊಡಗಿದೆವು. ಸಂಜೆ 5.30ಕ್ಕೆ ನಮ್ಮ ಹೋಮ್‌ಸ್ಟೇಯನ್ನು ತಲುಪಿ ಬಿಸಿ ಬಿಸಿಯಾದ ಕಾಫಿ ಕುಡಿದು ವಿಶ್ರಮಿಸಿಕೊಂಡೆವು. ರಾತ್ರಿ ರುಚಿಯಾದ ಪಾಯಸದೂಟವನ್ನು ಮಾಡಿ ನಿದ್ರಿಸಿದೆವು.

ಮಾರನೇ ದಿನ ಬೆಳಗಿನ ಕಾಫಿ ನಂತರ ನಾವು ಹೋಮ್‌ಸ್ಟೇ ಹತ್ತಿರದಲ್ಲಿದ್ದ ಸೋಮವತಿ ನದಿ ನೀರಿನಲ್ಲಿ ಸ್ನಾನ ಮಾಡಿ ಉಪಾಹಾರ ಸೇವಿಸಿ ಬೆಂಗಳೂರಿನೆಡೆಗೆ ಪ್ರಯಾಣ ಪ್ರಾರಂಭಿಸಿದೆವು. ನಮ್ಮ ಚಾರಣದ ಬೋನಸ್ ಎಂಬಂತೆ ಮಾರ್ಗದಲ್ಲಿ ಬೇಲೂರು, ಹಳೇಬೀಡು ದೇವಾಲಯಗಳನ್ನು ನೋಡಿ, ನಂತರ ಬೆಂಗಳೂರಿಗೆ ಹಿಂತಿರುಗಿದೆವು.

ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಕೋಟೆಬೆಟ್ಟದೆಡೆಗಿನ ಚಾರಣ

ನೀವು ಹಿಂದೊಮ್ಮೆ ಚಾರಣ ಮಾಡಿ ಆನಂದಿಸಿದ ಶಿಖರಕ್ಕೆ ಬೇರೊಂದು ಮಾರ್ಗದಲ್ಲಿ ನಿಮಗರಿವಿಲ್ಲದಂತೆ ಚಾರಣ ಮಾಡಿ ಅಲ್ಲಿಗೆ ಹೋದಮೇಲೆ, ಇಲ್ಲಿಗೆ ಈಗಾಗಲೇ ಒಮ್ಮೆ ಬಂದಿದ್ದೆನಲ್ಲ ಎಂದು ಆಶ್ಚರ್ಯಪಟ್ಟರೆ ಹೇಗೆ? ಬೇಸರವಾಗುವುದೇ! ಇಲ್ಲ ಸಂತಸವಾಗುವುದೇ ಅಥವಾ ಇದೇನಪ್ಪಾ ಇದು ಮೊದಲೇ ಗೊತ್ತಿದ್ದರೆ ಇಲ್ಲಿಗೆ ಬರದೇ ಬೇರೆಡೆಗೆ ಹೋಗಬಹುದಿತ್ತಲ್ಲ ಎನಿಸುವುದೇ! ನನ್ನ ಮಟ್ಟಿಗೆ ಇಲ್ಲಿಗೆ ಬಂದಿದ್ದು ಅತ್ಯಂತ ಸಂತಸವಾಯಿತು, ಏಕೆಂದರೆ ನಾನು ಎರಡನೇ ಬಾರಿ ಇಲ್ಲಿಗೆ ಬಂದ ಸಮಯವು ಬೇರೆಯಾಗಿತ್ತು. ಈ ಎರಡನೇ ಬಾರಿ ಚಾರಣವೇ ಕೋಟೆಬೆಟ್ಟದೆಡೆಗಿನ ಚಾರಣ. ಎರಡನೇ ಬಾರಿಯಾದರೂ ಈ ಬೆಟ್ಟ ಹತ್ತುವ ಮಾರ್ಗವು ಬೇರೆಯದೇ ಆಗಿತ್ತು ಹಾಗೂ ದೃಶ್ಯಗಳೂ ಕೂಡ ವೈವಿಧ್ಯಮಯವಾಗಿತ್ತು. ಈ ಬೆಟ್ಟದೆಡೆಗಿನ ಮೊದಲಬಾರಿಯ ಚಾರಣ YHAI ನಡೆಸಿಕೊಟ್ಟ ಆರು ದಿನಗಳ ಕೂರ್ಗ್ ನ್ಯಾಷನಲ್ ಚಾರಣದ ಒಂದು ಭಾಗವಾಗಿತ್ತು.

ಕೋಟೆಬೆಟ್ಟದ ಎರಡನೇ ಬಾರಿ ಚಾರಣ ನನಗೆ ಚಿರಪರಿಚಿತವಾದ ಮ್ಯಾಡ್‌ವೆಂಚರ್ ಸಂಸ್ಥೆಯೊಂದಿಗೆ ಹಾಗೂ ಇದು ಹಟ್ಟಿಹೊಳೆ ಬೇಸ್ ಕ್ಯಾಂಪಿನಿಂದ ಜೀಪಿನಲ್ಲಿ 8 ಕಿ.ಮೀ ದೂರದ ಕಠಿಣ ಮಾರ್ಗದಲ್ಲಿ ಪಯಣಿಸಿ ಚಾರಣ ಶುರುವಾಗುವ ಸ್ಥಳ ತಲುಪಿದೆ. ಇಲ್ಲಿಂದ ದಟ್ಟವಾದ ಕಾಡಿನ ಮಾರ್ಗದಲ್ಲಿ ಹಾಗೂ ಕಾಫಿತೋಟ, ಭೋರ್ಗರೆದು ಹರಿಯುತ್ತಿರುವ ತೊರೆಗಳನ್ನು ನೋಡುತ್ತಾ 3 ಕಿ.ಮೀ ಚಾರಣ ಮಾಡಿದೆವು.

ಮತ್ತಷ್ಟು ದೂರ ನಡೆದ ಮೇಲೆ ಕೂರ್ಗ್ ಕಣಿವೆಯ ಪ್ರಥಮ ದೃಶ್ಯ ಕಾಣಿಸಿತು. ಇಲ್ಲಿಂದ ಒಂದೆಡೆ ದಟ್ಟ ಹಸಿರು ಪ್ರಕೃತಿಯಿಂದ ಕೂಡಿದ ಮಂಡಾಲಪಟ್ಟಿ ಮತ್ತು ಮತ್ತೊಂದು ಕಡೆ ಮೇಲ್ಗಡೆಯಲ್ಲಿ ಸುಂದರವಾದ ಹಸಿರು ಹುಲ್ಲುಗಾವಲನ್ನು ನೋಡಿದೆ.

ಮುಂದುವರಿದಂತೆ ಮತ್ತೆ ದಟ್ಟವಾದ ಕಾಡನ್ನು ಪ್ರವೇಶಿಸಿದೆವು. ಕಾಡಿನೊಳಗೆ ಪಕ್ಷಿಗಳ ಕಲರವ ಹಾಗೂ ಜೀರುಂಡೆಯ ಸದ್ದು ನಮ್ಮೊಂದಿಗೇ ಪಯಣಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಸ್ವಲ್ಪ ದೂರ ಹೋಗುತ್ತಿದ್ದಂತೆ ಮಾರ್ಗದರ್ಶಿ ನಮ್ಮನ್ನು ಎಡಕ್ಕೆ ತಿರುಗುವಂತೆ ಸೂಚಿಸಿದರು. ಅಲ್ಲಿಂದ ಅರ್ಧ ಕಿ.ಮೀ ನಡೆದ ನಂತರ ಕೋಟೆಬೆಟ್ಟದೆಡೆಗಿನ ಕಲ್ಲು ಮುಳ್ಳುಗಳ ಹಾದಿ ಪ್ರಾರಂಭವಾಯಿತು ಹಾಗೂ ಸುಡು ಬಿಸಿಲಿನ ಬೇಗೆ ನಮ್ಮನ್ನು ಸುಸ್ತುಮಾಡತೊಡಗಿತು. ಈ ಮಾರ್ಗದಲ್ಲಿ ಮಾರ್ಗದರ್ಶಿಯ ಸಹಾಯವು ಬೇಕೇ ಬೇಕು. ಏಕೆಂದರೆ ಇಲ್ಲಿಯ ಅನೇಕ ಮಾರ್ಗಗಳು ನಮ್ಮನ್ನು ಗಲಿಬಿಲಿಗೊಳಿಸುವುದು. ಮುಂದುವರೆದು ನಾವು ಒಂದು ದಿಬ್ಬವನ್ನು ಹತ್ತಿದೆವು. ಅಲ್ಲಿಂದ ಒಂದೆಡೆ ಆಳವಾದ ಪ್ರದೇಶದಲ್ಲಿ ಕೊರಕಲು ಇರುವ ದೃಶ್ಯ ಕಂಡಿತು. ಕೋಟೆಬೆಟ್ಟದೆಡೆಗೆ ಮುಖ ಮಾಡಿಕೊಂಡು ನಿಂತಾಗ ನಮ್ಮ ಎಡಕ್ಕೆ ಉಸಿರುಗಟ್ಟಿಸುವ ಸೌಂದರ್ಯ ಚೆಲ್ಲುವ ಮಂಡಾಲಪಟ್ಟಿಯನ್ನು ನೋಡಿದೆವು. ಹಾಗೂ ಅದರೊಂದಿಗೇ ಸೋಮವಾರ ಪೇಟೆ ಮತ್ತು ಹಾರಂಗಿ ಅಣೆಕಟ್ಟಿನಲ್ಲಿರುವ ನೀಲಿ ನೀರನ್ನೂ ನೋಡುವ ಅವಕಾಶ ಒದಗಿತು.

ದಿಬ್ಬದ ಮೇಲೆ ನಡೆದು ಪ್ರತಿಧ್ವನಿಸುವ ಕಣಿವೆ (Echo Valley) ತಲುಪಿದೆವು. ಇಲ್ಲಿ ನಾವು ಜೋರಾಗಿ ಕೂಗಿ ನಮ್ಮ ಧ್ವನಿ-ಪ್ರತಿಧ್ವನಿ ಕೇಳಿ ಆನಂದಿಸಿದೆವು.

Echo Valleyಯಿಂದ ಮುಂದೆ ಹೋಗಿ ನಾವು ಕೋಟೆಬೆಟ್ಟದ ಮಹಾದ್ವಾರವನ್ನು ತಲುಪಿದೆವು. ಮಹಾದ್ವಾರವೆಂದರೆ ಇದು ಅಲ್ಲಿನ ಶಿವ ಮಂದಿರವನ್ನು ಪ್ರವೇಶಿಸುವ ಬಾಗಿಲು. ಕೋಟೆಬೆಟ್ಟದ ಬುಡದಲ್ಲಿ ಶಿವನ ಮಂದಿರವಿರುವುದು. ಇಲ್ಲಿನ ಪ್ರಕೃತಿ ಮಾತೆಯ ದೃಶ್ಯಗಳು ನಮ್ಮ ಕಣ್ಣುಗಳನ್ನು ತೃಪ್ತಿಪಡಿಸಿದವು. ಶಿವ ಮಂದಿರದ ಸುತ್ತಲೂ ನಾನು ನಿಧಾನವಾಗಿ ನಡೆದು ಈ ಹಿಂದೆ ಇಲ್ಲಿಗೆ ಬಂದಿದ್ದ ಸಮಯ ನೆನಪಿಸಿಕೊಂಡು ಅದನ್ನು ನನ್ನೊಂದಿಗಿದ್ದ ಚಾರಣ ಸ್ನೇಹಿತರಿಗೆ ವಿವರಿಸಿದೆ. ಶಿವ ಮಂದಿರದ ಬಳಿ ಎರಡು ನೀರಿನ ಹೊಂಡಗಳಿದ್ದವು. ಅದರಲ್ಲಿ ಒಂದರ ನೀರನ್ನು ಪೂಜೆಗೆ ಉಪಯೋಗಿಸಿದರೆ ಮತ್ತೊಂದರ ನೀರನ್ನು ನಾವುಗಳು ಕೈಕಾಲು ಮುಖ ತೊಳೆಯಲು ಹಾಗೂ ಕುಡಿಯಲು ಉಪಯೋಗಿಸಬಹುದು.

ಇಲ್ಲಿಂದ ಹುಲ್ಲುಗಾವಲಿನ ಹಾದಿಯಲ್ಲಿ ಹತ್ತು ನಿಮಿಷ ನಡೆದ ನಂತರ ನಾವು ಕೋಟೆಬೆಟ್ಟದ ಶಿಖರ ತಲುಪಿದೆವು. ದೂರದಲ್ಲಿ ಭೂಮಿ ಗಗನಕ್ಕೆ ಮುತ್ತಿಡುತ್ತಿರುವುದನ್ನು ನೋಡಿ ಆನಂದಿಸಿದೆವು. ಇಲ್ಲೇ ಕುಳಿತು ನಮ್ಮೊಂದಿಗೆ ತಂದಿದ್ದ ಊಟದ ಬುತ್ತಿಯನ್ನು ಖಾಲಿಮಾಡಿ ಸ್ವಲ್ಪ ಹೊತ್ತಿನ ವಿಶ್ರಾಂತಿಯ ನಂತರ ಎಲ್ಲರೂ ನಿಧಾನವಾಗಿ ಬೆಟ್ಟ ಇಳಿಯತೊಡಗಿದೆವು. ಹತ್ತುವಾಗ ಇರುವ

ಆತಂಕ, ನಿರೀಕ್ಷೆಗಳು ಇಳಿಯುವಾಗ ಇರುವುದಿಲ್ಲವೇಕೆಂದರೆ, ಬೆಟ್ಟ ಹತ್ತಿ ನಮ್ಮ ಗುರಿ ತಲುಪಿದ ತೃಪ್ತಿ ಹಾಗೂ ಸಾರ್ಥಕತೆ ನಮ್ಮಲ್ಲಿ ಮನೆಮಾಡಿಕೊಂಡಿರುತ್ತವೆ. ಇದೇ ಕಾರಣಕ್ಕೆ ಇಳಿಯುವ ಸಮಯವು ಹತ್ತುವ ಸಮಯಕ್ಕಿಂತ ಕಡಿಮೆ ಇರುತ್ತದೆಂದು ನನ್ನ ಭಾವನೆ. ಎಲ್ಲ ಚಾರಣಗಳಂತೆ ಮುಂದಿನ ಕಾರ್ಯಕ್ರಮಗಳು ತಂತಾನೇ ನಡೆದು, ರಾತ್ರಿ ಕಳೆದು ಮರುದಿನ ನಮ್ಮ ಮರುಪ್ರಯಾಣದಲ್ಲಿ 40 ಕಿ.ಮೀ ದೂರದಲ್ಲಿರುವ ಮುಲ್ಲಲ್ಲಿ ಜಲಪಾತದೆಡೆಗೆ ಹೋಗಿ ಅಲ್ಲಿ ಕೆಲವು ಗಂಟೆ ಕಳೆದು, ಮಧ್ಯಾಹ್ನದ ಊಟವನ್ನು ಮುಗಿಸಿ ಬೆಂಗಳೂರಿಗೆ ಮರಳಿದೆವು.

ಉಸಿರುಗಟ್ಟಿಸುವ
ಯಲ್ಲಾಪುರ – ಯಾಣದೆಡೆಗಿನ ಚಾರಣ

ಒಮ್ಮೊಮ್ಮೆ ನಾವು ಮಾಡುವ ಚಾರಣಗಳು ಎಷ್ಟು ನಿಗೂಢವಾಗಿರುತ್ತದೆಂದರೆ ಅದನ್ನು ನಡೆಸಿಕೊಡುವವರಿಗೂ ಮತ್ತೊಮ್ಮೆ ನಡೆಸಲು ಸಾಧ್ಯವಾಗದೇ ಇರಬಹುದು. ಕೆಲವು ವರ್ಷಗಳ ನಂತರ, ಅಂತಹ ಚಾರಣಗಳ ಬಗ್ಗೆ ಯಾವುದೇ ಮಾಹಿತಿ ಸಹ ದೊರಕದೆ ಇರಬಹುದು. ಏಕೆ ಹೀಗೆ ಎಂದು ಯೋಚಿಸಿದರೆ ನನಗನಿಸುವ ಕೆಲವು ಕಾರಣಗಳೆಂದರೆ:

ದುರ್ಗಮವಾದ ಮಾರ್ಗ; ಅನನುಕೂಲದ ಕ್ಯಾಂಪ್‌ಗಳು; ಚಾರಣದ ದೂರ ದೀರ್ಘವಾಗಿದ್ದು ಚಾರಣಿಗರು ಚಾರಣ ಮಾಡಲು ನಿರಾಸಕ್ತಿ.

ಇಂತಹ ಒಂದು ರೋಮಾಂಚಕಾರಿ ಚಾರಣವನ್ನು YHAI ಸಂಸ್ಥೆಯ ಮೈಸೂರು ಶಾಖೆಯು (ಗಂಗೋತ್ರಿ ಶಾಖೆ) 2014 ಡಿಸೆಂಬರ್ ತಿಂಗಳಿನಲ್ಲಿ ಆಯೋಜಿಸಿತ್ತು. ಅದೇ ಪಶ್ಚಿಮ ಘಟ್ಟಗಳಲ್ಲಿನ ಚಾರಣ ಕಾರ್ಯಕ್ರಮ – ಯಲ್ಲಾಪುರ – ಯಾಣ ಚಾರಣ. ಈ ಚಾರಣ 4 ರಾತ್ರಿ 5 ದಿನಗಳ ಸುಮಾರು 66 ಕಿ.ಮೀ ಉದ್ದದ್ದು. ಈ ಚಾರಣವನ್ನು 5 ಗುಂಪುಗಳಾಗಿ ದಿನವೂ ಒಂದು ಬ್ಯಾಚ್ ಚಾರಣ ಮಾಡುವಂತೆ YHAI ಸಂಸ್ಥೆ, ಮೈಸೂರು ಶಾಖೆ (ಗಂಗೋತ್ರಿ ಶಾಖೆ) ಆಯೋಜಿಸಿತ್ತು. ನಾನು ಎರಡನೇ ಬ್ಯಾಚ್‌ಗೆ (8/12/2014 ರಿಂದ 12/12/2014) ರಿಜಿಸ್ಟರ್ ಮಾಡಿಕೊಂಡಿದ್ದೆ. ನಮ್ಮ ಬ್ಯಾಚ್‌ನಲ್ಲಿ 16 ಚಾರಣಿಗರಿದ್ದರು.

ಚಾರಣದ ಬೇಸ್ ಕ್ಯಾಂಪ್ ಶೀಗೇಕೆರಿ ಎಂಬ ಸಣ್ಣ ಹಳ್ಳಿ. ಇಲ್ಲಿಗೆ ಬೆಂಗಳೂರಿನಿಂದ ಯಲ್ಲಾಪುರದವರೆಗೂ ರಾತ್ರಿ ಬಸ್ಸಿನಲ್ಲಿ ಪ್ರಯಾಣಮಾಡಿ ನಂತರ ಅಲ್ಲಿಂದ ಬರೆ ಹಳ್ಳಿಗೆ ಮತ್ತೊಂದು ಬಸ್ಸಿನಲ್ಲಿ ಪಯಣಿಸಿ ಅಲ್ಲಿಂದ 3 ಕಿ.ಮೀ ನಡೆದು ಅಲ್ಲಿನ

ಸರಕಾರಿ ಪ್ರೈಮರಿ ಶಾಲೆಗೆ ಹೋಗಬೇಕು. ಬೆಂಗಳೂರಿನ ಚಾರಣಿಗರಿಗೆ ಈ ಬೇಸ್ ಕ್ಯಾಂಪ್, ಎಂದೂ ಕೇಳದೇ ಇರುವ ಸ್ಥಳ, ಆದರೆ ಅಲ್ಲಿನ ಪ್ರಕೃತಿ ಸೌಂದರ್ಯ ವರ್ಣಿಸಲಸದಳವಾದದ್ದು.

ಬೇಸ್ ಕ್ಯಾಂಪ್‌ನಿಂದ ಚಾರಣವು ಹೀಗಿತ್ತು

ಮೊದಲ ದಿನ – ಶೀಗೇಕೆರಿ ಬೇಸ್ ಕ್ಯಾಂಪಿಗೆ ಮಧ್ಯಾಹ್ನ 2 ಗಂಟೆಯೊಳಗೆ ಬರಬೇಕು. ಮಧ್ಯಾಹ್ನದ ಊಟದ ನಂತರ ಸೂರ್ಯಕಲ್ಯಾಣಿ ಗುಡ್ಡದೆಡೆಗೆ ಚಾರಣ ಮಾಡಿ ಸೂರ್ಯಾಸ್ತವನ್ನು ವೀಕ್ಷಿಸಿ ಮರಳಿ ಬೇಸ್ ಕ್ಯಾಂಪಿಗೆ ಬರುವುದು – 8 ಕಿ.ಮೀ ಚಾರಣ.

ಎರಡನೇ ದಿನ – ಶೀಗೇಕೆರಿಯಿಂದ ಕರಿಕಲ್ (ಹಿಲ್ಲೂರು) ಕ್ಯಾಂಪಿನೆಡೆಗೆ 18 ಕಿ.ಮೀ ಚಾರಣ

ಮೂರನೇ ದಿನ – ಕರಿಕಲ್ ಕ್ಯಾಂಪಿನಿಂದ ಮೋತಿಗುಡ್ಡ ಕ್ಯಾಂಪಿಗೆ 20 ಕಿ.ಮೀ ಚಾರಣ

ನಾಲ್ಕನೇ ದಿನ – ಮೋತಿಗುಡ್ಡ ಕ್ಯಾಂಪಿನಿಂದ ವಿಭೂತಿ ಜಲಪಾತದ ಮಾರ್ಗವಾಗಿ ಯಾಣ ಕ್ಯಾಂಪಿಗೆ 20 ಕಿ.ಮೀ ಚಾರಣ.

ಐದನೇ ದಿನ: ಬೆಳಗಿನ ಉಪಾಹಾರದ ನಂತರ ಎಲ್ಲರೂ ತಮ್ಮ ಊರಿಗೆ ಮರಳುವುದು.

ಒಟ್ಟು ಚಾರಣದ ಹಾದಿ 66 ಕಿ.ಮೀ (4 ದಿನಗಳಲ್ಲಿ)

ಈ ಚಾರಣದ ವೈಶಿಷ್ಟ್ಯವೆಂದರೆ ಐದೂ ದಿನಗಳು, ವಸತಿ ವಾಸದ ಮನೆಗಳಲ್ಲಿ ಹಾಗೂ ಊಟ ತಿಂಡಿಗಳನ್ನು ಆಯಾ ಮನೆಯಲ್ಲಿನ ಮಹಿಳೆಯರೇ ತಯಾರಿಸುತ್ತಿದ್ದರು. ಇಷ್ಟೇ ಅಲ್ಲದೇ ಊಟ ತಿಂಡಿಗಳು ಸಂಪೂರ್ಣವಾಗಿ ಶಾಖಾಹಾರಿಯಾಗಿದ್ದು ಉತ್ತರ ಕನ್ನಡ ಜಿಲ್ಲೆಯ ವಿಶೇಷ ತಿನಿಸುಗಳಾಗಿದ್ದು ಚಾರಣಿಗರ ನಾಲಗೆಗೆ ಅತ್ಯಂತ ರುಚಿಕರವಾಗಿತ್ತು. ಅವರುಗಳು ತಯಾರಿಸಿದ್ದ ಉತ್ತರ ಕನ್ನಡದ ವಿಶೇಷ ಆಹಾರಗಳೆಂದರೆ:

ತೆಳ್ಳೇವು (ಹಗುರವಾದ ದೋಸೆ) , ತೊಡೆದೇವ್ (ಅತ್ಯಂತ ತೆಳುವಾದ ಒಂದು ಸಿಹಿ ತಿಂಡಿ), ಮೇಲೋಗರ, ಬಾಳೆಹಣ್ಣು ಶಾವಿಗೆ, ಸೌತೆಕಾಯಿ ಒಡಪ್ಪೆ, ಹೋಳಿಗೆ, ಅಪ್ಪೆಹುಳಿ, ಜೆನ್ನೆ (ಅರಿಶಿನ / ಮಸಾಲ ಎಲೆಯಲ್ಲಿ ಬೇಯಿಸಿದ ಸಿಹಿತಿಂಡಿ), ಹಲಸಿನ ಕಾಯಿ ಹುಳಿ, ತಂಬುಳಿ, ವಿವಿಧ ರೀತಿಯ ಗೊಜ್ಜುಗಳು

ಈ ರೀತಿಯ ಆಹಾರ ನನ್ನ ಚಾರಣ ಜೀವನದಲ್ಲಿ ಬೇರೆಲ್ಲೂ ತಿಂದಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

ಮೊದಲ ದಿನ ನಾವು ಸರಕಾರಿ ಶಾಲೆ ತಲುಪಿದಾಗ ನಾವು ಶಾಲೆಯ ಒಂದು ದೊಡ್ಡದಾದ ಹಾಲ್‌ನಲ್ಲೇ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ಪ್ರತಿಯೊಬ್ಬರಿಗೂ ಪ್ರತ್ಯೇಕವಾದ ಹಾಸಿಗೆ, ಹೊದಿಕೆ ಹಾಗೂ ದಿಂಬುಗಳನ್ನು ಕೊಟ್ಟಿದ್ದರು. ಬೇಸ್ ಕ್ಯಾಂಪಿನ ನಾಯಕರು ಆ ಶಾಲೆಯ ಹೆಡ್‌ಮಾಸ್ಟರ್ ಅವರೇ. ಅಡಿಗೆ ಮಾಡಲು ಅವರ ಹಾಗೂ ಹಳ್ಳಿಯ ಉಳಿದ ಮನೆಯವರ ಹೆಂಗಸರು ಸ್ವಯಂಪ್ರೇರಣೆಯಿಂದ ಬಂದು ತಯಾರು ಮಾಡಿದ್ದಲ್ಲದೆ ಎಲ್ಲರಿಗೂ ಯಾವ ಭೇದವಿಲ್ಲದೇ ಬಹಳ ಪ್ರೀತಿಯಿಂದ ಬಡಿಸಿದರು. ಅಲ್ಲದೇ ಮಧ್ಯಾಹ್ನ ತಮ್ಮ ಊಟವಾದ ನಂತರ ನಮ್ಮೊಂದಿಗೆ ಸೂರ್ಯಕಲ್ಯಾಣಿ ಗುಡ್ಡಕ್ಕೆ ಬಂದು ಸೂರ್ಯಾಸ್ತಮಾನವನ್ನು ವೀಕ್ಷಿಸಿ ಸಂತಸ ಪಟ್ಟರು. ಮಾರನೇ ದಿನ ಮುಂಜಾನೆ ಬೇಗನೆ ಎದ್ದು ನಮಗೆಲ್ಲರಿಗೂ ಚಹಾ, ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟಕ್ಕೆ ಬುತ್ತಿಯನ್ನು ತಯಾರಿಸಿಕೊಟ್ಟದ್ದಲ್ಲದೆ ನಮ್ಮೆಲ್ಲರನ್ನೂ ಪ್ರೀತಿಯಿಂದ ಬೀಳ್ಕೊಟ್ಟರು. ಈ ರೀತಿಯ ನಿಃಸ್ವಾರ್ಥ ಕಾರ್ಯ ನಾನು ಬೇರೆಲ್ಲೂ ಕಂಡಿಲ್ಲ.

ನಮ್ಮ ಎರಡನೇ ದಿನ ಶೀಗೇಕೆರಿಯಿಂದ ಕರಿಕಲ್ ಕ್ಯಾಂಪಿನೆಡೆಗೆ ಚಾರಣ ಪ್ರಾರಂಭವಾಗಿ ಸುಮಾರು 2 ಗಂಟೆ ಚಾರಣ ಮಾಡಿದ ನಂತರ ಒಂದೆಡೆ ವಿಶ್ರಾಂತಿಗಾಗಿ ಕುಳಿತಿದ್ದಾಗ ಒಬ್ಬ ಮಧ್ಯವಯಸ್ಸಿನ ಮಹಿಳಾ ಚಾರಿಣಿ (ಬಹುಶಃ ಶಾರೀರಿಕ ತಯಾರಿಯನ್ನು ಸರಿಯಾಗಿ ಮಾಡಿಕೊಂಡಿರದಿದ್ದರಿಂದ) ಚಾರಣ ಮುಂದುವರೆಸಲು ಅಸಾಧ್ಯವಾಗಿ ಅವಳು ಅಲ್ಲಿಂದಲೇ ಒಂದು ಟ್ಯಾಕ್ಸಿಯಲ್ಲಿ ನೇರವಾಗಿ ಯಾಣ ಕ್ಯಾಂಪಿಗೆ ಹೊರಟೇ ಹೋದರು. ನಮಗೆಲ್ಲರಿಗೂ ಆಶ್ಚರ್ಯವಾಯಿತು.

ನಮ್ಮ ಚಾರಣ ಮುಂದುವರೆಸಿ ಮತ್ತೆರಡು ಗಂಟೆ ಚಾರಣ ಮಾಡಿದಮೇಲೆ ಮಧ್ಯಾಹ್ನದ ಊಟ ಒಂದು ಮರದ ನೆರಳಿನಲ್ಲಿ ಕುಳಿತು ಮುಗಿಸಿದೆವು. ನಂತರ ನಾನು ನನ್ನ ಬಳಿ ಕುಳಿತಿದ್ದ ಒಬ್ಬ ಮಹಿಳಾ ಚಾರಣಿಗರೊಂದಿಗೆ ಮಾತನಾಡತೊಡಗಿದೆ. ನಾನು ಅವರಿಂದ ಅವರು ಒಬ್ಬ ಆಯುರ್ವೇದ ವೈದ್ಯರೆಂದೂ ಅರಿತೆ. ಹೀಗೆ ಮಾತನಾಡುತ್ತಾ ಹವ್ಯಾಸಗಳ ಬಗ್ಗೆ ಮಾತು ಬಂತು. ಅವರು ತಮ್ಮ ವಿಶೇಷ ಹವ್ಯಾಸವೆಂದರೆ ನಾಯಿಗಳನ್ನು ಸಾಕುವುದು ಎಂದು ತಿಳಿಸಿದರು. ಮುಂದುವರೆದು ಅವರು ತಾವು 9 ನಾಯಿಗಳನ್ನು ಮನೆಯಲ್ಲಿ ಸಾಕುತ್ತಿರುವುದಾಗಿಯೂ ಹಾಗೂ ಅವುಗಳನ್ನು ತಮ್ಮ ಮಕ್ಕಳಿಗಿಂತ ಅಧಿಕವಾಗಿ ಪ್ರೀತಿಸಿವುದಾಗಿಯೂ ಅಲ್ಲದೇ ತಾವು ಮಲಗುವಾಗ ಎಲ್ಲ ನಾಯಿಗಳೂ ತಮ್ಮ ಹಾಸಿಗೆಯ ಬಳಿಯೇ ಮಲಗುತ್ತವೆ ಎಂದು ತಿಳಿಸಿದರು. ಅವರ ಶ್ವಾನಪ್ರೇಮವನ್ನು ಕಂಡು ನಾನು ತಲೆದೂಗಿದೆ. ಎರಡನೇ ದಿನದ ಚಾರಣ ಬಹುತೇಕ ಸಾಮಾನ್ಯ ರಸ್ತೆಯಲ್ಲಿದ್ದು ಸಮತಟ್ಟಾದ ಹಾದಿಯಿಂದ ಕೂಡಿತ್ತು.

ಮೂರನೇ ದಿನದ ಚಾರಣವು ಕರಿಕಲ್ ಕ್ಯಾಂಪಿನಿಂದ 20 ಕಿ.ಮೀ ದೂರದ ಮೋತಿಗುಡ್ಡ ಕ್ಯಾಂಪಿನೆಡೆಗೆ. ಮುಂಜಾನೆ 8 ಗಂಟೆಗೆ ನಮ್ಮ ಚಾರಣ ಪ್ರಾರಂಭವಾಗಿ ಸುಂದರವಾದ ವಾತಾವರಣದಲ್ಲಿ ಮುಂದುವರೆಯಿತು. ಚಾರಣ ಮಾರ್ಗ ಸಮತಟ್ಟಾದ ಹಳ್ಳಿಯ ರಸ್ತೆಯಲ್ಲೇ ಸಾಗುತ್ತಿದ್ದು ಮಧ್ಯಾಹ್ನ 12ರ ಹೊತ್ತಿಗೆ ನಾವುಗಳೆಲ್ಲರೂ ಸುಸ್ತಾಗಿ ಕುಳಿತುಕೊಳ್ಳೋಣವೆಂದರೆ ಸೂಕ್ತ ಜಾಗವು ಸಿಗಲಿಲ್ಲ. ಹಾಗೇ ಮತ್ತಷ್ಟು ದೂರ ನಡೆದಮೇಲೆ ನಮಗೆ ಒಂದು ತೋಟವು ಎದುರಾಯಿತು. ನಾನು ಮುಂದೆ ಹೋಗುತ್ತಾ ಎಲ್ಲರನ್ನೂ ಬನ್ನಿ ಎಂದು ಕರೆದು ತೋಟದ ಬೇಲಿಯಲ್ಲಿರುವ ಕಟ್ಟಿಗೆಯ ಬಾಗಿಲನ್ನು ತೆರೆದುಕೊಂಡು ತೋಟದೊಳಗೆ ಹೋದೆ. ಅಲ್ಲಿ ನಮಗೆ ಒಬ್ಬ ಮಹಿಳೆ ಎದುರಾದರು. ಅವರಿಗೆ ನಮ್ಮ ಪರಿಚಯವನ್ನು ಹೇಳಿಕೊಂಡು ಕುಡಿಯಲು ಏನಾದರೂ ಸಿಗುವುದೇ ಎಂದು ಕೇಳಿದೆ. ಆಕೆಗೆ ನಮ್ಮನ್ನು ಕಂಡು ಆಶ್ಚರ್ಯವಾಯಿತು. ಅವರಿಗೆ ನಗರದ ಜನಗಳು ಇಂತಹ ನಿರ್ಜನ ಪ್ರದೇಶಕ್ಕೆ ಕಾಲ್ನಡಿಗೆಯಲ್ಲಿ ಬರುತ್ತಿರುವುದು ಸಂತೋಷ ಹಾಗೂ ಆಶ್ಚರ್ಯವಾಗಿರಬೇಕು ಹಾಗೂ ಅವರ ಮನದಲ್ಲಿ ಅತಿಥಿಸತ್ಕಾರದ ಭಾವನೆ ಉಂಟಾಗಿ ನನ್ನಲ್ಲಿ ಎಳನೀರು ಕುಡಿಯುವಿರಾ ಎಂದು ಪ್ರಶ್ನಿಸಿದರು. ನಾನು ಕೂಡಲೇ ಸಮ್ಮತಿಸಿದೆ. ಕೂಡಲೇ ಅವರು ತಮ್ಮ ತೋಟದ ಕೆಲಸಗಾರನನ್ನು ಕರೆದು ಎಲ್ಲರಿಗೂ ಎಳನೀರನ್ನು ಮರದಿಂದ ಕಿತ್ತು ಕೊಡಲು ತಿಳಿಸಿದರು. ನಾವೆಲ್ಲರೂ ಎಳನೀರನ್ನು ಕುಡಿದು ಧನ್ಯವಾದ ಅರ್ಪಿಸುತ್ತಾ ಅವರಿಗೆ ಹಣವನ್ನು ಕೊಡಲು ಮುಂದಾದಾಗ ಅವರು ಅದನ್ನು ಸ್ವೀಕರಿಸಲು ಒಪ್ಪದೇ ನಾವು ಅವರಲ್ಲಿಗೆ ಬಂದಿದ್ದೆ ತಮ್ಮ ಭಾಗ್ಯವೆಂದು ಭಾವಿಸುವುದಾಗಿ ತಿಳಿಸಿದರು. ಅವರ ಅತಿಥಿ ಸತ್ಕಾರವನ್ನು ಕಂಡು ನಮ್ಮ ಕಣ್ಣುಗಳು ಒದ್ದೆಯಾದವು. ನಂತರ ಅಲ್ಲಿಂದ ನಮ್ಮ ಚಾರಣ ಮುಂದುವರೆಸಿದೆವು. ಮೋತಿಗುಡ್ಡ ಕ್ಯಾಂಪ್ ಒಂದು ದೊಡ್ಡ ತೋಟದ ಮನೆಯಲ್ಲಿತ್ತು. ತೋಟ ಪ್ರವೇಶಿಸುತ್ತಿದ್ದಂತೆ ಎರಡೂ ಕಡೆಗಳಲ್ಲಿ ದಟ್ಟವಾದ ತೆಂಗು, ಬಾಳೆಗಿಡಗಳಿದ್ದು ನಡುವೆ ದಾಸವಾಳ ಹೂವಿನ ಗಿಡಗಳಿದ್ದವು. ತೋಟದ ಮನೆ ಪ್ರವೇಶಿಸುತ್ತಿದ್ದಂತೆ ಸುಮಾರು 20 ಜನರು ಮಲಗಬಹುದಾದ ವಿಶಾಲವಾದ ಒಂದು ವರಾಂಡ, ಅಲ್ಲಿಂದ ಒಳಗೆ ಹೋದರೆ ಅಷ್ಟೇ ದೊಡ್ಡದಾದ ಹಜಾರ ಹಾಗೂ ಸುತ್ತಲೂ ನಾಲ್ಕು ಕೋಣೆಗಳಿದ್ದು ಮತ್ತಷ್ಟು ಒಳಗೆ ಹೋದರೆ ಅಡಿಗೆ ಮನೆ, ಬಚ್ಚಲುಮನೆ ಇದ್ದು ಹಿತ್ತಲಿನಲ್ಲಿಯೂ ವಿಶಾಲವಾದ ತೋಟವಿತ್ತು. ಪಡಸಾಲೆಯ ಮುಂದಿರುವ ತೋಟದ ಒಂದು ಕಡೆ ಏಳಡಿ ಎತ್ತರದಲ್ಲಿ ಉದ್ದಕ್ಕೂ ನೀರಿನ ಪೈಪುಗಳನ್ನು ಅಳವಡಿಸಿ ಅಲ್ಲಲ್ಲಿ ದೊಡ್ಡ ನಲ್ಲಿಗಳನ್ನು ಇರಿಸಿದ್ದರು. ಸ್ವಲ್ಪ ದೂರದಲ್ಲಿ , ಉದ್ದಕ್ಕೂ ಶೌಚಾಲಯಗಳಿದ್ದವು.

ನಾವು ತೋಟದ ಮನೆ ಪ್ರವೇಶಿಸುತ್ತಿದ್ದಂತೆ ಮನೆಯ ಮಾಲೀಕರಾದ ರಾಮಚಂದ್ರ ಭಟ್ಟರು ನಮ್ಮೆಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು. ಮಹಿಳಾ ಚಾರಣಿಗರಿಗೆ ಒಳಗಿನ ಕೋಣೆಯಲ್ಲಿ ವಾಸ್ತವ್ಯ ಮಾಡಿಕೊಟ್ಟರು. ನಾವೆಲ್ಲರೂ ಪಡಸಾಲೆಯಲ್ಲಿ ನಮ್ಮ ಬ್ಯಾಗ್‌ಗಳನ್ನು ಇಟ್ಟುಕೊಂಡು ಅಲ್ಲೇ ಆರಾಮವಾಗಿ ಕುಳಿತೆವು. ಸ್ವಲ್ಪ ಹೊತ್ತಿಗೆ ಭಟ್ಟರೇ ಎಲ್ಲರಿಗೂ ತಂಪು ಪಾನೀಯವನ್ನು ನೀಡಿದರು. ಸ್ವಲ್ಪ ವಿಶ್ರಾಂತಿಯ ನಂತರ ನಾವೆಲ್ಲರೂ ಕೊಳವೆಗಳ ಮೂಲಕ ಜೋರಾಗಿ ಹರಿಯುತ್ತಿದ್ದ ತಣ್ಣೀರಿನಲ್ಲಿ ಸ್ನಾನಮಾಡಿ ಆಯಾಸ ಪರಿಹರಿಸಿಕೊಂಡೆವು. ಅನಂತರ ನಾನು ಭಟ್ಟರೊಂದಿಗೆ ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಾ ಉತ್ತರಭಾರತದ ತೀರ್ಥ ಕ್ಷೇತ್ರಗಳ ಬಗ್ಗೆ ಹಾಗೂ ಕೈಲಾಸ-ಮಾನಸರೋವರಗಳ ಬಗ್ಗೆ ವಿವರಿಸುತ್ತಾ ಒಮ್ಮೆಯಾದರೂ ಅಲ್ಲಿನ ತೀರ್ಥಕ್ಷೇತ್ರಗಳಿಗೆ ಭೇಟಿಕೊಡುವಂತೆ ಅವರನ್ನು ಹುರಿದುಂಬಿಸಿದೆ. ರಾತ್ರಿ ಭೋಜನವು ಉತ್ತರ ಕನ್ನಡದ ವಿಶೇಷ ಖಾದ್ಯಗಳಿಂದ ಕೂಡಿದ್ದು ಅತ್ಯಂತ ರುಚಿಕರವಾಗಿತ್ತು. ಊಟದ ನಂತರ ನಾನು ಹಾಗೂ ಕೆಲವರು ತೋಟದಿಂದ ಹೊರಗೆ ಸ್ವಲ್ಪಹೊತ್ತು ಸುತ್ತಾಡಿ ಬಂದೆವು. ನಂತರ ಎಲ್ಲರೂ ಪಡಸಾಲೆಯಲ್ಲೇ ಮಲಗಿ ನಿದ್ರಿಸಿದೆವು.

ನಾಲ್ಕನೇ ದಿನದ ಚಾರಣವು ಮೋತಿಗುಡ್ಡದಿಂದ ವಿಭೂತಿ ಜಲಪಾತದ ಮಾರ್ಗವಾಗಿ 20 ಕಿ.ಮೀ ದೂರದ ಯಾಣವನ್ನು ತಲಪುವುದು. ಚಾರಣ ಮಾರ್ಗದ ಬಗ್ಗೆ ನಮಗೆ ಅಷ್ಟೇನೂ ಸ್ಪಷ್ಟತೆ ಇರಲಿಲ್ಲ. ಯಥಾ ಪ್ರಕಾರ ಮುಂಜಾನೆ ಉಪಾಹಾರದ ನಂತರ ಎಲ್ಲರೂ ಚಾರಣವನ್ನು ಮುಂಜಾನೆ 8 ಗಂಟೆಗೆ ಪ್ರಾರಂಭಿಸಿದೆವು. ನಾಲ್ಕು ಗಂಟೆ ಚಾರಣ ಮಾಡಿದ ಮೇಲೆ ವಿಭೂತಿ ಜಲಪಾತದ ಬಳಿಗೆ ಬಂದೆವು. ಜಲಪಾತದಲ್ಲಿ ವರ್ಷಪೂರ್ತಿ ನೀರಿದ್ದರೂ ಮಳೆಗಾಲ ಹಾಗೂ ಮಳೆಗಾಲದ ನಂತರದ ದಿನಗಳಲ್ಲಿ ಮಾತ್ರ ನೀರು ಹೆಚ್ಚಾಗಿರುವುದು. ಜಲಪಾತದಲ್ಲಿ ಎರಡು ಹಂತಗಳಲ್ಲಿ ನೀರು ಧುಮುಕುತ್ತದೆ. ಜಲಪಾತದ ಬುಡದಲ್ಲಿ ಈಜಬಹುದು. ನಮ್ಮಲ್ಲಿ ಕೆಲವರು ನೀರಿಗಿಳಿದು ಸ್ವಲ್ಪಕಾಲ ಈಜಿದರು. ನಾನೂ ಸಹ ಇಲ್ಲಿ ಸ್ನಾನಮಾಡಿ ಆಯಾಸವನ್ನು ಪರಿಹರಿಸಿಕೊಂಡೆ. ನಂತರ ನಾವು ನೀರಿನ ತೊರೆಯನ್ನು ಎಚ್ಚರಿಕೆಯಿಂದ ದಾಟಿ ಆಚೆ ದಡದಿಂದ ಬೆಟ್ಟ ಹತ್ತಲು ಪ್ರಾರಂಭಿಸಿದೆವು. ನಮ್ಮ ಮಾರ್ಗದರ್ಶಿ ನನ್ನ ಬ್ಯಾಕ್‌ಪ್ಯಾಕ್ ತೆಗೆದುಕೊಂಡು ನನ್ನ ಕೈಹಿಡಿದು zig-zag ಆಕಾರದಲ್ಲಿ ಬೆಟ್ಟ ಹತ್ತತೊಡಗಿದರು. ಬೆಟ್ಟದ ಮಾರ್ಗ ಅತ್ಯಂತ ಕಡಿದಾಗಿದ್ದು ಕೆಲವು ಕಡೆ 75°ಯಷ್ಟು ಕಡಿದಾಗಿತ್ತು. ಬಹಳ ಕಷ್ಟಪಟ್ಟು ಒಂದು ಗಂಟೆಯಲ್ಲಿ ಬೆಟ್ಟ ಹತ್ತಿದೆವು. ನನ್ನ ಬಲಗಾಲಿನ ಹಿಮ್ಮಡಿಯಲ್ಲಿ ಗುಳ್ಳೆಯೊಂದು ಆಗಿ ಶೂನೊಂದಿಗೆ ಉಜ್ಜುತ್ತಿದ್ದರಿಂದ ಕಾಲು ವಿಪರೀತವಾಗಿ ನೋಯತೊಡಗಿತು.

ಹಾಗೇ ನಿಧಾನವಾಗಿ ಸುಮಾರು 4 ಕಿ.ಮೀ ಕಾಡಿನಲ್ಲಿ ನಡೆದು ಕೊನೆಗೆ ಯಾಣ ಪ್ರದೇಶ ತಲುಪಿದೆವು. ಅಲ್ಲಿನ ಒಂದು ಕಲ್ಲಿನ ಮೇಲೆ ಕುಳಿತು ನಾನು ಶೂ ಬಿಚ್ಚಿ ಕಾಲ್ತೊಳೆದು ನಂತರ ಚಪ್ಪಲಿಯನ್ನೇ ಧರಿಸಿ ನಡೆಯತೊಡಗಿದೆ. ಆಗ ಸ್ವಲ್ಪ ಆರಾಮವೆನಿಸಿತು.

ದಟ್ಟವಾದ ಕಾಡಿನೊಳಗೆ ಎರಡು ಶಿಲಾ ಬೆಟ್ಟಗಳು ತಲೆಯೆತ್ತಿ ನಿಂತಿರುವುದನ್ನು ಹತ್ತಿರ ಹೋದರೆ ಮಾತ್ರ ಕಾಣಿಸುವುದು. ನಾವು ಇಷ್ಟರಲ್ಲಾಗಲೇ ಈ ಬೆಟ್ಟಗಳ ಬಳಿಗೆ ಬಂದಿದ್ದೆವು. ಈ ಬೆಟ್ಟಗಳು ಕಪ್ಪು ಬಣ್ಣದ ಸುಣ್ಣಕಲ್ಲನ್ನು ಒಳಗೊಂಡಿದೆ. ಬೆಟ್ಟಗಳನ್ನು ಪ್ರವೇಶಿಸುತ್ತಿದ್ದಂತೆ ನಮಗೆ ಬೂದಿಯಂತೆ ಕಾಣುವ ಕಪ್ಪು ಬಣ್ಣದ ವರ್ತುಲಗಳು ಕಂಡುಬಂದವು. ಇದು ಸುತ್ತಲಿನ ಕಂದು ಬಣ್ಣದ ಮಣ್ಣಿಗಿಂತ ಭಿನ್ನವಾಗಿತ್ತು. ಇದಕ್ಕೆ ಪೌರಾಣಿಕ ವಿವರಣೆಯೆಂದರೆ – ಈ ಎರಡು ಬೆಟ್ಟಗಳು ಭೈರವೇಶ್ವರ ಹಾಗೂ ಮೋಹಿನಿ ಎಂದು. ಭೈರವೇಶ್ವರನು ಶಿವನಾದರೆ ಮೋಹಿನಿ ವಿಷ್ಣುವೆಂದು ಸ್ಥಳೀಯರ ನಂಬಿಕೆ. ಭೈರವೇಶ್ವರ ಬೆಟ್ಟವು 120 ಮೀಟರ್ ಎತ್ತರದ್ದಾದರೆ, ಮೋಹಿನಿ ಬೆಟ್ಟವು 90 ಮೀಟರ್ ಎತ್ತರವಿದೆ. ಇವುಗಳ ಸುತ್ತಲೂ ಸಣ್ಣ ಪುಟ್ಟ ಬೆಟ್ಟಗಳಿವೆ. ಈ ಎರಡು ಬೆಟ್ಟಗಳೊಂದಿಗೆ ಪೌರಾಣಿಕ ಘಟನೆಯಾದ ಮೋಹಿನಿ–ಭಸ್ಮಾಸುರ ಕಥೆಯನ್ನು ಸ್ಥಳೀಯರು ಜೋಡಿಸುತ್ತಾರೆ. ಈ ಪ್ರದೇಶವನ್ನು ಭೈರವೇಶ್ವರ ಕ್ಷೇತ್ರವೆಂದೂ ಕರೆಯುತ್ತಾರೆ. ಭೈರವೇಶ್ವರ ಬೆಟ್ಟದೊಳಗೆ ಬರಿಗಾಲಿನಲ್ಲಿ ಹೋದರೆ ಒಂದು ಸ್ವಯಂಭೂ ಶಿವಲಿಂಗವಿರುವುದು ಹಾಗೂ ಇದಕ್ಕೆ ಪೂಜೆ ಸಲ್ಲಿಸುವರು. ಇದರೊಂದಿಗೆ ಒಂದು ಕಂಚಿನ ಚಂಡಿಕಾದೇವಿಯ ವಿಗ್ರಹ ಇರುವುದು. ಇಲ್ಲಿಂದ ಹೊರಬರುವ ನೀರು ಬೆಟ್ಟದಿಂದ ಕೆಳಕ್ಕೆ ಹರಿದು ವಿಭೂತಿ ಜಲಪಾತವಾಗುವುದು ಹಾಗೂ ಇದು ಕೊನೆಗೆ ಅಘನಾಶಿನಿ ನದಿ ಸೇರುತ್ತದೆ. ಬೆಟ್ಟದೊಳಗೆ ಎಲ್ಲರೂ ಬರಿಗಾಲಿನಲ್ಲೇ ನಡೆಯಬೇಕು. ಕೆಳಗಿರುವ ಚೂಪಾದ ಸಣ್ಣ ಸಣ್ಣ ಕಲ್ಲುಗಳು ಚುಚ್ಚಿ ನಡೆಯುವಾಗ ವಿಪರೀತ ನೋವನ್ನುಂಟು ಮಾಡುತ್ತದೆ. ನನಗಂತೂ ಈ ನೋವಿನ ಜೊತೆಗೆ ಹಿಮ್ಮಡಿಯ ನೋವೂ ಸೇರಿ ನಡೆಯುವುದು ನರಕ ಸದೃಶವಾಗಿತ್ತು. ಹಾಗೂ ಹೀಗೂ ಎಲ್ಲವನ್ನೂ ನೋಡಿಕೊಂಡು ಹೊರಬಂದರೆ ನಮ್ಮ ಚಪ್ಪಲಿಗಳು ಮತ್ತೊಂದು ದಿಕ್ಕಿನಲ್ಲಿದ್ದವು. ಬರಿಗಾಲಿನಲ್ಲಿ ಚುಚ್ಚುವ ಕಲ್ಲಿನ ಮೇಲೆ ನಡೆದು ಚಪ್ಪಲಿ ಧರಿಸುವ ಹೊತ್ತಿಗೆ ಸಾಕುಸಾಕಾಯಿತು. ಅಷ್ಟು ಹೊತ್ತಿಗಾಗಲೇ ಸಮಯ 5.30 ಆಗಿತ್ತು. ಅಲ್ಲಿಂದ ಮತ್ತೆ 3.5 ಕಿ.ಮೀ ರಸ್ತೆಯಲ್ಲಿ ನಡೆದು ನಮ್ಮ ಯಾಣ ಕ್ಯಾಂಪಿಗೆ ಹೋಗಬೇಕಿತ್ತು. ವಿಪರೀತವಾಗಿ ನೋಯುತ್ತಿದ್ದ ಕಾಲುಗಳನ್ನು ಎಳೆದುಕೊಂಡು ನಿಧಾನವಾಗಿ ನಡೆದು ರಾತ್ರಿ 7 ಗಂಟೆಯ ಹೊತ್ತಿಗೆ ನಾನು ಕ್ಯಾಂಪನ್ನು ತಲುಪಿದೆ. ಇದೂ ಕೂಡಾ ಒಂದು ದೊಡ್ಡ ಮನೆ. ರಾತ್ರಿ ಊಟದ

ನಂತರ ಎಲ್ಲರೂ ಚೆನ್ನಾಗಿ ನಿದ್ರಿಸಿದೆವು. ಮಾರನೇ ದಿನ ಚಾರಣದ ಕೊನೆಯ ದಿನ. ಮುಂಜಾನೆ ಉಪಾಹಾರದ ನಂತರ YHAI ಗಂಗೋತ್ರಿ ಶಾಖೆಯ ಅಧಿಕಾರಿಗಳು ಬಂದು ನಮ್ಮನ್ನೆಲ್ಲಾ ಅಭಿನಂದಿಸಿ ಪ್ರಮಾಣಪತ್ರವನ್ನು ವಿತರಿಸಿದರು. ನಂತರ ನಾನು ಅಲ್ಲಿಂದ ನೇರವಾಗಿ ಕುಮಟಾ ಪಟ್ಟಣಕ್ಕೆ ಬಸ್ಸಿನಲ್ಲಿ ತೆರಳಿ ಅಲ್ಲಿಂದ ಬೆಂಗಳೂರಿಗೆ ಪಯಣಿಸಿದೆ.

ಯಲ್ಲಾಪುರ-ಯಾಣ ಚಾರಣವು ಒಂದು ಅವಿಸ್ಮರಣೀಯವಾದ ಚಾರಣವಾಗಿತ್ತು. YHAI ಬಿಟ್ಟರೆ ಬೇರೆಲ್ಲೂ ಇದರ ಬಗ್ಗೆ ಪ್ರಚಾರವಿರುವುದಿಲ್ಲ. ಈಗ YHAI ಅವರೂ ಈ ಮಾರ್ಗದಲ್ಲಿ ಚಾರಣ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲವೆನಿಸುತ್ತದೆ. ಏಕೆಂದರೆ ಕ್ಯಾಂಪ್‌ಗಳನ್ನು ಹೊಂದಿಸುವುದು ಕಷ್ಟಕರವಾದದ್ದು. ಮನೆಯವರು ಸದಾ ಕ್ಯಾಂಪ್ ನಡೆಸಲು ಸಿದ್ಧರಿರದೇ ಇರಬಹುದು. ಒಟ್ಟಿನಲ್ಲಿ ಈ ಚಾರಣ ನನಗೆ ಕಡೆಯ ದಿನದ ಕಾಲುನೋವನ್ನು ಬಿಟ್ಟರೆ ಅತ್ಯಂತ ಕುತೂಹಲಕರವಾದ ಹಾಗೂ ಹೊಸ ಹೊಸ ವಿಷಯಗಳಿಂದ ಮತ್ತು ಸುಂದರ ಪ್ರಕೃತಿಯ ದರ್ಶನದಿಂದ ಕೂಡಿದ ಚಾರಣವಾಗಿತ್ತು.

ಗೋವಾ ಪ್ರಾಂತದಲ್ಲಿನ ಪಶ್ಚಿಮಘಟ್ಟಗಳಲ್ಲಿನ ಚಾರಣ

2012ರಲ್ಲಿನ ನನ್ನ ಪಶ್ಚಿಮ ಘಟ್ಟಗಳಲ್ಲಿನ ಕೂರ್ಗ್ ಪ್ರಾಂತ್ಯದಲ್ಲಿನ ಪ್ರವಾಸದಲ್ಲಿಯೇ ನಾನು ಗೋವಾ ಪ್ರಾಂತ್ಯದಲ್ಲಿನ ಪಶ್ಚಿಮ ಘಟ್ಟಗಳೆಡೆಗೆ ಚಾರಣ ಮಾಡಲು ಬಹುತೇಕ ನಿರ್ಧರಿಸಿದ್ದೆ. ಜೂನ್ 24, 2013ರಂದು YHAI ಅವರು ನಡೆಸುವ ಡಿಸೆಂಬರ್ 21ರ ತಂಡಕ್ಕೆ ನನ್ನ ಹೆಸರನ್ನು ನೋಂದಾಯಿಸಿಕೊಂಡೆ. ಗೋವಾದಲ್ಲಿನ ಚಾರಣದ ವಿವರಗಳು ಹೀಗಿತ್ತು:

ಚಾರಣದ ಹೆಸರು : ಗೋವಾ ರಾಷ್ಟ್ರೀಯ ಚಾರಣ – ಗೋವಾದಲ್ಲಿನ ಸುಂದರ ಸಮುದ್ರ ತೀರಗಳು ಹಾಗೂ ಪಶ್ಚಿಮ ಘಟ್ಟಗಳು

ಮೊದಲನೇ ದಿನ – ಪಣಜಿಯ ಕಂಪಾಲ್ ಪ್ರದೇಶದಲ್ಲಿನ ಸ್ಪೋರ್ಟ್ಸ್ ಅಥಾರಿಟಿ ಮೈದಾನದಲ್ಲಿನ ಕ್ಯಾಂಪಿಗೆ ಬರುವುದು.

ಎರಡನೇ ದಿನ – ಬೆಟ್ಟ ಹತ್ತುವುದು ಮತ್ತು ರಾಪೆಲ್ಲಿಂಗ್, ಹವಾಮಾನಕ್ಕೆ ಹೊಂದಿಕೊಳ್ಳುವುದು.

ಮೂರನೇ ದಿನ – ಮೊಬರ್ ಬೀಚ್‌ನಿಂದ ಬೆನೋಲೀಮ್ ಬೀಚ್‌ವರೆಗಿನ 12 ಕಿ.ಮೀ ಸಮುದ್ರ ತೀರದಲ್ಲಿ ಬರಿಗಾಲಿನ ಚಾರಣ. (ಬೇಸ್ ಕ್ಯಾಂಪಿನಿಂದ ಮೋಬರ್ ಬೀಚಿನವರೆಗೂ ಬಸ್ಸಿನಲ್ಲಿ ಪ್ರಯಾಣ)

ನಾಲ್ಕನೇ ದಿನ – ಬೆನೋಲೀಮ್ ಬೀಚ್‌ನಿಂದ ವೇಲ್ಸಾವೋ ಬೀಚ್‌ವರೆಗೂ 10 ಕಿ.ಮೀ ಸಮುದ್ರ ತೀರದಲ್ಲಿ ಬರಿಗಾಲಿನ ಚಾರಣ.

ಐದನೇ ದಿನ – ವೇಲ್ಸಾವೋನಿಂದ ಕೊಲ್ಲೆಮ್‌ವರೆಗೂ ಕೊಂಕಣ ರೈಲಿನಲ್ಲಿ ಪ್ರಯಾಣ – ನಂತರ ಕೊಲ್ಲೆಮ್‌ನಿಂದ ದೂಧ್‌ಸಾಗರ್ ಗೆ 10 ಕಿ.ಮೀ ಚಾರಣ

ಆರನೇ ದಿನ – ದೂಧ್‌ಸಾಗರ್ ಕ್ಯಾಂಪಿನಿಂದ ದೂಧ್‌ಸಾಗರ್ ಜಲಪಾತದ ಮೂಲಕ ಕರನ್ಸಾಲ್‌ವರೆಗೂ 12 ಕಿ.ಮೀ ಚಾರಣ
ಏಳನೇ ದಿನ – ಕರನ್ಸಾಲ್‌ನಿಂದ ನಂದ್ರನ್‌ವರೆಗೂ 14 ಕಿ.ಮೀ ಚಾರಣ
ಎಂಟನೇ ದಿನ – ನಂದ್ರನ್ ಕ್ಯಾಂಪಿನಿಂದ ತಂಬಡಿ ಸುರ್ಲಾವರೆಗೂ 18 ಕಿ.ಮೀ ಚಾರಣ – ನಂತರ ಅಲ್ಲಿಂದ ಬೇಸ್ ಕ್ಯಾಂಪ್‌ವರೆಗೂ ಬಸ್ಸಿನಲ್ಲಿ ಪ್ರಯಾಣ
ಒಂಬತ್ತನೇ ದಿನ – ಬೆಳಗಿನ ಉಪಾಹಾರದ ನಂತರ ಚಾರಣಿಗರು ತಮ್ಮ ಊರುಗಳಿಗೆ ಮರುಪ್ರಯಾಣ.

2013, ಡಿಸೆಂಬರ್ 21ರಂದು ಜೆಟ್ ಏರ್ ವೇಸ್ ವಿಮಾನದಲ್ಲಿ ಹೊರಟು ಮಧ್ಯಾಹ್ನ ಪಣಜಿ ವಿಮಾನ ನಿಲ್ದಾಣ ತಲುಪಿ ಒಂದು ಪ್ರೀಪೈಡ್ ಟ್ಯಾಕ್ಸಿಯಲ್ಲಿ ಮೀರಾಮಾರ್ ಬೀಚ್ ಬಳಿಯಿರುವ ಸ್ಪೋರ್ಟ್ ಅಥಾರಿಟಿ ಮೈದಾನದಲ್ಲಿನ ಕ್ಯಾಂಪಿಗೆ ನಿರಾತಂಕವಾಗಿ ತಲುಪಿದೆ. ರಿಸೆಪ್ಶನ್ ಕೌಂಟರಿನಲ್ಲಿ ಹೆಸರನ್ನು ನೋಂದಾಯಿಸಿ ಅವರು ತಿಳಿಸಿದ ಟೆಂಟಿಗೆ ಹೋಗಿ ನನ್ನ ಬ್ಯಾಕ್‌ಪ್ಯಾಕ್‌ನ್ನು ಅಲ್ಲಿರಿಸಿ ನಂತರ ಚಹಾ ಕುಡಿಯಲು ಹೊರಟೆ. ಅಲ್ಲಿಂದ ಮರಳಿ ಬಂದು ಟೆಂಟಿನಲ್ಲಿದ್ದ ಸಿದ್ಧಾರ್ಥ್, ಕೃಷ್ಣ ಮತ್ತು ಗಿರಿ ಅವರುಗಳ ಪರಿಚಯ ಮಾಡಿಕೊಂಡು ಹರಟೆ ಹೊಡೆದು ರಾತ್ರಿ ಊಟವಾದ ಮೇಲೆ ಆರಾಮವಾಗಿ ನಿದ್ರಿಸಿದೆ.

ಮಾರನೇ ದಿನ ಬೆಳಗ್ಗೆ ಎದ್ದು ಪಕ್ಕದ ಟೆಂಟಿನಲ್ಲಿದ್ದ ದೆಹಲಿಯಿಂದ ಬಂದಿದ್ದ 11 ಮಂದಿ ಚಾರಣಿಗರ ಪರಿಚಯ ಮಾಡಿಕೊಂಡೆ. ಬೆಳಗ್ಗೆ 8 ಗಂಟೆಗೆ ಎಲ್ಲರೊಡನೆ ಹಗ್ಗದ ಮೂಲಕ ಬೆಟ್ಟ ಹತ್ತುವದು ಹಾಗೂ ಇಳಿಯುವ ಕಾರ್ಯಕ್ರಮಕ್ಕೆ ತೆರಳಿದೆ. ನಂತರ 9 ಗಂಟೆಗೆ ಉಪಾಹಾರ ಸೇವಿಸಿ ನಮ್ಮ ಬ್ಯಾಕ್‌ಪ್ಯಾಕ್‌ನ್ನು ಹೊತ್ತು 5 ಕಿ.ಮೀ ದೂರದಲ್ಲಿರುವ ಮೀರಾಮಾರ್ ಬೀಚ್ ಕಡೆಗೆ ಚಾರಣ ಮಾಡಿದೆವು. 11 ಗಂಟೆಗೆ ಮೀರಾಮಾರ್ ಬೀಚ್‌ನ್ನು ತಲುಪಿದೆವು. ಅಲ್ಲಿಂದ ಒಂದು ಗುಡ್ಡವನ್ನು ಹತ್ತಿ ರಾಜಭವನದ ಸಮೀಪಕ್ಕೆ ಬಂದೆವು. ಇಲ್ಲಿ ಕುಳಿತು ಮಾರ್ಗದರ್ಶಿಯ ನೇತೃತ್ವದಲ್ಲಿ ಎಲ್ಲರೂ ಪರಸ್ಪರ ಪರಿಚಯ ಮಾಡಿಕೊಂಡೆವು. ನಂತರ ರಸ್ತೆಯಲ್ಲೇ ನಡೆದು ದೌನಾ ಪೋಲ ಬೀಚ್ ತಲುಪಿದೆವು. ಅಲ್ಲಿಂದ ಬಸ್ಸ್ ನಿಲ್ದಾಣಕ್ಕೆ ಹೋಗಿ ಅಲ್ಲಿಂದ ನಮಗಾಗಿ ಕಾಯುತ್ತಿದ್ದ ಬಸ್ಸಿನಲ್ಲಿ ಬೇಸ್ ಕ್ಯಾಂಪಿಗೆ ಮರಳಿದೆವು. ಊಟಮಾಡಿದ ನಂತರ ಸಂಪೂರ್ಣ ವಿಶ್ರಾಂತಿ ಪಡೆದು. ಸಂಜೆಯ ಚಹಾ ಕುಡಿದ ನಂತರ ಕೆಲವರು ನಗರ ಪ್ರದಕ್ಷಿಣೆಗೆ ಹೋದರು. ನಾನು ಕ್ಯಾಂಪಿನಲ್ಲೇ ಉಳಿದೆ. ರಾತ್ರಿ ಊಟದ ನಂತರ ನಿದ್ರಿಸಿದೆವು.

ಮಾರನೇ ದಿನ ಉಪಾಹಾರ ಮುಗಿಸಿ ಮದ್ಯಾಹ್ನದ ಊಟದ ಬುತ್ತಿಯೊಂದಿಗೆ ಮೋಬರ್ ಸಮುದ್ರ ತೀರಕ್ಕೆ ಬಸ್ಸಿನಲ್ಲಿ ಹೊರಟೆವು. ನಂತರ ಮೋಬರ್ ಬೀಚ್‌ನಿಂದ ಬೆನೋಲಿಮ್ ಬೀಚ್‌ವರೆಗೂ ಸಮುದ್ರ ತೀರದಲ್ಲಿ ಬರಿಗಾಲಿನ 12 ಕಿ.ಮೀ

ಚಾರಣ. ಸಮುದ್ರ ತೀರದಲ್ಲಿ ಬರಿಗಾಲಿನಲ್ಲಿ 12 ಕಿ.ಮೀ ನಡೆಯುವುದು ಒಂದು ನೂತನ ಹಾಗೂ ಸುಂದರ ಅನುಭವ. ಅಂಗಾಲಿಗೆ ಸಮುದ್ರದ ನೀರು ಹಾಗೂ ಮರಳುಗಳೆರಡೂ ಸೇರಿ ಒಂದು ವಿಧವಾದ ಸುಖಕರವಾದ ಮಾಲೀಷ್ ಆಗುತ್ತಿತ್ತು. ಹೀಗೆ 6 ಕಿ.ಮೀ ನಡೆದು ಮಧ್ಯಾಹ್ನ 1.30ರ ಸಮಯದಲ್ಲಿ ಒಂದು ನೆರಳಿರುವ ಜಾಗದಲ್ಲಿ ಕುಳಿತು ಊಟವನ್ನು ಮಾಡಿದೆವು. ನಂತರ ಅಲ್ಲಿಂದ ಹೊರಟು ಸಂಜೆ 4.30ಕ್ಕೆ ಬೆನೋಲೀಮ್ ಬೀಚ್ ಕ್ಯಾಂಪ್ ತಲುಪಿದೆವು. ಅಲ್ಲಿ ನಮ್ಮನ್ನು ಕ್ಯಾಂಪ್ ನಾಯಕ ಸ್ವಾಗತಿಸಿ ಎಲ್ಲರಿಗೂ ತಂಪು ಪಾನೀಯ ಕೊಟ್ಟು ಉಳಿದುಕೊಳ್ಳುವ ಜಾಗಕ್ಕೆ ಕರೆದೊಯ್ದರು. ನಾನು ಕ್ಯಾಂಪ್ ನಾಯಕನಲ್ಲಿ ಬೆನೊಲಿಮ್ ಎಂಬ ಹೆಸರು ಹೇಗೆ ಬಂತೆಂದು ಕೇಳಿದಾಗ ಅವನಿಗೆ ಅದು ಗೊತ್ತಿಲ್ಲವೆಂದು ಅರಿತು ನಾನೇ ಎಲ್ಲರಿಗೂ ಅದನ್ನು ಈ ರೀತಿ ವಿವರಿಸಿದೆ ;

ಭಗವಾನ್ ವಿಷ್ಣುವಿನ ಪರಶುರಾಮಾವತಾರದಲ್ಲಿ ಪರಶುರಾಮರು ಕೊಂಕಣದ ಪಕ್ಕದಲ್ಲಿರುವ ಸಹ್ಯಾದ್ರಿ ಪರ್ವತ ಪ್ರದೇಶದಿಂದ ಒಂದು ಬಾಣವನ್ನು ಬಿಟ್ಟಾಗ ಅದು ಈಗಿನ ಬೆನೊಲಿಮ್ ಪ್ರದೇಶದಲ್ಲಿ ಬಂದು ಬಿದ್ದಿತೆಂದು, ಆದ್ದರಿಂದ ಬಾಣಬಿದ್ದ ಪ್ರದೇಶವನ್ನು ಬಾಣಹಳ್ಳಿ ಎಂದು ಕರೆಯಲಾಯಿತು. ಪೋರ್ಚುಗೀಸರ ಆಕ್ರಮಣಕ್ಕೆ ಮುಂಚೆ ಈ ಪ್ರದೇಶದಲ್ಲಿ ಶಿವ-ಪಾರ್ವತಿಯರ ಸುಂದರವಾದ ಕಲ್ಯಾಣಿ ಬಾಣೇಶ್ವರ್ ಎಂಬ ಪ್ರಸಿದ್ಧವಾದ ಮಂದಿರವಿತ್ತು. ಈ ದೇವಸ್ಥಾನದ ಭಗ್ನಾವಶೇಷಗಳನ್ನು ಈಗಲೂ ನೋಡಬಹುದು. ಇಲ್ಲಿದ್ದ ಶಿವ-ಪಾರ್ವತಿಯರ ವಿಗ್ರಹಗಳನ್ನು 16ನೇ ಶತಮಾನದಲ್ಲಿ ಕರ್ನಾಟಕದ ಉತ್ತರಕನ್ನಡ ಜಿಲ್ಲೆಯಲ್ಲಿನ ಅವೆರ್ಸಾ ಎಂಬ ಹಳ್ಳಿಗೆ ಸ್ಥಳಾಂತರಿಸಲಾಯಿತು ಎಂದು ತಿಳಿದುಬರುತ್ತದೆ.

ಬೆನೊಲಿಮ್ ಕ್ಯಾಂಪಿನಲ್ಲಿ ಸ್ನಾನ ಮಾಡಲು ಸ್ವಲ್ಪ ದೂರದಲ್ಲಿ ಎತ್ತರದಿಂದ ಬೀಳುವ ನೀರಿನ ವ್ಯವಸ್ಥೆ ಇರುವುದು. ಸಂಜೆ ಚಹಾ ನಂತರ ಎಲ್ಲರೂ ಸೂರ್ಯಾಸ್ತ ನೋಡಲು ಹೊರಟೆವು. ಶುಭ್ರವಾದ ಆಕಾಶದಲ್ಲಿ ಸೂರ್ಯಾಸ್ತ ವೈಭವಯುತ ವಾಗಿತ್ತು. ಕತ್ತಲೆಯಾಗುತ್ತಿದ್ದಂತೆ ಕ್ಯಾಂಪಿಗೆ ಬಂದು ಊಟಮಾಡಿ ಮಲಗಿದೆವು.

ಮಾರನೇ ದಿನದ ಚಾರಣವು 12 ಕಿ.ಮೀ ದೂರದ ವೇಲ್ಸಾವೋ ಬೀಚ್ ಕ್ಯಾಂಪಿಗೆ ಸಮುದ್ರ ತೀರದಲ್ಲೇ ಬರಿಗಾಲಿನ ಚಾರಣ. ಉಪಾಹಾರ ಸೇವಿಸಿ ಊಟದ ಬುತ್ತಿಯೊಂದಿಗೆ ಚಾರಣ ಪ್ರಾರಂಭಿಸಿದೆವು. ವೇಲ್ಸಾವೋ ಬೀಚು ಶುದ್ಧವಾದ ಹಾಗೂ ಸ್ವಾಭಾವಿಕ ಸೌಂದರ್ಯದಿಂದ ನಯನ ಮನೋಹರವಾಗಿದ್ದು ಇಲ್ಲಿನ ಮರಳು ಬಂಗಾರದ ಬಣ್ಣದಿಂದ ಕೂಡಿರುವುದು. ನೀರು ಮತ್ತು ಮೆತ್ತನೆಯ ಮರಳಿನಲ್ಲಿ ನಡೆಯುತ್ತಿದ್ದರೆ ಪಾದಗಳಿಗೆ ಒಂದು ವಿಧವಾದ ಸುಖಕರವಾದ ಅನುಭವವಾಗುತ್ತದೆ. ಈ ಪ್ರದೇಶದಲ್ಲಿ ಹೇರಳವಾಗಿ ತೆಂಗು ಮತ್ತು ಇತರೆ ಸಸ್ಯಗಳಿರುವುದರಿಂದ ಅವುಗಳಿಂದ ಹೊರಬರುತ್ತಿದ್ದ ತಂಗಾಳಿ ನಮ್ಮ ಕೆನ್ನೆಗಳಿಗೆ

ಮುತ್ತಿಡುವಂತಹ ಅನುಭವವಾಗುತ್ತಿದ್ದು ನನ್ನನ್ನು ಮಂತ್ರಮುಗ್ಧನನ್ನಾಗಿಸಿತು. ವೇಲ್ಸಾವೋ ಬೀಚಿನಲ್ಲಿ ಸೂರ್ಯೋದಯ ಹಾಗೂ ಸೂರ್ಯಾಸ್ತವೆರಡನ್ನೂ ನೋಡಬಹುದು. ಇವೆರಡನ್ನೂ ನಮಗೆ ವೀಕ್ಷಿಸಲು ಸಾಧ್ಯವಾಯಿತು. ಇಂತಹ ಸುಂದರ ಬೀಚ್‌ಗಳನ್ನು ಹೊಂದಿರುವ ಗೋವಾ ಪ್ರಾಂತ್ಯವನ್ನು ಭಾರತದ ಬೀಚ್‌ಗಳ ರಾಜಧಾನಿಯೆಂದು ಕರೆದಿರುವುದು ಅತಿಶಯೋಕ್ತಿಯೇನಲ್ಲ. ಮಧ್ಯಾಹ್ನ ಒಂದು ಗಂಟೆಗೆ ಒಂದು ದೋಣಿಯ ನೆರಳಿನಲ್ಲಿ ಕುಳಿತು ಊಟವನ್ನು ಮಾಡಿದೆ. ಮತ್ತೆ ಚಾರಣ ಮುಂದುವರೆಸಿದೆ. ಸಂಜೆಯಾಗುತ್ತಿದ್ದಂತೆ ತಂಪಾದ ಗಾಳಿ ನನ್ನ ಎಲ್ಲ ಆಯಾಸ ದೂರಮಾಡಿತು. ನಾವು ನಡೆಯುವ ಹಾದಿಯಲ್ಲಿ ಹಿಂಡು ಹಿಂಡಾಗಿ ಬಂದು ಕೂರುವ ಸೀಗಲ್ ಪಕ್ಷಿಗಳನ್ನು ಕಂಡು ನನಗೆ ಅತ್ಯಂತ ಸಂತೋಷವಾಯಿತು. ವೇಲ್ಸಾವೋ ಕ್ಯಾಂಪನ್ನು ಸಂಜೆ 6 ಗಂಟೆಗೆ ತಲುಪಿದೆವು. ತಂಪು ಪಾನೀಯ ಮತ್ತು ಚಹಾ ಸೇವಿಸಿ ಮತ್ತೆ ಬೀಚಿಗೆ ಹೋಗಿ ಸ್ವಲ್ಪ ಸಮಯ ಕಳೆದು ಮರಳಿ ಕ್ಯಾಂಪಿಗೆ ಬಂದು ರಾತ್ರಿ ಊಟಮಾಡಿ ನಿದ್ರಿಸಿದೆ. ಇಲ್ಲಿಗೆ ನಮ್ಮ ಗೋವಾ ಪ್ರದೇಶದಲ್ಲಿನ 26 ಕಿ.ಮೀ ದೂರದ ಬೀಚ್ ಚಾರಣ ಮುಗಿಯಿತು.

25ನೇ ಡಿಸೆಂಬರ್ 2013, ಬುಧವಾರ ಬೆಳಗಿನ ಚಹಾ, ಉಪಾಹಾರ ಸೇವನೆ ನಂತರ ಮದ್ಯಾಹ್ನದ ಊಟದ ಬುತ್ತಿ ಪಡೆದು ವೇಲ್ಸಾವೋ ಬೀಚ್ ಮೂಲಕ ಒಂದು ಎತ್ತರದ ದಿಬ್ಬವನ್ನು ಹತ್ತಿ ಶಂಖವಲ್ಲಿ ರೈಲ್ವೆ ನಿಲ್ದಾಣಕ್ಕೆ ಹೋಗಿ 8 ಗಂಟೆಗೆ ಅಲ್ಲಿಗೆ ಬಂದ ಕೊಂಕಣ ರೈಲಿನಲ್ಲಿ ಕುಳಿತು 9.30ಕ್ಕೆ ಕೊಲ್ಲೆಮ್ ನಿಲ್ದಾಣ ತಲುಪಿದೆವು. ನಿಲ್ದಾಣದಿಂದ ಹೊರಬಂದು ಒಂದು ಹೋಟೆಲಿನಲ್ಲಿ ಸ್ವಲ್ಪ ತಿಂಡಿ, ಚಹಾ ನಂತರ ಹತ್ತಿರದಲ್ಲಿದ್ದ ಒಂದು ಔಷಧಿ ಅಂಗಡಿಯಲ್ಲಿ ಡೇಟ್ಟಾಲ್ ಹಾಗೂ ಕೊಬ್ಬರಿ ಎಣ್ಣೆಯ ಪುಟ್ಟ ಬಾಟಲುಗಳನ್ನು ಕೊಂಡೆ. ಇದೇನು ಈ ಸ್ಥಳದಲ್ಲಿ ಡೇಟ್ಟಾಲ್ ಮತ್ತು ಕೊಬ್ಬರಿ ಎಣ್ಣೆ! ಎನ್ನುವಿರಾ! ಅದನ್ನು ಮುಂದೆ ತಿಳಿಯೋಣ. ಕೊಲ್ಲೆಮ್ ರೈಲ್ವೆ ನಿಲ್ದಾಣದಿಂದ ದೂದ್‌ಸಾಗರ್ ಜಲಪಾತದ ಕ್ಯಾಂಪಿನೆಡೆಗೆ 10 ಕಿ.ಮೀ ದೂರದ ಚಾರಣ. ರೈಲ್ವೆ ನಿಲ್ದಾಣದಿಂದ ಹೊರಟು ನೇರವಾಗಿ ನಾವು ಭಗವಾನ್ ಮಹಾವೀರ ಅಭಯಾರಣ್ಯ ಪ್ರವೇಶಿಸಿದೆವು. ಇಲ್ಲಿಂದ ನಮ್ಮನ್ನು ಸರಿಯಾದ ಮಾರ್ಗದಲ್ಲಿ ಕರೆದೊಯ್ಯಲು ಯಾವ ಮಾರ್ಗದರ್ಶಿಯೂ ಇರಲಿಲ್ಲ. ಬದಲಾಗಿ ಮಾರ್ಗವನ್ನು ಸೂಚಿಸಲು ಮರಗಳ ಮೇಲೆ, ಬಂಡೆಗಳ ಮೇಲೆ, ರಸ್ತೆಗಳ ಮೇಲೆ ಅಲ್ಲಲ್ಲಿ ಬಾಣದ ಗುರುತುಗಳನ್ನು ಬಣ್ಣಗಳಲ್ಲಿ ಬರೆಯಲಾಗಿತ್ತು. ಅದನ್ನು ಹುಡುಕಿಕೊಂಡು ನಾವು ಚಾರಣ ಮಾಡತೊಡಗಿದೆವು. ಅರಣ್ಯದೊಳಗೆ ಜನರನ್ನು ಕರೆದೊಯ್ಯುವ ಅನೇಕ ಜೀಪುಗಳು ಕಾರುಗಳು ಓಡಾಡುತ್ತಿದ್ದದ್ದರಿಂದ ಚಾರಣದ ರಸ್ತೆ ಧೂಳಿನಿಂದ ಆವೃತವಾಗಿತ್ತು. 2 ಕಿ.ಮೀ ರಸ್ತೆಯಲ್ಲಿ ನಡೆದ ನಂತರ ನಮ್ಮ ಮಾರ್ಗ ಕಾಡಿನೊಳಗೆ ಕರೆದೊಯ್ಯತೊಡಗಿತು. ಹೀಗೆ ನಾವು ನಡೆಯುತ್ತಾ ಒಂದೆಡೆ ನಾವು ನಾಲ್ಕು

ಚಾರಣಿಗರು ಹಾದಿ ತಪ್ಪಿ ಸೈಕಲ್ಲಿನಲ್ಲಿ ಚಾರಣ ಮಾಡುವ ಮಾರ್ಗವನ್ನು ಪ್ರವೇಶಿಸಿ ಬಹಳ ದೂರ ಬಂದುಬಿಟ್ಟಿದ್ದೆವು. ವಿಧಿಯಿಲ್ಲದೇ ನಾವು ಅದೇ ರಸ್ತೆಯಲ್ಲಿ ಮುಂದುವರೆದು 5 ಕಿ.ಮೀ ಹೆಚ್ಚು ನಡೆದು ದೂದ್‌ಸಾಗರ್ ಕ್ಯಾಂಪಿಗೆ ಸಂಜೆ 4 ಘಂಟೆಗೆ ಬಂದೆವು. ತಂಪು ಪಾನೀಯವನ್ನು ಕುಡಿದ ನಂತರ ಸ್ವಲ್ಪ ದೂರದಲ್ಲಿರುವ ನೀರಿನ ತೊರೆಗೆ ಹೋಗಿ ಸ್ನಾನ ಮಾಡಿ ದಟ್ಟವಾದ ಅರಣ್ಯದೊಳಗಿದ್ದ ನಮ್ಮ ಕ್ಯಾಂಪಿಗೆ ಮರಳಿದೆವು. ವಿದ್ಯುಚ್ಛಕ್ತಿ ಇಲ್ಲದ ಕಾರಣ ಬೇಗ ಊಟ ಮುಗಿಸಿ ಟೆಂಟ್ ಒಳಗೆ ಟಾರ್ಚ್ ದೀಪದಲ್ಲಿ ಸ್ವಲ್ಪ ಹೊತ್ತು ಹರಟೆ ಹೊಡೆದು 9 ಗಂಟೆಗೆ ಮಲಗಿದೆವು.

ಡಿಸೆಂಬರ್ 26ರಂದು ಮುಂಜಾನೆ ಉಪಾಹಾರದ ನಂತರ ಊಟದ ಬುತ್ತಿಯೊಂದಿಗೆ ಕ್ಯಾಂಪ್ ಮುಖಂಡರ ಜೊತೆಗೆ 12 ಕಿ.ಮೀ ದೂರದಲ್ಲಿರುವ ಕರೆಂಝೋಲ್ ಕ್ಯಾಂಪ್ ಕಡೆಗೆ ಕಾಡಿನಲ್ಲಿ ಚಾರಣ ಪ್ರಾರಂಭಿಸಿದೆವು. ಹೊರಡುವ ಮೊದಲು ಕ್ಯಾಂಪ್ ಮುಖಂಡರು ನಮಗೆಲ್ಲರಿಗೂ ಕಾಡಿನಲ್ಲಿ ಎದುರಾಗಬಹುದಾದ ಕಣ್ಣಿಗೆ ಕಾಣದ ಹಾಗೂ ಅತ್ಯಂತ ಸೂಕ್ಷ್ಮವಾದ ಕೀಟಗಳಿಂದ ಚರ್ಮಕ್ಕೆ ಒದಗಬಹುದಾದ ಅಪಾಯವನ್ನು ವಿವರಿಸಿದ್ದಲ್ಲದೆ ಅದನ್ನು ಎದುರಿಸಲು ನಾವು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ವಿವರಿಸಿದರು. ಅದರ ಪ್ರಕಾರ ನಾವು ಕಾಡನ್ನು ಪ್ರವೇಶಿಸುತ್ತಿದ್ದಂತೆ ಒಂದು ವಿಶಾಲವಾದ ಹುಲ್ಲುಗಾವಲು ಎದುರಾಗುವುದು. ಅದನ್ನು ಸ್ಥಳೀಯರು ಡೆಟ್ಟಾಲ್ ಪಾಯಿಂಟ್ ಎಂದು ಕರೆಯುವರು. ಅಲ್ಲಿ ಎಲ್ಲರೂ ಶೂಗಳನ್ನು ಬಿಚ್ಚಿ ನಂತರ ಕೈ, ಕಾಲು, ಮುಖ, ಕುತ್ತಿಗೆ, ಬೆನ್ನು ಮತ್ತು ಸೊಂಟದ ಭಾಗಕ್ಕೆ ಡೆಟ್ಟಾಲ್ ಮತ್ತು ಕೊಬ್ಬರಿ ಎಣ್ಣೆಯ ಮಿಶ್ರಣವನ್ನು ಚೆನ್ನಾಗಿ ಹಚ್ಚಿಕೊಳ್ಳಿರಿ ಎಂದು ವಿವರಿಸಿದರು. ಕ್ಯಾಂಪ್ ಮುಖಂಡರು ನಂತರ ತಮ್ಮ ಕ್ಯಾಂಪಿಗೆ ಮರಳಿದರು. ಹೀಗೆ ಒಂದು ಗಂಟೆ ಕಾಡಿನಲ್ಲಿ ನಡೆದ ಮೇಲೆ ನಮಗೆ ಧುಮುಕುವ ನೀರಿನ ಸಪ್ಪಳವು ಕೇಳಿಸತೊಡಗಿತು. ಸ್ವಲ್ಪ ದೂರ ನಡೆದ ನಂತರ ನಾವು ದೂದ್‌ಸಾಗರ ಜಲಪಾತದ ಪ್ರವೇಶ ದ್ವಾರವನ್ನು ತಲುಪಿದೆವು. ಅಲ್ಲಿಂದ ಕೆಲವು ಮೆಟ್ಟಿಲುಗಳನ್ನು ಇಳಿದು ಬಂಡೆಗಳನ್ನು ಸಮೀಪಿಸುತ್ತಿದ್ದಂತೆ ನಮ್ಮೆದುರಿಗೆ ಜಲಪಾತವು ಧುತ್ತೆಂದು ಪ್ರತ್ಯಕ್ಷವಾಯಿತು. ಅಲ್ಲೇ ಸ್ವಲ್ಪ ಹೊತ್ತು ಕುಳಿತಿದ್ದು ಅಲ್ಲಿನ ಜಲಪಾತದ ರಮಣೀಯ ದೃಶ್ಯಗಳನ್ನು ಕ್ಯಾಮರಾದಲ್ಲಿ ಸೆರೆಹಿಡಿದು ಮತ್ತೆ ಮೆಟ್ಟಿಲುಗಳ ಬಳಿಗೆ ಬಂದು ಅಲ್ಲಿಂದ ಎಡಕ್ಕೆ ತಿರುಗಿ ಮತ್ತೆ ಕಾಡನ್ನು ಪ್ರವೇಶಿಸಿ ಬೆಟ್ಟವನ್ನು ಹತ್ತತೊಡಗಿದೆವು. 20 ನಿಮಿಷದಲ್ಲಿ ನಾವು ಜಲಪಾತದ ಮಧ್ಯದಲ್ಲಿದ್ದ ರೈಲ್ವೆ ಹಳಿಯನ್ನು ತಲುಪಿದೆವು. ರೈಲ್ವೆ ಹಳಿಗಳ ಮೇಲೆ ನಡೆಯುತ್ತಾ ಮೂರು ದೀರ್ಘ ಸುರಂಗಗಳನ್ನು ದಾಟಿ ದೂದ್‌ಸಾಗರ್ ರೈಲ್ವೆ ನಿಲ್ದಾಣವನ್ನು ಸಮೀಪಿಸಿದೆವು. ಅಲ್ಲಿಂದ ಮೇಲಿನಿಂದ ಧುಮುಕುತ್ತಿರುವ ಜಲಪಾತವು ಮತ್ತಷ್ಟು ಸ್ಪಷ್ಟವಾಗಿ ಕಾಣುತ್ತಿತ್ತು ಹಾಗೂ ಜಲಪಾತದ ಕೆಳಭಾಗವೂ

ಗೋಚರಿಸುತ್ತಿತ್ತು. ಅಲ್ಲಿಂದ ಮುಂದೆ ನಡೆದು ಒಂದು ಹಾಳು ಮಂಟಪದ ಬಳಿ ಎಡಕ್ಕೆ ತಿರುಗಿ ಕೆಳಕ್ಕೆ ಇಳಿದು ಕುರುಚಲು ಗಿಡಗಳಿಂದ ಕೂಡಿದ ಕಾಡನ್ನು ಪ್ರವೇಶಿಸಿ, ಸ್ವಲ್ಪ ದೂರ ನಡೆದ ಮೇಲೆ ನಮಗೆ ವಿಶಾಲವಾದ ಹುಲ್ಲುಗಾವಲು ಎದುರಾಯಿತು. ಈ ಪ್ರದೇಶವೇ ಡೆಟ್ಟಾಲ್ ಪಾಯಿಂಟ್ ಎಂದು ಗೊತ್ತಾಗಿ, ನಾವು ಕ್ಯಾಂಪ್ ಮುಖಂಡರು ಹೇಳಿದ್ದಂತೆ ಅಲ್ಲಿ ಎಣ್ಣೆ ಹಾಗೂ ಡೆಟ್ಟಾಲ್ ಮಿಶ್ರಣವನ್ನು ಹಚ್ಚಿಕೊಂಡು ನಂತರ ಶೂ ಧರಿಸಿಕೊಂಡು ಚಾರಣವನ್ನು ಮುಂದುವರೆಸಿದೆವು. ದಾರಿಯ ಇಕ್ಕೆಲೆಗಳಲ್ಲೂ ಎದೆಯೆತ್ತರಕ್ಕೂ ಒಂದು ವಿಧದ ವಿಷಪೂರಿತವಾದ ಚೂಪಾದ ಸಣ್ಣ ಸಣ್ಣ ಮುಳ್ಳುಗಳಿಂದ ಕೂಡಿದ ಎಲೆಗಳುಳ್ಳ ಗಿಡಗಳು ದಟ್ಟವಾಗಿ ಬೆಳೆದಿದ್ದು ನಮ್ಮ ಮೈ ಕೈಗಳನ್ನು ತರಚುತ್ತಿದ್ದವು. ಆದರೆ ನಾವು ತೋಳಿರುವ ಅಂಗಿಯನ್ನು ಧರಿಸಿ, ಕತ್ತನ್ನು ಬಟ್ಟೆಯಿಂದ ಸುತ್ತಿಕೊಂಡಿದ್ದರಿಂದ ಹಾಗೂ ಮುಖ, ಮೈ ಕೈಗಳಿಗೆಲ್ಲಾ ಔಷಧವನ್ನು ಹಚ್ಚಿಕೊಂಡಿದ್ದರಿಂದ ಅಪಾಯದಿಂದ ಪಾರಾದೆವು. ಹೀಗೆ ನಾವು 3–4 ಕಿ.ಮೀ ಕಾಡಿನಲ್ಲಿ ವಿಷಪೂರಿತ ಗಿಡಗಳ ಮಧ್ಯದಲ್ಲಿ ನಡೆದು ಕಾಡಿನಿಂದ ಹೊರಬಂದೆವು. ಅಲ್ಲಿ ಸ್ಥಳೀಯರು ನಿಂಬೆಹಣ್ಣಿನ ರಸ ಹಾಗೂ ಮಜ್ಜಿಗೆಯನ್ನು ಮಾರುತ್ತಿದ್ದರು. ನಾನು ಹಾಗೂ ಕೆಲವರು ನಿಂಬೆರಸವನ್ನು ಕುಡಿದೆವು. ಮತ್ತೊಂದು ಕಿ.ಮೀ ನಡೆದ ನಂತರ ನಮಗೆ ಶುಭ್ರವಾದ ನೀರಿನಿಂದ ಕೂಡಿದ ಕೊಳವೊಂದು ಎದುರಾಯಿತು. ಬೆವರುತ್ತಿದ್ದ ನಾವುಗಳು ಅಲ್ಲಿ ಸ್ನಾನ ಮಾಡಿ ಆಯಾಸ ಪರಿಹಾರ ಮಾಡಿಕೊಂಡೆವು. ಇಲ್ಲಿಂದ 3 ಕಿ.ಮೀ ನಡೆದ ಮೇಲೆ ನಮಗೆ ಒಂದು ವಿಶಾಲವಾದ ನೀರಿನ ತೊರೆ ಎದುರಾಯಿತು. ನಮ್ಮ ಶೂಗಳನ್ನು ಬಿಚ್ಚಿ ನೀರನ್ನು ದಾಟಿ ಆಚೆ ದಡವನ್ನು ತಲುಪಿ ಒಂದು ಸಣ್ಣ ದಿಬ್ಬವನ್ನು ಹತ್ತಿ ಇಳಿಯುತ್ತಿದ್ದಂತೆ ನಮಗೆ ಕರೆಂಝೋಲ್ ಕ್ಯಾಂಪ್ ಎದುರಾಯಿತು. ಅಲ್ಲಿ ನಮ್ಮೆಲ್ಲರನ್ನೂ ಕ್ಯಾಂಪ್ ಲೀಡರ್, ಅಭಿಷೇಕ್ ಹಾರ್ದಿಕವಾಗಿ ತಂಪು ಪಾನೀಯವನ್ನು ನೀಡುವುದರ ಮೂಲಕ ಸ್ವಾಗತಿಸಿದರು. ಅಡಿಗೆ ಟೆಂಟ್‌ನಿಂದ ಮಲಗುವ ಟೆಂಟ್‌ಗೆ ಸುಮಾರು ಅರ್ಧ ಕಿ.ಮೀ ದೂರ ಹಾಗೂ ಇದು ಒಂದು ಸುಂದರವಾದ ಹುಲ್ಲುಗಾವಲಿನಲ್ಲಿತ್ತು. ಟೆಂಟಿನಲ್ಲಿ ನಮ್ಮ ಬ್ಯಾಕ್‌ಪ್ಯಾಕ್‌ಇಟ್ಟು ಸ್ವಲ್ಪ ವಿಶ್ರಾಂತಿ ನಂತರ ಅಡಿಗೆ ಟೆಂಟ್ ಕಡೆಗೆ ಹೋಗಿ ಅಲ್ಲೇ ನೀರಿನಲ್ಲಿ ಕಾಲುಗಳನ್ನು ಇಳಿಬಿಟ್ಟು ಕುಳಿತೆವು. ಅರ್ಧ ಗಂಟೆಯ ನಂತರ ಚಹಾ ಕುಡಿದು ರಾತ್ರಿ 7.30ಕ್ಕೆ ಊಟವನ್ನು ಮುಗಿಸಿ ಎಲ್ಲರೂ ಟೆಂಟಿಗೆ ಬಂದು ಮಲಗಿದೆವು.

ಮಾರನೇ ದಿನ ಚಹಾ ಕುಡಿದ ನಂತರ ನೀರಿನ ತೊರೆಯಲ್ಲಿ ಸ್ನಾನ ಮಾಡಿ ಉಪಾಹಾರ ಮುಗಿಸಿ ಊಟದ ಬುತ್ತಿ ಪಡೆದು ಎಲ್ಲರೂ 9 ಗಂಟೆಗೆ 14 ಕಿ.ಮೀ ದೂರದಲ್ಲಿರುವ ನಂದ್ರೆನ್ ಕ್ಯಾಂಪಿಗೆ ಪ್ರಯಾಣ ಆರಂಭಿಸಿದೆವು. ನಮ್ಮ ಜೊತೆಗೆ ಕ್ಯಾಂಪ್ ಲೀಡರ್ ಅಭಿಷೇಕ್ ಕೂಡಾ 3 ಕಿ.ಮೀ ದೂರದಲ್ಲಿರುವ ಡೇವಿಲ್

ಕ್ಯಾನ್ಯನ್ (Devil's Canyon) ವರೆಗೂ ಬಂದರು. ಇಲ್ಲಿ ನೀರಿನಲ್ಲಿ ಕೆಲವರು ಇಳಿದು ಸ್ವಲ್ಪ ಸಮಯ ಕಳೆದರು. ನಂತರ ಅರ್ಧ ಕಿ.ಮೀ ನಡೆದು ಅರಣ್ಯದ ಮುಖ್ಯ ರಸ್ತೆಗೆ ಬಂದೆವು. ಮಣ್ಣಿನ ಹಾದಿಯಲ್ಲೇ 3 ಕಿ.ಮೀ ನಡೆದ ಮೇಲೆ ನಮಗೆ ಒಂದು ಮರದ ಕಾಂಡದಲ್ಲಿ ಒಂದು ಕಾಗದ ಕಂಡಿತು. ಅದರಲ್ಲಿ ನಂದ್ರೆನ್ ಕಡೆಗೆ ಎಂದು ಬರೆದಿತ್ತು. ಅದರಂತೆ ಬಲಗಡೆ ತಿರುಗಿ ದಟ್ಟವಾದ ಕಾಡನ್ನು ಪ್ರವೇಶಿಸಿದೆವು. ಇದೇ ಕಾಡಿನಲ್ಲಿ 8 ಕಿ.ಮೀ ನಡೆದು ಮದ್ಯಾಹ್ನ ಒಂದು ಗಂಟೆಗೆ ನೀರಿನ ತೊರೆಯ ಬಳಿಗೆ ಬಂದೆವು. ಅಲ್ಲಿ ಕೈ ಕಾಲು ಮುಖವನ್ನು ತೊಳೆದು ಊಟ ಮಾಡಿ ಸ್ವಲ್ಪ ವಿಶ್ರಮಿಸಿ ನಂತರ ಅಲ್ಲಿಂದ ಮತ್ತೊಂದು ಕಿ.ಮೀ ನಡೆದು 2 ಗಂಟೆಯ ಹೊತ್ತಿಗೆ ನಂದ್ರೆನ್ ಕ್ಯಾಂಪನ್ನು ತಲುಪಿದೆವು. ನಾವು ಬೇಗನೆ ಬಂದಿದ್ದರಿಂದ ನಮಗೆ ಕ್ಯಾಂಪ್ ಪ್ರವೇಶಿಸಲು ಅನುಮತಿ ಇರಲಿಲ್ಲ. ಕೆಲವರು ಹತ್ತಿರದಲ್ಲಿದ್ದ ಮರದ ಕೆಳಗೆ ಕುಳಿತು ಇಸ್ಪೀಟ್ ಆಡಲು ಪ್ರಾರಂಭಿಸಿದರು. ನಾನು ಅಲ್ಲೇ ನಿದ್ರಿಸಿದೆ. ನಂತರ 3 ಗಂಟೆಗೆ ಕ್ಯಾಂಪನ್ನು ಪ್ರವೇಶಿಸಿದೆವು. ಕ್ಯಾಂಪ್ ಇದ್ದದ್ದು 300 ಎಕರೆ ವಿಸ್ತೀರ್ಣದ ಒಂದು ಖಾಸಗಿ ಪ್ರದೇಶದಲ್ಲಿ. ಹತ್ತಿರದಲ್ಲೇ ಕುಡಿಯುವ ನೀರಿನ ಭಾವಿ ಇತ್ತು ಹಾಗೂ ಸ್ವಲ್ಪ ದೂರದಲ್ಲಿ ಸ್ನಾನ ಮಾಡುವ ಮತ್ತೊಂದು ಭಾವಿ ಇತ್ತು. 5 ಗಂಟೆಗೆ ಎಲ್ಲರಿಗಿಂತ ಮುಂಚೆ ನಾನು ಈ ಭಾವಿ ಬಳಿ ಹೋಗಿ ನೀರನ್ನು ಸೇದಿಕೊಂಡು ಸ್ನಾನ ಮುಗಿಸಿದೆ. ನಂತರ ಟೆಂಟ್ ಬಳಿ ಬಂದು ಚಹಾ ಕುಡಿದು ವಿಶ್ರಾಂತಿ ಪಡೆದೆ. ಸಂಜೆ 6.30ಕ್ಕೆ ಖಾರವಾದ ಸೂಪ್ ಕುಡಿದು ಬೇಗ ಕತ್ತಲಾದ್ದರಿಂದ ನಮ್ಮಲ್ಲಿದ್ದ ಟಾರ್ಚ್ ಬೆಳಕಿನಲ್ಲಿ 7 ಗಂಟೆಗೆ ಊಟಮಾಡಿ 8.30ಕ್ಕೆ ನಿದ್ರಿಸಿದೆವು.

ನಮ್ಮ ಎಂಟನೇ ದಿನದ ಚಾರಣವು 18 ಕಿ.ಮೀ ದೂರದಲ್ಲಿರುವ ತಂಬ್ಡಿ ಸುರ್ಲಾ ಮಹಾದೇವ ಮಂದಿರದೆಡೆಗೆ. ಬೆಳಗ್ಗೆ 8 ಗಂಟೆಗೆ ಉಪಾಹಾರ ಸೇವಿಸಿ ಮಧ್ಯಾಹ್ನದ ಊಟದ ಬುತ್ತಿಯನ್ನು ಪಡೆದು 9 ಗಂಟೆಗೆ ಹೊರಟೆವು. ಈ ದಿನದ ಚಾರಣವು ಬಹು ದೀರ್ಘವಾಗಿತ್ತು. 15 ಕಿ.ಮೀ ಹಾದಿ ಕಾಡಿನಲ್ಲಿ ನೆರಳಿನಿಂದ ಕೂಡಿತ್ತು. ನಮ್ಮಲ್ಲಿ ಕೆಲವರು ವೇಗವಾಗಿ ಚಾರಣ ಮಾಡುತ್ತಿದ್ದರೆ ಮತ್ತಷ್ಟು ಚಾರಣಿಗರು ಬಹು ನಿಧಾನವಾಗಿ ಬರುತ್ತಿದ್ದರು. ನಾನು ಈ ಎರಡು ಗುಂಪುಗಳ ನಡುವೆ ಮಧ್ಯಮ ವೇಗದಲ್ಲಿ ಚಾರಣ ಮಾಡುತ್ತಿದ್ದೆ. ನಿರ್ಜನವಾದ ಕಾಡು, ಕೂಗಿದರೂ ಯಾರಿಗೂ ಕೇಳಿಸುತ್ತಿರಲಿಲ್ಲ. ಕೆಲವು ಪಕ್ಷಿಗಳ ಕೂಗನ್ನು ಬಿಟ್ಟರೆ ಬೇರಾವ ಸದ್ದೂ ಇರಲಿಲ್ಲ. ನಾವು ಚಾರಣ ಮಾಡುತ್ತಿದ್ದ ಮಾರ್ಗವು ಪಶ್ಚಿಮ ಘಟ್ಟಗಳ ಇಳಿಜಾರು ಪ್ರದೇಶವಾಗಿದ್ದರಿಂದ ಇಲ್ಲಿ ಯಾವುದೇ ಅಪಾಯಕಾರಿಯಾದ ಕಾಡುಪ್ರಾಣಿಗಳು ಬರುವ ಸಾಧ್ಯತೆ ಇರುವುದಿಲ್ಲವೆಂಬ ವಿಷಯವು ನಮಗೆ ಮೊದಲೇ ಗೊತ್ತಿತ್ತು. ಆದರೆ ಹಾವುಗಳು ಹೊರಬರುವ ಸಾಧ್ಯತೆ ಇತ್ತು. ಆದರೆ ಮಧ್ಯಾಹ್ನವಾದ್ದರಿಂದ ಅವುಗಳನ್ನೂ ನೋಡಲಾಗಲಿಲ್ಲ. ಕೆಲವು ಅಪರೂಪದ

ಸಸ್ಯಗಳ ಫೋಟೊ ತೆಗೆದುಕೊಳ್ಳುತ್ತಾ ಚಾರಣ ಮಾಡತೊಡಗಿದೆ. 15 ಕಿ.ಮೀ ಚಾರಣ ಮಾಡಿದ ಮೇಲೆ ಮದ್ಯಾಹ್ನ 1.30ಕ್ಕೆ ಕಾಡಿನಿಂದ ಹೊರಬಂದು ಡಾಂಬರಿನ ರಸ್ತೆ ಪ್ರವೇಶಿಸಿದೆ. ಅಲ್ಲೇ ಇದ್ದ ಒಂದು ಸಣ್ಣ ಅಂಗಡಿಯಲ್ಲಿ ಕುಳಿತು ತಂಪು ಪಾನೀಯ ಕುಡಿದು ನಂತರ 3 ಕಿ.ಮೀ ನಡೆದು ತಂಬ್ಡಿ ಸುರ್ಲಾ ಮಂದಿರ ತಲುಪಿದೆ. ಈ ಮಹಾದೇವ ಮಂದಿರವು 800 ವರ್ಷಗಳಷ್ಟು ಪುರಾತನವಾದದ್ದು. ಮಂದಿರವು ಚಿಕ್ಕದಾಗಿದ್ದು ಬಸಾಲ್ಟ್ ಶಿಲೆಯಿಂದ ನಿರ್ಮಿಸಲಾಗಿದೆ. ಸುತ್ತಲೂ ಸುಂದರವಾದ ಹುಲ್ಲುಗಾವಲಿಂದ ಕೂಡಿದ್ದು ASI ಅವರು ಇದನ್ನು ಸಮರ್ಪಕವಾಗಿ ನೋಡಿಕೊಳ್ಳುತ್ತಿರುವರು. ಮಂದಿರದ ಮುಖ್ಯ ದ್ವಾರದಿಂದ ಹೊರಬಂದು ಕೆಲವು ಮೆಟ್ಟಿಲುಗಳನ್ನು ಇಳಿದು ಹೋದರೆ ನೀರಿನ ತೊರೆಯಿರುವುದು. ಮಂದಿರದ ದಕ್ಷಿಣ ದಿಕ್ಕಿಗೆ ಉದ್ಯಾನವನದಲ್ಲಿ ಒಂದು ಕಾರಂಜಿಯಿರುವುದು. ಮಂದಿರದ ನಾಲ್ಕು ಮೆಟ್ಟಿಲು ಹತ್ತಿದರೆ ಎಂಟು ಕಂಬಗಳನ್ನೊಳಗೊಂಡ ಕಲ್ಲಿನ ಮಂಟಪ ಪ್ರವೇಶಿಸುತ್ತೇವೆ. ಮಂಟಪದ ಮಧ್ಯದಲ್ಲಿ ಶಿರವಿಲ್ಲದ ನಂದಿ ವಿಗ್ರಹವಿರುವುದು. ಗರ್ಭಗುಡಿ ಬಹಳ ಚಿಕ್ಕದಾಗಿದ್ದು ಅಲ್ಲಿ ಸುಂದರವಾದ ಶಿವಲಿಂಗವಿರುವುದು. ಇಡೀ ಮಂದಿರ ಹಾಗೂ ಸುತ್ತಲಿನ ಪ್ರದೇಶವು ಸ್ವಚ್ಛವಾಗಿದೆ. ನಾವು ಮಂದಿರಕ್ಕೆ ಹೋದ ಸಮಯದಲ್ಲಿ ಮಧ್ಯಾಹ್ನ 2.30, ಪೂಜಾರಿ ಇರಲಿಲ್ಲ. ದೇವಾಲಯಕ್ಕೆ ಬಾಗಿಲು ಇಲ್ಲ. ಮಂದಿರದಲ್ಲಿ ಸ್ವಲ್ಪಹೊತ್ತು ಕುಳಿತಿದ್ದು ನಂತರ ಹೊರಬಂದು ನಮಗಾಗಿ ಕಾಯುತ್ತಿದ್ದ ಬಸ್ಸಿನಲ್ಲಿ ಕುಳಿತು ಊಟಮಾಡಿದೆ. 3 ಗಂಟೆಗೆ ಎಲ್ಲರೂ ಬಸ್ಸಿನಲ್ಲಿ ಕುಳಿತು ಸಂಜೆ 4.30ಕ್ಕೆ ಪಣಜಿಯ ಬೇಸ್ ಕ್ಯಾಂಪಿಗೆ ಮರಳಿದೆವು. ಮಾರನೇ ದಿನ ಪಣಜಿಗೆ ವಿದಾಯ ಹೇಳಿ ಬೆಂಗಳೂರಿಗೆ ಮರಳಿದೆನು. ಇಲ್ಲಿಗೆ ದೀರ್ಘವಾದ ಗೋವಾ ಚಾರಣವು ಮುಗಿಯಿತು.

ಪಶ್ಚಿಮ ಘಟ್ಟಗಳಲ್ಲಿನ ಕೊಡೈ–ಮುನ್ನಾರ್ ಚಾರಣ

ಪಶ್ಚಿಮ ಘಟ್ಟಗಳಲ್ಲಿನ ಎಲ್ಲ ಚಾರಣಯೋಗ್ಯ ಸ್ಥಳಗಳ ಚಾರಣ ಮಾಡಲು ಒಂದು ಜನ್ಮ ಸಾಲದು. ಹಿಮಾಲಯ ಪ್ರದೇಶ ಬಿಟ್ಟರೆ ಭಾರತದಲ್ಲಿ ಪಶ್ಚಿಮ ಘಟ್ಟಗಳೇ ಅತ್ಯಂತ ವಿಶಾಲವಾದದ್ದು ಹಾಗೂ ಸುಂದರವಾದದ್ದು. ಒಂದು ಅಂದಾಜಿನ ಪ್ರಕಾರ ಪಶ್ಚಿಮ ಘಟ್ಟಗಳು ಉತ್ತರದ ತಾಪಿ ನದಿಯಿಂದ ದಕ್ಷಿಣ ಭಾರತದ ಕನ್ಯಾಕುಮಾರಿಯವರೆಗೆ 1490 ಕಿ.ಮೀ ಉದ್ದವಿದ್ದು ಒಟ್ಟು 129037 ಚದರ ಕಿ.ಮೀ ವಿಸ್ತೀರ್ಣ ಹೊಂದಿದೆ.

2014 ಡಿಸೆಂಬರ್ ತಿಂಗಳಿನಲ್ಲಿ YHAI, ತಮಿಳುನಾಡು ಶಾಖೆ ಏಳು ದಿನಗಳ ಚಳಿಗಾಲದ ಕೊಡೈ–ಮುನ್ನಾರ್ ರಾಷ್ಟ್ರೀಯ ಚಾರಣ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ತಿಳಿದು ನನಗೆ ತೀವ್ರ ಸಂತೋಷವಾಯಿತು. ನಾನು, ಪಿ.ಎಸ್.ರಮೇಶ್ ಹಾಗೂ ವೆಂಕಟಸುಬ್ಬಯ್ಯ – ಮೂವರೂ ಈ ಚಾರಣ ಮಾಡಲೇಬೇಕೆಂದು ನಿರ್ಧರಿಸಿ 21 ಡಿಸೆಂಬರ್ 2014ರ ಬ್ಯಾಚ್‌ಗೆ ಬುಕ್ ಮಾಡಿದೆವು. ಈ ಬ್ಯಾಚ್‌ನಲ್ಲಿ ಒಟ್ಟು 29 ಚಾರಣಿಗರಿದ್ದು ಅವರಲ್ಲಿ ರವೀಶ್ ಕೋಟೆ ಹಾಗೂ ಶಶಿಧರ ಎಂಬ ಇಬ್ಬರು ತರುಣ ಚಾರಣಿಗರು (ಬೆಂಗಳೂರಿನವರು) ನಮಗೆ ಹತ್ತಿರವಾದರು ಹಾಗೂ ನಂತರದ ಹಲವಾರು ಚಾರಣಗಳಲ್ಲಿ ನಮ್ಮೊಂದಿಗೆ ಭಾಗವಹಿಸಿದರು.

ಚಾರಣ ಕಾರ್ಯಕ್ರಮದ ವೇಳಾಪಟ್ಟಿ ಈ ರೀತಿಯಿತ್ತು:

ಮೊದಲನೇ ದಿನ – ಕೊಡೈಕೆನಾಲ್ ಬೇಸ್ ಕ್ಯಾಂಪಿಗೆ ಮಧ್ಯಾಹ್ನ 2.30ರೊಳಗೆ ತಲಪುವುದು.

ಎರಡನೇ ದಿನ – ಕೊಡೈಕೆನಾಲ್‌ನಿಂದ ಬೆರಿಜಾಮ್ ಸರೋವರದೆಡೆಗೆ – 12 ಕಿ.ಮೀ ನಡಿಗೆ

ಮೂರನೇ ದಿನ – ಬೆರಿಜಾಮ್ ಸರೋವರದಿಂದ ಕಾವುಂಜಿ ಕ್ಯಾಂಪ್ – 10 ಕಿ.ಮೀ ನಡಿಗೆ
ನಾಲ್ಕನೇ ದಿನ – ಕಾವುಂಜಿ ಕ್ಯಾಂಪಿನಿಂದ ಕಡವರ್ೈ ಕ್ಯಾಂಪಿಗೆ – 12 ಕಿ.ಮೀ ನಡಿಗೆ
ಐದನೇ ದಿನ – ಕಡವರ್ೈ ಕ್ಯಾಂಪಿನಿಂದ ಕೋವಿಲೂರ್ – 10 ಕಿ.ಮೀ ನಡಿಗೆಸ – ಅಲ್ಲಿಂದ ಜೀಪಿನಲ್ಲಿ ಮುನ್ನಾರ್ ಕಡೆಗೆ ಪ್ರಯಾಣ
ಆರನೇ ದಿನ – ಮುನ್ನಾರ್‌ನಿಂದ 8400 ಅಡಿ ಎತ್ತರದ ಕೋಲಕ್ಕುಮಲ್ಕೈ ಶಿಖರ – ಪ್ರಪಂಚದಲ್ಲಿನ ಅತಿ ಎತ್ತರದ ಪ್ರದೇಶದಲ್ಲಿನ ಚಹಾ ತೋಟದೆಡೆಗೆ 35 ಕಿ.ಮೀ ದೂರ ಜೀಪಿನಲ್ಲಿ ಪ್ರಯಾಣ. ನಂತರ ಮುನ್ನಾರ್‌ನಲ್ಲಿನ ಪ್ರೇಕ್ಷಣೀಯ ಸ್ಥಳಗಳಾದ – Echo–Point, ಮಟ್ಟುಪಟ್ಟಿ ಅಣೆಕಟ್ಟು, Eravikulam Tahr Sanctuary, Nyaamakaadu waterfalls, Aanaimudi view (highest peak in South India) – ಈ ಸ್ಥಳಗಳಿಗೆ ಸಮಯವನ್ನು ಗುರಿಯಾಗಿಟ್ಟುಕೊಂಡು ಭೇಟಿ.
ಏಳನೇ ದಿನ – ಬೆಳಗಿನ ಉಪಾಹಾರದ ನಂತರ ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಮರುಪ್ರಯಾಣ.

ಆದರೆ ಕಾರಣಾಂತರದಿಂದ ನಾವು ಕೊಡೈಕೆನಾಲ್ ತಲುಪಿದಮೇಲೆ ಮೊದಲದಿನ ರಾತ್ರಿಯಲ್ಲಿ ಚಾರಣದ ನಾಯಕರು ಕಾರ್ಯಕ್ರಮದಲ್ಲಿ ಬದಲಾವಣೆಯನ್ನು ಮಾಡಬೇಕಾಯಿತು. ಅದರಂತೆ ನಾವು ಬೆರಿಜಾಮ್ ಸರೋವರದೆಡೆಗೆ ಹೋಗಲಾಗಲಿಲ್ಲ. ಅದನ್ನು ಹೊರತುಪಡಿಸಿ ಬೇರೆಲ್ಲಾ ಸ್ಥಳಗಳಿಗೂ ಚಾರಣ ಮಾಡಿದೆವು. ನಮ್ಮ ಅರನೇ ದಿನದ ಕಾರ್ಯಕ್ರಮ ಮುನ್ನಾರ್ ಕ್ಯಾಂಪಿನಿಂದ 8400 ಅಡಿ ಎತ್ತರದ ಕೊಲಕ್ಕುಮಲ್ಯೆ ಚಹಾ ಫ್ಯಾಕ್ಟರಿಯೆಡೆಗೆ ಜೀಪಿನಲ್ಲಿ ಪ್ರಯಾಣ. ಇಲ್ಲಿಗೆ ಹೋಗಬೇಕಿದ್ದರೆ ಕೇವಲ ಜೀಪಿನಲ್ಲಿ ಮಾತ್ರ ಸಾಧ್ಯ, ಏಕೆಂದರೆ ಮಾರ್ಗವು ಅತ್ಯಂತ ಕಠಿಣವಾದದ್ದು. ಮಾರ್ಗದಲ್ಲಿ ನಾವು ಸೂರ್ಯನೆಲ್ಲಿ ಟೀ ಫ್ಯಾಕ್ಟರಿಯ ಬಳಿ ಇಳಿದು ಅಲ್ಲಿನ ಟೀ ಪುಡಿ ತಯಾರಿಸುವ ವಿಧಾನವನ್ನು ವೀಕ್ಷಿಸಿ, ವಿಶೇಷವಾದ ಚಹಾ ಕುಡಿದು ನಮ್ಮಲ್ಲಿ ಕೆಲವರು ಚಹಾ ಪೊಟ್ಟಣ ಖರೀದಿಸಿ ನಂತರ ಶಿಖರದೆಡೆಗೆ ಜೀಪಿನಲ್ಲಿ ಮುಂದುವರೆದೆವು. ಶಿಖರ ತಲುಪಿ ಅಲ್ಲಿನ ಸಮತಟ್ಟಾದ ಪ್ರದೇಶದಲ್ಲಿ ಅಡ್ಡಾಡಿ ಸುತ್ತಲಿನ ದೃಶ್ಯ ವೀಕ್ಷಿಸಿ ಆನಂದಿಸಿದೆವು. ಇಲ್ಲಿ ಮೋಡಗಳ ಮೇಲೆ ನಾವಿದ್ದೆವು. ಇಲ್ಲಿಂದ ನಾವು ಒಂದೆಡೆ ಕೊಡೈಕೆನಾಲ್ ನೋಡಿದರೆ ಮತ್ತೊಂದೆಡೆಗೆ ಮುನ್ನಾರ್ ನಗರವನ್ನೂ ನೋಡಿದೆವು.

ನೀಲಗಿರಿ ಸರೋವರದೆಡೆಗೆ ಒಂದು ದಿನದ ಚಾರಣ

2015 ಮಾರ್ಚ್ 13ರಿಂದ 15ರ ವರೆಗಿನ ನೀಲಗಿರಿ ಹಸಿರು ಸರೋವರದೆಡೆಗಿನ ಚಾರಣಕ್ಕೆ ಇಂಡಿಯಾ ಹೈಕ್ಸ್ ಅವರ ಕರೆಯ ಮೇರೆಗೆ ನಾನು ನನ್ನ ಹೆಸರನ್ನು ನೋಂದಾಯಿಸಿಕೊಂಡು 12ನೇ ತಾರೀಖಿನ ರಾತ್ರಿ ಅವರೇ ನಿಗದಿಪಡಿಸಿದ್ದ ಟೆಂಪೋ ಟ್ರಾವಲರ್‌ನಲ್ಲಿ ಹತ್ತಿ ಇತರ 11 ಚಾರಣಿಗರೊಂದಿಗೆ ಊಟಿಯನ್ನು ಮರುದಿನ ಮುಂಜಾನೆ 5 ಕ್ಕೆ ತಲುಪಿದೆವು. ಅಲ್ಲಿನ ಹೋಟೆಲೊಂದರಲ್ಲಿ ಮುಂಜಾನೆಯ ಕಾರ್ಯಗಳನ್ನು ಮುಗಿಸಿಕೊಂಡು ಉಪಾಹಾರವನ್ನು ಸೇವಿಸಿ ಮಾರ್ಗದರ್ಶಿಯೊಂದಿಗೆ ಸರೋವರದೆಡೆಗೆ ಚಾರಣ ಪ್ರಾರಂಭಿಸಿದೆವು. ಬೇಸ್ ಕ್ಯಾಂಪ್ ಇದ್ದದ್ದು ಊಟಿಯ ಸುಪ್ರಸಿದ್ಧ ಹಿಂದೂಸ್ಥಾನ್ ಫೋಟೋ ಫಿಲ್ಮ್ಸ್ ಕಾರ್ಖಾನೆಯ ಹಿಂಭಾಗದಲ್ಲಿ. ಈ ಚಾರಣವು ಸುಲಭವಾದದ್ದು. ಹಸಿರು ಹುಲ್ಲುಗಾವಲಿನಲ್ಲಿ ಅಲ್ಲಲ್ಲೇ ಹತ್ತುವುದು ಹಾಗೂ ಇಳಿಯುವುದು ಮಾಡುತ್ತಾ 2300 ಮೀಟರ್ ಎತ್ತರ ತಲುಪಬೇಕಿತ್ತು. ಮೊದಲಿಗೆ ನಾವು ನೀಲಗಿರಿ ಮರಗಳಿಂದ ಕೂಡಿದ ಮಾರ್ಗದಲ್ಲಿ ಅರ್ಧ ಗಂಟೆ ಚಾರಣ ಮಾಡಬೇಕಿದ್ದು ಬೆಳಗಿನ ಹಿತವಾದ ಗಾಳಿಯ ಮೂಲಕ ನೀಲಗಿರಿಯ ಸುವಾಸನೆ ನಮ್ಮ ಮೂಗಿಗೆ ಹಾಗೂ ಮನಸ್ಸಿಗೆ ಮುದವನ್ನುಂಟುಮಾಡುತ್ತಿತ್ತು. ನಂತರ ನಾವು ಸುಂದರವಾದ ಹುಲ್ಲುಗಾವಲನ್ನು ಪ್ರವೇಶಿಸಿ ಮುನ್ನಡೆದು ಹಸಿರಾದ ಊಟಿ ಗಾಲ್ಫ್ ಮೈದಾನ ದಾಟಿ ಒಂದು ಗುಡ್ಡದೆಡೆಗೆ ಹೋಗತೊಡಗಿದೆವು. ಅಲ್ಲಿಂದ ಮುಂದುವರೆದು ಸ್ವಲ್ಪ ಸಮಯದಲ್ಲೇ ರಸ್ತೆ ಪ್ರವೇಶಿಸಿ ಒಂದು ಕವಲು ದಾರಿಯಲ್ಲಿ ನಮ್ಮ ಎಡಕ್ಕೆ ತಿರುಗಿ 5 ನಿಮಿಷ ನಡೆದ ಕೂಡಲೇ ನಮಗೆ ಸರೋವರದ ಮೊಟ್ಟ ಮೊದಲ ದೃಶ್ಯವು ಕಂಡುಬಂದಿತು. ಇಲ್ಲೇ ಸ್ವಲ್ಪ ಹೊತ್ತು ಇದ್ದು ಸರೋವರದ ಸೌಂದರ್ಯ ಹಾಗೂ ಭವ್ಯತೆಯನ್ನು ಕಣ್ಣುಗಳಲ್ಲಿ ತುಂಬಿಕೊಂಡೆವು. ನಂತರ ಮಣ್ಣಿನ ರಸ್ತೆಯ ಮೂಲಕ ಬಲಕ್ಕೆ ತಿರುಗಿ ಒಂದು ದಿಬ್ಬ ಹತ್ತಿ ಇಳಿದ ಮೇಲೆ ಮತ್ತೊಂದು ದಿಕ್ಕಿನಲ್ಲಿ ಸರೋವರವು ಕಾಣಿಸತೊಡಗಿತು. ಇಲ್ಲಿಂದ ನಮ್ಮ ಮಾರ್ಗದುದ್ದಕ್ಕೂ ಸರೋವರ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಸರೋವರದ ದಂಡೆಗೆ ಇಳಿದೆವು. ಸರೋವರದ ಸುತ್ತಲೂ ಅರಣ್ಯವಿದ್ದು ಮೇಲೆ ಆಕಾಶ ಸರೋವರವನ್ನೇ ವೀಕ್ಷಿಸುತ್ತಿರುವಂತಿತ್ತು. ಸ್ವಲ್ಪ ಸಮಯದಲ್ಲೇ ನಮ್ಮ ಚಾರಣ ಮಾರ್ಗ ಅರಣ್ಯವನ್ನು ಪ್ರವೇಶಿಸಿತು. ನಮ್ಮ ಕಾಲ್ಕೆಳಗಿನ ಮಾರ್ಗವು ಬಣ್ಣ ಬಣ್ಣದ ಎಲೆಗಳಿಂದ ಮೆತ್ತಗಿತ್ತು. ಸುತ್ತಲೂ ಅನೇಕ ಒಣಗಿದ ಪೈನ್ ಹಣ್ಣುಗಳು ಬಿದ್ದಿದ್ದು ದೃಶ್ಯವು ಸುಂದರವಾಗಿತ್ತು. ನಮ್ಮ ಮಾರ್ಗ

ಸರೋವರ ಸುತ್ತಿಕೊಂಡು ಹೋಗತೊಡಗಿತು. ಹತ್ತು ನಿಮಿಷಗಳಲ್ಲೇ ಇದುವರೆಗೂ ಕಂಡಿರದ ಸರೋವರದ ಸುಂದರ ದೃಶ್ಯ ನಮಗೆದುರಾಯಿತು. ಇಲ್ಲಿಂದ ಕಾಡಿನ ನೆಲವು ಬದಲಾಗತೊಡಗಿತು. ನೆಲದ ಮೇಲೆಲ್ಲಾ ಪೈನ್ ಎಲೆಗಳು ಶಾವಿಗೆಯಂತೆ ಹರಡಿಕೊಂಡು ಬೇರೆಯದೇ ಆದ ಬಣ್ಣವಿದ್ದು ನೆಲವು ಮೆತ್ತಗಿತ್ತು. ಈ ಮಾರ್ಗವನ್ನು ನೂಡಲ್-ಮಾರ್ಗ ಎನ್ನುವರು. ಈ ಮಾರ್ಗದಲ್ಲೇ 10 ನಿಮಿಷ ನಡೆದ ಮೇಲೆ ಮತ್ತೊಂದು ವೀಕ್ಷಣಾ ಸ್ಥಳಕ್ಕೆ ಬಂದೆವು. ಇಲ್ಲಿನ ಬಂಡೆಗಳ ಮೇಲೆ ಕುಳಿತು ಸರೋವರದ ಸೌಂದರ್ಯ ನೋಡುತ್ತಾ ನಮ್ಮನ್ನೇ ನಾವು ಮರೆತೆವು. ಇಲ್ಲಿಂದ 20 ನಿಮಿಷ ನಡೆದು ಒಂದು ಪಂಪ್ ಹೌಸ್ ಬಳಿಗೆ ಬಂದೆವು. ಈಗ ನಾವು ಸರೋವರದ ಮತ್ತೊಂದು ದಿಕ್ಕಿಗೆ ಬಂದಿದ್ದೆವು. ನಮ್ಮ ಮಾರ್ಗದರ್ಶಿ ಇಲ್ಲೇ ಮರದ ನೆರಳಿಗೆ ಹೋಗಿ ಮದ್ಯಾಹ್ನದ ಊಟವನ್ನು ಅಂದರೆ ಮ್ಯಾಗಿ ನೂಡಲ್ಸನ್ನು ತಯಾರಿಸಲು ಪ್ರಾರಂಭಿಸಿದರು. ನಾವುಗಳೂ ಅಲ್ಲಿಗೆ ಹೋಗಿ ತರಕಾರಿಗಳನ್ನು ಹೆಚ್ಚಿಕೊಡುವ ಮೂಲಕ ಅಡಿಗೆಗೆ ಸಹಾಯ ಮಾಡಿದೆವು. ಮಾರ್ಗದರ್ಶಿ ತನ್ನೊಂದಿಗೆ ಸಣ್ಣ ಗ್ಯಾಸ್ ಸಿಲೆಂಡರ್, ಪಾತ್ರೆಗಳು, ತಟ್ಟೆಗಳು, ಅಡಿಗೆ ಪದಾರ್ಥಗಳನ್ನೂ ತಂದಿದ್ದನು. ಸ್ವಲ್ಪ ಸಮಯದಲ್ಲೇ ಮ್ಯಾಗಿ ನೂಡಲ್ಸ್ ತಯಾರಾಗಿ ಎಲ್ಲರೂ ತೃಪ್ತಿಯಿಂದ ತಿಂದೆವು. ಊಟವಾದ ಮೇಲೆ ಸರೋವರದ ಪಕ್ಕದಲ್ಲೇ ಇರುವ ಮಾರ್ಗವು ಸರೋವರವನ್ನು ಸುತ್ತುವರೆದು ಅರ್ಧ ಗಂಟೆ ನಂತರ ಕಾಡಿನೊಳಗೆ ಹೋಗುತ್ತದೆ. ಅದರಲ್ಲೇ ನಾವೂ ನಡೆದು ಕಾಡನ್ನು ಪ್ರವೇಶಿಸಿ ಅರ್ಧ ಗಂಟೆಯ ನಂತರ ಶೋಲಾ ಮರಗಳಿಂದ ಕೂಡಿದ ದಿಬ್ಬವನ್ನು ಹತ್ತಿ ಕಾಡಿನಿಂದ ಹೊರಬಂದೆವು. ಅಲ್ಲಿಗೆ ಸರೋವರವು ನಮ್ಮ ದೃಷ್ಟಿಯಿಂದ ದೂರಾಯಿತು. ಮಾರ್ಗವು ಏರುತ್ತಾ ಹಾಗೂ ಇಳಿಯುತ್ತಾ ಸಾಗಿ ನಾವು ಚಾರಣ ಪ್ರಾರಂಭಿಸಿದ ಸ್ಥಳಕ್ಕೇ ಬಂದುಬಿಟ್ಟೆವು. ಇಷ್ಟರಲ್ಲಾಗಲೇ ಸಮಯವು ಮದ್ಯಾಹ್ನ 2 ಗಂಟೆಯಾಗುತ್ತಿತ್ತು. ಇಲ್ಲಿಂದ ಕಾಡಿನ ಮಾರ್ಗದಲ್ಲಿ ಸುಮಾರು 11 ಕಿ.ಮೀ ಚಾರಣ ಮಾಡಿ ಸಂಜೆ 5.00 ಗಂಟೆಗೆ ಕೊಲ್ಲಿಮಲ್ಲೈ ಹಳ್ಳಿಯಲ್ಲಿನ ಆಟದ ಮೈದಾನವನ್ನು ತಲುಪಿದೆವು. ಅಷ್ಟರಲ್ಲಾಗಲೇ ಅಲ್ಲಿ ನಮಗಾಗಿ ಇಂಡಿಯಾ ಹೈಕ್ಸ್ ಸಿಬ್ಬಂದಿ 6 ಟೆಂಟ್ ಸಿದ್ಧಪಡಿಸಿದ್ದರು. ಸ್ವಲ್ಪ ವಿಶ್ರಾಂತಿ ನಂತರ ಎಲ್ಲರೂ ಚಹಾ ಕುಡಿದು ಹರಟೆಯಲ್ಲಿ ಮಗ್ನರಾದೆವು. ರಾತ್ರೆ 7 ಗಂಟೆಗೆ ಎಲ್ಲರೂ ಹತ್ತಿರದ ಹೋಟೆಲೊಂದಕ್ಕೆ ಹೋಗಿ ಊಟ ಮುಗಿಸಿ ಮರಳಿ ಕ್ಯಾಂಪಿಗೆ ಬಂದು ನಿದ್ರಿಸಿದೆವು. ಮಾರನೇ ದಿನ ಮುಂಜಾನೆ ನಮ್ಮ ಟಿಟಿ ವಾಹನವು ನಮಗಾಗಿ ಕಾಯುತ್ತಿತ್ತು. ಬೆಳಗಿನ ಉಪಾಹಾರದ ನಂತರ ಎಲ್ಲರೂ ವಾಹನವನ್ನೇರಿ ಬೆಂಗಳೂರಿನ ಕಡೆಗೆ ಪ್ರಯಾಣಮಾಡಿ ಸಂಜೆ 4.30ಕ್ಕೆ ಬ್ಯಾಟರಾಯನಪುರ ಪೊಲೀಸ್ ಸ್ಟೇಷನ್ ಬಳಿ ಇಳಿಯುವುದರೊಂದಿಗೆ ನನ್ನ ನೀಲಗಿರಿ ಹಸಿರು ಸರೋವರದ ಚಾರಣ ಮುಗಿಯಿತು.

ದೊಡ್ಡಬಳ್ಳಾಪುರದಲ್ಲಿನ ಮಾಕಳಿದುರ್ಗದೆಡೆಗಿನ ಅರ್ಧದಿನದ ಚಾರಣ

ಮಾಕಳಿ ದುರ್ಗದ ಚಾರಣ ಕೇವಲ ಅರ್ಧದಿನದ ಚಾರಣ. 5–15 ವರ್ಷದ ಮಕ್ಕಳಿಗೆ ಹಾಗೂ ಪ್ರಥಮ ಬಾರಿಗೆ ಬೆಟ್ಟವನ್ನು ಹತ್ತಲು ಪ್ರಯತ್ನಿಸುವವರಿಗೆ ಮತ್ತು ವಾರಾಂತ್ಯದ ಸಾಹಸ, ಮೋಜು, ಮಸ್ತಿ ಮಾಡಿಕೊಂಡು ಸಂತೋಷವಾಗಿ ಕಾಲ ಕಳೆಯಲು ಇಚ್ಛಿಸುವವರಿಗೆ ಹೇಳಿ ಮಾಡಿಸಿದ ಚಾರಣ. ಹಾಗಿದ್ದಮೇಲೆ ನೀವೇಕೆ ಈ ಚಾರಣವನ್ನು ಮಾಡಿದಿರಿ! ಎನ್ನುವಿರಾ! 12 ವರ್ಷದ ನನ್ನ ಮೊಮ್ಮಗನಿಗೆ ಬೆಟ್ಟವನ್ನು ಹತ್ತಲು ಆಸಕ್ತಿಯುಂಟಾಗಿ ನನ್ನಲ್ಲಿ ಈ ವಿಷಯ ಹಂಚಿಕೊಂಡನು. ಸರಿ ಹೋಗೋಣ ಎಂದೆ. ನನ್ನ ಮಗಳೂ ಸಹ ಬರಲು ಅಸಕ್ತಿ ತೋರಿದಳು. ಹಾಗಾಗಿ ಇಂಡಿಯಾ ಹೈಕ್ಸ್ ಸಂಸ್ಥೆಯ 27/6/2015 ಒಂದು ದಿನದ ಈ ಕಾರ್ಯಕ್ರಮಕ್ಕೆ ಎಲ್ಲರ ಹೆಸರುಗಳನ್ನು ನೋಂದಾಯಿಸಿದೆ.

4430 ಅಡಿ ಎತ್ತರದ ಮಾಕಳಿದುರ್ಗ ಬೆಟ್ಟ ಬೆಂಗಳೂರಿನ ಹೊರವಲಯದಲ್ಲಿ ಸುಮಾರು 60 ಕಿ.ಮೀ ದೂರದಲ್ಲಿರುವುದು. ದೊಡ್ಡಬಳ್ಳಾಪುರದಿಂದ 10 ಕಿ.ಮೀ ದೂರದಲ್ಲಿರುವುದು. ಈ ಬೆಟ್ಟದ ಪಶ್ಚಿಮ ದಿಕ್ಕಿನಲ್ಲಿ ದಕ್ಷಿಣ ಅಮೆರಿಕ ಖಂಡವನ್ನೇ ಹೋಲುವ ಒಂದು ಸರೋವರವಿರುವುದು. ಬೆಟ್ಟದ ಬುಡದಲ್ಲಿ ರೈಲ್ವೆ ಮಾರ್ಗವಿದ್ದು ಸುತ್ತಲಿನ ದೃಶ್ಯವು ಪಾಶ್ಚಿಮಾತ್ಯ ಚಲನಚಿತ್ರದ ದೃಶ್ಯಗಳನ್ನು ನೆನಪಿಸುತ್ತವೆ. ರೈಲು ಹೋಗುವಾಗ ಇಲ್ಲಿ ನಿಂತು ನೋಡುವುದು ಮತ್ತೊಂದು ಸುಂದರ ದೃಶ್ಯವೇ ಸರಿ. ಮಾಕಳಿದುರ್ಗದ ಕೋಟೆಯಿರುವುದು ಬೆಟ್ಟದ ಮೇಲೆ. ಚಾರಣವನ್ನು ಮಾಕಳಿದುರ್ಗದ ರೈಲ್ವೆ ನಿಲ್ದಾಣದಿಂದ ಪ್ರಾರಂಭಿಸಿದಲ್ಲಿ ಚಾರಣಕ್ಕೆ ಪ್ರಾಚೀನ ವಿಧಾನವನ್ನು ಸೇರಿಸಿದಂತಿರುತ್ತದೆ. ರೈಲ್ವೆ ನಿಲ್ದಾಣದಿಂದ ಬೆಟ್ಟದ ಬುಡಕ್ಕೆ 3 ಕಿ.ಮೀ ಚಾರಣ ಮಾಡಬೇಕು. ಈ ಮಾರ್ಗದಲ್ಲಿ ಹೋದಲ್ಲಿ ರೈಲ್ವೆ ಹಳಿಯ ಬದಿಯಲ್ಲಿ ನಾವು 54/400 ತೋರಿಸುವ ಹಲಗೆಯನ್ನು ಮೊದಲು ನೋಡಬೇಕು.

ಇಲ್ಲಿಂದ ಎಡಕ್ಕೆ ತಿರುಗಿ ದೇವಸ್ಥಾನದೆಡೆಗೆ ಹೋಗಬೇಕು ಹಾಗೂ ಇಲ್ಲಿ ಒಂದು ಕೊಳವಿದೆ. ಈ ಮಂದಿರ ದಾಟಿ ನೇರವಾಗಿ ಹೋದಲ್ಲಿ ಬಲಭಾಗದಲ್ಲಿ ನಮಗೆ ಎರಡು ದೊಡ್ಡ ಬಂಡೆಗಳು ಎದುರಾಗುವುದು. ಮಾರ್ಗವನ್ನು ಗುರುತಿಸಲು ಬಿಳಿ ಹಾಗೂ ಕೆಂಪು ಬಣ್ಣಗಳಿಂದ ಬಾಣದ ಗುರುತುಗಳಿರುವುದು. ಸ್ವಲ್ಪ ಹೊತ್ತು ಚಾರಣ ಮಾಡಿದ ಮೇಲೆ ಒಂದು ದೊಡ್ಡಬಂಡೆ ಸಿಗುತ್ತದೆ. ಇಲ್ಲಿಂದ ಎಡಕ್ಕೆ ತಿರುಗಿ ಮುಂದುವರಿಯಬೇಕು. ಬೆಟ್ಟವನ್ನು ಹತ್ತಲು ಮಕ್ಕಳಿಗೆ 45 ನಿಮಿಷ ಸಾಕಾದರೆ ಪ್ರಥಮ ಬಾರಿಗೆ ಬೆಟ್ಟವನ್ನು ಹತ್ತುವವರಿಗೆ ಹಾಗೂ ಅಲ್ಲಲ್ಲಿ ಕುಳಿತು ವಿಶ್ರಮಿಸಿಕೊಂಡು ಹೋದಲ್ಲಿ ಸುಮಾರು 2 ಗಂಟೆ ಬೇಕಾಗುವುದು. ಕೋಟೆಯ ಆವರಣ ಹಾಗೂ ಗೋಡೆಗಳಿಂದ ಸುತ್ತುವರೆದಿದ್ದು ಇದರ ಹಿಂದಿನ ಚರಿತ್ರೆಯನ್ನು ಸಾರುತ್ತಿರುವುದು. ಕೋಟೆಯನ್ನು ವಿಜಯನಗರದ ಅರಸರು ಮೊದಲಿಗೆ ಉಪಯೋಗಿಸುತ್ತಿದ್ದರೆಂದು ಹಾಗೂ ನಂತರದಲ್ಲಿ ಮರಾಠಾ ಸರದಾರ ಶಹಾಜಿ(ಶಿವಾಜಿಯ ತಂದೆ) ವಶಪಡಿಸಿ ಕೊಂಡಿದ್ದನೆಂದೂ ಹಾಗೂ ನಂತರ ಇದನ್ನು ಕೆಂಪೇಗೌಡನು ವಶಪಡಿಸಿಕೊಂಡು ಆಳುತ್ತಿದ್ದನೆಂದು ಚರಿತ್ರೆಯು ತಿಳಿಸುತ್ತದೆ.

ಬೆಟ್ಟದ ಮೇಲಿನ ಭಾಗವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಪೂರ್ವ, ಪಶ್ಚಿಮ ಹಾಗೂ ಮಧ್ಯಭಾಗ. ಮಧ್ಯಭಾಗದಲ್ಲಿ ಒಂದು ಶಿವನ ಮಂದಿರವಿದೆ. ಪಶ್ಚಿಮ ಭಾಗದಿಂದ ಸರೋವರದ ಸುಂದರ ದೃಶ್ಯ ಗೋಚರಿಸುವುದು. ದೇವಸ್ಥಾನದಿಂದ ಪೂರ್ವ ದಿಕ್ಕಿಗೆ ಒಂದು ಮಾರ್ಗವಿರುವುದು.

ನಾವು ಬೆಟ್ಟವನ್ನು ಸಾವಕಾಶವಾಗಿ ಹತ್ತಿ ಮೇಲ್ಗಡೆ ತಲುಪಿದಾಗ ತಂಪಾದ ಗಾಳಿ ಬೀಸುತ್ತಿತ್ತು. ಅಲ್ಲಿ ಸ್ವಲ್ಪಹೊತ್ತು ವಿಶ್ರಾಂತಿ ಪಡೆದು ನಮ್ಮೊಂದಿಗೆ ತಂದಿದ್ದ ಊಟದ ಬುತ್ತಿಯನ್ನು ಖಾಲಿ ಮಾಡಿದ ನಂತರ ಬೆಟ್ಟದ ಸುತ್ತಲೂ ನಡೆದಾಡಿ ಸುಂದರ ದೃಶ್ಯಗಳನ್ನು ಕಣ್ತುಂಬಿಕೊಂಡೆವು. ನಂತರ 2 ಗಂಟೆಗೆ ನಿಧಾನವಾಗಿ ಇಳಿಯ ತೊಡಗಿದೆವು. 3 ಗಂಟೆಗೆ ಕೆಳಗೆ ಬಂದು ನಮ್ಮ ಕಾರಿನಲ್ಲಿ ಬೆಂಗಳೂರಿಗೆ ಮರಳಿದೆವು.

ಮಹಾರಾಷ್ಟ್ರದಲ್ಲಿನ ಪ್ರತಾಪಗಡ ಹಾಗೂ ರಾಯಗಡದೆಡೆಗಿನ ಚಾರಣ

ನವೆಂಬರ್ 2019ರಲ್ಲಿ ನೀಲಗಿರಿ ಟ್ರೆಕ್ಕರ್ಸ್ ಅಸೋಸಿಯೇಷನ್ ಅವರ ಮುಖ್ಯಸ್ಥ ವಲ್ಲಭ್ ವಾಂಜು ನಮ್ಮನ್ನು ನಾಲ್ಕು ದಿನಗಳ ಮಹಾರಾಷ್ಟ್ರದಲ್ಲಿನ ರತ್ನಗಿರಿ ಪ್ರದೇಶದಲ್ಲಿ ಚಾರಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನಿಸಿದ್ದರು. ಅದರಂತೆ ನಾನು ಹಾಗೂ ಪಿ.ಎಸ್.ರಮೇಶ್ ಅಲ್ಲಿಗೆ ಹೋದೆವು. ಕಾರ್ಯಕ್ರಮದಲ್ಲಿ ಪ್ರತಾಪಗಡ ಹಾಗೂ ರಾಯಗಡ ಕೋಟೆಗಳ ವೀಕ್ಷಣೆ ಪ್ರಮುಖವಾಗಿತ್ತು. ಇವೆರಡು ಕೋಟೆಗಳನ್ನು ನೋಡಲು ಅಲ್ಲಿನ ಬೆಟ್ಟಗಳನ್ನು ಹತ್ತಬೇಕಿತ್ತು.

ಮೊದಲಿಗೆ ಪ್ರತಾಪಗಡ ಕೋಟೆಯ ಬಗ್ಗೆ ಕೆಲವು ಮಾಹಿತಿಗಳು

ಈ ಕೋಟೆ ಮಹಾಬಲೇಶ್ವರದಿಂದ 20 ಕಿ.ಮೀ ದೂರದಲ್ಲಿದೆ. ಕೋಟೆ ಸಮುದ್ರಮಟ್ಟದಿಂದ 1080 ಮೀ ಎತ್ತರದಲ್ಲಿದೆ. ಛತ್ರಪತಿ ಶಿವಾಜಿ ಮಹಾರಾಜರು ಹತ್ತಿರದಲ್ಲಿನ ನೀರ ಮತ್ತು ಕೊಯ್ನಾ ನದಿಯ ಪಾತ್ರಗಳನ್ನು ರಕ್ಷಿಸುವ ಸಲುವಾಗಿ ತನ್ನ ಪ್ರಧಾನ ಮಂತ್ರಿ ಮೊರೊಪಂತ್ ಪಿಂಗ್ಲೆಗೆ ಒಂದು ಕೋಟೆಯನ್ನು ನಿರ್ಮಿಸಲು ಆಜ್ಞಾಪಿಸಿದರು. ಅದರಂತೆ ಕೋಟೆಯನ್ನು ಕ್ರಿ.ಶ.1656ರಲ್ಲಿ ನಿರ್ಮಿಸಲಾಯಿತು. ಈ ಕೋಟೆ ಶಿವಾಜಿ ಮಹಾರಾಜ ಹಾಗೂ ಬಿಜಾಪುರ ಸುಲ್ತಾನ ಅಫ್ಜಲ್ ಖಾನ್ ನಡುವಿನ ಯುದ್ಧಕ್ಕೆ ಸಾಕ್ಷಿಯಾಗಿದೆ. ಈ ಕದನವು 10.11.1659ರಿಂದ ನಡೆಯಿತು.

ಈ ಕದನದ ನಂತರ ಅಫ್ಜಲ್ ಖಾನನ ತಲೆಯನ್ನು ಹೂಳಿದ ಜಾಗದಲ್ಲಿ ಅಫ್ಜಲ್ ಗೋಪುರ ನಿರ್ಮಿಸಲಾಯಿತು. ಈ ಗೋಪುರದಿಂದ ನೈಋತ್ಯಭಾಗದಲ್ಲಿ ಅಫ್ಜಲ್ ಖಾನನ ಸಮಾಧಿ ನಿರ್ಮಿಸಿರುವರು.

ಕೋಟೆಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೇಲಿನ ಕೋಟೆಯನ್ನು ಬೆಟ್ಟದ ತುದಿಯಲ್ಲಿ 180 ಮೀ X 180 ಮೀ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಒಂದು ಮಹಾದೇವ ಮಂದಿರವಿದೆ.

ಕೆಳಗಿನ ಕೋಟೆಯನ್ನು ಈಶಾನ್ಯ ದಿಕ್ಕಿನಲ್ಲಿ 320 ಮೀ X 110 ಮೀ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿದೆ. ಇಲ್ಲಿನ ಪೂರ್ವ ಭಾಗದಲ್ಲಿ ಭವಾನಿ ಮಂದಿರವಿರುವುದು. ಈ ಮಂದಿರದಲ್ಲೇ ಶಿವಾಜಿ ಮಹಾರಾಜರಿಗೆ ಅಂಬಾ ದೇವಿ ಹೊಳೆಯುವ ಕತ್ತಿ ನೀಡಿದ್ದು. ಇಲ್ಲೇ 17 ಅಡಿ ಎತ್ತರದ ಶಿವಾಜಿ ಮಹಾರಾಜರ ಕಂಚಿನ ಪ್ರತಿಮೆಯನ್ನು 30.11.1957ರಂದು ಅಂದಿನ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅನಾವರಣಗೊಳಿಸಿದರು. ಕೆಳಗಿನ ಕೋಟೆಯನ್ನು ರಕ್ಷಿಸಲು ಸುತ್ತಲೂ 10-12ಮೀ ಎತ್ತರದ ಗೋಪುರಗಳನ್ನು ನಿರ್ಮಿಸಲಾಗಿದೆ.

ಕ್ರಿ.ಶ.1818ರಲ್ಲಿ ನಡೆದ ಬ್ರಿಟಿಷ್-ಮರಾಠಾ ಕದನದ ನಂತರ ಮರಾಠಾ ಸೇನೆ ಈ ಕೋಟೆಯನ್ನು ಬ್ರಿಟಿಷರಿಗೆ ಒಪ್ಪಿಸಬೇಕಾಯಿತು.

ನಾವು ಈ ಕೋಟೆಯನ್ನು ತಲುಪಲು 450 ಕಡಿದಾದ ಮೆಟ್ಟಲುಗಳನ್ನು ಹತ್ತಬೇಕು. ನಮಗೆ ಇದು ಅನಾಯಾಸವಾಗಿತ್ತು. ಮೇಲೆ ಹತ್ತಿದ ನಂತರ ನಾವುಗಳು ಕೋಟೆಯ ಹೆಬ್ಬಾಗಿಲನ್ನು ದಾಟಿ ಅಲ್ಲೇ ಇದ್ದ 17 ಅಡಿ ಎತ್ತರದ ಶಿವಾಜಿ ಮಹಾರಾಜರ ಕಂಚಿನ ವಿಗ್ರಹವನ್ನು ನೋಡಿದೆವು. ಅನಂತರ ಭವಾನಿ ಮಂದಿರಕ್ಕೆ ಹೋಗಿ ದೇವಿಯ ದರ್ಶನದ ನಂತರ ದೇವಿಯ ಎದುರಿಗೆ ಒಂದು ಗಾಜಿನ ಪೆಟ್ಟಿಗೆಯೊಳಗೆ ಇಟ್ಟಿರುವ ದೇವಿಯು ಶಿವಾಜಿ ಮಹಾರಾಜನಿಗೆ ನೀಡಿದ ಖಡ್ಗವನ್ನು ನೋಡಿದೆವು. ಬೆಟ್ಟದ ತುದಿಯಿಂದ ಸುತ್ತಲಿನ ಪ್ರಕೃತಿ ದೃಶ್ಯವು ನಯನ ಮನೋಹರವಾಗಿತ್ತು. ಸಂಜೆಯ ಸೂರ್ಯಾಸ್ತವನ್ನು ನೋಡಿಕೊಂಡು ಕೆಳಗಿಳಿದೆವು.

ರಾಯ್‌ಗಢ ಚಾರಣ

ರಾಯ್‌ಗಢ ಕೋಟೆ ಸಮುದ್ರಮಟ್ಟದಿಂದ 820 ಮೀ ಎತ್ತರದಲ್ಲಿರುವ ಸುಂದರ ಕೋಟೆ. ಈ ಕೋಟೆಯನ್ನು ಮೌರ್ಯ ವಂಶದ ಚಂದ್ರರಾವ್ ಮೋರೆ ಎಂಬ ಮರಾಠಾ ಸರದಾರನು ಕ್ರಿ.ಶ.1030ರಲ್ಲಿ ಕಟ್ಟಿಸಿದನು. ಆಗ ಈ ಕೋಟೆಯನ್ನು ರೈರಿ ಎಂದು ಕರೆಯಲಾಗುತ್ತಿತ್ತು. ಕ್ರಿ.ಶ.1656ರಲ್ಲಿ ಶಿವಾಜಿ ಮಹಾರಾಜರ ಈ ಕೋಟೆಯನ್ನು ವಶಪಡಿಸಿಕೊಂಡು ಅದನ್ನು ರಾಯ್‌ಗಡ್ ಎಂದು ನಾಮಕರಣ ಮಾಡಿದರು. ಕ್ರಿ.ಶ.1689ರಲ್ಲಿ ಈ ಕೋಟೆಯನ್ನು ಜುಲ್ಫಿಕರ್ ಖಾನ್ ವಶಪಡಿಸಿಕೊಂಡನು, ಅನಂತರ ಔರಂಗ್ ಜೇಬನು ಈ ಕೋಟೆಗೆ ಇಸ್ಲಾಮ್‌ಗಡ್ ಎಂದು ಹೆಸರಿಟ್ಟನು. ಕ್ರಿ.ಶ.1733 ರಲ್ಲಿ ಈ ಕೋಟೆಯನ್ನು ಸಿದ್ಧಿ ಫತೇಹ್ ಖಾನ್

ವಶಪಡಿಸಿಕೊಂಡನು. ಕ್ರಿ.ಶ.1765ರಲ್ಲಿ ಬ್ರಿಟಿಷರು ಇದನ್ನು ಆಕ್ರಮಿಸಿಕೊಳ್ಳಲು ಪ್ರಾರಂಭಿಸಿ, ಕೊನೆಗೆ 9.5.1818ರಂದು ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟಿತ್ತು.

ಈ ಕೋಟೆಗೆ 1737 ಮೆಟ್ಟಲುಗಳನ್ನು ಹತ್ತಬೇಕು, ಬದಲಿಗೆ 4 ನಿಮಿಷಗಳಲ್ಲಿ ಕೇಬಲ್ ಕಾರ್ ಮೂಲಕ ಮೇಲೆ ಹೋಗಬಹುದು. ಮೇಲಕ್ಕೆ ಹೋಗಿ ಮರಳಿ ಬರಲು ಒಬ್ಬರಿಗೆ ರೂ.285/– ದರ. ಹಿರಿಯ ನಾಗರೀಕರಿಗೆ (ವಯಸ್ಸನ್ನು ತೋರಿಸುವ ಫೋಟೋ ಐ.ಡಿ ಇರಲೇ ಬೇಕು) ರೂ.190/– ರಿಯಾಯ್ತಿ ದರ. ಶಿವಾಜಿ ಮಹಾರಾಜರ ಆಳ್ವಿಕೆಯಲ್ಲಿ ಈ ಕೋಟೆ ಮರಾಠಾ ರಾಜಧಾನಿಯಾಗಿತ್ತು. ಬ್ರಿಟಿಷರು ಇದನ್ನು ಪೂರ್ವದ ಜೀಬ್ರಾಲ್ಟರ್ ಎಂದು ಹೆಸರಿಸಿದ್ದರು. ಈ ಕೋಟೆಗೆ 4 ಬಾಗಿಲುಗಳಿವೆ. ಅವುಗಳೆಂದರೆ – ನಗರಖಾನ, ಮೇನ, ಮಹಾ, ಪಲ್ಕಿ ಬಾಗಿಲುಗಳೆಂದು ಹೆಸರಿಸಲಾಗಿತ್ತು. ಮುಖ್ಯ ಮಾರುಕಟ್ಟೆಯ ಮುಂಭಾಗದಲ್ಲಿ ಶಿವಾಜಿ ಮಹಾರಾಜರ ವಿಗ್ರಹವನ್ನು ಸ್ಥಾಪಿಸಲಾಗಿತ್ತು. ಇದರ ಮುಖಾಂತರ ಮುಂದೆ ಹೋದರೆ ನಮಗೆ ಶಿವಾಜಿ ಮಹಾರಾಜ ಹಾಗೂ ಅವರ ಪ್ರೀತಿಯ ನಾಯಿಯ ಸಮಾಧಿ ಇರುವುದು. ಪ್ರಸ್ತುತದಲ್ಲಿ ಕೋಟೆಗೆ ಭೇಟಿಕೊಡುವವರಿಗೆ – ಶಿವಾಜಿಯ ಪಟ್ಟಾಭಿಷೇಕ ನಡೆದ ಸ್ಥಳ, ಸಮಾಧಿ ಹಾಗೂ ಶಿವ ಮಂದಿರವನ್ನು ಬಿಟ್ಟು ಉಳಿದೆಲ್ಲ ಸ್ಥಳಗಳೂ ಹಾಳಾಗಿಹೋಗಿದೆ.

ನಾವು ಮೆಟ್ಟಲುಗಳನ್ನು ಹತ್ತಲು ಸಂಜೆ 4 ಗಂಟೆಗೆ ಪ್ರಾರಂಭಿಸಿ 5.30ಕ್ಕೆ ಮೇಲೆ ತಲುಪಿ ಶಿವಾಜಿ ಮಹಾರಾಜರ ವಿಗ್ರಹವನ್ನು ನೋಡಿ ಅಲ್ಲಿಂದ ನೇರವಾಗಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕ ನಡೆದ ದರ್ಬಾರ್ ಹಾಲ್ ಬಳಿಗೆ ಹೋದೆವು. ದರ್ಬಾರ್ ಹಾಲ್ ಅಮೋಘವಾಗಿತ್ತು. ವಿಶಾಲವಾದ ದರ್ಬಾರ್ ಹಾಲ್ ಹಾಗೂ ಒಂದು ಬದಿಗೆ ಎತ್ತರದ ವೇದಿಕೆಯಲ್ಲಿ ಒಂದು ಕಲ್ಲಿನ ಸಿಂಹಾಸನದಲ್ಲಿ ಕುಳಿತಿರುವ ಶಿವಾಜಿ ಮಹಾರಾಜರ ಭವ್ಯ ಮೂರ್ತಿ ವೀಕ್ಷಿಸಿದೆವು. ಈ ಮೂರ್ತಿಯ ಎದುರಿಗೆ ಸುಮಾರು 1000 ಅಡಿ ದೂರದಲ್ಲಿ ಜಗದೀಶ್ವರನ ಮಂದಿರವಿದೆ. ಈ ಮಂದಿರವನ್ನು ದಾಟಿ ಹೋದರೆ ನಮಗೆ ಶಿವಾಜಿ ಮಹಾರಾಜರ ಸಮಾಧಿ ಇರುವುದು ಮತ್ತು ಇದರ ಪಕ್ಕದಲ್ಲೇ ಶಿವಾಜಿ ಮಹಾರಾಜರ ಪ್ರೀತಿಯ ನಾಯಿಯ ಸಮಾಧಿಯೂ ಇರುವುದು. ಇವುಗಳನ್ನೆಲ್ಲಾ ನೋಡಿ ನಾವು ಹಿಂತಿರುಗುವಾಗ ಸಂಜೆಯಾಗಿತ್ತು. ಆದ್ದರಿಂದ ನಾವು ಕೇಬಲ್ ಕಾರ್‌ನ ಮೂಲಕ ಕೆಳಗಿಳಿದೆವು.

ತ್ರಯಂಬಕೇಶ್ವರ್ ಬಳಿಯಲ್ಲಿನ ಬ್ರಹ್ಮಗಿರಿಯೆಡೆಗಿನ ಚಾರಣ

ತ್ರಯಂಬಕೇಶ್ವರ ಬಸ್ ನಿಲ್ದಾಣದಿಂದ 3 ಕಿ.ಮೀ ಪಯಣಿಸಿದಲ್ಲಿ ಸಿಗುವುದೇ ಪಶ್ಚಿಮ ಘಟ್ಟ ಶ್ರೇಣಿಯಲ್ಲಿರುವ ಬ್ರಹ್ಮಗಿರಿ ಪರ್ವತದ ತಪ್ಪಲು.

ಬ್ರಹ್ಮಗಿರಿ ಎಂದರೆ ಬ್ರಹ್ಮದೇವನ ಪರ್ವತ. ಪೌರಾಣಿಕ ಕಥೆಯ ಪ್ರಕಾರ, ಈ ಪರ್ವತದಲ್ಲಿ ಗೌತಮ ಮುನಿಗಳು ತಮ್ಮ ಪತ್ನಿ ಅಹಲ್ಯೆಯೊಂದಿಗೆ ವಾಸಿಸುತ್ತಿದ್ದರು. ಈ ಕ್ಷೇತ್ರವನ್ನು ಅಪಾಯದಿಂದ ಕಾಪಾಡುವ ಇಂಗಿತದಿಂದ ಗೌತಮ ಮುನಿಗಳು ಹಸುವೊಂದನ್ನು ಕೊಲ್ಲಬೇಕಾಯಿತು. ಗೋಹತ್ಯಾ ಪಾಪ ಕಳೆದುಕೊಳ್ಳಲು ಗಂಗೆಯನ್ನು ಸ್ವರ್ಗದಿಂದ ಭೂಮಿಗೆ ತರಲು ಅವರು ಶಿವನನ್ನು ಕುರಿತು ತಪಸ್ಸನ್ನಾಚರಿಸಿದರು. ಗೌತಮ ಮುನಿಗಳ ಭಕ್ತಿಗೆ ಶಿವ ಮೆಚ್ಚಿದಾಗ ಗೌತಮ ಮುನಿಗಳು ಗೋಹತ್ಯೆ ನಡೆದ ಸ್ಥಳ ಪರಿಶುದ್ಧಗೊಳಿಸಲು ಗಂಗೆಯನ್ನು, ಗೋದಾವರಿಯ ರೂಪದಲ್ಲಿ ಭೂಮಿಗೆ ಹರಿಸುವಂತೆ ಕೇಳಿಕೊಂಡರು. ಹಾಗಾಗಿ ಗೋದಾವರಿ ನದಿಯ ಮತ್ತೊಂದು ಹೆಸರು ಗೌತಮಿ ಎಂದಾಗಿದೆ. ಇದು ಉತ್ತರ ಭಾರತದ ಗಂಗಾ ನದಿಗಿಂತ ಪುರಾತನವಾದ ನದಿ ಎಂಬ ಪ್ರತೀತಿ ಇದೆ.

ಮೊದಲು ಬ್ರಹ್ಮಗಿರಿ ಪರ್ವತವನ್ನು ಶಿವನ ಬೃಹತ್ತಾದ ರೂಪವೆಂದು ಪರಿಗಣಿಸಲಾಗುತ್ತಿತ್ತು. ಹಾಗಾಗಿ ಈ ಪರ್ವತವನ್ನು ಹತ್ತುವುದು ಪಾಪವೆಂದು ಪರಿಗಣಿಸಲಾಗುತ್ತಿತ್ತು. ಕ್ರಿ.ಶ.1908ರಲ್ಲಿ ಕರಾಚಿಯ ಸೇಠ್ ಲಾಲ್ಚಂದ್ ಮತ್ತು ಗಣೇಶ ದಾಸ್ ಸೇಠ್ ಅವರುಗಳು ರೂ.40000/- ವೆಚ್ಚದಲ್ಲಿ ಈ ಪರ್ವತಕ್ಕೆ ಪ್ರಯಾಣಿಕರು ಹತ್ತುವ ಉದ್ದೇಶದಿಂದ 500 ಮೆಟ್ಟಲುಗಳನ್ನು ನಿರ್ಮಿಸಿದರು. ಇದರಿಂದ ಬ್ರಹ್ಮಗಿರಿ ಪರ್ವತ ಹತ್ತಲು ಅನುಕೂಲವಾಯಿತು. ಪರ್ವತದ ತುದಿಯಿಂದ ಜಲಧಾರೆ ಮೂರು ದಿಕ್ಕಿನಲ್ಲಿ ಧುಮುಕುವುದನ್ನು ಬೆಟ್ಟದ ತುದಿಯಲ್ಲಿ ಪ್ರಯಾಣಿಕರು ನೋಡಬಹುದು. ಪೂರ್ವದಿಕ್ಕಿಗೆ ಹರಿಯುವ ಜಲಧಾರೆ ಗೋದಾವರಿಯ ನಾಮವನ್ನು ಪಡೆದುಕೊಂಡರೆ, ದಕ್ಷಿಣ ದಿಕ್ಕಿಗೆ ಇಳಿದು ಬರುವ

ಜಲಧಾರೆ ವೈತರಿಣಿ ಎಂಬ ಹೆಸರು ಪಡೆದರೆ ಹಾಗೂ ಪಶ್ಚಿಮಕ್ಕೆ ಧುಮುಕುವ ಜಲಧಾರೆಯು ತ್ರಯಂಬಕೇಶ್ವರ ಮಂದಿರದ ಎದುರಿನಲ್ಲಿರುವ ಚಕ್ರ ತೀರ್ಥದ ಬಳಿ ಗೋದಾವರಿಯನ್ನು ಸೇರಿಕೊಳ್ಳುತ್ತದೆ.

ಬ್ರಹ್ಮಗಿರಿ ಪರ್ವತದಲ್ಲಿ ಶಿವನ ಐದು ಮುಖಗಳಾದ, ಸದ್ಯೋಜಾತ, ವಾಮದೇವ, ತತ್ಪುರುಷ, ಅಘೋರ ಮತ್ತು ಈಶಾನಗಳೆಂದು ಕರೆಯುವ ಐದು ಶಿಖರಗಳಿರುವುದು.

ನಾನು ಹಾಗೂ ಬಿ.ವಿ.ರಮೇಶ್ ಒಟ್ಟಿಗೆ ಈ ಸ್ಥಳಕ್ಕೆ ನಾಲ್ಕು ಜ್ಯೋತಿರ್ಲಿಂಗ ಪ್ರವಾಸದ ಭಾಗವಾಗಿ ತ್ರಯಂಬಕೇಶ್ವರ ಜ್ಯೋತಿರ್ಲಿಂಗ ಸ್ಥಳಕ್ಕೆ ಬಂದಾಗ ಗೋದಾವರಿ ಉಗಮ ಪ್ರದೇಶವನ್ನು ವೀಕ್ಷಿಸಲು ಬಂದಿದ್ದೆವು.

ಮೇಲೆ ವಿವರಿಸಿರುವ ವಿಷಯಗಳು ನಮಗೆ ಮೊದಲೇ ಗೊತ್ತಿದ್ದರೂ, ನಾವು ಮತ್ತೊಂದು ಮಾರ್ಗವಾಗಿ ಬೆಟ್ಟವನ್ನು ಹತ್ತಲು ಪ್ರಾರಂಭಿಸಿದೆವು. ಈ ಮಾರ್ಗದಲ್ಲಿ 750 ಮೆಟ್ಟಿಲುಗಳಿದ್ದು ಹತ್ತಲು ಸ್ವಲ್ಪ ಕಷ್ಟವಾಗಿತ್ತು. ಆದರೂ ಇಬ್ಬರೂ ಒಂದು ಗಂಟೆಯೊಳಗೆ ಮೇಲೆ ಹತ್ತಿ ಹೋದೆವು. ಅಲ್ಲಿನ ನರ್ಮದಾ ಮಂದಿರವನ್ನು ನೋಡಿದೆವು ಹಾಗೂ ಆ ಮಂದಿರದಲ್ಲಿರುವ ಕೊಳವನ್ನು ಗಂಗಾ ಸಾಗರ ಎಂದು ಕರೆಯಲಾಗುವುದೆಂದು ಅಲ್ಲಿನ ಅರ್ಚಕರು ವಿವರಿಸಿದರು.

ಆಗ ನಾನು ಶಿವನ ಪಂಚ ಮುಖಗಳನ್ನು ಪ್ರತಿನಿಧಿಸುವ ಶಿಖರಗಳು ಎಲ್ಲಿರುವುದು ಎಂದು ಪೂಜಾರಿಯನ್ನು ಕೇಳಿದಾಗ ಅವರು ಅದು ಇನ್ನೂ ಮೇಲಿರುವುದೆಂದು ಹಾಗೂ ಅಲ್ಲಿಗೆ ಹೋಗುವುದಕ್ಕೆ ಬೇರೆ ಮಾರ್ಗವಿರುವುದೆಂದು ತಿಳಿಸಿದರು. ನಂತರ ನಾವು ಅಲ್ಲಿಂದ ಕೆಳಗೆ ಇಳಿದು ಒಬ್ಬ ಸಾಧುವನ್ನು ಕೇಳಿದಾಗ ಅವರು ಮತ್ತೊಂದು ಮಾರ್ಗವನ್ನು ತೋರಿಸಿದರು. ನಂತರ ನಾವಿಬ್ಬರೂ ಅಲ್ಲಿಂದ ಸ್ವಲ್ಪ ದೂರನಡೆದೆವು. ಸ್ವಲ್ಪ ಸಮಯದನಂತರ ರಸ್ತೆಯು ಇಬ್ಭಾಗವಾಗಿತ್ತು. ಅಲ್ಲಿಂದ ಬಲಕ್ಕೆ ಹೋದರೆ ಬ್ರಹ್ಮಗಿರಿಯ ತುತ್ತ ತುದಿಗೆ ಹೋಗುವ ದಾರಿ ಹಾಗೂ ನೇರವಾಗಿ ಹೋದಲ್ಲಿ ಅದು ತ್ರಯಂಬಕೇಶ್ವರ ಮಂದಿರದ ದಾರಿ. ನನಗೆ ಏನೆನಿಸಿತೋ ಗೊತ್ತಿಲ್ಲ, ಆದರೆ ನಾನು ಬಲಕ್ಕೆ ತಿರುಗಿದೆ. ಆ ಸಮಯದಲ್ಲಿ ರಮೇಶ್ ಅವರು ತಮಗೆ ಬೆಟ್ಟವೇರುವುದಕ್ಕಾಗುವುದಿಲ್ಲವೆಂದು ತಿಳಿಸಿದರು. ಸರಿ ಎಂದು ನಾನೊಬ್ಬನೇ ಬೆಟ್ಟವನ್ನು ಹತ್ತುವ ಮಾರ್ಗದಲ್ಲಿ ನಡೆಯತೊಡಗಿದೆ. ಆಗ ನನ್ನ ಮನಸ್ಸಿನಲ್ಲಿದದ್ದೇನೆಂದರೆ, ಎಷ್ಟು ದೂರ ಹೋಗಲು ಆಗುವುದೋ ಅಷ್ಟು ದೂರಹೋಗಿ, ಮರಳಿ ಬರುವುದು ಎಂದು. ಏಕೆಂದರೆ ನನಗೆ ಆಗ ಒಬ್ಬನೇ ಮೇಲಿನ ತನಕ ಹೋಗಲು ಮನಸ್ಸಿರಲಿಲ್ಲ. ಆ ಸಮಯದಲ್ಲಿ ಮಾರ್ಗದರ್ಶಕ ಒಬ್ಬನಿದ್ದರೆ ಮೇಲೆ ಹೋಗಬಹುದು ಎಂದು ಅನಿಸಿತು. ಹಾಗಾಗಿ ಬೆಟ್ಟ ಹತ್ತುವ

ಪ್ರಾರಂಭದಲ್ಲೇ ಒಂದು ಅಂಗಡಿಯಲ್ಲಿ ಒಬ್ಬನನ್ನು ಮಾರ್ಗದರ್ಶಿಯ ಬಗ್ಗೆ ವಿಚಾರಿಸಿದಾಗ ಅವನು ಯಾರು ಇಲ್ಲವೆಂದೂ ಎಲ್ಲರೂ ಹತ್ತುತ್ತಿರುವರು ಹಾಗಾಗಿ ಅವರೊಂದಿಗೆ ನಾನೂ ಹೋಗಬಹುದೆಂದು ತಿಳಿಸಿದನು. ಇದರಿಂದ ನಿರಾಶನಾಗದೆ ಬೆಟ್ಟ ಹತ್ತತೊಡಗಿದೆ. ಮೊದಲಿಗೆ ಮೆಟ್ಟಲುಗಳು ಚಿಕ್ಕ ಚಿಕ್ಕದ್ದಾಗಿದ್ದು ಹತ್ತುವುದು ಸುಲಭವಾಗಿತ್ತು. ಹೀಗೆ ಸುಮಾರು ಒಂದು ಗಂಟೆ ಹತ್ತಿದಮೇಲೆ ಒಂದು ಅಂಗಡಿಯ ಮುಂದೆ ಕುಳಿತೆ. ಆಗ ಮೇಲಿನಿಂದ ಒಬ್ಬರು ನಿಧಾನವಾಗಿ ಇಳಿದುಬರುತ್ತಿದ್ದರು. ಅವರನ್ನು ನನ್ನ ಬಳಿ ಕುಳ್ಳಿರಿಸಿಕೊಂಡು ಅವರಿಗೂ ನಿಂಬೆಹಣ್ಣಿನ ಶರಬತ್ ಕೊಡಿಸಿ ಅವರೊಡನೆ ಮುಂದಿನ ಮಾರ್ಗದ ಬಗ್ಗೆ ಚರ್ಚಿಸತೊಡಗಿದೆ. ಮೇಲೆ ಹೋಗುತ್ತಿರುವಾಗ ಕೋತಿಗಳ ಕಾಟ ವಿಪರೀತವೆಂದೂ ಯಾವುದೇ ಚೀಲವನ್ನು ಕಂಡರೂ ಅದು ಬಿಡುವುದಿಲ್ಲವೆಂದು ತಿಳಿಯಿತು. ಹೀಗೆ ಮಾತನಾಡುತ್ತಿದ್ದಾಗ ಎಲ್ಲಿಂದಲೋ ಒಬ್ಬ ಸಾಧುವು ಪ್ರತ್ಯಕ್ಷನಾಗಿ ತಾನು ಈ ಪ್ರದೇಶದ ಮಾರ್ಗದರ್ಶಿಯೆಂದೂ ಪ್ರತಿದಿನ ಎರಡು ಬಾರಿ ಮೇಲಿನವರೆಗೆ ಜನರನ್ನು ಕರೆದೊಯ್ಯುವುದಾಗಿ ಹೇಳಿ, ನನ್ನನ್ನೂ ಮೇಲೆ ಕರೆದೊಯ್ಯುವುದಾಗಿ ಹೇಳಿದನು. ಕೂಡಲೇ ನಾನು ಒಪ್ಪಿ ನನ್ನ ಚೀಲವನ್ನು ಅಲ್ಲಿನ ಅಂಗಡಿಯಲ್ಲೇ ಇಟ್ಟು ಕೇವಲ ನೀರಿನ ಬಾಟಲನ್ನು ತೆಗೆದುಕೊಂಡು ಆ ಸಾಧುವೊಂದಿಗೆ ಬೆಟ್ಟ ಹತ್ತುವುದನ್ನು ಮುಂದುವರೆಸಿದೆ.

ನನ್ನೊಡನಿದ್ದ ಸಾಧುವು ಹಲವಾರು ಬಾರಿ ನನ್ನಲ್ಲಿ ಆತ್ಮವಿಶ್ವಾಸ ತುಂಬುತ್ತಾ, ಬೆಟ್ಟದಲ್ಲಿರುವ ಔಷಧೀಯ ಸಸ್ಯಗಳ ಬಗ್ಗೆ ಹಾಗೂ ಅವುಗಳು ನಮಗೆ ಕೊಡುವ ಆರೋಗ್ಯಯುತ ಗಾಳಿಯ ಬಗ್ಗೆ ಅನೇಕ ವಿವರ ತಿಳಿಸುತ್ತಾ ನನ್ನನ್ನು ಬೆಟ್ಟಹತ್ತುವಂತೆ ಹುರಿದುಂಬಿಸುತ್ತಿದ್ದನು. ಅವನ ಪ್ರಕಾರ ಕೆಳಗಿರುವ ತ್ರಯಂಬಕೇಶ್ವರ ಮಂದಿರವನ್ನು ದರ್ಶನ ಮಾಡಿದರೆ ಯಾತ್ರೆಯ ಅರ್ಧಫಲ ಮಾತ್ರ ಲಭಿಸುವುದೆಂದೂ ಬೆಟ್ಟದ ಮೇಲಿರುವ ಮೂಲ ತ್ರಯಂಬಕೇಶ್ವರನನ್ನೂ ದರ್ಶಿಸಿದಾಗ ಮಾತ್ರ ಯಾತ್ರೆಯ ಪೂರ್ಣಫಲ ದೊರಕುವುದು ಎಂದು ತಿಳಿಸಿದನು. ಕ್ರಮೇಣ ಹತ್ತುವುದು ಕಠಿಣವಾಗ- ತೊಡಗಿತು. ಆದರೆ, ಉದ್ದಕ್ಕೂ ಮೆಟ್ಟಲುಗಳನ್ನು ಹತ್ತಲು ಬಲವಾದ ಕಂಬಿಗಳನ್ನು ನೆಟ್ಟಿದ್ದರಿಂದ ನನ್ನ ಚಾರಣವು ಸುಲಭವಾಯಿತು. ಒಂದೆರಡು ಕಡೆ ಸಾಧುವು ನನ್ನ ಕೈಹಿಡಿದು ಮೇಲೆ ಹತ್ತಿಸಿಕೊಂಡನು. ಬೆಟ್ಟದ ತುದಿ ತಲುಪಿದಾಗ ನಾನು ಪಂಚಲಿಂಗಗಳ ಶಿಖರಗಳ ಬಗ್ಗೆ ಕೇಳಿದಾಗ ಅವನು ಎಲ್ಲ ಶಿಖರಗಳನ್ನೂ ಅಲ್ಲಿಂದಲೇ ತೋರಿಸಿದನು. ಇದರಿಂದ ನನಗೆ ಅತೀವ ಅನಂದವಾಯಿತು. ಮುಂದುವರೆದು ತ್ರಯಂಬಕೇಶ್ವರನ ಪುಟ್ಟ ಮಂದಿರ ತಲುಪಿ ಅಲ್ಲಿ ಕೆಳಗೆ ಇಳಿದು ಪೂಜಾರಿಯ ಸಹಾಯದಿಂದ ಸಂಕಲ್ಪ, ಅಭಿಷೇಕಗಳನ್ನು ಮಾಡಿ ನೀರಿನಲ್ಲಿದ್ದ

ಮೂರು ಸಣ್ಣ ಸಣ್ಣ ಲಿಂಗಗಳನ್ನು ಮುಟ್ಟಿ ಅದು ತ್ರಿಮೂರ್ತಿಗಳ ಪ್ರತಿರೂಪವೆಂದು ಅರಿತೆನು. ಅಲ್ಲಿಂದ ಹತ್ತಿರದಲ್ಲೇ ಇದ್ದ ಗೌತಮ ಋಷಿಗಳ ತಪೋಸ್ಥಳವನ್ನು ತಲುಪಿದೆನು. ಈ ಸ್ಥಳದಲ್ಲೇ ಗೋಹತ್ಯೆ ಪರಿಹಾರಕ್ಕಾಗಿ ಗೌತಮ ಮುನಿಗಳು ತಪಸ್ಸು ಮಾಡಿದ್ದರು. ಇಲ್ಲಿನ ಕೊಳದಿಂದ ಗೋದಾವರಿ ಉದ್ಭವವಾಗುವುದನ್ನು ನೋಡಿದೆ. ಮೂರು ಸಣ್ಣ ಸಣ್ಣ ಝುರಿಗಳಂತೆ ನೀರು ಹರಿಯಲು ಪ್ರಾರಂಭಿಸುವುದು. ದಕ್ಷಿಣ ದಿಕ್ಕಿಗೆ ಹರಿಯುವ ಝುರಿ ವೈತರಿಣಿ ನದಿಯಾದರೆ, ಪೂರ್ವ–ಪಶ್ಚಿಮಕ್ಕೆ ಹರಿಯುವ ಝುರಿಗಳೇ ಗೋದಾವರಿ. ಮುಂದುವರೆದು ಮತ್ತಷ್ಟು ದೂರ ಬೆಟ್ಟದ ಮೇಲೇ ಸಂಚರಿಸಿದಾಗ ನಮಗೆ ಎದುರಾದದ್ದು ಜಟಾಶಂಕರ ಮಂದಿರ. ಇಲ್ಲಿಂದ ಗೋದಾವರಿ ಶಿವನ ಜಟೆಯ ಮೂಲಕ ಹರಿಯುವುದನ್ನು ನೋಡಬಹುದು. ಹೀಗೆ ಬೆಟ್ಟದ ಮೇಲಿರುವ ಎಲ್ಲ ಸ್ಥಳಗಳನ್ನೂ ನನಗೆ ತೋರಿಸಿ ಸಾಧುವು ನನ್ನನ್ನು ಕೆಳಗೆ ಕರೆದೊಯ್ದನು. ಸಾಧುವು ನನಗೆ ಅಲ್ಲಿಂದ ನೇರವಾಗಿ ಕುಶಾವರ್ತ ಕೊಳಕ್ಕೆ ಹೋಗಿ ಅಲ್ಲಿನ ನೀರಿನಲ್ಲಿ ಕೈಕಾಲುಗಳನ್ನು ತೊಳೆದು ನಂತರ ತ್ರಯಂಬಕೇಶ್ವರನನ್ನು ಉತ್ತರದ ಬಾಗಿಲಿನಿಂದ ಹೊರಗಿನಿಂದಲೇ ದರ್ಶನಮಾಡಿ ಹೋಗುವಂತೆ ತಿಳಿಸಿದನು. ಬೆಟ್ಟದ ಬುಡದವರೆಗೂ ಬಂದನಂತರ ನಾನು ಅವನಿಗೆ ಸ್ವಲ್ಪ ಹಣವನ್ನು ಕೊಡಲು ತಿರುಗಿದಾಗ ಸಾಧುವು ಎಲ್ಲೂ ಕಾಣಿಸಲೇ ಇಲ್ಲ. ಅಲ್ಲೇ ಇದ್ದ ಮತ್ತೊಬ್ಬನನ್ನು ಸಾಧುವಿನ ಬಗ್ಗೆ ಕೇಳಿದಾಗ ಅವನು ತಾನು ಅಲ್ಲಿ ಯಾವ ಸಾಧುವನ್ನು ನೋಡಲಿಲ್ಲವೆಂದನು. ನನಗೆ ಪರಮಾಶ್ಚರ್ಯವಾಯಿತು.

ಅಧ್ಯಾಯ - 3

ಇತರ ಪ್ರದೇಶಗಳಲ್ಲಿನ ಚಾರಣಗಳು

ಈ ವಿಭಾಗದಲ್ಲಿ ನಾನು ಚಾರಣಮಾಡಿದ ಸ್ಥಳಗಳಲ್ಲಿ ಬಹುತೇಕವಾಗಿ ಧಾರ್ಮಿಕ ಸ್ಥಳಗಳ ಹಾಗೂ ಕೆಲವು ಇತರೇ ಚಾರಣಗಳ ಬಗ್ಗೆ ನನ್ನ ಅನುಭವಗಳನ್ನು ವಿವರಿಸಿರುವೆ. ಅವುಗಳೆಂದರೆ :

ಕ್ರ.ಸಂ	ಪ್ರದೇಶ
1.	ಅಮರನಾಥದಲ್ಲಿನ ಹಿಮಲಿಂಗ
2.	ವೈಷ್ಣೋದೇವಿ ಕ್ಷೇತ್ರ
3.	ಕೈಲಾಸ ಪರ್ವತ ಪರಿಕ್ರಮ
4.	ಗುಜರಾತಿನ ಗಿರಿನಾರ್ ಪರ್ವತ
5.	ಛತ್ತೀಸ್ ಘಡದಲ್ಲಿನ ಕಾಡು
6.	ಅರುಣಾಚಲ ಪರಿಕ್ರಮ
7.	ಮಾಂಧಾತ ಪರ್ವತ ಪರಿಕ್ರಮ (ಗೀತಾ ಪರಿಕ್ರಮ)

ಅಮರನಾಥದಲ್ಲಿನ ಹಿಮಲಿಂಗದೆಡೆಗಿನ ಚಾರಣ

2005ರ ಜೂನ್ ತಿಂಗಳಿನಲ್ಲಿ ನಾನು ಅಮರನಾಥ ಯಾತ್ರೆ ಮಾಡಬೇಕೆಂದು ಸಂಕಲ್ಪಿಸಿ ಒಂದು ದಿನ ಸಾಗರ್ ಟಾಕೀಸ್ ಬಳಿಯಿರುವ ಫಣೀಕ್ಕರ್ ಟ್ರಾವೆಲ್ಸ್‌ಗೆ ಹೋಗಿ ಒಂದು ಸೀಟನ್ನು ಬುಕ್ ಮಾಡಿ ನಂತರ ನಮ್ಮ ಪ್ರಧಾನ ಕಚೇರಿಗೆ ಹೋಗಿ ಅಲ್ಲಿ ನನ್ನ ಸಹೋದ್ಯೋಗಿ ಸಂಪತ್‌ಕುಮಾರ ಅವರ ಬಳಿ ಮಾತನಾಡುತ್ತಿದ್ದಾಗ ಈ ವಿಷಯವನ್ನು ತಿಳಿಸಿದೆ. ಕೂಡಲೇ ಅವನು ನಿಂತ ನಿಲುವಿನಲ್ಲೇ ತಾನೂ ಬರುವುದಾಗಿ ತಿಳಿಸಿದ. ಕೂಡಲೇ ನಾನು ಮತ್ತೆ ಟ್ರಾವೆಲ್ಸ್‌ಗೆ ಹೋಗಿ ಅವನಿಗೂ ಒಂದು ಸೀಟನ್ನು ಬುಕ್ ಮಾಡಿದೆ. ಹೀಗೆ ನಮ್ಮ ಅಮರನಾಥ ಯಾತ್ರೆಗೆ ಪೀಠಿಕೆ ಹಾಕಿದೆವು. ಈ ಯಾತ್ರೆಯಲ್ಲೇ ವೈಷ್ಣೋದೇವಿ ಯಾತ್ರೆಯೂ ಸೇರಿತ್ತು. ನಂತರ ಅಮರನಾಥ ಯಾತ್ರೆಯ ಬಗ್ಗೆ ವಿಷಯಗಳನ್ನು ಸಂಗ್ರಹಿಸತೊಡಗಿದೆ.

ಅಮರನಾಥ ಗುಹೆಗೆ ಚಾರಣ ಮಾಡಲು ಎರಡು ಮಾರ್ಗಗಳಿವೆ. ಈ ಎರಡೂ ಮಾರ್ಗಗಳಿಗೆ ಶ್ರೀನಗರದಿಂದಲೇ ಹೋಗಬೇಕು.

ಮೊದಲನೆಯ ಮಾರ್ಗ – ಶ್ರೀನಗರ–ಬಾಲ್‌ತಾಲ್–ಪಂಚತರಣಿ–ಅಮರನಾಥ–ಬಾಲ್‌ತಾಲ್–ಶ್ರೀನಗರ

ಎರಡನೇ ಮಾರ್ಗ – ಶ್ರೀನಗರ – ಪಹೆಲ್‌ಗಾಂವ್ – ಚಂದನ್‌ವಾರಿ – ಶೀಷನಾಗ್ – ಪಂಚತರಣಿ – ಅಮರನಾಥ – ಚಂದನ್‌ವಾರಿ – ಪಹೆಲ್‌ಗಾವ್.

ನಮ್ಮ ಟ್ರಾವೆಲ್ ಏಜೆಂಟ್ ನಮ್ಮನ್ನು ಎರಡನೇ ಮಾರ್ಗದಲ್ಲಿ ಕರೆದುಕೊಂಡು ಹೋಗಲಿದ್ದ. ನಾವು ಮೊದಲಿಗೆ ಇದರ ಬಗ್ಗೆ ಅಷ್ಟೇನೂ ತಲೆಕೆಡಿಸಿಕೊಂಡಿರಲಿಲ್ಲ. ಏಕೆಂದರೆ ನಮಗೆ ಅಲ್ಲಿಗೆ ಹೋಗುವ ತನಕ ಈ ಚಾರಣದ ಬಗ್ಗೆ ಏನೂ ಗೊತ್ತಿರಲಿಲ್ಲ.

ಶ್ರೀನಗರದಿಂದ ಪಹೆಲ್‌ಗಾಂವ್ ಕಡೆಗೆ ನಾನು ಹಾಗೂ ಸಂಪತ್ಕುಮಾರ್ ಟ್ರಾವೆಲ್ಸ್ ಮ್ಯಾನೇಜರಿನ ಅನುಮತಿ ಪಡೆದು ಟ್ಯಾಕ್ಸಿಯಲ್ಲಿ ಪ್ರಯಾಣಮಾಡಿ

ಅವರನ್ನು ಪಹೆಲ್‌ಗಾವ್‌ನಲ್ಲಿ ಸೇರಿಕೊಳ್ಳುವುದಾಗಿ ಹೇಳಿ ಹೊರಟೆವು. ಶ್ರೀನಗರದಿಂದ ಪಹೆಲ್‌ಗಾವ್ ಪ್ರಯಾಣ ಅತ್ಯಂತ ಸುಂದರವಾಗಿತ್ತು. ಈ ಮಾರ್ಗದಲ್ಲಿ ನಾವು ಮೊದಲಬಾರಿ ಪ್ರಯಾಣ ಮಾಡುತ್ತಿದ್ದು ಇಲ್ಲಿನ ಸುತ್ತಲಿನ ದೃಶ್ಯಗಳು, ಹವಾಮಾನ ಎಲ್ಲವೂ ತುಂಬಾ ಖುಷಿ ಕೊಟ್ಟಿತು. ಪಹೆಲ್‌ಗಾವ್‌ನಲ್ಲಿ ನಮಗೆ ಒಂದು ಒಳ್ಳೆಯ ಹೋಟೆಲಿನಲ್ಲಿ ರೂಮನ್ನು ಕಾಯ್ದಿರಿಸಿದ್ದರು.

ಮಾರನೇ ದಿನ ನಾವು ಪಹೆಲ್‌ಗಾಂವ್‌ನಿಂದ ಚಂದನ್‌ವಾರಿಗೆ ಒಂದು ಟ್ಯಾಕ್ಸಿಯಲ್ಲಿ 19 ಕಿ.ಮೀ ಪ್ರಯಾಣ ಮಾಡಿದೆವು. ಇಲ್ಲಿಂದ ಅಮರನಾಥ ಗುಹೆಗೆ ನಮ್ಮ ಚಾರಣ ಪ್ರಾರಂಭವಾಗುವುದು. ಟ್ರಾವೆಲ್ ಮ್ಯಾನೇಜರ್ ಚಾರಣಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಅಲ್ಲಿನ ಅಧಿಕಾರಿಗಳಿಗೆ ಸಲ್ಲಿಸಿ ನಮ್ಮ ಚಾರಣಕ್ಕೆ ಅನುಮತಿ ಕೊಡಿಸಿ ನಮ್ಮಿಂದ ಬೀಳ್ಕೊಂಡನು. ನಾವು ಮೊದಲಿಗೆ ಕುದುರೆಯಲ್ಲಿ ಹೋಗೋಣವೆಂದು ತೀರ್ಮಾನಿಸಿ ಎರಡು ಕುದುರೆಗಳನ್ನು ಗೊತ್ತುಮಾಡಿಕೊಂಡು ಹೊರಟೆವು. ನಾವು ಹಾಗೂ ಹೀಗೂ ಪಿಸ್ಸು ಟಾಪ್‌ವರೆಗೂ ಕುದುರೆಯ ಮೇಲೆ ಹೋದೆವು. (ಪೌರಾಣಿಕ ಕಥೆಯ ಪ್ರಕಾರ ಪಿಸ್ಸು ಟಾಪ್ ಪ್ರದೇಶವು ಶಿವನು ಸಂಹರಿಸಿದ್ದ ರಾಕ್ಷಸರ ಹೆಣಗಳಿಂದ ಆಗಿದೆ ಎನ್ನಲಾಗಿದೆ). ನಂತರ ನಮಗೆ ಕುದುರೆ ಸವಾರಿ ಸರಿಹೊಂದಲಿಲ್ಲ. ಹಾಗಾಗಿ ಕುದುರೆಯನ್ನು ಅಲ್ಲೇ ಬಿಟ್ಟು ನಾವು ನಡೆದುಕೊಂಡು ಹೋಗಲು ಪ್ರಾರಂಭಿಸಿದೆವು. ದಾರಿಯುದ್ದಕ್ಕೂ ನಮಗೆ ಚಹಾ, ತಿಂಡಿ, ಊಟಕ್ಕೆ ಯಾವ ತೊಂದರೆಯೂ ಇರಲಿಲ್ಲ. ಯಾತ್ರಿಕರಿಗೆ ಸೇವಾ ಮನೋಭಾವದಿಂದ ಅನೇಕ ಸಂಘ ಸಂಸ್ಥೆಗಳು ಈ ವ್ಯವಸ್ಥೆಯನ್ನು ಉಚಿತವಾಗಿ ಮಾಡಿದ್ದರು. ಎಲ್ಲೆಡೆಯೂ ನಮಗೆ ನಮ್ಮ ಇಡ್ಲಿ, ದೋಸೆ ಕಾಫಿ ಸಿಗುತ್ತಿತ್ತು. ಅನೇಕ ಜನಗಳು ಈ ಮಾರ್ಗದಲ್ಲಿ ನಡೆದೇ ಹೋಗುತ್ತಿದ್ದದ್ದರಿಂದ ನಮಗೆ ನಡೆಯುವುದು ಕಷ್ಟವಾಗಲಿಲ್ಲ. ಆದರೆ ನಾವು ಅಲ್ಲಲ್ಲೇ ನಿಂತು ವಿಶ್ರಮಿಸಿಕೊಳ್ಳುತ್ತಾ ಯಾತ್ರಿಕರೊಂದಿಗೆ ಮಾತನಾಡುತ್ತಾ ಹೋಗುತ್ತಿದ್ದೆವು. ನಾವು ಶೀಷನಾಗ್ ತಲಪುವ ಹೊತ್ತಿಗೆ ಸಂಜೆ 4 ಗಂಟೆಯಾಗಿತ್ತು. (ಶೀಷನಾಗ್ ಅಥವಾ ಶೇಷನಾಗ್ ಎಂಬ ಹೆಸರು ಬಂದಿದ್ದು – ಈ ಸ್ಥಳವು ಪೌರಾಣಿಕ ಸರ್ಪ ಆದಿಶೇಷನ ಏಳು ಹೆಡೆಗಳಂತೆ ಕಂಡುಬರುವ ಶಿಖರಗಳಿಂದ ಕೂಡಿದ ಸ್ಥಳವಾದ್ದರಿಂದ). ಅಲ್ಲಿಂದ ಮುಂದೆ ಹೋಗುವುದು ಸರಿಯಲ್ಲವೆಂದು ತೀರ್ಮಾನಿಸಿ ಚಳಿಯೂ ಹೆಚ್ಚಾಗುತ್ತಿದ್ದದ್ದರಿಂದ ಅಲ್ಲಿನ ಅಮರನಾಥ ಟ್ರೆಕ್ ಕ್ಯಾಂಪ್ ಬಳಿಗೆ ಹೋಗಿ ಒಂದು ಟೆಂಟಿನೊಳಗೆ ಬೆಚ್ಚನೆಯ ಹಾಸಿಗೆ ಮತ್ತು ರಝಾಯಿಗಳಿರುವ ಎರಡು ಮಂಚಗಳನ್ನು (ಒಬ್ಬರಿಗೆ ರೂ.200/– ಒಂದು ರಾತ್ರಿಗೆ) ಪಡೆದುಕೊಂಡು ಅಲ್ಲೇ ಊಟಮಾಡಿ ಬೆಚ್ಚಗೆ ಮಲಗಿ ಆಯಾಸ ಪರಿಹಾರ ಮಾಡಿಕೊಂಡೆವು.

ಮಾರನೇ ದಿನ ಮುಂಜಾನೆ ಎದ್ದು ನಿತ್ಯಕರ್ಮಗಳನ್ನು ಮುಗಿಸಿಕೊಂಡು ಬೆಳಗಿನ ಉಪಾಹಾರ ಹಾಗೂ ಚಹಾ ಸೇವಿಸಿ ಇತರೆ ಯಾತ್ರಿಕರೊಂದಿಗೆ ನಮ್ಮ ಚಾರಣ ಮುಂದುವರೆಸಿದೆವು. ಮಾರ್ಗವು ತೀರಾ ಕಠಿಣವಾಗಿದ್ದು ನಮಗೆ ಇದರ ಕಲ್ಪನೆಯೇ ಇರಲಿಲ್ಲ. ಶೇಷನಾಗ್‌ನಿಂದ ಪಂಚತರಣಿ ಕ್ಯಾಂಪಿಗೆ 4.6 ಕಿ.ಮೀ ದೂರದ ತೀವ್ರ ಹಾಗೂ ಕಡಿದಾದ ಮಾರ್ಗ. ಹೇಗೂ ಬಂದದ್ದಾಯಿತು ಹಿಮಲಿಂಗವನ್ನು ನೋಡಿಕೊಂಡೇ ಹೋಗಬೇಕೆಂದು ಇಬ್ಬರೂ ತೀರ್ಮಾನಿಸಿ ಒಬ್ಬರಿಗೊಬ್ಬರಿಗೆ ಧೈರ್ಯ ತುಂಬುತ್ತಾ ನಡೆಯ ತೊಡಗಿದೆವು. ಮಾರ್ಗದಲ್ಲಿ ಅನೇಕ ನೀರಿನ ತೊರೆಗಳನ್ನು ದಾಟುತ್ತಾ ಮುಂದುವರೆದೆವು. ಒಂದೆಡೆ ನಮ್ಮೆದುರಿಗೆ ನಾಲ್ವರು ಕೆಂಪು ಬಟ್ಟೆಯಲ್ಲಿ ಸುತ್ತಿದ್ದ ಒಂದು ಹೆಣವನ್ನು ಎತ್ತಿಕೊಂಡು ಹೋಗುತ್ತಿದ್ದರು. ನಾವು ಅಲ್ಲಿದ್ದ ಸೈನಿಕನೊಬ್ಬನನ್ನು ಅದೇನೆಂದು ಕೇಳಿದಾಗ ಅವನು ಯಾತ್ರಿಯೊಬ್ಬನು ಉಸಿರಾಟದ ತೊಂದರೆಯಿಂದ ಮೃತಪಟ್ಟಿರುವನೆಂದು ತಿಳಿಸಿದನು. ಅದನ್ನು ನೋಡಿ ನಮ್ಮ ಜಂಘಾಬಲವು ಉಡುಗಿಹೋಯಿತು. ಅಲ್ಲೇ ಸ್ವಲ್ಪ ಹೊತ್ತು ಒಂದೆಡೆ ಕುಳಿತು ಸುಧಾರಿಸಿಕೊಂಡು ಶಿವನನ್ನು ಧ್ಯಾನಿಸುತ್ತಾ ನಡೆಯತೊಡಗಿದೆವು. ಪುಣ್ಯಕ್ಕೆ ನಮ್ಮಿಬ್ಬರ ಆರೋಗ್ಯವು ಬಹಳ ಚೆನ್ನಾಗಿತ್ತು. ಹೀಗೆ ನಡೆಯುತ್ತಾ ಮಧ್ಯಾಹ್ನ 3 ಗಂಟೆಗೆ ನಾವು ಪಂಚತರಣಿ ಕ್ಯಾಂಪನ್ನು ತಲುಪಿದೆವು. ಅಷ್ಟುಹೊತ್ತಿಗೆ ನಮಗೆ ತುಂಬಾ ಸುಸ್ತಾಗಿದ್ದು ಶೇಷನಾಗ್ ಬಳಿ ಮಾಡಿದ ಹಾಗೇ ಇಲ್ಲೂ ಒಂದು ಟೆಂಟನ್ನು ಬಾಡಿಗೆ ಪಡೆದು ಅಲ್ಲೇ ಊಟಮಾಡಿ ಚೆನ್ನಾಗಿ ನಿದ್ರಿಸಿದೆವು.

ಈಗ ಅಮರನಾಥ ಗುಹಾಲಿಂಗದ ಬಗ್ಗೆ ಕೆಲವು ಪೌರಾಣಿಕ ಹಾಗೂ ಐತಿಹಾಸಿಕ ವಿಷಯಗಳನ್ನು ತಿಳಿಯೋಣ

ಅಮರನಾಥ ಗುಹಾಲಿಂಗವು, 18 ಮಹಾ ಶಕ್ತಿಪೀಠಗಳಲ್ಲಿ ಒಂದು. ಪೌರಾಣಿಕ ಕಥೆ ಪ್ರಕಾರ ಈ ಗುಹೆಯನ್ನು ಮೊದಲಿಗೆ ಹುಡುಕಿದವರು ಭೃಗುಮುನಿಗಳು. ಲಕ್ಷಾಂತರ ವರ್ಷಗಳ ಹಿಂದೆ ಕಾಶ್ಮೀರ ಕಣಿವೆ ಜಲಾವೃತವಾಗಿತ್ತು ಮತ್ತು ಕಶ್ಯಪ ಮುನಿಗಳು ಈ ನೀರನ್ನು ನದಿಗಳು ಹಾಗೂ ತೊರೆಗಳ ಮೂಲಕ ಹೊರಹೋಗುವಂತೆ ತಮ್ಮ ತಪಃಶಕ್ತಿಯಿಂದ ಮಾಡಿದರು. ನೀರೆಲ್ಲಾ ಕಣಿವೆಯಿಂದ ಹೊರಹೋದ ನಂತರ ಮೊಟ್ಟ ಮೊದಲಿಗೆ ಭೃಗು ಮುನಿಗಳು ಅಮರನಾಥನ ದರ್ಶನ ಪಡೆದರು.

ಚಾರಿತ್ರಿಕವಾಗಿ ಸ್ಥಳೀಯ ಗಡಾರಿಯಾ ಜನಾಂಗದವರು ಮೊದಲು ಈ ಗುಹೆಯನ್ನು ಕಂಡರು ಹಾಗೂ ಬಾಬಾ ಬರ್ಫಾನಿಯ ದರ್ಶನ ಪಡೆದರು.

ಮತ್ತೊಂದು ಪೌರಾಣಿಕ ಕಥೆಯ ಪ್ರಕಾರ, ಒಮ್ಮೆ ಪಾರ್ವತಿ ಶಿವನು ಧರಿಸಿರುವ ಕಪಾಲ ಮಾಲೆಯ ಬಗ್ಗೆ ಎಂದಿನಿಂದ ಅವನು ಅದನ್ನು ಧರಿಸುತ್ತಿರುವನು

ಎಂದು ಕೇಳಿದಳು. ಅದಕ್ಕೆ ಶಿವನು ಪಾರ್ವತಿಗೆ ನೀನು ಹುಟ್ಟಿದಾಗಲೆಲ್ಲಾ ಅದನ್ನು ಧರಿಸುತ್ತಿರುವುದಾಗಿ ಉತ್ತರಿಸಿದನು. ಅದಕ್ಕೆ ಪಾರ್ವತಿ, "ನೀನು ಮಾತ್ರ ಹೇಗೆ ಅಮರನಾಗಿರುವೆ, ನಾನಾದರೋ ಸದಾ ಹುಟ್ಟು ಸಾವುಗಳ ಸಂಕೋಲೆಯಲ್ಲಿರುವೆ. ಅದು ಹೇಗೆ?" ಎಂದು ಪ್ರಶ್ನಿಸಿದಳು. ಶಿವನು ಅದಕ್ಕೆ ಉತ್ತರಿಸುತ್ತಾ, ಅದು ಅಮರ ಕಥೆಯಿಂದಾಗಿ ಎಂದನು. ಪಾರ್ವತಿ ಅಮರಕಥೆ ತನಗೂ ತಿಳಿಸಬೇಕೆಂದು ಪದೇ ಪದೇ ಕೇಳತೊಡಗಿದಳು. ಕಡೆಗೆ ಶಿವನು ಅಮರತ್ವದ ರಹಸ್ಯ ತಿಳಿಸಲು ತೀರ್ಮಾನಿಸಿದನು. ಈ ರಹಸ್ಯ ತಿಳಿಸಲು ಯಾವುದೇ ಜೀವಿ ಇಲ್ಲದ ನಿರ್ಜನವಾದ ಸ್ಥಳವನ್ನು ಹುಡುಕಿಕೊಂಡು ಕಡೆಗೆ ಅಮರನಾಥ ಗುಹೆಯೆಡೆಗೆ ಪಾರ್ವತಿ ಹಾಗೂ ತನ್ನ ಪರಿವಾರದೊಂದಿಗೆ ಬಂದನು. ಗುಹೆಯೊಳಗೆ ಪ್ರವೇಶಿಸುವುದಕ್ಕೆ ಮೊದಲು ಶಿವನು ನಂದಿಯನ್ನು ಪಹೆಲ್‌ಗಾವ್ (ಬಾಲಿಗಾವ್) ಬಳಿ ತ್ಯಜಿಸಿ ಮುನ್ನಡೆದು ಚಂದನ್‌ವಾರಿಯ ಬಳಿಗೆ ಬಂದು ಅಲ್ಲಿ ತನ್ನ ಜಟೆಯಿಂದ ಚಂದ್ರನನ್ನು ಬಿಡುಗಡೆ ಮಾಡಿ ಮುನ್ನಡೆದು ಶೇಷನಾಗ್ ಸರೋವರದ ದಡದಲ್ಲಿ ತನ್ನಲ್ಲಿದ್ದ ಸರ್ಪವನ್ನು ಬಿಟ್ಟನು. ನಂತರ ಮಹಾಗುಣಾ ಪರ್ವತದ – 3200 ಮೀಟರ್ (ಮಹಾಗಣೇಶ್ ಪರ್ವತ) ಬಳಿ ತನ್ನ ಪುತ್ರ ಗಣಪತಿಯನ್ನು ಬಿಟ್ಟು ಮತ್ತಷ್ಟು ದೂರ ನಡೆದು ಪಂಚತರಣಿ ಬಳಿ ಪಂಚ ಭೂತಗಳಾದ ಅಗ್ನಿ, ಜಲ, ವಾಯು, ಆಕಾಶ ಹಾಗೂ ಭೂಮಿಯನ್ನು (ದೈಹಿಕ ಪ್ರಪಂಚವನ್ನು ತ್ಯಾಗಮಾಡಿದ ಸಂಕೇತವಾಗಿ) ಬಿಟ್ಟನು. ನಂತರ ಇಲ್ಲಿ ಭಗವಾನ್ ಶಂಕರನು ತಾಂಡವ ನೃತ್ಯವನ್ನು ಮಾಡಿ ಕಟ್ಟ ಕಡೆಗೆ ಮಾತೆ ಪಾರ್ವತಿಯೊಂದಿಗೆ ಪವಿತ್ರವಾದ ಅಮರನಾಥ ಗುಹೆ ಪ್ರವೇಶಿಸಿದನು.

ಗುಹೆ ಪ್ರವೇಶಿಸಿ ಶಂಕರ ಭಗವಾನನು ಒಂದು ಜಿಂಕೆಯ ಚರ್ಮದ ಮೇಲೆ ಆಸೀನನಾಗಿ ಸಮಾಧಿಸ್ಥಿತಿ ತಲುಪಿದನು. ಅಲ್ಲಿ ಯಾವುದೇ ಜೀವಿಯೂ ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಲು ಶಿವನು ಕಾಲಾಗ್ನಿ ಎಂಬ ರುದ್ರನನ್ನು ಸೃಷ್ಟಿಸಿ ಅವನಿಗೆ ಗುಹೆಯ ಸುತ್ತಲೂ ಬೆಂಕಿಯನ್ನು ಹಚ್ಚಿ ಅಲ್ಲಿರುವ ಎಲ್ಲ ಜೀವಿಗಳನ್ನೂ ಭಸ್ಮಮಾಡುವಂತೆ ಆಜ್ಞಾಪಿಸಿದನು. ನಂತರ ಶಿವನು ಪಾರ್ವತಿಗೆ ಅಮರತ್ವದ ರಹಸ್ಯವನ್ನು ಬೋಧಿಸತೊಡಗಿದನು. ಇಷ್ಟೆಲ್ಲಾ ಎಚ್ಚರಿಕೆಯನ್ನು ಶಿವನು ತೆಗೆದುಕೊಂಡಿದ್ದರೂ ಅವನು ಕುಳಿತಿದ್ದ ಜಿಂಕೆಯ ಚರ್ಮದ ಕೆಳಗೆ ಒಂದು ಮೊಟ್ಟೆಯು ಸೇರಿಕೊಂಡಿತ್ತು. ಆ ಸ್ಥಿತಿಯಲ್ಲಿದ್ದ ಮೊಟ್ಟೆಯಲ್ಲಿ ಜೀವವಿಲ್ಲದ್ದರಿಂದ ಅದಕ್ಕೆ ಶಿವನ ಆಜ್ಞೆಯು ಅನ್ವಯಿಸಲಿಲ್ಲ. ನಂತರ ಅದರಿಂದ ಒಂದು ಜೊತೆ ಪಾರಿವಾಳಗಳು ಜನಿಸಿ ಅವು ಶಿವನು ಹೇಳಿದ ರಹಸ್ಯವನ್ನು ಆಲಿಸಿ ಅಮರವಾದವು ಎಂದು ಪುರಾಣದಲ್ಲಿ ವಿವರಿಸಲಾಗಿದೆ. ಯಾತ್ರಾರ್ಥಿಗಳು ಅಪರೂಪಕ್ಕೆ ಈ ಪಾರಿವಾಳಗಳನ್ನು ಈಗಲೂ ನೋಡುವರು.

ಪಂಚತರಣಿಯಲ್ಲಿ ನಾವು ರಾತ್ರಿ ಚೆನ್ನಾಗಿ ನಿದ್ದೆ ಮಾಡಿ ಬೆಳಗ್ಗೆ ಎದ್ದಾಗ ಹೆಚ್ಚಿನ ಹುರುಪಿನಿಂದ ಅಮರನಾಥ ಗುಹೆಯೆಡೆಗೆ ಚಾರಣ ಮಾಡಲು ತಯಾರಾದೆವು. ಈ ಚಾರಣದ ವೈಶಿಷ್ಟ್ಯತೆಯೆಂದರೆ ಎಲ್ಲ ಕಡೆಯೂ ಸದಾ ಯಾತ್ರಿಕರಿಗೆ ರುಚಿ ಹಾಗೂ ಶುಚಿಯಾದ ಆಹಾರ ಹಾಗೂ ಅತ್ಯಂತ ಶ್ರೇಷ್ಠಮಟ್ಟದ ಕುಡಿಯುವ ನೀರು ಉಚಿತವಾಗಿ ದೊರಕುವುದು. ಪಂಚತರಣಿಯಿಂದ ಅಮರನಾಥ ಗುಹೆಗೆ 5.6 ಕಿ.ಮೀ ದೂರದ ಚಾರಣ. ಅದರಲ್ಲಿ 2 ಕಿ.ಮೀ ಹಿಮಾವೃತವಾದ ಹಾದಿಯಲ್ಲಿ ನಡೆಯಬೇಕು. ಗುಹೆಯ ಬಳಿ ವಾಸ್ತವ್ಯ ಇರುವುದಿಲ್ಲವೆಂದು ಅಲ್ಲಿದ್ದ ಸೈನಿಕರು ತಿಳಿಸಿದರು. ಹಾಗಾಗಿ ನಾವು ದರ್ಶನದ ನಂತರ ಪಂಚತರಣಿಗೆ ಮರಳಬೇಕಿತ್ತು. ಈ ವಿಷಯ ನಾವು ಹೊರಡುವ ಮೊದಲೇ ತಿಳಿದುಕೊಂಡು ಇಬ್ಬರೂ ಒಂದೊಂದು ಊರುಗೋಲನ್ನು ಕೊಂಡು ನಮ್ಮ ಚಾರಣ ಪ್ರಾರಂಭಿಸಿದೆವು. 5.6 ಕಿ.ಮೀ ಚಾರಣ ಬಹಳ ಕಠಿಣವಾಗಿತ್ತು. ನಡಿಗೆ ಬಹಳ ನಿಧಾನವಾಗಿತ್ತು. ಈ ಪ್ರದೇಶದಲ್ಲಿ ಆಮ್ಲಜನಕ ಕಡಿಮೆ ಇದ್ದುದ್ದರಿಂದ ಉಸಿರಾಟಕ್ಕೆ ತೊಂದರೆಯಾದರೂ ನಮಗೆ ಅಷ್ಟೇನೂ ಕಷ್ಟವಾಗಲಿಲ್ಲ. ಅಮರನಾಥ ಗುಹೆಯ ಕ್ಯಾಂಪ್ ತಲುಪಿ ಅಲ್ಲಿ ನಮ್ಮ ಬ್ಯಾಗನ್ನು ಲಾಕರಿನಲ್ಲಿ ಇಟ್ಟು ಹತ್ತಿರದಲ್ಲಿನ ತೊರೆಯಲ್ಲಿ ಕೊರೆಯುತ್ತಿರುವ ನೀರಿನಲ್ಲೇ ಕೈ ಕಾಲು ಮುಖವನ್ನು ತೊಳೆದು ಅಮರನಾಥನ ದರ್ಶನಕ್ಕೆ ಹೊರಟೆವು. ನಮ್ಮ ಅದೃಷ್ಟವೆಂಬಂತೆ ಸರದಿಯ ಸಾಲಿನಲ್ಲಿ ಹೆಚ್ಚು ಜನಗಳಿರಲಿಲ್ಲ. ಸಾಲಿನಲ್ಲಿ ಸುಮಾರು ಮೆಟ್ಟಿಲುಗಳನ್ನು ಹತ್ತಿ ಗುಹೆಯೊಳಗೆ ಹೋಗಬೇಕು. ಹಿಮದಿಂದ ಸೃಷ್ಟಿಯಾದ ಲಿಂಗವು ನಾವು ಹೋಗುವ ಹೊತ್ತಿಗೆ ಸ್ವಲ್ಪ ಸ್ವಲ್ಪವಾಗಿ ಕರಗಿ 6 ಅಡಿಯಷ್ಟಿತ್ತು. ಇದಕ್ಕೆ ಅಲ್ಲಿ ಸತತವಾಗಿ ಮಾಡುವ ಕರ್ಪೂರದ ಅರತಿಯೂ ಕಾರಣವೆಂದು ಭಕ್ತರು ಮಾತನಾಡಿಕೊಳ್ಳುತ್ತಿದ್ದರು. ನಾವು ಸಾಲಿನಲ್ಲಿ ಸೇರಿಕೊಳ್ಳುವುದಕ್ಕೆ ಮೊದಲೇ ಇಬ್ಬರೂ ಅಲ್ಲಿ ದೊರಕುತ್ತಿದ್ದ ತೀರ್ಥದ ಬಾಟಲುಗಳನ್ನು ಕೊಂಡಿದ್ದೆವು. ದರ್ಶನದ ನಂತರ ಹೊರಭಾಗದಲ್ಲಿ ಒಂದೆಡೆ ಲಿಂಗದಿಂದ ಕರಗಿ ಹೊರಬರುತ್ತಿದ್ದ ನೀರನ್ನು ಎಲ್ಲರೊಂದಿಗೆ ನಾವೂ ನಮ್ಮ ಬಾಟಲಿನಲ್ಲಿ ಶೇಖರಿಸಿಕೊಂಡೆವು. ಗುಹೆಯಿಂದ ಹೊರಬರುತ್ತಿರುವಾಗ ಗುಹೆಯ ಒಳಭಾಗದ ಮೇಲ್ಗಡೆ ನಮಗೆ ಎರಡು ಬಿಳಿ ಪಾರಿವಾಳಗಳು ಕಂಡಿತು. ಇದರಿಂದ ನಮಗೆ ಮತ್ತಷ್ಟು ಸಂತೋಷವಾಯಿತು.

ದರ್ಶನದ ನಂತರ ಚಳಿ ಹೆಚ್ಚುತ್ತಿದ್ದದ್ದರಿಂದ ನಾವು ತಡಮಾಡದೆ ಅಲ್ಲಿಂದ 12.30ಕ್ಕೆಲ್ಲಾ ಹೊರಟು 4 ಘಂಟೆಗೆ ಮತ್ತೆ ಪಂಚತರಣಿಗೆ ಬಂದು ಹಿಂದೆ ಮಾಡಿದಂತೆ ಟೆಂಟನ್ನು ಬಾಡಿಗೆ ಪಡೆದು ಊಟಮಾಡಿ ಚೆನ್ನಾಗಿ ನಿದ್ರಿಸಿದೆವು.

ಮಾರನೇ ದಿನ ಬೆಳಗ್ಗೆ ಎದ್ದು ಹಿಂದಿನ ದಿನದ ಅಮರನಾಥನ ದರ್ಶನ ಹಾಗೂ ಅಪರೂಪಕ್ಕೆ ಕಂಡುಬರುವ ಜೋಡಿ ಪಾರಿವಾಳಗಳನ್ನು ನೋಡಿದ್ದರಿಂದ ತೃಪ್ತಿಯಾಗಿ ಶೇಷನಾಗ್ ಕಡೆಗೆ 4.6 ಕಿ.ಮೀ ದೂರದ ನಮ್ಮ ಪ್ರಯಾಣವನ್ನು ಪ್ರಾರಂಭಿಸಿದೆವು. ಈಗ ಇಳಿಯುವ ದಾರಿಯಾದ್ದರಿಂದ 10 ಗಂಟೆಗೆಲ್ಲಾ ನಾವು ಶೇಷನಾಗ್ ತಲುಪಿದ್ದೆವು. ಅಲ್ಲಿ ಇಬ್ಬರೂ ಮಸಾಲೆ ದೋಸೆಯನ್ನು ತಿಂದು ನೆಸ್ಕೆಫೆ ಕಾಫಿ ಕುಡಿದು ನಮ್ಮ ಪ್ರಯಾಣ ಮುಂದುವರೆಸಿದೆವು. ಶೇಷನಾಗ್ ಕ್ಯಾಂಪಿನಿಂದ ಚಂದನ್‌ವಾರಿಗೆ 27 ಕಿ.ಮೀ ದೂರವಿದ್ದು ಈ ಮಾರ್ಗ ಸಂಪೂರ್ಣವಾಗಿ ಇಳಿಮುಖವಾಗಿತ್ತು. ಹಾಗಾಗಿ ನಾವು ಶೇಷನಾಗ್ ಕ್ಯಾಂಪನ್ನು 10.30ಕ್ಕೆ ಬಿಟ್ಟು ನೇರವಾಗಿ ಚಂದನ್‌ವಾರಿಗೆ 5.30ಕ್ಕೆ ತಲುಪಿದೆವು. ಮಾರ್ಗದಲ್ಲಿ ನಾವು ಪುಷ್ಕಳವಾಗಿ ಊಟ ಮಾಡಿದ್ದೆವು. ಚಂದನ್‌ವಾರಿಯನ್ನು ತಲುಪುತ್ತಿದ್ದಂತೆ ಒಂದು ಟ್ಯಾಕ್ಸಿಯಲ್ಲಿ ನೇರವಾಗಿ ಪಹೆಲ್‌ಗಾವ್‌ನಲ್ಲಿ ನಾವಿಳಿದುಕೊಂಡಿದ್ದ ಹೋಟೆಲಿಗೆ 6.30ರೊಳಗೆ ತಲುಪಿ ವಿಶ್ರಾಂತಿ ಪಡೆದೆವು. ಇಲ್ಲಿಗೆ ನಮ್ಮ ಅಮರನಾಥ ಯಾತ್ರೆ ಭಗವಾನ್ ಶಂಕರನ ಕೃಪಾಕಟಾಕ್ಷದಿಂದ ಮುಗಿಯಿತು. ಅಮರನಾಥ ಯಾತ್ರೆಯೆಂದರೇನು, ಅಲ್ಲಿಗೆ ಹೇಗೆ ಹೋಗುವುದು ಎಂಬುದರ ಬಗ್ಗೆ ನನಗೆ ಕಿಂಚಿತ್ತೂ ಮಾಹಿತಿಯಿಲ್ಲದೆ ಭಂಡ ಧೈರ್ಯದಿಂದ ಬೆಂಗಳೂರಿನಿಂದ ಹೊರಟೆ. ನನಗಿಂತ ಹೆಚ್ಚು ಅದೃಷ್ಟಶಾಲಿಯೆಂದರೆ ಸಂಪತ್‌ಕುಮಾರ. ನಾನು ಹೋಗುವವನಿದ್ದೇನೆ ಎಂದು ತಿಳಿಸಿದ್ದೇತಡ ಕೂಡಲೇ ತಾನೂ ಬರುವೆನೆಂದು ತಿಳಿಸಿದ್ದಲ್ಲದೆ ಚಾರಣದಲ್ಲಿ ಎಲ್ಲ ಕಷ್ಟಗಳನ್ನೂ ತುಟಿಪಿಟಕ್ಕೆನ್ನದೆ ಸಹಿಸಿಕೊಂಡು ಯಾತ್ರೆಯನ್ನು ನನ್ನೊಂದಿಗೆ ಮುಗಿಸಿದ್ದ. ಅವನಿಗೆ ನನ್ನ ಹೃದಯಪೂರ್ವಕ ಧನ್ಯವಾದಗಳು.

ತ್ರಿಕೂಟ ಪರ್ವತದಲ್ಲಿನ ವೈಷ್ಣೋದೇವಿ ಕ್ಷೇತ್ರದೆಡೆಗಿನ ಚಾರಣ

ಅಮರನಾಥ ಯಾತ್ರೆಯ ನಂತರ ನಾನು ಹಾಗೂ ಸಂಪತ್ ಕುಮಾರ ಇಬ್ಬರೂ ಪೆಹಲ್‌ಗಾವ್‌ನಿಂದ ನೇರವಾಗಿ ಜಮ್ಮು ಮಾರ್ಗವಾಗಿ ಕಟ್ರ ಬೇಸ್ ಕ್ಯಾಂಪಿಗೆ ಬಂದೆವು. ನಮ್ಮ ಉದ್ದೇಶ ವೈಷ್ಣೋದೇವಿ ಮಂದಿರದೆಡೆಗೆ ಚಾರಣ ಮಾಡುವುದು. ಈ ಮಂದಿರವು 5300 ಅಡಿ ಎತ್ತರದಲ್ಲಿದೆ ಹಾಗೂ ಕಟ್ರ ಬೇಸ್ ಕ್ಯಾಂಪಿನಿಂದ ಎರಡು ಮಾರ್ಗಗಳ ಮೂಲಕ ಚಾರಣ ಮಾಡಬಹುದು.

ಮೊದಲನೆಯ ಮಾರ್ಗದಲ್ಲಿ ಹೋದರೆ 12 ಕಿ.ಮೀ ಚಾರಣವಾದರೆ, ಎರಡನೇ ಮಾರ್ಗದಲ್ಲಿ 14 ಕಿ.ಮೀ ದೂರ ಚಾರಣ ಮಾಡಬೇಕು. ಕಟ್ರ ಬೇಸ್ ಕ್ಯಾಂಪಿನಿಂದ ವೈಷ್ಣೋದೇವಿ ಮಂದಿರದ(ಭವನ) ಮಾರ್ಗದಲ್ಲಿ ಸಿಗುವ ಮಂದಿರಗಳೆಂದರೆ:-

1. **1 ಕಿ.ಮೀ ದೂರದಲ್ಲಿ ಬಾಣ ಗಂಗಾ**
2. **ಬಾಣಗಂಗಾದಿಂದ 2.5 ಕಿ.ಮೀ ದೂರದಲ್ಲಿ ಚರಣ್‌ಪಾದುಕ**
3. **ಚರಣ್‌ಪಾದುಕದಿಂದ 3 ಕಿ.ಮೀ ದೂರದಲ್ಲಿ ಅದ್ಧುವರಿ ಮಂದಿರ**
4. **ಅದ್ಧುವರಿಯಿಂದ 4 ಕಿ.ಮೀ ದೂರದಲ್ಲಿ ಸಾಂಜಿಚಾಟ್ ಸ್ಥಳ ಸಿಗುವುದು.**
5. **ಇದು ಚಾರಣದಲ್ಲಿನ ಅತಿ ಎತ್ತರದ ಪ್ರದೇಶ.**
6. **ಸಾಂಜಿಚಾಟ್‌ನಿಂದ 2.5 ಕಿ.ಮೀ ದೂರದಲ್ಲಿ ಭವನ್ ಸಿಗುವುದು.**
7. **ಭವನ್‌ನಿಂದ 2 ಕಿ.ಮೀ ದೂರದಲ್ಲಿ ಭೈರೋನಾಥ್ ಮಂದಿರವು ಸಿಗುವುದು**

ಪಹೆಲ್‌ಗಾವ್‌ನಿಂದ ನಾನು ಹಾಗೂ ಸಂಪತ್ ಕುಮಾರ ಇಬ್ಬರೂ ಕಟ್ರ ಬೇಸ್ ಕ್ಯಾಂಪಿಗೆ ಬರುವ ಹೊತ್ತಿಗೆ ಮದ್ಯಾಹ್ನ 2.30 ಘಂಟೆ ಆಗಿತ್ತು. ಊಟ ಮಾಡುವುದಕ್ಕೆ ಮೊದಲು ನಾವಿಬ್ಬರೂ SBI ಕಟ್ರ ಶಾಖೆಗೆ ಹೋಗಿ ಅಲ್ಲಿನ ಮ್ಯಾನೇಜರ್ ಬಳಿ ನಮ್ಮ ಪರಿಚಯ ಮಾಡಿಕೊಂಡು ವೈಷ್ಣೋದೇವಿ ದರ್ಶನಕ್ಕೆ ಎರಡು ಆರ್ಮಿ ಪಾಸ್‌ನ್ನು ಪಡೆದುಕೊಂಡೆವು. ನಂತರ ಊಟ ಮುಗಿಸಿ ಹತ್ತಿರದಲ್ಲಿದ್ದ ಯಾತ್ರಾ ರಿಜಿಸ್ಟ್ರೇಷನ್ ಕೌಂಟರ್‌ಬಳಿಗೆ ಹೋಗಿ 10 ನಿಮಿಷದಲ್ಲಿ ಇಬ್ಬರೂ ಬೆಟ್ಟ ಹತ್ತಲು ಅನುಮತಿ ಪತ್ರ ಪಡೆದು ಹೋಟೆಲಿಗೆ ಹೋಗಿ ವಿಶ್ರಾಂತಿ ಪಡೆದೆವು. ನಮ್ಮ ಉದ್ದೇಶವು ರಾತ್ರಿ ಊಟ ಮಾಡಿಕೊಂಡು 9 ಗಂಟೆಗೆ ನಮ್ಮ ಚಾರಣ ಪ್ರಾರಂಭಿಸುವುದೆಂದಿತ್ತು.

ನಮ್ಮ ಚಾರಣ 9.30ಕ್ಕೆ ಪ್ರಾರಂಭವಾಗಿ ಮೊದಲ 6 ಕಿ.ಮೀ ಸ್ವಲ್ಪ ಕಠಿಣವಾಗಿತ್ತು. ಆದರೆ ಹವಾಮಾನ ತಂಪಾದ ಗಾಳಿಯಿಂದಾಗಿ ಹಿತಕರವಾಗಿದ್ದರಿಂದ ಹತ್ತುವುದು ಅಷ್ಟೇನೂ ಕಷ್ಟವಾಗಲಿಲ್ಲ. ಬಾಣಗಂಗಾ ಬಾಗಿಲನ್ನು ತಲುಪುತ್ತಿದ್ದಂತೆ ಮಾರ್ಗ ಪೋನಿ ಹಾಗೂ ಕುದುರೆಗಳಿಂದ ತುಂಬಿಕೊಂಡಿದ್ದು ನಡೆದುಕೊಂಡು ಹೋಗುವವರಿಗೆ ಕಿರಿ ಕಿರಿ ಆಗುತ್ತಿತ್ತು. ಮಾರ್ಗದುದ್ದಕ್ಕೂ ಪ್ರಖರವಾದ ವಿದ್ಯುತ್ ದೀಪಗಳು ಇದ್ದವು ಹಾಗೂ ಇಕ್ಕೆಲಗಳಲ್ಲೂ ಅಂಗಡಿಗಳಿದ್ದವು. ಇಷ್ಟೆಲ್ಲಾ ಕುದುರೆಗಳಿದ್ದರೂ ಮಾರ್ಗ ಆಗಾಗ್ಗೆ ಶುದ್ಧಿಮಾಡುತ್ತಿದ್ದರು. ಹಾಗೂ ಮಾರ್ಗ ಮೇಲ್ಛಾವಣಿಯಿಂದ ಕೂಡಿತ್ತು. ಅಲ್ಲಲ್ಲೇ ಪ್ರಯಾಣಿಕರಿಗಾಗಿ ಶೌಚಗೃಹಗಳನ್ನು ನಿರ್ಮಿಸಿದ್ದರು. ನಾವು ಚಾರಣ ಮಾಡುವ ಸಮಯದಲ್ಲಿ ಅಷ್ಟೇನೂ ಜನಗಳಿರಲಿಲ್ಲ. ಇಲ್ಲಿ ಮೊಬೈಲ್ನ ಪ್ರೀಪೈಡ್ ಸಿಮ್ ಕಾರ್ಡ್‌ಗಳು ಉಪಯೋಗಕ್ಕೆ ಬರುವುದಿಲ್ಲ ಎಂಬುದು ಅಲ್ಲಿನ ಸೆಕ್ಯೂರಿಟಿ ಗಾರ್ಡ್‌ನಿಂದ ತಿಳಿಯಿತು.

ನಮ್ಮ ಚಾರಣವು ಸುಗಮವಾಗಿ ಸಾಗಿ ಮಾತಾ ಮಂದಿರಕ್ಕೆ 3 ಕಿ.ಮೀ ಇರುವಾಗ ನಾವು ನಮ್ಮ ಮೊಬೈಲ್‌ನ್ನು ಅಲ್ಲಿರುವ ಉಚಿತ ಲಾಕರ್‌ಗಳಲ್ಲಿ ಇರಿಸಿ ನಂತರ ಮುಂದುವರೆದೆವು. ಮಧ್ಯರಾತ್ರಿ ಒಂದು ಗಂಟೆಗೆ ಮಾತಾ ಮಂದಿರದ ಭವನವನ್ನು ತಲುಪಿ ನಮ್ಮಲ್ಲಿದ್ದ ಆರ್ಮಿ ಪಾಸ್‌ನ ಸಹಾಯದಿಂದ ನೇರವಾಗಿ ಹೋಗಿ ದರ್ಶನ ಪಡೆದೆವು. ನಂತರ ನಾವು ಭೈರವನಾಥನ ದರ್ಶನಕ್ಕೆ ಹೋಗಲಿಲ್ಲ. ಆದರೂ 4 ಗಂಟೆಯವರೆಗೂ ಅಲ್ಲೇ ಇದ್ದು ನಂತರ ಇಳಿಯುವ ಚಾರಣ ಪ್ರಾರಂಭಿಸಿದೆವು. ಸ್ವಲ್ಪ ದೂರ ನಡೆದ ಮೇಲೆ ಒಂದೆಡೆ ನಾವು ಮೆಟ್ಟಿಲುಗಳನ್ನು ನೋಡಿದೆವು. ಇಲ್ಲೇ ನಾವು ತಪ್ಪು ಮಾಡಿದ್ದು. ನಾವು ಲೆಕ್ಕ ಹಾಕಿದ್ದೇನೆಂದರೆ ಮೆಟ್ಟಲಿನ ಮೂಲಕ ಇಳಿದರೆ ಬೇಗ ತಲುಪಬಹುದೆಂದು. ಆದರೆ ನಮಗೆ ಅದು ವಿಪರೀತ ಸುಸ್ತು ಮಾಡಿಸಿತು ಹಾಗೂ ಇಬ್ಬರಿಗೂ ಕಾಲು, ಮಂಡಿ ಹಾಗೂ

ತೊಡೆಗಳಲ್ಲಿ ವಿಪರೀತ ನೋವಾಗತೊಡಗಿತು. ಹಾಗೂ ಹೀಗೂ ನಾವು ಮುಂಜಾನೆ 7.30ಕ್ಕೆ ಹೋಟೆಲಿಗೆ ಹೋದೆವು ಅಷ್ಟೇ. ನಂತರ ಹಾಸಿಗೆಯ ಮೇಲೆ ಧೊಪ್ಪೆಂದು ಬಿದ್ದು ಹೇಗೆ ಬಿದ್ದೆವೋ ಹಾಗೇ ಮಲಗಿದೆವು. ಹೀಗೇ ಎಷ್ಟು ಹೊತ್ತು ಮಲಗಿದ್ದೆವೋ ಗೊತ್ತಿಲ್ಲ. ಹಿಂದಿನ ರಾತ್ರಿ ಚಾರಣಕ್ಕೆ ಹೊರಡುವ ಮೊದಲು ಇಬ್ಬರೂ ನಮ್ಮ ಕೊಳೆಯಾದ ಬಟ್ಟೆಗಳನ್ನು ನೆನಸಿದ್ದೆವು. ಹಾಗೂ ಹೀಗೂ 10.30ಕ್ಕೆ ಎದ್ದು ಹೊರಗೆ ಹೋಗಿ ತಿಂಡಿಯನ್ನು ತಿಂದು ಮತ್ತೆ ಹೋಟೆಲಿಗೆ ಬಂದು ಮಲಗಿದೆವು. ಯಾರಿಗೂ ಬಟ್ಟೆ ಒಗೆಯುವ ಶಕ್ತಿಯಿರಲಿಲ್ಲ. ಕೊನೆಗೆ ನಾನೇ ಕಷ್ಟಪಟ್ಟು ಎದ್ದು ಇಬ್ಬರ ಬಟ್ಟೆಗಳನ್ನೂ ಹಿಂಡಿಹಾಕಿದೆ. ಮತ್ತೆ ರಾತ್ರಿ 7 ಗಂಟೆಯ ತನಕ ಮಲಗಿದ್ದೆವು. ಅನಂತರ ಎದ್ದು ಬಟ್ಟೆಗಳನ್ನು ಜೋಡಿಸಿಕೊಂಡು ಹೊರಬಂದು ಊಟಮಾಡಿ ರಾತ್ರಿ 10.30ಕ್ಕೆ ಅಮೃತಸರಕ್ಕೆ ಹೊರಡುವ ಬಸ್ಸೊಂದರಲ್ಲಿ ಹೊರಟೆವು. ಇಲ್ಲಿಗೆ ವೈಷ್ಣೋದೇವಿಯೆಡಗಿನ ಚಾರಣವು ಮುಗಿದಿತ್ತು. ಈ ಹಿಂದೆ ನಾನು ಮೂರು ಬಾರಿ ಇಲ್ಲಿಗೆ ಬಂದಿದ್ದೆ. ಅದರಲ್ಲಿ ಎರಡುಬಾರಿ ಚಾರಣ ಮಾಡಿದ್ದರೆ ಒಮ್ಮೆ ನನ್ನ ಪತ್ನಿಯೊಂದಿಗೆ ಹೆಲಿಕಾಪ್ಟರಿನಲ್ಲಿ ಮೇಲಕ್ಕೆ ಹೋಗಿ ಮತ್ತೆ ಅದರಲ್ಲೇ ಕೆಳಕ್ಕೆ ಬಂದಿದ್ದೆ. ಎರಡು ಬಾರಿಯ ಚಾರಣವೂ ಯಾವುದೇ ತೊಂದರೆ ಇಲ್ಲದೇ ರಾತ್ರಿ ಹೊತ್ತಿನಲ್ಲೇ ಮಾಡಿದ್ದೆ.

ಕೈಲಾಸ ಪರ್ವತ ಪರಿಕ್ರಮ

ವಾಡಿಕೆಯ ಜ್ಞಾನವು

1. ಕೈಲಾಸ ಪರ್ವತದ ಒಂದು ಬಾರಿಯ ಪರಿಕ್ರಮವು ಜೀವಮಾನದ ಪಾಪಗಳನ್ನು ಅಳಿಸಿಹಾಕುತ್ತದೆ ;
2. ಮಾನಸರೋವರದಲ್ಲಿನ ಮಾಮೂಲಿನ ಸ್ನಾನವು ಯಾತ್ರಿಯನ್ನು ಬ್ರಹ್ಮಲೋಕಕ್ಕೆ ಕೊಂಡೊಯ್ಯುವುದು.
3. ಮಾನಸರೋವರ ಒಂದು ತೊಟ್ಟು ನೀರನ್ನು ಕುಡಿದರೆ ಸಾಕು ಅದು ನೂರುಜನ್ಮಗಳ ಪಾಪವನ್ನು ಅಳಿಸುತ್ತದೆ.
4. ಬ್ರಹ್ಮನ ವಾಸಸ್ಥಾನವು ಬ್ರಹ್ಮಲೋಕವಾದರೆ, ವಿಷ್ಣುವಿನ ವಾಸಸ್ಥಾನವು ವಿಷ್ಣುಲೋಕವಾದರೆ ಶಂಕರ ಭಗವಾನನ ವಾಸಸ್ಥಾನವು ಕೈಲಾಸ.
5. ಮಾನವನು ಬ್ರಹ್ಮ ಲೋಕಕ್ಕೆ ಅಥವಾ ವಿಷ್ಣುಲೋಕಕ್ಕೆ ಸಶರೀರಿಯಾಗಿ ಹೋಗಲು ಅಸಾಧ್ಯ ಆದರೆ, ಅವನು ಕೈಲಾಸಕ್ಕೆ ಹೋಗಿ ಸಶರೀರಿಯಾಗಿ ಮರಳಿ ಬರಬಹುದು!

2005 ಜೂನ್ ತಿಂಗಳಿನ ಅಮರನಾಥ ಗುಹೆಯೆಡೆಗಿನ ಚಾರಣದ ನಂತರ ನನ್ನ ಮನದಲ್ಲಿ ಕೈಲಾಸ ಪರ್ವತ ಪರಿಕ್ರಮ ಮಾಡಬೇಕೆಂಬ ಅಲೋಚನೆ

ಹುಟ್ಟಿಕೊಂಡಿತು. ಕಾರಣಾಂತರದಿಂದ ಬಹಳ ಕಾಲವಾದರೂ ಈ ಕಾರ್ಯವು ಕೈಗೂಡಲಿಲ್ಲ. ಮನುಷ್ಯನ ಸಮಸ್ತ ಕಾರ್ಯಗಳಿಗೂ ಶಂಕರ ಭಗವಾನನ ಕೃಪೆ ಇರಲೇಬೇಕು. ಅದಿಲ್ಲದೇ ಒಂದು ಹುಲ್ಲುಕಡ್ಡಿಯನ್ನೂ ಅಲುಗಿಸಲಾಗುವುದಿಲ್ಲ. 2012ರವರೆಗೂ ಈ ಕಾರ್ಯ ಕಾರ್ಯಗತಗೊಳಿಸಲು ಕಾಯಬೇಕಾಯಿತು. 2011ರ ಡಿಸೆಂಬರ್ ಹೊತ್ತಿಗೆ ನಾನು ಅಮೆರಿಕಾದಿಂದ ಮರಳಿ ಬಂದ ಮೇಲೆ ಯಾರಿಗೂ ವಿಷಯ ತಿಳಿಸದೆ ನೇರವಾಗಿ ಬನಶಂಕರಿಯಲ್ಲಿರುವ ಶ್ರೀಹಂಸಾ ಟ್ರಾವೆಲ್ಸ್ ಬಳಿಗೆ ಹೋಗಿ ಕೈಲಾಸ-ಮಾನಸರೋವರ ಯಾತ್ರೆ – ಜೂನ್ 2012ರ ಬ್ಯಾಚಿನಲ್ಲಿ ಮುಂಗಡ ಹಣವನ್ನು ಕೊಟ್ಟು ನನ್ನ ಹೆಸರನ್ನು ನೋಂದಾಯಿಸಿದೆ. ನಂತರ ಶಾರೀರಿಕ ಹಾಗೂ ಮಾನಸಿಕ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿದೆ. ಎರಡೂವರೆ ತಿಂಗಳು ಪ್ರತಿ ನಿತ್ಯವೂ ಮುಂಜಾನೆ ಹಾಗೂ ಸಂಜೆ 3 ಗಂಟೆಗಳ ವಾಕಿಂಗ್‌ನ್ನು ಮಾಡತೊಡಗಿ ಪ್ರತಿ ನಿತ್ಯವೂ ನಾನು ಎಷ್ಟು ದೂರನಡೆದೆ ಎಂಬ ಮಾಹಿತಿಯನ್ನು ಒಂದು ಎಕ್ಸೆಲ್ ಹಾಳೆಯಲ್ಲಿ ಬರೆದುಕೊಳ್ಳತೊಡಗಿದೆ. ಎರಡೂವರೆ ತಿಂಗಳಲ್ಲಿ ನಾನು 1000 ಕಿ.ಮೀನಷ್ಟು ನಡೆದಿದ್ದೆ. ಇದರಿಂದ ನನಗೆ ಮಾನಸಿಕವಾಗಿ ಅಪಾರ ಬಲ ಬಂದಿತು ಹಾಗೂ ಆತ್ಮವಿಶ್ವಾಸ ಹೆಚ್ಚಾಯಿತು. ಅನಂತರ ವಾಕಿಂಗಿನ ಜೊತೆಗೇ ಪ್ರತಿನಿತ್ಯವೂ ಪ್ರಾಣಾಯಾಮ ಮಾಡತೊಡಗಿದೆ. ಜೂನ್ ತಿಂಗಳು ಬಂದೇ ಬಿಟ್ಟಿತು. ಟಿಬೆಟ್ ಮತ್ತು ಕೈಲಾಸ ಪರ್ವತದ ಬಗ್ಗೆ ಹೆಚ್ಚು ವಿವರ ತಿಳಿದುಕೊಳ್ಳಲು ಪ್ರಯತ್ನಿಸಿದೆ.

ಕೈಲಾಸ ಪರ್ವತವನ್ನು ನಾಲ್ಕು ಧರ್ಮದವರು ಪವಿತ್ರವೆಂದು ಭಾವಿಸಿದ್ದನ್ನು ಬಲ್ಲವನಾಗಿದ್ದೆ; ಹಿಂದೂ, ಬೌದ್ಧ, ಜೈನ ಮತ್ತು ಬಾನ್ ಧರ್ಮ. ಹಿಂದೂ ಧರ್ಮದ ಪ್ರಕಾರ ಕೈಲಾಸ ಪರ್ವತ ಸಾಕ್ಷಾತ್ ಶಿವನ ವಾಸ ಸ್ಥಾನ. ಬೌದ್ಧರು ಈ ಪರ್ವತವನ್ನು ಬುದ್ಧನ ಸಾಕಾರ ರೂಪವೆಂದೇ ಬಗೆಯುತ್ತಾರೆ. ಮೊದಲನೆಯ ತೀರ್ಥಂಕರನಾದ ವೃಷಭದೇವ ನಿರ್ವಾಣ ಹೊಂದಿದ್ದು ಇಲ್ಲೇ ಎಂದು ಜೈನರು ಭಾವಿಸುತ್ತಾರೆ. ಟಿಬೆಟಿನಲ್ಲಿ ಬೌದ್ಧ ಧರ್ಮ ಬರುವುದಕ್ಕಿಂತಲೂ ಮೊದಲಿನಿಂದ ಪ್ರಚಲಿತವಿರುವುದು ಬಾನ್ ಧರ್ಮ. ಕೈಲಾಸ ಪರ್ವತ ಎಲ್ಲಾ ಆಧ್ಯಾತ್ಮಿಕ ಶಕ್ತಿಯ ಮೂಲ ನೆಲೆ.

ಪವಿತ್ರ ಸರೋವರ ಹಾಗೂ ಪವಿತ್ರ ಪರ್ವತ ಯಾವೆಲ್ಲ ಐತಿಹ್ಯಗಳನ್ನು ಹೊಂದಿವೆ ಎಂಬುದನ್ನು ತಿಳಿಯಲು ಅಪೇಕ್ಷಿಸಿದೆ. ಪರ್ವತದ ಭೂಗರ್ಭ ಶಾಸ್ತ್ರ ಹಾಗೂ ಮಾನಸ ಸರೋವರದ ಸರ್ವಾದರಣೀಯವಾಗಿರುವ ರಹಸ್ಯವನ್ನು ತಿಳಿಯಲು ಮುಂದಾದೆ.

ಭಾರತದ ನಾಲ್ಕು ದೊಡ್ಡ ನದಿಗಳಾದ ಸಟ್ಲೆಜ್, ಬ್ರಹ್ಮಪುತ್ರ, ಸಿಂಧು ಹಾಗೂ ಕರ್ನಾಲಿ (ಗಂಗಾ ನದಿಯ ಒಂದು ಉಪನದಿ) – ಇವು ಜನ್ಮ ತಾಳುವುದು

ಕೈಲಾಸ ಪರ್ವತದ ಸಮೀಪದಲ್ಲಿ. ಪರ್ವತ ಜಾಮಿತೀಯವಾಗಿ ಒಂದು ಮುಖ್ಯ ಬಿಂದುವಿನಲ್ಲಿರುವಂಥದ್ದು; ಈಜಿಪ್ಟಿನ ಪಿರಿಮಿಡ್ಡನಂತೆ ಒಂದು ಅಪೂರ್ವವಾದ ಆಕಾರವನ್ನು ಹೊಂದಿದೆ. ನಾಲ್ಕು ಬದಿಗಳು ಸಮ ಪ್ರಮಾಣದಲ್ಲಿ ಇರುವಂತಿವೆ. ಒಂದೊಂದರ ನಡುವೆ ಸ್ಪಷ್ಟವಾಗಿ ಗೆರೆ ಎಳೆದಂತಿದೆ; ಹಾಗಾಗಿ ಪರ್ವತದ ಮುಖದ ಭಾಗವನ್ನು ಅದ್ಭುತ ಗಾತ್ರದ ಕೈಗಳು ದೊಡ್ಡ ದೊಡ್ಡ ಕೆಂಪು ಬಂಡೆಗಳನ್ನು ಒಂದರ ಪಕ್ಕ ಒಂದನ್ನು ಇಟ್ಟಂತೆ ಗೋಚರವಾಗುತ್ತದೆ.

ಕೈಲಾಸ ಪರ್ವತ ಒಂದು ವಿಶ್ವೀರೇಖೆ (axis mundus) ಎಂದು ತಿಳಿದಿದ್ದರು. ಈ ಭೂಮಿಯೇ ಪರ್ವತದ ಮೇಲೆ ತಿರುಗುವಂತೆ, ನಾವಿಕರ ದಿಕ್ಸೂಚಿಯ ಮುಳ್ಳುಗಳು ತಿರುಗುವ ಹಾಗೆ. ಪ್ರಪಂಚದಲ್ಲಿರುವ ಬೇರೆ ಬೇರೆ ಬೃಹತ್ ಸ್ಮಾರಕಗಳ ಜೊತೆಗೆ ಈ ಪರ್ವತ ಸಂಪರ್ಕ ಹೊಂದಿದೆ ಎಂಬ ಮಾತೂ ಇದೆ. ಉದಾಹರಣೆಗೆ ಸ್ಟೋನ್ ಹೆಂಜ್. ಅದು ಸರಿಯಾಗಿ ಪರ್ವತಕ್ಕೆ 6666ಕಿ.ಮೀ (4166.25ಮೈಲು) ದೂರದಲ್ಲಿದೆ. ಛಾಯಾಚಿತ್ರಗಾರ ಪರ್ವತದ ಮುಖದ ಮೇಲೆ ಹಿಮದಿಂದ 'ಓಂ' ಎಂಬ ಅಕ್ಷರ ಮೂಡಿದ್ದನ್ನು ಸೆರೆಹಿಡಿದಿದ್ದಾನೆ.

ಕೈಲಾಸ ಪರ್ವತದ ಪ್ರದಕ್ಷಿಣೆ ಹಾಕುವುದೆಂದರೆ ಒಟ್ಟು 40 ಮೈಲಿ ದೂರವನ್ನು ಕ್ರಮಿಸಿದಂತೆ. ಸುದೈವದಿಂದ ಚೀನಾದವರು ಮೊದಲ 10 ಮೈಲಿಗಳವರೆಗೆ ರಸ್ತೆ ಮಾಡಿದ್ದಾರೆ; ಇನ್ನುಳಿದ 30 ಮೈಲಿ ದೂರ ಕಠಿಣವಾದ ಮಾರ್ಗದಲ್ಲಿ ನಡೆಯಬೇಕು. ಚಾರಣಿಗರು ಮೊದಲ ದಿನ 10 ಮೈಲಿ ಚಾರಣ ಮಾಡುವರು. ಎರಡನೇ ದಿನ ಬಹಳ ಕಠಿಣವಾದದ್ದು; 18700ಅಡಿ ತಲುಪಿದಾಗ 14 ಮೈಲಿ ಪೂರೈಸಿದಂತಾಗುವುದು. ಕೊನೆಯ ದಿನ ಮಾತ್ರ ತುಂಬಾ ಹರ್ಷ ಕೊಡುವ ಆರು ಮೈಲಿಗಳು ಮಾತ್ರ.

ಕೈಲಾಸ ಪರ್ವತದ ಒಂದು ಸುತ್ತಿನ ದೂರ ಎವರೆಸ್ಟ್ ಬೇಸ್ ಕ್ಯಾಂಪ್ ತಲುಪುವ ದೂರಕ್ಕಿಂತ ತುಂಬಾ ಕಡಿಮೆ ಇದ್ದರೂ ಸಹ ಅದು ಕಠಿಣವಾದ್ದರಿಂದ ಬಹಳ ತ್ರಾಸವಾಗುತ್ತದೆ. ಎವರೆಸ್ಟ್ ಬೇಸ್ ಕ್ಯಾಂಪ್ ಅತಿ ಎತ್ತರದ ಜಾಗ ಅಂದರೆ 17600 ಅಡಿ. ಕೈಲಾಸ ಪರ್ವತದ ಡೊಲ್ಮಾ ಲಾ ಪಾಸ್ ಅದಕ್ಕಿಂತ 1000 ಅಡಿ ಕೆಳಗಿರುವುದು.

ಜೂನ್ 11ರಂದು ಬೆಂಗಳೂರಿನಿಂದ ಖಟ್ಮಂಡುವಿಗೆ ವಿಮಾನದಲ್ಲಿ ಹೊರಟೆ. ಮದ್ಯಾಹ್ನ 1.30ಕ್ಕೆ ಖಟ್ಮಂಡು ತಲುಪಿದಾಗ ಅಲ್ಲಿಗೆ ಹಂಸಾ ಟ್ರಾವೆಲ್ಸ್ ಮ್ಯಾನೇಜರ್ ಶ್ರೀ ವೆಂಕಟೇಶ್ ಬಂದಿದ್ದರು. ಮತ್ತೊಂದು ವಿಮಾನದಲ್ಲಿ ಬೆಂಗಳೂರಿನಿಂದ ಮತ್ತೆ ನಾಲ್ಕು ಜನ ಬರಲಿದ್ದರು. ಅವರ ಬರುವವರೆಗೂ ಕಾದಿದ್ದು 2 ಗಂಟೆಗೆ ಅವರೊಂದಿಗೆ ಹೋಟೆಲಿಗೆ ಬಂದೆವು. ಊಟವಾದ ನಂತರ ಪರಸ್ಪರ ಪರಿಚಯವೂ ಆಯಿತು. ವಿಶ್ವೇಶ್ವರಪುರದಿಂದ ಬಂದಿದ್ದ ಕೃಷ್ಣಮೂರ್ತಿ, ಅವರ ಪತ್ನಿ, ಪುತ್ರ

ಹಾಗೂ ಪುತ್ರಿ. ಇವರುಗಳು ಯಾತ್ರೆ ಮುಗಿಯುವವರೆಗೂ ನನ್ನೊಂದಿಗೇ ಇದ್ದರು. ಮಾರನೇ ದಿನ ಪೂರ್ತಿ ಖಟ್ಮಂಡು ನಗರ ಪ್ರದಕ್ಷಿಣೆಯಿತ್ತು. ಈ ಕಾರ್ಯಕ್ರಮದಲ್ಲಿನ ಪ್ರಮುಖ ಧಾರ್ಮಿಕ ಮಂದಿರವೆಂದರೆ ಜಲ್ ನಾರಾಯಣ್. ಇದರ ಕುರಿತಾಗಿ ಕೆಲವು ಮಾಹಿತಿಗಳನ್ನು ಮುಂಚಿತವಾಗೇ ಸಂಗ್ರಹಿಸಿದ್ದೆ. ಅದರ ಮುಖ್ಯಾಂಶಗಳೆಂದರೆ;

ಜಲ್-ನಾರಾಯಣ್ ಒಂದು ಬಹಿರಂಗ ದೇವಾಲಯ. ವಿಷ್ಣು ಪರಮಾತ್ಮನ ದೇವಾಲಯ. ಶಿವಪುರಿ ಬೆಟ್ಟದ ಬುಡದಲ್ಲಿದೆ. ಖಟ್ಮಂಡುವಿನ ಉತ್ತರಕ್ಕೆ ಎಂಟು ಕಿಲೋಮೀಟರ್ ದೂರದಲ್ಲಿ. ಜಲ್-ನಾರಾಯಣನನ್ನು ಸ್ಥಳೀಯರು ಬುಧನೀಲಕಂಠ ದೇವಾಲಯವೆಂದು ಕರೆಯುತ್ತಾರೆ. ಅಲ್ಲಿರುವ ವಿಷ್ಣುಮೂರ್ತಿ ಬೃಹತ್ ಪುತ್ಥಳಿಯಾಗಿ ಶೇಷನಾಗನ ಮೇಲೆ ನೀರಿನಲ್ಲಿ ಪವಡಿಸಿದ್ದಾನೆ. ವಿಗ್ರಹ 1000 ವರ್ಷಗಳ ಹಿಂದೆ ಕೆತ್ತಲ್ಪಟ್ಟಿರುವಂಥದ್ದು; ಈ ವಿಶ್ವ ಸೃಷ್ಟಿಯಾಗುವುದಕ್ಕೂ ಮೊದಲು ವಿಷ್ಣು ಜಲದಲ್ಲಿ ಇದ್ದಂತ ಸನ್ನಿವೇಶದ ಚಿತ್ರಣ. 16 ಅಡಿ ಉದ್ದದ ಪ್ರತಿಮೆ ನೇಪಾಳದಲ್ಲಿರುವ ಅತ್ಯಂತ ಬೃಹತ್ತಾದ ಮೂರ್ತಿಯೆಂದು ಖ್ಯಾತವಾಗಿದೆ.

ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿದ ಮೂರ್ತಿ ನೋಡಿದ್ದು ಅದೇ ಮೊದಲು. ಜಲ ನಾರಾಯಣ ಬೆನ್ನ ಮೇಲೆ ಮಲಗಿದ್ದಾನೆ; ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ ಮತ್ತು ಪದ್ಮ ಕಾಣುವುದು; ಮುಖದಲ್ಲಿ ಎಂಥ ಶಾಂತಿ ಪ್ರಕಟವಾಗುತ್ತಿದೆ! ನೋಡಲು ಕಣ್ಣೆರಡು ಸಾಲದು. ಅದನ್ನು ನೋಡುತ್ತಿದ್ದ ಹಾಗೆಯೇ ಭಕ್ತಿ ಭಾವ ತಂತಾನೆ ಮೂಡುತ್ತದೆ. ಒಂದು ಐತಿಹ್ಯದ ಪ್ರಕಾರ ಒಬ್ಬ ರೈತ ತನ್ನ ಪತ್ನಿಯ ಜೊತೆ ಹೊಲದಲ್ಲಿ ಉಳುತ್ತಿದ್ದಾಗ ನೇಗಿಲ ಮೊನೆ ನೆಲದಲ್ಲಿದ್ದ ಒಂದು ಮೂರ್ತಿಗೆ ತಾಗಿ ರಕ್ತ ಸೋರತೊಡಗಿತು. ಆವಾಗ ಹೊರಗೆ ತೆಗೆದ ಮೂರ್ತಿಯೇ ಬುಧ ನೀಲಕಂಠ ಮೂರ್ತಿ; ತರುವಾಯ ಅದನ್ನು ಈಗ ಇರುವ ಭಂಗಿಯಲ್ಲಿ ಪ್ರತಿಷ್ಠಾಪಿಸಲಾಯಿತು.

ಅನೇಕ ವರ್ಷಗಳವರೆಗೆ ಸ್ಥಳೀಯರು ಮೂರ್ತಿ ನೀರಿನಲ್ಲಿ ತೇಲುತ್ತದೆ ಎಂದು ತಿಳಿದಿದ್ದರು. 1957 ರಲ್ಲಿ ನಂಬಿಕೆ ಇಲ್ಲದವರು ಕಲ್ಲಿನ ಮೂರ್ತಿ ಹೇಗೆ ತೇಲುತ್ತದೆ ಎಂದು ಪ್ರಶ್ನೆ ಮಾಡಿದಾಗ ವೈಜ್ಞಾನಿಕವಾದ ಮಾಹಿತಿ ಇಲ್ಲದ ಕಾರಣ ಈ ಪ್ರಶ್ನೆ ಬಗೆಹರಿಯದೆ ಉಳಿದಿದೆ. ಮೂರ್ತಿಯಿಂದ ತೆಗೆದ ಒಂದು ಚೂರಿನಿಂದ ಗೊತ್ತದದ್ದೆಂದರೆ ಅದು ಕಡಿಮೆ ದ್ರವ್ಯರಾಶಿ ಇರುವ ಸಿಲಿಕಾ- ಆಧಾರಿತ ಕಲ್ಲು. ಲಾವಾ ಶಿಲೆಗೆ ಹತ್ತಿರವಾದದ್ದು ಎಂದು. ಮತ್ತೆ ಅದೇ ತರಹ ವೈಜ್ಞಾನಿಕ ಪರೀಕ್ಷೆಗೆ ಮನವಿಗಳು ಬಂದಾಗ ಅವುಗಳನ್ನು ನಿರಾಕರಿಸಲಾಯಿತು; ಹಾಗಾಗಿ 'ತೇಲುವ ಮೂರ್ತಿ' ಜನರನ್ನು ಆಕರ್ಷಿಸುತ್ತಲೇ ಇದೆ.

ಮತ್ತೊಂದು ಆಕರ್ಷಣೆಯ ಕಾರ್ಯಕ್ರಮವೆಂದರೆ ವಿಮಾನದ ಮೂಲಕ ಎವರೆಸ್ಟ್ ಪರ್ವತವನ್ನು ಹತ್ತಿರದಿಂದ ವೀಕ್ಷಿಸುವುದು. ಅದರ ಕುರಿತಾಗಿ ಕೆಲವು ಮಾಹಿತಿಗಳು ಹಾಗೂ ನನ್ನ ಅನುಭವಗಳನ್ನು ಈ ಕೆಳಗೆ ನೀಡಿರುವೆ.

ಎವರೆಸ್ಟ್ ಶಿಖರವನ್ನು ನೋಡಲು ವಿಮಾನದಲ್ಲಿ ಹೊರಟಾಗ ವಿಮಾನವು ಮೋಡಗಳ ಪದರಗಳನ್ನು ಭೇದಿಸಿಕೊಂಡು, ಥಳಥಳಿಸುವ ಮುಂಜಾನೆಯ ಬಿಸಿಲಿನಲ್ಲಿ ಹಾರುವಾಗ, ಪರ್ವತ ಶೃಂಗಗಳು ಕಾಣತೊಡಗಿದವು. ಎರಿದ ಕೆಲವೇ ಕ್ಷಣಗಳಲ್ಲಿ ನಾವು ಆ ಬೃಹತ್ ಹಿಮಾಲಯದ ಶುಭ್ರ ಶ್ವೇತ ಭೂವಲಯದ ನಡುವೆ ಇದ್ದೆವು. ಹೊರಗೆ ನೋಡಿದೆ – 1500 ಮೈಲುಗಳ ಪಾರ್ಶ್ವವನ್ನು ವ್ಯಾಪಿಸಿರುವ ಆ ಹಿಮಾಲಯ ಪರ್ವತ ಶ್ರೇಣಿಯನ್ನು ಕಂಡಾಗ ರೋಮಾಂಚನವಾಯಿತು! ನಂಬಲಸಾಧ್ಯವಾದ ದೃಶ್ಯ.

ಜಗತ್ತಿನಲ್ಲೇ ಅತ್ಯಂತ ಎತ್ತರದ ಪರ್ವತ ಶ್ರೇಣಿ ಹಿಮಾಲಯ; ಭಾರತ ಏಷ್ಯಾದೊಡನೆ ಘರ್ಷಿಸಿದ ಖಂಡಾಂತರ ಚಲನೆಯಲ್ಲಿ ಮೇಲೆದ್ದು ಬಂದದ್ದು. ಹಿಂದೂಗಳ ಪಾಲಿಗೆ ಹಿಮಾಲಯ ಕೇವಲ ಅದ್ಭುತವಾದ ಪರ್ವತ ಪಂಕ್ತಿಯಲ್ಲ; ಅತ್ಯಂತ ಪವಿತ್ರವಾದ ಸಜೀವ ಸ್ಮಾರಕ. ನನ್ನ ಬದುಕಿನುದ್ದಕ್ಕೂ ಹಲವು ಪವಿತ್ರ ಸ್ಥಳಗಳ ಚಿತ್ರಗಳನ್ನು ನೋಡುತ್ತಾ ಬೆಳೆದಿದ್ದೇನೆ; ಹಿಮಾಲಯದ ಒಡಲಿನಲ್ಲಿ ಪ್ರತಿಷ್ಠಾಪಿತವಾದ ಶಿವನ ಚಿತ್ರ ನನ್ನ ಹೃನ್ಮಂದಿರದಲ್ಲಿ ಚಿರಸ್ಥಾಯಿಯಾಗಿ ಉಳಿದುಕೊಂಡಿದೆ.

ನಾನು ಪರ್ವತ ಶ್ರೇಣಿಯ ಕಡೆಗೆ ದೃಷ್ಟಿ ಹರಿಸಿದೆ; ಆದರೆ ಯಾವುದೇ ಒಂದು ಪರ್ವತ ಉಳಿದವುಗಳಿಗಿಂತ ಬೇರೆಯಾಗಿ ನಿಂತಂತೆ ತೋರಲಿಲ್ಲ. ನಾನು ಕಲ್ಪಿಸಿಕೊಂಡಿದ್ದಂತೆ ಹಿಮಾಲಯ ಪರ್ವತ ಆಶ್ಚರ್ಯ ಮೂಡಿಸುವಂತೆ ಇರಲಿಲ್ಲ. ಅದನ್ನು ಸುತ್ತುವರೆದಿದ್ದ ಇತರ ಪರ್ವತಗಳೂ ಎತ್ತರವಾಗಿದ್ದ ಕಾರಣ ಎವರೆಸ್ಟ್ ಸ್ವಲ್ಪ ಎತ್ತರವಾಗಿದ್ದಂತೆ ತೋರಿತು. ಆದರೆ ಈ ಭೂಮಿಯ ಮೇಲಿನ ಅತ್ಯಂತ ಎತ್ತರದ ಸ್ಥಳವೊಂದನ್ನು ನಾನು ದರ್ಶಿಸಿದ ಅನುಭವವನ್ನು ಎಂದೂ ಮರೆಯಲಾರೆ. ಎವರೆಸ್ಟಿನ ಮೇಲೆ ಕಣ್ಣು ನೆಟ್ಟಾಗ ಅದೇ ನನ್ನನ್ನು ವ್ಯಾಪಿಸಿಕೊಂಡು ಉಳಿದದ್ದೆಲ್ಲ ಅದರ ಮುಂದೆ ಕುಬ್ಜವಾಗಿ ಕಂಡಿತು.

ಮೂರನೇ ದಿನ ನಮ್ಮನ್ನು ಖಟ್ಮಂಡುವಿನಿಂದ 135 ಕಿ.ಮೀ. ದೂರದ **ಕೋಡಾರಿಗೆ(ನೇಪಾಳ–ಚೀನಾ ಬಾರ್ಡರ್)** ಕರೆದೊಯ್ದರು. ನಾಲ್ಕನೇ ದಿನದಿಂದ ನಮ್ಮ ಕಾರ್ಯಕ್ರಮವು ಹೀಗಿತ್ತು:

ನಾಲ್ಕನೇ ದಿನ – ವೀಸಾ ಪರಿಶೀಲನೆಯ ನಂತರ ಲಾನ್ಸ್ ಕ್ರೂಯ್ಸರ್ ವಾಹನದಲ್ಲಿ Zhangmu (2300ಮೀ) ಮುಖಾಂತರ ನ್ಯಾಲಮ್ (3750ಮೀ) ಶಿಬಿರದೆಡೆಗೆ ಪ್ರಯಾಣ. (104 ಕಿ.ಮೀ)

ಐದನೇ ದಿನ – ನ್ಯಾಲಮ್ ಶಿಬಿರದಲ್ಲೇ ಎತ್ತರ ಪ್ರದೇಶದಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವ ದಿನ. ಇಂದು ಹತ್ತಿರದಲ್ಲಿನ ಒಂದು ಗುಡ್ಡವನ್ನು ಹತ್ತಿ ನಂತರ ಇಳಿಯುವ ಕಾರ್ಯಕ್ರಮ.

ಆರನೇ ದಿನ – ನ್ಯಾಲಮ್ ಶಿಬಿರದಿಂದ ಕಾರಿನಲ್ಲಿನ ಪ್ರಯಾಣದಲ್ಲಿ ಅತಿ ಎತ್ತರ ಪ್ರದೇಶದ La Lung La pass 5150ಮೀ (16900 ಅಡಿ) ಮೂಲಕ Shisa Pangma conservation areaವನ್ನು ದಾಟಿ Pieku–tso ಸರೋವರ ನೋಡಿಕೊಂಡು Saga 4600ಮೀ (15100 ಅಡಿ) ಶಿಬಿರವನ್ನು ತಲಪುವುದು. (230 ಕಿ.ಮೀ)

ಏಳನೇ ದಿನ – Saga ಶಿಬಿರದಿಂದ Dongba ಮುಖಾಂತರ Payang 4750ಮೀ (15583 ಅಡಿ) ಶಿಬಿರ ತಲಪುವುದು. ಸಾಗ ಶಿಬಿರದಿಂದ ಪರ್ಯಾಂಗ್ ಶಿಬಿರ – 232 ಕಿ.ಮೀ

ಎಂಟನೇ ದಿನ – Payang ಶಿಬಿರದಿಂದ Hore ಮುಖಾಂತರ ಪ್ರಥಮ ಬಾರಿಗೆ ಮಾನಸರೋವರ ಹಾಗೂ ಕೈಲಾಸ ಪರ್ವತ ವೀಕ್ಷಿಸಿ Seralung Gumpa ನೋಡಿಕೊಂಡು ಮಾನಸರೋವರ (4560ಮೀ) ಹಾಗೂ Rakshas Tal (4565ಮೀ)ಗಳನ್ನು ನೋಡಿಕೊಂಡು ಅಲ್ಲೇ ಉಳಿಯುವುದು. ಅಂದಾಜು 220 ಕಿ.ಮೀ

ಒಂಬತ್ತನೇ ದಿನ –ಹೊರ್ಚು ಬಳಿ ಮಾನಸರೋವರದಲ್ಲಿ ಸ್ನಾನ, ಪೂಜೆಗಳನ್ನು ಮಾಡಿ ಎರಡೂ ಸರೋವರವನ್ನು ಹೊರಚುನಿಂದ 88 ಕಿ.ಮೀ ಸುತ್ತಳತೆಯನ್ನು ಕಾರಿನಲ್ಲಿ ಪರಿಕ್ರಮ ಮಾಡಿ ನಂತರ ಅಲ್ಲೇ ಉಳಿಯುವುದು.

ಹತ್ತನೇ ದಿನ – ಅಷ್ಟಪಾದದೆಡೆಗೆ 4 ಕಿ.ಮೀ ಚಾರಣ ಹಾಗೂ ಮರಳಿ ಕ್ಯಾಂಪಿಗೆ 4 ಕಿ.ಮೀ ಚಾರಣ.

ಹನ್ನೊಂದನೇ ದಿನ – ಕೈಲಾಸ ಪರಿಕ್ರಮದ ಮೊದಲನೇ ದಿನ – ಯಮದ್ವಾರದಿಂದ ಯಮಸ್ಥಳದ ಮುಖಾಂತರ ಧಿರಾಪುಕ್ ಶಿಬಿರ (15629 ಅಡಿ) – 12 ಕಿ.ಮೀ ಚಾರಣ.

ಹನ್ನೆರಡನೇ ದಿನ – ಧೀರಾಪುಕ್‌ನಿಂದ ಚಾರಣ ಮಾರ್ಗದಲ್ಲಿನ ಅತಿ ಎತ್ತರದ ಪ್ರದೇಶವಾದ Dolma La (18490 ಅಡಿ 5636ಮೀ) ಶಿಬಿರ ತಲಪುವುದು.

ಹದಿಮೂರನೇ ದಿನ – Dolma La ಶಿಬಿರದಿಂದ ಗೌರಿ ಕುಂಡ ದರ್ಶಿಸಿಕೊಂಡು Shapje Datok ಮಾರ್ಗವಾಗಿ Zutul Puk (15600 ಅಡಿ 4750ಮೀ) – 20 ಕಿ.ಮೀ ಚಾರಣ – ಮುಖಾಂತರ Trangser Trangmar – ಪರಿಕ್ರಮದ

ಅಂತಿಮ ಪ್ರದೇಶ ತಲುಪಿ ಅಲ್ಲಿಂದ ಜೀಪಿನಲ್ಲಿ Hore Chu ಶಿಬಿರವನ್ನು ತಲುಪುವುದು.

ಹದಿನಾಲ್ಕನೆ ದಿನ – Hore Chu ಶಿಬಿರದಿಂದ ಖಟ್ಮಂಡುವಿಗೆ ಪ್ರಯಾಣ.

ನೇಪಾಳ–ಚೈನಾ ಬಾರ್ಡರ್ ಆದ ಕೋಡಾರಿಯ ಬಳಿ ನಮ್ಮ ವೀಸಾಗಳ ಪರಿಶೀಲನೆ ನಂತರ ನೇಪಾಳದ ಸಂಸ್ಥೆ ಚೈನಾ ಚಾರಣ ಸಂಸ್ಥೆಯಾದ Fishtail Tours & Travelsಗೆ (ಈ ಸಂಸ್ಥೆಯು ಖಟ್ಮಂಡುವಿನಲ್ಲಿ ತನ್ನ ಆಫೀಸನ್ನು ಹೊಂದಿದೆ) ನಮ್ಮನ್ನು ಮುಂದಕ್ಕೆ ಕರೆದೊಯ್ಯಲು ಜವಾಬ್ದಾರಿಯನ್ನು ನೀಡಿತ್ತು. ಇದರ ಜೊತೆಗೆ ನಮ್ಮನ್ನು ನೋಡಿಕೊಳ್ಳಲು ಬೆಂಗಳೂರಿನ ಹಂಸಾ ಟ್ರಾವೆಲ್ಸ್ ಮ್ಯಾನೇಜರ್ ವೆಂಕಟೇಶ್ ಇದ್ದರು. ನಾಲ್ಕು ಜನಗಳು ಕೂಡುವ ಲಾನ್ಸ್ ಕ್ರೂಯ್ಸರ್ ವಾಹನದಲ್ಲಿ ಕುಳಿತು ಪ್ರಯಾಣ ಪ್ರಾರಂಭಿಸಿದೆವು. ರಸ್ತೆ ಸಂಪೂರ್ಣವಾಗಿ ಟಾರ್‌ನಿಂದ ಕೂಡಿದ್ದು ಸ್ವಲ್ಪವೂ ಧೂಳನ್ನು ಸೇವಿಸದೇ ನೇರವಾಗಿ 104 ಕಿ.ಮೀ ಪ್ರಯಾಣ ಮಾಡಿ ಸಂಜೆ 4 ಗಂಟೆಗೆ ನ್ಯಾಲಮ್ ಶಿಬಿರ ತಲುಪಿದೆವು. ಅಲ್ಲಿ ನಮಗೆ ಒಳ್ಳೆಯ ಗೆಸ್ಟ್ ಹೌಸ್‌ನಲ್ಲಿ ಬೇರೆ ಬೇರೆ ಕೋಣೆಗಳನ್ನು ನೀಡಿದರು. ಚಹಾ ಸೇವನೆ ನಂತರ ಒಂದೇ ರಸ್ತೆಯಿರುವ ಊರಿನೊಳಗೆ ಹೋಗಿ ಕೆಲವು ಅಗತ್ಯವಾದ ಪದಾರ್ಥಗಳಾದ ಟಾರ್ಚ್ ಇತ್ಯಾದಿ ಖರೀದಿಸಿ ಮರಳಿ ರೂಮಿಗೆ ಬಂದು ಊಟಮಾಡಿ ನಿದ್ರಿಸಿದೆವು.

ಐದನೇ ದಿನ ಎತ್ತರ ಪ್ರದೇಶದ ಹವೆಗೆ ಒಗ್ಗಿಕೊಳ್ಳಲು ಅಲ್ಲೇ ಇರುವ ಕಾರ್ಯಕ್ರಮವಿತ್ತು. ಆ ಸಮಯದಲ್ಲಿ ನಾವು ಹತ್ತಿರದಲ್ಲಿನ ಒಂದು ಗುಡ್ಡ ಹತ್ತಿ ನಂತರ ಇಳಿಯುವ ಕಾರ್ಯಕ್ರಮವಿತ್ತು. ಆದರೆ ಮಳೆಯಿಂದಾಗಿ ಅದು ರದ್ದಾಯಿತು. ಎಲ್ಲರೂ ಬೇಸರದಿಂದ ರೂಮಿನಲ್ಲೇ ಹರಟೆಹೊಡೆಯುತ್ತಾ ಕಾಲಕಳೆದೆವು.

ಆರನೇ ದಿನದ ಪ್ರಯಾಣ ನಮ್ಮಲ್ಲಿನ ಕೆಲವು ಯಾತ್ರಿಕರಿಗೆ ಅತ್ಯಂತ ಕಷ್ಟಕರವಾಗಿತ್ತು. ಏಕೆಂದರೆ ಇಂದು ನಮ್ಮ ಪ್ರಯಾಣ 16900 ಅಡಿ ಎತ್ತರದ La Lung La pass ಮುಖಾಂತರ 15100 ಅಡಿ ಎತ್ತರದಲ್ಲಿನ ಸಾಗ ಕ್ಯಾಂಪನ್ನು 230 ಕಿ.ಮೀ ಪ್ರಯಾಣ ಮಾಡಿ ತಲಪುವುದು. ಶಿಬಿರ ತಲಪುತ್ತಿದ್ದಂತೆ ಎಲ್ಲರಿಗೂ ಬಿಸಿ ಚಹಾ ನೀಡಿದರು. ನಾಲ್ಕು ಯಾತ್ರಿಗಳಿಗೆ ವಿಪರೀತ ಸುಸ್ತಾಗಿ, ಉಸಿರಾಡಲು ತೊಂದರೆಯ ಜೊತೆಗೆ ವಿಪರೀತ ತಲೆನೋವಿನಿಂದ ನರಳತೊಡಗಿದರು. ಇದು ಪರ್ವತಗಳ ಅನಾರೋಗ್ಯದ ಮುನ್ಸೂಚನೆಗಳು ಎತ್ತರ ಪ್ರದೇಶದಲ್ಲಿ ಆಗುವ ಪರಿಣಾಮಗಳು (Symptoms of Altitude Mountain Sickness). ರಾತ್ರಿ ಊಟವಾದ ಮೇಲೆ ಮ್ಯಾನೇಜರ್ ವೆಂಕಟೇಶ್ ನನ್ನ ರೂಮಿನಲ್ಲೇ ಮಲಗುತ್ತಿದ್ದನು.

ಸುಮಾರು 10 ಘಂಟೆಗೆ ಒಬ್ಬ ಯಾತ್ರಿ ನಮ್ಮ ರೂಮಿನ ಬಾಗಿಲನ್ನು ಬಡಿದರು. ನಾವು ಹೊರಗೆ ಬಂದು ವಿಚಾರಿಸಿದಾಗ ತಿಳಿದುಬಂದಿದ್ದೇನೆಂದರೆ ಅವರಿದ್ದ ಕೋಣೆಯಲ್ಲಿ ಮತ್ತೊಬ್ಬ 60 ವರ್ಷದ ಮಹಿಳಾ ಯಾತ್ರಿ ಎಚ್ಚರದಪ್ಪಿ, ಏನೇನೋ ಬಡಬಡಿಸುತ್ತಿರುವರೆಂದು ಹಾಗೂ ಬಂದು ನೋಡಿ ಎಂದರು. ನಾವಿಬ್ಬರೂ ಕೂಡಲೇ ಹೋಗಿ ಮಾತನಾಡಿಸಿದಾಗ ಅವರು ನನ್ನ ಕೈಗಳನ್ನು ಹಿಡಿದುಕೊಂಡು ತನಗೆ ಇಲ್ಲಿಂದ ಮುಂದೆ ಬರಲು ಆಗುವುದಿಲ್ಲವೆಂದೂ ಹಾಗೂ ತನ್ನನ್ನು ಮತ್ತೆ ಖಟ್ಮಂಡು ನಗರಕ್ಕೆ ಕಳಿಸಿಕೊಡಿ ಎಂದು ಬೇಡತೊಡಗಿದರು. ನನಗನಿಸಿದಂತೆ ಅವರಿಗೆ ಆಯಾಸವಾಗಿತ್ತು ಹಾಗೂ ಇಲ್ಲಿಗೆ ಬರುವ ಮೊದಲು ಅವರು ಯಾವುದೇ ಶಾರೀರಿಕ ತಯಾರಿಯನ್ನು ಮಾಡಿಕೊಂಡಿರಲಿಲ್ಲ. ನಾನು ಅವರಿಗೆ ಸಮಾಧಾನ ಹೇಳಿ ಶಿವಪಂಚಾಕ್ಷರಿ ಮಂತ್ರ ಜಪಿಸುತ್ತಾ ಮಲಗಿ ನಿದ್ರಿಸುವಂತೆ ಹೇಳಿದೆ. ಅವರು ಅದನ್ನು ಕೇಳದೇ ತನ್ನದೇ ಅಳಲನ್ನು ತೋಡಿಕೊಳ್ಳುತ್ತಿದ್ದರು. ನಮಗೆ ಏನು ಮಾಡಬೇಕೆಂದು ಗೊತ್ತಾಗದೆ ನಾನು ಅವರಿಗೆ ಮೊದಲು ಹೇಳಿದ್ದನ್ನೇ ಜೋರಾಗಿ ಗದರಿಕೊಂಡು ಹೇಳಿದೆ. ಅವರು ಮತ್ತೇನು ಹೇಳದೆ ಮಲಗಿದರು. ಮಾರನೇ ದಿನ ಮುಂಜಾನೆ ವಿಚಾರಿಸಿದಾಗ ಅವರು ತಾನು ಚೆನ್ನಾಗಿ ನಿದ್ರಿಸಿದ್ದರಿಂದ ಈಗ ಆರಾಮವಾಗಿರುವೆ ಎಂದರು.

ಏಳನೇ ದಿನ ಎಲ್ಲರೂ ನಾವಿದ್ದ ಎತ್ತರ ಪ್ರದೇಶದಲ್ಲೇ 232 ಕಿ.ಮೀ ಪ್ರಯಾಣ ಮಾಡಿ payang ಶಿಬಿರ ತಲುಪಿದೆವು. ಇಲ್ಲಿ ನಮಗೆ ಸ್ನಾನಕ್ಕೆ ಬಿಸಿ ನೀರಿನ ಸೌಕರ್ಯವಿರುವ ಒಳ್ಳೆ ಹೋಟೆಲಿನಲ್ಲಿ ಇಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದರು. ರಾತ್ರಿ ಬಿಸಿ ಬಿಸಿ ಊಟಮಾಡಿ ಚೆನ್ನಾಗಿ ನಿದ್ರಿಸಿದೆವು.

ಎಂಟನೇ ದಿನ ನಾವು payang ಶಿಬಿರದಿಂದ 220 ಕಿ.ಮೀ ದೂರದಲ್ಲಿರುವ ಮಾನಸರೋವರದ ಶಿಬಿರ ತಲಪುವುದು. ಮಾರ್ಗದಲ್ಲಿ Seralung Gumpa ವನ್ನು ಕೆಲಕಾಲ ವೀಕ್ಷಿಸಿ ಹೋರೆ ಪ್ರದೇಶದಿಂದ ಮೊತ್ತ ಮೊದಲಬಾರಿಗೆ ಕೈಲಾಸ ಪರ್ವತ ಹಾಗೂ ಮಾನಸರೋವರವನ್ನು ವೀಕ್ಷಿಸಿ ಎಲ್ಲರೂ ಭಾವುಕರಾಗಿ ಅಲ್ಲಿಂದಲೇ ಕೈಲಾಸ ಪರ್ವತಕ್ಕೆ ನಮಿಸಿದೆವು.

ಕೈಲಾಸ ಪರ್ವತದ ನಾಲ್ಕು ಮುಖಗಳು ನಾಲ್ಕು ದಿಕ್ಕುಗಳ ಕಡೆಗೆ ಇರುವುವು ಮ್ಯಾನೇಜರ್ ವೆಂಕಟೇಶ್ ಹೀಗೆ ವಿವರಿಸಿದರು ; "ವೇದಗಳ ಪ್ರಕಾರ ಈ ಪರ್ವತ ಸ್ವರ್ಗ ಮತ್ತು ಭೂಮಿಗೆ ಸೇತುವೆಯಾಗಿರುವುದು. ಬೌದ್ಧಧರ್ಮಿಯರು ಹಾಗೂ ಜೈನ ಮತಾವಲಂಬಿಗಳೂ ಸಹ ಕೈಲಾಸ ಪರ್ವತ ಸ್ವರ್ಗದ ದ್ವಾರವೆಂದು ತಿಳಿಯುತ್ತಾರೆ. ಕೈಲಾಸ ಪರ್ವತವೆಂಬುದು ಹಲವು ನಿಗೂಢಗಳಿಗೆ ಉತ್ತರವಾಗಿದೆ; ಕ್ರೈಸ್ತಧರ್ಮದಲ್ಲಿ ಪವಿತ್ರ ಬಟ್ಟಲು (Holy Grail) ಇದೆಯಲ್ಲಾ ಹಾಗೆ.

ಸೂರ್ಯಾಸ್ತದ ಸಮಯದಲ್ಲಿ ಪರ್ವತದಿಂದ ಧನಾತ್ಮಕ ಶಕ್ತಿ [illegible] ಪಸರಿಸುತ್ತದೆ; ಪರ್ವತದಿಂದುಂಟಾದ ನೆರಳುಗಳು [illegible] ರೂಪವನ್ನು ರಚಿಸುತ್ತವೆ; ಹಿಂದೂಧರ್ಮದ ಪ್ರಕಾರ ಸ್ವಸ್ತಿಕ ಸಮೃದ್ಧಿ, ಅಭಿವೃದ್ಧಿಯ ಸಂಕೇತ."

ಶಿಬಿರ ತಲುಪಿ ಸ್ವಲ್ಪ ವಿಶ್ರಾಂತಿ ನಂತರ ನಮ್ಮನ್ನು ಮಾನಸರೋವರದ ಬಳಿಗೆ ಕರೆದೊಯ್ದರು. ನಂತರ ಮರಳಿ ಕ್ಯಾಂಪಿಗೆ ಬಂದು ರಾತ್ರಿಯ ಊಟದ ನಂತರ ಮಲಗಿದೆವು.

ಒಂಬತ್ತನೇ ದಿನ ಮುಂಜಾನೆ ಎಲ್ಲರನ್ನೂ ಮೊದಲಿಗೆ ಸರೋವರದ ಬಳಿಗೆ ಕರೆದೊಯ್ಯುವ ಮೊದಲು ವೆಂಕಟೇಶ್ ಎಲ್ಲರನ್ನೂ ಉದ್ದೇಶಿಸಿ ಹೀಗೆ ಹೇಳಿದರು ; "ನೀವು ಸ್ನಾನ ಮಾಡಬೇಕೆಂದು ತೀರ್ಮಾನಿಸಿದರೆ ಜಾಗರೂಕರಾಗಿ ಇಂದಿರಿ." ಮುಂದುವರೆದು ವೆಂಕಟೇಶ್ ಹೇಳಿದರು. "ನನ್ನ ಅನುಭವದಲ್ಲಿ ನಾನು ಮೂರು ವರ್ಗದ ಪ್ರವಾಸಿಗಳನ್ನು ನೋಡಿದ್ದೀನಿ: ಮೊದಲನೇ ವರ್ಗದವರು, ಕೈಲಾಸ ಪ್ರವಾಸ ಒಂದು ಆಧ್ಯಾತ್ಮಿಕ ಯಾತ್ರೆಯಾಗಿ ಪರಿಗಣಿಸುತ್ತಾರೆ. ಅವರು ಬಹಳ ಧಾರ್ಮಿಕರು ಮತ್ತು ಅವರು ಇಲ್ಲಿಗೆ ಬಂದಿರುವುದು ತಮ್ಮ ಜೀವನದ ಸಂಕಲ್ಪವನ್ನು ಈಡೇರಿಸಿಕೊಳ್ಳಲು. ಎರಡನೇ ವರ್ಗದವರು ನಿಸರ್ಗದಲ್ಲಿ ಆಸಕ್ತಿಯುಳ್ಳವರು. ಈ ಸದಸ್ಯರು ಬಹಳ ಆರೋಗ್ಯವಾಗಿದ್ದು ಭೂದೃಶ್ಯ ಹಾಗೂ ಇಲ್ಲಿಯ ಮನೆಮಠಗಳ ಬಗ್ಗೆ ಕಾಳಜಿ ಮಾಡುವವರು. ಮೂರನೆಯ ವರ್ಗದವರು ತಾವು ವಾಪಸ್ಸು ಹೋಗಿ ಇತರರೊಡನೆ ತಾವು ಕೈಲಾಸ ಪರ್ವತಕ್ಕೆ ಹೋಗಿ ಬಂದೆವು ಎಂದು ಜಂಭದಿಂದ ಹೇಳಿಕೊಳ್ಳುವವರು". ವೆಂಕಟೇಶ್ ಸ್ವಲ್ಪ ನಿಲ್ಲಿಸಿ ಮುಂದುವರಿದರು, "ಹೆಚ್ಚು ಸಮಸ್ಯೆ ಉಂಟು ಮಾಡುವವರು ಮೂರನೆಯ ವರ್ಗದವರು".

ಅನಂತರ ನಮಗೆಲ್ಲರಿಗೂ ಸ್ನಾನ ಮಾಡಲು ಅನುಕೂಲ ಮಾಡಿಕೊಟ್ಟರು. ನನ್ನೊಳಗಿನ ಎಲ್ಲ ಧಾರ್ಮಿಕ ಶ್ರದ್ಧೆ ಒಗ್ಗೂಡಿಸಿ ಅಂಗಿ ತೆಗೆದೆ. ಬಳಿಕ ಒಂದು ನಿಮಿಷ ನನ್ನ ಒಳಉಡುಪಿನಲ್ಲಿ, ಕೈಗಳನ್ನು ಎದೆಯ ಭಾಗದ ಮೇಲಿಟ್ಟು ನಿಂತುಕೊಂಡೆ. ಕಣ್ಣು ತೆರೆದಾಗ ತಣ್ಣನೆಯ ಗಾಳಿ ಅತ್ತ ಬೀಸಿ ಹೋಯಿತು. ಎದೆಯನ್ನು ಮರೆ ಮಾಡಿಕೊಂಡು ಸರೋವರದತ್ತ ಹೆಜ್ಜೆ ಇಟ್ಟೆ. ಮೊದಲು ನನ್ನ ಬಲಗಾಲಿನ ಹೆಬ್ಬೆರಳನ್ನು ನೀರಿನಲ್ಲಿ ಅದ್ದಿದೆ. ನಿಧಾನವಾಗಿ ನನ್ನ ಇಡೀ ಶರೀರ ಕ್ರಮೇಣ ನೀರಿಗೆ ಒಗ್ಗಿಸಲು. ಉಸಿರು ಎಳೆದುಕೊಳ್ಳುತ್ತ ಸರೋವರ ಹಾಯಲು ಮುಂದಾದೆ. ಸರೋವರದ ತಳದಲ್ಲಿ ಕೆಸರು, ನೀರು ಹಿಮದಂತೆ ಕೊರೆಯತೊಡಗಿತು.

ದೇವತೆಗಳ ಆಧ್ಯಾತ್ಮಿಕ ನೀರಿನ ತೊಟ್ಟಿಯನ್ನು ಪ್ರವೇಶಿಸಿದ್ದೆ; ಅಲ್ಲಿಯ ನೀರು ದೇವಸ್ಥಾನಗಳಲ್ಲಿ ಕೊಡುವ ತೀರ್ಥಕ್ಕೆ ಸಮನಾದುದು. ಅದ್ಭುತವಾದ ಪಾವಿತ್ರ್ಯತೆಯ ಅನುಭವವಾಯಿತು. ಸರೋವರ ಹಾಯ್ದು ನನ್ನ ಶರೀರದ ಹೆಚ್ಚು ಭಾಗವನ್ನು ನೀರಿನಲ್ಲಿ ತೊಯ್ಯಿಸುವಾಗ ನನ್ನ ಉಸಿರಾಟ ವೇಗವಾಯಿತು. ನೀರು ನನ್ನ ತೊಡೆಗಳವರೆಗೆ ಏರುವಂತೆ ಹಾಯ್ದೆ, ಮತ್ತೆ ಒಂದು ನಿಮಿಷ ಕಾಲ ನಿಂತೆ, ನೀರು ಮೈಗೆ ಎರಚಿಕೊಳ್ಳುತ್ತ. ಬಾಯಿಯ ಮೂಲಕ ಉಸಿರಾಡುತ್ತ ಮುಂದುವರಿದೆ; ಕೊನೆಗೆ ನಾನು ಸಿದ್ಧವಾಗಿದ್ದೆ.

ಕಣ್ಣು ಮುಚ್ಚಿ ಮೊದಲನೆಯ ಮುಳುಗು ಹಾಕಿದೆ. ಸರೋವರ ಆಳವಾಗಿಲ್ಲದ ಕಾರಣ ತಲೆಯನ್ನು ಬಾಗಿಸಿ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿಸಿದೆ. ಬಳಿಕ ನೀರಿನಿಂದ ತಲೆಯನ್ನು ಎತ್ತಿದಾಗ ತಲೆಯ ಹಿಂಭಾಗದಲ್ಲಿ ಹೊಡೆದಹಾಗಾಯಿತು. ನೋವು ಮರೆಯಾಗುವವರೆಗೆ ಹಾಗೇ ನಿಂತೆ. ಸ್ವಲ್ಪ ನೋವು ಕಡಿಮೆಯಾದಂತೆನಿಸಿತು; ಕೆಳಗೆ ತೊಯ್ಯುವ ಕೊರೆಯುವ ನೀರನ್ನು ನಿವಾರಿಸಲು ತಲೆಯನ್ನು ಕೊಡವಿ, ತಲೆ ಮತ್ತು ಕತ್ತನ್ನು ತಿಕ್ಕಿದೆ. ಶರೀರ ಕ್ಷಣಾರ್ಧದಲ್ಲಿ ಬೆಚ್ಚಗಾಯಿತು; ಮತ್ತೆ ಮುಳುಗು ಹಾಕಿದೆ. ಎರಡನೇ ಮುಳುಗು ಮೊದಲನೇ ಮುಳುಗಿನಷ್ಟು ಕೊರೆಯುತ್ತಿರಲಿಲ್ಲ. ಮತ್ತೆ ಮೂರನೇ ಬಾರಿ ಮುಳುಗು ಹಾಕಿದೆ. ಕೊನೆಯ ಸಲ ಐದು ಸೆಕೆಂಡುಗಳ ಕಾಲ ನೀರಿನೊಳಗೇ ಮುಳುಗಿದ್ದೆ. ಬಳಿಕ ಎದ್ದಾಗ ತಲೆಯ ಹಿಂಭಾಗದಲ್ಲಿ ಕುಟ್ಟಿದಂಥ ಅನುಭವವಾಯಿತು. ಈ ಬಾರಿ ಆ ಏಟು ಎಷ್ಟು ಗಾಢವಾಗಿತ್ತೆಂದರೆ ಯಾರೋ ಹಿಂದಿನಿಂದ ಬಲವಾದ ಸುತ್ತಿಗೆಯಿಂದ ಹೊಡೆದಂತಾಯಿತು. ಆದರೆ ಆ ನೋವು ಒಂದು ನಿಮಿಷದ ನಂತರ ಮಾಯವಾಯಿತು.

ನೀರನ್ನು ಹಾಯ್ದು ಮೇಲೆ ಬಂದು ನುಣುಪು ಕಲ್ಲುಗಳ ದಂಡೆಯಲ್ಲಿ ನಿಂತು ದಿವ್ಯ ಕೈಲಾಸದ ಕಡೆಗೆ ದಿಟ್ಟಿಸಿದೆ. ನಿಶ್ಚಲವಾಗಿ ನಿಂತು, ಕಣ್ಣುಮುಚ್ಚಿ ಯೋಚಿಸಿದೆ. ಗಾಯತ್ರಿ ಮಂತ್ರವನ್ನು ಮೂರು ಬಾರಿ ಪಠಿಸುತ್ತ, ಭಾವೋದ್ವೇಗಕ್ಕೆ ಒಳಗಾಗಿ ಒಳಗೆ ಕೃತಜ್ಞತಾಭಾವ ಮೂಡಿತು. ಪರಿಶುದ್ಧ ಚೈತನ್ಯ ನನ್ನೊಳಗನ್ನು ಸ್ವಚ್ಛಗೊಳಿಸಿದಂಥ ಅನುಭವವಾಯಿತು. ಹಿಂದೆ ನಾನು ದೇವಸ್ಥಾನಗಳಿಗೆ ಹಾಗೂ ತೀರ್ಥಯಾತ್ರೆ ಸ್ಥಳಗಳಿಗೆ ಹೋಗಿದ್ದಾಗ ಆಗಿದ್ದ ಅನುಭವಕ್ಕಿಂತ ವಿಶೇಷವಾದ ಅನುಭವ ನನಗಾಗಿತ್ತು. ಮತ್ತೆ ಒಂದು ಕ್ಷಣ ನಿಶ್ಚಲವಾಗಿ ನಿಂತೆ, ಕೃತಜ್ಞತಾ ಭಾವದಿಂದ; ನನ್ನೊಳಗಿನ ಧ್ವನಿಯೊಂದು "ವಂದನೆಗಳು" ಎಂದಿತು.

ಎರಡು ಹಂಸಗಳು ಮೇಲೆ ಹಾರಿದವು; ಅವು ರೆಕ್ಕೆ ಬಡಿಯುವಾಗ ನನ್ನೊಳಗೆ ಹೊಸದಾಗಿ ಉದ್ಭವವಾಗಿದ್ದ ಶ್ರದ್ಧೆಯನ್ನು ಮೆಚ್ಚಿ ಅವು ಚಪ್ಪಾಳೆ ತಟ್ಟುತ್ತಿರುವಂತೆ ಭಾಸವಾಯಿತು. ಗುಂಪಿನ ಸದಸ್ಯರೊಬ್ಬರು ಗಂಟೆ ಬಾರಿಸುವ ಸದ್ದು ಇಡೀ ವಾತಾವರಣಕ್ಕೆ ಒಂದು ಬಗೆಯ ದಿವ್ಯತೆಯನ್ನು ಆವಾಹಿಸಿತ್ತು.

ಮೈ ಒರಸಿ ಮಡಿ ಬಟ್ಟೆ ಹಾಕಿಕೊಂಡು, ತಲೆ ಬಾಚಿಕೊಂಡ ಮೇಲೆ ಹೊಸ ಚೈತನ್ಯ ಬಂದಂತಾಯಿತು. ದೇವತೆಗಳು ಜಲಕ್ರೀಡೆಯಾಡುವ ಕೊಳದಲ್ಲಿ ಮಿಂದೆದ್ದಿದ್ದೆ.

ಸ್ನಾನದ ನಂತರ ಎಲ್ಲರೂ ಬೇಗನೆ ಶಿಬಿರದ ಬಳಿಗೆ ಬಂದೆವು. ಕಣ್ಣು ಮುಚ್ಚಿ ಕುಳಿತು ಮೌನ ತಾಳಿದೆ. ಈ ಅವಧಿಯಲ್ಲಿ ಒಳಗಿನ ಎಲ್ಲ ಭಾವನೆಗಳೂ ನಿರ್ಮಲವಾಗಿದ್ದು ಆಂತರ್ಯದ ಅನುಭವಗಳು ದೃಢವಾಗುತ್ತವೆ. ಪವಿತ್ರ ಸ್ನಾನವಾದ ಬಳಿಕ ಏನೋ ಒಂದು ಸಾಧನೆ ಮಾಡಿದೆನೆಂದು ಅನ್ನಿಸಿತು.

ಅಷ್ಟರಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿ ಹೋಮದ ಜೊತೆಗೆ ರುದ್ರ, ಚಮೆಗಳನ್ನು ಸ್ತುತಿಸಲು ತಯಾರುಮಾಡಿಕೊಳ್ಳುತ್ತಿದ್ದರು. ಈ ಮಧ್ಯೆ ನಾನು ಮೊದಲೇ ತಯಾರು ಮಾಡಿಕೊಂಡಿದ್ದಂತೆ ನನ್ನ ಪಿತೃಗಳಿಗೆ ತರ್ಪಣವನ್ನು ಕೊಡಲು ಪ್ರಾರಂಭಿಸುತ್ತಿದ್ದಂತೆ ನನ್ನೊಂದಿಗೆ ಕೃಷ್ಣಮೂರ್ತಿ ಹಾಗೂ ಮೇನೇಜರ್ ವೆಂಕಟೇಶ್ ಅವರೂ ಸೇರಿಕೊಂಡು ಮಂತ್ರವನ್ನು ಹೇಳುತ್ತಿದ್ದಂತೆ ಎಲ್ಲರೂ ತರ್ಪಣ ನೀಡುವ ಕಾರ್ಯವನ್ನು ಮುಗಿಸಿದೆವು.

ನಂತರ ನಾವೆಲ್ಲರೂ ಹೋಮ ನಡೆಯುತ್ತಿರುವ ಸ್ಥಳಕ್ಕೆ ಹೋಗಿ ಅದರಲ್ಲಿ ಭಾಗವಹಿಸಿದೆವು. ಹೋಮ ಮುಗಿದನಂತರ ಎಲ್ಲರೂ ಉಪಾಹಾರವನ್ನು ಸೇವಿಸಿ ಮಾನಸರೋವರ ಹಾಗೂ ರಕ್ಕಸ ಸರೋವರಗಳ ಪ್ರದಕ್ಷಿಣೆಗೆ ತೆರಳಿದೆವು. ನಮಗಾಗಿ ಬಸ್ಸು ಕಾಯುತ್ತಿತ್ತು. ಒಟ್ಟು 88 ಕಿ.ಮೀ ಸುತ್ತಳತೆಯ ಸರೋವರವನ್ನು ಪ್ರದಕ್ಷಿಣೆ ಮಾಡುತ್ತಾ ವಿವಿಧ ದಿಕ್ಕುಗಳಿಂದ ಸರೋವರ ವೀಕ್ಷಿಸಿದೆವು. ಮಧ್ಯಾಹ್ನ 2 ಗಂಟೆಗೆ ಪರಿಕ್ರಮವು ಮುಗಿದು ನಾವು ಶಿಬಿರಕ್ಕೆ ಬಂದು ಊಟಮಾಡಿ ವಿಶ್ರಾಂತಿ ಪಡೆದು ನಂತರ ಕೆಲವರು ಶಿಬಿರದಿಂದ ಹೊರಬಂದು ಅಂಗಡಿ ರಸ್ತೆಯಲ್ಲಿ ನಡೆದಾಡಿದರು. ರಾತ್ರಿ ಊಟದ ನಂತರ ಚೆನ್ನಾಗಿ ನಿದ್ರಿಸಿದೆವು.

ಹತ್ತನೇದಿನ ಬೆಳಗಿನ ಉಪಾಹಾರದ ನಂತರ ನಮ್ಮನ್ನು ಅಷ್ಟಪಾದದೆಡೆಗೆ 4 ಕಿ.ಮೀ ಹತ್ತಲು ಬಸ್ಸಿನಲ್ಲಿ ಶಿಬಿರದಿಂದ ಕರೆದೊಯ್ದರು. ನಮ್ಮಲ್ಲಿ ಕೆಲವರು ಮಾತ್ರ ಈ ಚಾರಣ ಮಾಡಲು ಬಂದರು. ಬಹಳ ಯಾತ್ರಿಗಳು ಶಿಬಿರದಲ್ಲೇ ಉಳಿದಿದ್ದರು. ಏಕೆಂದರೆ ಈ ಚಾರಣ ಮಾಡಲು 100 ಯುವಾನ್ ಹಣವನ್ನು ಕೊಡಬೇಕಿತ್ತು. ನಾನು ಚಾರಣ ಮಾಡಲೇ ಬೇಕೆಂದು ಮೊದಲೇ ತೀರ್ಮಾನಿಸಿದ್ದೆ. ಬಾರದೆ ಇದ್ದವರಲ್ಲಿ ಬಹುತೇಕ ಹೆಂಗಸರು ಹಾಗೂ ಕೆಲವು ಗಂಡಸರೂ ಇದ್ದರು. ಅವರಲ್ಲಿ ಮಧ್ಯವಯಸ್ಸಿನ ಯೋಗ ಶಿಕ್ಷಕರೂ ಇದ್ದರು. ಅವರು ತಾವು ಫಿಟ್ ಆಗಿರುವುದಾಗಿಯೂ ಹಾಗೂ ಮಾರನೇ ದಿನ ನೇರವಾಗಿ ಕೈಲಾಸ ಪರಿಕ್ರಮ ಕಾಲ್ನಡಿಗೆಯಲ್ಲೇ ಮಾಡಲು ಸಿದ್ಧರಾಗಿರುವರೆಂದು ಆತ್ಮವಿಶ್ವಾಸದಿಂದ ನನ್ನೊಂದಿಗೆ ಹೇಳಿಕೊಂಡಿದ್ದರು. ಉಳಿದವರೆಲ್ಲರೂ ಮ್ಯಾನೇಜರ್ ವೆಂಕಟೇಶ್ ಅವರೊಂದಿಗೆ

ಚಾರಣಕ್ಕೆ ಹೊರಟೆವು. ಪರ್ವತದ ಬುಡದಲ್ಲಿ ಬಸ್ಸಿನಿಂದ ಇಳಿದು ನಾವು ಬೆಟ್ಟ ಹತ್ತಲು ಪ್ರಾರಂಭಿಸಿದೆವು. ತಣ್ಣಗೆ ಗಾಳಿ ಬೀಸುತ್ತಿದ್ದರೂ, ಆಮ್ಲಜನಕ ಕಡಿಮೆ ಇದ್ದದ್ದರಿಂದ ಸ್ವಲ್ಪ ದೂರ ಹತ್ತುವುದರಲ್ಲೇ ಏದುಸಿರಿನಿಂದ ಆಯಾಸವಾಗತೊಡಗಿತು. ನಾನು ಅಲ್ಲಲ್ಲೇ ನಿಂತು ಸುಧಾರಿಸಿಕೊಳ್ಳುತ್ತಾ ನಿಧಾನವಾಗಿ ಹತ್ತುತ್ತಿದ್ದೆನು.

ಭೂಮಿಯ ಮೇಲಿನ ಮೇರು ಪರ್ವತದ ಐದು ಶಿಖರಗಳಲ್ಲಿ ಅಷ್ಟಪಾದ ಕೂಡ ಒಂದು ಎಂದು ನಂಬಲಾಗಿದೆ. ಜೈನ ಧರ್ಮದ ಮೊದಲ ತೀರ್ಥಂಕರ (ಸಂರಕ್ಷಕ ಮತ್ತು ಆಧ್ಯಾತ್ಮಿಕ ಶಿಕ್ಷಕ) ರಿಷಭದೇವನು ತನ್ನ ವಿಮೋಚನೆ ಅಥವಾ ಜ್ಞಾನೋದಯವನ್ನು ಪಡೆದ ಸ್ಥಳವೆಂದು ನಂಬಲಾಗಿದೆ. ಈ ಶಿಖರವು ಕೈಲಾಸದ ಎಡಭಾಗದಲ್ಲಿದ್ದರೆ ಅದಕ್ಕೆ ನೇರವಾಗಿ ಎದುರಿಗೆ ಮತ್ತೊಂದು ಶಿಖರವಿರುವುದು. ಅದೇ ನಂದಿ ಶಿಖರ. ನಂದಿಯು ಕೈಲಾಸ ಪರ್ವತವನ್ನು ನೇರವಾಗಿ ನೋಡುತ್ತಿರುವನು.

ನಾಲ್ಕು ದಿಕ್ಕಿನಲ್ಲೂ ಪರ್ವತಗಳು, ನಿಶ್ಯಬ್ದ ವಾತಾವರಣ. ಅಷ್ಟಪಾದವು ಹತ್ತಿರವೇ ಇದೆ ಎಂಬ ಭಾವನೆ. ನಮ್ಮ ಮ್ಯಾನೇಜರ್ ವೆಂಕಟೇಶ್ ಅವರಿಗೆ ಇದು ಏಳನೇ ಬಾರಿಯ ಯಾತ್ರೆಯೆಂದು ತಿಳಿದು ನಮಗೆ ಆಶ್ಚರ್ಯವಾಯಿತು. ಅವರು ನಮ್ಮನ್ನು ನಿಧಾನವಾಗಿ ಮೇಲಕ್ಕೆ ಕರೆದೊಯ್ಯುತ್ತಿದ್ದರು. 4 ಕಿ.ಮೀ ದೂರ ಹತ್ತಬೇಕಿತ್ತು. ನಾವು ಹಾಗೂ ಹೀಗೂ ಕಷ್ಟಪಟ್ಟು 2 ಕಿ.ಮೀ ಹತ್ತಿ ಸುಸ್ತಾಗಿ ಒಂದೆಡೆ ಕುಳಿತು ನೇರವಾಗಿ ಕೈಲಾಸ ಪರ್ವತವನ್ನು ವೀಕ್ಷಿಸುತ್ತಾ ನಮ್ಮನ್ನು ಇಷ್ಟು ಹತ್ತಿರದವರೆಗೂ ಬರಲು ಶಕ್ತಿಯನ್ನು ದಯಪಾಲಿಸಿದ ಶಂಕರ ಭಗವಾನನಿಗೆ ಅತ್ಯಂತ ಭಕ್ತಿಯಿಂದ ನಮಿಸಿದೆವು. ಅಲ್ಲೇ ಕುಳಿತು ನೇರವಾಗಿ ಪರ್ವತವನ್ನು ನೋಡುತ್ತಾ ಎಷ್ಟುಹೊತ್ತು ಕುಳಿತಿದ್ದೆನೋ ಗೊತ್ತಿಲ್ಲ. ಎಷ್ಟು ಹೊತ್ತು ನೋಡಿದರೂ ಇನ್ನೂ ನೋಡಬೇಕೆನಿಸುತ್ತಿತ್ತು. ಸ್ವಲ್ಪ ಹೊತ್ತಾದ ಮೇಲೆ ವೆಂಕಟೇಶ್ ನಮ್ಮೆಲ್ಲರನ್ನೂ ಎಬ್ಬಿಸಿ ಕೆಳಗೆ ಕರೆದುಕೊಂಡು ಬಂದರು. ಅಷ್ಟುಹೊತ್ತಿಗೆ ಮದ್ಯಾಹ್ನ 1.30 ಆಗಿತ್ತು. ಎಲ್ಲರೂ ಬಸ್ಸಿನಲ್ಲಿ ಮರಳಿ ಕ್ಯಾಂಪಿಗೆ ಬಂದು ಊಟಮಾಡಿ ಮಾರನೇ ದಿನದ ಪರಿಕ್ರಮದ ಬಗ್ಗೆ ಮಾತನಾಡುತ್ತಾ ಕುಳಿತೆವು. ರಾತ್ರಿ ಊಟವಾದ ಮೇಲೆ ಮಲಗಿದ ನಂತರ ಎತ್ತರ ಪ್ರದೇಶದಲ್ಲಿನ ಹವಾಮಾನದ ವೈಪರೀತ್ಯಗಳಿಗೆ ಹೊಂದಿಕೊಳ್ಳಲಾಗದ ನಮ್ಮ ಗುಂಪಿನಲ್ಲಿನ 6-7 ಜನಗಳು ಬೇರೆ ಬೇರೆ ಹಂತಗಳಲ್ಲಿ ಉಸಿರಾಟದ ತೊಂದರೆ, ಎದೆಯುಬ್ಬಸ, ತಲೆನೋವು ಇತ್ಯಾದಿ ತೊಂದರೆಗಳನ್ನು ಅನುಭವಿಸತೊಡಗಿದರು. ವೆಂಕಟೇಶ್ ಅವರು ತಂಡದೊಂದಿಗಿದ್ದ ಡಾಕ್ಟರರ ಸಹಾಯದಿಂದ ಎಲ್ಲರನ್ನೂ ಪರೀಕ್ಷಿಸತೊಡಗಿದರು. ಕೊನೆಗೆ ಈ 7 ಜನಗಳೂ ಮಾರನೇ ದಿನ ಪರಿಕ್ರಮವನ್ನು ಮಾಡಕೂಡದೆಂದು ತೀರ್ಮಾನಿಸಿದರು. ಆ 7 ಜನಗಳಲ್ಲಿ ಮಧ್ಯವಯಸ್ಸಿನ ಯೋಗಶಿಕ್ಷಕರೂ ಇದ್ದರು. ಅವರ ಪರಿಸ್ಥಿತಿಯಂತೂ

ತೀರ ಅಪಾಯದ ಸ್ಥಿತಿಯಲ್ಲಿತ್ತು. ರಾತ್ರಿ 11 ಘಂಟೆಯಲ್ಲಿ ಅವರನ್ನು ವೈದ್ಯರ ಸಲಹೆಯ ಮೇರೆಗೆ ಒಂದು ವಾಹನದಲ್ಲಿ ವಾಪಸ್ ಖಟ್ಮಂಡುವಿಗೆ ಕರೆದೊಯ್ದರು. ಉಳಿದವರು ಹಾಗೂ ಹೀಗೂ ರಾತ್ರಿ ಶಿವನಾಮಸ್ಮರಣೆಯಲ್ಲೇ ಕಳೆದರು. ನನಗೆ ಇದಾವ ತೊಂದರೆಯೂ ಇರಲಿಲ್ಲ ಹಾಗೂ ರಾತ್ರಿ ಚೆನ್ನಾಗಿ ನಿದ್ರಿಸಿದೆ.

ಕೈಲಾಸ ಪರಿಕ್ರಮದ ಮೊದಲನೇ ದಿನ

ದಾರ್ಚೆನ್‌ನಿಂದ ಧೀರಾಪುಕ್‌ವರೆಗೂ (12 ಕಿ.ಮೀ 6-8 ಗಂಟೆಗಳ ಚಾರಣ)

ಹನ್ನೊಂದನೇ ದಿನ ಮುಂಜಾನೆ ಎದ್ದು ನಿತ್ಯಕರ್ಮಗಳನ್ನು ಪ್ರಯಾಸದಿಂದ ಮುಗಿಸಿಕೊಂಡು ಉಪಾಹಾರ ಸೇವಿಸಿದೆವು. ನಂತರ ವೆಂಕಟೇಶ್ ಅವರು ವೈದ್ಯರೊಂದಿಗೆ ಪ್ರತಿಯೊಬ್ಬರ ಬಳಿಯೂ ಬಂದು ಅವರ ರಕ್ತದೊತ್ತಡ, ರಕ್ತದಲ್ಲಿನ ಆಮ್ಲಜನಕ ಪರೀಕ್ಷಿಸಿ ಅವರು ಪರಿಕ್ರಮವನ್ನು ಮಾಡಲು ಆಗುವುದೋ ಇಲ್ಲವೋ ಎಂಬುದನ್ನು ನಿರ್ಧರಿಸತೊಡಗಿದರು. ಕೆಲವು ಹೆಂಗಸರು ತಾವು ಇಲ್ಲಿಯ ತನಕ ಬಂದಿದ್ದೇ ತಮ್ಮ ಪುಣ್ಯವೆಂದೂ ಇಲ್ಲೇ ಉಳಿಯುವುದಾಗಿ ಮೊದಲೇ ತಿಳಿಸಿದರು. ಕೊನೆಗೆ 33 ಜನಗಳಲ್ಲಿ 10 ಜನಗಳು ಪರಿಕ್ರಮ ಮಾಡಲು ಸಾಧ್ಯವಿಲ್ಲವೆಂದೂ ಹಾಗೂ (ಅವರಲ್ಲಿ ಒಬ್ಬರನ್ನು ಹಿಂದಿನ ರಾತ್ರಿಯೇ ಖಟ್ಮಂಡುವಿಗೆ ಕಳಿಸಿದ್ದರು) ಅವರಿಗೆ 2-3 ದಿನಗಳ ಊಟದ ವ್ಯವಸ್ಥೆ ಮಾಡಿದ ನಂತರ ವೆಂಕಟೇಶ್ ಅವರು ನನ್ನನ್ನೂ ಸೇರಿಸಿಕೊಂಡು ಉಳಿದವರನ್ನು ಬಸ್ಸಿನಲ್ಲಿ ನೇರವಾಗಿ 3.5 ಕಿ.ಮೀ ದೂರದಲ್ಲಿದ್ದ ಯಮದ್ವಾರದೆಡೆಗೆ ಕರೆದೊಯ್ದರು.

ಯಮದ್ವಾರದಲ್ಲಿ ಜಗಲಿಯಾಕಾರದ ಕಟ್ಟೆಯ ಮೇಲೆ "ಯಾಂಗ್" ಕೋಡಿದೆ. ಸುಮಾರು 5 ಅಡಿ ಎತ್ತರದ ಮೂರು ಅಡಿ ಅಗಲ ಹಾಗೂ 4 ಅಡಿ ಉದ್ದದ ಒಂದು ಪ್ರವೇಶದ್ವಾರವಿದೆ. ಈ ದ್ವಾರವು ಹೆಸರೇ ತಿಳಿಸುವಂತೆ ಯಮನದ್ವಾರ. ಸಾವಿನ ನಂತರ ಜೀವಿಯ ಮುಂದಿನ ಪ್ರಯಾಣಕ್ಕೆ ಮಾರ್ಗದರ್ಶಕನೇ ಯಮ ದೇವತೆ ಎಂದು ಹಿಂದೂಗಳ ನಂಬಿಕೆ. ಸಾಂಕೇತಿಕವಾಗಿ ಯಮದ್ವಾರವನ್ನು ದಾಟಿದ ನಂತರದ ಪ್ರದೇಶವನ್ನು ಭೂಮಿಯಿಂದ ಬೇರೆಯದೇ ಆದ ದೈವೀ ಪ್ರಪಂಚವೆಂದು ಪರಿಗಣಿಸಲಾಗುವುದು. ಈ ಪ್ರಪಂಚವನ್ನು ಪ್ರವೇಶಿಸಲು ಜೀವಿಯು ತನ್ನ ದೇಹವನ್ನು ತೊರೆಯಬೇಕು. ಹಾಗಾಗಿ ಈ ಕ್ರಿಯೆಯನ್ನು ಯಾತ್ರಿಗಳು ಯಮದ್ವಾರವನ್ನು ಪ್ರವೇಶಿಸಿ ಆಚೆಕಡೆಯಿಂದ ಹೊರಬರುವುದರ ಮೂಲಕ ಪೂರ್ಣಗೊಳಿಸುವರು. ಆಚೆ ಕಡೆ ಬಂದ ಮೇಲೆ ನಾವುಗಳು ಬೇರೆಯವರು ಮಾಡುತ್ತಿದ್ದಂತೆ ಹಿಂತಿರುಗಿ ಯಮದ್ವಾರಕ್ಕೆ ಸಾಷ್ಟಾಂಗ

ನಮಸ್ಕಾರವನ್ನು ಮಾಡಿ ಶಿವನನ್ನು ಧ್ಯಾನಿಸಿ ಪರ್ವತ ಪರಿಕ್ರಮವನ್ನು ಸುಗಮವಾಗಿ ಮುಗಿಸಿಕೊಡುವಂತೆ ಪ್ರಾರ್ಥಿಸಿ ಪರಿಕ್ರಮವನ್ನು ಪ್ರಾರಂಭಿಸಲು ತಯಾರಾದೆವು. ಮುಂದೆ ವಿಶಾಲವಾದ ಹುಲ್ಲುಗಾವಲನ್ನು ಕಂಡೆವು. ಇಲ್ಲಿ ಯಾತ್ರಿಗಳು ಕೆಲವು ಕಲ್ಲುಗಳನ್ನು ಒಂದರ ಮೇಲೊಂದರಂತೆ ಗೋಪುರಾಕಾರದಲ್ಲಿ ಜೋಡಿಸಿ ತಮ್ಮ ಪರಿಕ್ರಮವು ಸುಸೂತ್ರವಾಗಿ ಮುಗಿಯಲೆಂದು ಶಿವನಲ್ಲಿ ಭಕ್ತಿಯಿಂದ ಪ್ರಾರ್ಥಿಸುವರು. ಸ್ವಲ್ಪ ಮುಂದೆ ನಡೆದರೆ ಅಲ್ಲಿ ಕುದುರೆಗಳನ್ನು ಹಿಡಿದುಕೊಂಡು ಕುದುರೆ ಸವಾರರು ನಿಮಗೆ ಪರಿಕ್ರಮ ಮಾಡಿಸಲು ಕಾಯುತ್ತಿದ್ದರು. ಕುದುರೆಯ ಮೇಲೆ ಪರಿಕ್ರಮ ಮಾಡಬೇಕಿದ್ದರೆ 2–3 ದಿನ ಮೊದಲೇ ಯಾತ್ರೆಯ ಮ್ಯಾನೇಜರನಿಗೆ ಹೇಳಿ ಸವಾರಿಯ ಹಣವನ್ನು ಮುಂಗಡವಾಗಿ ಕೊಟ್ಟು ಕುದುರೆಯನ್ನು ಕಾಯ್ದಿರಿಸಬೇಕು. ಹಾಗಿದ್ದಲ್ಲಿ ನೀವು ಹೋಗುವ ಕುದುರೆ ಯಾವುದೆಂದು ನಿಮ್ಮ ಮ್ಯಾನೇಜರ್ ಗುರುತಿಸಿ ನಿಮ್ಮನ್ನು ಅದರ ಮೇಲೆ ಹತ್ತಿಸುವನು. ಕುದುರೆಸವಾರಿಯನ್ನು ನೀವು ಮಾಡಿ ಬಿಡಿ, ಮೂರುದಿನಗಳಿಗೆ ಗೊತ್ತುಮಾಡಿಕೊಂಡ ಬಾಡಿಗೆಯನ್ನು ಕೊಡಲೇ ಬೇಕು. ಹಾಗೇ ನಿಮ್ಮ ಬ್ಯಾಕ್ ಪ್ಯಾಕನ್ನು ಹೊತ್ತು ತರಲೂ ಕೂಲಿಯವರನ್ನು ಗೊತ್ತುಮಾಡಿಕೊಂಡಿರಬೇಕು. ನಾನು ಬ್ಯಾಕ್ ಪ್ಯಾಕ್ ತರಲು ಮಾತ್ರ ಗೊತ್ತುಮಾಡಿ ಕೊಂಡಿದ್ದೆ ಹಾಗೂ ಪರಿಕ್ರಮವನ್ನು ಕಾಲ್ನಡಿಗೆಯಲ್ಲೇ ಮಾಡಲು ತಯಾರಾಗಿ ಬಂದಿದ್ದೆ. ನಮ್ಮ ಗುಂಪಿನಲ್ಲಿ ಬಹಳ ಮಂದಿ ಬ್ಯಾಕ್ ಪ್ಯಾಕ್ ಹಾಗೂ ಕುದುರೆ ಸವಾರಿಯನ್ನು ಗೊತ್ತು ಮಾಡಿಕೊಂಡಿದ್ದರು. ನಡೆದು ಹೋಗುವವರ ಪೈಕಿ ನಾನು ಮತ್ತು ಕೃಷ್ಣಮೂರ್ತಿ ಮತ್ತು ಇನ್ನೊಬ್ಬ ಯಾತ್ರಿ ಮಾತ್ರ ಇದ್ದರು. ನಾನು ನನ್ನ ಸಣ್ಣ ಬ್ಯಾಗಿನಲ್ಲಿ ದ್ರಾಕ್ಷಿ, ಬಾದಾಮಿ, ಚಾಕೊಲೇಟ್ ಇತ್ಯಾದಿ ಹಾಗೂ ನೀರಿನ ಬಾಟಲ್ ಮತ್ತು ಮಧ್ಯಾಹ್ನದ ಊಟದ ಬುತ್ತಿಯನ್ನು ಇಟ್ಟುಕೊಂಡಿದ್ದು ಕುತ್ತಿಗೆಯಲ್ಲಿ ಒಂದು ಸಣ್ಣ ಚೀಲವನ್ನು ನೇತುಹಾಕಿಕೊಂಡಿದ್ದೆ. ಆ ಚೀಲದಲ್ಲಿ ಕರ್ಪೂರದ ಗೆಡ್ಡೆಯನ್ನು ಇಟ್ಟುಕೊಂಡಿದ್ದೆ ಹಾಗೂ ಒಂದು ಸಣ್ಣ ಡಬ್ಬಿಯಲ್ಲಿ ಪಚ್ಚಕರ್ಪೂರವನ್ನು ಇಟ್ಟುಕೊಂಡು ಅದನ್ನು ಕೋಟಿನ ಜೇಬಿನಲ್ಲಿ ಇಟ್ಟುಕೊಂಡಿದ್ದೆ. ಆಮ್ಲಜನಕ ಕಡಿಮೆಯಾಗಿ ಉಸಿರಾಟಕ್ಕೆ ತೊಂದರೆಯಾದಾಗ ಕರ್ಪೂರವನ್ನು ಮೂಸಿದಲ್ಲಿ ಅದು ಆಮ್ಲಜನಕ ನೀಡುತ್ತದೆ. ಅದೇ ರೀತಿ ಪಚ್ಚಕರ್ಪೂರವನ್ನು ನಾಲಗೆಯ ಮೇಲೆ ಇಟ್ಟುಕೊಂಡಾಗಲೂ ಕೂಡಲೇ ಆಮ್ಲಜನಕ ಉತ್ಪತ್ತಿಯಾಗುತ್ತದೆ.

ಪರಿಕ್ರಮ 12 ಕಿ.ಮೀ ದೂರವಿದ್ದು ಅಷ್ಟೇನೂ ಹತ್ತುವ ಮಾರ್ಗವಿಲ್ಲದಿದ್ದರೂ ಇಷ್ಟು ದೂರ ಚಾರಣ ಮಾಡಲು ಸುಮಾರು 9–10 ಘಂಟೆಗಳು ಬೇಕಾಗುವುದು.

ಪರಿಕ್ರಮ ಪ್ರಾರಂಭಿಸುವ ಮೊದಲು ನಾನು ಶಿವನನ್ನು ಕುರಿತು ಈ ರೀತಿಯಾಗಿ ಪ್ರಾರ್ಥಿಸಿದೆ:

ಓಂ ನಮಸ್ತೇ ಅಸ್ತು ಭಗವನ್ ವಿಶ್ವೇಶ್ವರಾಯ, ಮಹಾದೇವಾಯ, ತ್ರಯಂಬಕಾಯ, ತ್ರಿಪುರಾಂತಕಾಯ, ತ್ರಿಕಾಲಾಗ್ನಿಕಾಲಾಯ, ಕಾಲಾಗ್ನಿ ರುದ್ರಾಯ, ನೀಲಕಂಠಾಯ, ಮೃತ್ಯುಂಜಯಾಯ, ಸರ್ವೇಶ್ವರಾಯ, ಸದಾಶಿವಾಯ ಶ್ರೀಮನ್ ಮಹಾದೇವಾಯ ನಮಃ

ಎಂಬ ರುದ್ರವನ್ನೂ ಹಾಗೂ

ಓಂ ನಮೋ ಹಿರಣ್ಯಬಾಹವೇ, ಹಿರಣ್ಯವರ್ಣಾಯ, ಹಿರಣ್ಯರೂಪಾಯ, ಹಿರಣ್ಯಪತಯೇ ಅಂಬಿಕಾಪತಯೇ ಉಮಾಪತಯೇ ಪಶುಪತಯೇ ನಮಃ

ಎಂಬ ಮಂತ್ರಗಳನ್ನು ಕಣ್ಮುಚ್ಚಿ ಭಕ್ತಿಯಿಂದ ಧ್ಯಾನಿಸಿ ನಂತರ ದಾರಿಯುದ್ದಕ್ಕೂ ಶಿವಪಂಚಾಕ್ಷರಿ ಮಂತ್ರ ಜಪಿಸುತ್ತಾ ನಿಧಾನವಾಗಿ ನಡೆಯತೊಡಗಿದೆ.

ಪರಿಕ್ರಮ ದಾರ್ಚೆನ್ನಿನ ಪಶ್ಚಿಮದ ತುದಿಯಿಂದ ಪ್ರಾರಂಬಿಸಿ ನಿಧಾನವಾಗಿ ನಡೆಯತೊಡಗಿದೆ. ಸುತ್ತಲೂ ಪರ್ವತಗಳಿಂದಾವೃತವಾಗಿದ್ದು ಎಡಭಾಗದಲ್ಲಿ ಇಂಡಸ್ ನದಿಯು ಕಣಿವೆಯಿಂದ ಹರಿದು ಬರುತ್ತಿದ್ದು ದಾರಿಯುದ್ದಕ್ಕೂ ನಮ್ಮೊಂದಿಗೆ ಹರಿಯುತ್ತಿತ್ತು. ಬಲಭಾಗದಲ್ಲಿ ಕೈಲಾಸ ಪರ್ವತ. ನನ್ನ ಗಮನವೆಲ್ಲಾ ಕೈಲಾಸ ಪರ್ವತದ ಕಡೆಗೇ ಇತ್ತು. ಏಕೆಂದರೆ ಎಡಭಾಗದಲ್ಲಿನ ಪರ್ವತವಾಗಲೀ ಅಥವಾ ಮಧ್ಯದಲ್ಲಿ ಹರಿಯುತ್ತಿದ್ದ ನದಿಯಾಗಲಿ ಅಷ್ಟೇನೂ ಮುಖ್ಯವಾಗಿರಲಿಲ್ಲ (ಇಂತಹ ದೃಶ್ಯಗಳನ್ನು ಬೇರೆ ಕಡೆಗಳಲ್ಲಿ ಅನೇಕ ಬಾರಿ ನೋಡಿದ್ದೆ). ಕೈಲಾಸ ಪರ್ವತದ ವಿವಿಧ ದೃಶ್ಯಗಳನ್ನು ಕ್ಯಾಮರಾದಲ್ಲಿ ಸೆರೆಹಿಡಿಯುತ್ತಾ ಸಾಗುತ್ತಿದ್ದೆ. ಆಗಾಗ್ಗೆ ಪಕ್ಕದಲ್ಲಿ ಕುದುರೆಗಳು ಹಾದುಹೋಗುತ್ತಿದ್ದು ಅದರ ಮೇಲಿದ್ದ ಯಾತ್ರಿಕರು ನನಗೆ ಶುಭವನ್ನು ಕೋರುತ್ತಿದ್ದರು. ಮಾರ್ಗವು ಎತ್ತರಕ್ಕೇರುತ್ತಾ ಆಗಾಗ್ಗೆ ಸಣ್ಣ ಸಣ್ಣ ದಿಬ್ಬಗಳನ್ನು ಹತ್ತಿ ಇಳಿಯುತ್ತಾ ನಿಧಾನವಾಗಿ ಸಾಗುತ್ತಿತ್ತು. ಮಧ್ಯೆ ಮಧ್ಯೆ ನಿಂತು ಸ್ವಲ್ಪ ಬಾದಾಮಿ ಅಥವಾ ಚಾಕೋಲೇಟನ್ನು ತಿಂದು ನೀರು ಕುಡಿಯುತ್ತಿದ್ದೆ ಹಾಗೂ ಮತ್ತೆ ಕೆಲವೆಡೆ ಕರ್ಪೂರದ ವಾಸನೆ ಹೀರುತ್ತಾ ಸಾಗುತ್ತಿದ್ದೆ. ತಂಗಾಳಿಯು ಬೀಸುತ್ತಿದ್ದರೂ ಅದರಲ್ಲಿ ಆಮ್ಲಜನಕ ತೀರ ಕಡಿಮೆ ಇತ್ತು. ಹೊರಗೆ ಚಳಿಯಿದ್ದರೂ ನಾನು ಧರಿಸಿದ್ದ ಎರಡು ಪದರದ ಶರ್ಟ್, ಸ್ವೆಟರ್ ಹಾಗೂ ಅದರಮೇಲಿನ ದಪ್ಪನೆಯ ಜರ್ಕಿನ್ ನನ್ನ ಶರೀರವನ್ನು ಬೆಚ್ಚಗಿಟ್ಟಿತ್ತು. ದೇಹದ ಕೆಳಭಾಗದಲ್ಲಿ ಎರಡು ಪ್ಯಾಂಟ್, ಉಲ್ಲನ್ ಕಾಲುಚೀಲ ಹಾಗೂ ಚಾರಣದ ಶೂ ಸೊಂಟದ ಕೆಳಭಾಗವನ್ನು ರಕ್ಷಿಸುತ್ತಿತ್ತು. ಕೈಗಳಿಗೆ ಉಲ್ಲನ್ ಗ್ಲೋವ್ಸ್ ಧರಿಸಿದ್ದೆ. ಸ್ವಲ್ಪ ಸಮಯದ ನಂತರ ಕೈಲಾಸದ ದಕ್ಷಿಣ ದಿಕ್ಕಿನ ದೃಶ್ಯವು ನೋಡಲು ಸಿಕ್ಕಿತು. ಇದನ್ನು lapis lazuli ಮುಖವೆಂದೂ ಕರೆಯುವರು. ಈ ವಿಷಯವು ಮೊದಲೇ ಗೊತ್ತಿದ್ದರಿಂದ

ಅದನ್ನು ಗುರುತಿಸಲು ಅನುಕೂಲವಾಯಿತು. ಕೈಲಾಸ ಶಿಖರದ ಉಳಿದ ಮೂರು ದಿಕ್ಕುಗಳಲ್ಲಿನ ಮುಖಗಳನ್ನು ಬಂಗಾರದ ಮುಖ, ಸ್ಪಟಿಕದ ಮುಖ ಹಾಗೂ ರೂಬಿ ಮುಖಗಳು, ಇವೆಲ್ಲವೂ ಸೇರಿ ಕೈಲಾಸ ಶಿಖರವು ಪಿರಮಿಡ್ ಆಕಾರವನ್ನು ಹೊಂದಿದೆ. lapis lazuli ಮುಖವು ಪರಿಕ್ರಮದಲ್ಲಿನ ನಾಲ್ಕು ಮುಖಗಳಲ್ಲಿನ ಮೊದಲನೇ ನಮಸ್ಕಾರ ಮಾಡುವ ಸ್ಥಳ. ಇಲ್ಲಿ ದೀರ್ಘದಂಡ ನಮಸ್ಕಾರ ಮಾಡಿ ರುದ್ರದಲ್ಲಿನ ಒಂದು ಮಂತ್ರವನ್ನು ಜಪಿಸಿದೆ. ಹೀಗೆ ನಡೆಯುತ್ತಾ ಮಾರ್ಗವು ಸುತ್ತಿಕೊಂಡು ಉತ್ತರ ದಿಕ್ಕನ್ನು ಪ್ರವೇಶಿಸಿ ಬರಡಾದ ಲ್ಹಾ–ಚು ಕಣಿವೆ ಪ್ರವೇಶಿಸಿತು. ಇಲ್ಲಿರುವ ಲ್ಹಾ–ಚು ನದಿ ಧೀರಾಪುಕ್ ಮೊನೆಸ್ಟ್ರಿಯವರೆಗೂ ನೀರನ್ನು ಒದಗಿಸುತ್ತದೆ ಎಂದು ಕುದುರೆಯೊಂದರ ಮಾಲೀಕನಿಂದ ಅರಿತೆ. ಸುಮಾರು 4 ಗಂಟೆ ನಡೆದ ಮೇಲೆ ಲ್ಹಾ–ಚು ನದಿಯ ಮೇಲೆ ಒಂದು ಸಣ್ಣ ಸೇತುವೆ ಎದುರಾಯಿತು. ಎರಡು ಕಂಭದ ಪಗೋಡವೊಂದು ಕಾಣಿಸಿತು. ಇಲ್ಲಿ ಯಾತ್ರಿಕರೆಲ್ಲರೂ ಕುಳಿತು ಊಟಮಾಡುತ್ತಿದ್ದರು. ನಾನೂ ಇಲ್ಲೇ ಕುಳಿತು ದಣಿವಾರಿಸಿಕೊಂಡು ಊಟವನ್ನು ಮುಗಿಸಿದೆ. ಹತ್ತಿರದಲ್ಲೇ ಒಂದು ಚಹಾ ಮಾರುವ ಹೋಟೆಲ್ ಒಂದು ಕಾಣಿಸಿತು. ಎಲ್ಲರೊಡನೆ ನಾನೂ ಹೋಗಿ ಚಹಾ ಕುಡಿದು ದುಡ್ಡನ್ನು ಕೊಟ್ಟು ಅಲ್ಲಿಂದ ಮುಂದುವರೆದೆ. ಅಲ್ಲಿ ಒಬ್ಬ ಕುದುರೆ ಮಾಲೀಕನನ್ನು ಧೀರಾಪುಕ್ ತಲುಪಲು ಇನ್ನೂ ಎಷ್ಟು ದೂರವಿದೆ ಎಂದು ಕೇಳಿದೆ. ಅವನು ಇನ್ನೂ 8 ಕಿ.ಮೀ ದೂರವಿದೆಯೆಂದೂ ನಡೆದು ಹೋಗಲು 4 ಘಂಟೆ ಬೇಕಾಗುವುದೆಂದು ತಿಳಿಸಿದನು ಹಾಗೂ ಮಾರ್ಗವು ಬಹುತೇಕ ಸಮವಾಗಿರುವುದೆಂದನು. ಈ ಮಾರ್ಗದಲ್ಲಿನ ದೃಶ್ಯಗಳು ಅತ್ಯಂತ ಸುಂದರ ಹಾಗೂ ಮನಮೋಹಕವಾಗಿದ್ದವು. ಇಲ್ಲಿಂದ ನಿಧಾನವಾಗಿ ನಡೆದು ಸಂಜೆ 7 ಗಂಟೆಗೆ ಧೀರಾಪುಕ್ ಶಿಬಿರ ತಲುಪಿದೆ. ಅಷ್ಟರಲ್ಲಾಗಲೇ ಗುಂಪಿನವರೆಲ್ಲರೂ ಬಂದಿದ್ದರು ಹಾಗೂ ನಾನು ಕೊನೆಯಲ್ಲಿ ಬಂದವನು. ಶಿಬಿರದೊಳಗೆ ಹೋಗಿ ಸ್ವಲ್ಪ ವಿಶ್ರಮಿಸಿದ ನಂತರ ಬಿಸಿಯಾದ ಚಹಾ ಕುಡಿದು ಇತರರೊಂದಿಗೆ ಅವರ ಹಾಗೂ ನನ್ನ ಚಾರಣದ ಅನುಭವಗಳ ಬಗ್ಗೆ ಮಾತನಾಡತೊಡಗಿದೆ. ವಯಸ್ಸಿನಲ್ಲಿ ಅವರೆಲ್ಲರಿಗಿಂತಲೂ ಹಿರಿಯ ಯಾತ್ರಿ ನಾನೇ ಆಗಿದ್ದು ಅದರಲ್ಲೂ ನಾನೂ ನಡೆದು ಬಂದಿದ್ದು ಅವರಿಗೆ ಆಶ್ಚರ್ಯವಾಗಿದ್ದಲ್ಲದೆ ನನ್ನ ಬಗ್ಗೆ ಅವರಿಗೆ ಹೆಚ್ಚಿನ ಗೌರವವು ಮೂಡಿತ್ತು. ರಾತ್ರಿ ಹೊರಬಂದು ಚಳಿಯಲ್ಲೂ ಸ್ವಲ್ಪಹೊತ್ತು ಕೈಲಾಸ ಶಿಖರವನ್ನು ನೋಡಿ ಆನಂದಿತನಾಗಿ ಊಟಮಾಡಿ ಮಲಗಿದೆವು. ಮುಂಜಾನೆ ಬೇಗನೆ ಎದ್ದು ಸೂರ್ಯನ ಪ್ರಥಮ ಕಿರಣಗಳು ಶಿಖರವನ್ನು ಚುಂಬಿಸಿ ಪರ್ವತವು ಬಂಗಾರದ ಬಣ್ಣವನ್ನು ತಾಳುವುದನ್ನು ನೋಡಬೇಕೆಂದು ವೆಂಕಟೇಶ್ ಅವರಿಗೆ ಸೂಕ್ತ ಸಮಯದಲ್ಲಿ ಎಬ್ಬಿಸುವಂತೆ ತಿಳಿಸಿ ಮಲಗಿಕೊಂಡೆ.

[illegible]

[illegible]

[illegible] ಸಂತೋಷಪಟ್ಟರು. [illegible] ಆಗುವುದಿಲ್ಲವೆಂದು ಕೆಲವರು ಹೇಳಿದರು. ಅವರಲ್ಲಿ ಕೃಷ್ಣಮೂರ್ತಿ ಹಾಗೂ ಅವರ ಮಗ, ಮಗಳೂ ಇದ್ದರು. ಕೃಷ್ಣಮೂರ್ತಿಯವರು [illegible] ದಿನವೇ ಆಗುವುದಿಲ್ಲವೆಂದು ಯೋಚನೆಯಿಂದ ಬಂದಿದ್ದರು. ನಾನೂ ಇದರ ಬಗ್ಗೆ ತೀವ್ರವಾಗಿ ಆಲೋಚಿಸಿ, ನಂತರ ವೆಂಕಟೇಶ್ ಅವರ ಜೊತೆ ಹಾಗೂ ಭರವಸೆಯಂತೆ ಚಾರಣ ಮಾಡಲು ನಿರ್ಧರಿಸಿದೆ. ಚಾರಣ ಮಾಡಲಾಗದವರು, ಎಂದವರು ತಾವು ಬಂದಿದ್ದ ಕುದುರೆಯ ಮೇಲೆ ಮರಳಿ [illegible] ಹೊರಟರು. ನಂತರ ಮುಂದುವರೆಯಲು ಸಿದ್ಧರಾದವರು [illegible] ಹಾಗೂ ಮ್ಯಾನೇಜರ್ ವೆಂಕಟೇಶ್. ಅವರಲ್ಲಿ 5 ಜನ ಕುದುರೆಯ ಮೇಲೆ ಹೊರಟರು. ನಾನು ಹಾಗೂ ಮತ್ತಿಬ್ಬರು ಹಾಗೂ ವೆಂಕಟೇಶ್ ನಡೆಯಲು ಪ್ರಾರಂಭಿಸಿದೆವು. ಮೂರು ದಿನಗಳ ಪರಿಕ್ರಮದಲ್ಲಿ ಈ ದಿನದ ಚಾರಣವು ಅತ್ಯಂತ ಸವಾಲಾಗಿತ್ತು. ಮಾರ್ಗವು ಬಂಡೆಗಳನ್ನು ಹತ್ತುವುದರ ಮೂಲಕ ಹಾಗೂ ಆಮ್ಲಜನಕ ತೀರ ಕಡಿಮೆ ಇದ್ದದ್ದರಿಂದ ನಡೆಯುವುದು ತುಂಬಾ ನಿಧಾನವಾಗಿತ್ತು. ನಾವು ಮೂರೂ ಜನಗಳು ಒಟ್ಟಿಗೆ ನಡೆಯುತ್ತಿದ್ದೆವು. ಕೆಲವೆಡೆ ಹತ್ತುವುದಕ್ಕೆ ತುಂಬಾ ಕಠಿಣವಾದಾಗ ನಮ್ಮೊಂದಿಗಿದ್ದ ಸಹಾಯಕರು ನನ್ನ ಕೈಹಿಡಿದು ಹತ್ತಿಸಿಕೊಳ್ಳುತ್ತಿದ್ದ. ನನ್ನ ಜೀವಮಾನದಲ್ಲೇ ಎಂದೂ ಹತ್ತಿರದಿದ್ದ ಅತಿ ಎತ್ತರದ ಪ್ರದೇಶವಾದ 18690 ಅಡಿಯಲ್ಲಿನ ದೋಲ್ಮಾ ಲಾ ಪಾಸ್‌ನ್ನು ತಲುಪಬೇಕಿತ್ತು.

ನಡಿಗೆಯು ಅತ್ಯಂತ ಎಚ್ಚರದಿಂದ ಹಾಗೂ ನಿಧಾನವಾಗಿ ಸಾಗುತ್ತಿತ್ತು, ಹತ್ತು ಹೆಜ್ಜೆ ನಡೆದರೆ ಸಾಕು ಏದುಸಿರು ಬಂದು ಅಲ್ಲೇ 1/2 ಕ್ಷಣ ಕರ್ಪೂರದ ವಾಸನೆಯನ್ನು ಪದೇ ಪದೇ ಹೀರಿಕೊಳ್ಳುತ್ತಾ ಶಿವನನ್ನು ಧ್ಯಾನಿಸುತ್ತಾ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಚಾರಣವನ್ನು ಮುಂದುವರೆಸುತ್ತಿದ್ದೆವು. ಡಿರಾಪುಕ್‌ನಿಂದ ಸ್ಕೈ ಬರಿಯಲ್ ಪಾಯಿಂಟ್ ವರೆಗಿನ 4 ಕಿ.ಮೀ ಚಾರಣವು ಅತ್ಯಂತ ಕಠಿಣವಾಗಿತ್ತು, ಅದು ತೀವ್ರವಾದ ಇಳಿಜಾರಿನಿಂದ ಕೂಡಿತ್ತು. ಈ ಮಾರ್ಗವನ್ನು ಸಾಮಾನ್ಯವಾಗಿ 2 ಗಂಟೆಗಳಲ್ಲಿ ಕ್ರಮಿಸಬೇಕಿದ್ದರೆ, ನನಗೆ 4 ಗಂಟೆ ಬೇಕಾಯಿತು. ಮಧ್ಯ ಮಧ್ಯೆ ನಿಂತು ನನ್ನ ಫ್ಲಾಸ್ಕಿನಲ್ಲಿದ್ದ ಬಿಸಿನೀರನ್ನು ಒಂದೊಂದೇ ಗುಟುಕಿನಲ್ಲಿ ಕುಡಿಯುತ್ತಿದ್ದೆ. ಸ್ಕೈ ಬರಿಯಲ್ ಪಾಯಿಂಟಿನಲ್ಲೂ ಹೆಚ್ಚು ಹೊತ್ತು ವಿಶ್ರಮಿಸಲು ನಮ್ಮನ್ನು ಬಿಡಲಿಲ್ಲ. ಏಕೆಂದರೆ ಆಮ್ಲಜನಕ ಕೊರತೆ ಹಾಗೂ ರಭಸವಾಗಿ ಬೀಸುತ್ತಿದ್ದ ಗಾಳಿಯು ನಮ್ಮನ್ನು ಕುಳಿತುಕೊಳ್ಳಲು ಬಿಡುತ್ತಿರಲಿಲ್ಲ.

ಸ್ಕೈ ಬರಿಯಲ್ ಪಾಯಿಂಟಿನಿಂದ ಡೋಲ್ಮಾ ಪಾಸ್ (18690 ಅಡಿ) ವರೆಗೂ 4 ಕಿ.ಮೀ ದೂರವಿತ್ತು ಹಾಗೂ ಇಷ್ಟು ದೂರವು ತೀವ್ರವಾದ ಆರೋಹಣದ ಮಾರ್ಗವಾಗಿತ್ತು. ಆದರೆ ಇಲ್ಲಿ ಬಂಡೆಗಳು ಇರಲಿಲ್ಲ, ಬದಲಾಗಿ ಹಿಮದ ಮಾರ್ಗ. ಸುತ್ತಲೂ ಎಲ್ಲೆಲ್ಲಿ ನೋಡಿದರೂ ದಟ್ಟವಾದ ಹಿಮದಿಂದ ನೆಲವು ಸಂಪೂರ್ಣವಾಗಿ ಮುಚ್ಚಿಹೋಗಿತ್ತು. ನಾವು ನಡೆಯುತ್ತಿದ್ದ ಮಾರ್ಗದಲ್ಲೇ ಅನೇಕ ಮಂದಿ ನಡೆದೂ ನಡೆದೂ ಅಲ್ಲಿ ಹಿಮವು ಪಕ್ಕಕ್ಕೆ ಸರಿದಿತ್ತು. ಹಾಗಾಗಿ ಮಾರ್ಗವು ಜಾರುತ್ತಿರಲಿಲ್ಲ. ಆದರೂ ನಮ್ಮೊಂದಿಗಿದ್ದ ಟ್ರೆಕ್ಕಿಂಗ್ ಪೋಲ್ ಬಹಳ ಸಹಾಯಮಾಡಿತು. ಎರಡು ಕಿ.ಮೀ ನಡೆದ ನಂತರ ನಾವು 17486 ಅಡಿ ಎತ್ತರವನ್ನು ತಲುಪಿ ಕಲ್ಲುಬಂಡೆಗಳಿಂದ ಕೂಡಿದ ಒಂದು ಸ್ಥಳವನ್ನು ತಲುಪಿದೆವು. ವೆಂಕಟೇಶ್ ಅವರು ಆ ಸ್ಥಳವು ಶಿವಸ್ಥಳ ಎಂದು ನಮಗೆ ತಿಳಿಸಿ, ಇಲ್ಲಿಂದ ನಾವು ಯಮನ ಸಾಮ್ರಾಜ್ಯವನ್ನು ಪ್ರವೇಶಿಸುತ್ತಿರುವುದಾಗಿಯೂ ಹಾಗೂ ಇಲ್ಲಿ ಯಾತ್ರಿಗಳೆಲ್ಲರೂ ಸಾಂಕೇತಿಕವಾಗಿ ಸಾವನ್ನು ಅನುಭವಿಸುವರೆಂದು ಹಾಗೂ ಈ ಅನುಭವವು ನಾವು ಡೋಲ್ಮಾ ಲಾ ಪಾಸ್‌ನ್ನ ತಲುಪುವವರೆಗೂ ಉಂಟಾಗುವುದು ಎಂದೂ ಹಾಗೂ ಡೋಲ್ಮಾ ಲಾ ಪಾಸ್ ತಲುಪಿದ ಮೇಲೆ ಮಾತ್ರ ನಮಗೆ ಪುನರ್ಜನ್ಮ ಉಂಟಾಗುವುದೆಂದು ವಿವರಿಸಿದರು. ನಾವೂ ಅತಿಯಾದ ಆಯಾಸದಿಂದ ಸಾವಿನ ಅನುಭವವನ್ನು ಈಗಾಗಲೇ ಕಂಡಿದ್ದೆವು.

ಒಂದೂವರೆ ಗಂಟೆಗಳಲ್ಲಿ ನಡೆಯಬೇಕಿದ್ದ 4 ಕಿ.ಮೀ ದೂರವನ್ನು ನಾನು ಎರಡೂವರೆ ಗಂಟೆಗಳ ಸಮಯದಲ್ಲಿ ನಡೆದು ಡೋಲ್ಮಾ ಲಾ ಪಾಸ್ ತಲುಪಿದ ನಂತರವೇ ಮರಳಿ ಜನಿಸಿದೆ ಎಂದು ಭಾಸವಾಯಿತು. ಸ್ವಲ್ಪ ಹೆಚ್ಚು ಕಡಿಮೆ ಆಗಿದ್ದರೂ ನಾವು ಯಮನ ಸಾಮ್ರಾಜ್ಯದಲ್ಲೇ ಶಾಶ್ವತವಾಗಿರಬೇಕಿತ್ತು. ಈ ರೀತಿ

ಹಲವಾರು ಯಾತ್ರಿಕರಿಗೆ ಆಗಿದ್ದು ಅಲ್ಲಿಂದ ಅವರ ಪಾರ್ಥಿವ ಶರೀರವನ್ನು ಕೆಳಕ್ಕೆ ತರಲಾಗದೇ ಅಲ್ಲೇ ಅಂತ್ಯ ಸಂಸ್ಕಾರ ಮಾಡಿದ ಘಟನೆಗಳೂ ನಡೆದಿರುವುದನ್ನು ಈಗಾಗಲೇ 7 ಬಾರಿ ಪರಿಕ್ರಮ ಮಾಡಿದ್ದ ವೆಂಕಟೇಶ್ ನಮಗೆ ವಿವರಿಸಿದರು. ಯಮಸ್ಥಳದಿಂದ 30 ನಿಮಿಷ ನಡೆದ ಮೇಲೆ ಮಾರ್ಗವು ಪೂರ್ವಾಭಿಮುಖವಾಗಿ ತಿರುಗಿ ನಾವು 18690 ಅಡಿಯ (ಅತ್ಯಂತ ಎತ್ತರದ ಪ್ರದೇಶ) ಡೋಲ್ಮಾ ಲಾ ಪಾಸ್ ತಲುಪಿದೆವು. ಡೋಲ್ಮಾ ಲಾ ಪಾಸ್‌ನಲ್ಲಿ 15 ನಿಮಿಷಕ್ಕಿಂತ ಹೆಚ್ಚು ನಿಲ್ಲಲು ವೆಂಕಟೇಶ್ ಬಿಡಲಿಲ್ಲ.

ಏಕೆಂದರೆ ಹೆಚ್ಚು ಹೊತ್ತು ಅಲ್ಲಿ ನಿಲ್ಲುವುದು ಅತ್ಯಂತ ಅಪಾಯಕಾರಿಯಾಗಿತ್ತು. ಜೀವಕ್ಕೆ ಅಪಾಯವಾಗ ಬಹುದಾದ ಸ್ಥಳವದು. ಹಾಗಾಗಿ ನಾವು ಅಲ್ಲಿ ನಮ್ಮೊಂದಿಗೆ ತಂದಿದ್ದ ಪೂರಿ ಭಾಜಿಯನ್ನು ಕಷ್ಟಪಟ್ಟು ಬೇಗನೆ ತಿಂದು ನೀರು ಕುಡಿದು ಅಲ್ಲಿಂದ ಇಳಿಯುವ ಮಾರ್ಗದಲ್ಲಿ ಹೊರಟೆವು. ಇಲ್ಲಿಂದ ಸುಮಾರು ಒಂದು ಘಂಟೆ 400 ಮೀಟರ್‌ನಷ್ಟು ತೀವ್ರವಾದ ಇಳಿಜಾರಿನ ಮಾರ್ಗದಲ್ಲಿ ಇಳಿದು ಒಂದು ಸಮತಟ್ಟಾದ ಹುಲ್ಲಿನ ಪ್ರದೇಶವನ್ನು ತಲುಪಿದೆವು. ಈ ಪ್ರದೇಶವನ್ನು ಲ್ಹಾಮ್-ಚುಖಿರ್ ನದಿಯ ದಡ ಎಂದು ಕರೆಯುವರೆಂದು ವೆಂಕಟೇಶ್ ತಿಳಿಸಿದರು. ಈ ನದಿಯ ಎರಡೂ ಕಡೆಗಳಲ್ಲಿ ಮಾರ್ಗವಿದೆ. ನದಿಯನ್ನು ದಾಟಿ ಪೂರ್ವ ದಿಕ್ಕಿನಲ್ಲಿನ ಮಾರ್ಗದಲ್ಲಿ ಹೋದರೆ ಸುಂದರ ದೃಶ್ಯಗಳು ಕಾಣಿಸುವುದೆಂದು ವೆಂಕಟೇಶ್ ನಮಗೆ ತಿಳಿಸಿದರು.

ಇಲ್ಲಿಂದ ಕುದುರೆಯ ಮೇಲೆ ಬಂದಿದ್ದವರೂ ಸಹ ನಡೆದೇ ಬರಬೇಕಿತ್ತು. ಏಕೆಂದರೆ ಕುದುರೆಯನ್ನು ಇಳಿಜಾರಿನ ಮಾರ್ಗದಲ್ಲಿ ಯಾತ್ರಿಕರ ಸಮೇತ ಕರೆದೊಯ್ಯುವುದು ಅಪಾಯಕಾರಿ. ಇಲ್ಲಿಂದ ನಾವು 4 ಗಂಟೆ ಇಳಿಜಾರಿನ ಮಾರ್ಗದಲ್ಲಿ ನಡೆದು 15715 ಅಡಿ ಎತ್ತರದಲ್ಲಿನ ಝುತುಲ್-ಪುಕ್ ಮೊನೆಸ್ಟ್ರಿಯನ್ನು ತಲುಪಿದೆವು. ಅಲ್ಲಿ ನಮಗೆಲ್ಲರಿಗೂ ಇಳಿದುಕೊಳ್ಳುವ ವ್ಯವಸ್ಥೆಯನ್ನು ವೆಂಕಟೇಶ್ ಮಾಡಿದ್ದರು. ಇಲ್ಲಿಗೆ ತಲಪುವ ಹೊತ್ತಿಗೆ ಸಂಜೆ 7 ಗಂಟೆಯಾಗಿತ್ತು. ಚಳಿಯೂ ವಿಪರೀತವಾಗಿತ್ತು. ಚಹಾ ಕುಡಿದ ಕೂಡಲೇ ಎಲ್ಲರೂ ಬೆಚ್ಚನೆಯ ರಝಾಯಿಯೊಳಗೆ ತೂರಿಕೊಂಡು ಮಲಗಿದೆವು. ರಾತ್ರಿ 8 ಗಂಟೆಗೆ ಎಲ್ಲರಿಗೂ ಬಿಸಿ ಬಿಸಿಯಾದ ಮ್ಯಾಗಿ ನೂಡಲ್ಸ್ ನೀಡಿದರು. ಕೈಯಲ್ಲಿ ಹಿಡಿದುಕೊಂಡಿರುವಾಗಲೇ ಅದು ಆರಿಹೋಗುತ್ತಿತ್ತು. ಬೇಗ ಬೇಗನೆ ತಿಂದು ಮುಗಿಸಿ ಮಲಗಿದೆವು.

ಕೈಲಾಸ ಪರಿಕ್ರಮದ ಮೂರನೇ ದಿನ

ಝುತುಲ್-ಫುಕ್ ಮೊನೆಸ್ಟ್ರಿಯಿಂದ ದಾರ್ಚೆನ್ ಶಿಬಿರ – 4 ಗಂಟೆಗಳ 14 ಕಿ.ಮೀ ಹಾಗೂ 150 ಮೀ ಇಳಿಯುವ ಚಾರಣ

ಮಾರ್ಗವು ಸ್ವಲ್ಪ ಇಳಿಜಾರಿನಿಂದ ಕೂಡಿದ್ದು ಕೆಲವೆಡೆ ಕಿರಿದಾದ ಮಾರ್ಗದಿಂದ ಕೂಡಿದ್ದು ಸುಲಭವಾಗಿ ಚಾರಣ ಮಾಡುವ ಹಾಗಿತ್ತು. ಮೊನೆಸ್ಟ್ರಿಯಿಂದ ನದಿಯ ಪಕ್ಕದ ಮಾರ್ಗದಲ್ಲೇ ಒಂದು ಗಂಟೆ ಆರಾಮವಾಗಿ ನಡೆದೆವು. ನಂತರ ನದಿಯ ಮೇಲಿನ ಮಾರ್ಗದಲ್ಲಿ ಹತ್ತಿಕೊಂಡು ನಡೆದು ಕಿರಿದಾದ ಕ್ಯಾನಿಯನ್ ಒಂದನ್ನು ಪ್ರವೇಶಿಸಿದೆವು. ನದಿಯ ಉದ್ದಕ್ಕೂ ಟಿಬೆಟ್ಟಿಯನ್ನರು ಕಟ್ಟಿದ್ದ ಪ್ರಾರ್ಥನಾ ಬಾವುಟಗಳನ್ನು ನೋಡುತ್ತಾ ಪರಿಕ್ರಮವು ಶಂಕರ ಭಗವಾನನ ಕೃಪೆಯಿಂದ ಮುಗಿದಿದ್ದ ಸಾರ್ಥಕಭಾವದಿಂದ ನಡೆಯತೊಡಗಿದೆವು. ಮತ್ತೊಂದು ಗಂಟೆ ನಡೆದ ಮೇಲೆ ನಮಗೆ ಅನತಿದೂರದಲ್ಲಿ ನೀಲಿ ನೀರಿರುವ ಪ್ರದೇಶವು ಕಾಣತೊಡಗಿತು. ಅದೇ ರಕ್ಕಸ ಸರೋವರ ಎಂದು ವೆಂಕಟೇಶ್ ನಮಗೆ ತಿಳಿಸಿದರು. ಮತ್ತಷ್ಟು ದೂರ ನಡೆದ ಮೇಲೆ ಮಾರ್ಗವು ಒಂದು ವಿಶಾಲವಾದ ಪ್ರದೇಶವನ್ನು ಪ್ರವೇಶಿಸಿತು. ಈ ಪ್ರದೇಶವನ್ನು ಬರ್ಖ ಪ್ರದೇಶವೆಂದು ಕರೆಯುವರೆಂದು ವೆಂಕಟೇಶ್ ತಿಳಿಸಿದರು. ಇಲ್ಲಿಂದ ಧೂಳಿನಿಂದ ಕೂಡಿದ ರಸ್ತೆಯಲ್ಲಿ ಮತ್ತೊಂದು ಗಂಟೆ ನಡೆದ ಮೇಲೆ ನಮಗೆ ದಾರ್ಚೆನ್ ಪ್ರದೇಶವು ಎದುರಾಯಿತು. ಇಲ್ಲಿ ನಮಗಾಗಿ ವೆಂಕಟೇಶ್ ಅವರು ಬಸ್ಸಿನ ವ್ಯವಸ್ಥೆಯನ್ನು ಮಾಡಿದ್ದರು. ಬಸ್ಸನ್ನು ಹತ್ತಿಕೊಂಡು ಶಿಬಿರದೆಡೆಗೆ ಹೊರಟೆವು. ಇದಕ್ಕೆ ಮೊದಲು ನಾವೆಲ್ಲರೂ ಕೈಲಾಸ ಶಿಖರದೆಡೆಗೆ ತಿರುಗಿ ದೀರ್ಘದಂಡ ನಮಸ್ಕಾರವನ್ನು ಮಾಡಿದೆವು. ಇಲ್ಲಿಗೆ ನಮ್ಮ ಜೀವಮಾನದಲ್ಲಿನ ಅತ್ಯಂತ ಮಹತ್ವಪೂರ್ಣ ಹಾಗೂ ಪವಿತ್ರವಾದ ಯಾತ್ರೆಯು ಸಂಪೂರ್ಣವಾಯಿತು.

ಕೈಲಾಸ ಪರಿಕ್ರಮವನ್ನು ಮಾಡಲು ಎರಡು ಮಾರ್ಗಗಳುಂಟು – ಒಳಗಿನ ಪರಿಕ್ರಮ ಮಾರ್ಗ ಹಾಗೂ ಹೊರಗಿನ ಪರಿಕ್ರಮ ಮಾರ್ಗ.

ಒಳಗಿನ ಪರಿಕ್ರಮ ಮಾರ್ಗವು 30 ಕಿ.ಮೀ ಸುತ್ತಳತೆ ಹೊಂದಿದ್ದು ಇದನ್ನು ಒಂದೇ ದಿನದಲ್ಲಿ ಮಾಡಬೇಕು. ಈ ಮಾರ್ಗವು ಅತ್ಯಂತ ಭಯಾನಕವಾದ ಕೋಡುಗಲ್ಲಿನ ಇಳಿಜಾರು ಬಂಡೆಗಳು ಮತ್ತು ಅತ್ಯಂತ ಎತ್ತರವಾದ ಮಾರ್ಗಗಳಿಂದ ಕೂಡಿರುವುದು. ಈ ಮಾರ್ಗದಲ್ಲಿ ಚಾರಣ ಮಾಡಲಿಚ್ಚಿಸುವವರು ಹೊರಗಿನ ಪರಿಕ್ರಮ ಮಾರ್ಗದಲ್ಲಿ 13 ಬಾರಿ ಚಾರಣ ಮಾಡಿದ್ದಕ್ಕೆ ಪುರಾವೆಯನ್ನು ಸಲ್ಲಿಸಿದ ನಂತರವೇ ಅವರಿಗೆ ಚೈನಾ ಸರ್ಕಾರದಿಂದ ಪರವಾನಗಿ ದೊರಕಬಹುದು. ಆದ್ದರಿಂದ ಎಲ್ಲರೂ ಹೊರಗಿನ ಮಾರ್ಗದಲ್ಲಿ ಮಾತ್ರ ಚಾರಣ ಮಾಡಬಹುದು.

ಇದುವರೆಗೂ ಕೈಲಾಸ ಪರ್ವತದ ಪರಿಕ್ರಮವನ್ನು ಆಮ್ಲಜನಕ ಸಹಾಯವಿಲ್ಲದೇ ಮಾಡಿರುವ ಅತಿ ಹೆಚ್ಚಿನ ವಯಸ್ಸಿನ ಚಾರಣಿಗನೆಂದರೆ 82 ವರ್ಷದ ಗೇರ್ಹಾರ್ಡ್ ಎಂಬ ಜರ್ಮನ್ ಚಾರಣಿಗ. ಈತನು 2018ರಲ್ಲಿ ಈ ಪರಿಕ್ರಮವನ್ನು ಮಾಡಿದನೆಂದು ತಿಳಿದುಬಂದಿದೆ.

ಇಡೀ ಪ್ರಯಾಣ ನನ್ನ ಬದುಕಿನಲ್ಲಿ ನಡೆದಿದ್ದ ಒಂದು ಅದ್ಭುತ ಪವಾಡ. ಈ ಚಾರಣಕ್ಕೆ ಸರಿಸಮನಾದ ಬೇರಾವುದೇ ಪ್ರವಾಸ ಇರಲಿಲ್ಲ; ಇದರ ವೈವಿಧ್ಯ, ಸವಾಲು, ಸೌಂದರ್ಯ ಹೋಲಿಕೆಯೇ ಇಲ್ಲದ್ದು, ಟಿಬೆಟ್‌ನಲ್ಲಿ ಆಗಿದ್ದ ಆಧ್ಯಾತ್ಮಿಕ ಚೈತನ್ಯದ ಉತ್ಕಟಾನುಭವ ನನಗೆ ಬೇರೆಲ್ಲಿಯೂ ಆಗಿರಲಿಲ್ಲ.

ಮಾನಸರೋವರ ಮತ್ತು ಕೈಲಾಸ ಪರ್ವತ ನನ್ನನ್ನು ಎಷ್ಟು ಪ್ರಭಾವಿಸಿದ್ದವೆಂದರೆ ನನ್ನೊಳಗೇ ಅಡಗಿದ್ದ, ಆದರೆ ನಾನು ಗಮನಿಸದಿದ್ದ ಧಾರ್ಮಿಕ ಭಾವನೆಯ ಅರಿವು ಮಾಡಿಕೊಟ್ಟಿದ್ದವು. ಏಕಕಾಲದಲ್ಲಿ ಆ ದೃಶ್ಯಾವಳಿಗಳೂ ಸಹ ಅತ್ಯಂತ ವಿಸ್ಮಯಕರವಾಗಿದ್ದವು. ಆ ಸ್ಥಳಗಳಲ್ಲಿ ಹರಿಯುತ್ತಿದ್ದ ಧನಾತ್ಮಕ ಚೈತನ್ಯ ಅಲ್ಲಿಗೆ ಭೇಟಿ ನೀಡಿದ ಪ್ರತಿಯೊಬ್ಬ ಪ್ರವಾಸಿಯ–ಆತ ಧಾರ್ಮಿಕನಾಗಿರಲಿ ಆಗದಿರಲಿ ಆತನ ಆಂತರ್ಯವನ್ನು ಭೇದಿಸಿತ್ತು. ಅದು ನಿಜವಾಗಿಯೂ ಲೋಕದಿಂದ ಭಿನ್ನವಾದ ಒಂದು ವಿಶಿಷ್ಟ ಪ್ರಪಂಚ; ಹೊಸ ಆಧ್ಯಾತ್ಮಿಕ ಆಯಾಮ ಅನುಭವಿಸಲು ಆಶೀರ್ವಾದ ಪಡೆದ ಕೆಲವೇ ಮಂದಿಗೆ ಮೀಸಲಾದ ಪರಾತ್ಪರವಸ್ತುವೆಂದು ಹೇಳಬಹುದು.

ಕೈಲಾಸ ಪರ್ವತ ಹಾಗೂ ಮಾನಸರೋವರ, ನಿಮ್ಮ ಅಹಂಕಾರವನ್ನು ಕರಗಿಸಿ ಲೌಕಿಕ ಸುಖ ಮತ್ತು ಆಸೆಗಳ ಯಃಕಶ್ಚಿತತೆಯನ್ನು ನಿಮಗೆ ಅರಿವು ಮಾಡುತ್ತದೆ.

ಪ್ರತಿ ಕಠಿಣವಾದ ಚಾರಣ ಮುಗಿಸಿದಾಗಲೆಲ್ಲ, ನಾನು ಹಿಗ್ಗಿದಂತೆನಿಸಿತ್ತು. ಆದರೆ ಈ ಚಾರಣ ನಾನು ಈ ವಿಶ್ವದ ವ್ಯವಸ್ಥೆಯಲ್ಲಿ ಕೇವಲ ಒಂದು ಅಣು ಮಾತ್ರ ಎಂಬುದನ್ನು ಅರಿವಿಗೆ ತಂದಿತು; ಇದಕ್ಕೆ ನಮ್ಮೆದುರಿಗಿದ್ದ ವಿಸ್ತಾರವಾದ ಪ್ರಕೃತಿಯ ಪರಿಸರವೇ ಕಾರಣ. ಮೊದಲು ನಾನು ತೀರ್ಥಯಾತ್ರೆ ಅಂದರೆ ದೇವಸ್ಥಾನ, ಪ್ರಾರ್ಥನೆ ಮತ್ತು ಪುರೋಹಿತರು ಅಂದುಕೊಂಡಿದ್ದೆ; ಆದರೆ ಈ ಯಾತ್ರೆಯಲ್ಲಿ ಅದೆಲ್ಲ ಸಂಪೂರ್ಣವಾಗಿ ಅಳಿಸಿ ಹೋಯಿತು; ಏಕೆಂದರೆ ಇಲ್ಲಿ ದೇವಸ್ಥಾನವಿಲ್ಲ, ಮಂದಿರವಿಲ್ಲ, ಯಾವ ಸೌಲಭ್ಯವೂ ಇಲ್ಲ. ಪೂಜಾರ್ಹವಾದ ದೇವಾಲಯವೆಂದರೆ ಕೈಲಾಸ ಪರ್ವತ ಮಾತ್ರ, ವಿಶ್ವವೇ ರಚಿಸಿರುವಂಥ ಪರ್ವತ. ನನಗುಂಟಾದ ಸಾಕ್ಷಾತ್ಕಾರ, ಅಂದರೆ, ಹಾಗಂತ ಅದನ್ನು ಕರೆಯುವುದಾದರೆ, ಮನುಷ್ಯ ಆಗಿಂದಾಗ್ಗೆ ತನ್ನ ಮಮಕಾರಗಳನ್ನು, ಅದರಲ್ಲೂ ಲೌಕಿಕ ವಸ್ತುಗಳ ಆಸೆಯನ್ನು ಬಿಡಬೇಕು ಎಂಬುದು.

ಕೈಲಾಸ ಪರ್ವತ ನೋಡಿ ಬಂದವರು ಬದಲಾಗುತ್ತಾರೆ, ತಾವು ನಿಜವಾಗಿ ಯಾರು ಎಂಬುದು ಅವರಿಗೆ ಅರಿವಾಗುತ್ತದೆ ಎಂಬುದಾಗಿ ಜನರು ನಂಬುತ್ತಾರೆ. ಲೋಕ ದೃಷ್ಟಿ, ಒಟ್ಟು ಧೋರಣೆ, ಪರಿಸರವನ್ನು ನೋಡುವ ಬಗೆ, ಮೌಲ್ಯ ವ್ಯವಸ್ಥೆ ಎಲ್ಲವೂ ಬದಲಾಗುತ್ತದೆ ಎನ್ನುತ್ತಾರೆ. ಮನುಷ್ಯನ ಮಿದುಳಿನ ಮೇಲೆ ಕೈಲಾಸ ಪರ್ವತದ ಕಂಪನಗಳು ಪ್ರಭಾವ ಬೀರುವುದರಿಂದ ಮಿದುಳಿನ ಒಳಗಿನ ರಚನೆಗಳು ಕ್ರಿಯಾಶೀಲಗೊಳ್ಳುತ್ತವೆ, ತತ್ಫಲವಾಗಿ ನಮಗೆ ಹೊಸ ವಾಸ್ತವತೆಯ ದರ್ಶನವಾಗುತ್ತದೆ.

ನನ್ನ ಶರೀರದ ಗುಣಧರ್ಮದ ಬಗ್ಗೆ ನನಗೆ ಹೆಚ್ಚಿನ ತಿಳುವಳಿಕೆ ಉಂಟಾಯಿತು; ಹೊಂದಾಣಿಕೆಯ ನನ್ನ ಸಾಮರ್ಥ್ಯದ ಬಗ್ಗೆ, ಎಲ್ಲಕ್ಕಿಂತ ಮಿಗಿಲಾಗಿ ಎತ್ತರ ಪ್ರದೇಶದಲ್ಲಿ ಟ್ರೆಕಿಂಗ್ ಮಾಡುವುದರ ಕುರಿತು ನನಗೆ ಅರಿವುಂಟಾಯಿತು. ಡೋಲ್ಮ ಲಾ ಪಾಸ್‌ನ ಶಿಖರ ತಲುಪಿದಾಗ ಏನೋ ಸಾಧಿಸಿದ್ದೇನೆ ಎಂಬ ಭಾವನೆ ಉಂಟಾಯಿತು; ಅದರಲ್ಲೂ 45 ಕಿಲೋಮೀಟರ್ ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದ ಕೇವಲ ಏಳು ಜನಗಳಲ್ಲಿ ನಾನೊಬ್ಬ ಅನ್ನುವುದು ಅತ್ಯಂತ ತೃಪ್ತಿ ನೀಡಿತ್ತು.

ಆದರೆ ನನ್ನ ಒಳಗಿನ ಯಾನ ಅದೂ ಅದ್ಭುತವಾದದ್ದಾಗಿತ್ತು; ನಾನು ಕಲಿತ ಪಾಠಗಳು ನನ್ನ ಧಮನಿ ಧಮನಿಗಳಲ್ಲಿ ಸೇರಿಹೋಗಿದ್ದವು. ಭವ್ಯವಾದ ಕೈಲಾಸ ಪರ್ವತ ನನ್ನನ್ನು ವಿನಮ್ರಗೊಳಿಸಿದ್ದಷ್ಟೇ ಅಲ್ಲದೆ ನಾವು ತಿಳಿದುಕೊಂಡಿರುವ ರೀತಿ ಮನುಷ್ಯರಾದ ನಾವು ಮುಖ್ಯರಲ್ಲ ಎಂಬುದನ್ನು ನನಗೆ ಮನದಟ್ಟು ಮಾಡಿತು. ನನ್ನನ್ನು ನನ್ನ ನಿಜಾಕಾರಕ್ಕೆ ಇಳಿಸುವುದರ ಜೊತೆಗೆ ನಾನೆಷ್ಟು ಕುಬ್ಜ ಅನ್ನುವುದನ್ನು ತೋರಿಸಿಕೊಟ್ಟಿತು!

ಕೈಲಾಸ ಯಾತ್ರೆಯಿಂದ ನಮ್ಮ ಪ್ರಾಚೀನ ಕಾಲದ ಋಷಿ ಮುನಿಗಳು ಎಷ್ಟು ದೊಡ್ಡವರು ಎಂಬ ನಿಜ ಮತ್ತೊಮ್ಮೆ ಅರಿವಾಯಿತು. ಈ ವಿಶ್ವ ಹೇಗೆ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ನನ್ನಲ್ಲಿ ಮತ್ತಷ್ಟು ಸ್ಪಷ್ಟತೆ ಮೂಡಿತು; ಮನುಷ್ಯರಾಗಿ ನಾವೆಷ್ಟು ನಶ್ವರ ಜೀವಿಗಳು; ಸಾಯುವವರ ಹಾಗೂ ಈಗಾಗಲೇ ಸತ್ತಿರುವವರ ಬಗೆಗೂ ಯೋಚಿಸುವಂತಾಯಿತು. ಕೇವಲ ಶಾರೀರಿಕ ಚಟುವಟಿಕೆಯ ಹಾಗೆ ಶುರುವಾದ ಈ ಯಾತ್ರೆ ಒಂದು ಅದ್ಭುತ ಆಧ್ಯಾತ್ಮಿಕ ಯಾನವಾಗಿ ಮಾರ್ಪಾಟಾಗಿತ್ತು.

ಕೆಲವು ವರ್ಷಗಳ ಹಿಂದೆ ನೇಪಾಳದಲ್ಲಿ ಘಟಿಸಿದ ಭೀಕರ ಭೂಕಂಪದಿಂದಾಗಿ, ಈಗ ಕೈಲಾಸ ಪರ್ವತ ಯಾತ್ರಿಗಳು ಖಟ್ಮಂಡು–ಕೋಡಾರಿ ಮಾರ್ಗವಾಗಿ ಪ್ರಯಾಣಮಾಡಲು ಅಸಾಧ್ಯವಾಗಿ, ಬದಲಿ ಮಾರ್ಗದ ಮೂಲಕ ಯಾತ್ರಿಗಳು ಯಾತ್ರೆಯನ್ನು ಮಾಡಬೇಕಿದೆ. ಆ ಮಾರ್ಗವೆಂದರೆ :–

* ಖಟ್ಮಂಡುವಿನಿಂದ ಸೀಮಿಕೋಟ್ ಪ್ರದೇಶದವರೆಗೂ ವಿಮಾನದಲ್ಲಿ
* ಸೀಮಿಕೋಟ್‌ನಿಂದ ಹಿಲ್ಸವರೆಗೂ ಹೆಲಿಕಾಪ್ಟರಿನಲ್ಲಿ ಪ್ರಯಾಣ
* ಹಿಲ್ಸದಿಂದ ತಕ್ಲಕೋಟ್‌ವರೆಗೂ ಬಸ್ಸಿನಲ್ಲಿ
* ತಕ್ಲಕೋಟ್‌ನಿಂದ ಹೊರ್ಚು ಹಾಗೂ ಅಲ್ಲಿಂದ ಮಾನಸ ಸರೋವರದ ವರೆಗೂ ಮತ್ತು ಸರೋವರದ ಪರಿಕ್ರಮವನ್ನು ಬಸ್ಸಿನಲ್ಲಿನ ಪ್ರಯಾಣ
* 8 ಕಿ.ಮೀ ದೂರದ ಅಷ್ಟಪಾದಕ್ಕೆ ವಾಹನ
* ದಾರ್ಚೆನ್‌ನಿಂದ ಟರ್ಬೋಚೆವರೆಗೂ ವಾಹನ
* ಯಮದ್ವಾರವನ್ನು ದಾಟಿದ ನಂತರ ಅಲ್ಲಿಂದ 8 ಕಿ.ಮೀ ದೂರದ ಶೇರ್‌ಸಾಂಗ್‌ವರೆಗೂ ವಾಹನ.
* ಶೇರ್‌ಸಾಂಗ್‌ನಿಂದ ಧೀರಾಪುಕ್ – 12 ಕಿ.ಮೀ ಚಾರಣ
* ಧೀರಾಪುಕ್‌ನಿಂದ ಡೋಲ್ಮಾ ಲಾ ಪಾಸ್ ಹಾಗೂ ಮುಂದಕ್ಕೆ ಝುತುಲ್‌ಪುಕ್‌ವರೆಗೂ 20 ಕಿ.ಮೀ ಚಾರಣ
* ಝುತುಲ್‌ಪುಕ್‌ನಿಂದ ದಾರ್ಚೆನ್‌ವರೆಗೂ 8 ಕಿ.ಮೀ ಚಾರಣ.

ಗುಜರಾತಿನ GIR ಅನ್ವೇಷಣಾ ಹಾಗೂ ಚಾರಣ ಯಾತ್ರೆ 2018

ನವೆಂಬರ್ 2018ರಲ್ಲಿ ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯ ಗುಜರಾತ್ ಶಾಖೆಯ ಕಾರ್ಯದರ್ಶಿಯಾದ ಶ್ರೀ ಅನಂತ್ ಪಾರಮಾರ್ ಅವರಿಂದ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಭಾರತೀಯ ಸ್ಟೇಟ್ ಬ್ಯಾಂಕ್ ನಿಂದ ನಿವೃತ್ತರಾದ ಐದು ಜನ ಅಧಿಕಾರಿಗಳಿಗೆ ಜುನಾಘಡ್ ನಲ್ಲಿನ ಪರ್ವತ ಪ್ರದೇಶದಲ್ಲಿ ಚಾರಣ ಮಾಡಲು ವಿಶೇಷವಾದ ಆಹ್ವಾನ ಬಂದಿತು. ಈ ಐದು ನಿವೃತ್ತ ಅಧಿಕಾರಿಗಳೆಂದರೆ ಸರ್ವಶ್ರೀ.ಪಾಲಹಳ್ಳಿ ರಮೇಶ, ಕೆ.ವೆಂಕಯ್ಯಸುಬ್ಬಯ್ಯ, ಸುರೇಶ ಬಾಬು, ಹೆಚ್.ಆರ್.ಗುರುರಾಜ್ ಹಾಗೂ ಈ ಲೇಖನ ಪ್ರಸ್ತುತಿ ಪಡಿಸುತ್ತಿರುವ ಗುರುಪ್ರಸಾದ್ ಹಾಲ್ಕುರಿಕೆ. ಈ ಆಹ್ವಾನ ಬರಲು ತೆರೆ ಮರೆಯಲ್ಲಿ ಕೆಲಸಮಾಡಿದವರೆ ಶ್ರೀ.ರಮೇಶ್.

ಈ ಚಾರಣದ ಬಗ್ಗೆ ಚರ್ಚಿಸಲು ಐದೂ ಜನರು ಒಂದೆಡೆ ಸೇರಿದೆವು. ರಮೇಶ್ ಅವರು ಚಾರಣದ ಜೊತೆಗೆ ಸುತ್ತ ಮುತ್ತಲಿನ ಕೆಲವು ತೀರ್ಥ ಕ್ಷೇತ್ರ ಹಾಗೂ ಚಾರಿತ್ರಿಕ ಸ್ಥಳಗಳನ್ನೂ ಸಂದರ್ಶಿಸಬಹುದೆಂದು ಸಲಹೆ ನೀಡಿದರು. ರಮೇಶನು ಹೇಳಿದನೆಂದ ಮೇಲೆ ಅದರ ಬಗ್ಗೆ ಬೇರೆಯವರು ಮಾತನಾಡುವುದುಂಟೆ! ಎಲ್ಲರೂ ಅದಕ್ಕೆ ಒಪ್ಪಿದೆವು.

ಮೊದಲಿಗೆ ಚಾರಣದ ವಿವರಗಳು ಈ ರೀತಿಯಾಗಿತ್ತು

YHAI ಬೇಸ್ ಕ್ಯಾಂಪ್ – ಪಂಡಿತ್ ದೀನ ದಯಾಳ್ ಉಪಾಧ್ಯಾಯಿ ಪರ್ವತಾ ರೋಹಣ ಸಂಸ್ಥೆ.

YHAI ಬೇಸ್ ಕ್ಯಾಂಪ್ – ಸಕ್ಕರ್ ಬಾಗ್ ಪ್ರಾಣಿಸಂಗ್ರಹಾಲಯ – 6 ಕಿ.ಮೀ (ಅಂದಾಜು) – ಆಟೋರಿಕ್ಷಾದಲ್ಲಿ ಪಯಣ.

YHAI ಬೇಸ್ ಕ್ಯಾಂಪ್ ನಿಂದ ಪತ್ಥರ್ ಚಟ್ಟಿಯೆಡೆಗೆ ಚಾರಣ – 10 ಕಿ.ಮೀ (ಅಂದಾಜು)

ಪತ್ಥರ್ ಚಟ್ಟಿಯಿಂದ YHAI ಬೇಸ್ ಕ್ಯಾಂಪಿಗೆ ಮರು ಚಾರಣ – 10 ಕಿ.ಮೀ – ಅನಂತರ ದೇವಾಲಿಯಾ ಪಾರ್ಕ್ ಗೆ ಹೋಗುವುದು (50 ಕಿ.ಮೀ), ಅಲ್ಲಿಂದ ಜುನಾಘಡ್ ರಸ್ತೆಯ ಮಾರ್ಗವಾಗಿ ಭಾವನಾಥ್ ತಲೇಟಿ (ಗಿರ್ ಅರಣ್ಯಕ್ಕೆ) ತಲುಪುವುದು – 46 ಕಿ.ಮೀ.

ಗಿರ್ ಅರಣ್ಯದಿಂದ ಸೋಮನಾಥ್ ಮಂದಿರಕ್ಕೆ ಭೇಟಿ – 95 ಕಿ.ಮೀ – ಹಾಗೂ ದಿಯು ದ್ವೀಪದೆಡೆಗೆ – 85 ಕಿ.ಮೀ – ಸೋಮನಾಥ್ ಮಾರ್ಗವಾಗಿ ಮರಳಿ ಜುನಾಗಡ್ ಬೇಸ್ ಕ್ಯಾಂಪ್ ಗೆ. – 177 ಕಿ.ಮೀ.

ನಾನು ಮೊದಲೇ ತಿಳಿಸಿದಂತೆ ನಾವುಗಳು ಬೆಂಗಳೂರಿನಿಂದ ಅಹಮದಾಬಾದ್ ನಗರಕ್ಕೆ ಒಂದು ದಿನ ಮುಂಚಿತವಾಗಿ ವಿಮಾನದ ಮೂಲಕ ರಾತ್ರಿ 9.30ಕ್ಕೆ ತಲುಪಿದೆವು. ಅಲ್ಲಿಂದ ದ್ವಾರಕಾ ಕ್ಷೇತ್ರಕ್ಕೆ ರಾತ್ರಿ 11ಕ್ಕೆ ಹೊರಡುವ ಮಲಗಿ ಪಯಣಿಸುವ ಬಸ್ಸಿನಲ್ಲಿ ಪ್ರಯಾಣ ಮಾಡಿ ಮುಂಜಾನೆ 8.30ಕ್ಕೆ ದ್ವಾರಕಾ ಕ್ಷೇತ್ರವನ್ನು ತಲುಪಿದೆವು. ಅನಂತರ ಒಂದು ಹೋಟೆಲಿನಲ್ಲಿ ಎಲ್ಲರೂ ಸ್ನಾನ, ಉಪಾಹಾರವನ್ನು ಮುಗಿಸಿ ಶ್ರೀಕೃಷ್ಣನ ದರ್ಶನವನ್ನು ಮಾಡಿ ಅಲ್ಲಿಂದ ರುಕ್ಮಿಣಿ ಮಂದಿರ, ನಾಗೇಶ್ವರ್ ಹಾಗೂ ಬೇಟ್ ದ್ವಾರಕಾಗಳನ್ನು ಸಂದರ್ಶಿಸಿ ರಾತ್ರೆ ಊಟದ ನಂತರ ಹೊಟೇಲನ್ನು ತಲುಪಿ ವಿಶ್ರಾಂತಿ ಪಡೆದೆವು. ಮಾರನೇದಿನ ಮುಂಜಾನೆ ಉಪಾಹಾರದ ನಂತರ ಬಾಡಿಗೆ ಕಾರಿನಲ್ಲಿ ಜುನಾಘಢದೆಡೆಗೆ ಹೊರಟೆವು. ಮಾರ್ಗ ಮಧ್ಯದಲ್ಲಿ ಪೋರಬಂದರನ್ನು ತಲುಪುವುದಕ್ಕೆ 30 ಕಿ.ಮೀ ಮೊದಲೇ ಹರಸಿದ್ಧಿ ಮಾತಾಜಿ ಮಂದಿರವನ್ನು ತಲುಪಿದೆವು. ಈ ಮಂದಿರವು ಕೊಯಲ್ ಬೆಟ್ಟದ ಬುಡದಲ್ಲಿರುವುದು. ಈ ಮಂದಿರದಲ್ಲಿನ ದೇವಿಯು ಇಲ್ಲಿನ ಕ್ಷತ್ರಿಯ, ಬ್ರಾಹ್ಮಣ, ರಾಜಪೂತರು ಹಾಗೂ ವ್ಯಾಪಾರಿಗಳಿಗೆ ಕುಲದೈವ. ಹತ್ತಿರದಲ್ಲೇ ಮಿಯಾನಿ ಹಳೆಯ ಬಂದರು ಪಟ್ಟಣವು ಇರುವುದು. ಈ ಮಂದಿರವನ್ನು ಹದಿಮೂರನೇ ಶತಮಾನದಲ್ಲಿ ಕಛ್ ಪ್ರದೇಶದಲ್ಲಿನ ಜಗದು ಎಂಬ ವರ್ತಕನು ಕಟ್ಟಿಸಿದನೆಂದು ಸ್ಥಳೀಯ ಚರಿತ್ರೆ ತಿಳಿಸುತ್ತದೆ. ಗರ್ಭಗುಡಿಯೊಳಗಿನ ದೇವಿಯ ಮೂರ್ತಿಯ ಬಲಗಡೆ ಈ ವರ್ತಕನ ವಿಗ್ರಹವನ್ನೂ ಪ್ರತಿಷ್ಠಾಪಿಸಲಾಗಿದೆ. ಈ ಮಂದಿರಕ್ಕೆ ಸಂಬಂಧಿಸಿದ ದಂತಕಥೆಯೊಂದರ ಪ್ರಕಾರ –

ಮೊದಲಿಗೆ ಈ ಮಂದಿರದಲ್ಲಿನ ದೇವಿಯು ಬೆಟ್ಟದ ಮೇಲೆ ಸಮುದ್ರದೆಡೆಗೆ ಮುಖಮಾಡಿಕೊಂಡಿರುವಂತೆ ಸ್ಥಾಪಿಸಲಾಗಿತ್ತು. ಈ ದೇವಿಯ ದೃಷ್ಟಿಯು ಸಮುದ್ರದಲ್ಲಿ ತೇಲುತ್ತಾ ಬರುವ ಯಾವುದೇ ಹಡಗು ಅಥವಾ ದೋಣಿಯ ಮೇಲೆ ಬಿದ್ದರೆ ಕೂಡಲೇ ಅದು ಸುಟ್ಟುಹೋಗುವುದು ಇಲ್ಲವೇ ಒಡೆದು

ಹೋಗುತ್ತಿತ್ತು ಎಂಬುದಾಗಿ ಅಲ್ಲಿನ ಜನಗಳ ನಂಬಿಕೆಯಾಗಿತ್ತು. ಒಮ್ಮೆ ವರ್ತಕ ಜಗದುವಿನ ಹಡಗೂ ಸಹ ಇದೇರೀತಿ ಒಡೆದು ಸಮುದ್ರದಲ್ಲಿ ಮುಳುಗಿತು, ಆದರೆ ಜಗದು ಬದುಕುಳಿದನು. ಜಗದು ಮಂದಿರಕ್ಕೆ ಬಂದು ಅಲ್ಲೇ ದೇವಿಯನ್ನು ಸಂತೃಪ್ತಿಪಡಿಸಲು ಮೂರು ದಿನಗಳ ಕಾಲ ಉಪವಾಸವನ್ನು ಮಾಡಿದನು. ನಂತರ ಅವನ ಕನಸಿನಲ್ಲಿ ದೇವಿಯು ಬಂದಾಗ, ಅವನು ದೇವಿಯನ್ನು ಅವಳ ದೃಷ್ಟಿಯು ಸಮುದ್ರದಮೇಲಿನ ಹಡಗುಗಳ ಮೇಲೆ ಬೀಳದಂತೆ ಬೆಟ್ಟದ ಮೇಲಿಂದ ಕೆಳಗೆ ಬರುವಂತೆ ಪ್ರಾರ್ಥಿಸಿಕೊಂಡನು. ಅವಳು ಅದಕ್ಕೆ ಸಮ್ಮತಿಸಿ ತಾನು ಕೆಳಗೆ ಬರಬೇಕಾದರೆ ಬೆಟ್ಟದಲ್ಲಿರುವ ಪ್ರತಿಯೊಂದು ಮೆಟ್ಟಲಿಗೂ ಒಂದೊಂದು ಎಮ್ಮೆ/ ಕೋಣವನ್ನು ಬಲಿಕೊಡಬೇಕೆಂದು ತಿಳಿಸಿದಳು. ಜಗದುವು ಜೈನ ಮತಸ್ಥನಾಗಿದ್ದು ಅಹಿಂಸೆಯಲ್ಲಿ ನಂಬಿಕೆ ಇಟ್ಟವನಾಗಿದ್ದರಿಂದ ಅವನಿಗೆ ಪ್ರಾಣಿಬಲಿಯ ಶರತ್ತನ್ನು ಅಲಿಸಿ ಒಂದು ರೀತಿಯ ಮುಜುಗರವಾಯಿತು. ವಿಧಿಯಿಲ್ಲದೆ ಅವನು ಎಮ್ಮೆಗಳನ್ನು ತರಿಸಿ ಮೆಟ್ಟಲಿಗೊಂದರಂತೆ ಬಲಿಕೊಡತೊಡಗಿದನು. ಆದರೆ ಎಮ್ಮೆಗಳು ಸಾಕಾಗದೇ ಕೊನೆಯ ಕೆಲವು ಮೆಟ್ಟಲಲ್ಲಿ ಬಲಿಕೊಡಲು ತನ್ನ ಕುಟುಂಬದ ಸದಸ್ಯರನ್ನು ಬಲಿಕೊಟ್ಟು ಕೊನೆಯ ಮೆಟ್ಟಲಿಗೆ ತನ್ನನ್ನೇ ಬಲಿಕೊಡಲು ಸಿದ್ಧನಾಗುತ್ತಾನೆ, ಆಗ ದೇವಿಯು ಅವನ ಭಕ್ತಿ ಹಾಗೂ ತ್ಯಾಗ ಮನೋಭಾವವನ್ನು ಮೆಚ್ಚಿ ಪ್ರತ್ಯಕ್ಷಳಾಗಿ ಅವನ ಕುಟುಂಬದವರೆಲ್ಲರಿಗೂ ಜೀವವನ್ನು ಮರಳಿ ನೀಡಿ ಅವನ ವಂಶವು ಎಂದಿಗೂ ಕೊನೆಗೊಳ್ಳದಂತೆ ಹರಸಿದಳು.

ನಾವು ಕೆಳಗಿನ ಮಂದಿರವನ್ನು ವೀಕ್ಷಿಸಿ 290 ಮೆಟ್ಟಲುಗಳ ಬೆಟ್ಟವನ್ನು ಹತ್ತಿ ಮೇಲೆ ಹೋದೆವು. ಅಲ್ಲಿಂದ ಅರಬ್ಬೀ ಸಮುದ್ರವು ಸುಂದರವಾಗಿ ಕಾಣಿಸುವುದು. ಬೆಟ್ಟದ ಮೇಲೆ ಒಂದು ಪುರಾತನ ಶಿವ ಮಂದಿರವಿರುವುದು. ಆದರೆ ಮಂದಿರದಲ್ಲಿ ಶಿವಲಿಂಗವಿಲ್ಲ, ಏಕೆಂದರೆ ಸ್ಥಳೀಯರ ಪ್ರಕಾರ ಮುಸಲ್ಮಾನರು ಧಾಳಿಮಾಡಿದಾಗ ಈ ಶಿವಲಿಂಗವನ್ನು ನಾಶಮಾಡಿದರು ಎಂಬುದಾಗಿ ತಿಳಿದು ಬರುವುದು. ಈಗಲೂ ಭಕ್ತಾದಿಗಳು ಬೆಟ್ಟದ ಮೇಲೆ ಹೋಗುವಾಗ ಪ್ರತಿಯೊಂದು ಮೆಟ್ಟಲಲ್ಲೂ ಒಂದು ತೆಂಗಿನ ಕಾಯಿಯನ್ನು ಒಡೆದು ಅಲ್ಲಿಟ್ಟು ಮುಂದೆ ಹತ್ತುವರು. ಇದು ದೇವಿಗೆ ಬಲಿಯನ್ನು ಅರ್ಪಿಸುವ ಸಂಕೇತ.

ಅನಂತರ ನಾವು ಪೋರಬಂದರ್ ಮಾರ್ಗವಾಗಿ ಮೂಲದ್ವಾರಕ ಮಂದಿರವನ್ನು ಸಂದರ್ಶಿಸಿ ಸಂಜೆ ಐದು ಘಂಟೆಯ ಹೊತ್ತಿಗೆ YHAI ಬೇಸ್ ಕ್ಯಾಂಪನ್ನು ತಲುಪಿದೆವು. ನಾವು ಕ್ಯಾಂಪನ್ನು ಪ್ರವೇಶಿಸುತ್ತಿದ್ದಂತೆ ನಮ್ಮನ್ನು ಗುಜರಾತಿನ YHAI ಶಾಖೆಯ ಅಸಿಸ್ಟೆಂಟ್ ಡೈರೆಕ್ಟರ್, ಶ್ರೀ.ಕಿಶೋರ್ ವಘೇಲಾ ಸ್ವಾಗತಿಸಿದರು. ಅನಂತರ ಕೆಲವೇ ನಿಮಿಷದಲ್ಲಿ ಕಾರ್ಯದರ್ಶಿ ಶ್ರೀ.ಅನಂತ ಪಾರಮಾರ್ ಅವರೂ ಬಂದು ನಮ್ಮನ್ನು ಸ್ವಾಗತಿಸಿ, ನಮಗೆ ವಿಶಾಲವಾದ

ಒಂದು ಹಾಲನ್ನು ಉಳಿದುಕೊಳ್ಳಲು ನೀಡಿದರು. ವಾತಾವರಣ ಅತಿ ಸುಂದರವಾಗಿತ್ತು. ಚಹಾ ಸೇವನೆಯ ನಂತರ ನಮ್ಮನ್ನು ಒಂದು ಆಟೋರಿಕ್ಷಾದಲ್ಲಿ ಸುಮಾರು ಆರು ಕಿ.ಮೀ ದೂರದಲ್ಲಿರುವ ಶಕ್ಕರ್ ಬಾಗ್ ಪ್ರಾಣಿ ಸಂಗ್ರಹಾಲಯಕ್ಕೆ ಕರೆದೊಯ್ದರು. ಅಲ್ಲಿಗೆ ಆಗಲೇ ಉಳಿದ ಚಾರಣಿಗರು ಬಂದಿದ್ದರು. ನಾವೂ ಒಳಗೆ ಹೋಗಿ ಹುಲಿ, ಸಿಂಹಗಳ ನ್ನೊಳಗೊಂಡ ಹಲವಾರು ವನ್ಯ ಜೀವಿಗಳನ್ನು ವೀಕ್ಷಿಸಿದೆವು. ಸುಮಾರು ಏಳು ಘಂಟೆಯ ಹೊತ್ತಿಗೆ ಮರಳಿ ಕ್ಯಾಂಪಿಗೆ ಬಂದೆವು. ಸ್ವಲ್ಪ ಸಮಯದಲ್ಲಿ ಅನಂತ ಪಾರಮಾರ್ ಅವರ ನೇತೃತ್ವದಲ್ಲಿ ಸಭೆ ಸೇರಿ ಎಲ್ಲರೂ ಪರಸ್ಪರ ಪರಿಚಯ ಮಾಡಿಕೊಂಡು ರಾತ್ರಿ ಊಟದ ನಂತರ ಮಲಗಿದೆವು.

ಎರಡನೇ ದಿನ ಎಲ್ಲರೂ ನಿಧಾನವಾಗಿ ಎದ್ದರೆ, ನಾನು ಹಾಗೂ ಗುರುರಾಜನು ಬೇಗ ಎದ್ದು ಮುಂಜಾನೆಯ ನಡಿಗೆಯ ಕಾರ್ಯಕ್ರಮದಲ್ಲಿ ಮುಖ್ಯ ರಸ್ತೆಯಲ್ಲಿದ್ದ ದಾಮೋದರ ಕುಂಡವನ್ನು ವೀಕ್ಷಿಸಲು ಸುಮಾರು ಒಂದು ಕಿ.ಮೀ ನಡೆದುಕೊಂಡು ಹೋದೆವು.

ಹಿಂದುಗಳಿಗೆ ದಾಮೋದರ ಕುಂಡವು ಅತ್ಯಂತ ಪವಿತ್ರ ಸರೋವರ. ಗಿರಿನಾರ್ ಬೆಟ್ಟದ ಬುಡದಲ್ಲಿರುವುದು. ಈ ಸರೋವರದಲ್ಲಿ ಹಿಂದೂಗಳು ತಮ್ಮ ಧಾರ್ಮಿಕ ಕಾರ್ಯಕ್ರಮಗಳಾದ ಚಿತಾ ಭಸ್ಮ ವಿಸರ್ಜನೆಯನ್ನು ಮಾಡುವರು. ಈ ಸರೋವರವು 257 ಅಡಿ ಉದ್ದ ಹಾಗೂ 50 ಅಡಿ ಅಗಲ ಮತ್ತು 5 ಅಡಿ ಆಳವಿರುವುದು. ಈ ಸರೋವರದ ಬಳಿ ಶಿವ ಪಾರ್ವತಿಯರು ಇಲ್ಲಿ ವಿಹರಿಸುತ್ತಿದ್ದಾಗ ಅವರ ವಸ್ತ್ರಗಳು ಇಲ್ಲಿ ಬಿದ್ದಿತ್ತೆಂದು ಪೌರಾಣಿಕ ಹೇಳಿಕೆ. ಈ ಸರೋವರದ ಬಳಿಯೇ ರೇವತಿ ಕುಂಡ ಎಂಬ ಮತ್ತೊಂದು ಕೊಳವಿರುವುದು. ಈ ಸರೋವರದ ದಕ್ಷಿಣ ದಿಕ್ಕಿನಲ್ಲಿ ಗಿರಿನಾರ್ ಪರ್ವತ ಶ್ರೇಣಿಯಲ್ಲಿನ ಅಶ್ವತ್ಥಾಮ ಬೆಟ್ಟದ ಬುಡದಲ್ಲಿ ದಾಮೋದರ ಹರಿ ಮಂದಿರ ವಿರುವುದು. ಈ ಮಂದಿರದಲ್ಲಿನ ವಿಗ್ರಹವನ್ನು ಶ್ರೀ ಕೃಷ್ಣನ ಮೊಮ್ಮಗ ವಜ್ರನಾಭನು ಪ್ರತಿಷ್ಠಾಪಿಸಿದನೆಂದು ಐತಿಹ್ಯವಿದೆ. ಚಾರಿತ್ರಿಕವಾಗಿ ಈ ಮಂದಿರವನ್ನು ಪುನರುಜ್ಜೀವಿತಗೊಳಿಸಿದ್ದು ಸೂರ್ಯವಂಶದ ರಾಜ ಚಂದ್ರಕೇತಪುರ. ನಂತರ ಕ್ರಿ.ಶ.462 ರಲ್ಲಿ ಈ ಮಂದಿರವನ್ನು ಮತ್ತೊಮ್ಮೆ ಗುಪ್ತ ವಂಶದ ಸ್ಕಂದಗುಪ್ತನು ಪುನರುಜ್ಜೀವನಗೊಳಿಸಿದನು. ವೈಷ್ಣವ ಪಂಥಾನುಯಾಯಿಗಳು ದಾಮೋದರ ಭಗವಾನನನ್ನು ಗಿರಿನಾರ್ ಕ್ಷೇತ್ರದ ಅಧಿಪತಿಯೆಂದು ಪರಿಗಣಿಸುವರು.

ಆದರೆ ನಾವು ಕಂಡ ದಾಮೋದರ ಕುಂಡದ ಪರಿಸ್ಥಿತಿಯು ನಮ್ಮನ್ನು ನಿರಾಸೆಗೊಳಿಸಿತು. ಕುಂಡದಲ್ಲಿನ ನೀರು ಕೊಳೆತು ದುರ್ವಾಸನೆಯಿಂದ ಕೂಡಿದ್ದು ಅದರ ಬಳಿಯೇ ಕೆಲವು ಗುಂಪುಗಳು ಅಪರ ಕರ್ಮಗಳನ್ನು ನಡೆಸುತ್ತಿದ್ದವು. ನಿರಾಸೆಯಿಂದ ನಾವು ಕ್ಯಾಂಪಿಗೆ ಮರಳಿದೆವು. ಅನಂತರ ನಾವು ಸ್ನಾನ ಹಾಗೂ

ಉಪಾಹಾರವನ್ನು ಮುಗಿಸಿ ಎಲ್ಲರೂ 9 ಘಂಟೆಗೆ ಗಿರಿನಾರ್ ಬೆಟ್ಟದೆಡೆಗೆ ಚಾರಣ ಮಾಡಲು ಹೊರಟೆವು.

ಗಿರಿನಾರ್ ಬೆಟ್ಟದ ಬಗ್ಗೆ ಮಾಹಿತಿ

ಜುನಾಘಡ್ ನಗರದಿಂದ 5 ಕಿ.ಮೀ ದೂರದಲ್ಲಿ ಗಿರಿನಾರ್ ಬೆಟ್ಟಗಳ ಸಮೂಹವನ್ನು ನೋಡಬಹುದು. ಈ ಬೆಟ್ಟಗಳ ಉಗಮವನ್ನರಿಯಲು ವೇದಗಳ ಕಾಲಕ್ಕೆ ಹೋಗಬೇಕು. ಮೊಹೆಂಜೋದಾರೋ ಸಮಯಕ್ಕಿಂತಲೂ ಹಿಂದಿನ ದಿನಗಳಿಂದಲೇ ಈ ಪ್ರದೇಶವನ್ನು ಧಾರ್ಮಿಕ ಕ್ಷೇತ್ರವನ್ನಾಗಿ ಪರಿಗಣಿಸಲಾಗಿತ್ತು. ಹಿಂದೂ ಹಾಗೂ ಜೈನ ಯಾತ್ರಾರ್ಥಿಗಳಿಗೆ ಇದು ಪವಿತ್ರ ಕ್ಷೇತ್ರ. ಹಲವಾರು ಚಾರಣ ಪಥಗಳು, ಧಾರ್ಮಿಕ ತಾಣಗಳು ಮತ್ತು ಪ್ರಾಗೈತಿಹಾಸಿಕ ತಾಣಗಳು ಹಾಗೂ ಶಿಖರಗಳನ್ನು ಇಲ್ಲಿ ವೀಕ್ಷಿಸಬಹುದು.

ಗಿರಿನಾರ್ ಬೆಟ್ಟವು 1100 ಮೀ (3630) ಅಡಿ ಎತ್ತರವಿದ್ದು ಅದು ಅಳಿದುಹೋಗಿರುವ ಜ್ವಾಲಾಮುಖಿ. ಬೆಟ್ಟದ ತುದಿಯಿಂದ ಸುಮಾರು 600 ಅಡಿ ಕೆಳಗಿಳಿದರೆ ಸಮತಟ್ಟಾದ ಪ್ರದೇಶದಲ್ಲಿ ಕ್ರಿ.ಶ.1128 ರಿಂದ 1500ರರ ಅವಧಿಯಲ್ಲಿ ಕಟ್ಟಲಾಗಿರುವ ಸುಂದರವಾದ ಕೆತ್ತನೆಗಳನ್ನೊಳಗೊಂಡ ಜೈನರ ದೇವಾಲಯಗಳ ಸಂಕೀರ್ಣ ನೋಡಬಹುದು. ಇದೇ ಸ್ಥಳದಲ್ಲಿ 700 ವರ್ಷ ಜೀವಿಸಿದ್ದ ಜೈನರ 22ನೆ ತೀರ್ಥಂಕರ ನೇಮಿನಾಥನು ದೇಹತ್ಯಾಗ ಮಾಡಿದನೆಂದು ಪ್ರತೀತಿ. ಇಲ್ಲಿ 1177 ರಲ್ಲಿ ನಿರ್ಮಿಸಿದ ಮಲ್ಲಿನಾಥ ಮಂದಿರವು ಈಗಲೂ ಅತ್ಯಂತ ಸುಂದರವಾಗಿ ಕಂಗೊಳಿಸುತ್ತದೆ. 3330 ಅಡಿ ಹತ್ತಿದರೆ ನಮಗೆ ಸಿಗುವುದೇ 12ನೇ ಶತಮಾನದ ಸುಪ್ರಸಿದ್ಧವಾದ ಮಾತಾ ಅಂಬಾಜಿ ಮಂದಿರ. ಇಲ್ಲಿಂದ ಸ್ವಲ್ಪ ಕೆಳಗಿಳಿದು ಮತ್ತೆ ಮೇಲೇರಿದರೆ 3666 ಅಡಿ ಎತ್ತರದಲ್ಲಿ ನಮಗೆದುರಾಗುವುದೇ ಗೋರಖನಾಥ ಶಿಖರ. ಇಲ್ಲಿ ಋಷಿ ಗೋರಖನಾಥನ ಕಾಲಿನ ಮುದ್ರೆಯನ್ನು ನೋಡಬಹುದು. ಇದು ಈ ಪರ್ವತದ ಅತ್ಯಂತ ಎತ್ತರದ ಜಾಗ. (ನಾವು ಇಲ್ಲಿಯವರೆಗೂ ಹೋಗಲಾಗಲಿಲ್ಲ). ಇಲ್ಲಿಂದ ಮತ್ತೆ ಕೆಲವು ಮೆಟ್ಟಿಲುಗಳನ್ನು ಇಳಿದರೆ ನಮಗೆ ಕಮಂಡಲ ಕುಂಡವು ಎದುರಾಗುವುದು ಹಾಗೂ ಮತ್ತೊಂದು ಶಿಖರದಲ್ಲಿ ದತ್ತಾತ್ರೇಯರ ಪಾದ ಮುದ್ರೆಯನ್ನು ಗಮನಿಸಬಹುದು. ಇಲ್ಲಿಗೆ ತಲುಪುವುದು ಅತ್ಯಂತ ಕಠಿಣವಾದದ್ದು. (ಇಲ್ಲಿಯವರೆಗೂ ನಮ್ಮ ಗುಂಪಿನ ಗುರುರಾಜ ಮಾತ್ರ ಹೋಗಲು ಸಾಧ್ಯವಾಯಿತು). ಇಲ್ಲಿಂದ ಯಾವುದೇ ಮೆಟ್ಟಿಲುಗಳಿಲ್ಲದಿದ್ದರೂ ಸಾಹಸಿ ಪರ್ವತಾರೋಹಿಗಳು ಕಾಲುದಾರಿಯಲ್ಲಿ ಸ್ವಲ್ಪ ದೂರ ಹತ್ತಿಹೋದರೆ ಮತ್ತೊಂದು ಶಿಖರವು ಕಾಣುವುದು. ಅಲ್ಲಿ ಕಾಳಿಕಾ ಮಾತೆಯ ಮಂದಿರವಿರುವುದು. ಯಾತ್ರಾರ್ಥಿಗಳು ಬೆಟ್ಟದ ತುದಿಯನ್ನು

ತಲುಪಲು ಒಟ್ಟು 9999 ಮೆಟ್ಟಿಲುಗಳನ್ನು ಹತ್ತಬೇಕು.

ಇದನ್ನು ಹತ್ತಲು 5 – 6 ಘಂಟೆ ಸಮಯವು ಬೇಕಿರುವುದು. ನಮ್ಮಂತಹ ಹಿರಿಯ ನಾಗರಿಕರಿಗೆ ಇದರ ಎರಡರಷ್ಟು ಸಮಯ ಬೇಕು. YHAI ಸಂಸ್ಥೆಯು ನಮ್ಮನ್ನು ಸುಮಾರು 4000 ಮೆಟ್ಟಿಲುಗಳನ್ನು ಹತ್ತಿದ ನಂತರ ಸಿಗುವ ಪಥರ್ ಚೆಟ್ಟಿಯವರೆಗೂ ಕರೆದುಕೊಂಡು ಹೋಗಿ ಅಲ್ಲಿ ಒಂದು ರಾತ್ರಿ ತಂಗುವ ವ್ಯವಸ್ಥೆಯನ್ನು ಮಾಡಿದ್ದರು. ನಮ್ಮ ಗುಂಪಿನ ನಾಲ್ವರು ಈ ಪ್ರದೇಶಕ್ಕೆ ಸುಮಾರು 2.45ಕ್ಕೆ ತಲುಪಿದರೆ, ಗುರುರಾಜ್ 12 ಘಂಟೆಗೇ ಇಲ್ಲಿ ಬಂದು ಇಲ್ಲಿಂದ ಕೆಲವು ಯುವ ಚಾರಣಿಗರೊಂದಿಗೆ 9999 ಮೆಟ್ಟಿಲುಗಳನ್ನು ಹತ್ತಿ ದತ್ತ ಮಂದಿರವನ್ನು ವೀಕ್ಷಿಸಿ 5 ಘಂಟೆಯ ಹೊತ್ತಿಗೆ ಮರಳಿ ಪಥರ್ ಚೆಟ್ಟಿಗೆ ಬಂದರು.

ಅಲ್ಲಿ ಒಂದು ರಾತ್ರಿ ಕಳೆದು ಮಾರನೇ ದಿನ ಮುಂಜಾನೆ ಅಲ್ಲಿಂದ ಹೊರಟು ಮರಳಿ ಬೇಸ್ ಕ್ಯಾಂಪಿಗೆ ಇಳಿದು ಬಂದೆವು. ಸಾಮಾನ್ಯವಾಗಿ ಬೆಟ್ಟವನ್ನು ಹತ್ತುವುದಕ್ಕಿಂತ ಇಳಿಯುವುದು ಅತಿ ಆಯಾಸಕರ ಹಾಗೂ ಪ್ರಯಾಸದ್ದು. ಆದರೆ ನುರಿತ ಚಾರಣಿಗರಾದ ಪಾಲಹಳ್ಳಿ ರಮೇಶ, ವೆಂಕಯ್ಯ ಸುಬ್ಬಯ್ಯ ಹಾಗೂ ಗುರುರಾಜ ಅವರಿಗೆ ಇದು ನೀರು ಕುಡಿದಷ್ಟು ಸುಲಭವಾಗಿದ್ದು ಅವರು ಅತ್ಯಂತ ವೇಗದಿಂದ ಇಳಿದು ಬಂದರೆ, ನಾನು ಹಾಗೂ ಸುರೇಶ್ ಬಾಬು ನಿಧಾನವಾಗಿ ಇಳಿದುಬಂದೆವು.

ಪ್ರತಿ ವರ್ಷದ ಜನವರಿ ತಿಂಗಳಿನ 1 ರಿಂದ 10ರ ವರೆಗೂ ಗುಜರಾತ್ ಸರ್ಕಾರವು ಗಿರಿನಾರ್ ಬೆಟ್ಟ ಹತ್ತುವ ಸ್ಪರ್ಧೆಯನ್ನು ನಡೆಸುತ್ತಾರೆ. ಯಾರು 2 ಘಂಟೆಗಳಲ್ಲಿ 5500 ಮೆಟ್ಟಿಲುಗಳನ್ನು (1700 ಮೀ) ಹತ್ತುವರೋ ಅವರಿಗೆ ಪ್ರಶಸ್ತಿ ಪತ್ರವನ್ನು ನೀಡಿ ಹಾಗೂ ಅವರ ಪೈಕಿ ವೇಗವಾಗಿ ಮೊದಲಿಗನಾದ ಸ್ಪರ್ಧಿಗೆ ಅನೇಕ ಬಹುಮಾನಗಳನ್ನು ನೀಡುವರು. ಈಗ ಈ ಸ್ಪರ್ಧೆಯು ರಾಜ್ಯ ಮಟ್ಟದಲ್ಲಲ್ಲದೆ ರಾಷ್ಟ್ರಮಟ್ಟದಲ್ಲಿ ನಡೆಸಲಾಗುವುದು.

ಈ ಬೆಟ್ಟದ ಇತರ ಸುಪ್ರಸಿದ್ಧ ಸ್ಥಳಗಳೆಂದರೆ ಭೀಮಕುಂಡ, ಸಾತ್ಪುಡ, ಗೋಮುಖಿ ಗಂಗಾ, ಭೈರವ ಜಪ್, ಭರತವನ ಶೇಷಾಯನ್, ಹನುಮಾನ್ ಧಾರ ಹಾಗೂ ಜಟಾಶಂಕರ.

ಪ್ರತಿ ವರ್ಷದ ಕಾರ್ತಿಕ ಮಾಸದ ಹುಣ್ಣಿಮೆಯ ದಿನದಂದು 40 ಕಿ.ಮೀ ಸುತ್ತಳತೆಯ, ಗಿರಿನಾರ್ ಪರ್ವತ ಪರಿಕ್ರಮವನ್ನು ನಡೆಸಲಾಗುವುದು. ಲಕ್ಷಾಂತರ ಜನಗಳು ಇದರಲ್ಲಿ ಭಾಗವಹಿಸುವರು.

ನಾವು ಈ ಹುಣ್ಣಿಮೆಯ ಮಾರನೇ ದಿನ ಅಲ್ಲಿಗೆ ಹೋಗಿದ್ದೆವು. ಈ ವರ್ಷದಲ್ಲಿ 13 ಲಕ್ಷ ಯಾತ್ರಾರ್ಥಿಗಳು ಭಾಗವಹಿಸಿದ್ದರೆಂದು YHAI ಕಾರ್ಯದರ್ಶಿ ಶ್ರೀ.ಅನಂತ ಪಾರಮಾರ್ ನಮಗೆ ತಿಳಿಸಿದರು.

ಗಿರಿನಾರ್ ಬೆಟ್ಟವನ್ನು ಹತ್ತುವುದು ಹಾಗೂ ಬೆಟ್ಟದ ಸುತ್ತಾ ಕಾಲ್ನಡಿಗೆಯಲ್ಲಿ ಪರಿಕ್ರಮ ಮಾಡುವುದು ಅತ್ಯಂತ ಕಠಿಣ ಹಾಗೂ ಸವಾಲಿನಿಂದ ಕೂಡಿದ ಸಾಹಸ ಕಾರ್ಯ.

ಗಿರಿನಾರ್ ಬೆಟ್ಟ ಹತ್ತುವ ಕಾರ್ಯಕ್ರಮದ ನಂತರ ನಮ್ಮನ್ನು ಮಾರನೇ ದಿನ ಗಿರಿನಾರ್ ಅಭಯಾರಣ್ಯದೆಡೆಗೆ ಬಸ್ಸಿನಲ್ಲಿ ಕರೆದುಕೊಂಡು ಹೋದರು. ಸುಮಾರು ಒಂದು ಘಂಟೆಯ ಕಾಲ ಈ ಅಭಯಾರಣ್ಯದ ಸಫಾರಿಯಲ್ಲಿ ನಾವುಗಳು ಜಿಂಕೆ, ಕಾಡೆಮ್ಮೆ, ಹುಲಿ ಹಾಗೂ ಸಿಂಹಗಳನ್ನು ವೀಕ್ಷಿಸಿ ಅಲ್ಲಿಂದ ನೇರವಾಗಿ ಸಾಸನ್ ಗಿರ್ ನಲ್ಲಿನ ಒಂದು ಸುಂದರವಾದ ರೆಸಾರ್ಟ್‌ಗೆ ನಮ್ಮನ್ನು ಕರೆದೊಯ್ದರು. ಅಲ್ಲಿ ಒಂದು ರಾತ್ರಿಯನ್ನು ಕಳೆದೆವು.

ಮಾರನೇ ದಿನ ಬೆಳಗ್ಗೆ ರೆಸಾರ್ಟ್ ನಿಂದ ಹೊರಟು ನಮ್ಮನ್ನು ನೇರವಾಗಿ ಸೋಮನಾಥದಲ್ಲಿನ ಜ್ಯೋತಿರ್ಲಿಂಗದ ದರ್ಶನಕ್ಕೆ ಕರೆದೊಯ್ದರು. ಅನಂತರ ಅಲ್ಲಿಂದ ನಮ್ಮನ್ನು ಕೇಂದ್ರಾಡಳಿತ ಪ್ರದೇಶವಾದ ದಿಯು ಗೆ ಕರೆದೊಯ್ದರು. ಅಲ್ಲಿ ಕೆಲವು ಮಂದಿರಗಳನ್ನು ಹಾಗೂ ಡಿಯೂದಲ್ಲಿನ ಸುಪ್ರಸಿದ್ಧ ಹಾಗೂ ಪುರಾತನ ಕೋಟೆಯನ್ನು ವೀಕ್ಷಿಸಿ ಅಲ್ಲಿಂದ ರಾತ್ರಿ ಊಟದ ನಂತರ ನೇರವಾಗಿ ನಮ್ಮನ್ನು ಜುನಾಘಢದಲ್ಲಿನ ಬೇಸ್ ಕ್ಯಾಂಪಿಗೆ ರಾತ್ರೆ 11.30ಕ್ಕೆ ಕರೆದೊಯ್ದರು.

ಮಾರನೇ ದಿನ ನಮ್ಮನ್ನು ಜುನಾಘಢ ನಗರ ಪ್ರದಕ್ಷಿಣೆಗೆ ಆಟೋರಿಕ್ಷಾದಲ್ಲಿ ಕರೆದೊಯ್ದರು. ಈ ಕಾರ್ಯಕ್ರಮದಲ್ಲಿ ನಾವು ಮೊಹಾಬತ್ ಮಕ್ಬಾರ, ಹಾಗೂ ಉಪರ್ ಕೋಟ್ ಕೋಟೆ ಪ್ರದೇಶಗಳನ್ನು ವಿವರವಾಗಿ ನೋಡಲು ಅವಕಾಶ ಒದಗಿತು.

ಮೊಹಾಬ್ಬತ್ ಮಕ್ಬಾರವನ್ನು ಬಹದುಧ್ದಭಾಯಿ ಹಸ್ಸೈನ್ ಭಾಯಿಯ ಸಮಾಧಿ ಎಂದೂ ಕರೆಯಲಾಗುವುದು. ಈ ಸಮಾಧಿಯ ಕಟ್ಟಡವು ತನ್ನ ವೈಭವ ಶಿಲಾವಿನ್ಯಾಸದಿಂದಾಗಿ ಸುಪ್ರಸಿದ್ಧವಾಗಿದೆ. ಇದನ್ನು 19 ನೇ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿಸಲಾಗಿದೆ. ಇದನ್ನು ಇಂಡೋ–ಇಸ್ಲಾಮಿಕ್ ಮತ್ತು ಗೋಥಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ.

ಉಪಕೋರ್ಟ್

ಸುಮಾರು 2300 ವರ್ಷಗಳ ಪುರಾತನ ಕೋಟೆ. ಕೆಲವೆಡೆ ಕೋಟೆಯ ಗೋಡೆಗಳು 20 ಮೀಟರುಗಳಿಗೂ ಮೀರಿದ ಎತ್ತರವಿರುವುದು. ಒಂದು ಕಾಲದಲ್ಲಿ ಕೋಟೆಯ ಸುತ್ತಲೂ ಮೊಸಳೆಗಳಿಂದ ಕೂಡಿದ 300 ಅಡಿ ಆಳದ ಕಂದಕಗಳಿದ್ದವು ಎಂಬ ಪ್ರತೀತಿ. ಈ ಕೋಟೆಯನ್ನು ಮೌರ್ಯ ವಂಶಸ್ತರ ಕಾಲದಲ್ಲಿ ನಿರ್ಮಿಸಿ ಗುಪ್ತ ವಂಶಸ್ತರೂ ಉಪಯೋಗಿಸುತ್ತಿದ್ದರು. ನಂತರದ ದಿನಗಳಲ್ಲಿ ಮೈತ್ರಿಕರು

ಸೌರಾಷ್ಟ್ರದ ರಾಜಧಾನಿಯನ್ನು ಜುನಾಘಡದಿಂದ ವಲ್ಲಭಿಗೆ ಬದಲಾಯಿಸಿದ್ದರಿಂದಾಗಿ ಈ ಪ್ರದೇಶವು ತನ್ನ ಮಹತ್ವವನ್ನು ಕಳೆದುಕೊಂಡಿತು.

ಕೋಟೆಯೊಳಗೆ ಎರಡು ವಿಧದ ಮೆಟ್ಟಿಲುಗಳ ಭಾವಿಗಳಿರುವುದು. ಬೇರೆ ಭಾವಿಗಳನ್ನು ಭೂಮಿಯಿಂದ ಕೆಳಕ್ಕೆ ಅಗೆದಂತಿರದೇ ಈ ಭಾವಿಗಳು ಭೂಮಿಯಲ್ಲಿನ ಕಲ್ಲಿನೊಳಗೆ ಕೊರೆದು ಕಟ್ಟಲಾಗಿದೆ. ಸಂಪೂರ್ಣ ಭಾವಿಯು ಏಕ ಶಿಲೆಯಿಂದ ನಿರ್ಮಿತವಾಗಿದೆ.

ನಗರ ಪ್ರದಕ್ಷಿಣೆಯ ನಂತರ ಮರಳಿ ಕ್ಯಾಂಪಿಗೆ ಬಂದು ರಾತ್ರಿ ಮಲಗಿದ್ದು ಮಾರನೇ ದಿನ ಮುಂಜಾನೆ 9 ಕ್ಕೆ ಅಲ್ಲಿಂದ ನಾವು ಅಹಮದಾಬಾದ್ ನಗರಕ್ಕೆ ಬೆಳಗಿನ 10.30ರ ರೈಲಿನಲ್ಲಿ ಪಯಣಿಸಿದೆವು. ಇಲ್ಲಿಗೆ YHAI ಅವರ ಚಾರಣ ಕಾರ್ಯಕ್ರಮವು ಮುಗಿಯಿತು.

ಅಹಮದಾಬಾದ್ ನಗರದಲ್ಲಿ ನಮ್ಮ ಬ್ಯಾಂಕಿನ ವಿಶ್ರಾಂತಿ ಗೃಹಕ್ಕೆ ಹೋಗಿ ರಾತ್ರಿ ಮಲಗಿದ್ದು ಮುಂಜಾನೆ ಬೆಳಗಿನ ಉಪಾಹಾರದ ನಂತರ ನಾವುಗಳು ಹತ್ತಿರದಲ್ಲಿನ ಸುಪ್ರಸಿದ್ಧ ಸ್ಥಳಗಳಿಗೆ ಭೇಟಿಕೊಡಲು ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿಕೊಂಡು 5 ಘಂಟೆಗೆಲ್ಲಾ ಹೊರಟೆವು. ಮೊದಲಿಗೆ ನಾವು 105 ಕಿ.ಮೀ ದೂರದ ಮೊಧೇರ ಕ್ಷೇತ್ರದಲ್ಲಿನ ಸೂರ್ಯ ಮಂದಿರವನ್ನು ತಲುಪಿದೆವು. ಅತ್ಯದ್ಭುತ ಶಿಲ್ಪಕಲೆಯಿಂದ ಕೂಡಿದ ಈ ಮಂದಿರ ಸಂಕೀರ್ಣವನ್ನು ಕ್ರಿ.ಶ.1026 – 27ರಲ್ಲಿ ಚಾಲುಕ್ಯ ರಾಜವಂಶದ ಮೊದಲನೇ ಭೀಮ ಚಕ್ರವರ್ತಿಯು ನಿರ್ಮಿಸಿದನು. ಈ ಮಂದಿರದಲ್ಲಿ ಪೂಜೆಯು ನಡೆಯುವುದಿಲ್ಲ. ಈ ಮಂದಿರ ಸಂಕೀರ್ಣವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ – ಗುಧಾಮಂಡಪ, ಸಭಾಮಂಡಪ ಹಾಗೂ ರಾಮಕುಂಡ ಅಥವಾ ಸೂರ್ಯಕುಂಡ ಎಂದು ಕರೆಯಲ್ಪಡುವ ಸುಂದರವಾದ ಕುಂಡ (ಸುಂದರವಾದ ಕೊಳ). ಈ ಕೊಳದೊಳಗೆ ಕೀರ್ತಿತೋರಣದ ಮೂಲಕ ಇಳಿಯಲು ಮೆಟ್ಟಿಲುಗಳಿದ್ದು 176 x 120 ಅಡಿಯ ಆಯತಾಕಾರದ ನೀರಿನ ಕೊಳಕ್ಕೆ ಕರೆದುಕೊಂಡು ಹೋಗುವುದು. ಸುತ್ತಲೂ ಸುಂದರವಾದ ಪುರಾಣಕಾಲದ ಶಿಲ್ಪಗಳನ್ನು ಕೆತ್ತಲಾಗಿದೆ.

ಈ ಮಂದಿರ ಸಂಕೀರ್ಣವನ್ನು ಕೂಲಂಕಷವಾಗಿ ನೋಡಲು ಸುಮಾರು 3 ಘಂಟೆ ಬೇಕಾಯಿತು. ಸುತ್ತಲಿನ ಮರಗಳಿಂದ ಕೂಡಿದ ಹುಲ್ಲುಗಾವಲಿನಲ್ಲಿ ಅನೇಕ ನವಿಲುಗಳು ಯಥೇಚ್ಛವಾಗಿ ವಿಹರಿಸುತ್ತಿದ್ದವು.

ಮೊಧೇರದಿಂದ ನಾವುಗಳು 35 ಕಿ.ಮೀ ದೂರದಲ್ಲಿನ ಪಾಟನ್ ಕ್ಷೇತ್ರದಲ್ಲಿನ "ರಾಣಿ–ಕಿ–ವಾವ್"ಯೆಡೆಗೆ ಪಯಣಿಸಿದೆವು. ರಾಣಿ–ಕಿ–ವಾವ್ ಎಂದರೆ ರಾಣಿಯ ಮೆಟ್ಟಿಲುಗಳ ಭಾವಿ. ಇದನ್ನು ಕ್ರಿ.ಶ.1022–1064ರಲ್ಲಿ ಚಾಲುಕ್ಯ ಅರಸುವಂಶದ ಭೀಮ ಚಕ್ರವರ್ತಿಯ ನೆನಪಿಗಾಗಿ ಅವನ ಪತ್ನಿ ರಾಣಿ

ಉದಯಮತಿಯು ಕಟ್ಟಿಸಲು ಪ್ರಾರಂಭಿಸಿ ಅದನ್ನು ಚಕ್ರವರ್ತಿ ಕರ್ಣನು ಪೂರ್ಣಗೊಳಿಸಿದನೆಂದು ಜೈನ ಮುನಿ ಮೇರುಂಗ ಸೂರಿಯು 1304ರಲ್ಲಿ ತನ್ನ ಪ್ರಬಂಧ ಚಿಂತಾಮಣಿ ಕೃತಿಯಲ್ಲಿ ಉಲ್ಲೇಖಿಸಿರುವನು. ಅನಂತರ ಘಟಿಸಿದ ಸರಸ್ವತಿ ನದಿಯ ಪ್ರವಾಹದಲ್ಲಿ ಈ ಸಂಕೀರ್ಣವು ಸಂಪೂರ್ಣವಾಗಿ ಮರಳಿನಲ್ಲಿ ಹೂತುಹೋಗಿತ್ತು. 1980ರಲ್ಲಿ ಭಾರತೀಯ ಪುರಾತತ್ವ ಇಲಾಖೆಯು ಇದರ ಉತ್ಖನನವನ್ನು ಮಾಡಿ ಈಗಿನ ಸ್ಥಿತಿಗೆ ತಂದಿರುವರು. ಈ ಭಾವಿಯು 64 x 20 x 27 ಮೀ (ಉದ್ದ, ಅಗಲ, ಆಳ) ವಿಸ್ತಾರವಾಗಿರುವುದು. ಭಾವಿಯ ಬುಡದಲ್ಲಿ 30 ಕಿ.ಮೀ ದೂರದ ಸುರಂಗವಿದ್ದು ಅದನ್ನು ಈಗ ಮುಚ್ಚಲಾಗಿದೆ. ಭಾವಿಯಲ್ಲಿ ಇಳಿಯುತ್ತಿದ್ದಂತೆ ಸುತ್ತಲಿನ ಗೋಡೆಗಳಲ್ಲಿ ಸುಂದರವಾದ ವಿಷ್ಣು ಹಾಗೂ ದಶಾವತಾರದ ವಿಗ್ರಹಗಳನ್ನು ನೋಡಬಹುದು. ಅಲ್ಲದೇ ನಾಗಕನ್ಯೆಯರು, ಅಪ್ಸರೆಯರು ಹಾಗೂ ಸುಂದರ ಯೋಗಿನಿಗಳು 16 ವೈವಿಧ್ಯ ಶೈಲಿಗಳಲ್ಲಿ ಕಂಗೊಳಿಸುವರು. ಸುಮಾರು 60 ವರ್ಷಗಳ ಹಿಂದೆ ಈ ಭಾವಿಯ ಸುತ್ತಲೂ ಅನೇಕ ಔಷಧಯುಕ್ತ ಗಿಡಗಳಿದ್ದು ಈ ಭಾವಿಯ ನೀರು ಹಲವಾರು ರೋಗಗಳನ್ನು ವಾಸಿಮಾಡುತ್ತಿತ್ತು ಎಂದು ಸ್ಥಳೀಯರ ಹೇಳಿಕೆ. ಈ ಸಂಕೀರ್ಣವನ್ನು 22, ಜೂನ್, 2014ರಲ್ಲಿ **UNESCO** ಸಂಸ್ಥೆಯು ವಿಶ್ವ ಪರಂಪರೆಯ ತಾಣ (World Heritage) ಪಟ್ಟಿಯಲ್ಲಿ ಸೇರಿಸಿರುವುದು ಹಾಗೂ ಈ ಪ್ರದೇಶವು ಅಕ್ಟೋಬರ್ 2016ರರಲ್ಲಿ ದೇಶದಲ್ಲಿನ ಅತ್ಯಂತ ಶುದ್ಧವಾದ ಪ್ರದೇಶವೆಂದು ಘೋಷಿಸಲಾಗಿದೆ. ಅಲ್ಲದೇ ಭಾರತೀಯ ರಿಸರ್ವ ಬ್ಯಾಂಕ್ ಬಿಡುಗಡೆ ಮಾಡಿದ ಲ್ಯಾವೆಂಡರ್ ಬಣ್ಣದಲ್ಲಿನ ಹೊಸ ನೂರು ರೂಪಾಯಿಯ ನೋಟಿನ ಹಿಂಭಾಗದಲ್ಲಿ ಇದರ ಚಿತ್ರವನ್ನು ಮುದ್ರಿಸಿದೆ.

ರಾಣಿ-ಕಿ-ವಾವ್ ಪ್ರದೇಶವನ್ನು ನಾವುಗಳು ಮಾರ್ಗದರ್ಶಿಯ ಸಹಾಯದಿಂದ ಸುಮಾರು 2 ಘಂಟೆಗಳ ಕಾಲ ವೀಕ್ಷಿಸಿ ನಂತರ ಅಲ್ಲಿಂದ 110 ಕಿ.ಮೀ ದೂರದ ಗುಜರಾತ್-ರಾಜಾಸ್ಥಾನ್ ಸರಹದ್ದಿನಲ್ಲಿರುವ ಸುಪ್ರಸಿದ್ಧ ಶಕ್ತಿಸ್ಥಳವಾದ ಅಂಬಾಜಿ ಮಂದಿರಕ್ಕೆ ಪಯಣಿಸಿದೆವು.

ಈ ಮಂದಿರದಲ್ಲಿ ವೇದಕಾಲದ ಪೂರ್ವದಿಂದಲೇ ಪೂಜಿಸಲ್ಪಡುವ ದೇವಿಯು ಆರಾವಳಿ ಪರ್ವತ ಶ್ರೇಣಿಗಳ ನೈಋತ್ಯದಲ್ಲಿನ ಸರಸ್ವತಿ ನದಿಯ ಉಗಮ ಸ್ಥಳದಲ್ಲಿರುವ ಅರಸೂರಿ ಬೆಟ್ಟದಲ್ಲಿರುವುದರಿಂದ ಈ ದೇವಿಯನ್ನು ಅರಸುರಿ ಅಂಬಾಜಿ ಎಂದು ಕರೆಯಲಾಗುವುದು. ಇದು 51 ಶಕ್ತಿಪೀಠಗಳಲ್ಲಿ ಒಂದಾಗಿದ್ದು ಇಲ್ಲಿ ಸತಿದೇವಿಯ ಹೃದಯಭಾಗವು ಬಿದ್ದಿತೆಂದು ನಂಬಿಕೆ.

ಈ ಮಂದಿರವನ್ನು ಮೂಲದಲ್ಲಿ ನಿರ್ಮಿಸಿದವರು ನಗರ್ ಬ್ರಾಹ್ಮಣರು. ಈ ಮಂದಿರದೊಳಗೆ ಗೋಡೆಯ ಮೇಲೆ ಶ್ರೀಚಕ್ರವನ್ನು ಸ್ಥಾಪಿಸಲಾಗಿದೆ. ಗರ್ಭಗುಡಿಯಲ್ಲಿ ಯಾವುದೇ ವಿಗ್ರಹವಿಲ್ಲ, ಏಕೆಂದರೆ ಈ ಮಂದಿರವು ವಿಗ್ರಹಾರಾಧನೆಯು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಪ್ರತಿಷ್ಠಾಪಿಸಿದ್ದು (ವೇದಕಾಲಕ್ಕೂ ಮೊದಲಿಗೆ). ಆದರೆ ಈ ಮಂದಿರದೊಳಗಿನ ಗೂಡಿನ ಮೇಲ್ಭಾಗವನ್ನು ಅರ್ಚಕರು ದೂರದಿಂದ ದೇವಿಯ ವಿಗ್ರಹದಂತೆ ಕಾಣುವ ರೀತಿಯಲ್ಲಿ ಅಲಂಕರಿಸಿರುವರು. ಅಂಬಾಜಿ ಮಂದಿರದ ಸಮೀಪದಲ್ಲಿ ಆಯತಾಕಾರದ ಕೊಳವಿರುವುದು ಹಾಗೂ ನಾಲ್ಕೂ ದಿಕ್ಕಿನಲ್ಲಿ ಮೆಟ್ಟಿಲುಗಳು ಇರುವುದು ಮತ್ತು ಇದನ್ನು ಮಾನಸರೋವರ ಎನ್ನುವರು.

ಈ ಮಂದಿರದ ಬಳಿ ಆರು ಮಂದಿರಗಳಿರುವುದು. ಅವುಗಳೆಂದರೆ – ವಾರಾಹಿ ಮಾತಾ, ಅಂಬಿಕೇಶ್ವರ್ ಮಹಾದೇವ, ಗಣಪತಿ ಮಂದಿರ, ಖೋಡಿಯಾರ್ ಮಾತಾ, ಅಜಯ ಮಾತಾ ಮತ್ತು ಹನುಮಾನ್ ಮಂದಿರಗಳು.

ಇಲ್ಲಿಗೆ ಬರುವ ಭಕ್ತರಿಗೆ ಎಲ್ಲ 51 ಶಕ್ತಿ ಪೀಠಗಳ ದರ್ಶನ ಒಂದೆಡೆ ಆಗುವ ಸಲುವಾಗಿ ಅಂಬಾಜಿ ಶಕ್ತಿಪೀಠದ ಆಡಳಿತ ಮಂಡಳಿಯು 51 ಶಕ್ತಿಪೀಠಗಳ ಸಂಕೀರ್ಣವನ್ನು ಸುಂದರವಾಗಿ ನಿರ್ಮಿಸಿರುವರು. 2.85 ಕಿ.ಮೀ ಸುತ್ತಳತೆಯ ಸಂಕೀರ್ಣದ ಪರಿಕ್ರಮವನ್ನು ಮಾಡಲು ಎಲ್ಲ ಅನುಕೂಲಗಳನ್ನೂ ಕಲ್ಪಿಸಲಾಗಿದೆ.

ಅಂಬಾಜಿ ಮಾತೆಯ ಒಂಬತ್ತು ಸ್ವರೂಪಗಳೆಂದರೆ :–

ಶ್ರೀ ಬ್ರಹ್ಮಚಾರಿಣಿ, ಶ್ರೀ ಚಂದ್ರ ಘಂಟಾ, ಶ್ರೀ ಕಾಲರಾತ್ರಿ, ಶ್ರೀ ಕಾತ್ಯಾಯನಿ, ಶ್ರೀ ಕೂಷ್ಮಾಂಡ, ಶ್ರೀ ಮಹಾಗೌರಿ, ಶ್ರೀ ಶೈಲಪುತ್ರಿ, ಶ್ರೀ ಸಿದ್ಧಿ ದಾತ್ರಿ, ಮತ್ತು ಶ್ರೀ ಸ್ಕಂದಮಾತ.

ಅಂಬಾಜಿ ಮಂದಿರ ದರ್ಶನದ ನಂತರ ಮಧ್ಯಾಹ್ನ 1.30ಕ್ಕೆ ನಾವೆಲ್ಲರೂ ದೇವಸ್ಥಾನದ ಅನ್ನಸಂತರ್ಪಣೆಯಲ್ಲಿ ಭಾಗಿಯಾಗಿ ರುಚಿಯಾದ ಊಟವನ್ನು ಮಾಡಿಕೊಂಡು ಅಲ್ಲಿಂದ ಅಹಮದಾಬಾದ್ ವಿಮಾನ ನಿಲ್ದಾಣಕ್ಕೆ ನೇರವಾಗಿ ಪಯಣಿಸಿದೆವು ಹಾಗೂ ಅಲ್ಲಿಂದ ಬೆಂಗಳೂರಿಗೆ ರಾತ್ರಿ 11.00ಕ್ಕೆ ಹಿಂದಿರುಗಿದೆವು.

ಛತ್ತೀಸ್ ಘಾಡದಲ್ಲಿನ ದಟ್ಟವಾದ ಕಾಡಿನಲ್ಲಿ ಚಾರಣ

2018 ಡಿಸೆಂಬರ್ ಕಡೇ ವಾರದಲ್ಲಿ ನನಗೆ ಛತ್ತೀಸ್ ಘಾಡ್ ಪ್ರವಾಸೋದ್ಯಮ ಇಲಾಖೆಯು ಬೆಂಗಳೂರಿನಲ್ಲಿರುವ ಇಂಡಿಯಾ ಹೈಕ್ ಚಾರಣ ಸಂಸ್ಥೆಯ ಸಹಯೋಗದೊಂದಿಗೆ ಆ ರಾಜ್ಯದ ಉತ್ತರ ಭಾಗದಲ್ಲಿನ ದಟ್ಟವಾದ ಕಾಡಿನಲ್ಲಿ ಚಾರಣ ಮಾಡಲು ಆಹ್ವಾನ ಬಂತು. ದಂಡಕಾರಣ್ಯದ ದಟ್ಟವಾದ ಕಾಡಿನಲ್ಲಿ ಚಾರಣ ಮಾಡುವುದೆಂದರೆ ಒಂದು ಅದ್ಭುತ ಅವಕಾಶ ಹಾಗೂ ಒಂದು ಸುಯೋಗ! ಇದು ನನ್ನ 6 ವರ್ಷಗಳ ಅವಧಿಯಲ್ಲಿನ 42ನೇ ಚಾರಣ.

ಛತ್ತೀಸ್-ಘಾಡ್ ನಲ್ಲಿನ ಚಾರಣವು ನಿಮ್ಮನ್ನು ಆಶ್ಚರ್ಯದ ಕಡಲಿನಲ್ಲಿ ಮುಳುಗಿಸುತ್ತದೆ. ನೀವು ಕಾಡಿನಲ್ಲಿ ಅನೇಕ ಚಾರಣಗಳನ್ನು ಮಾಡಿದ್ದರೂ ಅವುಗಳ್ಯಾವುದೂ ಈ ಚಾರಣದಂತಿರುವುದಿಲ್ಲ.

ಛತ್ತೀಸ್-ಘಾಡ್ ರಾಜ್ಯದ ಹೆಸರನ್ನು ಕೇಳುತ್ತಿದ್ದಂತೆ ನಮ್ಮ ಮನಸ್ಸಿನ ಮುಂದೆ ಬರುವುದೆಂದರೆ ದಂಡಕಾರಣ್ಯ ಪ್ರದೇಶದಲ್ಲಿನ ದಟ್ಟವಾದ ಕಾಡುಗಳು. ಪ್ರತಿನಿತ್ಯದ ಚಾರಣದಲ್ಲಿ ವೈವಿಧ್ಯತೆಯಿಂದ ಕೂಡಿದ ಕಾಡುಗಳನ್ನು ನೋಡಬಹುದು. ಅಷ್ಟೇ ಏಕೆ, ಒಂದು ದಿನದ ಚಾರಣದಲ್ಲೂ ವಿವಿಧ ರೀತಿಯ ಕಾಡುಗಳನ್ನೂ ನೋಡಿ ಆಶ್ಚರ್ಯ ಪಡಬಹುದು. ಯಾವುದೇ ಸಂದರ್ಭದಲ್ಲೂ ನೀವು ಅತಿಯಾದ ಕಾಡುಗಳೆಂದು ಬೇಸರಿಸುವ ಸಂದರ್ಭವುಂಟಾಗುವುದಿಲ್ಲ. ವೈವಿಧ್ಯತೆಯಿಂದ ಕೂಡಿದ ಕಾಡುಗಳು ನಿಮ್ಮನ್ನು ದಿಗ್ಭ್ರಮೆಗೊಳಿಸುವುದು.

ಚಾರಣದಲ್ಲಿ ನೀವು ಪ್ರಸ್ಥಭೂಮಿಯಲ್ಲಿ ನಡೆಯುತ್ತೀರಿ, ಕಣಿವೆಗಳಲ್ಲಿ ಧುಮುಕುತ್ತೀರಿ ಹಾಗೂ ನದಿ, ತೊರೆಗಳನ್ನು ದಾಟುತ್ತೀರಿ ಮತ್ತು ಜಲಪಾತಗಳನ್ನು ವೀಕ್ಷಿಸುವಿರಿ. ಇದ್ದಕ್ಕಿದ್ದಂತೆ ನೀವು ಪುರಾತನರ ವಸಾಹತುಗಳನ್ನು (ವಿನಾಶದ ಅಂಚಿನಲ್ಲಿರುವ ಪುರಾತನ ಬುಡಕಟ್ಟಿನ ಜನಗಳನ್ನು – ಬಗ ಬುಡಕಟ್ಟು) ಹಾದುಹೋಗುವಿರಿ ಹಾಗೂ ಅವರ ಜೀವನ ಶೈಲಿಯನ್ನು ಗಮನಿಸುವಿರಿ. ಚಾರಣವು ದಟ್ಟವಾದ ಕಾಡಿನ ಜಮಖಾನೆ ಹಾಗೂ ಅತಿ ಎತ್ತರದ ವೃಕ್ಷಗಳ ಛಾವಣಿಗಳ ನಡುವಿನಿಂದ ಕೂಡಿ ಸಿನೀಮಿಯ ರೀತಿಯದ್ದಾಗಿರುವುದು.

ನಮ್ಮ ಚಾರಣವು ವಿಂಧ್ಯ ಹಾಗೂ ಸಾತ್ಪುರ ಪರ್ವತ ಶ್ರೇಣಿಗಳು ಸಂಧಿಸುವ ಪ್ರದೇಶದಲ್ಲಿರುವ, ಇದು ನರ್ಮದಾ ನದಿಯ ಉಗಮ ಸ್ಥಳವಾದ ಅಮರಕಂಟಕ್ ಬಳಿ ಇದೆ. ಇದು ಅಚನಕ್ಮಾರ್ ಟೈಗರ್ ರಿಸರ್ವ್ ಪ್ರದೇಶಕ್ಕೂ ಸಮೀಪ. ನಮ್ಮ ಚಾರಣವು ಲಕ್ಷ್ಮಣಧಾರ ಜಲಪಾತದ ಬಳಿ ಕೊನೆಗೊಳ್ಳುವುದು.ಈ ಚಾರಣವನ್ನು ಛತ್ತೀಸ್-ಘಡ್ ಪ್ರವಾಸೋದ್ಯಮ ಹಾಗೂ ಇಂಡಿಯಾ ಹೈಕ್ ಸಂಸ್ಥೆಯ ಜಂಟಿ ಮುಂದಾಳತ್ವದಲ್ಲಿ ನಡೆಸಲಾಗುವುದು.

ಚಾರಣದ ಸಂಕ್ಷಿಪ್ತ ಮಾಹಿತಿ

ಮೊದಲನೇ ದಿನ : ಪೆಂಡ್ರ ರಸ್ತೆ ರೈಲ್ವೆ ನಿಲ್ದಾಣದಿಂದ ರಾಜ್ಮೆರ್ ಘರ್ ವರೆಗೆ 20 ಕಿ.ಮೀ ದೂರದ 1 – 2 ಘಂಟೆಗಳ ಕಾರಿನ ಪ್ರಯಾಣ. ರಾಜ್ಮೆರ್ ಘರ್ ಹಳ್ಳಿಯು ಒಂದು ಪ್ರಸ್ಥಭೂಮಿಯಲ್ಲಿದ್ದು ಅತಿ ಕಡಿಮೆ ಜನಸಂಖ್ಯೆಯಿಂದ ಕೂಡಿದ್ದು , ಇದು ದಟ್ಟವಾದ ಕಾಡಿನಿಂದಾವೃತವಾಗಿರುವುದು.

ಎರಡನೇ ದಿನ : ರಾಜ್ಮೆರ್ ಘರ್ (1149 ಮೀ) ನಿಂದ ಚುಟ್ಕಿರೇವರ್ (781 ಮೀ) ವರೆಗಿನ 7–8 ಘಂಟೆಗಳ 15 ಕಿ.ಮೀ ಚಾರಣ. ಈ ಮಾರ್ಗವು ಸಂಪೂರ್ಣವಾಗಿ ಮರಗಳ ನೆರಳಿನಿಂದ ಕೂಡಿದ ಸಂಪೂರ್ಣ ಕಾಡಿನ ಹಾದಿ.

ಮೂರನೇ ದಿನ : ಚುಟ್ಕಿರೇವರ್ ನಿಂದ ಕಿಯೊಂಚಿ (781 ಮೀ ನಿಂದ 600 ಮೀ ಅವರೋಹಣ) – 4–5 ಘಂಟೆಗಳ 9 ಕಿ.ಮೀ ಸಂಪೂರ್ಣವಾದ ಕಾಡಿನ ಹಾದಿ.

ನಾಲ್ಕನೇ ದಿನ : ಕಿಯೊಂಚಿಯಿಂದ ಮುಸಿಯಾರಿಗೆ (600 ಮೀ ನಿಂದ 507 ಮೀ ಅವರೋಹಣ) 5 – 6 ಘಂಟೆಗಳ 13 ಕಿ.ಮೀ ದೂರದ ಬಸ್ತಿಯ ಮೂಲಕ ಕಾಡಿನ ಹಾದಿ.

ಐದನೇ ದಿನ : ಮುಸಿಯಾರಿಯಿಂದ ದೈಹನ್ವಾರ ಹಾಗೂ ಅಲ್ಲಿಂದ ಪೆಂಡ್ರ ರಸ್ತೆಯೆಡೆಗೆ – 6 ಘಂಟೆಗಳ 12 ಕಿ.ಮೀ ದೂರದ ಚಾರಣ ಹಾಗೂ ನಂತರ 17 ಕಿ.ಮೀ.ವರೆಗೂ ಕಾರಿನಲ್ಲಿ ಪಯಣ. ಹಾದಿಯು ಕಾಡಿನ ಹಾಗೂ ಹಳ್ಳಿಯಲ್ಲಿನ ಮಾರ್ಗವಾಗಿರುವುದು.

ಚಾರಣವು ಡಿಸೆಂಬರ್ 27 ರಿಂದ 30ರ ವರೆಗೆ 4 ದಿನಗಳ ಕಾಲದಲ್ಲಿ ಸುಮಾರು 60 ಕಿ.ಮೀ ನಡಿಗೆಯಿಂದ ಕೂಡಿತ್ತು. ಈ ಚಾರಣವು ಬಹುತೇಕವಾಗಿ ದಟ್ಟವಾದ ಕಾಡಿನಲ್ಲಿ ಅನೇಕ ಆರೋಹಣ ಅವರೋಹಣಗಳಿಂದ ಕೂಡಿತ್ತು. ಅನೇಕ ತೊರೆಗಳನ್ನು ದಾಟಿ, ನದಿಯನ್ನು ಬರಿಗಾಲಿನಲ್ಲಿ ದಾಟಿ, ಜುಳು ಜುಳು ಹರಿಯುವ ಸುಂದರ ದೃಶ್ಯ ಹಾಗೂ ಎತ್ತರದಿಂದ ಹರಿಯುವ ಹನುಮಾನ್ ಧಾರ ಮತ್ತು ಲಕ್ಷ್ಮಣ ಧಾರಾ ಜಲಪಾತ, ಹುಲ್ಲುಗಾವಲಿನಲ್ಲಿ ಬಿಡಾರ, ಇವೆಲ್ಲದರ ವೈಶಿಷ್ಟ್ಯಗಳಿಂದ ಕೂಡಿದ ಚಾರಣವು ಅಪೂರ್ವ ಅನುಭವವನ್ನು ನೀಡಿ ನಯನ ಮನೋಹರವಾಗಿತ್ತು.

ಇದಲ್ಲದೇ. ಜುಮು ಜುಮು ಛಳಿಯಲ್ಲಿ ಬಿಡಾರವೊಂದರಲ್ಲಿ ಮೂರು ಚಾರಣಿಗರು (ಚಾರಣಕ್ಕೆ ಮೊದಲು ಪರಸ್ಪರ ಅಪರಿಚಿತರು) ತಮ್ಮ ತಮ್ಮ ನಿದ್ರಾಚೀಲದೊಳಗೆ ತೂರಿಕೊಂಡು ಗೊರಕೆ ಹೊಡೆಯುತ್ತಾ ಮಲಗುವುದು ಒಂದು ವಿಶೇಷವಾದ ಅನುಭವ. ಅನಂತರ ಪರಸ್ಪರರ ಕಾಲೆಳೆಯುತ್ತಾ ಹಾಸ್ಯವನ್ನು ಅನುಭವಿಸುವುದು ಒಂದು ಮರೆಯಲಾಗದ ಅನುಭವ. ಮುಂಜಾನೆ 5ಕ್ಕೇ ಎದ್ದು ಕಾಡಿನ ಮನುಷ್ಯರಂತೆ ನಿತ್ಯ ಕರ್ಮಗಳನ್ನು ಮುಗಿಸಿ, ಜುಮು ಜುಮು ಚಳಿಯಲ್ಲಿ ಒಣ ಕಟ್ಟಿಗೆಗಳನ್ನು ಸೇರಿಸಿ ಬೆಂಕಿ ಹೊತ್ತಿಸಿ ಅದರ ಸುತ್ತಾ ಎಲ್ಲರೂ ನಿಂತು ಕೈಯಲ್ಲಿ ಬಿಸಿ ಬಿಸಿ ಚಹಾದಿಂದ ಕೂಡಿದ ಲೋಟವನ್ನು ಹಿಡಿದು ಹರಟೆ ಹೊಡೆಯುವದು ಅಪೂರ್ವ ಸಂದರ್ಭವೇ ಸರಿ. ಸಾಮೂಹಿಕವಾಗಿ ಬೆಳಗಿನ ಉಪಾಹಾರ ಸೇವಿಸಿ ನಂತರ ಕೈಬುತ್ತಿಯನ್ನು ಪಡೆದು ಚಾರಣ ಪ್ರಾರಂಭಿಸಿದರೆ ದಿನದಲ್ಲಿ 16–18ಕಿ.ಮೀ ನಡೆದು ಮಾರ್ಗ ಮಧ್ಯದಲ್ಲಿ ಮರದ ನೆರಳಿನಲ್ಲೋ ಅಥವಾ ನೀರಿನ ಆಸರೆ ಇರುವ ಜಾಗದಲ್ಲೋ ಕುಳಿತು ಎಲ್ಲರೂ ಆಹಾರ ಸೇವಿಸಿ, ಅನಂತರ ಸಂಜೆಗೆ ಮತ್ತೊಂದು ಶಿಬಿರವನ್ನು ತಲುಪುವುದು. ಸಂಜೆಯ ಚಹಾ ಸೇವನೆಯ ನಂತರ ಸುತ್ತಲಿನ ಕಾಡು ಪ್ರದೇಶದ ವೀಕ್ಷಣೆ. ಇದಾದ ನಂತರ ಎಲ್ಲರೂ ಆಹಾರ ಶಿಬಿರದಲ್ಲಿ ಸೇರಿ, ಅಂತಾಕ್ಷರಿ, ಮೂಕ ಪ್ರದರ್ಶನ, ಮಾಫಿಯಾ ಆಟಗಳನ್ನು ಆಡುತ್ತಾ ಪರಸ್ಪರ ಸಂತೋಷವನ್ನು ಅನುಭವಿಸುವುದೇ ಒಂದು ಅಪೂರ್ವ ಅನುಭವ. ದಟ್ಟವಾದ ಕಾಡಿನೊಳಗಿನ ಕೆಲವು ಸುಂದರ ಸ್ಥಳಗಳು ನಮಗೆ "ಜಂಗಲ್ ಬುಕ್" ಹಾಗೂ "ಮೌಗ್ಲಿಯ ಕಾಡಿನಲ್ಲಿನ ಸಾಹಸ ಕಥೆಗಳು" ಕಾಮಿಕ್ ಕಥೆಗಳಲ್ಲಿ ಕಂಡು ಬರುವ ದೃಶ್ಯಗಳನ್ನು ನೆನಪಿಗೆ ತರುತ್ತಿದ್ದವು.

ಚಾರಣದ ಸಮಯದಲ್ಲಿ ಸ್ವಲ್ಪ ಬಿಡುವು ಮಾಡಿಕೊಂಡು ಎಲ್ಲರೂ ನರ್ಮದಾ ನದಿಯ ಉಗಮ ಸ್ಥಾನಕ್ಕೆ (ಅಮರಕಂಟಕ್ ಪ್ರದೇಶ) ಭೇಟಿ ನೀಡಿದ್ದು ಒಂದು ಅವಿಸ್ಮರಣೀಯ ಅನುಭವ.

ಅಪರಿಚಿತರಾಗಿ ಒಂದೆಡೆ ಸೇರಿ, ಪರಸ್ಪರ ಅನೇಕ ವೈಯುಕ್ತಿಕ ಅನುಭವಗಳನ್ನು ಹಂಚಿಕೊಂಡು, ಒಟ್ಟಾಗಿ ಒಂದೆಡೆ ಬಿಡಾರ ಹೂಡಿ, ಒಂದೆಡೆ ಆಹಾರವನ್ನು ಸೇವಿಸಿ. ಒಟ್ಟಿಗೆ ಅಪರಿಚಿತ ಜಾಗಗಳಲ್ಲಿ ಚಾರಣ ಮಾಡಿ ಕಡೆಗೆ ಪರಸ್ಪರರನ್ನು ಅಗಲಬೇಕಾಗುವ ಸಂದರ್ಭವು ಅವಿಸ್ಮರಣೀಯವಾದದ್ದು ಹಾಗೂ ಪರಸ್ಪರರ ಊರುಗಳಿಗೆ ಆಹ್ವಾನ ನೀಡುವುದು ಮತ್ತು ಮತ್ತೊಮ್ಮೆ ಒಟ್ಟಿಗೆ ಚಾರಣ ಮಾಡುವುದರ ಬಗ್ಗೆ ಪರಸ್ಪರ ಚರ್ಚಿಸುವುದು, ಇವುಗಳು ಸಾಮಾನ್ಯವಾಗಿ ಜರುಗುವ ಘಟನೆಗಳು. ಇವೆಲ್ಲವೂ ಈ ಚಾರಣದಲ್ಲೂ ಜರುಗಿದವು.

ಚಾರಣದ ನಂತರ ನಾನು ರಾಯಪುರದಲ್ಲಿರುವ ಛತ್ತೀಸ್–ಘಡ್ ಪ್ರವಾಸೋದ್ಯಮ ಕಚೇರಿಗೆ ಹೋಗಿ ಅವರೊಂದಿಗೆ ನನ್ನ ಚಾರಣದ ಅನುಭವಗಳನ್ನು ಹಂಚಿಕೊಂಡು ಕೆಲವು ಸಲಹೆಗಳನ್ನೂ ನೀಡಿ ಬಂದೆ.

ತಿರುವಣ್ಣಾಮಲೈಯಲ್ಲಿನ ಅರುಣಾಚಲ ಬೆಟ್ಟದ ಪರಿಕ್ರಮ

ಕಾರ್ತಿಕ ಮಾಸದಲ್ಲಿ ನನ್ನ ಮಿತ್ರ ರವೀಂದ್ರನೊಂದಿಗೆ ಅತ್ಯಂತ ಪುರಾತನ ಹಾಗೂ ಸುಪ್ರಸಿದ್ಧ ಕ್ಷೇತ್ರಕ್ಕೆ ಹೋಗುವ ಅವಕಾಶವೊದಗಿತು. ಆ ಕ್ಷೇತ್ರವೇ ತಿರುವಣ್ಣಾಮಲೈ ಪಟ್ಟಣದಲ್ಲಿರುವ ಅಣ್ಣಾಮಲೈ ಅರುಣಾಚಲೇಶ್ವರ ಕ್ಷೇತ್ರ. ಈ ಕ್ಷೇತ್ರದ ವಿಶೇಷವೆಂದರೆ ಅರುಣಾಚಲದ ಪರಿಕ್ರಮ. ಕಾರ್ತಿಕ ಮಾಸದಲ್ಲಿನ ಈ ಕ್ಷೇತ್ರದ ಪ್ರದಕ್ಷಿಣಾ ಪರಿಕ್ರಮ ಪ್ರವಾಸವು ನನಗೆ ಹತ್ತನೇ ಬಾರಿಯದಾಗಿದ್ದರೆ, ನನ್ನ ಮಿತ್ರ ರವೀಂದ್ರನಿಗೆ ಇದು ನಾಲ್ಕನೇ ಬಾರಿ. ಈ ಕ್ಷೇತ್ರದ ಪ್ರವಾಸದಲ್ಲಿನ ಮತ್ತೊಂದು ಪ್ರಮುಖ ಹಾಗೂ ದೈವೀ ಆಕರ್ಷಣೆಯೆಂದರೆ ಅರುಣಾಚಲ ಬೆಟ್ಟದಲ್ಲಿರುವ ವಿರೂಪಾಕ್ಷ ಗುಹೆಗೆ ಹತ್ತಿ ಹೋಗಿ ಅಲ್ಲಿ ಧ್ಯಾನವನ್ನು ಮಾಡುವುದು. ಇದು ನನ್ನ ಅತಿ ಮಹತ್ತರವಾದ ಕಾರ್ಯವೆಂದರೆ ತಪ್ಪಾಗಲಾರದು. ಈ ಕಾರ್ಯವನ್ನು ನಾನು ಪ್ರತಿಬಾರಿಯೂ ಮಾಡಿಕೊಂಡು ಬಂದಿರುವೆ.

ಅರುಣಾಚಲ ಕ್ಷೇತ್ರದಲ್ಲಿ ನಮಗೆ ಅರುಣಾಚಲೇಶ್ವರ ಹಾಗೂ ಮಾತೆ ಅಪಿತ ಕುಚಂಬ ದೇವಿಯ ದರ್ಶನದ ಅವಕಾಶವು ಮೂರು ಬಾರಿ ಒದಗಿಬಂದಿತು. ಮೂರೂ ಬಾರಿಯೂ ನಮಗೆ ವಿವಿಧ ರೀತಿಯ ದರ್ಶನವು ಆಯಿತು. ಮೊದಲ ಬಾರಿ ಅರುಣಾಚಲನ ಪಂಚಾಮೃತಾಭಿಷೇಕದ ದರ್ಶನವಾದರೆ, ಮಾತೆಯ ಸರ್ವಾಲಂಕೃತ ದರ್ಶನವಾಯಿತು. ಎರಡನೆಯ ಬಾರಿಯ ದರ್ಶನದಲ್ಲಿ ಅರುಣಾಚಲನ ಅಲಂಕೃತ ರೂಪವು ದರ್ಶನವಾದರೆ, ಮಾತೆಯ ಪಂಚಾಮೃತ ಅಭಿಷೇಕದ ದರ್ಶನವಾಯಿತು ಹಾಗೂ ಮೂರನೇ ಬಾರಿ ಕಾರ್ತಿಕ ಶುಕ್ಲ, ಏಕಾದಶಿ, ಶುಕ್ರವಾರದಂದು ಅರುಣಾಚಲನ ಸರ್ವಾಲಂಕಾರದ ದರ್ಶನವಾದರೆ ದೇವಿಯ ಕಾರ್ತಿಕ ಶುಕ್ರವಾರದ ವಿಶೇಷ ಅಲಂಕಾರದ ದರ್ಶನವಾಯಿತು. ದರ್ಶನದ ನಂತರ ನನ್ನ ಸ್ನೇಹಿತ ರವೀಂದ್ರನು ದೇವಸ್ಥಾನದ ಮಂಟಪವೊಂದರಲ್ಲಿ ಕುಳಿತು ರುದ್ರಪಾಠ, ಶ್ರೀಸೂಕ್ತ, ಶಿವಾಷ್ಟೋತ್ತರಗಳನ್ನು ಪಠಿಸಿ ಶಿವನಿಗೆ ತನ್ನ ಸೇವೆಯನ್ನು ಸಲ್ಲಿಸಿದನು.

ಶುಕ್ರವಾರದಂದು ಮುಂಜಾನೆ 8 ಘಂಟೆಗೆ ನಾನೊಬ್ಬನೇ (ನನ್ನ ಮಿತ್ರ ರವೀಂದ್ರನಿಗೆ ಕಾಲು ನೋವು ಹೆಚ್ಚಾದದ್ದರಿಂದ) ಅರುಣಾಚಲ ಬೆಟ್ಟವನ್ನು ಹತ್ತಿ ಅಲ್ಲಿನ "ಮಾವಿನ ಮರದಲ್ಲಿನ ಗುಹೆ"ಯೊಳಗೆ ಪ್ರವೇಶಿಸಿ ಅಲ್ಲಿ ಕೆಲವು ನಿಮಿಷ

ಧ್ಯಾನ ಮಾಡಿ ನಂತರ ಇನ್ನಷ್ಟು ಮೇಲೆ ಹತ್ತಿ ಮುಖ್ಯವಾದ ವಿರೂಪಾಕ್ಷ ಗುಹೆಯನ್ನು ಪ್ರವೇಶಿಸಿದೆ (ಈ ವಿರೂಪಾಕ್ಷ ಗುಹೆಯಲ್ಲೇ ಭಗವಾನ್ ರಮಣ ಮಹರ್ಷಿಗಳು 17 ವರ್ಷ ವಾಸಿಸಿದ್ದರು ಹಾಗೂ ತಪಸ್ಸನ್ನಾಚರಿಸಿದ್ದು). ಗುಹೆಯನ್ನು ಪ್ರವೇಶಿಸಿ ಧ್ಯಾನ ಪ್ರಕ್ರಿಯೆಯನ್ನು (ಮಾನಸಿಕವಾಗಿ ಶಿವಪಂಚಾಕ್ಷರಿ ಮಂತ್ರ ಪಠಣ) ಪ್ರಾರಂಭಿಸಿ 5 ನಿಮಿಷಗಳವರೆಗೂ ಶರೀರದಾದ್ಯಂತ ಬೆವರು ಹರಿಯಲು ಆರಂಭಿಸಿದರೂ. ನಾನು ಇದರ ಬಗ್ಗೆ ಯಾವುದೇ ಕಾಳಜಿಯನ್ನು ವಹಿಸದೆ ಬೆವರಿನಿಂದಾಗುವ ಕಿರಿಕಿರಿಯನ್ನು ಕಡೆಗಣಿಸಿ ಮಂತ್ರ ಪಠಣದ ಮೂಲಕ ಧ್ಯಾನವನ್ನು ಮುಂದುವರೆಸಿದೆ. ಮತ್ತೈದು ನಿಮಿಷ ಕಳೆದ ಮೇಲೆ ನನ್ನ ಶರೀರವು ಸಾಧಾರಣ ಸ್ಥಿತಿಗೆ ಮರಳಿ (ಬೆವರುವುದು ತಂತಾನೆ ನಿಂತಿತು). ಇಲ್ಲಿಂದ ಧ್ಯಾನದ ಮುಂದಿನ ಹಂತವೇ ಮುಖ್ಯವಾದದ್ದು. ಈ ಹಂತದಲ್ಲಿ ನನ್ನ ಮನಸ್ಸು ಸುತ್ತಲಿನ ಪರಿಸರವನ್ನು ದಾಟಿ ಊರ್ಧ್ವಮುಖವಾಗಿ ಚಲಿಸುತ್ತಿರುವಂತೆ ಭಾಸವಾಗುತ್ತಿತ್ತು. ಕೆಳಗಿನ ಯಾವ ಶಬ್ದವು ನನ್ನ ಗಮನಕ್ಕೆ ಬಾರದೆ ಉರ್ಧ್ವಮುಖವಾಗಿ ಚಲಿಸುತ್ತಿದ್ದ ಮನಸ್ಸಿನೆಡೆಗೆ ಮಾತ್ರ ಇತ್ತು. ಹೀಗೆ ಮೇಲೆ ಮೇಲೆ ಹೋಗುತ್ತಾ ಮೋಡಗಳನ್ನೂ ದಾಟಿ ಇನ್ನೂ ಮೇಲೆ ಹೋಗುತ್ತಿರುವಂತೆ ಭಾಸವಾಗತೊಡಗಿತು. ಕೊನೆಗೆ ಒಂದು ವಿಶಾಲವಾದ ಹಾಗೂ ಪ್ರಶಾಂತವಾದ ಪ್ರದೇಶವನ್ನು ತಲುಪಿ ಅಲ್ಲಿನ ಒಂದು ಅತಿ ದೂರದಲ್ಲಿ ಪ್ರಕಾಶಮಾನವಾದ ಬೆಳಕೊಂದು ಗೋಚರಿಸಿದಂಥ ಅನುಭವವಾಯಿತು. ಇದಾದ ನಂತರ ನನ್ನ ಮನಸ್ಸು ನಿಧಾನವಾಗಿ ಅಧೋಮುಖವಾಗಿ ಚಲಿಸುತ್ತಿರುವಂತೆ ಅನಿಸಿತು. ಕೆಲವು ನಿಮಿಷಗಳ ನಂತರ ಗುಹೆಯೊಳಗಿನ ವಾತಾವರಣವನ್ನು ಮನಸ್ಸು ಪ್ರವೇಶಿಸಿ ನಾನು ಕಣ್ತೆರೆಯುವಂತೆ ಮಾಡಿತು. ಈ ರೀತಿಯ ಅಲೌಕಿಕ ಹಾಗೂ ಅತೀಂದ್ರಿಯ ಅನುಭವವು ನನಗೆ ಹಿಂದೆಂದೂ ಆಗಿರಲಿಲ್ಲ. ಈ ಅನುಭವದಿಂದ ನನಗೆ ಅನಿಸಿದ್ದೇನೆಂದರೆ ಈ ವಿರೂಪಾಕ್ಷ ಗುಹೆಯಲ್ಲಿ ಅತ್ಯಂತ ಪ್ರಬಲವಾದ ದೈವೀ ಕಂಪನಗಳು ಇರುವುದೆಂದು. ಇದರ ಬಗ್ಗೆ ನಾನು "ಅರುಣಾಚಲನ ಮಹಾತ್ಮೆ" ಗ್ರಂಥದಲ್ಲಿ ಓದಿದ್ದೆ ಹಾಗೂ ಅದರ ಅನುಭವವು ನನಗೆ ಅಂದು ಆಯಿತು. ಇದೇ ರೀತಿಯ ಕಂಪನಗಳನ್ನು ನಾವು ಬೇರೆ ಬೇರೆ ಕಾಲಗಳಲ್ಲಿ ಗಿರಿಪ್ರದಕ್ಷಿಣೆ ಮಾಡಿದಾಗಲೂ ಅನುಭವಿಸಬಹುದು. ಉದಾಹರಣೆಯೆಂದರೆ ಹುಣ್ಣಿಮೆಯ ರಾತ್ರಿಯಂದು ಗಿರಿ ಪ್ರದಕ್ಷಿಣೆಯನ್ನು ಮಾಡುತ್ತಿರುವಾಗ ಸಿದ್ಧರು ಹಾಗೂ ಚಾರಣರು ಅದೃಶ್ಯರೂಪದಲ್ಲಿ ಸಂಚರಿಸುತ್ತಿರುವ ಅನುಭವ. ಈ ಅನುಭವವು ಹಲವರಿಗೆ ಬೇರೆ ಬೇರೆ ರೀತಿಯಲ್ಲಿ ಉಂಟಾಗಿರುವುದು ಹಾಗೂ ನಾನೂ ಕೂಡ ಒಮ್ಮೆ ನನ್ನ ಹುಣ್ಣಿಮೆಯ ಪರಿಕ್ರಮದಲ್ಲಿ ಈ ಅನುಭವವನ್ನು ಪಡೆದುಕೊಂಡಿರುವೆ.

ಮಾಂಧಾತ ಪರ್ವತ ಪರಿಕ್ರಮ (ಗೀತಾ ಪರಿಕ್ರಮ)

ನಾನು ಮತ್ತು ಬಿ.ವಿ.ರಮೇಶ್ ನವೆಂಬರ್ 9, 2019ರಿಂದ ನಾಲ್ಕು ಜ್ಯೋತಿರ್ಲಿಂಗ ಕ್ಷೇತ್ರಗಳಿಗೆ ಪ್ರವಾಸಮಾಡಲು ತೀರ್ಮಾನಿಸಿ ಮೊದಲಿಗೆ ಉಜ್ಜಯನಿ ಕ್ಷೇತ್ರಕ್ಕೆ ಹೋಗಿ ಅಲ್ಲಿಂದ ಕಾರ್ತಿಕ ಚತುರ್ದಶಿ, ಸೋಮವಾರ ನವೆಂಬರ್ 11 ರಂದು ಓಂಕಾರೇಶ್ವರ್ ಕ್ಷೇತ್ರಕ್ಕೆ ಹೋಗಿ ಅಲ್ಲಿ ಓಂಕಾರೇಶ್ವರನ ದರ್ಶನ ಮಾಡಿಕೊಂಡು ಆ ದಿನ ರಾತ್ರೆ ಅಲ್ಲೇ ಉಳಿದುಕೊಂಡೆವು.

ಮಾರನೇ ದಿನ ಅಂದರೆ ಕಾರ್ತಿಕ ಹುಣ್ಣಿಮೆ, ಮಂಗಳವಾರ, 12, ನಾವು ಮುಂಜಾನೆಯೇ ಓಂಕಾರೇಶ್ವರ ಕ್ಷೇತ್ರದಿಂದ ಇಂದೋರಿಗೆ ಹೊರಟುಬಿಡಲು ತೀರ್ಮಾನಿಸಿ, ಅದರಂತೆ ಬೆಳಗ್ಗೆ 6.00 ಘಂಟೆಗೆ ತಯಾರಾಗಿದ್ದೆವು. ರಮೇಶ್ ರೂಮಿನಿಂದ ಹೊರಗೆ ಬಂದಾಗ ಅಲ್ಲಿ ಕೆಲವರು ಓಂಕಾರ ಪರ್ವತ ಪರಿಕ್ರಮದ ಬಗ್ಗೆ ಮಾತನಾಡಿಕೊಳ್ಳುತ್ತಿರುವುದನ್ನು ಕೇಳಿಸಿಕೊಂಡರು. ನಂತರ ಅವರು ಆ ವಿಷಯವನ್ನು ನನಗೆ ತಿಳಿಸಿ, ನಾವುಗಳೂ ಏಕೆ ಪರಿಕ್ರಮವನ್ನು ಮಾಡಬಾರದು ಎಂದು ಕೇಳಿದರು. ಪರಿಕ್ರಮದ ಹಾದಿಯು 7 ಕಿ.ಮೀ ದೂರದ್ದಾಗಿತ್ತು ಹಾಗೂ ಇದನ್ನು ಮುಗಿಸಲು ಸುಮಾರು 2 ಘಂಟೆ ಆಗುತ್ತಿತ್ತು. ಕೂಡಲೇ ನಾನು ಇದಕ್ಕೆ ಸಮ್ಮತಿಸಿ ಇಬ್ಬರೂ ಹೊರಟೇಬಿಟ್ಟೆವು. ಈ ಪರಿಕ್ರಮದ ಹೆಸರು – ಓಂಕಾರೇಶ್ವರ ಪರಿಕ್ರಮ. ಮಂದಿರ ಅಥವಾ ಪರ್ವತವನ್ನು ಮಂತ್ರ ಪಠನದೊಂದಿಗೆ ಬಲಮುಖವಾಗಿ (clockwise) ಪ್ರದಕ್ಷಿಣೆ ಅಥವಾ ಸುತ್ತುವುದನ್ನು ಪರಿಕ್ರಮ ಎನ್ನಬಹುದು. ಈ ಪರಿಕ್ರಮವನ್ನು ಗೀತಾ ಪರಿಕ್ರಮ ಪಥ ಎಂದು ಕರೆಯಲಾಗುವುದು. ಏಕೆಂದರೆ ಪ್ರತಿ ನೂರು ಹೆಜ್ಜೆಗೂ ಫಲಕಗಳನ್ನು ನಿರ್ಮಿಸಿ ಪ್ರತಿ ಫಲಕದಲ್ಲೂ ಎರಡು ಗೀತಾ ಶ್ಲೋಕ ಹಾಗೂ ಅದರ ವಿವರಣೆಗಳನ್ನು ಕೆತ್ತಿರುವರು. ಈ ಪರಿಕ್ರಮ ಪಥವನ್ನು ಮಧ್ಯಪ್ರದೇಶ ರಾಜ್ಯ ಪರ್ಯಟನ ವಿಕಾಸ ನಿಗಮದವರು ನಿರ್ಮಿಸಿರುವರು.

ಗೀತಾ ಪರಿಕ್ರಮ ಪಥ

ಪರಿಕ್ರಮವು ಓಂಕಾರೇಶ್ವರ ಮಂದಿರಕ್ಕೆ ಹೋಗುವ ಸೇತುವೆಯ ಮಗ್ಗುಲಲ್ಲೇ ಪ್ರಾರಂಭವಾಗುವುದು. ಸ್ವಲ್ಪ ದೂರ ಮೆಟ್ಟಲುಗಳನ್ನು ಹತ್ತಿ ಇಳಿದು ನಡೆದ ನಂತರ ನಾವು ನರ್ಮದಾ ನದಿಯ ಸನಿಹದಲ್ಲೇ ಜನಗಳು ಹಾಗೂ ಹಸುಗಳೊಂದಿಗೆ ನಡೆಯತೊಡಗಿದೆವು. ಎಡಭಾಗದಲ್ಲಿ ನಮಗೆ ನರ್ಮದಾ ನದಿಯ ಹಾಗೂ

ದಡದಲ್ಲಿನ ಪ್ರಕೃತಿಯ ಸುಂದರ ದೃಶ್ಯಗಳು ಕಂಡುಬರುತ್ತದೆ. ಮಾರ್ಗದಲ್ಲಿ ಹಲವಾರು ಮಂದಿರಗಳು ನಮಗೆ ನೋಡಲು ಸಿಕ್ಕವು. 45 ನಿಮಿಷ ನಡೆದ ಮೇಲೆ ನಾವು ನರ್ಮದಾ – ಕಾವೇರಿ ಸಂಗಮವನ್ನು ತಲುಪಿದೆವು. ಹಾಗೆ ನೋಡಿದರೆ ನಾವು ಈ ಸಂಗಮದಲ್ಲಿ ಸ್ನಾನ ಮಾಡಬೇಕಿತ್ತು. ಆದರೆ ಹಿಂದಿನ ದಿನ ಮಧ್ಯಾಹ್ನವೇ ನಾವು ನರ್ಮದಾ ತಟದಲ್ಲಿ ಸ್ನಾನಮಾಡಿದ್ದವು. ಈ ಸ್ಥಳದಿಂದ ದ್ವೀಪದ ತುದಿಯು ಸಂಸ್ಕೃತದ 'ಓಂ' (ॐ) ಅಕ್ಷರದಂತೆ ಕಾಣಿಸುವುದು. ಹತ್ತಿರದಲ್ಲಿ ನಾವು "ಋಣ ಮುಕ್ತೇಶ್ವರ" ಮಂದಿರವನ್ನು ನೋಡಿದೆವು. ಇಲ್ಲಿನ ಸಂಗಮದಲ್ಲಿ ಸಿಗುವ ಕಲ್ಲುಗಳೆಲ್ಲ ಶಿವನ ಲಿಂಗವೇ. ಇದನ್ನು "ಬಾಣ ಲಿಂಗ" ಎಂದು ಕರೆಯುವರು. ಇಲ್ಲಿಂದ ಮುಂದಿನ ಹಾದಿಯು ಕುತೂಹಲಕರವಾಗಿತ್ತು. ನಾವು ಒಂದು ಶಿಥಿಲವಾದ ದ್ವಾರಮಂಟಪವನ್ನು ಪ್ರವೇಶಿಸಿದೆವು. ಇದನ್ನು "ಧರ್ಮರಾಜ ದ್ವಾರ" ಎನ್ನುವರು. ಇಲ್ಲಿಂದ ಕೋತಿಗಳು ಬಹಳ ಎದುರಾಗುವುವು. ಸ್ವಲ್ಪ ದೂರ ನಡೆದ ಮೇಲೆ ನಮಗೆ ಒಂದು ಸುಂದರ ದೇವಾಲಯವು ಎದುರಾಯಿತು. ಅದೇ ಗೋರಿ ಸೋಮನಾಥ ಮಂದಿರ. ಇದು ಅತ್ಯಂತ ಸುಂದರವಾದ ಮಂದಿರ. ಚರಿತ್ರೆಯ ಪ್ರಕಾರ ಔರಂಗ್ ಝೇಬನು ಈ ಮಂದಿರದಲ್ಲಿನ ಲಿಂಗವನ್ನು ನೋಡಲು ಬಂದಾಗ ಇಲ್ಲಿನ ಶ್ವೇತ ಲಿಂಗವು ಕಪ್ಪಾಯಿತೆಂದು ಹೇಳುವರು. ಇಂತಹ ಸುಂದರ ಸ್ಥಳಕ್ಕೆ ಬರಲು ಶಕ್ತಿಯನ್ನು ನೀಡಿದ ಶಿವನಿಗೆ ನಮಸ್ಕರಿಸುವ ಮುನ್ನ ನನ್ನ ಕೈಗಳು ಘಂಟೆಯನ್ನು ಹಿಡಿಯಲು ಮುಂದಾದವು. ಇಲ್ಲಿಂದ ಹಿಂದೆ ತಿರುಗಿ ನೋಡಿದಾಗ ನಾನು ದಿಗ್ಭ್ರಾಂತನಾದೆ. ಏಕೆಂದರೆ ನನಗೆ ಕಂಡಿದ್ದು 90 ಅಡಿ ಎತ್ತರದ ನನ್ನೆಡೆಗೆ ಕರುಣೆಯಿಂದ ನೋಡುತ್ತಿರುವ ಶಿವನ ಮೂರ್ತಿ. ಶಿವನಿಗೆ ಭಕ್ತಿಯಿಂದ ನಮಸ್ಕರಿಸಿದೆ. ಈ ವಿಗ್ರಹವು ನಾವು ಇದ್ದ ಧರ್ಮಶಾಲೆಯಿಂದಲೇ ಕಂಡುಬರುತ್ತಿತ್ತು.

ಅಲ್ಲಿಂದ ಸ್ವಲ್ಪ ದೂರ ಬಂದ ಮೇಲೆ ನಮಗೆ ಒಂದು ಪಾಳುಬಿದ್ದ ಹಾಗೂ ಅರಿಶಿನದಿಂದ ಮೆತ್ತಿರುವ ಕೆಲವು ವಿಗ್ರಹಗಳು ಎದುರಾದವು. ಇದು ನಮ್ಮ ಪರಿಕ್ರಮದಲ್ಲಿನ ಅತಿ ಎತ್ತರ ಪ್ರದೇಶ. ಇಲ್ಲಿಂದ ತೀವ್ರ ಇಳಿತದಿಂದ ಕೂಡಿದ ಮೆಟ್ಟಲುಗಳು ಎದುರಾದವು. ಈ ಮೆಟ್ಟಲುಗಳು ನಮ್ಮನ್ನು ಮತ್ತೊಂದು ಬಾಗಿಲಿಗೆ ಕೊಂಡೊಯ್ದಿತು. ಆ ಬಾಗಿಲನ್ನು ಸೂರಜ್-ಚಾಂದ್ ಬಾಗಿಲು ಎಂದು ಕರೆಯುವರು. ಇಲ್ಲಿ ಒಂದು ASI ಪೆಟ್ಟಿಗೆಯ ಮೇಲೆ ಸೋಲಾರ್ ಪೇನಲ್ ಇರುವುದನ್ನು ಕಂಡೆವು.

ಎಡಭಾಗದಲ್ಲಿ ಅತಿ ಸುಂದರವಾದ ದೇವಾಲಯದ ಅವಶೇಷಗಳು ಕಂಡುಬಂದವು. ಇದನ್ನು ಸಿದ್ದೇಶ್ವರ ಶಿವ ದೇವಾಲಯವೆನ್ನುವರು. ನಾನು ಹಾಗೂ ರಮೇಶ್ ಇಬ್ಬರೂ ಈ ಮಂದಿರವನ್ನು ಸುತ್ತಿ ಬಳಸಿ ಕೆಳಗಿಳಿದು ಬರುವಾಗ

ಇದ್ದಕ್ಕಿದ್ದಂತೆ ಒಂದು ದೊಡ್ಡ ಕೋತಿಯು ರಮೇಶನ ಮೇಲೆ ಎಗರಿ ಅಲ್ಲಿಂದ ಮುಂದೆ ಓಡಿಹೋಯಿತು. ಗಾಭರಿಯಾದ ರಮೇಶನು ತನ್ನ ಕೈಯಲ್ಲಿದ್ದ ಮೊಬೈಲನ್ನು ಕೆಳಗೆ ಬೀಳಿಸಿ ತಾನೂ ಬಿದ್ದನು. ಪುಣ್ಯಕ್ಕೆ ಯಾವುದೇ ಅಪಾಯವಾಗಲಿಲ್ಲ. ಇಲ್ಲಿಂದ ಕೆಳಗಿನ ದೃಶ್ಯವು ಸ್ವರ್ಗವನ್ನೇ ಹೋಲುತ್ತಿತ್ತು. ಇಲ್ಲೇ ನಾವಿಬ್ಬರೂ ಸ್ವಲ್ಪಹೊತ್ತು ಕುಳಿತು ವಿಶ್ರಾಂತಿಯನ್ನು ಪಡೆದು ಮುಂದೆ ನಡೆದೆವು. ಸ್ವಲ್ಪ ಮುಂದೆ ಹೋದಾಗ ನಮಗೆ ಓಂಕಾರೇಶ್ವರ ಅಣೆಕಟ್ಟು ಕಂಡುಬಂದಿತು.

ಇಲ್ಲಿಂದ ಕೆಲವು ಮೆಟ್ಟಲುಗಳ ಮೂಲಕ ಇಳಿದು ಕಚ್ಚಾ ರಸ್ತೆಯಲ್ಲಿ ಮೇಲೆಹೋದರೆ ನಮ್ಮನ್ನು ದೇವಸ್ಥಾನದೆಡೆಗೆ ಕೊಂಡೊಯ್ಯುವುದು ಹಾಗೂ ಕೆಳಗೆ ಹೋದರೆ ಅದು ನದಿಯ ದಡಕ್ಕೆ ಹೋಗುವುದು. ನಾವು ನೇರವಾಗಿ ಮಂದಿರವನ್ನು ತಲುಪಿ ನಂತರ ಹಿಂದಿನ ದಿನ ನಮಗೆ ವಿಶೇಷ ದರ್ಶನ ಮಾಡಿಸಿದ್ದ ಪಂಡಿತರನ್ನು ಫೋನ್ ಮೂಲಕ ಕರೆದು ಅವರ ಸಹಾಯದಿಂದ ಓಂಕಾರೇಶ್ವರನ ದರ್ಶನವನ್ನು ಮೂರನೇ ಬಾರಿ ಮಾಡಿದೆವು.

ನಗರ ಪ್ರದೇಶದಿಂದ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿಕೊಡುವ ಅನೇಕ ಹಿಂದೂಗಳು ಸುಖಕರ ಪ್ರಯಾಣ ಹಾಗೂ ಕ್ಷೇತ್ರಗಳಲ್ಲಿ ಹೆಚ್ಚಿನ ಸೌಕರ್ಯಗಳನ್ನು ಬಯಸುತ್ತಾರೆ. ಅಷ್ಟೇ ಅಲ್ಲದೆ ಮಂದಿರಗಳಲ್ಲಿ ಶೀಘ್ರದರ್ಶನದ ಸೌಕರ್ಯಕ್ಕೆ ಮೊರೆಹೋಗುವರು. ಇವರಿಗೆ ಹೋಲಿಸಿದಲ್ಲಿ ಗ್ರಾಮೀಣ ಪ್ರದೇಶದಿಂದ ಬರುವ ಭಕ್ತರು ಬಸ್ಸಿನಲ್ಲಿ ಅಥವಾ ಟೆಂಪೊಗಳಲ್ಲಿ ಪ್ರಯಾಣ ಮಾಡಿ ಕಡಿಮೆ ಸೌಕರ್ಯಕ್ಕೂ ಹೊಂದಿಕೊಂಡು, ಮಂದಿರಗಳಲ್ಲಿ ಎಷ್ಟೇ ಹೊತ್ತಾದರೂ ಧರ್ಮ ದರ್ಶನ ಅಥವಾ ಸಾಮಾನ್ಯ ದರ್ಶನಕ್ಕೆ ಮೊರೆಹೋಗುವರು. ಹಾಗೂ ಈ ರೀತಿಯ ಭಕ್ತರು ಪ್ರತಿಯೊಂದು ವಿಗ್ರಹಗಳ ಮೇಲೂ ಒಂದೆರಡು ಹೂವುಗಳನ್ನು ಇಡುತ್ತಾ ತಮ್ಮ ಭಕ್ತಿಯನ್ನು ಪ್ರಕಟಪಡಿಸುವರು. ಈ ಜನಗಳಿಗೆ ದೇವರನ್ನು ಮಾತ್ರವಲ್ಲದೆ ಹಾದಿಯಲ್ಲಿ ಎದುರಾಗುವ ಹಸುಗಳು, ಕೋತಿಗಳೂ ದೈವಸಮಾನ. ಹಸುವಿನಲ್ಲಿ ಅನೇಕ ದೇವತೆಗಳನ್ನು ಗುರುತಿಸಿದರೆ, ಕೋತಿಗಳನ್ನು ಹನುಮಂತನ ಅವತಾರವೆಂದು ನಂಬುವರು ಹಾಗೂ ಆ ಪ್ರಾಣಿಗಳಿಗೆ ತಪ್ಪದೆ ತಮ್ಮಲ್ಲಿರುವ ಆಹಾರವನ್ನು ನೀಡುವರು. ಈ ರೀತಿಯ ವರ್ತನೆಯು ಅವರು ಧರ್ಮಮಾರ್ಗಗಳಲ್ಲಿ ಇಟ್ಟಿರುವ ನಂಬಿಕೆ ಹಾಗೂ ಶ್ರದ್ಧೆಗಳನ್ನು ಪ್ರತಿಬಿಂಬಿಸುತ್ತವೆ.

ಇದರೊಂದಿಗೆ ಓಂಕಾರೇಶ್ವರ ಜ್ಯೋತಿರ್ಲಿಂಗ ಯಾತ್ರೆಯು ನಮಗಿಬ್ಬರಿಗೂ ಸಂಪನ್ನವಾಯಿತು. ಸಂತೋಷದಿಂದ ರೂಮಿಗೆ ಮರಳಿ ಬಂದು ನಮ್ಮ ಚೀಲಗಳನ್ನು ತೆಗೆದುಕೊಂಡು ಬಸ್ ನಿಲ್ದಾಣಕ್ಕೆ ಬಂದು ಇಂದೋರಿಗೆ ಪ್ರಯಾಣವನ್ನು ಮಾಡಿದೆವು.

ಅಧ್ಯಾಯ - 4

ಅಮೆರಿಕದಲ್ಲಿನ ಚಾರಣಗಳು

ಯೊಸ್ಸೈಮೇಟ್ ರಾಷ್ಟ್ರೀಯ ಉದ್ಯಾನವನ

2016, ಏಪ್ರಿಲ್ 22 ರಂದು ಸ್ಯಾನ್ ಫ್ರಾನ್ಸಿಸ್ಕೊಗೆ ವಿಮಾನದಲ್ಲಿ ಬಂದು ಅಲ್ಲಿಂದ 40 ಮೈಲಿ ದೂರದ ಸನ್ನಿವೇಲ್ ನಗರದಲ್ಲಿರುವ ನನ್ನ ಮಗನ ಮನೆಗೆ ತಲುಪಿದೆ. ಕೆಲವು ದಿನಗಳ ವಿಶ್ರಾಂತಿಯ ನಂತರ ನಾನು ಒಂದು ಪರ್ವತಾರೋಹಣವನ್ನು ಮಾಡಲು ತೀರ್ಮಾನಿಸಿ ಅದರಂತೆ YOSEMITE ರಾಷ್ಟ್ರೀಯ ಉದ್ಯಾನದಲ್ಲಿರುವ 8100 ಅಡಿ ಎತ್ತರದ ಉತ್ತರದ ಅಂಚಿನಲ್ಲಿನ ಅರ್ಧ ಗೋಳಾಕಾರದ ಅಗಾಧವಾದ ಬಂಡೆಯೆಡೆಗೆ ಚಾರಣಮಾಡಲು ತೀರ್ಮಾನಿಸಿ ಅದನ್ನು ನಡೆಸಿಕೊಡುವ ಟ್ರೆಕ್ಕಿಂಗ್ ಸಂಸ್ಥೆಯನ್ನು ಸಂಪರ್ಕಿಸಿ ಅವರು ನಡೆಸಿಕೊಡುವ ನಾಲ್ಕು ದಿನಗಳ ಚಾರಣದಲ್ಲಿ ಭಾಗವಹಿಸಲು 600 US$ ಪಾವತಿಸಿದೆ. ಈ ಕಾರ್ಯಕ್ರಮವು ಜೂನ್ ಎರಡರಂದು ಪ್ರಾರಂಭ ಆಗುವುದರಿಂದ ಅಲ್ಲಿಯವರೆಗೂ ಈ ಊರಿನ ಸುತ್ತಮುತ್ತಲಿನ ಟ್ರೈಲ್ ಗಳಲ್ಲಿ ಸುತ್ತಾಡಲು ತೀರ್ಮಾನಿಸಿದೆ.

ಯೊಸ್ಸೈಮೇಟ್ ಪ್ರದೇಶವನ್ನು ಹೀಗೆಂದು ಬಣ್ಣಿಸಲಾಗಿದೆ

"ಇದು ಅಗಾಧವಾದ ಕಣಿವೆಯಷ್ಟಲ್ಲದೆ ಒಂದು ಮಾನವನ ದೂರದರ್ಶಿತ್ವದ ಪೂಜಾಮಂದಿರ, ಶಕ್ತಿಯುತವಾದ ಪೆಡಸು ಕಲ್ಲಿನ ಶಕ್ತಿ (strength of Granite), ಹಿಮನದಿಯ ಶಕ್ತಿ, ನಿರಂತರ ಜೀವನ, ಅತಿ ಎತ್ತರದ ಬೆಟ್ಟಸಾಲಿನಲ್ಲಿನ ಪ್ರಶಾಂತತೆ"

ಯೋಸೆಮೈಟ್ ರಾಷ್ಟ್ರೀಯ ಉದ್ಯಾನವನ್ನು 1864ರಲ್ಲಿ ಸುರಕ್ಷಿತ ಅಭಯಾರಣ್ಯವೆಂದು ಅಮೆರಿಕಾ ಸರ್ಕಾರವು ಘೋಷಿಸಿತು. ಈ ಉದ್ಯಾನವು 1200 ಚದರ ಮೈಲಿ ವಿಸ್ತೀರ್ಣವಿದ್ದು, ಇಲ್ಲಿ ಆಳವಾದ ಕಣಿವೆಗಳು, ಸುಂದರವಾದ

[illegible]

[illegible] 800 [illegible] (Hiking Trails) [illegible]

[illegible] (Sierra Nevada) [illegible] 4000 [illegible] U [illegible]

[illegible] 2425 [illegible] 'Half Dome', 'Northern Dome', Sentinel Dome [illegible] Glacier [illegible] 7200 [illegible]

ಜಲಪಾತಗಳನ್ನು ಹತ್ತಿರದಿಂದ ವೀಕ್ಷಿಸಬಹುದು. ಹಾಗೂ ಹಾಫ್ ಡೋಮ್ ಮತ್ತು 'cloud rest' ಪ್ರದೇಶಗಳನ್ನು ವೀಕ್ಷಿಸಬಹುದು.

ನನ್ನ ನಾಲ್ಕುದಿನದ ಚಾರಣವು 7200 ಅಡಿ ಎತ್ತರದಲ್ಲಿರುವ Half Doome ಪ್ರದೇಶಕ್ಕೆ ಹೋಗುವುದು. ಕೆಳಗಿನಿಂದ ಒಟ್ಟು 8100 ಅಡಿ ಎತ್ತರದವರೆಗೂ ಹತ್ತಬೇಕು. ಒಟ್ಟು 8.8 ಮೈಲು ದೂರದ ಚಾರಣ. ಮೊದಲನೇ ದಿನದ ಚಾರಣದಲ್ಲೇ ನಾವು ಸುಮಾರು 6000 ಅಡಿ ಎತ್ತರವನ್ನು ಏರಬೇಕಿತ್ತು. ಭಾರತದಲ್ಲಿ ನಾನು ಚಾರಣಮಾಡುವಾಗ ನನ್ನ ಹೆಗಲು ಚೀಲವನ್ನು ಟ್ರೆಕ್ಕಿಂಗ್ ನಾಯಕನಿಗೆ ಕೊಡುತ್ತಿದ್ದೆವು. ಆದರೆ ಇಲ್ಲಿ ಆ ಸೌಲಭ್ಯವಿರಲಿಲ್ಲ. ಹಾಗಾಗಿ ನಮ್ಮ ಹೆಗಲು ಚೀಲವನ್ನು ನಾವೇ ಹೊತ್ತೊಯ್ಯಬೇಕಿತ್ತು. ಸಾಲದ್ದಕ್ಕೆ ಇದರ ಜೊತೆಗೆ ನಮ್ಮ ಟೆಂಟ್, ನಿದ್ರಾಚೀಲ (Sleeping Bag), ಮಲಗುವ ಚಾಪೆ (Sleeping Mat) ಮತ್ತು ಟ್ರೆಕ್ಕಿಂಗ್ ಏಜನ್ಸಿಯವರ ದೊಡ್ಡ ದೊಡ್ಡದಾದ ತುಂಬಿರುವ ಊಟದ ಡಬ್ಬಿಗಳನ್ನು ಸಹ ನಾವೇ ಹೊರಬೇಕಿತ್ತು. ನಾನು ಇವೆಲ್ಲವನ್ನೂ ಸುಮಾರು ಎರಡು ಗಂಟೆ ಹೊತ್ತು ಬೆಟ್ಟವನ್ನೇರಿದೆ. ಆನಂತರ ಟ್ರೆಕ್ ಲೀಡರ್ ಅದನ್ನು ತಾನೇ ನನ್ನಿಂದ ತೆಗೆದುಕೊಂಡ. ಸುಮಾರು ಏಳು ಗಂಟೆಯ ಬಿಸಿಲಿನ ಹಾದಿಯನ್ನು ಏರಿ ನಮ್ಮ ಮೊದಲನೇ ದಿನದ ಕ್ಯಾಂಪ್ ನ್ನು ತಲುಪಿದೆವು. ಮಾರನೇದಿನ ಮತ್ತೆ 2000 ಅಡಿ ಎತ್ತರವನ್ನು ಏರಿ ಹಾಫ್ ಡೂಮ್ ಪ್ರದೇಶವನ್ನು ತಲುಪಿದೆವು. ಮೂರನೇದಿನ ಅಲ್ಲಿಂದ ಹೊರಟು ನೇರವಾಗಿ ಬೇಸ್ ಕ್ಯಾಂಪ್ ನ್ನು ತೀವ್ರ ಇಳಿಜಾರಿನ ಹಾದಿಯಲ್ಲಿ ಸುಮಾರು 8 ಘಂಟೆಯ ಸಮಯದಲ್ಲಿ ತಲುಪಿದೆವು. ಇದೆಲ್ಲದರ ಜೊತೆಗೆ ಇಲ್ಲಿನ ಊಟವು ನಮಗೆ ಸ್ವಲ್ಪವೂ ಹಿಡಿಸುವುದಿಲ್ಲ ಏಕೆಂದರೆ ನಾವು ಭಾರತದಲ್ಲಿ ಚಾರಣ ಮಾಡುವಾಗ ನಮಗೆ ರುಚಿ ರುಚಿಯಾದ ಶಾಖಾಹಾರಿ ಆಹಾರಗಳು ಲಭಿಸುತ್ತಿದ್ದವು. ಇಲ್ಲಿ ನನಗೆ ದೊರೆತ್ತಿದ್ದು ಕೇವಲ ಪ್ಯಾನ್ ಕೇಕ್, ಪಾಸ್ತಾ, ಹಾಲು ಸಕ್ಕರೆ ರಹಿತ ಚಹಾ ಮಾತ್ರ. ಇವೆಲ್ಲವುಗಳನ್ನು ಪರಿಗಣಿಸಿದರೆ, ಬೇರೆದೇಶದಲ್ಲಿ ಚಾರಣ ಮಾಡುವುದು ಅತ್ಯಂತ ಕಷ್ಟಕರವೇ.

ಫ್ರೀಮಾಂಟ್ ಬಳಿಯಲ್ಲಿನ ಮಿಷನ್ ಪೀಕ್ ಶಿಖರದೆಡೆಗೆ ಚಾರಣ

ಮಿಷನ್ ಪೀಕ್ ಶಿಖರದ ಬಗ್ಗೆ ನಾನು ಸಂಗ್ರಹಿಸಿದ ಕೆಲವು ಸಂಕ್ಷಿಪ್ತ ಮಾಹಿತಿಗಳು:-

6.1 ಮೈಲಿ ವರ್ತುಲ ಚಾರಣ (Circular trail) ನೆರೆಹೊರೆಯ ವಸತಿಯ ಅಂಚಿನಿಂದ ಪರ್ವತದ ತುದಿಗೆ ಕಡಿದಾದ ಚಾರಣವಾಗಿದೆ. ಬೇ ಏರಿಯಾ ರಿಡ್ಜ್ ಟ್ರಯಲ್ ವಿಭಾಗವು ಈ ಚಾರಣವನ್ನು ಆಯೋಜಿಸುತ್ತದೆ.

ದೂರ, ವರ್ಗ ಮತ್ತು ತೊಂದರೆ: ಈ 6.1 ಮೈಲಿ ದುಂಡಾಗಿರುವ ವರ್ತುಲ ಚಾರಣವು ಕಠಿಣವಾಗಿದೆ, ಆದರೆ ಮಾಡಬಹುದು. ತಂಪಾದ ದಿನಗಳಲ್ಲಿ ಸಾಕಷ್ಟು ಕುಡಿಯುವ ನೀರು ಜೊತೆಗೆ ಇರಬೇಕು. ಚಾರಣ ಮಾಡಲು ಎರಡು ಮಾರ್ಗಗಳಿವೆ. ಅದರಲ್ಲಿ ಮೊದಲನೆಯದೆಂದರೆ – ಸ್ಟ್ಯಾನ್‌ಫೋರ್ಡ್ ಅವೆನ್ಯೂ ಟ್ರಯಲ್ ಹೆಡ್. ಈ ಮಾರ್ಗದ ಎತ್ತರವು ಸುಮಾರು 380 ಅಡಿಗಳು. ಎರಡನೆಯ ಮಾರ್ಗ – ಓಹ್ಲೋನ್ ಕಾಲೇಜ್ ಟ್ರಯಲ್ ಹೆಡ್ – ಈ ಮಾರ್ಗದ ಎತ್ತರವು ಸುಮಾರು 440 ಅಡಿಗಳು). ಉದ್ಯಾನದ ಎತ್ತರದ ಸ್ಥಳವು ಸುಮಾರು 2517 ಅಡಿಗಳು; ಈ ಹೆಚ್ಚಳಕ್ಕೆ ಒಟ್ಟು ಎತ್ತರ ಬದಲಾವಣೆ ಸುಮಾರು 2150 ಅಡಿಗಳು. ಈ ಹಾದಿಯು ಆರಂಬಿಕ / ಪ್ರಾಸಂಗಿಕ 'ನೆರೆಹೊರೆಯ' ನಡಿಗೆದಾರರಿಗೆ ಸೂಕ್ತವಲ್ಲ. ಇದು ಸ್ವಲ್ಪ ಕಡಿದಾದ ಮತ್ತು ನಿರಂತರವಾಗಿ ಕಷ್ಟದಿಂದ ಕೂಡಿದ ಮಾರ್ಗವಾಗಿದೆ.

ಮಾರ್ಗದ ದಟ್ಟಣೆ: ಮಧ್ಯಮ. ಮಾರ್ಗದ ಮೇಲ್ಮೈಗಳು: ಕೊಳಕು, ಬಿಸಿಲಿನಿಂದ ಕೂಡಿದ ರಸ್ತೆಗಳು ಮತ್ತು ಹಾದಿಗಳು. ಪಾದಯಾತ್ರೆಯ ಸಮಯ: 3 ಗಂಟೆ; ಚಳಿಗಾಲದಲ್ಲಿ ಕೆಸರು, ಬೇಸಿಗೆಯಲ್ಲಿ ಬಿಸಿಯಾಗಿರುತ್ತದೆ, ವಸಂತಕಾಲದಲ್ಲಿ ಚಾರಣಕ್ಕೆ ಉತ್ತಮವಾಗಿರುತ್ತದೆ.

ಈ ಚಾರಣವನ್ನು ನಾನು ಓಹ್ಲೋನ್ ಕಾಲೇಜು ಚಾಡುಪಿನ ಮುಖಾಂತರ ಎರಡು ಬಾರಿ ಮಾಡಿರುವೆ. ಓಹ್ಲೋನ್ ಕಾಲೇಜು ಚಾಡುಪಿನ ಪ್ರಾರಂಭದ ಮಾರ್ಗಕ್ಕೆ ನಾನು ನಾನಿದ್ದ ನನ್ನ ಮಗನ ಮನೆಯಿಂದ Fairoaks ರೈಲ್ವೆ ನಿಲ್ದಾಣದಿಂದ ಗ್ರೇಟ್ ಅಮೇರಿಕನ್ ನಿಲ್ದಾಣಕ್ಕೆ ಹೋಗಿ, ಅಲ್ಲಿಂದ ಮಿಷನ್ ಬುಲೆವಾರ್ಡ್ ಬಸ್ ನಿಲ್ದಾಣಕ್ಕೆ ಒಂದು ಬಸ್ಸಿನಲ್ಲಿ ಹೋದೆ. ಅಲ್ಲಿಂದ ಸುಮಾರು 15 ನಿಮಿಷ ನಡೆದು ಚಾರಣದ ಪ್ರಾರಂಭದ ಸ್ಥಳವನ್ನು ತಲುಪಿದೆ.

ನಿಯಮಗಳು: ಹೆಚ್ಚಿನ ಹಾದಿಗಳು ಬಹು ಬಳಕೆಯಾಗಿವೆ. ಕೆಲವು ಹಾದಿಗಳು ಪಾದಯಾತ್ರಿಗಳಿಗೆ ಮತ್ತು ಕುದುರೆಗಳಿಗೆ ಮಾತ್ರ ತೆರೆದಿರುತ್ತವೆ (ಮತ್ತು ಸಹಜವಾಗಿ, ಹಸುಗಳು). ನಾಯಿಗಳಿಗೆ ಅನುಮತಿ ಇದೆ. ಓಹ್ಲೋನ್ ಕಾಲೇಜು (ಶಿಖರದವರೆಗಿನ ಎಲ್ಲಾ ಮಾರ್ಗಗಳು) ಪ್ರವೇಶಿಸಿದ ಉದ್ಯಾನದ ಪ್ರದೇಶವು ಬೆಳಿಗ್ಗೆ 6 ರಿಂದ ರಾತ್ರಿ 10 ರವರೆಗೆ ತೆರೆದಿರುತ್ತದೆ.

ಅದರಂತೆ ನಮ್ಮ ಮನೆಯಿಂದ ಸುಮಾರು 15 ಮೈಲುಗಳ ದೂರದಲ್ಲಿರುವ ಮಿಷನ್ ಪೀಕ್ ಅನ್ನು ಹತ್ತಲು ತೀರ್ಮಾನಿಸಿ ಮೇ ತಿಂಗಳಿನ ಕೊನೆಯ ವಾರದಲ್ಲಿ ಅಲ್ಲಿಗೆ ಪ್ರಯಾಣಿಸಿದೆ. ಈ ಬೆಟ್ಟವನ್ನು 2.8 ಮೈಲಿ ದೂರದ ಅತಿ ಕಡಿದಾದ ಹಾದಿಯಲ್ಲಿ ಹತ್ತಬೇಕು. ಬೆಳಗ್ಗೆ 8 ಘಂಟೆಗೆ ಪ್ರಾರಂಭಿಸಿ 9.30ರ ಹೊತ್ತಿಗೆ ಶಿಖರವನ್ನು ತಲುಪಿದೆ. ಈ ಶಿಖರವನ್ನು ಹತ್ತಲು ಪ್ರತಿದಿನ ಅನೇಕ ಜನಗಳು ಬಿಸಿಲು ಗಾಳಿಯನ್ನು ಲೆಕ್ಕಿಸದೆ ಬರುತ್ತಾರೆ. ಕೆಲವರು ಬೈಸಿಕಲ್ ನಲ್ಲಿ ಬೆಟ್ಟವನ್ನು ಹತ್ತಿದರೆ, ಮತ್ತೆ ಕೆಲವರು ಜಾಗಿಂಗ್ (ಓಡುತ್ತಾ) ಮೂಲಕ ಹತ್ತುತ್ತಾರೆ. ಶಿಖರದಿಂದ ಕೆಳಗಿಳಿಯಲು ಕೇವಲ ಒಂದು ಗಂಟೆ ಸಾಕಾಯಿತು. ಆ ದಿನ ಒಟ್ಟು 5.6 ಮೈಲಿಯ ಹಾದಿಯನ್ನು ಕ್ರಮಿಸಿದೆ.

2016, ಮೇ ತಿಂಗಳಿನಿಂದ ಆಗಸ್ಟ್ ತಿಂಗಳಿನವರೆಗೆ ಚಾರಣ ಮಾಡಿದ (ಟ್ರೈಲ್) ವಿವರಗಳನ್ನು ಈ ಕೆಳಗೆ ಕೊಟ್ಟಿದೆ:

1. ಲಾಸ್ ಗೆಟೌಸ್ ಕ್ರೀಕ್ ಟ್ರೈಲ್ – 13.7 ಮೈಲಿ
2. ಕಾಯೊಟೊ ಕ್ರೀಕ್ ಟ್ರೈಲ್ – 45.5 ಮೈಲಿ
3. ಸ್ಯಾನ್ ಥಾಮಸ್ ಅಕ್ವಿನೇ ಟ್ರೈಲ್ – 18.4 ಮೈಲಿ
4. ಮಿಷನ್ ಪೀಕ್ ಟ್ರೈಲ್ – 5.6 ಮೈಲಿ
5. ಅಡೋಬ್ ಕ್ರೀಕ್ ಲೂಪ್ ಟ್ರೈಲ್ – 3.6 ಮೈಲಿ
6. ಬೇಟ್ರೈಲ್ – 1 – (ಶೋರ್ ಲೈನ್ ಪಾರ್ಕ್ ನಿಂದ ಸನ್ನಿವೇಲ್ ವಾಟರ್ ಪೊಲ್ಯೂಷನ್ ಕಂಟ್ರೋಲ್) – 8.5 ಮೈಲಿ
7. ಸ್ಟೀವನ್ಸನ್ ಕ್ರೀಕ್ ಟ್ರೈಲ್ – 16.9 ಮೈಲಿ
8. ಬೇ ಟ್ರೈಲ್ – 2 – (ಸನ್ನಿವೇಲ್ ವಾಟರ್ ಟ್ರೀಟ್ಮೆಂಟ್ ಪಲ್ಯೂಷನ್ ಕಂಟ್ರೋಲ್ ನಿಂದ ಬೇ ಲ್ಯಾಂಡ್ ಪಾರ್ಕ್ ವರೆಗೆ) – 11.8 ಮೈಲಿ
9. ಕಾಲಾಬಾರ್ಝಾ ಕ್ರೀಕ್ ಟ್ರೈಲ್ – 6.2 ಮೈಲಿ
10. ಜಾನ್ ಡಬ್ಲ್ಯೂ ಕ್ರಿಶ್ಚಿಯನ್ ಗ್ರೀನ್ ಬೆಲ್ಟ್ – 4.5 ಮೈಲಿ
11. ಗ್ವಾಡಲೂಪ್ ನದಿಯ ಟ್ರೈಲ್ – 15.5 ಮೈಲಿ
12. ಪೆನಿಟೆನ್ಸಿಯ ಕ್ರೀಕ್ ಟ್ರೈಲ್ – 6.0 ಮೈಲಿ
13. ಅಡೋಬ್ ಕ್ರೀಕ್ ಲೂಪ್ ಟ್ರೈಲ್ – 12.0 ಮೈಲಿ
14. ಅಲ್ಮೇಡಾ ಕ್ರೀಕ್ ಟ್ರೈಲ್ – 7.9 ಮೈಲಿ
15. ಓಹ್ಲ್ ರೀಜನಲ್ ವೈಲ್ಡರ್ನೆಸ್ ಟ್ರೇಲ್ – 9.0 ಮೈಲಿ
16. ಲಾಸ್ ಅಲ್ಮಿಟಾಸ್ ಕ್ರೀಕ್ ಟ್ರೈಲ್ – 5.0 ಮೈಲಿ
17. ರಾಂಚೊ ಸ್ಯಾನ್ ಆಂಟೊನಿಯೋ ಕೌಂಟಿ ಪಾರ್ಕ್ ಟ್ರೈಲ್ – 8.2 ಮೈಲಿ
18. ಸ್ಟ್ಯಾನ್ ಫೋರ್ಡ್ ಡಿಶ್ ಟ್ರೈಲ್ 5.9 ಮೈಲಿ
19. ಅಲ್ವಿಸೋ ಮರೀನಾ ಪಾರ್ಕ್ ಲೂಪ್ ಟ್ರೈಲ್ – 10.0 ಮೈಲಿ

ಒಟ್ಟು ನಡೆದ ಹಾದಿ 214.2 ಮೈಲಿಗಳು

ಅಮೆರಿಕಾದಲ್ಲಿನ ನಾನು ಕಂಡ ಹಾಗೂ ಅಂತರ್ಜಾಲದ ಮೂಲಕ ಅಧ್ಯಯನ ಮಾಡಿದಂತೆ ಅಲ್ಲಿನ ಟ್ರೈಲ್ ಬಗ್ಗೆ ಕೆಲವು ಅನಿಸಿಕೆ/ ಅಭಿಪ್ರಾಯಗಳು

ಪ್ರತಿಯೊಂದು ಟ್ರೈಲ್ ಬಗ್ಗೆ ಸುದೀರ್ಘವಾದ ಮಾಹಿತಿ ಯಾರಿಗೆ ಬೇಕಾದರೂ ಜಾಲತಾಣಗಳಲ್ಲಿ ಲಭ್ಯ. ಇದರಲ್ಲಿ ಟ್ರೈಲ್ ವಿಸ್ತೀರ್ಣ, ಅದು ಸುಸ್ಥಿತಿಯಲ್ಲಿರುವುದೇ/ ಸುಗಮವಾದ ಹಾದಿಯೇ ಅಥವಾ ಕಲ್ಲು ಮಣ್ಣಿನಿಂದ ಕೂಡಿರುವುದೇ, ಮರದ ನೆರಳಿರುವುದೇ ಅಥವಾ ಟ್ರೈಲ್ ಹಾದಿ ಪೂರ್ತಿ ಬಿಸಿಲಿಗೆ ತೆರೆದುಕೊಂಡಿರುತ್ತದೆಯೇ ಎಂಬ ವಿವರಗಳು ನಮಗೆ ಸಿಗುತ್ತವೆ.

ಕೆಲವು ಬಾರಿ ಟ್ರೈಲ್ ತಡೆರಹಿತ ಹಾಗು ವೇಗವಾದ ಹಾದಿ ದಾಟಬೇಕಿದ್ದಲ್ಲಿ ಮೇಲ್ಸೇತುವೆ ಇದ್ದಲ್ಲಿ ಅದು ಅತ್ಯಂತ ಸುರಕ್ಷಿತ ಹಾಗು ಯಾವಾಗಲೂ ಶುಭ್ರವಾಗಿ ಹಾಗು ಸುಸ್ಥಿತಿಯಲ್ಲಿರುತ್ತದೆ. ಒಂದು ಪಕ್ಷ ಹಾದಿಯ ಕೆಳಗೆ ಹೋಗಬೇಕಿದ್ದಲ್ಲಿ ಕೆಳಗಿನ ಮಾರ್ಗ ಅತ್ಯಂತ ಸುರಕ್ಷಿತ ಹಾಗೂ ಚೊಕ್ಕಟವಾಗಿರುತ್ತದೆ ಅಲ್ಲದೇ ಸೇತುವೆಯ ಇಕ್ಕೆಲದ ಗೋಡೆಯಮೇಲೆ ಸಿಮೆಂಟ್ ನಿಂದ ವಿವಿಧ ಜಾತಿಯ ಪ್ರಾಣಿ, ಪಕ್ಷಿಗಳ ಆಕೃತಿಗಳನ್ನು ಸುಂದರವಾಗಿ ಚಿತ್ರಿಸಿರುತ್ತಾರೆ.


ಪ್ರತಿಯೊಂದು ಟ್ರೈಲ್‌ಗಳಲ್ಲಿ ಸೈಕಲ್ ಸವಾರರಿಗೆ ಎಚ್ಚರಿಕೆಯ ಸೂಚನಾಫಲಕಗಳು ಅಲ್ಲಲ್ಲೇ ನೆಟ್ಟಿರುತ್ತಾರೆ. ಇಳಿಜಾರಿನಲ್ಲಿ ಸೈಕಲ್ ಸವಾರರು ಹೋಗಬೇಕಾದಲ್ಲಿ ವೇಗಮಿತಿಯನ್ನು ಸೂಚನಾಫಲಕದಲ್ಲಿ ನಮೂದಿಸಿರುತ್ತಾರೆ.

ಪಾದಚಾರಿಗಳಿಗೆ ಅತ್ಯಂತ ಹೆಚ್ಚಿನ ಮಹತ್ವ ನೀಡುತ್ತಾರೆ. ಸೈಕಲ್ ಸವಾರರು ಹಾಗೂ ಕುದುರೆ ಸವಾರರು ಮೊದಲಿಗೆ ಪಾದಚಾರಿಗಳಿಗೆ ಮುನ್ನಡೆಯಲು ಆದ್ಯತೆ ಕೊಡುವಂತೆ ಸೂಚನಾಫಲಕಗಳಲ್ಲಿ ನಮೂದಿಸಿರುತ್ತಾರೆ ಅಲ್ಲದೇ ಪ್ರತಿಯೊಬ್ಬರೂ ಅದರಂತೆ ನಡೆದುಕೊಳ್ಳುತ್ತಾರೆ.

ಕೆಲವೊಮ್ಮೆ ಟ್ರೈಲ್ ರಸ್ತೆ ದಾಟಬೇಕಿದ್ದಲ್ಲಿ ಅಲ್ಲಿ ಸಂಚಾರಣ ನಿಯಂತ್ರಣ ದೀಪ ಇದ್ದೇ ಇರುತ್ತದೆ.

ಸಾಕು ಪ್ರಾಣಿಗಳಾದ ನಾಯಿ ಅಥವಾ ಕುದುರೆಗಳನ್ನು ಟ್ರೈಲ್ ನಲ್ಲಿ ತಮ್ಮ ಜೊತೆ ಕರೆದೊಯ್ದರೆ ಅದು ರಸ್ತೆಯಲ್ಲಿ ಗಲೀಜು ಮಾಡಿದರೆ ಅದನ್ನು ಮುಲಾಜಿಲ್ಲದೆ ಪ್ಲಾಸ್ಟಿಕ್ ಕವರಿನಲ್ಲಿ ಎತ್ತಿ ಅದನ್ನು ಅದಕ್ಕಾಗಿ ಇಟ್ಟಿರುವ ಡಬ್ಬಿಯಲ್ಲಿ ಹಾಕಬೇಕು. ಆಶ್ಚರ್ಯವೆಂದರೆ ಪ್ರತಿಯೊಬ್ಬರು ಇದನ್ನು ಕಡ್ಡಾಯವಾಗಿ ಪಾಲಿಸುತ್ತಾರೆ.

ಸುದೀರ್ಘವಾದ ಟ್ರೈಲ್‌ಗಳಲ್ಲಿ ಮೈಲಿಗೊಂದರಂತೆ ಪ್ರಯಾಣಿಕರು ದಣಿವನ್ನಾರಿಸಿಕೊಳ್ಳಲು ಅನುಕೂಲವಿರುತ್ತದೆ. ಇದರಲ್ಲಿ ಕುಳಿತುಕೊಳ್ಳಲು, ವ್ಯಾಯಾಮ ಮಾಡಲು ಹಾಗೂ ಕುಡಿಯುವ ನೀರಿನ ಸೌಕರ್ಯವಿರುತ್ತದೆ. ದಾರಿಯಲ್ಲಿ ಬರುವ ಪ್ರತಿಯೊಂದು ಉದ್ಯಾನವನದಲ್ಲೂ ಸಾಮಾನ್ಯವಾಗಿ ಶೌಚಗೃಹಗಳು ಇದ್ದೇ ಇರುತ್ತವೆ.



Lupe the Mammoth Guadalupe River Trail.

ಅನುಬಂಧಗಳು

ಚಾರಣ – ಗಮನಿಸಬೇಕಾದ ಅಂಶಗಳು

ಗುರುಪ್ರಸಾದ್ ಹಾಲ್ಕುರಿಕೆ

ಚಾರಣ, ಎಂದ ಕೂಡಲೇ ನಮ್ಮ ಮನದಲ್ಲಿ ಏನು ಭಾವನೆ ಬರುವುದು? ಅನೇಕ ಚಾರಣಿಗರ ಮನದಲ್ಲಿ ಅನೇಕ ಅರ್ಥಗಳು ಉದ್ಭವಿಸುವುದು, ಆದರೆ ಅವೆಲ್ಲವೂ ನಿಜವಾಗಿರುವುದಿಲ್ಲ. ಚಾರಣವು ಅತ್ಯಂತ ಕಠಿಣವಾದ, ಅಪಾಯ-ಕಾರಿಯಾದ, ಬಹಳ ಸಮಯ ತೆಗೆದುಕೊಳ್ಳುವ ಹಾಗೂ ವಿಪರೀತ ಬೆಲೆಯ ಹವ್ಯಾಸ ಎಂಬುದು ಒಂದು ಗ್ರಹಿಕೆ.

ಆದರೆ, ಚಾರಣವು ನಿಜವಾಗಿಯೂ ಹೀಗಿರುವುದೆ? ಯಾರಾದರೂ ಕೆಲವು ಘಂಟೆಗಳ ಕಾಲ ಸಮತಟ್ಟಾದ ಪ್ರದೇಶದಲ್ಲಿ ನಡೆಯುವುದೂ ಸೇರಿ, ಬೆಟ್ಟಗಳಲ್ಲಿ ನಡೆಯುವುದರ ಮೂಲಕ ಸಕ್ರಿಯವಾಗಿರುವುದೇ ಚಾರಣ. ಈ ಕ್ರಿಯೆಯಲ್ಲಿ ಚಾರಣಿಗರು ಅದ್ಭುತವಾದ ಪ್ರಕೃತಿ ಸೌಂದರ್ಯ ವೀಕ್ಷಿಸಲು ಹಾಗೂ ಹೊಸ ಜನಗಳನ್ನು ಭೇಟಿಯಾಗಲು ಅವಕಾಶವೊದಗುವುದು. ನಮಗೆ ಗೊತ್ತಿರುವ ಸ್ಥಳದಿಂದ ದೂರಹೋಗಿ, ಅಲ್ಲಿ ಹೊಸ ಹಾದಿ ಕ್ರಮಿಸಿ, ಅತ್ಯಂತ ರಮಣೀಯವಾದ ಪ್ರಕೃತಿ ಸಂಪತ್ತನ್ನು ಆಸ್ವಾದಿಸಲು ನಾವು ಚಾರಣ ಮಾಡಬೇಕು. ನಾವು ಅನುಭವಿ ಅಥವಾ ಆರಂಭಿಕ ಚಾರಣಿಗರಾಗಿದ್ದರೂ, ಚಾರಣ ಸವಾಲುಗಳನ್ನು ಒಡ್ಡುತ್ತದೆ ಮತ್ತು ಎದುರಿಸುವ ಹೊಸ ಹೊಸ ಆನಂದಿಸುವ ಅವಕಾಶಗಳು ನೀಡುತ್ತದೆ. ಎಲ್ಲೋ ಯಾವುದೋ ಪುಸ್ತಕದಲ್ಲಿ ಓದಿರಬಹುದಾದ ಅಥವಾ ಸಾಕ್ಷ್ಯ ಚಿತ್ರಗಳಲ್ಲಿ ನೋಡಿದ, ಪ್ರತ್ಯಕ್ಷವಾಗಿ ವೀಕ್ಷಿಸಬೇಕೆಂದು ಕನಸು ಕಂಡಿರಬಹುದಾದ ಸ್ಥಳಗಳಿಗೆ ಹೋಗಿ ಅಲ್ಲೆಲ್ಲಾ ಸುತ್ತಾಡಿ ಆನಂದಿಸುವ ಅವಕಾಶಗಳನ್ನು ಚಾರಣವು ಒದಗಿಸುತ್ತದೆ.

ಚಾರಣದಲ್ಲಿ ನಮ್ಮನ್ನು ನಾವೇ ಮತ್ತೊಮ್ಮೆ ಕಂಡುಕೊಳ್ಳುವ ಅವಕಾಶ ದೊರಕುತ್ತದೆ. ಯಾವುದೇ ಹಿಂಜರಿಕೆಯ ಸೋಗಿಲ್ಲದೆ ಕಂಡರಿಯದ ಹಾದಿಯಲ್ಲಿ ನಮ್ಮನ್ನು ನಾವು ಮತ್ತೊಮ್ಮೆ ಹುಡುಕಿಕೊಳ್ಳಲು ಚಾರಣವು ಸುಸಂದರ್ಭ ಒದಗಿಸುತ್ತದೆ.

ಚಾರಣ ಒಂದು ಸಾಮೂಹಿಕ ಚಟುವಟಿಕೆ ಹಾಗೂ ಈ ಹವ್ಯಾಸವು ನಿಮ್ಮಲ್ಲಿನ ದೈಹಿಕ ಶಕ್ತಿಯನ್ನು ಅಭಿವ್ಯಕ್ತಿಸುತ್ತದೆ. ಚಾರಣವು ರಮ್ಯವಾದ ಪ್ರಕೃತಿಯ

ನಡುವೆ ಸುಂದರವಾದ ಸಂಬಂಧಗಳನ್ನು ಸೃಷ್ಟಿಸುತ್ತದೆ ಅಲ್ಲದೆ ನಮಗೆ ಹೊಸ ಗೆಳೆಯರನ್ನು ಸಂಪಾದಿಸುವ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ ಹಾಗೂ ನಾವು ಕ್ರಮಿಸುವ ಮೈಲಿಗಳೇ ನಮ್ಮ ನೆನಪಾಗಿ ಉಳಿಯುತ್ತದೆ.

ಚಾರಣವೆಂದರೆ

1. ಪ್ರಕೃತಿಯನ್ನು ಮತ್ತಷ್ಟು ಅರ್ಥಮಾಡಿಕೊಳ್ಳುವ ದಿಕ್ಕಿನಲ್ಲಿ ಒಂದು ದೀರ್ಘ ಒಡನಾಟ;
2. ಒಂದು ತಪಸ್ಸು. ಈ ತಪಸ್ಸಿನಲ್ಲಿ ಬೇರೆ ಚಿತ್ತ ಚಾಂಚಲ್ಯಕ್ಕೆ ಅವಕಾಶವಿರಬಾರದು;
3. ಸಸ್ಯ ಸಂಪತ್ತು ಹಾಗೂ ಪ್ರಾಣಿಸಂಕುಲದ ಬಗ್ಗೆ ಹೆಚ್ಚಿನ ಮಾಹಿತಿಗಳ ಅರಿವು;
4. ನಮಗೆ ಅಗಾಧ ತಾಳ್ಮೆ ಕಲಿಸುತ್ತದೆ;
5. ನಾವು ಜೀವನವನ್ನು ನೋಡುವ ರೀತಿಯನ್ನೇ ಬದಲಿಸುತ್ತದೆ.

ಚಾರಣದ ಸಮಯದಲ್ಲಿ ನಮ್ಮೊಂದಿಗೆ ತೆಗೆದುಕೊಂಡು ಹೋಗಬೇಕಾದ ಅತ್ಯವಶ್ಯಕವಾದ ವಸ್ತುಗಳು

1. ಚಾರಣದ ಶೂಗಳು ; ಗಟ್ಟಿಮುಟ್ಟಾದ, ದೃಢವಾದ ಹಿಡಿತವುಳ್ಳ, ಪಾದದ ಕೀಲುಗಳನ್ನು ರಕ್ಷಿಸಬಲ್ಲಂತಹ ಹಾಗೂ ಹಿಮ ಚಾರಣಕ್ಕೆ ಸೂಕ್ತವಾಗಿರಬೇಕಾದ ಶೂಗಳನ್ನು ಹೊಂದಿರಬೇಕು. ಈ ರೀತಿಯ ಶೂಗಳನ್ನು ಕೊಳ್ಳಲು ಇಚ್ಛಿಸಿದಲ್ಲಿ Decathlon ಶೋರೂಮಿನಲ್ಲಿ ದೊರಕುವುದು.

2. ಬ್ಯಾಕ್ ಪ್ಯಾಕ್ (ಹೆಗಲು ಚೀಲ) ; ಒಂದು ವಾರಕಾಲದ ಚಾರಣಕ್ಕೆ ನಿಮಗೆ 50–60 ಲೀಟರ್‌ನ ಬ್ಯಾಕ್ ಪ್ಯಾಕ್ ಬೇಕಾಗುವುದು. ಬ್ಯಾಕ್ ಪ್ಯಾಕ್ ಚಾರಣಿಗನ ಹಿಂಭಾಗದಲ್ಲಿ ಮತ್ತು ಹೆಗಲಿನಲ್ಲಿ ಸರಿಯಾಗಿ ಕೂಡುವಂತಿರಬೇಕು ಮತ್ತು ಪಾಕೆಟ್‌ಗಳು ಸುಲಭವಾಗಿ ನಮಗೆ ಸಿಗುವಂತಿರಬೇಕು.

3. ಬಟ್ಟೆಗಳು ; ಹಿಮಾಲಯದ ಎತ್ತರದ ಪರ್ವತಗಳೆಡೆಗೆ ಚಾರಣ ಮಾಡುವಾಗ ನಮಗೆ ತೊಂದರೆ ಕೊಡುವುದು ಅಲ್ಲಿನ ಹಿಮ ಹಾಗೂ ಅತ್ಯಂತ ಶೀತದಿಂದ ಕೂಡಿದ ವಾತಾವರಣ. ಆಗ ಕನಿಷ್ಟ ಮೂರು ಪದರಗಳ ಶರ್ಟ್‌ಗಳನ್ನು ತೊಡುವುದು ಸೂಕ್ತ. ಬಿಸಿಲಿನಿಂದ ಶೆಖೆಯಾದಾಗ ಮೂರನೆ ಅಥವಾ ಎರಡನೇ ಪದರದ ಶರ್ಟಗಳನ್ನು ಕಳಚಿ ಚಾರಣ ಮುಂದುವರೆಸಬಹುದು. ಯಾವಾಗಲೂ

ಕಾಲರ್‌ಸಹಿತ, ತುಂಬು ತೋಳಿನ ಶರ್ಟ್‌ಗಳನ್ನು ಧರಿಸುವುದು ಸೂಕ್ತ. ಕಾಟನ್ ಶರ್ಟ್‌ಗಳನ್ನು ಬಿಸಿಲು ಕಾಲದಲ್ಲಿ ಧರಿಸಬಹುದು. ಚಳಿಗಾಲದಲ್ಲಿ ಸಿಂಥಟಿಕ್ ಶರ್ಟ್‌ಗಳನ್ನು ಬಳಸುವುದು ಸೂಕ್ತ. ಬೇಸಗೆ ಕಾಲದಲ್ಲಿ 3 ಶರ್ಟ್‌ಗಳನ್ನು ಬಳಸಿದರೆ, ಮಳೆಗಾಲದಲ್ಲಿ 4, ಚಳಿಗಾಲದಲ್ಲಿ 5 ಶರ್ಟ್‌ಗಳನ್ನು ಬಳಸುವುದು ಸೂಕ್ತ.

ಶರ್ಟ್‌ಗಳ ಮೇಲೆ ತೊಡುವ ಜಾಕೆಟ್ ; ಹೊರಗಿನ ಪದರಕ್ಕೆ ಹಗುರವಾದ ಸ್ವೆಟರ್ ಅಥವಾ ಫ್ಲೀಸ್ ಜಾಕೆಟ್ ಬೇಕಾಗುವುದು. ಇದರೊಂದಿಗೆ ರಭಸವಾಗಿ ಬೀಸುವ ಗಾಳಿಯಿಂದ ರಕ್ಷಣೆ ಪಡೆಯಲು ಹಗುರವಾದ ಫ್ಲೀಸ್ ಜಾಕೆಟ್ ಕೂಡ ಬೇಕಾಗುವುದು.

ಪ್ಯಾಂಟ್‌ಗಳು ; ಚಾರಣಕ್ಕಾಗಿಯೇ ಎರಡು ಚಾರಣ ಪ್ಯಾಂಟ್‌ಗಳು ಬೇಕಾಗುವುದು. ಮಳೆಗಾಲದಲ್ಲಿ ಹಿಮಾಲಯ ಚಾರಣ ಮಾಡುವಾಗ ಅಥವಾ ಮಳೆಬರುವ ಸೂಚನೆ ಕಂಡುಬಂದಲ್ಲಿ , ಒಂದು ಮಳೆ ನೀರಿನಲ್ಲಿ ನೆನೆಯದ ಪ್ಯಾಂಟ್ ಬೇಕು. ಅಥವಾ ಶಿರದಿಂದ ಕಾಲಿನವರೆಗೂ ರಕ್ಷಣೆ ನೀಡುವ ಹಗುರವಾದ ಮಳೆ ಕೋಟ್ ಇದ್ದರೂ ಸರಿ.

ಮೇಲೆ ವಿವರಿಸಿರುವ ಎಲ್ಲ ಸಲಕರಣೆಗಳನ್ನು Decathlon ಶೋರೂಮ್‌ನಲ್ಲಿ ಕೊಳ್ಳಬಹುದು. ಇಲ್ಲವೆ ಇವುಗಳನ್ನು ಚಾರಣ ಮಾಡಲಿರುವ ಸಂಸ್ಥೆಯಿಂದಲೇ ಬಾಡಿಗೆಗೆ ಪಡೆದುಕೊಳ್ಳಬಹುದು.

ಇವಲ್ಲದೆ ಚಾರಣಕ್ಕೆ ಬೇಕಾಗುವ ಉಳಿದ ಪದಾರ್ಥಗಳೆಂದರೆ:

Goggles (ತಂಪು ಕನ್ನಡಕ) ; ಚಾರಣದ ಸಮಯದಲ್ಲಿ ಬಿಸಿಲು ಇರುವಾಗ ಕೂಲಿಂಗ್ ಗ್ಲಾಸ್‌ನ ಉಪಯೋಗವಿದ್ದರೂ ಹಿಮಾವೃತ ಪ್ರದೇಶದಲ್ಲಿ ಚಾರಣ ಮಾಡುತ್ತಿರುವಾಗ ಬಿಸಿಲಿನ ಸಮಯದಲ್ಲಿ ಹಿಮಪ್ರದೇಶ ಮುಗಿಯುವವರೆಗೂ ಕೂಲಿಂಗ್‌ಗ್ಲಾಸ್ ಧರಿಸಿರಲೇ ಬೇಕು. ನೀವು ಕಾಂಟಾಕ್ಟ್ ಲೆನ್ಸ್ ಉಪಯೋಗಿಸುತ್ತಿದ್ದರೂ ಕೂಲಿಂಗ್‌ಗ್ಲಾಸ್‌ನ್ನೂ ಧರಿಸಿರಲೇ ಬೇಕು.

ಸನ್ ಕ್ಯಾಪ್ ; ಬಿಸಿಲಿನಲ್ಲಿ ಚಾರಣ ಮಾಡುವಾಗ ಸನ್‌ಕ್ಯಾಪ್ ಧರಿಸಿರಲೇಬೇಕು. ಇಲ್ಲವಾದಲ್ಲಿ ತಲೆನೋವು, ಸನ್‌ಸ್ಟ್ರೋಕ್ ಹಾಗೂ ನಿರ್ಜಲೀಕರಣ (Dehydration) ತೀವ್ರವಾಗಿ ಬಾಧಿಸದಿರದು.

ಸಿಂಥಿಟಿಕ್ ಕೈಗವಸು (gloves) ; ಹಿಮಾಲಯದಲ್ಲಿ ಚಾರಣ ಮಾಡುವಿರಾದರೆ ಹ್ಯಾಂಡ್‌ಗ್ಲವ್ಸ್ ಬೇಕೇ ಬೇಕು. ಇದು ಕೈಗಳಿಂದ ಭದ್ರವಾದ ಹಿಡಿತಹೊಂದಲು ಹಾಗೂ ಹಿಮಗಾಳಿಯಿಂದ / ಕೊರೆಯುವ ಛಳಿಯಿಂದ ರಕ್ಷಣೆಯನ್ನೊದಗಿಸಲು ಉಪಯೋಗವಾಗುವುದು.

ಉಣ್ಣೆಯ ಟೋಪಿ ಅಥವಾ ಬಾಲ್‌ಕ್ಲಾವ ; ಹಿಮಾಲಯದ ಚಾರಣದಲ್ಲಿ ತಲೆಯ ಮೂಲಕ ಶಾಖವು ಹೊರಹೋಗುವುದು. ಇದರಿಂದಾಗಿ ತಲೆನೋವುಂಟಾಗಿ ಚಾರಣವು ಸುಗಮವಾಗದುಲ. ಹಾಗಾಗಿ ಉಣ್ಣೆಯ ಟೋಪಿ ಅಥವಾ ಬಾಲ್‌ಕ್ಲಾವ ಧರಿಸಿ ಕಿವಿಗಳು ಹಾಗೂ ತಲೆಯನ್ನು ಮುಚ್ಚಿಕೊಳ್ಳುವುದು ಅವಶ್ಯಕ. ಸೂರ್ಯ ಮುಳುಗುವ ಸಮಯದಲ್ಲಿ ಹಾಗೂ ಚಾರಣದಲ್ಲೂ ಈ ಟೋಪಿಯನ್ನು ಉಪಯೋಗಿಸಬೇಕು.

ಸಾಕ್ಸ್ / ಕಾಲುಚೀಲಗಳು ; ಎರಡು ಜೊತೆಯ ಸಾಧಾರಣ ಕಾಲುಚೀಲಗಳಲ್ಲದೇ ಮತ್ತೆರಡು ಉಣ್ಣೆಯ ಕಾಲುಚೀಲಗಳನ್ನು ಹಿಮಾಲಯ ಚಾರಣದಲ್ಲಿ ತೆಗೆದುಕೊಂಡಿರಬೇಕು.

ಹೆಡ್‌ಲ್ಯಾಂಪ್ / ತಲೆ ದೀಪ ; ಹಿಮಾಲಯದ ಹಾಗೂ ಇತರೆ ಭಾಗಗಳಲ್ಲಿ ಚಾರಣ ಮಾಡುವಾಗ ರಾತ್ರಿಯ ಹೊತ್ತು ಟಾರ್ಚ್ ಅವಶ್ಯ. ಈ ನಿಟ್ಟಿನಲ್ಲಿ ನಮ್ಮೆರಡೂ ಕೈಗಳನ್ನು ಮುಕ್ತವಾಗಿರಿಸಿಕೊಂಡು ಬೇರೆ ಕೆಲಸಗಳಿಗೆ ಉಪಯೋಗಿಸಲು ಅನುಕೂಲವಾಗುವಂತೆ ಹೆಡ್‌ಲ್ಯಾಂಪ್ ಉಪಯೋಗ ಬಹಳ ಅವಶ್ಯ.

ಟ್ರೆಕ್ಕಿಂಗ್ ಪೋಲ್ ; ಚಾರಣ ಮಾಡುವಾಗ ಟ್ರೆಕ್ಕಿಂಗ್ ಪೋಲ್ ಉಪಯೋಗವು ಚಾರಣಿಗರಿಗೆ ಚಾರಣದಲ್ಲಿನ ದಕ್ಷತೆಯನ್ನು ಹೆಚ್ಚಿಸುವುದಲ್ಲದೆ ಶಕ್ತಿವ್ಯಯವು ಕಡಿಮೆಯಾಗುವುದು. ಈ ಹಿಂದೆ ಚಾರಣಿಗರು ಒಂದು ಟ್ರೆಕ್ಕಿಂಗ್ ಪೋಲ್ ಮಾತ್ರ ಉಪಯೋಗಿಸುತ್ತಿದ್ದರು. ಆದರೆ ಇತ್ತೀಚೆಗೆ ಎರಡು ಟ್ರೆಕ್ಕಿಂಗ್ ಪೋಲ್ ಉಪಯೋಗಿಸಲು ಚಾರಣ ಸಂಸ್ಥೆಗಳು ಉತ್ತೇಜಿಸುತ್ತಿರುವುದನ್ನು ಗಮನಿಸಬಹುದು. ಇದರಿಂದ ಚಾರಣದ ಸಮಯದಲ್ಲಿ ದೈಹಿಕ ಸಮತೋಲನ ಕಾಪಾಡಿಕೊಳ್ಳಬಹುದು. ಟ್ರೆಕ್ಕಿಂಗ್ ಪೋಲ್‌ಗಳು ಬಾಡಿಗೆಗೂ ದೊರಕುವುದು.

ರೈನ್‌ವೇರ್ / ಮಳೆಕೋಟು ; ಹಿಮಾಲಯದ ಚಾರಣದಲ್ಲಿ ಹವಾಮಾನ ದಿಢೀರನೆ ಬದಲಾಗಬಹುದು ಹಾಗೂ ಮಳೆಯು ದಿಢೀರನೆ ಬರಬಹುದು. ಆ ಸಂದರ್ಭವನ್ನು ಎದುರಿಸಲು ರೈನ್ ಕೋಟು ಅವಶ್ಯ. ತಲೆಯಿಂದ ಕಾಲುಗಳವರೆಗಿನ ರೈನ್ ಕೋಟನ್ನು ಬಳಸಿದಲ್ಲಿ ರೈನ್ ಪ್ಯಾಂಟ್ ಅವಶ್ಯವಿರುವುದಿಲ್ಲ.

ಬ್ಯಾಕ್‌ಪ್ಯಾಕಿನ ರೈನ್ ಕವರ್ ; ಚಾರಣದ ಸಮಯದಲ್ಲಿ ಚಾರಣಿಗರು ಬ್ಯಾಕ್‌ಪ್ಯಾಕನ್ನು ತಮ್ಮೊಂದಿಗೆ ಕೊಂಡೊಯ್ಯುತ್ತಿರುವಾಗ ಮಳೆ ಬಂದಾಗ ಅದು ನೆನೆಯುವುದು. ಬ್ಯಾಕ್‌ಪ್ಯಾಕನ್ನು ರೈನ್ ಕವರ್‌ನಿಂದ ಮುಚ್ಚಿದಾಗ ಅದನ್ನು ತಡೆಯಬಹುದು. ಹಾಗೇ ಹಲವಾರು ಚಾರಣ ಸಂಸ್ಥೆಗಳು ಚಾರಣಿಗರ ಬ್ಯಾಕ್‌ಪ್ಯಾಕ್‌ಗಳನ್ನು ತಮ್ಮ ಕೆಲಸಗಾರರ / ಕುದುರೆಗಳ ಮೂಲಕ ಕೊಂಡೊಯ್ಯುವರು. ಆ ಸಮಯದಲ್ಲಿ ನಿಮ್ಮ ಬ್ಯಾಕ್‌ಪ್ಯಾಕ್‌ಗಳನ್ನು ರೈನ್ ಕವರ್‌ನಲ್ಲಿ ಮುಚ್ಚಿದ್ದಲ್ಲಿ ಅದು ಮಳೆಯಲ್ಲಿ ನೆನೆಯುವುದಿಲ್ಲ. ಹಾಗಾಗಿ ಬ್ಯಾಕ್ ಪ್ಯಾಕ್ ರೈನ್ ಕವರುಗಳು ಅವಶ್ಯ.

ಚಾರಣ ಮಾಡುವಾಗ ಉಪಯೋಗಿಸುವ ಸಣ್ಣ ಬ್ಯಾಕ್ ಪ್ಯಾಕ್ : ಕೆಲವು ಚಾರಣಿಗರು ತಮ್ಮ ಬ್ಯಾಕ್ ಪ್ಯಾಕ್‌ನ್ನು ಒಂದು ಕ್ಯಾಂಪಿನಿಂದ ಮತ್ತೊಂದು ಕ್ಯಾಂಪಿಗೆ ಕುದುರೆಗಳ ಮೂಲಕ ತಂದು ಕೊಡುವ ಸೇವೆಯನ್ನು ಪಡೆದುಕೊಂಡಾಗ ಅವರು ತಮ್ಮೊಂದಿಗೆ ಚಿಕ್ಕ ಬ್ಯಾಕ್ ಪ್ಯಾಕ್‌ನ್ನು ಮಾರ್ಗ ಮಧ್ಯದಲ್ಲಿ ಉಪಯೋಗಿಸುವ ಪದಾರ್ಥಗಳನ್ನು ಇಟ್ಟುಕೊಳ್ಳಲು ಬಳಸಬೇಕಾಗುವುದು. ಇಂತಹ ಸಂದರ್ಭದಲ್ಲಿ ಚಾರಣಿಗರು 20–30 ಲೀಟರ್ ಹಿಡಿಸುವ ಬ್ಯಾಕ್ ಪ್ಯಾಕ್‌ನ್ನು ಬಳಸಬೇಕು. ಯಾರು ಯಾರು ತಮ್ಮ ದೊಡ್ಡ ಬ್ಯಾಕ್ ಪ್ಯಾಕನ್ನು ಕುದುರೆಗಳ ಮೂಲಕ ತಂದುಕೊಡುವ ಸೇವೆಯನ್ನು ಉಪಯೋಗಿಸಲು ಬಯಸುವರೋ ಅವರಿಗೆ ಸಣ್ಣ ಬ್ಯಾಕ್ ಪ್ಯಾಕ್‌ನ ಅವಶ್ಯಕತೆ ಇರುವುದು.

ಉಳಿದ ಅಗತ್ಯದ ಸಾಮಗ್ರಿಗಳು ;

ಟಾಯ್ಲೆಟ್ ಕಿಟ್ ; ಟಾಯ್ಲೆಟ್ ಕಿಟ್‌ನೊಳಗೆ ಟೂತ್‌ಪೇಸ್ಟ್, ಬ್ರಷ್, ಸಣ್ಣ ಸೋಪು, ಟಾಯ್ಲೆಟ್ [illegible] ಕ್ಲೋರೋಲ್, ಮಾಯಿಶ್ಚರೈಸರ್, ಲಿಪ್‌ಬಾಮ್ ಅವಶ್ಯವಾಗಿರಲೇಬೇಕಾದದ್ದು. ಅಲ್ಲದೇ ಚಾರಣದ ಸಮಯದಲ್ಲಿ ಯಾರಿಗೂ ಸ್ನಾನ ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ದೊಡ್ಡ ಸೋಪು, ಇತರೆ ಪದಾರ್ಥಗಳನ್ನು ತರುವ ಅವಶ್ಯಕತೆ ಇರುವುದಿಲ್ಲ. ಚಾರಣಿಗರು ಝಿಪ್ ಲಾಕ್ ಬ್ಯಾಗ್‌ಗಳನ್ನು ತಂದಿರಬೇಕು. ಅದರ ಮೂಲಕ ತ್ಯಾಜ್ಯ ವಸ್ತುಗಳನ್ನು ಬೇಸ್‌ಕ್ಯಾಂಪಿಗೆ ಕೊಂಡೊಯ್ಯಲು ಅನುಕೂಲ.

ಕಟ್ಲರಿ ; ಸೋರಿಕೆಯಾಗದ ಸಣ್ಣ ಊಟದ ಡಬ್ಬಿ, ಬಟ್ಟಲು, ಚಮಚ ಹಾಗೂ ಒಂದು ಲೀಟರ್ ಅಥವಾ ಎರಡು ಲೀಟರಿನ ನೀರಿನ ಪ್ಯಾಕ್‌ನ್ನು ತರಬೇಕು. ಇದರ ಬದಲಿಗೆ ಹೈಡ್ರೇಷನ್ ಪ್ಯಾಕ್‌ನ್ನು ತರಬಹುದು.

ಪ್ಲಾಸ್ಟಿಕ್ ಚೀಲಗಳು ; ಚಾರಣದ ಸಮಯದಲ್ಲಿ ನಾವು ಉಪಯೋಗಿಸಿರುವ / ಒದ್ದೆಯಾದ ಬಟ್ಟೆಗಳನ್ನು [2–3 ಪ್ಲಾಸ್ಟಿಕ್ ಚೀಲಗಳನ್ನು] ಇಟ್ಟುಕೊಳ್ಳಲು ತೆಗೆದುಕೊಂಡುಹೋಗಿ.

ವೈಯಕ್ತಿಕ ಔಷಧಗಳ ಕಿಟ್ ; Personal Medical Kit – ಚಾರಣದ ಸಮಯದಲ್ಲಿ ನೀವು ಇಟ್ಟುಕೊಳ್ಳಬೇಕಾದ ಔಷಧಿಗಳೆಂದರೆ;

Diamox : ಹಿಮಾಲಯ ಚಾರಣದಲ್ಲಿ ಎತ್ತರದ ಚಾರಣದಲ್ಲಿ ಎದುರಿಸಬೇಕಾದ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಚಾರಣ ಪ್ರಾರಂಭಿಸುವ ಮೊದಲು ಮನೆಯಿಂದಲೇ ಅರ್ಧ ಮಾತ್ರೆಯನ್ನು ತೆಗೆದುಕೊಳ್ಳುವುದರೊಂದಿಗೆ ಪ್ರತಿ 12 ಗಂಟೆಗೆ ತೆಗೆದುಕೊಳ್ಳಬೇಕು. ಇದೇ ರೀತಿಯಲ್ಲಿ ಚಾರಣ ಮುಗಿಯುವವರೆಗೂ ತೆಗೆದುಕೊಳ್ಳಬೇಕು.

Dolo 650 – ಜ್ವರ, ಮೈ , ಕೈ ನೋವು ನಿವಾರಿಸಿಕೊಳ್ಳಲು.

Avomine – ಪ್ರಯಾಣದಲ್ಲಿನ ಸಿಕ್ನೆಸ್ ಎದುರಿಸಲು ಪ್ರಯಾಣಕ್ಕೆ ಮೊದಲ ಅರ್ಧ ಗಂಟೆಯಲ್ಲಿ ಇದನ್ನು ಸೇವಿಸಿದಲ್ಲಿ ಅನುಕೂಲ.

Combiflam – ಚಾರಣದ ಸಮಯದಲ್ಲಿ ಕಾಲು ಉಳುಕಿದ ಪಕ್ಷದಲ್ಲಿ ಅಥವಾ ಶರೀರದಲ್ಲಿ ತೀವ್ರ ನೋವುಂಟಾದಾಗ ಅದನ್ನು ನಿವಾರಿಸಲು ಈ ಮಾತ್ರೆಯನ್ನು ಉಪಯೋಗಿಸಬಹುದು.

Digene – ಚಾರಣದ ಸಮಯದಲ್ಲಿ ಅಜೀರ್ಣವುಂಟಾದಾಗ ಟ್ರೆಕ್ ನಾಯಕರ ಅನುಮತಿಯೊಂದಿಗೆ ಈ ಮಾತ್ರೆ ತೆಗೆದುಕೊಳ್ಳಬಹುದು.

ORS – ಚಾರಣದ ಮಧ್ಯ ಮಾರ್ಗದಲ್ಲಿ ಆಯಾಸ ಪರಿಹರಿಸಿ ಶಕ್ತಿಯನ್ನು ಪಡೆದುಕೊಳ್ಳಲು ಒಂದು ಪ್ಯಾಕ್ ಉಪಯೋಗಿಸಬಹುದು. ಇದು ತೀವ್ರವಾದ ತಣ್ಣನೆಯ ನೀರನ್ನು ಕುಡಿಯಲು ಸಹಕಾರಿ.

Knee Brace (ಐಚ್ಛಿಕ) – ನಿಮಗೆ ಮಂಡಿಯಲ್ಲಿನ ಸಮಸ್ಯೆಯಿದ್ದಲ್ಲಿ ಇದನ್ನು ತೆಗೆದುಕೊಂಡು ಹೋಗಬಹುದು.

ಪ್ರತಿಯೊಬ್ಬ ಚಾರಣಿಗನೂ ತನ್ನೊಂದಿಗೆ ಕೊಂಡೊಯ್ಯಬೇಕಾದ ದಾಖಲೆಗಳೆಂದರೆ :

– ಫೋಟೋ ಐಡಿ ಕಾರ್ಡ್ – ಒರಿಜನಲ್ ಮತ್ತು ಫೋಟೋ ಕಾಪಿ; ಮೆಡಿಕಲ್ ಡಿಸ್ ಕ್ಲೈಮರ್ ಸರ್ಟಿಫಿಕೇಟ್.



ಚಾರಣ ಶೂ – ಪುರುಷರಿಗೆ



ಮಹಿಳೆಯರಿಗೆ




ಟ್ರೆಕ್ಕಿಂಗ್ ಪೋಲ್



ಬ್ಯಾಕ್ ಪ್ಯಾಕ್



ಸಣ್ಣ ಬ್ಯಾಕ್ ಪ್ಯಾಕ್



ಗ್ಲೋವ್ಸ್



ಹೆಡ್ ಟಾರ್ಚ್



ಟ್ರೆಕ್ಕಿಂಗ್ ಜಾಕೆಟ್ ಫ್ಲೀಸ್



ರೈನ್ ಜಾಕೆಟ್




ಬಾಲ್ಕಲಾವ



ಸ್ಲೀಪಿಂಗ್ ಬ್ಯಾಗ್



ಬ್ಯಾಕ್ ಪ್ಯಾಕ್ ರೈನ್ ಕವರ್



ಗಾಗಲ್ಸ್



ಕಾಲುಚೀಲ



ಉಣ್ಣೆಯ ಕಾಲುಚೀಲ

ಚಾರಣವೆಂಬ ಆತ್ಮಶೋಧನೆ

ಬೆಂಶ್ರೀ ರವೀಂದ್ರ

ಶ್ರೀ ಹೆಚ್.ಎಲ್.ಗುರುಪ್ರಸಾದ್ ಅವರು ಭಾರತೀಯ ಸ್ಟೇಟ್ ಬ್ಯಾಂಕಿನ ಸೇವೆಯಿಂದ ನಿವೃತ್ತರಾದುದು 2009ರಲ್ಲಿ. ತಮ್ಮ 38 ವರ್ಷಗಳ ದೀರ್ಘ ಸೇವಾವಧಿಯ ಕೊನೆಯಲ್ಲಿ ಚಾರಣದ ರುಚಿಯನ್ನು ಬೆಳೆಸಿಕೊಂಡವರು. 2005 ರಲ್ಲಿ ಅಮರನಾಥ, ವೈಷ್ಣೋ ದೇವಿಯ ಚಾರಣಗಳನ್ನು ಮಾಡಿದ್ದರು. ಅದೇ ವರ್ಷ ಕೈಲಾಸ ಪರ್ವತ ಪರಿಕ್ರಮದ ಆಲೋಚನೆ ಹುಟ್ಟಿಕೊಂಡಿದ್ದರೂ ಅದು ಯಶಸ್ವಿಯಾಗಿದ್ದು 2012ರಲ್ಲಿ.

ಬ್ಯಾಂಕಿನ ಸೇವಾವಧಿಯ ಸಂದರ್ಭದಲ್ಲಿ ಗುರುಪ್ರಸಾದ್ ಅವರು ಸತತ ಕಾರ್ಯಶೀಲರು. ಯಾವುದೇ ಕೆಲಸವನ್ನು ವಹಿಸಿಕೊಂಡರೂ ಅದರಲ್ಲಿ ಸಂಪೂರ್ಣ ತನ್ಮಯತೆ ಮತ್ತು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದವರು. ಕಾರ್ಯ ನಿರ್ವಹಣೆಯ ಪರಿಧಿಯಲ್ಲಿ ಹೊಸತನ್ನು ಅನ್ವೇಷಿಸುವುದು ಅವರ ಹುಮ್ಮಸ್ಸು. ಹಾಗಾಗಿಯೇ ಅವರು ಯಶಸ್ವಿ ವ್ಯವಸ್ಥಾಪಕರಾಗಿ, ಬೋಧಕರಾಗಿ ಹೆಸರು ಗಳಿಸಿದ್ದರು.

ಕೆಲಸಕ್ಕೆ ಸೇರಿದ ಹೊಸತರಲ್ಲಿ ಕನ್ನಡ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಗುರುಪ್ರಸಾದರು ಪ್ರಬಂಧಗಳ ರಚನೆಯಲ್ಲೂ ಪಳಗಿದ್ದವರು. ಲೇಖನಗಳನ್ನು ರಚಿಸುವಾಗ ತಮ್ಮ ಗುಣದಂತೆ ವಿಷಯದ ಆಳಕ್ಕೆ ಇಳಿದು ವಿಶ್ಲೇಷಣೆಯನ್ನು ಮಾಡಿ ಎಲ್ಲರಿಗೂ ಅರ್ಥವಾಗುವಂತೆ ಮಂಡಿಸುವುದು ಅವರ ರೀತಿಯಾಗಿತ್ತು. ನಂತರದ ದಿನಗಳಲ್ಲಿ ಬ್ಯಾಂಕಿನಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನು ನಿರ್ವಹಿಸುತ್ತಿದ್ದ ಕಾರಣ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಹೆಚ್ಚಾಗಿ ಆಗಲಿಲ್ಲ ಎನಿಸುತ್ತದೆ. ಆದರೆ, ಮನಸ್ಸಿನಲ್ಲಿ ಅಡಗಿದ್ದ ಚಾರಣದ ತುಡಿತ ಹಾಗೂ ಬರಹದ ಮಿಡಿತವು ಅವರ ನಿವೃತ್ತಿಯ ನಂತರ ಕೈಗೂಡಿದ್ದು ಮಹತ್ವದ ಸಾಧನೆಯೇ ಸರಿ.

ನಿವೃತ್ತಿಯ ನಂತರ ಗುರುಪ್ರಸಾದರು ಆಸೇತುಹಿಮಾಚಲಪರ್ಯಂತ ಹಲವಾರು ಚಾರಣಗಳನ್ನು ಕೈಗೊಂಡರು. ಸ್ನೇಹಿತರ ಒತ್ತಡದಿಂದಾಗಿ ತಮ್ಮ ಚಾರಣದ ಅನುಭವಗಳನ್ನು ಇತ್ತೀಚೆಗೆ ಬರಹದ ರೂಪದಲ್ಲಿ ದಾಖಲಿಸಿದ್ದಾರೆ. ಅವುಗಳು ಪುಸ್ತಕರೂಪವನ್ನು ಪಡೆದು ಕನ್ನಡದ ಜನರನ್ನು ತಲುಪುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ.

ಸ್ವತಃ ನಾನು ಅವರೊಂದಿಗೆ ಯಾವುದೇ ಚಾರಣದಲ್ಲಿ ಭಾಗವಹಿಸಲಿಲ್ಲ. ಪುಸ್ತಕವನ್ನು ಸಂಪೂರ್ಣವಾಗಿ ಓದಿದ ನಂತರ "ಓ" ಬಹಳಷ್ಟು ಕಳೆದುಕೊಂಡೆನಲ್ಲ

ಎನ್ನಿಸುತ್ತಿದೆ. ಇಂತಹ ಭಾವನೆಯು ಓದುಗರಾದ ನಿಮಗೂ ಬರಲು ಸಾಧ್ಯ. ಸಾಮಾನ್ಯವಾಗಿ ಗುರುಪ್ರಸಾದ್ ಅವರು ತಮ್ಮ ಚಾರಣಗಳಿಗೆ ಗೆಳೆಯರನ್ನೂ, ಸಹೋದ್ಯೋಗಿಗಳನ್ನೂ ಕರೆದುಕೊಂಡು ಹೋಗಿದ್ದಾರೆ. ಹಲವರಿಗೆ ಚಾರಣದ ರುಚಿಯನ್ನು ಹತ್ತಿಸಿದ್ದಾರೆ. ಚಾರಣವು ಹೇಗೆ ಒಬ್ಬ ವ್ಯಕ್ತಿಯ ಕಾರ್ಯವೋ ಹಾಗೆಯೇ ಸಾಮೂಹಿಕವೂ ಎಂಬುದನ್ನು ಈ ಪುಸ್ತಕದ ಪುಟ ಪುಟದಲ್ಲಿ ನಿರೂಪಿಸಿದ್ದಾರೆ. ಚಾರಣದ ಕೆಲವು ನಿರ್ದಿಷ್ಟ ಘಟನೆಗಳ ಬಗ್ಗೆ ಚರ್ಚಿಸುವುದಕ್ಕೆ ಮುನ್ನ ಚಾರಣಕ್ಕೆ ಸಂಬಂಧಿಸಿದಂತೆ ಗುರುಪ್ರಸಾದರಲ್ಲಿ ಕಂಡುಬರುವ ಕೆಲವು ಸೂಕ್ಷ್ಮ ವಿಷಯಗಳನ್ನು ಗಮನಿಸುವುದು ಒಳ್ಳೆಯದು. ಚಾರಣದಲ್ಲಿ ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಅದು ಮಾರ್ಗದರ್ಶಿಯಾಗಬಲ್ಲದು ಎಂದು ನನಗೆ ಅನ್ನಿಸುತ್ತದೆ.

ಚಾರಣವು ದೈಹಿಕ ಮತ್ತು ಮಾನಸಿಕ ಸವಾಲುಗಳನ್ನು ನೀಡುವ ಅನುಭವ. ಅದಕ್ಕಾಗಿ ಪೂರ್ವ ಸಿದ್ಧತೆ ಬಹಳ ಅವಶ್ಯಕ. ತಾವು ಹೋಗಬೇಕೆಂದಿರುವ ಚಾರಣದ ಬಗ್ಗೆ ಗುರುಪ್ರಸಾದ್ ಅವರು ಬಹಳ ಮುನ್ನವೇ ಅದಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಹೋಗಿ ಬರುವ ದಿನಾಂಕಗಳು, ದಿನವಹಿ ಸವೆಸಬೇಕಾದ ಹಾದಿ, ಸವಾಲುಗಳು ಹಾದುಹೋಗುವ ಪ್ರತಿ ಸ್ಥಳದ ಬಗ್ಗೆ ಪ್ರಾಕೃತಿಕ ಮಾಹಿತಿ ಐತಿಹ್ಯಗಳು, ಸಂಬಂಧಿಸಿದ ಕಥನಗಳು... ಮೊದಲಾದವುಗಳನ್ನು ಸಂಗ್ರಹಿಸಿ-ಕೊಳ್ಳುತ್ತಾರೆ. ನಂತರ ಮಾಹಿತಿಯ ಸ್ಪಷ್ಟ ಮತ್ತು ಖಚಿತವಾದ ವಿಶ್ಲೇಷಣೆ. ಈ ಹೊತ್ತಿಗೆ ಮನಸಿನಲ್ಲಿ ಚಾರಣದ ಒಂದು ಛಾಯಾಚಿತ್ರ ಸಿದ್ಧವಾಗುತ್ತದೆ. ಚಾರಣದ ಸವಾಲುಗಳನ್ನು ಎದುರಿಸಲು ದೈಹಿಕ ಮತ್ತು ಮಾನಸಿಕ ತಯಾರಿಯಲ್ಲಿ ತೊಡಗಿಕೊಳ್ಳುತ್ತಾರೆ. ಪ್ರತಿದಿನ ಹತ್ತಾರು ಕಿಲೋಮೀಟರ್ ನಡೆಯುವುದು, ದಿನದಿಂದ ದಿನಕ್ಕೆ ನಡಿಗೆಯ ದೂರವನ್ನೂ ವೇಗವನ್ನು ಹೆಚ್ಚು ಮಾಡಿಕೊಳ್ಳುವುದು, ಹೊಂದಿಸಿಕೊಳ್ಳುವುದು, ನಿಯಮಿತ ವ್ಯಾಯಾಮ ಮಾಡುವುದು ಮತ್ತು ಆರೋಗ್ಯ-ಕರವಾದ ಆಹಾರ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಜೊತೆಗೆ ಚಾರಣಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಜೋಡಿಸಿಕೊಳ್ಳುವುದರಲ್ಲಿ ತೊಡಗಿಕೊಳ್ಳುತ್ತಾರೆ.

ಭಾರತೀಯರು ಸಾವಿರಾರು ವರ್ಷಗಳಿಂದಲೂ ಚಾರಣಪ್ರಿಯರು. ಇತರರಿಗೆ ಹೋಲಿಸಿದಲ್ಲಿ ನಮ್ಮ ಚಾರಣಗಳು ತೀರಾ ಭಿನ್ನ. ನಮ್ಮ ವೇದ ಉಪನಿಷತ್ತುಗಳು ಪ್ರಕೃತಿಯನ್ನು ಆರಾಧಿಸುತ್ತದೆ. ಪ್ರಕೃತಿಯಲ್ಲಿಯೇ ದೈವತ್ವವನ್ನು ಕಂಡವರು ನಾವು. ನಮ್ಮ ತೀರ್ಥಕ್ಷೇತ್ರಗಳೂ ಕೂಡ ಸಮುದ್ರದ, ನದಿಯ ತಟಗಳಲ್ಲಿಯೋ, ಗಿರಿಶಿಖರ-ಗಳಲ್ಲಿಯೋ ಇರುತ್ತವೆ. ಚಾರಣವು ಒಂದು ರೀತಿಯ ಅತ್ಮದ ಶೋಧನೆಯೇ ಆಗಿರುತ್ತದೆ. ಈ ಪುಸ್ತಕದಲ್ಲಿಯೂ ಗುರುಪ್ರಸಾದ್ ಅವರು ಹಲವಾರು ಪುಟಗಳಲ್ಲಿ ತಮ್ಮ ಅನುಭವದ ಈ ಮಾತುಗಳನ್ನು ಹೇಳಿದ್ದಾರೆ.

ಕೂಪಮಂಡೂಕತ್ವವನ್ನು ದಾಟಿ ನಾವು ನಮ್ಮತನವನ್ನೂ, ತನುವನ್ನು ಪ್ರಕೃತಿಯೊಂದಿಗೆ ಸಮೀಕರಿಸಿಕೊಳ್ಳುವುದು ಚಾರಣವನ್ನು ಮತ್ತೊಂದು ಮಟ್ಟಕ್ಕೆ ಏರಿಸುತ್ತದೆ. ಆದರೆ ಈ ಕಾಲದ ತರುವಾಯ ನಾವು ಚಾರಣಗಳ ರುಚಿಯನ್ನು ಕಳೆದುಕೊಂಡೆವು ಎನ್ನಿಸುತ್ತದೆ. ಪ್ರಕೃತಿಯ ಆರಾಧನೆಯಿಂದಲೂ ದೂರ ಸರಿದೆವು. ಹಲಬಗೆಯ ಆಚಾರಗಳು, ಕಂದಾಚಾರಗಳೂ ಸೇರಿಕೊಂಡವು. ವೈರಾಗ್ಯದಿಂದ ಕೂಡಿ ಜನಜೀವನದಿಂದ ದೂರ ಸರಿದ ಅನೇಕ ಪರಿವ್ರಾಜಕರೂ ಕಾಣಿಸಿಕೊಂಡರು. ಆದರೆ ವ್ಯವಸ್ಥಿತ ಚಾರಣ ಕಾಣೆಯಾಯಿತು.

"1970ರ ದಶಕದಲ್ಲಿ ವ್ಯವಸ್ಥಿತ ಚಾರಣಗಳು ಆರಂಭವಾದವು. ಇತ್ತೀಚೆಗೆ ಯುವಜನರು ಚಾರಣದೆಡೆಗೆ ಆಕರ್ಷಿತರಾಗುತ್ತಿದ್ದಾರೆ. ಚಾರಣವನ್ನು ವ್ಯವಸ್ಥೆ ಮಾಡುವ ಹಲವಾರು ಸಂಸ್ಥೆಗಳು ಆರಂಭವಾಗಿವೆ. ಈ ಸಂಸ್ಥೆಗಳು ಹಲವಾರು ಹೊಸ ಹಾದಿಗಳನ್ನು/ಜಾಡುಗಳನ್ನು ಅನ್ವೇಷಿಸುತ್ತಿವೆ. ಇದು ಸಂತಸದ ವಿಷಯ" ಎಂದು ಗುರುಪ್ರಸಾದ್ ಹೇಳುತ್ತಾರೆ.

ಪ್ರಮುಖವಾಗಿ ತಮ್ಮ ಚಾರಣದ ಅನುಭವವನ್ನು ಪ್ರಾಕೃತಿಕ ಆಧಾರದ ಮೇಲೆ ನಾಲ್ಕು ಅಧ್ಯಾಯಗಳನ್ನು ಲೇಖಕರು ಗುರುತಿಸಿದ್ದಾರೆ.

1. ಹಿಮಾಲಯದ ಪ್ರದೇಶ;
2. ಪಶ್ಚಿಮ ಘಟ್ಟಗಳು;
3. ಇತರ ಪ್ರದೇಶಗಳು;
4. ಅಮೆರಿಕಾದಲ್ಲಿನ ಚಾರಣಗಳು.

2005ರಿಂದ 2020ರ ವರೆಗೆ ಹಬ್ಬಿರುವ ಈ ಚಾರಣದ ಅನುಭವಗಳು ಆಸಕ್ತಿಯನ್ನೂ, ಕುತೂಹಲವನ್ನೂ, ರೋಮಾಂಚನವನ್ನೂ ಉಂಟುಮಾಡುತ್ತದೆ. ಗುರುಪ್ರಸಾದರ ಬರಹದ ಭಾಷೆ ಸರಳ. ಕೆಲವು ಹಂತಗಳಲ್ಲಿ ಕಾವ್ಯಮಯವೂ ಆಗುತ್ತದೆ. ತಾವು ನಡೆದುಹೋಗುವ ಸ್ಥಳಗಳ ಚಾರಿತ್ರಿಕ ವಿವರಗಳನ್ನು ಸ್ಥಳಪುರಾಣಗಳನ್ನು ಹೇಳಿದ್ದಾರೆ. ಪ್ರಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಶಕ್ತಿಯು ಈ ಬರಹಗಳಿಗಿದೆ. ಜೊತೆಗೆ ಕೆಲವು ಸ್ಥಳಗಳ ಕುತೂಹಲಕಾರಿ ಜನಜೀವನದ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಈ ಪುಸ್ತಕವು ಕೇವಲ ಚಾರಣದ ಅನುಭವಗಳನ್ನು ದಾಖಲಿಸುವುದಿಲ್ಲ. ಅದರ ಜೊತೆಗೆ ಒಂದು ಕಾಲಘಟ್ಟದ ಜನಜೀವನವನ್ನು ಜನರ ಮನೋವ್ಯಾಪಾರವನ್ನು ದಾಖಲಿಸುತ್ತದೆ.

ಅಧ್ಯಾಯ ಒಂದರಲ್ಲಿ ಹಿಮಾಲಯದ ಹದಿನೇಳು ಚಾರಣಗಳು ಚಿತ್ರವತ್ತಾಗಿ ಮೂಡಿದೆ. ಪ್ರತಿ ಚಾರಣದಲ್ಲೂ ಪ್ರತಿದಿನದ ಘಟನೆಗಳನ್ನು ಸಮಯಾನುಸಾರ

ದಾಖಲಿಸಿದ್ದಾರೆ. ಗುರುಪ್ರಸಾದ್ ಅವರು ಈ ಚಾರಣಗಳನ್ನು ಮಾಡುವಾಗ ಯಾವುದೇ ರೀತಿಯ ದಿನಚರಿಯನ್ನು ದಾಖಲಿಸಿಲ್ಲ. ಆದರೆ, ಲೇಖನಗಳಲ್ಲಿ ದಿನಾಂಕ, ಸಮಯ, ಸ್ಥಳ, ಪ್ರಕೃತಿ, ಸ್ಥಳ ಮಾಹಿತಿಗಳೂ ಮೊದಲಾದ ಎಲ್ಲ ಅಂಶಗಳೂ ಸಮಗ್ರವಾಗಿ ದೊರೆಯುತ್ತದೆ. ಇದು ಸ್ವಲ್ಪ ಆಶ್ಚರ್ಯವನ್ನುಂಟುಮಾಡುವ ವಿಷಯ. ಆದರೆ, ಗುರುಪ್ರಸಾದ್ ಹೇಳುತ್ತಾರೆ "ನಾನು ಚಾರಣಗಳ ಬಗ್ಗೆ ಬರೆಯತೊಡಗಿದಂತೆ ಪ್ರತಿಯೊಂದು ವಿಚಾರವೂ, ಘಟನೆಯು ಚಿತ್ರವತ್ತಾಗಿ ನನ್ನ ಮನಸ್ಸಿನಲ್ಲಿ ಮೂಡಿಬಂತು. ತಂತಾನೆ ಅಕ್ಷರರೂಪವನ್ನೂ ಪಡೆಯಿತು. ಕೆಲವೊಮ್ಮೆ ಮರುಕಳಿಸಿದ ಈ ನೆನಪಿನ ಸ್ಪಷ್ಟತೆ, ಖಚಿತತೆ ನನಗೂ ಆಶ್ಚರ್ಯವೆನಿಸುತ್ತದೆ".

ಅಕ್ಟೋಬರ್ 2012ರ ರೂಪಕುಂಡ ಚಾರಣವು 16500 ಅಡಿಗಳ ಎತ್ತರದವರೆಗೂ ಇವರನ್ನು ಕೊಂಡೊಯ್ಯುತ್ತದೆ. ಬಾಗೇಶ್ವರ ಜಿಲ್ಲೆಯಲ್ಲಿನ ಕೌಸನಿ ಗ್ರಾಮವು ಅಲ್ಮೋಡದ ಉತ್ತರಕ್ಕೆ 47 ಕಿ.ಮೀ ದೂರದಲ್ಲಿದೆ. ಮಹಾತ್ಮ ಗಾಂಧಿಯವರು ಇಲ್ಲಿಗೆ ಭೇಟಿಯಿತ್ತಾಗ ಕೌಸನಿಯ ಪ್ರಾಕೃತಿಕ ಸೌಂದರ್ಯಕ್ಕೆ ಮನಸೋತು ಇದನ್ನು ಭಾರತದ ಸ್ವಿಟ್ಜರ್ಲ್ಯಾಂಡ್ ಎಂದು ಕರೆದಿದ್ದಾರೆ. ಇಲ್ಲಿಯೇ ಭಗವದ್ಗೀತೆಯ ಅನಾಸಕ್ತಿಯೋಗದ ಬಗ್ಗೆ ಭಾಷ್ಯವನ್ನೂ ಬರೆದರು. ಇಲ್ಲೊಂದು ಅನಾಸಕ್ತಿ ಆಶ್ರಮ ಇದೆಯೆಂಬ ಕುತೂಹಲಕರ ಮಾಹಿತಿಯನ್ನು ಲೇಖಕರು ದಾಖಲಿಸಿದ್ದಾರೆ.

ಅಧ್ಯಾಯದ ಕೊನೆಯಲ್ಲಿ ಒಂದಿಷ್ಟು ಚಾರಣಿಗರು ಹೇಗೆ ನಡೆದುಕೊಳ್ಳಬೇಕು ಎಂದು ಸೂಚಿಸುವ ಲೇಖಕರು, ಚಾರಣಿಗರಲ್ಲಿ ಇರಲೇಬೇಕಾದ ಮುಖ್ಯ ಗುಣಗಳೆಂದರೆ ದೈಹಿಕ, ಮಾನಸಿಕ ತಯಾರಿ, ಇಚ್ಛಾಶಕ್ತಿ,ತಾಳ್ಮೆ ಹಿಡಿದ ಕೆಲಸವನ್ನು ಬಿಡದೆ ಮಾಡುವ ಛಲ ಮತ್ತು ಆರೋಗ್ಯ ಎಂದು ಗುರುತಿಸಿ "ರೂಪಕುಂಡದ ಯಾತ್ರೆ ನನ್ನಲ್ಲಿರುವ ಆತ್ಮಶಕ್ತಿಯನ್ನು ಮತ್ತು ಮನೋಸ್ಥೈರ್ಯವನ್ನು ಹೆಚ್ಚಿಸಿದೆ. ಮತ್ತೊಂದು ಬಾರಿ ಇಂತಹುದೇ ಚಾರಣದಲ್ಲಿ ಭಾಗವಹಿಸಲು ಉತ್ತೇಜಿಸಿದೆ" ಎಂದು ಮರುಚಾರಣದ ಬಯಕೆಯನ್ನು ಅಭಿವ್ಯಕ್ತಿ ಪಡಿಸಿದ್ದಾರೆ. ಲೇಖಕರ ಬಾಡದ ಉತ್ಸಾಹದ ಸೂಚನೆ ಇದು.

"ಕಾಶ್ಮೀರ ಸರೋವರದೆಡೆಗಿನ ಚಾರಣ" ಲೇಖನದಲ್ಲಿ ಶಂಕರಾಚಾರ್ಯ ಮಂದಿರ, ಚಕ್ರವರ್ತಿ ಅಶೋಕನ ಮಗ ಜಲೂಕ, ಸಿಕಂದರ್ ಮೊದಲಾದವರ ಇತಿಹಾಸದ ಹೆಜ್ಜೆಗಳನ್ನು ಗುರುತಿಸಿ ಕ್ರಿಸ್ತನೂ ಕೂಡ ಇಲ್ಲಿ ಭೇಟಿಕೊಟ್ಟಿದ್ದ ಎಂಬ ಕುತೂಹಲಕಾರಿ ಮಾಹಿತಿ ನೀಡುತ್ತಾರೆ. ಇಂತಹ ದಾಖಲೆಗಳು ಲೇಖಕರ ಅಧ್ಯಯನಶೀಲತೆಯನ್ನು ವಿಷಯ ಸಂಗ್ರಹಣೆ ಮತ್ತು ಧಾರಣೆಯ ಶಕ್ತಿಯನ್ನು ತೋರಿಸುತ್ತದೆ.

ದಿಯೋರಿತಾಲ್ - ಚಂದ್ರಶಿಲಾ ಚಾರಣವು ಒಂದು ವಾರದಷ್ಟು ವಿಸ್ತಾರವಾಗಿದ್ದು ದಿಯೋರಿತಾಲ್ ಸರೋವರವು ಮಹಾಭಾರತದಲ್ಲಿ ಧರ್ಮರಾಯನು ಯಕ್ಷಪ್ರಶ್ನೆಯನ್ನು ಎದುರಿಸಿದ ಸ್ಥಳವೆಂದು ಪ್ರಸಿದ್ಧವಾಗಿದೆ.

ಪ್ರತಿ ಚಾರಣದಲ್ಲಿ, ಚಾರಣಿಗರ ಪರಸ್ಪರ ಸಹಕಾರ ತೀರ ಅವಶ್ಯಕ. ಅಂತೆಯೇ ಚಾರಣದಲ್ಲಿ ಹುಟ್ಟಿದ ಹಬ್ಬ, ವಿವಾಹದ ವಾರ್ಷಿಕೋತ್ಸವ ಮುಂತಾದ ಸಾಮಾಜಿಕ ಸಮಾರಂಭಗಳು ಆಚರಿಸಿ ಪರಸ್ಪರ ಅರಿವು ಬಾಂಧವ್ಯಗಳನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಲೇಖಕರ ಅಭಿಪ್ರಾಯ.

ಹರ್-ಕಿ-ಧುನ್ ಚಾರಣದಲ್ಲಿ ಕೌತುಕವಾದ ವಿಷಯವೊಂದು ತೆರೆದುಕೊಳ್ಳುತ್ತದೆ. ಪರಿಸರ ಮಾಲಿನ್ಯವಿಲ್ಲದ ಓಸ್ಲಾ ಹಳ್ಳಿಯ ಬುಡಕಟ್ಟು ಜನಾಂಗದವರು ಕೌರವ ನಾಯಕ ದುರ್ಯೋಧನನ ಅನುಯಾಯಿಗಳು. ಅವರು ದುರ್ಯೋಧನನನ್ನು ಹೊರತುಪಡಿಸಿ ಬೇರೆ ಯಾರನ್ನೂ ಪೂಜಿಸುವುದಿಲ್ಲ. ಈಗಲೂ ಇಲ್ಲಿ ರಾಜನೊಬ್ಬನಿದ್ದಾನೆ. ತಿಂಗಳಿಗೊಮ್ಮೆ ಓಸ್ಲಾ ಹಳ್ಳಿಗೆ ಬಂದು ಜನರ ಕಷ್ಟ ಸುಖಗಳನ್ನು ವಿಚಾರಿಸುತ್ತಾನೆ ಎಂಬ ಆಶ್ಚರ್ಯಕರ ಮಾಹಿತಿಯನ್ನು ಲೇಖಕರು ತೆರೆದಿಟ್ಟಿದ್ದಾರೆ.

ಚಂದರ್ಖನಿ ಪಾಸ್ ಚಾರಣಕ್ಕೆ ಹೋದಾಗ ಇವರು ಭೇಟಿ ನೀಡಿದ ಪರಾಶರ ಸರೋವರವು ಅಪರೂಪದ ಜನಜೀವನದ ಅಭ್ಯಾಸಗಳನ್ನು ತೆರೆದಿಡುತ್ತದೆ. ಈ ಪವಿತ್ರ ಸರೋವರದ ನೀರನ್ನು ಯಾರೂ ಮುಟ್ಟುವಂತಿಲ್ಲ. ಇದರ ಆಳ ಎಷ್ಟೆಂದು ಯಾರಿಗೂ ತಿಳಿದಿಲ್ಲ. ಜೊತೆಗೆ ಸರೋವರದ ನಡುವೆ ತೇಲುವ ದ್ವೀಪವೂ ಇದೆ. ಇದೇ ಚಾರಣದಲ್ಲಿ ಸಿಗುವ ಮಲಾನ ಹಳ್ಳಿಯಲ್ಲಿನ ನಡೆನುಡಿಯು ವಿಶೇಷವೆನಿಸುತ್ತದೆ. ಅಲ್ಲಿ ಯಾರನ್ನೂ ಮುಟ್ಟಿಸಿಕೊಳ್ಳುವಂತಿಲ್ಲ. ಅಲ್ಲಿರುವ ಜುಮ್ಲು (ಮಹರ್ಷಿ ಜಮದಗ್ನಿ) ಮತ್ತು ರೇಣುಕಾದೇವಿಯ ಮಂದಿರಗಳಿಗೆ ಸ್ಥಳೀಯರನ್ನು ಹೊರತುಪಡಿಸಿ ಬೇರೆ ಯಾರೂ ಹೋಗುವಂತಿಲ್ಲ. ಅಂಗಡಿಗಳಲ್ಲಿ ದೂರದಿಂದಲೇ ಹಣವನ್ನು ಕೊಟ್ಟು ದೂರದಿಂದಲೇ ಸಾಮಾನುಗಳನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಅಕಸ್ಮಾತ್ ಯಾರನ್ನಾದರೂ ಮುಟ್ಟಿದರೆ ರೂ.2000/- ದಂಡ ಕೊಡಬೇಕು. ಆಶ್ಚರ್ಯವೆಂದರೆ ಮಲಾನ ಹಳ್ಳಿಯೂ ತನ್ನದೇ ಆದ ಕಾನೂನು, ಸಂಪ್ರದಾಯ, ಆಡಳಿತ ವ್ಯವಸ್ಥೆಯಿರುವ ಪ್ರಜಾಪ್ರಭುತ್ವವಾಗಿದೆ. ಇಂತಹ ಹಲವಾರು ವಿಷಯಗಳನ್ನು ಲೇಖಕರು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಇದೇ ಚಂದರ್ಖನಿ ಕಣಿವೆ ಚಾರಣದಲ್ಲಿ ಕ್ಯಾಂಪಿನ ನಿಯಮವನ್ನು ಪಾಲಿಸದೆ ಕುಡಿದುಕೊಂಡು ಬಂದವರು ಚಾರಣದ ಪ್ರಮಾಣ ಪತ್ರವನ್ನು ಕಳೆದುಕೊಂಡಿದ್ದು ಮಾತ್ರವಲ್ಲದೆ ಇಡೀ ರಾತ್ರಿ ಕ್ಯಾಂಪಿನ ಹೊರಗೇ ಇರಬೇಕಾದ ಸಂದರ್ಭವನ್ನು

ವಿವರಿಸಿ, ಶಿಸ್ತು, ಸಂಯಮ ಮತ್ತು ನಿಯಮ ಪಾಲನೆಗಳು ಚಾರಣದ ಅವಿಭಾಜ್ಯ ಅಂಗವೆಂಬುದನ್ನು ಮನಗಾಣಿಸಿದ್ದಾರೆ.

ಬ್ರಹ್ಮತಾಲ್ ಸರೋವರದ ಚಾರಣ ಮಾಡುವಾಗ "ಬೊಗಳುವ ಜಿಂಕೆಗಳು" ಕಾಣಿಸಿಕೊಳ್ಳುತ್ತವೆ. ಗುರುಪ್ರಸಾದ್ ಹೇಳುತ್ತಾರೆ, "ಚಾರಣದಿಂದ ಹಿಂತಿರುಗುವಾಗ ಇಲ್ಲಿನ ಭವ್ಯವಾದ ಪರ್ವತಗಳು ಕಣ್ತುಂಬುವ ಕಣಿವೆಗಳು ನಮಗೆ 'ಹೋಗಿ ಮತ್ತೊಮ್ಮೆ ಬನ್ನಿ' ಎಂದು ಹೇಳುವಂತೆ ಭಾಸವಾಗುತ್ತಿತ್ತು. ಭಾರವಾದ ಹೃದಯದಿಂದ ಹಾಗೂ ಧನ್ಯತಾಭಾವದಿಂದ ಇಳಿಯತೊಡಗಿದೆವು. ಮುಂದುವರೆದು "ನನ್ನ ಜೀವನದಲ್ಲಿ ಪ್ರಕೃತಿಯೊಡನೆ ಮಹತ್ವವಾದ ಸುಂದರ ಸಂವಾದವನ್ನು ಚಾರಣಗಳಲ್ಲಿ ಮಾಡಿದ್ದೇನೆ" ಎನ್ನುತ್ತಾರೆ.

ಲೇಖನವು ಕಾವ್ಯಮಯವಾಗಿರುವಂತೆಯೇ ಹಲವಾರು ಸೂಕ್ಷ್ಮ ಆಧ್ಯಾತ್ಮಿಕ ಅನುಭವಗಳನ್ನು ಗುರುಪ್ರಸಾದ್ ಅವರಿಗೆ ಒದಗಿಸಿದೆ. ತೀರಾ ವೈಯುಕ್ತಿಕವಾದ ಇಂತಹ ಅನುಭವಗಳನ್ನು ಅಲ್ಲಲ್ಲಿ ಸೂಚಿಸಿದ್ದರೂ ಲೇಖಕರು ಅವುಗಳನ್ನು ವಿಸ್ತರಿಸುವುದಿಲ್ಲ. ವಾಸ್ತವ ಅನುಭವಕ್ಕೆ ಒತ್ತು ಕೊಟ್ಟಿರುವುದರಿಂದ ಲೇಖನವು ಗಟ್ಟಿಯಾಗಿ ಮೂಡಿಬಂದಿದೆ. ಹಿಮಾಲಯದ ಚಿತ್ರಗಳು ಪ್ರತಿಸಾಲಿನಲ್ಲೂ ಕಾಣಿಸಿಕೊಳ್ಳುತ್ತದೆ. ಡಿವಿಜಿ ಅವರು ಹೇಳಿರುವಂತೆ ಹಿಮಗಿರಿಯು ಚೈತನ್ಯದ ಅಗ್ನಿಕಣವೇ ಆಗಿದೆ.

ಹಿಮಗಿರಿಯೊಳವಿತಿಹುದು ಚೈತನ್ಯದಗ್ನಿಕಣ।
ಸ್ಥಿಮಿತದಿಂ ನಿಂತಿರ್ಪುದದು ಧರೆಯ ಹಿತಕೆ॥
ಶ್ರಮದ ಸುಂದರದ ಸಾತ್ವಿಕದ ಗಾಂಭೀರ್ಯವದು।
ನಮಗೊಂದು ವೇದನಿಧಿ ಮಂಕುತಿಮ್ಮ॥

ಸಿಕ್ಕಿಂ, ಅರುಣಾಚಲ ಪ್ರದೇಶ, ವ್ಯಾಲಿ ಆಫ್ ಫ್ಲವರ್ಸ್ (ಪುಷ್ಪ ಕಣಿವೆ), ದಯಾರಾ ಬುಗ್ಯಾಲ್, ಸಂಡಕ್ಫೂ ಮತ್ತು ಫಾಲೂಟ್ ಅನುಭವಗಳು ನಮ್ಮ ಆಸಕ್ತಿಯನ್ನು ಕೆರಳಿಸುತ್ತದೆ.

2017ರ ಜೂನ್ ತಿಂಗಳಲ್ಲಿ ಜರುಗಿದ ಚೈನ್ ಶೀಲ್ ಬುಗ್ಯಾಲ್ ಚಾರಣವು ಗುರುಪ್ರಸಾದ್ ಅವರಿಗೆ ಸಂತೋಷದ ಅನುಭವವನ್ನು ಕೊಟ್ಟಿತು. ಆಗ ಅವರಿಗೆ 67ರ ಪ್ರಾಯ. ಈ ಚಾರಣವು ಬರಿ ಹುಲ್ಲುಗಾವಲಿನಿಂದ ಕೂಡಿದ್ದಲ್ಲ. ದೊಡ್ಡ ದೊಡ್ಡ ಬೆಟ್ಟಗಳನ್ನೊಳಗೊಂಡಿರುವುದು. ಕಿರಿದಾದ ಜಾಡು, ಒಂದೆಡೆ ಪರ್ವತ ಮತ್ತೊಂದೆಡೆ ಪ್ರಪಾತ. ಎಚ್ಚರ ತಪ್ಪಿದರೆ ಯಮನ ಊರೇ ಗತಿ. "ಇಂಡಿಯಾ ಹೈಕ್ಸ್" ಸಂಸ್ಥೆಯು ಈ ಹೊಸ ಮಾರ್ಗವನ್ನು ಅನ್ವೇಷಿಸಿ ಪ್ರಪ್ರಥಮ ಬಾರಿಗೆ ಚಾರಣವನ್ನು ಅಲ್ಲಿ ಆರಂಭಿಸಿದ್ದರು. ಚಾರಣದ ಆರಂಭಕ್ಕೆ ಬಲಾವತ್ ಹಳ್ಳಿಯನ್ನು

ತಲುಪುತ್ತಿದ್ದಂತೆ ಓಲಗ, ತಮಟೆ, ಡೋಲುಗಳಿಂದ ಚಾರಣಿಗರನ್ನು ಸ್ವಾಗತಿಸಿದರು. ಎಲ್ಲರಿಗೂ ಹೂವಿನ ಹಾರ ಹಾಕಿ ಕೈಕುಲುಕಿದರು. ಆ ಕಾರ್ಯಕ್ರಮಕ್ಕೆ ಉತ್ತರಾಖಂಡ್ ರಾಜ್ಯದ ಪ್ರವಾಸೋದ್ಯಮ ಸಚಿವರೂ ಆಗಮಿಸಿದ್ದರು. ಚಾರಣದ ನಾಯಕನಿಂದ ಗುರುಪ್ರಸಾದ್ ಅವರು ಹಿರಿಯ ಚಾರಣಿಗನೆಂದು ಅರಿತು, ಮೊದಲನೆಯವರಾಗಿ ದೀಪ ಬೆಳಗಿ ಉದ್ಘಾಟನೆ ಮಾಡಲು ಸ್ವತಃ ಸಚಿವರೇ ಆಹ್ವಾನಿಸಿದರು. "ಇದು ನನ್ನ ಬದುಕಿನ ಮರೆಯಲಾಗದ ಅನುಭವ. ಅಂದು ಕೊಟ್ಟ ಟೀ-ಶರ್ಟನ್ನು ಈಗಲೂ ನಾನು ಸ್ಮರಣಿಕೆಯಾಗಿ ಇಟ್ಟುಕೊಂಡಿರುವೆ" ಎನ್ನುತ್ತಾರೆ ಗುರುಪ್ರಸಾದ್.

ಪಶ್ಚಿಮ ಘಟ್ಟದ ಚಾರಣಗಳು ಹಿತವಾದ ಅನುಭವವನ್ನು ಕೊಡುವುದರ ಜೊತೆಗೆ ಗುರುಪ್ರಸಾದ್ ಅವರಿಗೆ ಬೇಸರ ಉಂಟುಮಾಡಿದ ಘಟನೆಯೂ ನಡೆಯಿತು. 2018ರಲ್ಲಿ ಬಂದ ಭೀಕರ ಮಳೆಯಿಂದಾಗಿ ಕೂರ್ಗ್ ನ್ಯಾಷನಲ್ ಚಾರಣದ ಜಾಡು ಸಂಪೂರ್ಣವಾಗಿ ಹಾಳಾಯಿತು ಎಂದು ದುಃಖದಿಂದ ನೆನಸಿಕೊಳ್ಳುತ್ತಾರೆ. ತಡಿಯಾಂಡಮಾಲ್, ಕುದುರೆಮುಖ, ಕೋಟೆಬೆಟ್ಟ, ಯಲ್ಲಾಪುರ ಯಾಣ, ಗೋವ ನ್ಯಾಷನಲ್, ನೀಲಗಿರಿ ಸರೋವರ, ಮಾಕಳಿ ದುರ್ಗ, ಪ್ರತಾಪಗಡ, ರಾಯಘಡ ಚಾರಣಗಳು ಲೇಖಕರಿಗೆ ಹೆಚ್ಚಿನ ಅನುಭವವನ್ನು ಒದಗಿಸಿದೆ. ಜೊತೆಗೆ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಹೆಚ್ಚು ಚಾರಣ ಜಾಡುಗಳನ್ನು ಅನ್ವೇಷಿಸಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತದೆ.

ತ್ರಯಂಬಕೇಶ್ವರ್ ಬಳಿಯಲ್ಲಿನ ಬ್ರಹ್ಮಗಿರಿ ಬೆಟ್ಟದೆಡೆಗಿನ ಚಾರಣವು ಲೇಖಕರಿಗೆ ಆಶ್ಚರ್ಯಕರವಾದ ಅನುಭವವನ್ನು ಒದಗಿಸಿತು. ಸುಮಾರು 750 ಮೆಟ್ಟಿಲುಗಳನ್ನು ಹತ್ತಿ ನರ್ಮದಾ ಮಂದಿರವನ್ನು ನೋಡಿದರು. ಮಂದಿರದ ಎದುರಿನ ಕೊಳವೇ ಗಂಗಾಸಾಗರ. ಲೇಖಕರು ಶಿವನ ಪಂಚಮುಖಗಳನ್ನು ಪ್ರತಿನಿಧಿಸುವ ಶಿಖರಗಳು ಎಲ್ಲಿರುವುದು ಎಂದು ಪೂಜಾರಿಯನ್ನು ಕೇಳಿದಾಗ ಆತ ಇನ್ನೂ ಮೇಲಕ್ಕೆ ಹೋಗಬೇಕೆಂದು ಹಾಗೂ ಅಲ್ಲಿಗೆ ಬೇರೆ ಮಾರ್ಗವಿರುವುದೆಂದು ತಿಳಿಸಿದರು. ಅಲ್ಲಿದ್ದ ಒಬ್ಬ ಸಾಧುವನ್ನು ಕೇಳಿದಾಗ ಅವರು ಮತ್ತೊಂದು ಮಾರ್ಗವನ್ನೆ ತೋರಿಸಿದರು. ಕೆಲವು ಸಮಯ ನಡೆದ ನಂತರ ರಸ್ತೆ ಇಬ್ಭಾಗವಾಗಿತ್ತು. ಒಂದು ಬ್ರಹ್ಮಗಿರಿಯ ತುತ್ತ ತುದಿಗೆ ಹೋದರೆ ಮತ್ತೊಂದು ತ್ರಯಂಬಕೇಶ್ವರ ಮಂದಿರಕ್ಕೆ. ಸಹಚಾರಣಿಗರು ತಮಗೆ ಬೆಟ್ಟ ಏರುವುದಕ್ಕೆ ಆಗುವುದಿಲ್ಲವೆಂದು ತಿಳಿಸಿ ಕೆಳಗೆ ಹೋದರು. ಗುರುಪ್ರಸಾದರು ಎಷ್ಟು ಹೋಗಲು ಸಾಧ್ಯವೋ ಅಷ್ಟು ದೂರ ಹೋಗೋಣವೆಂದು ತೀರ್ಮಾನಿಸಿದರು. ಜೊತೆಗೆ ಒಬ್ಬ ಮಾರ್ಗದರ್ಶಕನಿದ್ದರೆ ಅನುಕೂಲ ಆಗುವುದೆಂದು ಅಂದುಕೊಂಡರು. ಬೆಟ್ಟ ಹತ್ತುವ ಪ್ರಾರಂಭದಲ್ಲಿ ವಿಚಾರಿಸಿದ್ದಾಗ ಅಂತಹ ಮಾರ್ಗದರ್ಶಕರು ಅಲ್ಲಿಲ್ಲ ಎಂದು ತಿಳಿಸಿದ್ದರು. ಏನಾದರಾಗಲಿ ಎಂದು ನಿರಾಶರಾಗದೆ ಲೇಖಕರು ಹತ್ತತೊಡಗಿದರು. ಕಿರಿದಾದ

ಮೆಟ್ಟಿಲುಗಳು, ಚಿಕ್ಕ ಚಿಕ್ಕ ಅಂತರ, ಒಂದು ಗಂಟೆ ಕಳೆಯಿತು. ಆಗ ಮೇಲಿಂದ ಸಾಧುವೊಬ್ಬರು ಇಳಿದು ಬರುತ್ತಿದ್ದರು. ಅವರು ತಾನು ಈ ಪ್ರದೇಶದ ಮಾರ್ಗದರ್ಶಿಯೆಂದು ಮೇಲಿನವರೆಗೆ ಕರೆದೊಯ್ಯುವುದಾಗಿ ಹೇಳಿದರು. ನಿಧಾನವಾಗಿ ದಾರಿತೋರುತ್ತ ಲೇಖಕರಲ್ಲಿ ಆತ್ಮವಿಶ್ವಾಸ ತುಂಬುತ್ತ, ಬೆಟ್ಟದಲ್ಲಿರುವ ಔಷಧೀಯ ಸಸ್ಯಗಳ ಬಗ್ಗೆ, ಶುದ್ಧ ಪರಿಸರದ ಬಗ್ಗೆ ಮಾತನಾಡುತ್ತ ಬೆಟ್ಟವನ್ನು ಹತ್ತುವಂತೆ ಹುರಿದುಂಬಿಸುತ್ತಿದ್ದರು. ಬೆಟ್ಟದ ಕೆಳಗಿರುವ ತ್ರಯಂಬಕೇಶ್ವರನನ್ನು ದರ್ಶನ ಮಾಡಿದರೆ ಯಾತ್ರೆಯ ಅರ್ಧ ಫಲ ಮಾತ್ರ ಲಭಿಸುವುದು, ಬೆಟ್ಟದ ಮೇಲಿರುವ ಮೂಲ ತ್ರಯಂಬಕೇಶ್ವರನನ್ನು ದರ್ಶಿಸಿದಾಗ ಮಾತ್ರ ಪೂರ್ಣ ಫಲ ದೊರಕುವುದು ಎಂದರು ಸಾಧುಗಳು. ಜಾಡಿನ ಹಲವೆಡೆ ಲೇಖಕರ ಕೈಹಿಡಿದು ಮೇಲಕ್ಕೆ ಹತ್ತಿಸಿಕೊಂಡರು. ಶಿಖರ ತಲುಪಿದಮೇಲೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಮತ್ತಷ್ಟು ದೂರದ ಬೆಟ್ಟದ ಮೇಲಿರುವ ಜಟಾಶಂಕರ ಮಂದಿರಕ್ಕೆ ಲೇಖಕರನ್ನು ಕರೆದೊಯ್ದರು. ಜಟಾಶಂಕರ ಮಂದಿರದಲ್ಲಿ ಗೋದಾವರಿಯು ಶಿವನ ಜಟೆಯ ಮೂಲಕ ಹರಿಯುವುದನ್ನು ನೋಡಬಹುದಾಗಿದೆ. ಅಲ್ಲಿಂದ ಬೆಟ್ಟದ ಬುಡದ ತನಕ ಕರೆದೊಯ್ದು ಅಲ್ಲಿ ಕುಶಾವರ್ತ ಕೊಳಕ್ಕೆ ಹೋಗಿ ಕೈಕಾಲು ತೊಳೆದು ಉತ್ತರದ ಬಾಗಿಲಿಂದ ತ್ರಯಂಬಕೇಶ್ವರನ ದರ್ಶನ ಮಾಡಿ ಹೋಗುವಂತೆ ತಿಳಿಸಿದರು. ನಂತರ ಸಾಧುವಿಗೆ ಗೌರವ ಸಲ್ಲಿಸಬೇಕೆಂದು ಲೇಖಕರು ಬಯಸಿ ತಿರುಗಿದಾಗ ಅವರು ಎಲ್ಲೂ ಕಾಣಿಸಲೇ ಇಲ್ಲ. ಅಲ್ಲೇ ಇದ್ದ ಮತ್ತೊಬ್ಬರ ಬಳಿ ಸಾಧುವಿನ ಬಗ್ಗೆ ಕೇಳಿದಾಗ, "ತಾನು ಅಲ್ಲಿ ಯಾವ ಸಾಧುವನ್ನೂ ನೋಡಲಿಲ್ಲವೆಂದರು". ಲೇಖಕರು ಹೇಳುತ್ತಾರೆ, "ನನಗೆ ಪರಮಾಶ್ಚರ್ಯವಾಯಿತು".

ಚಾರಣದ ಬಗ್ಗೆ ಗುರುಪ್ರಸಾದ್ ಅವರ ಧೋರಣೆಯೆಂದರೆ ಸರ್ವ ಸಮರ್ಪಣಾಭಾವ. ಅದು ಒಂದು ಭೌತಿಕ ವ್ಯಾಯಾಮವಲ್ಲ , ಆದರೆ, ಆಧ್ಯಾತ್ಮಿಕ ನಡಿಗೆ. ಅವರೊಡನೆ ಸಹಚಾರಣಿಗರು, ಸಂಘಟಕರು, ಸ್ಥಳಗಳು, ಪಶುಪಕ್ಷಿಗಳು, ಮರಗಿಡಗಳು, ಹೂವು ಹಣ್ಣುಗಳು, ಚರಿತ್ರೆ ಐತಿಹ್ಯಗಳು, ಜನಜೀವನ ಸಂಪ್ರದಾಯಗಳು ಹೆಜ್ಜೆ ಹಾಕುತ್ತವೆ. ಭಾಷೆ ಕಾವ್ಯಮಯ. ಪ್ರಕೃತಿಯೊಂದಿಗೆ ಸಂವಾದ. ಅಮರನಾಥದಲ್ಲಿ ಶುಭಕರವೆಂದು ಭಾವಿಸಿರುವ ಜೋಡಿ ಪಾರಿವಾಳಗಳನ್ನು ದರ್ಶಿಸಿದ ಗುರುಪ್ರಸಾದ್ ಅವರ ನಿಲುವು ಯಾವರೀತಿ ಇದೆಯೆಂಬುದನ್ನು ಅವರ ಮಾತುಗಳಲ್ಲೇ ತಿಳಿಸುತ್ತ ಈ ಮೊದಲ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಮಾನಸ ಸರೋವರದಲ್ಲಿ ಸ್ನಾನ ಮಾಡಿದಾಗ ಅವರಿಗಾದ ಅನುಭವದ ಸಾಲುಗಳು ಇಂತಿವೆ :

"ದೇವತೆಗಳ ಆಧ್ಯಾತ್ಮಿಕ ನೀರಿನ ತೊಟ್ಟಿಯನ್ನು ಪ್ರವೇಶಿಸಿದ್ದೆ; ಅಲ್ಲಿಯ ನೀರು ದೇವಸ್ಥಾನಗಳಲ್ಲಿ ಕೊಡುವ ತೀರ್ಥಕ್ಕೆ ಸಮನಾದುದು. ಅದ್ಭುತವಾದ ಪಾವಿತ್ರ್ಯತೆಯ ಅನುಭವವಾಯಿತು. ಸರೋವರ ಹಾಯ್ದು ನನ್ನ ಶರೀರದ ಹೆಚ್ಚು ಭಾಗವನ್ನು ನೀರಿನಲ್ಲಿ ತೊಯ್ಯಿಸುವಾಗ ನನ್ನ ಉಸಿರಾಟ ವೇಗವಾಯಿತು. ನೀರು ನನ್ನ ತೊಡೆಗಳವರೆಗೆ ಏರುವಂತೆ ಹಾಯ್ದೆ , ಮತ್ತೆ ಒಂದು ನಿಮಿಷ ಕಾಲ ನಿಂತೆ, ನೀರು ಮೈಗೆ ಎರಚಿಕೊಳ್ಳುತ್ತ. ಬಾಯಿಯ ಮೂಲಕ ಉಸಿರಾಡುತ್ತ ಮುಂದುವರಿದೆ; ಕೊನೆಗೆ ನಾನು ಸಿದ್ಧವಾಗಿದ್ದೆ.

ಕಣ್ಣು ಮುಚ್ಚಿ ಮೊದಲನೆಯ ಮುಳುಗು ಹಾಕಿದೆ. ಸರೋವರ ಆಳವಾಗಿಲ್ಲದ ಕಾರಣ ತಲೆಯನ್ನು ಬಾಗಿಸಿ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿಸಿದೆ. ಬಳಿಕ ನೀರಿನಿಂದ ತಲೆಯನ್ನು ಎತ್ತಿದಾಗ ತಲೆಯ ಹಿಂಭಾಗದಲ್ಲಿ ಹೊಡೆದಹಾಗಾಯಿತು. ನೋವು ಮರೆಯಾಗುವವರೆಗೆ ಹಾಗೇ ನಿಂತೆ. ಸ್ವಲ್ಪ ನೋವು ಕಡಿಮೆಯಾದಂತೆನಿಸಿತು; ಕೆಳಗೆ ತೊಯ್ಯುವ ಕೊರೆಯುವ ನೀರನ್ನು ನಿವಾರಿಸಲು ತಲೆಯನ್ನು ಕೊಡವಿ, ತಲೆ ಮತ್ತು ಕತ್ತನ್ನು ತಿಕ್ಕಿದೆ. ಶರೀರ ಕ್ಷಣಾರ್ಧದಲ್ಲಿ ಬೆಚ್ಚಗಾಯಿತು; ಮತ್ತೆ ಮುಳುಗು ಹಾಕಿದೆ. ಎರಡನೇ ಮುಳುಗು ಮೊದಲನೇ ಮುಳುಗಿನಷ್ಟು ಕೊರೆಯುತ್ತಿರಲಿಲ್ಲ. ಮತ್ತೆ ಮೂರನೇ ಬಾರಿ ಮುಳುಗುಹಾಕಿದೆ. ಕೊನೆಯ ಸಲ ಐದು ಸೆಕೆಂಡುಗಳ ಕಾಲ ನೀರಿನೊಳಗೇ ಮುಳುಗಿದ್ದೆ. ಬಳಿಕ ಎದ್ದಾಗ ತಲೆಯ ಹಿಂಭಾಗದಲ್ಲಿ ಕುಟ್ಟಿದಂಥ ಅನುಭವವಾಯಿತು. ಈ ಬಾರಿ ಆ ಏಟು ಎಷ್ಟು ಗಾಢವಾಗಿತ್ತೆಂದರೆ ಯಾರೋ ಹಿಂದಿನಿಂದ ಬಲವಾದ ಸುತ್ತಿಗೆಯಿಂದ ಹೊಡೆದಂತಾಯಿತು. ಆದರೆ ಆ ನೋವು ಒಂದು ನಿಮಿಷದ ನಂತರ ಮಾಯವಾಯಿತು.

ನೀರನ್ನು ಹಾಯ್ದು ಮೇಲೆ ಬಂದು ನುಣುಪು ಕಲ್ಲುಗಳ ದಂಡೆಯಲ್ಲಿ ನಿಂತು ದಿವ್ಯ ಕೈಲಾಸದ ಕಡೆಗೆ ದಿಟ್ಟಿಸಿದೆ. ನಿಶ್ಚಲವಾಗಿ ನಿಂತು, ಕಣ್ಣುಮುಚ್ಚಿ ಯೋಚಿಸಿದೆ. ಗಾಯತ್ರಿ ಮಂತ್ರವನ್ನು ಮೂರು ಬಾರಿ ಪಠಿಸುತ್ತ, ಭಾವೋದ್ವೇಗಕ್ಕೊಳಗಾಗಿ ಒಳಗೆ ಕೃತಜ್ಞತಾಭಾವ ಮೂಡಿತು. ಪರಿಶುದ್ಧ ಚೈತನ್ಯ ನನ್ನೊಳಗನ್ನು ಸ್ವಚ್ಛಗೊಳಿಸಿದಂಥ ಅನುಭವವಾಯಿತು. ಹಿಂದೆ ನಾನು ದೇವಸ್ಥಾನಗಳಿಗೆ ಹಾಗೂ ತೀರ್ಥಯಾತ್ರೆ ಸ್ಥಳಗಳಿಗೆ ಹೋಗಿದ್ದಾಗ ಆಗಿದ್ದ ಅನುಭವಕ್ಕಿಂತ ವಿಶೇಷವಾದ ಅನುಭವ ನನಗಾಗಿತ್ತು. ಮತ್ತೆ ಒಂದು ಕ್ಷಣ ನಿಶ್ಚಲವಾಗಿ ನಿಂತೆ, ಕೃತಜ್ಞತಾ ಭಾವದಿಂದ; ನನ್ನೊಳಗಿನ ಧ್ವನಿಯೊಂದು "ವಂದನೆಗಳು" ಎಂದಿತು.

ಎರಡು ಹಂಸಗಳು ಮೇಲೆ ಹಾರಿದವು; ಅವು ರೆಕ್ಕೆ ಬಡಿಯುವಾಗ ನನ್ನೊಳಗೆ ಹೊಸದಾಗಿ ಉದ್ಭವವಾಗಿದ್ದ ಶ್ರದ್ಧೆಯನ್ನು ಮೆಚ್ಚಿ ಅವು ಚಪ್ಪಾಳೆ ತಟ್ಟುತ್ತಿರುವಂತೆ ಭಾಸವಾಯಿತು. ಗುಂಪಿನ ಸದಸ್ಯರೊಬ್ಬರು ಗಂಟೆ ಬಾರಿಸುವ ಸದ್ದು ಇಡೀ ವಾತಾವರಣಕ್ಕೆ ಒಂದು ಬಗೆಯ ದಿವ್ಯತೆಯನ್ನು ಆವಾಹಿಸಿತ್ತು".

ಈ ಮಾತುಗಳು ಇಷ್ಟು ಸಾಕು. ಮುಂದಕ್ಕೆ ನೀವೇ ಓದಿರಿ. ಕನ್ನಡ ನಾಡಿನ ಪ್ರತಿಮನೆಯಲ್ಲೂ , ಪ್ರತಿ ಚಾರಣಿಗರ ಬಳಿಯೂ ಈ **ಚಾರಣ ಸವಿ ಹೂರಣ** ಪುಸ್ತಕ ಇರಲಿ.

.. **ಬೆಂಶ್ರೀ ರವೀಂದ್ರ**

ಅಧ್ಯಕ್ಷರು – ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ಬೆಂಗಳೂರು.

01/11/2025

ಸಹ ಚಾರಣಿಗರ ಅನಿಸಿಕೆ

ರಮೇಶ್ ಪಾಲಹಳ್ಳಿ

ಚಾರಣ ಗುರು

2008ರ ಆಗಸ್ಟ್ ನಲ್ಲಿ ಬ್ಯಾಂಕು ನನಗೆ ಬೆಂಗಳೂರಿಗೆ ವರ್ಗಮಾಡಿತು. ಕೆಲಸಕ್ಕೆ ಹಾಜರಾದ ದಿನ ಸಹೋದ್ಯೋಗಿಗಳನ್ನು ಪರಿಚಯಿಸಿಕೊಂಡು ನನ್ನ ಜಾಗದಲ್ಲಿ ಕುಳಿತೆ. ಪಕ್ಕದಲ್ಲಿ ಕುಳಿತಿದ್ದ ನನಗಿಂತ ಹಿರಿಯರು ಮತ್ತು ಹುದ್ದೆಯಲ್ಲಿ ಅನುಭವಸ್ಥರೂ ಆದ ಶ್ರೀ ಗುರುಪ್ರಸಾದ್ ಅವರದು ಹೊಸ ಪರಿಚಯ. ಕೆಲಸದ ನಡುವೆ ಅಷ್ಟಾಗಿ ಬೇರೆ ವಿಷಯಗಳ ಬಗ್ಗೆ ಅವರು ಮಾತನಾಡುತ್ತಿರಲಿಲ್ಲ. ಅದಾದ ಸ್ವಲ್ಪ ಸಮಯದಲ್ಲೇ ಗುರುಪ್ರಸಾದ್ ಅವರ ನಿವೃತ್ತಿ. ಅವರಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸುವುದು ನನ್ನ ಜವಾಬ್ದಾರಿಯಾಗಿತ್ತು. ಹೀಗಾಗಿ ಅವರಿಂದಲೇ ಅವರ ವೈಯಕ್ತಿಕ ವಿಚಾರಗಳನ್ನು ಸಂಗ್ರಹಿಸಿ ನಿರ್ಧಾರಿತ ದಿನ ಬೀಳ್ಕೊಟ್ಟೆವು.

ನಂತರದ ದಿನಗಳಲ್ಲಿ ನಮ್ಮ ಭೇಟಿ ಅಷ್ಟಾಗಿ ಆಗಲಿಲ್ಲ. ಮುಂದೆ ನಾಲ್ಕು ವರ್ಷಗಳ ನಂತರ ನನ್ನ ನಿವೃತ್ತಿಯಾಯಿತು. ನಿವೃತ್ತಿಯ ದಿನಗಳಲ್ಲಿ ಏನು ಮಾಡಬೇಕು ಎಂಬುದು ತಿಳಿಯದೆ ನಾನು ಅಲ್ಲಿ ಇಲ್ಲಿ ಭೇಟಿ ನೀಡುತ್ತಿದ್ದೆ. ಅಂತಹ ಒಂದು ಸಮಯದಲ್ಲಿ ಶ್ರೀ ಗುರುಪ್ರಸಾದ್ ಅವರ ಮರುಭೇಟಿಯಾಯಿತು. ಕುಶಲೋಪರಿಯ ನಂತರ ಬಿಡುವಿನ ಸಮಯದಲ್ಲಿ 'ಏನು ಮಾಡುತ್ತಿರುವಿರಿ' ಎಂದು ಕೇಳಿದರು. ಕಾಲ ಕಳೆಯುವುದು ಬಿಟ್ಟರೆ ಬೇರೆ ಏನು ಇಲ್ಲ ಎಂದೆ. ಅವರು, ನನ್ನನ್ನು ಚಾರಣಕ್ಕಾಗಿ ಆಹ್ವಾನಿಸಿದರು. ನಾನು ಒಪ್ಪಿಕೊಂಡೆ. ನಮ್ಮ ಮೊದಲ ಚಾರಣದ ಕಾರ್ಯಕ್ರಮ ಊಟಿಯ ನಿಸರ್ಗದ ಮಡಿಲಲ್ಲಿ ಎಂದು ನಿರ್ಧಾರವಾಯಿತು.

ಚಾರಣ, ನನಗೆ ಮೊದಲ ಅನುಭವ. ಗುರುಪ್ರಸಾದ್ ಆಗಲೇ ಹಲವಾರು ಚಾರಣಗಳನ್ನು ಮುಗಿಸಿದ್ದರು. ಅವರನ್ನೇ ಚಾರಣದ ವಿವರ ಮತ್ತು ಅದರ ತಯಾರಿ ಬಗ್ಗೆ ವಿಚಾರಿಸಿದೆ. ಚಾರಣದ ಮಾಹಿತಿಯನ್ನು ವಿಷದವಾಗಿ ವಿವರಿಸಿ ಅದಕ್ಕಾಗಿ ಬೇಕಾಗುವ ಉಪಕರಣಗಳನ್ನು ಖರೀದಿಸಲು ನನಗೆ ಹೇಳಿದರು. ಅವರೇ ಸ್ವತಃ ಬಂದು ಉತ್ತಮವಾದ ಬಾಳಿಕೆ ಬರುವ ಬೂಟುಗಳು, ಬೆನ್ನು ಚೀಲ (backpack) ಮಳೆ ಅಂಗಿ (Raincoat), ದೀವಟಿಗೆ (Torch) ಮುಂತಾದ ಅವಶ್ಯಕ ವಸ್ತುಗಳ ಖರೀದಿಗೆ ಸಹಾಯ ಮಾಡಿದರು.

ಚಾರಣಿಗರಿಗೆ ಗುರು

ಗುರುಪ್ರಸಾದ್ ಅವರು ಸುಮಾರು 50ಕ್ಕೂ ಹೆಚ್ಚು ಚಾರಣಗಳನ್ನು ಪೂರೈಸಿದ್ದಾರೆ. ನಮ್ಮೊಡನೆ ತಮ್ಮ ಅನುಭವ, ಅಲ್ಲಿನ ವಾತಾವರಣ, ಸಹಚಾರಣಿಗರಿಂದ ಕಲಿತ ಪಾಠ, ನಿಸರ್ಗ ಸೌಂದರ್ಯ, ಹೀಗೆ ಹಲವಾರು ವಿಷಯಗಳನ್ನು ಹಂಚಿಕೊಂಡಿದ್ದಾರೆ. ಅವರ ವಿಷಯ ಸಂಗ್ರಹ, ಹೋದ ಜಾಗದ ವಿಶೇಷತೆಗಳು ಎಲ್ಲವನ್ನು ನಮಗೆ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ನಾನು ಅವರ ಜೊತೆಯಲ್ಲಿ ಹಲವಾರು ಚಾರಣಕ್ಕೆ ಹೋಗಿದ್ದು ನನ್ನ ಸೌಭಾಗ್ಯ.

ಚಂದ್ರಶಿಲಾ ಚಾರಣ

ಇದು ಒಂದು ಹಿಮಾಲಯದ ಅತ್ಯಂತ ಮನೋಹರವಾದ ತಾಣ. ಆರು ತಿಂಗಳು ಹಿಮಾಚ್ಛಾದಿತವಾಗಿರುತ್ತದೆ. ಇದರ ಎತ್ತರ ಸಮುದ್ರಮಟ್ಟದಿಂದ ಸುಮಾರು 12100 ಅಡಿ . ಈ ಚಾರಣದಲ್ಲಿ ನಾವು ದಿಯೋರಿ ತಾಲ್ ಗೆ (ಅಂದರೆ ದೇವರ ಕೊಳ) ಮೊದಲ ದಿನದ ಚಾರಣ ಮಾಡುತ್ತೇವೆ. ಮಹಾಭಾರತದ "ಯಕ್ಷ ಪ್ರಶ್ನೆ" ಈ ಕೊಳದಲ್ಲಿ ಆಯಿತೆಂದು ಜನರ ನಂಬಿಕೆ. ಆದ್ದರಿಂದ ಕೊಳವನ್ನು ಪವಿತ್ರವೆಂದು ಪರಿಗಣಿಸಲಾಗಿದೆ. ಮಾರನೇ ದಿನ, ಸುಮಾರು 22 ಕಿಮೀ ಅಷ್ಟು ನಡಿಗೆಯಿಂದ ಚೋಪ್ತಾ ಎಂಬ ಜಾಗವನ್ನು ಸೇರುತ್ತೇವೆ. ಇದು ಸರಿಸುಮಾರು 12 ಗಂಟೆಗಳ ನಡಿಗೆ. ದಾರಿಯಲ್ಲಿ ಏರಿಳಿತಗಳು ಬಹಳ. ಚೋಪ್ತಾದಲ್ಲಿ ನಮ್ಮ ಡೇರೆಗಳು ಮಂಜಿನ ಮೇಲೆಯೇ ಹಾಕಲ್ಪಟ್ಟಿದ್ದವು. ಎಲ್ಲೆಲ್ಲಿ ನೋಡಿದರೂ ಬೆಳ್ಳನೆಯ ಹಿಮದ ರಾಶಿ. ತಾಪಮಾನ −8°c ಯಷ್ಟಿತ್ತು. ಅಲ್ಲಿ ಒಂದು ದಿನ ಪೂರ್ತಿ ಆ ಹವಾಮಾನಕ್ಕೆ ಒಗ್ಗಿಕೊಳ್ಳುವಂತೆ ವಿಶ್ರಾಂತಿ. ಮುಂದಿನ ದಿನ ಬೆಳಗಿನ ಜಾವ 3 ಗಂಟೆಗೆ ಶಿಖರದತ್ತ ಪಯಣ. ಈ ದಿನ ನಾವು 5 ಕೇದಾರಗಳಲ್ಲಿ ಒಂದಾದ "ತುಂಗಾನಾಥ್" ದೇವಸ್ಥಾನದ ಪಕ್ಕದಿಂದ ಹೋದೆವು. ಆದರೆ ದೇವರ ದರ್ಶನವಾಗಲಿಲ್ಲ, ಏಕೆಂದರೆ ದೇವಸ್ಥಾನ ಅಕ್ಷಯ ತದಿಗೆಯಂದು ತೆರೆಯುವುದು ಸುಮಾರು ಮೂರು ಗಂಟೆಗಳ ಕಾಲ ಮೂರು ಅಡಿ ಹಿಮದಲ್ಲಿ ಬ... ಏರಿದಾಗ ಸಿಗುವುದು ಚಂದ್ರಶಿಲಾ ಪರ್ವತ ಶಿಖರ. ಆಗ ಸೂರ್ಯೊ... ಕಾಲ. ಸೂರ್ಯನ ಹೊಂಗಿರಣಗಳು ಪರ್ವತ ಶ್ರೇಣಿಯ ಮೇಲೆ ... ಶಿಖರಗಳು ಚಿನ್ನದ ಕಳಶ ಹೊತ್ತಂತೆ ಕಾಣುತ್ತವೆ. ಬೆಳಕು ಏರಿ... ಕಳಶಗಳು ಮಾಯವಾಗಿ ಬೂದು ಬಣ್ಣಕ್ಕೆ ತಿರುಗಿ ನಂತರ ಬೆಳ್ಳಿ ಬಣ್ಣ... ಇಂತಹ ವಿಹಂಗಮ ದೃಶ್ಯ ನೋಡಲು ಯಾರಿಗೆ ಉಂಟು ... ಇದಕ್ಕಾಗಿ ಹುರಿದುಂಬಿಸಿ ಕರೆದುಕೊಂಡು ಬಂದವರು ನಮ್ಮ ... ಆ ಭವ್ಯದೃಶ್ಯ ಕಣ್ಣಿಗೆ ಕಂಡ ಮೇಲೆ ಧನ್ಯತಾ ಭಾವ ಮೂಡಿತು.

ಈ ಚಾರಣಕ್ಕಾಗಿ ಗುರುಪ್ರಸಾದ್ ಅವರು ಒಂದು ದಂಡನ್ನೇ ಕಟ್ಟಿದರು. ಅದರಲ್ಲಿ ನಾಲ್ಕು ಜನ ಮೊದಲ ಸಲ ಬರುತ್ತಿರುವವರು. ಅದು ಸುಲಭ ಸಾಧ್ಯವಲ್ಲದ ಚಾರಣ. ಮೊದಲ ಬಾರಿಗೆ ಹಿಮದಲ್ಲಿ ಬೆಟ್ಟ ಹತ್ತುವ ಸಾಹಸ. ಸುಮಾರು ಮೂರು ತಿಂಗಳಿಂದ ಗುರು ಅವರು ಎಲ್ಲರಿಗೂ ಪ್ರತಿನಿತ್ಯ ವ್ಯಾಯಾಮ ಬೆಟ್ಟ ಹತ್ತುವ ಅಭ್ಯಾಸ ಪ್ರಾಣಾಯಾಮ ಮುಂತಾದ ದಿನಚರಿಯನ್ನು ಕಡ್ಡಾಯವಾಗಿ ಮಾಡುವಂತೆ ನಿಯಮಿಸಿದರು. ಎಲ್ಲರ ಅಭ್ಯಾಸದ ಕಲಿಕೆ ಬೆಳವಣಿಗೆ ಮತ್ತು ಪ್ರಗತಿಗಾಗಿ ಶ್ರಮಿಸಿದರು.

ಎದುರಾದ ಕಂಟಕಗಳು ಮತ್ತು ನಿರ್ವಹಣೆ

ಚಂದ್ರಶಿಲಾ ಚಾರಣಕ್ಕೆ ಹೊರಟ ನಾವು ಹಲವಾರು ಕಂಟಕಗಳನ್ನು ಎದುರಿಸಬೇಕಾಯಿತು. ನಾವು ಏಳು ಜನರು ವಿಮಾನದಿಂದ ದೆಹಲಿಗೆ, ಅಲ್ಲಿಂದ ಹರಿದ್ವಾರಕ್ಕೆ, ಹರಿದ್ವಾರದಲ್ಲಿ ಒಂದು ರಾತ್ರಿ ತಂಗಿದ್ದು ಮಾರನೇ ಬೆಳಗ್ಗೆ ಸಾರಿ ಹಳ್ಳಿಗೆ ಹೋಗುವ ಕಾರ್ಯಕ್ರಮವಿತ್ತು. ಪ್ರಯಾಣ ಊಟ ವಸತಿ ಎಲ್ಲವೂ ಮುಂಗಡವಾಗಿ ಕಾಯ್ದಿರಿಸಲಾಗಿತ್ತು. ನಮ್ಮ ವಿಮಾನಯಾನ ಒಂದು ಗಂಟೆ ತಡವಾಯಿತು. ಅದಕ್ಕಿಂತ ಹೆಚ್ಚಾಗಿ ನಮ್ಮಲ್ಲಿ ಒಬ್ಬರ ಸಾಮಾನನ್ನು ವಿಮಾನದವರು ಪವರ್ ಬ್ಯಾಂಕ್ ಇರುವ ಸಲುವಾಗಿ ಬೆಂಗಳೂರಿನಲ್ಲೇ ಬಿಟ್ಟು ಬಂದಿದ್ದರು. ಯಾರ ಸಾಮಾನು ಬಂದಿರಲಿಲ್ಲವೋ ಅವರು ನೀವು ಮುಂದೆ ಹೋಗಿ ನಾನು ವಾಪಸ್ ಹೋಗುತ್ತೇನೆ ಎಂದರು. ಆದರೆ ಗುರುಪ್ರಸಾದ್ ಅವರು ತಮ್ಮ ಹಿರಿತನ ತೋರುತ್ತಾ ಅವರಿಗೆ ಸಮಾಧಾನ ಹೇಳಿ ವಿಮಾನದವರು ಆ ಸಾಮಾನನ್ನು ಸಾಯಂಕಾಲದ ವೇಳೆಗೆ ದೆಹಲಿಗೆ ತಲುಪುವಂತೆ ಮಾಡಿದರು. ಮತ್ತೆ ನಮ್ಮ ಮುಂದಿನ ಪಯಣ. ಇಲ್ಲಿ ಗಮನಿಸಬೇಕಾದ ಅಂಶ ಶ್ರೀ ಗುರುಪ್ರಸಾದ್ ಅವರ ತಾಳ್ಮೆ ಸಹಿಷ್ಣುತೆ ಸಮಯೋಚಿತ ಕಾರ್ಯನಿರ್ವಹಣೆ ಮತ್ತು ಎಲ್ಲಕ್ಕೂ ಮಿಗಿಲಾಗಿ ಸ್ನೇಹಿತರ ಕೈ ಬಿಡದಿರುವುದು.

ಶ್ರೀ ಗುರುಪ್ರಸಾದ್ ಅವರು ಹಿಮಾಲಯದ ಚಾರಣವಲ್ಲದೆ ಅಮೆರಿಕಾದಲ್ಲೂ ಚಾರಣ ಮಾಡಿರುತ್ತಾರೆ. ತಿರುಪತಿ ಬೆಟ್ಟವನ್ನು 50ಕ್ಕೂ ಹೆಚ್ಚು ಬಾರಿ ಹತ್ತಿರುತ್ತಾರೆ ಪ್ರತಿಸಲ ತಿರುಪತಿಗೆ ಹೋಗುವಾಗ ಬೇರೆ ಬೇರೆ ಸ್ನೇಹಿತರನ್ನು ತಮ್ಮ ಸಂಗಡ ಕರೆದುಕೊಂಡು ಹೋಗಿರುತ್ತಾರೆ.

ಅವರಿಗೆ ಶ್ರೀ ರಮಣ ಮಹರ್ಷಿಗಳಲ್ಲಿ ಅಪಾರ ನಂಬಿಕೆ. ಹಾಗಾಗಿ 'ಗಿರಿವಲಂ" ಅಂದರೆ ಅರುಣಾಚಲ ಬೆಟ್ಟವನ್ನು ಕಾಲು ನಡಿಗೆಯಲ್ಲಿ ಸುತ್ತುವುದು. ಇದನ್ನು ಸಹ ನಮಗೆ ತಿಳಿದಂತೆ 25ಕ್ಕೂ ಹೆಚ್ಚು ಬಾರಿ ದಾರಿ ಸವೆಸಿದ್ದಾರೆ.

ಇದಲ್ಲದೆ ನಮ್ಮ ಬೆಂಗಳೂರಿನ ಸುತ್ತಮುತ್ತಲಿನ ಬೆಟ್ಟಗಳನ್ನು (ಒಂದು ದಿನದ ಕಾರ್ಯಕ್ರಮ) ಚಾರಣ ಮಾಡಿಸಿರುತ್ತಾರೆ. ಅವುಗಳೆಂದರೆ ನಂದಿ ಬೆಟ್ಟ, ಚನ್ನರಾಯನದುರ್ಗ, ಮಧುಗಿರಿ ಬೆಟ್ಟ, ದೇವರಾಯನದುರ್ಗ, ಶಿವಗಂಗೆ ಬೆಟ್ಟ, ಸಿದ್ಧರಬೆಟ್ಟ, ಹುಲಿಯೂರುದುರ್ಗ, ರಾಮದೇವರ ಬೆಟ್ಟ, ಧೇನುಗಿರಿ, ರೇವಣ ಸಿದ್ದೇಶ್ವರ ಬೆಟ್ಟ, ರುದ್ರಾಕ್ಷಿ ಬೆಟ್ಟ (ತಮಿಳುನಾಡು) ಮಾಲೆಕಲ್ ತಿರುಪತಿ ಬೆಟ್ಟ, ಹೀಗೆ ಹಲವಾರು.

ಚಾರಣದಲ್ಲಿ ಆಸಕ್ತಿ ಮೂಡಿಸಿ, ಮಾರ್ಗದರ್ಶನ ಮಾಡಿ, ಸ್ನೇಹಿತರಲ್ಲರಿಗೂ ದಾರಿದೀಪವಾಗಿದ್ದಾರೆ. ಅವರು ತಮ್ಮ ಹೆಸರಿನಂತೆ ನಮಗೆ "ಗುರು". ಅವರ ಸಹವಾಸ ಅಪ್ಯಾಯಮಾನ ಮತ್ತು ಅವರದು ಅನ್ವರ್ಥವಾದ ಸಾರ್ಥಕನಾಮ.

....ರಮೇಶ್ ಪಾಲಹಳ್ಳಿ.

ನಾ ಕಂಡ ಗುರುಪ್ರಸಾದ್

ಗುರುರಾಜ ಶಾಸ್ತ್ರಿ

ಚಾರಣದಂತಹ ಹವ್ಯಾಸಗಳು ಒಬ್ಬ ವ್ಯಕ್ತಿಯನ್ನು ಹೇಗೆ ಬದಲಿಸಬಹುದು ಎಂಬುದಕ್ಕೆ ಗುರುಪ್ರಸಾದರೇ ಸಾಕ್ಷಿ. 2001ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಅವರು ಮುಖ್ಯ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾಗ ಅವರನ್ನು ನೋಡಿದ್ದೆ. ಬಹಳ ಶಿಸ್ತಿನ ಮನುಷ್ಯ ಮತ್ತು ಕೆಲಸದ ವಿಷಯಗಳಲ್ಲಿ ಕಿಂಚಿತ್ ನಿಯಮಗಳು ಕೂಡ ಉಲ್ಲಂಘನೆ ಆಗಬಾರದೆಂದು ಸ್ವಲ್ಪ ಹೆಚ್ಚಾಗಿಯೇ ಶಿಸ್ತನ್ನು ಪಾಲಿಸುತ್ತಿದ್ದರು. ನಾನು ಮತ್ತೆ ಅವರನ್ನು ನೋಡಿದ್ದು ಅವರ ನಿವೃತ್ತಿಯ ಕೆಲವು ವರ್ಷಗಳ ನಂತರ ಅಂದರೆ 2018ರಲ್ಲಿ. ಚಾರಣಕ್ಕೆ ಹೋಗುತ್ತಿದ್ದ ಅವರ ಗೆಳೆಯರಿಗೆ ನಗುನಗುತ್ತಾ ಬಹಳ ಸಂತೋಷದಿಂದ ಸಲಹೆ ನೀಡುತ್ತಿದ್ದರು. ನಾನು ಹಿಂದೊಮ್ಮೆ ನೋಡಿದ ಗುರುಪ್ರಸಾದ್ ಇವರೇನಾ? ಎಂದು ಅನುಮಾನ ಮೂಡಿತ್ತು. ಕೇವಲ ಐದು ವರ್ಷಗಳಲ್ಲಿ ನಲವತ್ತಕ್ಕೂ ಹೆಚ್ಚು ಚಾರಣ ಮುಗಿಸಿದ್ದಾರೆ ಎಂದಾಗ ಆಶ್ಚರ್ಯವೂ, ಆನಂದವೂ ಆಯಿತು. ಚಾರಣ ಕಠೋರ ಸಂಯಮವನ್ನು, ಪ್ರಖರ ಅನುಶಾಸನವನ್ನು ಅವರ ವ್ಯಕ್ತಿತ್ವದಲ್ಲಿ ಮೂಡಿಸಿತ್ತು ಮತ್ತು ಹೃದಯವನ್ನು ಮತ್ತಷ್ಟು ಮೃದುವಾಗಿಸಿತ್ತು.

ತಮ್ಮ ಮನಸ್ಸಿನ ಆಳದಲ್ಲಿ ಅಡಗಿದ್ದ ಆ ಚಾರಣಗಳ ಒಂದೊಂದು ಅಮೂಲ್ಯ ಕ್ಷಣಗಳನ್ನೂ ವಾಕ್ಯಗಳ ರೂಪದಲ್ಲಿ ಈ ಪುಸ್ತಕದ ಮೂಲಕ ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಕೇವಲ ತಾವೊಬ್ಬರೇ ಚಾರಣದ ಸುಖವನ್ನು ಅನುಭವಿಸದೆ ಹತ್ತಾರು ಗೆಳೆಯರನ್ನೂ ಈ ಹವ್ಯಾಸಕ್ಕೆ ಸೇರಿಸಿಕೊಂಡ ಗುರುಪ್ರಸಾದರು ಬರೆದಿರುವ ಈ ಪುಸ್ತಕವು ಸಾವಿರಾರು ಓದುಗರಿಗೆ ಚಾರಣ ಕೈಗೊಳ್ಳಲು ಪ್ರೇರಣೆ ನೀಡುವುದರಲ್ಲಿ ಮತ್ತು ಚಾರಣದ ಬಗ್ಗೆ ಇರಬಹುದಾದ ಅಪನಂಬಿಕೆಗಳನ್ನು ಪರಿಹರಿಸುವುದರಲ್ಲಿ ಅನುಮಾನವಿಲ್ಲ.

ಈ ಪುಸ್ತಕದ ಮೂಲಕ ಗುರುಪ್ರಸಾದರು ಭಾರತದ ಭವ್ಯತೆಯ ಮತ್ತೊಂದು ಮುಖವನ್ನು ಪರಿಚಯಿಸಿದ್ದಾರೆ. "ವಯಸ್ಸು ಎಂಬುದು ಅಂಕಿಯಷ್ಟೆ" ಎಂಬ ನಾಣ್ಣುಡಿಗೆ 62ನೇ ವಯಸ್ಸಿನಲ್ಲಿ ಚಾರಣ ಆರಂಭಿಸಿ ಐದು ವರ್ಷದಲ್ಲಿ ನಲವತ್ತಕ್ಕೂ ಹೆಚ್ಚು ಚಾರಣ ಮಾಡಿದ ಗುರುಪ್ರಸಾದರೇ ನಿದರ್ಶನ.

ಗುರುರಾಜ ಶಾಸ್ತ್ರಿ

ಕತೆಗಾರ,ಲೇಖಕ ಮತ್ತು ಸಹ ಚಾರಣಿಗ

ಚಂದ್ರಶಿಲಾ ಶಿಖರ ಚಾರಣದ ಅನುಭವ - ಬಿತ್ತ

ಬಿ.ಎಸ್. ಚಂದ್ರಶೇಖರ್

(ಅರ್ಪಣೆ: ಚಾರಣಗುರು, ಮಿತ್ರ ಎಚ್.ಎಲ್. ಗುರುಪ್ರಸಾದ್ ಅವರಿಗೆ)

ಹತ್ತು ಹೂಗಳಲಿ ನೂರು ಭಾವಗಳು
ಎತ್ತೆತ್ತಲಲದೆ ಮನವೇ
ಎಷ್ಟೆಷ್ಟು ಸುತ್ತಿ ಅರಳಿತ್ತು ಕಣ್ಣು
ಗೊತ್ತಿಲ್ಲವಿನ್ನು ದಣಿವೇ
ವಸ್ತುವಿಹುದು ನಿಜ ನಿತ್ಯವಾಯಿತೇ
ಇದ್ದದ್ದೆ ಜಗವ ತುಂಬಿ
ಮುತ್ತಂಥ ಬೋಧೆಯಡಕಿದ್ದ ಒಳಗು
ಮತ್ತೆ ಮನ ಸಹಜ ದುಂಬಿ
ಕುಂಟನೆಲ್ಲಿ ಗಿರಿಶಿಖರವೆಲ್ಲಿ
ಮನವೇನ ಕಂಡಿತಲ್ಲಿ?
ತಂಟೆಬೇಕಿತ್ತೆ ಇಳಿಗಾಲದಲ್ಲಿ
ಯಾವ ಸೆಳೆತವೋ ಇಲ್ಲಿ!
ನೋವು ನಿರಾಶೆ ಸೋಲು ಹತಾಶೆ
ತಬ್ಬಲಿತನದಾವೇಗ
ಆರೋಹಣದುದ್ವೇಗ!
ಅವರೋಹಣವೆ ಸರಾಗ?

ನೀರು ಜಾರುವ ಹಾದಿ ಹಿಮಮಣಿಗಳಲ್ಲಲ್ಲಿ
ಯಾರು ಹಿಡಿದಾರಿದನು ಫಲಕದಲ್ಲಿ
ಹೂವ ಗೊಂಚಲಗೆಂಪು ಗಂಧಗಾಳಿಯ ಕಂಪು
ಯಾವ ನವಕಾವ್ಯದಲ್ಲಿ?

ನಡೆದದ್ದೆ ಹಾದಿ ಮೂಡಿದ್ದೆ ಭಾವ
ಏನೇನ ಕಂಡೆ ಜೀವ?
ಪಡೆದದ್ದೆ ಫಲವು ದಣಿದದ್ದೆ ಸುಖವು
ಹಿಮವೆ ನೀಡಿತ್ತೆ ಕಾವ?

ಏನು ಬಂಧ ಹಿಮಮಲೆಯ ಮಾಲೆಯದು
ಕುಸಿದೀತು ಬುವಿಯೆ ಭಾರಕ್ಕೆ
ದೇವ ಛಂದವಿದನಾವ ಕಟ್ಟಿದನು
ಜೀವವಿದೆ ಶಿಲೆಯ ಹಾರಕ್ಕೆ!

ಮನಸೇನೊ ಹಗುರ ಮಂಜಂತೆ ಇಲ್ಲಿ
ದೇಹ ಬಂಡೆಯೊಲು ಜಡವೇ!
ಹತ್ತಿದ್ದೆ ಬೆಟ್ಟ ಇಳಿದದ್ದೆ ಕಣಿವೆ
ನಿಂತಾಗ ಮರೆವ ದಣಿವೆ
ಹೆಜ್ಜೆಯಿಡೆ ಮತ್ತೆ ಮತ್ತದುವೆ!

ಏಕೊ ಮನವಿಲ್ಲ ಪಾಕ ಹದವಿಲ್ಲ
ಸಾಕೆ ಏರು ಈ ಮಲೆಗೆ?
ಓಗೊಟ್ಟೆ ಅಂತರದ ಕರೆಗೆ
ಕಂಡದ್ದೆ ಭವ್ಯ ನೆನೆದದ್ದೆ ದಿವ್ಯ
ಕಲ್ಪನೆಯ ಮರೆಯಿಸುವ ಕಾವ್ಯ

ದಣಿದಿತ್ತು ದೇಹ ಕುಸಿದಿತ್ತು ಕಸುವು
ನಿದ್ದೆ ಹೋಗಿತ್ತೆ ಮನಸು
ಎದ್ದಾಗಲೊಂದು ಕನಸು
ಬಿತ್ತಿದ್ದ ಬಿತ್ತ ಗೊತ್ತಿಲ್ಲದದ್ದೆ
ಮತ್ತೆದ್ದ ಮೊಳಕೆ ಹಸುರಾಗಿ
ಹಬ್ಬಿತ್ತು ಹಿಮವು ಸುತ್ತೆಲ್ಲ ಹರಡಿ
ಮಬ್ಬಿತ್ತು ಬಿಸಿಲಿನಲ್ಲೂ
ಕರಿಕಣ್ಣ ಗಾಜು, ಇಲ್ಲಿಲ್ಲ ಮೋಜು
ಬರಿ ಬಿಳಿಯ ಕಡಲಿನೀಜು!
ಹಾದಿ ಕಡಿದಾಗಿ ಮೊಳಕಾಲೆ ಮುಳುಗಿ
ಎಲ್ಲಿ ಹೆಜ್ಜೆಯಾ ನೆಚ್ಚು?
ಉರಿಬಿಸಿಲ ಚುಚ್ಚು ಗುರಿಯೆಡೆಯ ಹುಚ್ಚು
'ತುಂಗನಾಥ'ನಿಗೇ ಮೆಚ್ಚು!

ದಿಬ್ಬಿತ್ತು ಬಂದೆ ತಬ್ಬಿಬ್ಬುಗೊಂಡೆ
ತಬ್ಬಿತ್ತನೊಂದು ಬಿಳಿಲು ಬಾಗಿ
ಯಾವ ಸಂಬಂಧ ಯಾವ ಅನುಬಂಧ
ಭಾವದನುಭಾವ ಹಂತ
ಬಂಧ ಅನುಬಂಧ ಛಂದ ಸ್ವಚ್ಛಂದ
ಚಂದ್ರಶಿಲೆಯ ಆನಂದ
ಹೀಚು ಕಾಯಾಗಿ ಫಲತೂಗಿ ಮಾಗಿ
ಎಂಥ ಕನಸು ನನಗಾಗಿ !

ಮನಮೂರ ಹಗುರ ಹೃದಯ ಡಂಗೂರ
ಶಿರವೆಂಬುದನು ನೆನೆದರಾರು?
ಚಾರುಕಂಭ ಭಾಗೀರಥಿ ಕಂಡವು
ಬಳಿಯಲಿತ್ತು ಮೇರು!
ಗಿರಿಗುಡಿಯ ತುದಿಯ ಹಿಮಕವಿದ ಕಳಸ
ತುಂಬಿತ್ತು ಒಳಗ ಹೊರಗ
ಪರ್ವತದ ಮರದ ಪಕ್ವಾದ ಹಣ್ಣು
ತೋರಿತ್ತು ಶಿಖರದಾ ಬೆರಗ
ಅಲ್ಲಿ ಊಹಿಸದ ಫಲ-
ಸುಳ್ಳು ಕರ್ಮ ಸಿದ್ಧಾಂತ-
ಎಲ್ಲಿ ಇದರ ಬಿತ್ತ?
....
ಮುಂದಾವ ಮರದಲಿನ್ನಾವ ಹಣ್ಣೊ
ಅಂದದರ ರುಚಿರಸಗಳೇನೋ!

ಬಿ.ಎಸ್. ಚಂದ್ರಶೇಖರ್

ಚಾರಣ

ಗುರುಪ್ರಸಾದ್ ಹಾಲ್ಕುರಿಕೆ

ಬನ್ನಿ ಗೆಳೆಯರೆ ಬನ್ನಿ ನಡೆ ನುಡಿ ಚಾರಣಕೆ
ಬಿಟ್ಟೆಲ್ಲವ ಕಟ್ಟೆಲ್ಲವ ಹೋಗೋಣ ಚಾರಣಕೆ॥

ಕಂಡರಿಯದ ಹಾದಿಯಲ್ಲಿ
ಹಿಂಜರಿಕೆಯ ಸೋಗಿಲ್ಲದೆ
ನಮ್ಮನ್ನು ನಮ್ಮೊಳಗೆ ನಾವೆ
ಹುಡುಕುವುದೆ ಚಾರಣ॥

ರಮ್ಯವಾದ ಪ್ರಕೃತಿಯ ನಡುವೆ
ಹೊಸ ಹೊಸ ಗೆಳೆಯರೊಂದಿಗೆ
ನಾವು ಕ್ರಮಿಸುವ ಮೈಲುಗಳೇ
ನಮ್ಮ ನೆನಪಿನ ನಡೆ ಚಾರಣ॥

ಪ್ರಕೃತಿಯೊಡನೆ ಪ್ರಕೃತಿಯಾಗಿ
ಐಕ್ಯದರ್ಥವ ಬಿಡಿಸುತ್ತ ದೀರ್ಘ
ಒಡನಾಡಿ ತಾಳ್ಮೆ ಕಡಲಲಿ ತೇಲಿ
ಹೊಸ ಉಸಿರಾಡುವುದೆ ಚಾರಣ॥

ಸ್ಮರಣೀಯ ಶಿವಲೀಲಾ ಆಲಯವು
ಮನುಜ ಜನ್ಮ ಸಾರ್ಥಕ ಬನ್ನಿರೊಮ್ಮೆ
ಹಿಮಾಲಯ ಚಾರಣ ಪುಣ್ಯನಮ್ಮದಾದರೆ
ಮರೆಯದ ಅನುಭವಕೆ ಉಸಿರಿನಾಸರೆ

ಹಿಮಾವೃತ ಧವಳ ಶಿಖರಗಳೊಂದೆಡೆಯಾದರೆ
ಹಸಿರುವನರಾಜಿ ವಸನಧಾರಿ ಶಿಖರವಿನ್ನೊಂದೆಡೆ
ಸರೋವರದಿಂದ ಕೂಡಿದ ಪರ್ವತಗಳೊಂದೆಡೆ
ಮೈತುಂಬ ಪುಷ್ಪವಸ್ತ್ರ ಧರಿಸಿ ನಗುವ ಕಣಿವೆ ಈ ಕಡೆ

ಹೊರಡೋಣ ಚಾರಣಕೆ ಮಾಡಿ ಮನಸು ತಯಾರಿ
ವ್ಯಾಯಾಮ, ಪ್ರಾಣಾಯಾಮ, ಯೋಗ ಉಪಕಾರಿ
ತೆಗೆದುಕೊಳ್ಳಿ ಹೆಗಲುಚೀಲ, ಧರಿಸಿ ಚಾರಣ ಬೂಟ್ಸು
ಜೊತೆಗೆ ರೈನ್ಕೋಟು, ಟ್ರೆಕಿಂಗ್ ಪೋಲು ಹೆಡ್ಲೈಟು
ಮರೆಯದೆ ಚಳಿಗಾಲದ ಜಾಕೆಟ್ಟು, ಔಷಧಿಯ ಬಾಸ್ಕೆಟ್ಟು

ಪೂರ್ವದಿ ತಲ್ಲೆ ವ್ಯಾಲಿ, ಸಂಡಕ್ಫು, ಗೊಯ್ಚಾಲ
ಪಶ್ಚಿಮದಿ ರೂಪ್ಕುಂಡ್, ರೂಪಿನ್ಪಾಸ್, ಹರ್ಕಿಡುನ್ನು
ಉತ್ತರದಿ ಕಾಶ್ಮೀರ ಸರೋವರ, ವರ್ವಾನ್ ಕಣಿವೆಗಳು
ದಕ್ಷಿಣದಿ ಬ್ರಹ್ಮತಾಲ್, ಕುವರಿಪಾಸ್, ಹೂಕಣಿವೆ ಸೊಗಸು

ಹಿಮಾಲಯದ ಚಾರಣಗಳದೆಷ್ಟೋ
ಗೆಳೆಯ ಒಂದು ಜನ್ಮ ಸಾಲದು
ಭಾರತೀಯರಾಗಿ ಹೆಮ್ಮೆಯಲಿ ನಡೆಯಿರಿ
ನುಡಿಚಾರಣದಿ ಶಿವನ ಸೇರಿಬಿಡೋಣ.

ಗುರುಪ್ರಸಾದ್ ಹಾಲ್ಕುರಿಕೆ
02.08.2020

ಉಂಟೇ ಎಣಿಕೆಯ ಹಂಗು

ಬೆಂಶ್ರೀ ರವೀಂದ್ರ

(ಗುರುಪ್ರಸಾದ್ ಅವರಿಗೆ ೭೫ ವರ್ಷಗಳು ತುಂಬಿದ ಸಂದರ್ಭದಲ್ಲಿ ರಚಿಸಿದ ಕವನ)

ಗುರು ೭೫. ಹೌದು.
ಹಾಗೆ ಕಾಣುವುದಿಲ್ಲವಲ್ಲಾ
ಭೂಮ್ಯಾಕಾಶದೆತ್ತರ ಅಗಲ ಗಾಳಿಪಟ
ಬಣ್ಣ ಬಣ್ಣದ್ದುದ್ದ ಬಾಲಂಗೋಚಿ
ಮುಗಿಲಿಗೆತ್ತಿ ನರ್ತಿಸುವ ಮಾಂಜಿದಾರ

ಕೊಡವಿ ಝಾಡಿಸಿ ಧುಮುಕೆಂದ ಜಟಾಜೂಟ
ತೊಡರಿದ ಬಳ್ಳಿಯ ಬುಡವ ತಡಕಿದ ಗುಪ್ತ ಗುರು
ಕಟ್ಟಲಾರೆನೆಂದ ಬಿಚ್ಚಿದ ಮುಡಿಯ ಅಗ್ನಿಕನ್ಯೆ
ಇಲ್ಲೆ ಇವನೊಳಗೆ ಇದ್ದಾರೆ
ಹೌದು, ಗುರು ಪ್ರಸಾದಕೆ ಎಪ್ಪತ್ತೈದು

ದಾಡಿಗೆಪ್ಪತ್ತು ನಿಂಗೆ ಇಪ್ಪತ್ತೆಂದು ಕುಣಿದ
ಭಾರತಿಯ ಹೊಳಪ ಝಳಕಿಗೆ
ರಾಜಕುಮಾರನ ಮೋಹದ ಬಾಣ

ಅಂಕಿಗಳೊಡನಾಡಿ ಜಗ್ಗದೆ ಸಗ್ಗಕ್ಕೇ ನೆಗೆದು
ಇಂದಕ್ಷರಕ್ಷರದರ್ಥವ ಬಗೆ ಬಗೆದು
ಸರಸದಲಿ ಸರಸತಿಗೆ ನಿತ್ಯ ಸಂಮಾನ
ಹೊಸಹೊಸತಿಗೊಲಿದು ಹೊಸಿಲ ದಾಟಿ
ಹುಡುಹುಡುಕುವ ಹುಡುಗಾಟವೆ ಥಾಟ
ಸೂರ್ಯನುರಿಯಲಿ ನೆಲ ಧಗಧಗಿಸಲಿ
ಮರುತ ಕುಂಕುಣಿದು ಕುಣಿಯಲಿ
ಮೂಡದೊಂದು ಗೆರೆ ಹಣೆಯಲಿ
ಕಲಿವ ಕಲಿ ಕಲೆತು ನಲಿ ಭಲೆ ಭಲೆ

ಕಟ್ಟುವ ಮುಂಮಕ್ಕಳ ಬುದ್ಧಿಪ್ರಸಾದ
ಗಿರಿಶಿಖರ ಝುರಿ ನೀರು ಸ್ವಚ್ಛಂದ ಆಕಾಶ
ಮಗ್ಗಲ್ಲು ಕೊರಕಲು ಹೆಜ್ಜೆ ಸಾವಕಾಶ
ಹೂ ಮುಳ್ಳು ಸರೋವರ ಮಾನಸ ಕೈಲಾಸ
ಯೋಗಿ ತ್ಯಾಗಿ ಯೋಗಾಯೋಗ ಹಿಮಾಲಯ
ಎಂಥಾ ನಿಗೂಢವೋ ನಡೆ ನೋಟ ಗೆಳೆಯ
ನಡೆ ಅಲ್ಲಿಗೆ ಮನದಲಿಹ ದೇವ ಭೂಮಿಗೆ

ಚಾರಣ ಗುರು ಒಃ
ನೂರೆಂಟು ಯೋಜನೆಯ ಕಾರ್ಯಶೀಲ ಬಿಡುವಿಲ್ಲ
ಚಚಿತ್ರ, ಸಂಸ್ಕಾರ, ಓದು, ಬರಹ
ಆಯಾಸ ಗೆದ್ದ ಸುಸ್ತಿಗೆ ಬೀಳಿಸಿದೆ ಬೇಸ್ತು.

ಎಲ್ಲರಂತಿದ್ದ ಎಲ್ಲರಂತಿರದಾದ ತೀರ
ಚಾರಣಮುಖಿ ಕೈಲಾಸ ಪರ್ವತ ಪ್ರೀತ
ಸ್ಟೇಟ್ ಬ್ಯಾಂಕಿಗ ಕಮ್ಮಟಿಗ ಕನ್ನಡ ಯೋಧ
ಹಿಮಾಲಯದಿಪ್ಪತ್ತೈದು
ರೂಪಕುಂಡ ಕೇದಾರಕಾಂತ ಕಾಶ್ಮೀರ
ಹರ್ ಕಿ ಧುನ್, ಚಂದೇರ್ಖಾನಿ ಬ್ರಹ್ಮತಲ್
ದಿಯೊರಿತಾಲ್, ಚಂದ್ರಶಿಲಾ..... ಚಾರಣ
ಇಪ್ಪತ್ತು ಪಶ್ಚಿಮಘಟ್ಟ ಹತ್ತು ಅಮೇರಿಕಾ
ಜೊತೆಗೈವತ್ತೆರಡು ಏರು ವೆಂಕಟನ ಬೆಟ್ಟ
ಚಟಪಟ ಓಡಾಟ ಪರಿಕ್ರಮ ಪರಾಕ್ರಮಿ

ಋಗ್ವೇದ ಬೇಂದ್ರೆ ಅರವಿಂದ ರಮಣ
ಕಾವ್ಯಕಂಠ ಗಣಪತಿಮುನಿ ಜೊತೆಗೆ
ಎಚ್ಚೆಸ್ಕೆ ಕನ್ನಡ ಸಾಹಿತ್ಯ ಚಚಿತ್ರ ಪ್ರಬಂಧ
ಸತತ ಅಧ್ಯಯನ ನಿರತ
ಅಮೂಲ್ಯವು ಭವಿಷ್ಯಕೆ ದಾಖಲೀಕರಣ

ಎಲ್ಲಕೂ ಮಿಗಿಲು ಮಿಡಿವ ಹೃದಯ
ಚೈತ್ರದಲಿ ಮಾವಿನ ಮರದ ತುಂಬಾ ಹಣ್ಣು
ಹಕ್ಕಿಗಾಗಿ ಅಳಿಲಿಗಾಗಿ ಮಂಗಕಾಗಿ
ಜಂತು ಜನಾರ್ದನಿಗಾಗಿ
ಬುವಿಗಾಗಿ ಮುಗಿಲಿಗಾಗಿ ಮಾನವನಿಗಾಗಿ

ಹೌದು ಗುರುವಿಗೆ ೭೫ ಹೇಳಿ
ಆಕಾಶಕೆ ಅನಂತಕೆ ಅನುಭಾವಕೆ
ಉಂಟೇ ಎಣಿಕೆಯ ಹಂಗು

.... ಬೆಂಶ್ರೀ ರವೀಂದ್ರ/೨೮/೦೪/೨೦೨೪/
ಬೆಂಗಳೂರು.



INDIAHIKES™

Certificate of Accomplishment

Awarded to

Guruprasad L

For successfully completing the Dayara Bugyal Trek in Uttarakhand from 27/09/2016 to 02/10/2016

Arjun Majumdar

Sandhya UC



INDIAHIKES™

Certificate of Accomplishment

Awarded to

Guruprasad L

For successfully completing the Deoriatal Chandrashila in Uttarakhand from 19/03/2017 to 24/03/2017

Arjun Majumdar

Sandhya UC



INDIAHIKES™

Certificate of Accomplishment

Awarded to

Guruprasad L

For successfully completing the Goechala Trek in Sikkim from 04/11/2016 to 13/11/2016

Arjun Majumdar

Sandhya UC

INDIAHIKES™

Certificate of Accomplishment

Awarded to

Guruprasad L

For successfully completing the Rupin Pass Trek in Himachal Pradesh
from 29/05/2015 to 05/06/2015

Arjun Majumdar

Sandhya UC

INDIAHIKES™

Certificate of Accomplishment

Awarded to

Guruprasad L

For successfully completing the Sandakphu Phalut Trek in West Bengal
from 28/02/2016 to 05/03/2016

Arjun Majumdar

Sandhya UC

INDIAHIKES™

Certificate of Accomplishment

Awarded to

Guruprasad L

For successfully completing the Tala Valley Trek in Bangalore from
29/01/2017 to 03/02/2017

Arjun Majumdar

Sandhya UC

INDIAHIKES™

India's Largest & Safest Trekking Organisation

Certificate of Accomplishment

Awarded to

Guruprasad L

For successfully completing the Tarsar Marsar in Jammu & Kashmir from 11/07/2015 to 17/07/2015

Tarsar Marsar | Trek Grade: Moderate | Duration: 7 Days | Max Altitude: 13,201 ft

Arjun Majumdar
Founder & CEO

Sandhya UC
Co-Founder & COO

INDIAHIKES™

India's Largest & Safest Trekking Organisation

Certificate of Accomplishment

Awarded to

Guruprasad L

For successfully completing the Valley of Flowers in Uttarakhand from 23/08/2015 to 28/08/2015

Valley of Flowers | Trek Grade: Moderate | Duration: 6 Days | Max Altitude: 14,400 ft

Arjun Majumdar
Founder & CEO

Sandhya UC
Co-Founder & COO



ಇದೊಂದು ಜೋಕು. 1953 ಮೇ, 29ರಂದು ಯಶಸ್ವಿಯಾಗಿ ಎವರೆಸ್ಟ್ ಶಿಖರವನ್ನು ಮೊದಲ ಬಾರಿಗೆ ಹತ್ತಿ ಉಘೇ ಎಂದವರು ಎಡ್‌ಮಂಡ್ ಹಿಲರಿ ಮತ್ತು ತೇನ್‌ಸಿಂಗ್ ನಾರ್ಕೆ. ಅವರಿಗೊಂದು ಧ್ವನಿ ಕೇಳಿ ಬಂತು. 'ಗರಂ ಚಾಯ್.. ಗರಂ ಚಾಯ್..' ಕಾಕ ಹೋಟೆಲ್‌ನ ಹುಡುಗನೊಬ್ಬ ಅಲ್ಲಿ ಟೀ ಮಾರುತ್ತಿದ್ದನಂತೆ !

ಹಿಮಾಲಯ ಪರ್ವತ ಶ್ರೇಣಿಯಲ್ಲಿ ಅತಿ ಎತ್ತರದಲ್ಲಿ ಇರುವ ಅನೇಕ ದೇವಾಲಯಗಳನ್ನು ನೋಡಿದಾಗ ಈ ಘಟನೆ ನೆನಪಾಗುತ್ತದೆ. ನಾವು ಬೆಟ್ಟ ಹತ್ತಿ ದೇವರನ್ನು ನೋಡುವುದೇ ಕಷ್ಟ ಇರುವಾಗ ಗುಡಿಗಳನ್ನು ಬಹು ಹಿಂದೆ ನಿರ್ಮಿಸಿದವರ ಬಗ್ಗೆ ಹೆಮ್ಮೆ ಅನಿಸುತ್ತದೆ. ಹೆಚ್.ಎಲ್. ಗುರುಪ್ರಸಾದ್ ಅವರು ಚರಣವನ್ನು ಚಾರಣಕ್ಕೆ ಬಳಸಿಕೊಂಡು ಆ ಅನುಭವಗಳ ಹೂರಣ ನಮಗೆ ನೀಡಿದ್ದಾರೆ. ಬ್ಯಾಂಕ್ ವೃತ್ತಿಯಿಂದ ನಿವೃತ್ತರಾದ ಮೇಲೆ ಪಾರ್ಕುಗಳಲ್ಲಿ ವಾಕಿಂಗ್ ಮಾಡುವುದೇ ಕಷ್ಟಕರ. ಗುಂಡಿ ಬಿದ್ದ ರಸ್ತೆಗಳಲ್ಲಿ ದಂಡಿಯಾಗಿ ಜಾರು ನೆಲವಿರುವಾಗ ನಡೆದಾಡುವುದೂ ಕಷ್ಟ. ಆದರೆ ಗುರುಪ್ರಸಾದ್ ನಿವೃತ್ತಿಯಾದ ಮೇಲೆ ನೆಲದ ಮೇಲೆ ನಡೆಯುವುದಕ್ಕಿಂತ ಪರ್ವತ ಶ್ರೇಣಿಗಳಲ್ಲಿ ನಡೆದಿರುವುದೇ ಹೆಚ್ಚು. ಹಿಮಾಲಯ ಶ್ರೇಣಿಯಲ್ಲಿ ನಾವು ಮಾಡುವ ಧಾರ್ಮಿಕ ಚಾರಣಕ್ಕಿಂತ ಮಿಗಿಲಾದ ಚಾರಣ ಈ ಜಗತ್ತಿನಲ್ಲೇ ಬೇರಾವುದೂ ಇಲ್ಲ ಎಂದು ಹೆಮ್ಮೆಯಿಂದ ಅವರು ಹೇಳುತ್ತಾರೆ.

ಚಾರಣವು ಆತ್ಮಸ್ಥೈರ್ಯ ನೀಡುತ್ತದೆ, ನಾಯಕತ್ವ ಬೆಳೆಸುತ್ತದೆ. ಪ್ರಕೃತಿಯ ಚೆಲುವನ್ನು ಹತ್ತಿರದಿಂದ ಸವಿಯಲು ಅವಕಾಶ ನೀಡುತ್ತದೆ. ಎತ್ತರದ ಪರ್ವತದ ಮೇಲಿರುವ ದೇವಾಲಯ ತಲುಪಿ ಅಪರಿಮಿತ ಆನಂದದಿಂದ ದೇವರಿಗೆ ಕೈ ಮುಗಿದಾಗ ಕಾಲಿನ ದಣಿವು ಮಾಯವಾಗುತ್ತದೆ. ಅಲ್ಲಿಗೆ ಕರೆತಂದ ಕಾಲುಗಳನ್ನೇ ಮರೆಯುತ್ತೇವೆ. ಇದು ಚಾರಣಲೋಕದ ವಿಸ್ಮಯ. ಇಲ್ಲಿನ ಪ್ರತಿ ಘಟನೆಯೂ ರೋಮಾಂಚನಕಾರಿ. ಓದುಗರಿಗೆ ಇದು 'ಚಾರಣ ಗೈಡ್' !

ಎಂಎಸ್ ನರಸಿಂಹಮೂರ್ತಿ

ಹಾಸ್ಯ ಸಾಹಿತಿಗಳು, ಆನಂದ ಸಂಸ್ಕೃತಿಯ ಹರಿಕಾರರು

ಸ್ನೇಹ ಬುಕ್ ಹೌಸ್

ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು

ನಂ. 165, 10ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು – 560 050

ಮೊಬೈಲ್ : 9845031335, email : snehabookhouse@gmail.com

ISBN 819899111-5

9788198991119

ರೂ. 395/-